"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೆಯ ಅಧಿವೇಶನ**

**ಮಂಗಳವಾರ, 04ನೇ ಮಾರ್ಚ್ 2025**

## ವಿಷಯಾನುಕ್ರಮಣಿಕೆ (INDEX)


**01. ಸಂತಾಪ ಸೂಚನೆ**

**ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಹಿರಿಯ ಪತ್ರಕರ್ತರಾದ ಶ್ರೀ ಖಾಜಿ ಅರಶದ್ ಅಲಿ ಅವರ ನಿಧನದ ಬಗ್ಗೆ.**

- ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

**02. ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳು ಮತ್ತು ಅಧಿಕಾರಿಗಳು ಕೋರಿರುವ ಕುರಿತು "**

**03. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**94 – ಇನ್ವೆಸ್ಟ್ ಕರ್ನಾಟಕ-2025 ಸಮಾವೇಶದ ಬಗ್ಗೆ.**

- ಶ್ರೀ ಎಸ್.ವ್ವಿ. ಸಂಕನೂರ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**111– ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಚುನಾವಣೆಯ ಕುರಿತು**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಕೆ.ಎನ್.ರಾಜಣ್ಣ (ಸಹಕಾರ ಸಚಿವರು)

**32 – ಅಡಿಕೆ ಬೆಳೆಗೆ ತಗುಲಿರುವ ಎಲೆಚುಕ್ಕಿ ಹಾಗೂ ಹಳದಿ ರೋಗವನ್ನು ತಡೆಗಟ್ಟುವ ಕುರಿತು**

- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

**36 – ನಗರ-ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಿ-ಖಾತಾ ನೀಡುವ ಪ್ರಕ್ರಿಯೆ ಬಗ್ಗೆ.**

- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

**44 – ರಾಜ್ಯ ನಗರ ಅನಿಲ ವಿತರಣೆ (ಸಿಜಿಡಿ) ನೀತಿಯ ಕುರಿತು**

- ಶ್ರೀ ಡಿ.ಎಸ್.ಅರುಣ್
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**81 – ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನದ ಬಗ್ಗೆ**

- ಶ್ರೀ ಎಂ.ನಾಗರಾಜು
- ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

**07 – ಕಲಬುರಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ಹತ್ತಿರವಿರುವ ಶ್ರೀಸಿಮೆಂಟ್ ಕಂಪನಿ ರೈತರಿಗೆ ಭೂ ಪರಿಹಾರ ವಿತರಣೆಯಲ್ಲಿ ತಾರತಮ್ಯ ಆಗಿರುವ ಕುರಿತು**

- ಡಾ: ತಳವಾರ್ ಸಾಬಣ್ಣ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**84 – ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಕುರಿತು**

- ಶ್ರೀ ಐವನ್ ಡಿ'ಸೋಜಾ (ಶ್ರೀ ಕೆ.ಅಬ್ದುಲ್ ಜಬ್ಬರ್‌ರವರ ಪರವಾಗಿ)
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

**56 – ಕೋಲಾರ ನಗರ ಸಭೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

**10 – ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರು ಕಲುಷಿತಗೊಂಡಿರುವ ಬಗ್ಗೆ**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೆ.ಎನ್.ರಾಜಣ್ಣ (ಸಹಕಾರಿ ಸಚಿವರು)

**08 – ರಾಜ್ಯದಲ್ಲಿ ಸಹಕಾರಿ ಸಂಘಗಳ ಅವ್ಯವಹಾರಗಳ ಬಗ್ಗೆ**

- ಶ್ರೀ ರಾಮೋಜಿಗೌಡ
- ಶ್ರೀ ಕೆ.ಎನ್.ರಾಜಣ್ಣ (ಸಹಕಾರ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**04, ಪ್ರಕಟಣೆ**

ಅ) ಸಭಾಪತಿಯವರು ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವವರ ನಾಮನಿರ್ದೇಶನ ಪಟ್ಟಿ.

ಆ) ಸದಸ್ಯರಾದ ಡಾ: ಡಿ.ತಿಮ್ಮಯ್ಯನವರ ಜನ್ಮದಿನ ನಿಮಿತ್ತ ಶುಭಾಶಯ ಕೋರಿಕೆ

ಇ) ಶ್ರೀ ಎನ್.ರವಿಕುಮಾರ್‌ರವರು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ನೇಮಕಗೊಂಡಿರುವುದಕ್ಕೆ ಅಭಿನಂದನೆ

**05. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಗಳಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕ್ಕೀಡಾಗಿರುವ ಕುರಿತು

**(ನಿಯಮ 330ಕ್ಕೆ ಪರಿವರ್ತಿಸಲಾಯಿತು)**

**06. ನಿಯಮ 58-ಎ ಮೇರೆಗೆ ಶೂನ್ಯ ವೇಳೆ ಸೂಚನೆಗಳು**

**ಅ) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನೀರು ಪೂರೈಕೆಗೆ ಬೋರ್‌ವೆಲ್ ಕೊರೆಸಲು ಹಾಗೂ ಜಾನುವಾರುಗಳಿಗೆ ಮೇವು ಪೂರೈಕೆಗೆ ಗೋಶಾಲೆ ತೆರೆಯುವ ಕುರಿತು.**

- ಶ್ರೀ ಸಿ.ಟಿ.ರವಿ
- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಚಯ ಭವನ ನಿರ್ಮಾಣದ ಕಾಮಗಾರಿಯನ್ನು ಮುಕ್ತಾಯಗೊಳಿಸಿ, ಲೋಕಾರ್ಪಣೆಗೊಳಿಸುವ ಕುರಿತು**

- ಶ್ರೀ ಎಂ.ಪಿ. ಕುಶಾಲಪ್ಪ (ಸುಜಾ)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು ವಿಶ್ವವಿದ್ಯಾಲಯಗಳು, ಸಹಕಾರ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಕುರಿತು.**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ನರೇಗಾ ಯೋಜನೆಯಡಿ ಹಣ ದುರ್ಬಳಕೆ ಆಗಿರುವ ಕುರಿತು.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಉ) ವಿಷಯ: ಸಾರ್ವಜನಿಕರಿಗೆ ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಆಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ನೀಡುವ ಬಗ್ಗೆ.

- ಡಾ: ಧನಂಜಯ ಸರ್ಜಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಊ) ಉಡುಪಿ ಜಿಲ್ಲೆಯ ಬ್ರಹ್ಮಾವರದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನೆಲಸಮ ಮಾಡಿ ರೈತವರ್ಗಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು.

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಋ) ಡಿಸೆಂಬರ್ 2024ರಂದು ಕರ್ನಾಟಕ ಲೋಕ ಸೇವಾ ಆಯೋಗದ ವತಿಯಿಂದ ನಡೆಸಲಾದ ಕೆ.ಎ.ಎಸ್. ಪರೀಕ್ಷಾ ಪತ್ರಿಕೆಯಲ್ಲಿ ನ್ಯೂನತೆಗಳು ಕಂಡು ಬಂದಿರುವುದರಿಂದ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆದು, ಮರು ಅಧಿಸೂಚನೆ ಹೊರಡಿಸುವ ಕುರಿತು

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಎ) ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಮುಂತಾದ ಕಾರಣಗಳಿಂದ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವ ಬಗ್ಗೆ.

- ಶ್ರೀ ಹಣಮಂತ ರುದ್ರಪ್ಪ ನಿರಾಣಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಏ) ಕರ್ನಾಟಕ ಪಶ್ಚಿಮ ಘಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಭೂಕುಸಿತ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ, ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕ ಕಾಮಗಾರಿಗಳನ್ನು ತಡೆಗಟ್ಟುವ ಬಗ್ಗೆ.

- ಶ್ರೀ ಎಂ.ನಾಗರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

07. ಸಭೆಯ ಮುಂದಿಡಲಾದ ಕಾಗದ ಪತ್ರಗಳು

08. ಕಾರ್ಯದರ್ಶಿಯವರ ವರದಿ

09. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಉಮಾಶ್ರೀ

10. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

- ಶ್ರೀ ಐವನ್ ಡಿ’ಸೋಜಾ
- ಡಾ: ಯತೀಂದ್ರ.ಎಸ್

**11. ಗಮನ ಸೆಳೆಯುವ ಸೂಚನೆಗಳು**

ಅ) ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಸರ್ಕಾರ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕುರಿತು.

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಪುಟ್ಟಣ್ಣ
- ಶ್ರೀ ಡಿ.ಎಸ್.ಅರುಣ್
- ಶ್ರೀ ಟಿ.ಎ.ಶರವಣ
- ಶ್ರೀ ಡಿ.ಟಿ.ಶ್ರೀನಿವಾಸ
- ಡಾ: ಧನಂಜಯ ಸರ್ಜಿ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**ಆ) ಉತ್ತರ ಕರ್ನಾಟಕದ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಪೌಷ್ಠಿಕತೆ ಕಾರಣದಿಂದ ಹೆಣ್ಣು ಮಕ್ಕಳ ಬೆಳವಣಿಗೆ ಕುಂಠಿತವಾಗಿ ತಾಯಂದಿರ ಮರಣದ ಸಂಖ್ಯೆ ಹೆಚ್ಚುತ್ತಿರುವುದರಿಂದ, ಪೌಷ್ಠಿಕ ಆಹಾರ ಪೂರೈಕೆ ಮಾಡಿ ಮಕ್ಕಳ ಮತ್ತು ತಾಯಂದಿರ ಮರಣ ಪ್ರಮಾಣವನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಕುರಿತು.**

- ಡಾ:ತಳವಾರ್ ಸಾಬಣ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ)

**ಇ) ರಾಜ್ಯದಲ್ಲಿ ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದಿಸಲು ಪ್ರೋತ್ಸಾಹ ಮತ್ತು ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಲು ಯೋಜನೆಗಳನ್ನು ರೂಪಿಸುವ ಕುರಿತು.**

- ಶ್ರೀ ಐವನ್ ಡಿ’ಸೋಜಾ
- ಶ್ರೀ ಕೆ.ಜೆ.ಜಾರ್ಜ್ (ಇಂದನ ಸಚಿವರು)

**12. ಪ್ರಕಟಣೆ**

**13. ರಾಜ್ಯಪಾಲ ಭಾಷಣಕ್ಕೆ ಸಲ್ಲಿಸತಕ್ಕಂತಹ ವಂದನಾ ನಿರ್ಣಯದ ಮೇಲಿನ ಚರ್ಚೆ.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- **ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು)**

- **ಶ್ರೀ ಶಿವಾನಂದ ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಕೃಷಿ ಮಾರುಕಟ್ಟೆ ಸಚಿವರು)**
- **ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರು)**
- **ಶ್ರೀ ಮಧು ಬಂಗಾರಪ್ಪ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

### 14. ನಿಯಮ 330ರ ಮೇರೆಗೆ

ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಸೊಪ್ಪಿನ ಬೆಟ್ಟ, ಕುಮಕಿ, ಸ್ಟ್ರೀಪ್‌ಗಳ ಬಳಕೆ ಪಾರಂಪರಿಕ ಅತಿಕ್ರಮಣ ಮತ್ತು ಕಾಡು ಪ್ರಾಣಿಗಳಿಂದ ಆಗುತ್ತಿರುವ ಜೀವ ಹಾಗೂ ಬೆಳೆಹಾನಿಗಳಿಗೆ ಪರಿಹಾರ ನೀಡುವಲ್ಲಿ ಆಗುತ್ತಿರುವ ವಿಳಂಬದ ಕುರಿತು.

- ಶ್ರೀ ಶಾಂತರಾಮ್ ಬುಡ್ನ ಸಿದ್ದಿ
- ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಡಾ: ಧನಂಜಯ ಸರ್ಜಿ

– – –

(13)04-03-2025/11.00/ಡಿಎಸ್-ಆರ್ಎನ್

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 04ನೇ ಮಾರ್ಚ್ 2025**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**01. ಸಂತಾಪ ಸೂಚನೆ**

**ವಿಷಯ: ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಹಿರಿಯ ಪತ್ರಕರ್ತರಾದ ಶ್ರೀ ಖಾಜಿ ಅರಶದ್ ಅಲಿ ಅವರ ನಿಧನದ ಬಗ್ಗೆ.**

-----

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಹಿರಿಯ ಪತ್ರಕರ್ತರಾದ ಶ್ರೀ ಖಾಜಿ ಅರಶದ್ ಅಲಿ ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

1951ರ ಜೂನ್ 1 ರಂದು ಬೀದರ್ ಜಿಲ್ಲೆಯ ಬಾಲ್ಕಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ ಪದವೀಧರರಾಗಿದ್ದರು. ವೃತ್ತಿಯಲ್ಲಿ ಪತ್ರಕರ್ತರಾಗಿದ್ದ ಶ್ರೀಯುತರು "ಬೀದರ್ ಕೀ ಆವಾಜ್ ಹಿಂದಿ ಹಾಗೂ ಸುರ್ಖ ಝುಮೀನ್ ಉರ್ದು" ದಿನಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. 2004 ರಿಂದ 2006, 2006 ರಿಂದ 2012ರ ಅವಧಿಗೆ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಎರಡು ಬಾರಿ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪ್ರೆಸ್ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಪತ್ರಕರ್ತರು ಹಾಗೂ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

(ಮುಂದು)

(14) 04/03/2025 11:10 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ನಮ್ಮೆಲ್ಲರಿಗೆ ಹಾಗೂ ಅದರಲ್ಲೂ ವಿಶೇಷವಾಗಿ ನನಗೆ ಅತ್ಯಂತ ನೋವಿನ ಹಾಗೂ ದುಃಖದ ಸಂಗತಿ ಎದುರಾಗಿದೆ. ಕಾರಣವೇನೆಂದರೆ, ಬೀದರ್ ಜಿಲ್ಲೆಯ ಹೆಸರಾಂತ ಪತ್ರಕರ್ತರು ಹಾಗೂ ಒಬ್ಬ ಸಜ್ಜನ ರಾಜಕಾರಿಣಿಯಾಗಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿ ಸುಮಾರು ಎರಡು ಅವಧಿಗೆ ತಮ್ಮ ಸೇವೆಯನ್ನು ಸಲ್ಲಿಸಿರುವಂತಹ ಶ್ರೀಯುತ ಖಾಜಿ ಅರಶದ್ ಅಲಿಯವರು ನಿನ್ನೆಯ ದಿನ ಸಾಯಂಕಾಲ ಸುಮಾರು 7:00 ಗಂಟೆಗೆ ತೀವ್ರ ಹೃದಯಾಘಾತದಿಂದ ನಿಧನ ಹೊಂದಿದರು. ಅವರಿಗೆ ಹೃದಯವೇ ಕೈಕೊಟ್ಟಿತು. ಇದು ತೀವ್ರ ನೋವಿನ ಸಂಗತಿಯಾಗಿದೆ. ಶ್ರೀಯುತರು ವೃತ್ತಿಯಲ್ಲಿ ಪತ್ರಕರ್ತರಾಗಿದ್ದರು. ಅವರು ನಾನು ಪ್ರತಿನಿಧಿಸುವ ಭಾಲ್ಕಿ ಕ್ಷೇತ್ರದವರಾಗಿದ್ದರು. ಅವರು ನಮ್ಮ ತಂದೆಯವರಿಗೆ ಹಾಗೂ ನನಗೂ ಸಹ ಬಹಳ ಆತ್ಮೀಯರಾಗಿದ್ದರು. ಅವರು ಬೀದರ್‌ನಲ್ಲಿ ಹಿಂದಿಯ "ಬೀದರ್ ಕೀ ಆವಾಜ್" ಹಾಗೂ ಉರ್ದುವಿನ "ಸುರ್ಖ ಝುಮೀನ್" ಎಂಬ ಎರಡು ದಿನಪತ್ರಿಕೆಗಳ ಸಂಪಾದಕರಾಗಿ ಹಾಗೂ ಪ್ರಕಾಶಕರಾಗಿ ಕೆಲಸ ನಿರ್ವಹಿಸಿದ್ದರು. ನಾಡಿನ ವಿವಿಧ ಪತ್ರಿಕೆಗಳಲ್ಲಿ

ಲೇಖನಗಳನ್ನು ಬರೆಯುತ್ತಿದ್ದರು. ಅವರ ಕಾರ್ಯಕಾಲದಲ್ಲಿ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಬೀದರ್ ಜಿಲ್ಲೆಯ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ಅವರು ಬೀದರ್ ಜಿಲ್ಲೆಯ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು. ಇವರು ಪಕ್ಷದ ಸಂಘಟನೆಯಲ್ಲಿ ಬಹಳವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರನ್ನು ಬಹಳ ಮುತ್ಸದ್ದಿ ರಾಜಕಾರಣಿ ಎಂಬುದಾಗಿ ಹೇಳಬಹುದು. ನಮ್ಮ ಗಡಿಭಾಗದ ಬೀದರ್ ಜಿಲ್ಲೆ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಬಹಳಷ್ಟು ಬಾರಿ ಚಿಂತನೆಯನ್ನು ಮಾಡುತ್ತಿದ್ದರು. ಅನೇಕ ಬಾರಿ ತಮ್ಮ ವಿಚಾರವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ್ದರು. ಅವರಿಗೆ ಒಬ್ಬ ಪುತ್ರ ಮತ್ತು ಪುತ್ರಿಯರಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತೂ ಅವರ ಅಗಲಿಕೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ನಾನು ವೈಯಕ್ತಿಕವಾಗಿ, ನನ್ನ ಪಕ್ಷ ಹಾಗೂ ಎಲ್ಲರ ಪರವಾಗಿ ಪ್ರಾರ್ಥಿಸುತ್ತೇನೆ. ಹೃದಯಪೂರ್ವಕವಾದ ಶ್ರದ್ಧಾಂಜಲಿಯನ್ನು ನಾನು ಅರ್ಪಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಖಾಜಿ ಅರಶದ್ ಅಲಿಯವರು ಈ ಸದನದ ಸದಸ್ಯರಾಗಿದ್ದರು. ಇವರ ಸಂಪರ್ಕ ನನಗೂ ಕೂಡ ಇತ್ತು. ಇವರು ಎರಡು ಬಾರಿ ಸದಸ್ಯರಾದಾಗಲೂ ಸಹ ದಿವಂಗತ ಧರ್ಮಸಿಂಗ್ ಅವರೊಂದಿಗೆ ಒಡನಾಟವನ್ನು ಹೊಂದಿದ್ದರು. ಇವರು ನಮ್ಮನ್ನೂ ಸಹ ಯಾವಾಗಲೂ ಭೇಟಿ ಮಾಡಿ ಮಾತನಾಡುತ್ತಿದ್ದರು. ಬೀದರ್ ಹಾಗೂ ಉತ್ತರ ಕರ್ನಾಟಕದ ಸಮಸ್ಯೆಗಳು ಹಾಗೂ ಇನ್ನೂ ಅನೇಕ ವಿಚಾರಗಳ ಬಗ್ಗೆ ಇವರು ಮಾತನಾಡುತ್ತಿದ್ದರು. ಇವರು ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದನ್ನು ನಾನು ಇಲ್ಲಿ ಸ್ಮರಿಸುತ್ತೇನೆ. ಇವತ್ತಿನ ದಿವಸ ಇವರು ನಮ್ಮನ್ನು ಅಗಲಿದ್ದಾರೆ. ಹೀಗಾಗಿ ಇವರ ಅಗಲಿಕೆಯನ್ನು ಭರಿಸುವ ಶಕ್ತಿಯನ್ನು ಇವರ ಕುಟುಂಬ ವರ್ಗಕ್ಕೆ ಭಗವಂತನು ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಈ ದುಃಖದಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ. ಈ ಸದನದಲ್ಲಿ ಇವರ ಅಗಲಿಕೆಗಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುವ ಸಂದರ್ಭದಲ್ಲಿ ತಾವು ಪ್ರಸ್ತಾಪಿಸಿರುವ ಸಂತಾಪ ಸೂಚನೆಗೆ ನಾನೂ ಸಹ ನನ್ನ ಸಹಮತವನ್ನು ವ್ಯಕ್ತಪಡಿಸಲು ಬಯಸುತ್ತೇನೆ. ನಮಸ್ಕಾರಗಳು.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**೦2. ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳು ಮತ್ತು ಅಧಿಕಾರಿಗಳ ಕುರಿತು**

**ಸಭಾಪತಿಯವರು:-** ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿದ್ದು, ಪ್ರಶ್ನೆಗಳಿಗೆ ಉತ್ತರಿಸಬೇಕಾದ ಮಾನ್ಯ ಸಚಿವರುಗಳು:-

1. ಶ್ರೀ ಎಂ.ಬಿ.ಪಾಟೀಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು
2. ಶ್ರೀ ಶಿವಾನಂದ ಪಾಟೀಲ, ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು
3. ಶ್ರೀ ಶರಣಬಸಪ್ಪ ದರ್ಶನಾಪುರ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು
4. ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
5. ಶ್ರೀ ರಹೀಂ ಖಾನ್, ಪೌರಾಡಳಿತ ಹಾಗು ಹಜ್ ಸಚಿವರು
6. ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ, ಸಹಕಾರ ಸಚಿವರು
7. ಶ್ರೀ ಬಿ.ಎಸ್.ಸುರೇಶ್, ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು:-**

1. ಶ್ರೀ ರಾಮಲಿಂಗ ರೆಡ್ಡಿ, ಸಾರಿಗೆ ಮತ್ತು ಮುಜರಾಯಿ ಸಚಿವರು
2. ಶ್ರೀ ಸತೀಶ್ ಜಾರಕಿಹೊಳಿ, ಲೋಕೋಪಯೋಗಿ ಸಚಿವರು
3. ಶ್ರೀ ಎನ್.ಚಲುವರಾಯಸ್ವಾಮಿ, ಕೃಷಿ ಸಚಿವರು
4. ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
5. ಶ್ರೀ ಡಿ.ಸುಧಾಕರ್, ಯೋಜನೆ ಮತ್ತು ಸಾಂಖ್ಯಿಕ ಸಚಿವರು
6. ಶ್ರೀ ಸಂತೋಷ್ ಎಸ್. ಲಾಡ್, ಕಾರ್ಮಿಕ ಸಚಿವರು
7. ಶ್ರೀ ಕೆ.ವೆಂಕಟೇಶ್, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು
8. ಶ್ರೀ ಮಂಕಾಳ ಎಸ್. ವೈದ್ಯ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು
9. ಶ್ರೀ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು

**ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳು:-**

1. ಶ್ರೀ ಸೋಮಶೇಖರ್ ಎಸ್.ಜೆ., ಭಾ.ಆ.ಸೇ.

2. ಶ್ರೀಮತಿ ಗಂಗೂಬಾಯಿ ರಮೇಶ್ ಮಾನಕರ್, ಭಾ.ಆ.ಸೇ.
3. ಶ್ರೀ ಟಿ.ಹೆಚ್.ಎಂ. ಕುಮಾರ್, ಭಾ.ಆ.ಸೇ.
4. ಶ್ರೀ ಬ್ರಿಜೇಶ್ ಕುಮಾರ್, ಭಾ.ಅ.ಸೇ.
5. ಶ್ರೀ ಶರತ್ ಬಿ., ಭಾ.ಆ.ಸೇ.
6. ಶ್ರೀ ಎಂ.ಬಿ.ರಾಜೇಶ್ ಗೌಡ, ಭಾ.ಆ.ಸೇ.
7. ಶ್ರೀ ಪ್ರಭಾಷ್ ಚಂದ್ರ ರೇ, ಭಾ.ಆ.ಸೇ.

## ೦೩. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:-** ಒಂದೊಂದು ಪ್ರಶ್ನೆಗೆ ಕೇವಲ ಐದು ನಿಮಿಷಗಳಿಗಿಂತ ಹೆಚ್ಚಿನ ಕಾಲಾವಕಾಶವನ್ನು ನೀಡುವುದಿಲ್ಲ. ಹೀಗಾಗಿ ಸದಸ್ಯರುಗಳು ಸಂಕ್ಷಿಪ್ತವಾಗಿ ಮಾತನಾಡಿ.

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 1 (94) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು | : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : 04.03.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಇತ್ತೀಚೆಗೆ ಬೆಂಗಳೂರಲ್ಲಿ ಜರುಗಿದ ಇನ್ವೆಸ್ಟ್ ಕರ್ನಾಟಕ-2025 ಹೂಡಿಕೆದಾರರ ಸಮಾವೇಶದಲ್ಲಿ ನಮ್ಮ ದೇಶದ ವಿವಿಧ ರಾಜ್ಯಗಳಿಂದ ಮತ್ತು ಅಂತರಾಷ್ಟ್ರೀಯ ಮಟ್ಟದಿಂದ ಎಷ್ಟು ಉದ್ದಿಮೆದಾರರು ಭಾಗವಹಿಸಿದರು;<br>(ಪ್ರತ್ಯೇಕ ಮಾಹಿತಿ ನೀಡುವುದು) | ಇತ್ತೀಚೆಗೆ ಬೆಂಗಳೂರಲ್ಲಿ ಜರುಗಿದ "ಇನ್ವೆಸ್ಟ್ ಕರ್ನಾಟಕ-2025" ಸಮಾವೇಶದಲ್ಲಿ ಒಟ್ಟು 3250 ಉದ್ದಿಮೆದಾರರು ಭಾಗವಹಿಸಿದ್ದು, ವಿವರಗಳು ಈ ಕೆಳಕಂಡಂತಿವೆ;<br>**ವಿವರ** – **ಸಂಖ್ಯೆ**<br>ವಿವಿಧ ರಾಜ್ಯಗಳಿಂದ – 286<br>ವಿದೇಶಗಳಿಂದ – 72<br>ಕರ್ನಾಟಕ ರಾಜ್ಯದಿಂದ – 2892 |
| ಆ | ಈ ಸಮಾವೇಶದಲ್ಲಿ ಎಷ್ಟು ಹೊಸ ಉದ್ಯಮಗಳು ಪ್ರಾರಂಭವಾಗುವ ಕುರಿತು ಒಡಂಬಡಿಕೆಗಳಾಗಿವೆ; ಯಾವ ಯಾವ ಜಿಲ್ಲೆಯಲ್ಲಿ ಹೊಸ ಉದ್ಯಮ ಪ್ರಾರಂಭಿಸಲು ಹೂಡಿಕೆದಾರರು ಇಚ್ಛೆ ಪಟ್ಟಿದ್ದಾರೆ; ಮತ್ತು ಹೂಡಿಕೆ ಮಾಡುವ ಬಂಡವಾಳ ಎಷ್ಟು?<br>(ಜಿಲ್ಲಾವಾರು ಮಾಹಿತಿ ನೀಡುವುದು) | ಇನ್ವೆಸ್ಟ್ ಕರ್ನಾಟಕ-2025 ರಲ್ಲಿ ಒಟ್ಟು 98 ಕಂಪನಿಗಳೊಂದಿಗೆ ಒಡಂಬಡಿಕೆಗಳಾಗಿವೆ. ಅವುಗಳ ಹೂಡಿಕೆಯು ರೂ. 6,23,970 ಕೋಟಿಯಾಗಲಿದೆ.<br>ಅಲ್ಲದೇ, ರೂ. 4,03,533 ಕೋಟಿ ಬಂಡವಾಳ ಹೂಡಿಕೆ ಮಾಡಲು 1101 ಕಂಪನಿಗಳು ಸಂಬಂಧಿಸಿದ ಸಮಿತಿಗಳಿಂದ ಅನುಮೋದನೆ ಪಡೆದಿರುತ್ತಾರೆ.<br>ಒಡಂಬಡಿಕೆ ಮಾಡಿಕೊಂಡ ಯೋಜನೆಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಇ | ಈ ಸಮಾವೇಶದಲ್ಲಿ ಕೃಷಿ, ಕೈಗಾರಿಕೆ, ಆರೋಗ್ಯ ಹಾಗೂ ವಿಜ್ಞಾನ ತಂತ್ರಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಗೆ ಒಡಂಬಡಿಕೆಯಾಗಿರುವ ಕಂಪನಿಗಳು ಎಷ್ಟು; ಮತ್ತು ಅವುಗಳ ಹೂಡಿಕೆಯ ಮೊತ್ತ ಎಷ್ಟು; | "ಇನ್ವೆಸ್ಟ್ ಕರ್ನಾಟಕ-2025"ಸಮಾವೇಶದಲ್ಲಿ Aerospace, Auto & EV, Core (Cement & Steel), ESDM, Food & Agriculture, General manufacturing, Infrastructures & Logistics, R&D/GCC, Renewable Energy ಮತ್ತು Pharma ಗಳಂತಹ ವಿವಿಧ ವಲಯಗಳಲ್ಲಿ ಒಟ್ಟು 98 ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ.<br>ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಲಿರುವ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಈ | ಈ ಹಿಂದೆ ನಡೆದ ಇನ್ವೆಸ್ಟ್ ಕರ್ನಾಟಕ ಸಮಾವೇಶದಲ್ಲಿ ಉದ್ಯಮ ಪ್ರಾರಂಭಿಸಲು ಒಡಂಬಡಿಕೆ ಮಾಡಿಕೊಂಡು ಪ್ರಾರಂಭ ಮಾಡಿರುವ ಉದ್ಯಮಗಳು ಎಷ್ಟು; (ವಿವರವಾದ ಸಂಪೂರ್ಣ ಮಾಹಿತಿ ನೀಡುವುದು) | ಈ ಹಿಂದೆ ನಡೆದ "ಇನ್ವೆಸ್ಟ್ ಕರ್ನಾಟಕ-2022"ರ ಸಮಾವೇಶದಲ್ಲಿ ಉದ್ಯಮ ಪ್ರಾರಂಭಿಸಲು 57 ಕಂಪನಿಗಳೊಂದಿಗೆ ಒಟ್ಟು ರೂ. 5,41,369/- ಕೋಟಿ ಬಂಡವಾಳ ಹೂಡಲು ಒಪ್ಪಂದಗಳಿಗೆ ಸಹಿ ಮಾಡಲಾಗಿತ್ತು.<br>ಸದರಿ 57 ಕಂಪನಿಗಳಲ್ಲಿ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 20 ಕಂಪನಿಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪ್ರಸಾವನೆಗಳಿಂದ ಒಟ್ಟು ರೂ. 2,01,167/- ಕೋಟಿ ಬಂಡವಾಳ ಹೂಡಿಕೆಯಾಗಲಿದೆ ಹಾಗೂ 70,740 ಉದ್ಯೋಗ ಸೃಜನೆಯಾಗಲಿದೆ. ಇವುಗಳಲ್ಲಿ 2 ಯೋಜನೆಗಳು ಅನುಷ್ಠಾನಗೊಂಡಿರುತ್ತವೆ. |

U

| | | |
|---|---|---|
| | | ಮುಂದುವರೆದಂತೆ, ಈ ಸಮಾವೇಶದ ಸಮಯದಲ್ಲಿ 606 ಯೋಜನೆಗಳಿಗೆ ಒಟ್ಟು ರೂ.3,26,015/- ಹೂಡಿಕೆಗೆ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಅನುಮೋದನೆ ನೀಡಲಾಗಿತ್ತು.<br><br>"ಇನ್ವೆಸ್ಟ್ ಕರ್ನಾಟಕ-2022"ರ ಸಮಾವೇಶದಲ್ಲಿ ಒಡಂಬಡಿಕೆ ಮಾಡಿಕೊಂಡ ಹಾಗೂ ಅನುಮೋದನೆ ಪಡೆದ ಯೋಜನೆಗಳಲ್ಲಿ, ಇಲ್ಲಿಯವರೆಗೆ ಒಟ್ಟು 52 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ.45,001/- ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 89,816 ಜನರಿಗೆ ಉದ್ಯೋಗ ದೊರೆತಿರುತ್ತದೆ. ಬಾಕಿ ಉಳಿದ ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿರುತ್ತದೆ.<br><br>ಇವುಗಳೆಲ್ಲ ಬೃಹತ್ ಯೋಜನೆಗಳಾಗಿರುವುದರಿಂದ, ಅನುಷ್ಠಾನಕ್ಕೆ ಕನಿಷ್ಠ 3-5 ವರ್ಷಗಳು ಬೇಕಾಗುತ್ತದೆ. |
| ಉ | ಇನ್ವೆಸ್ಟ್ ಕರ್ನಾಟಕ-2025 ಈ ಸಮಾವೇಶಕ್ಕೆ ಖರ್ಚಾದ ಹಣ ಎಷ್ಟು; ಹಾಗೂ ಈ ಸಮಾವೇಶದ ಮೂಲಕ ಎಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ? (ವಿವರವಾದ ಮಾಹಿತಿ ನೀಡುವುದು) | ಇನ್ವೆಸ್ಟ್ ಕರ್ನಾಟಕ-2025 ಸಮಾವೇಶವನ್ನು ರೂ. 90 ಕೋಟಿಗಳ ವೆಚ್ಚದಲ್ಲಿ ಆಯೋಜಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಇದರಲ್ಲಿ ಇಲ್ಲಿಯವರೆಗೆ ರೂ. 75.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ಸದರಿ ಸಮಾವೇಶವು ಇತ್ತೀಚೆಗೆ ದಿನಾಂಕ 14.02.2025 ರಂದು ಮುಕ್ತಾಯವಾಗಿರುವುದರಿಂದ, ಸಮಾವೇಶಕ್ಕಾಗಿ ತಗುಲಿದ ವಾಸ್ತವಿಕ ವೆಚ್ಚದ ವಿವರಗಳನ್ನು ಕ್ರೋಢೀಕರಿಸಲಾಗುತ್ತಿದ್ದು, ಅಂತಿಮ ಹಂತದಲ್ಲಿರುತ್ತದೆ.<br><br>ಇನ್ವೆಸ್ಟ್ ಕರ್ನಾಟಕ-2025 ರಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಹಾಗೂ ಅನುಮೋದನೆ ಪಡೆದಿರುವ ಯೋಜನೆಗಳಿಂದ ಅಂದಾಜು 6 ಲಕ್ಷ ಜನರಿಗೆ ಉದ್ಯೋಗ ಲಭಿಸಲಿದೆ. |

LCQ-1(94)

# ANNEXURE-1

## District Wise Abstract of MOU's Signed during "Invest Karnataka 2025: Global Investors Meet"

| Sl. NO. | District Name | No.of Units | Investment (in INR Crore) |
|---|---|---|---|
| 1 | Bagalkote | 3 | 3105 |
| 2 | Ballari | 4 | 28350 |
| 3 | Bengaluru Rural | 30 | 26331 |
| 4 | Bengaluru Urban | 14 | 35297 |
| 5 | Belagavi | 4 | 26315 |
| 6 | Chamarajnagara | 2 | 2750 |
| 7 | Chitradurga | 1 | 50000 |
| 8 | Dakshina Kannada | 3 | 2400 |
| 9 | Davanagere | 1 | 10000 |
| 10 | Dharawada | 1 | 125 |
| 11 | Kalaburagi | 5 | 68050 |
| 12 | Kolara | 3 | 1254 |
| 13 | Koppala | 3 | 100975 |
| 14 | Mysuru | 6 | 26638 |
| 15 | Raichuru | 1 | 150 |
| 16 | Ramanagara | 1 | 450 |
| 17 | Tumakuru | 6 | 75480 |
| 18 | Udupi | 1 | 1600 |
| 19 | Vijayanagara | 3 | 119100 |
| 20 | Vijapura | 5 | 35600 |
| 21 | Yadagiri | 1 | 10000 |
| | **Total** | **98** | **623970** |

**Starred LCQ 1 (94)**

**Annexure-2**

| **Sectorwise MoU's Signed in GIM 2025** | | | |
|---|---|---|---|
| **SL. No.** | **Sector** | **No. of MoUs** | **Investment (INR Cr)** |
| 1 | Aero Space | 4 | 4,340 |
| 2 | Auto & EV | 7 | 20,342 |
| 3 | (Cement & Steel) Core | 14 | 1,43,700 |
| 4 | ESDM | 12 | 37,560 |
| 5 | Food & Agriculture | 10 | 6,271 |
| 6 | General Manufacturing | 23 | 46,218 |
| 7 | Infrastructures & Logistics | 10 | 19,382 |
| 8 | R & D/ GCC | 3 | 1,602 |
| 9 | Renewable Energy | 14 | 3,44,425 |
| 10 | Pharma | 1 | 130 |
| | | **98** | **623970** |

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ನಡೆದ ಇನ್ವೆಸ್ಟ್ ಕರ್ನಾಟಕ-2025 ರ ಸಮಾವೇಶಕ್ಕೆ ಸಂಬಂಧಪಟ್ಟಂತೆ ನಾನು ಹಲವಾರು ಪ್ರಶ್ನೆಗಳನ್ನು ಕೇಳಿದ್ದೆನು. ಇದಕ್ಕೆ ಪ್ರತ್ಯುತ್ತರವಾಗಿ ಸಚಿವರು ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಇದರಲ್ಲಿ ಸುಮಾರು 3,250 ಉದ್ದಿಮೆದಾರರು ಭಾಗವಹಿಸಿದ್ದರು. ಅದರಲ್ಲಿ 72 ವಿದೇಶದವರಾಗಿದ್ದು, 98 ಕಂಪೆನಿಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಯಿತು. ಈ ಸಮಾವೇಶದಿಂದ ಆರು ಲಕ್ಷ ಜನರಿಗೆ ಉದ್ಯೋಗಗಳು ಸೃಷ್ಟಿಯಾಗಲಿವೆ. ಇದಕ್ಕಾಗಿ ಒಟ್ಟು 90 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆಯೋಜಿಸಲು ಸರ್ಕಾರವು ಅನುಮೋದನೆ ನೀಡಿದ್ದು, ಇಲ್ಲಿಯವರೆಗೆ 75 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸರ್ಕಾರದ ಪ್ರಯತ್ನ ಪರಿಶ್ರಮದಿಂದ ಹಾಗೂ ಇಲಾಖಾಧಿಕಾರಿಗಳ ಸಹಕಾರದಿಂದಾಗಿ ಒಟ್ಟಾರೆಯಾಗಿ ಈ ಸಮಾವೇಶವು ಯಶಸ್ವಿಯಾಗಿದೆ. ಹೀಗಾಗಿ ನಾನು ಮೊದಲು ಇವರನ್ನು ಅಭಿನಂದಿಸುತ್ತೇನೆ.

ಸಾಮಾನ್ಯವಾಗಿ ಎಲ್ಲಾ ಪಕ್ಷದ ಸರ್ಕಾರದ ಆಡಳಿತಾವಧಿಯಲ್ಲಿ ಇಂತಹ ಸಮಾವೇಶಗಳು ಆಯೋಜನೆಗೊಳ್ಳುತ್ತಿರುತ್ತವೆ. ನನಗೆ ಕಂಡುಬಂದಂತೆ, ಈ ಸಮಾವೇಶಗಳಲ್ಲಿ ಎಷ್ಟು ಕಂಪನಿಗಳು ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಾರೆಯೋ, ಅವರುಗಳೆಲ್ಲಾ, ಸಮಾವೇಶ ಸಂಪನ್ನಗೊಂಡ ನಂತರ ಹಿಂದಿರುಗಿ ಬಂದು, ಎಲ್ಲೆಲ್ಲಿ, ಯಾವ ಯಾವ ಉದ್ದಿಮೆಗಳನ್ನು ಪ್ರಾರಂಭ ಮಾಡುವುದಾಗಿ ತಿಳಿಸಿರುತ್ತಾರೆಯೋ, ಅವುಗಳೆಲ್ಲವನ್ನೂ ಕಾರ್ಯಗತಗೊಳಿಸುವುದೇ ಇಲ್ಲ. ಇವರುಗಳು ಈ ರೀತಿಯಾಗಿ ಮಾಡಿಲ್ಲವೆಂದಾದರೆ, ಸರ್ಕಾರವು ಇಷ್ಟೊಂದು ಹಣ ವ್ಯಯಿಸಿ ಸಮಾವೇಶ ಮಾಡಿದ್ದರ ಉಪಯೋಗವೇನು ಎಂದು ನಾನು ಪ್ರಶ್ನಿಸಬಯಸುತ್ತೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಎರಡು ಉದಾಹರಣೆಗಳನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಹಿಂದೆ 2020 ರಲ್ಲಿ ಶ್ರೀ ಜಗದೀಶ್ ಶೆಟ್ಟರ್ ರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ಸಮಾವೇಶವನ್ನು ಆಯೋಜಿಸಲಾಗಿತ್ತು. ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಾಗಿದೆ. ನಾನು ಹುಬ್ಬಳ್ಳಿ ಮತ್ತು ಧಾರವಾಡ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಮಾತ್ರವೇ ಸೀಮಿತವಾಗಿರುತ್ತದೆ. ಆ ಸಮಾವೇಶದಲ್ಲಿ ಸುಮಾರು 21 ಕಂಪನಿಗಳು ಕೈಗಾರಿಕೆಯನ್ನು ಪ್ರಾರಂಭಿಸುವಂತೆ ಒಡಂಬಡಿಕೆಗಳನ್ನು ಮಾಡಿಕೊಂಡಿದ್ದವು. ಆ ಸಮಾವೇಶ ಸಂಪನ್ನಗೊಂಡು ಇಲ್ಲಿಗೆ ಐದು ವರ್ಷಗಳಾಯಿತು. ಆ ಪೈಕಿ ಕೇವಲ ಎರಡು ಕಂಪನಿಗಳು ಮಾತ್ರವೇ ಪ್ರಾರಂಭಗೊಂಡಿದ್ದು, ಇನ್ನೆರೆಡು ಇನ್ನೂ ಪ್ರಕ್ರಿಯೆಯಲ್ಲಿವೆ. ಇನ್ನುಳಿದ 17 ಕಂಪನಿಗಳು ಇದುವರೆವಿಗೂ ಸಹ ವಾಪಸ್ಸು ಬಂದಿರುವುದಿಲ್ಲ. ಇದಕ್ಕೆ ಕಾರಣವೇನೆಂದು ನಾನು ಪ್ರಶ್ನಿಸುತ್ತೇನೆ. ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರುಗಳಿಗೆ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಎಂದು ತಿಳಿಸಲಾಗಿತ್ತೋ, ಅವುಗಳನ್ನು ಸರ್ಕಾರವು ಒದಗಿಸಲಿಲ್ಲವೇ? ಸರ್ಕಾರದಿಂದ ಸರಿಯಾದ ರೀತಿಯಲ್ಲಿ ಅವರುಗಳಿಗೆ ಸಹಕಾರ ದೊರೆತಿದೆಯೋ ಅಥವಾ ಇಲ್ಲವೋ? ಒಡಂಬಡಿಕೆ ಮಾಡಿಕೊಂಡ 21 ಕಂಪೆನಿಗಳ ಪೈಕಿ ಕೇವಲ 2 ಕಂಪನಿಗಳು ಮಾತ್ರವೇ ಪ್ರಾರಂಭವಾಗಿದ್ದು, ಇನ್ನೆರೆಡು ಪ್ರಕ್ರಿಯೆಯಲ್ಲಿದ್ದು, 17 ಕಂಪನಿಗಳು ವಾಪಸ್ಸು ಬಂದಿರುವುದಿಲ್ಲ. ಈ ಮಾಹಿತಿಯನ್ನು ನಾನು ಸಚಿವರಿಗೆ ನೀಡುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಕೆಲವೊಂದು ದಾಖಲಾತಿಗಳನ್ನು ಸನ್ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಿಗೆ ಒದಗಿಸಿದರು)**

**ಸಭಾಪತಿಯವರು:-** ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳದೇ, ಸಚಿವರಿಗೆ ನೇರವಾಗಿ ಪ್ರಶ್ನೆಯನ್ನು ಕೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಹೆಚ್ಚಿನ ಕಾಲಾವಕಾಶವನ್ನು ನೀಡಿ. ನಾನು ನೇರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸದರಿ 17 ಕಂಪೆನಿಗಳು ವಾಪಸ್ಸು ಬರದೇ ಇರುವುದಕ್ಕೆ ಕಾರಣವೇನು ಎಂದು ನಾನು ಸರ್ಕಾರಕ್ಕೆ ಪ್ರಶ್ನಿಸುತ್ತಿದ್ದೇನೆ. ಈ ಹಿಂದೆ, 2022 ನೇ ಇಸ್ವಿಯಲ್ಲಿ ನಡೆದ "ಇನ್ವೆಸ್ಟ್ ಕರ್ನಾಟಕ"

ಸಮಾವೇಶದಲ್ಲಿ 57 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಇಲ್ಲಿಯೂ ಸಹ ಕೇವಲ 2 ಕಂಪನಿಗಳು ಮಾತ್ರವೇ ಪ್ರಾರಂಭವಾಗಿವೆ. ಈ ರೀತಿಯಾಗಿ ಆದರೆ ಹೇಗೆ?

(ಮುಂದು)

(15)04-03-2025(11-20) bkp-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ. ಸಂಕನೂರ(ಮುಂದು) :-**

ಮಾನ್ಯ ಸಭಾಪತಿಯವರು ನನಗೆ ಕಡಿಮೆ ಸಮಯ ಕೊಟ್ಟಿದ್ದಾರೆ. ಹೀಗಾಗಿ, ನಾನು ನನ್ನ ಎರಡನೆಯ ಪ್ರಶ್ನೆಯನ್ನು ಕೇಳುತ್ತೇನೆ. ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಪ್ರಾರಂಭ ಮಾಡಿದ ಮೇಲೆ ಒಡಂಬಡಿಕೆಯಲ್ಲಿ ಕೆಲವೊಂದು ಷರತ್ತುಗಳು ಇರುತ್ತವೆ. 10 ವರ್ಷಗಳಾದರೂ ಆ ಷರತ್ತುಗಳನ್ನು ಪೂರ್ಣಗೊಳಸುವುದಿಲ್ಲ. ಬೆಂಗಳೂರಿನಲ್ಲಿ ನಡೆದಂತಹ ಅಧಿವೇಶನದಲ್ಲಿ ಹುಬ್ಬಳ್ಳಿಯಲ್ಲಿ ಇನ್ಫೋಸಿಸ್ ಕಂಪನಿ ಪ್ರಾರಂಭವಾಗಿದೆ, ಅದಕ್ಕೆ ನಾವು 35-40 ಎಕರೆ ಭೂಮಿಯನ್ನು ಕೊಟ್ಟಿದ್ದೇವೆ. ಅದೆಲ್ಲವನ್ನೂ ಉಪಯೋಗ ಮಾಡಿರುವುದಿಲ್ಲ. ಆ ಸಮಯದಲ್ಲಿ 300-400 ಇಂಜಿನೀಯರ್‌ಗಳಿಗೆ ಅಲ್ಲಿ ನೌಕರಿಯನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ, 3 ಜನರಿಗೂ ಕೊಡಲಿಲ್ಲ. ಹೀಗಿರುವಾಗ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಹೆಚ್ಚುವರಿ ಭೂಮಿಯನ್ನು ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ಏನು ಮಾಡುತ್ತೀರಿ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ.

**ಸಭಾಪತಿಯವರು:-** ಶ್ರೀಯುತ ಸಂಕನೂರ್‌ರವರೆ, ಮಾನ್ಯ ಸಚಿವರು ಹಿಂದೆ ಇದರ ಬಗ್ಗೆ ಒಪ್ಪಿಕೊಂಡಿದ್ದರು.

**ಶ್ರೀ ಎಸ್.ವ್ಹಿ. ಸಂಕನೂರ:-** ಆದ್ದರಿಂದ, ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ಹೇಳಬೇಕು. ಇದರ ಬಗ್ಗೆ ನನ್ನ ಎರಡು ಪ್ರಶ್ನೆಗಳಿವೆ. ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಹೆಚ್ಚಿಗೆ ಸಮಯ ಕೊಡುತ್ತಿಲ್ಲ, ಆದ್ದರಿಂದ, ನನ್ನ ಈ ಎರಡು ಪ್ರಶ್ನೆಗಳಿಗೆ ಸಚಿವರು ಉತ್ತರ ಕೊಡಬೇಕು.

**ಶ್ರೀ ಎಂ.ಬಿ. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಹಿಂದೆ Invest Karnataka ಸಮಾವೇಶದ ಮೇಲೆ 2020 ರ ಬಗ್ಗೆ ಹೇಳುವುದಾದರೆ it was not a Global Investors Meet. It was restricted to almost like a Local Investors Meet. ಹಿಂದೆ ಶ್ರೀಮಾನ್ ಜಗದೀಶ್ ಶೆಟ್ಟರವರು ಸಚಿವರಾಗಿದ್ದಾಗ ಅದನ್ನು ಮಾಡಿರುವುದಾಗಿದೆ. ಅದರ ಮಾಹಿತಿಯನ್ನು ಸಹ ನಾನು ತರಿಸಿಕೊಂಡಿದ್ದೇನೆ. ಹಿಂದೆ ನಡೆದಂತಹ Invest Karnataka ಸಮಾವೇಶದ ಬಗ್ಗೆಯೂ ಸಹ ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಜೊತೆಗೆ ಈ ಬಾರಿಯ ಸಮಾವೇಶದ ಬಗ್ಗೆಯೂ ಹೇಳಬೇಕೆಂದರೆ, ಅಂದರೆ ಮೊನ್ನೆ ನಡೆದಂತಹ Invest Karnataka

2025 ಏನಾಯಿತು, ಅದರಲ್ಲಿ Memorandum of Understanding ಆಗಿರುವಂತಹದ್ದು 98, ಅದರಲ್ಲಿ 6,23, 970 ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ. ಅಲ್ಲದೇ ಇದರಲ್ಲಿ ಎರಡು ಭಾಗಗಳು ಬರಲಿದ್ದು, 4, 03, 053 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಮಾಡಲು ಸಂಬಂಧಪಟ್ಟವರಿಂದ ಅನುಮೋದನೆಯನ್ನು ಸಹ ಪಡೆದುಕೊಂಡಿರುತ್ತಾರೆ. ಅದರ ಮಾಹಿತಿಯನ್ನು ತಮಗೆ ಕೊಟ್ಟಿರುತ್ತೇನೆ. Totally it will comes to Rs.10,25,000 crore and above ಬರುತ್ತದೆ. ತಾವು ಕೇಳಿರುವಂತೆ 2022 ರ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಆಗ ನಿಮ್ಮ ಸರ್ಕಾರ ಇತ್ತು. ನಾನು ಇದರ ಬಗ್ಗೆ ರಾಜಕೀಯವಾಗಿ ಮಾತನಾಡುತ್ತಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ಇದರ ಬಗ್ಗೆ ರಾಜಕೀಯ ಬೇಡ.

**(ಗೊಂದಲ)**

**ಸಭಾಪತಿಯವರು:-** ಸಚಿವರು ಉತ್ತರ ಹೇಳಬೇಕು.

**ಶ್ರೀ ಎಂ.ಬಿ. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೆ, ಹಿಂದೆ ನಡೆದಂತಹ Invest Karnataka 2022 ರಲ್ಲಿ ಏನಾಯಿತು ಎಂದರೆ ಅದರಲ್ಲಿ 57 ಕಂಪನಿಗಳು 5, 41, 369 ಕೋಟಿ ರೂಪಾಯಿಗಳಿಗೆ ಎಂಓಯು. ಮಾಡಿಕೊಂಡರು. ಆ ಕಂಪನಿಗಳಲ್ಲಿ 29 ಕಂಪನಿಗಳ ಪ್ರಸ್ತಾವನೆಗಳು ಬಂದವು. ಒಟ್ಟು 2,01, 167 ಕೋಟಿ ರೂಪಾಯಿಗಳ ಕೆಲಸ ಇವತ್ತು ಅನುಷ್ಠಾನಗೊಂಡಿವೆ. ಅಂದರೆ ಒಟ್ಟು ಎಂಓಯು 5,51,000 ಕೋಟಿ ರೂಪಾಯಿಗಳಲ್ಲಿ 2,01,000 ಕೋಟಿ ರೂಪಾಯಿಗಳ ಕೆಲಸ ಆಗಿದೆ. ಮುಂದುವರಿದು, ಏನು ಈ ಪ್ರಾಜೆಕ್ಟ್‌ಗಳಿಗೆ ಅಪ್ರೂವಲ್ ಕೊಟ್ಟಿದ್ದಾರೆ....

**ಶ್ರೀ ಎಸ್.ವ್ಹಿ. ಸಂಕನೂರ:-** ತಾವು ಮುಂದಿನದನ್ನು ಓದಲಿಲ್ಲ. ಒಟ್ಟು 20 ಕಂಪನಿಗಳಲ್ಲಿ 2 ಯೋಜನೆಗಳು ಅನುಷ್ಠಾನಗೊಂಡಿರುತ್ತವೆಂದು ತಮ್ಮ ಉತ್ತರದಲ್ಲಿ ಹೇಳಿರುತ್ತೀರಿ.

**ಶ್ರೀ ಎಂ.ಬಿ. ಪಾಟೀಲ್:-** ಇದು ಎಂಓಯುದ್ದು ಒಂದು ಕಾಲ, ಎರಡನೆಯದಾಗಿ ಯೋಜನೆಗಳದ್ದು ಏನು ಅನುಮೋದನೆ ಇದೆ, ಅಂದರೆ, ಅದು 3, 26,015 ಕೋಟಿ ರೂಪಾಯಿಗಳನ್ನು 606 ಯೋಜನೆಗಳಿಗೆ ಇವತ್ತು Single Window system ನಿಂದ clear ಮಾಡಿರುವಂತಹದ್ದಾಗಿದೆ. ಎರಡು ಕೂಡಿದರೆ ಒಟ್ಟಾರೆ, 8, 66,000 ಕೋಟಿ ರೂಪಾಯಿಗಳಾಗುತ್ತದೆ. ಅದರಲ್ಲಿಯೂ ಸುಮಾರು 5, 26,000 ಕೋಟಿ ರೂಪಾಯಿಗಳು ಅಂದರೆ more than 50-60% ಗಿಂತ ಹೆಚ್ಚು conversion ಅಗುತ್ತದೆ. ಈ ಎಲ್ಲಾ ಯೋಜನೆಗಳನ್ನು ತಿಳಿದುಕೊಂಡ ಮೇಲೆ ಒಮ್ಮಲೇ ಎಂಓಯು ಆದಮೇಲೆ ಇಲ್ಲಿ ಬರುತ್ತಾರೆ, land allocation ವಿಷಯ ಇರುತ್ತದೆ, clearances ವಿಷಯ ಇರುತ್ತದೆ, environmental clearance ವಿಷಯ ಇರುತ್ತದೆ. ಕನಿಷ್ಟ ಪಕ್ಷ ಒಂದು ಬಾರಿ ಅನುಮೋದನೆ ಕೊಟ್ಟಾಗ ಅದನ್ನು ಮಾಡಲಿಕ್ಕೆ 2-3 ವರ್ಷಗಳು ಬೇಕಾಗುತ್ತವೆ.

ಹೀಗಾಗಿ, 2022 ರಲ್ಲಿಯೂ ಕೂಡ ನಮ್ಮ Investors Meet ರಲ್ಲಿ around 60% ಅಂದು ಏನು commitment ಆಗಿತ್ತು. ಅದರ results ಗಳು ಬರುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಇನ್ನೊಂದು ವಿಚಾರವನ್ನು ಅಂದರೆ, ಹೂಡಿಕೆಗೆ ಎಷ್ಟು ಖರ್ಚು ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದು, 90 ಕೋಟಿ ರೂಪಾಯಿಗಳಲ್ಲಿ 75 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ನನ್ನ ಮೂಲ ಉದ್ದೇಶ ಏನೆಂದರೆ ಯಾವುದೇ ಸರ್ಕಾರದ ಯಾವುದೇ ಸಚಿವರು ಇದರ ಬಗ್ಗೆ ಹೂಡಿಕೆಯನ್ನು ಮಾಡಅಲ್ಲವೆನ್ನುವ ಪ್ರಶ್ನೆ ಇಲ್ಲ. ಇದರ ಬಗ್ಗೆ ಒಡಂಬಡಿಕೆ ಮಾಡಿಕೊಂಡ ಮೇಲೆ, ಇದರ ಬಗ್ಗೆ ಸರ್ಕಾರ ಗಮನಹರಿಸುತ್ತದೋ ಇಲ್ಲವೋ ಎನ್ನುವ ಬಗ್ಗೆ ನಾನು ಹುಬ್ಬಳ್ಳಿ-ಧಾರವಾಡದ ಉದಹಾರಣೆಯನ್ನು ಕೊಟ್ಟಿದ್ದೇನೆ. 21ರಲ್ಲಿ 15 ಜನರು ವಾಪಸ್ಸು ಹೋಗಿದ್ದಾರೆ. ಅದರ ಬಗ್ಗೆ ಸರ್ಕಾರ ಗಮನಹರಿಸಿರುವುದಿಲ್ಲ.

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಮಾಃಹಿತಿಯನ್ನು ಕೊಟ್ಟಿದ್ದೇನೆ. Global Investors Meet ಬಗ್ಗೆ ಕೇಳಿದ್ದೀರಿ, 2022 ರ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಬಗ್ಗೆ ನನಗೆ ಅಭಿಮಾನ, ಗೌರವ ಇದೆ. ಮಾನ್ಯ ಸಚಿವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದರೆ, ಹಿಂದಿನ ಯೋಜನೆಗಳನ್ನು ಕೈಬಿಡಬೇಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಹಿಂದಿನವುಗಳನ್ನು ಕೈಬಿಡುವಂತಹ ಪ್ರಶ್ನೆ ಇರುವುದಿಲ್ಲ. I am not bringing politics here. ಹಿಂದಿನ ಅಂದರೆ 2021-2022ನೇ ಸಾಲಿನಲ್ಲಿ ಆದಾಗಲೂ ಕೂಡ 60 percent is the conversion rate. ನಾವು ಈ ಬಾರಿ more than 70 percent target ಮಾಡುತ್ತಿದ್ದೇವೆ. ಅಂದರೆ 2022 also ಒಮ್ಮೆಯೇ convert ಆಗುವುದಿಲ್ಲ ಏಕೆಂದರೆ, ಎಂಓಯು ನಲ್ಲಿ ಒಂದು ಭಾಗವಾಗುತ್ತದೆ. Projects clearance ಅಗುವುದು ಎರಡನೆಯ ಭಾಗವಾಗಿರುತ್ತದೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ನಾನು 5 ವರ್ಷದ ಮಾಹಿತಿಯನ್ನು ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದು 2022 ರಲ್ಲಿ 8,66,000 ಕೋಟಿ ರೂಪಾಯಿಗಳು ಇತ್ತು. ಇದರಲ್ಲಿ ಕನವರ್ಷನ್ ಆಗುತ್ತಿರುವುದು 5,26,000 ಕೋಟಿ ರೂಪಾಯಿಗಳು. ಅಂದರೆ 60% ಆಗುತ್ತಿದೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ನನ್ನ ಮನವಿ ಏನೆಂದರೆ ತಾವು ಇದರ ಬಗ್ಗೆ ಕಷ್ಟಪಟ್ಟು ಮಾಡಿದ್ದೀರಿ, ಆದರೆ, ಇದರಿಂದ ಫಲ ಸಿಗಲಿಲ್ಲವೆಂದರೆ ಹೇಗೆ?

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದರ ಫಲ ಸಿಗುತ್ತಿದೆ.

**(ಗೊಂದಲ)**

ಮೊನ್ನೆ Global Investors Meet 2025 ಆದ ಮೇಲೆ ನಾನು ಸುಮ್ಮನೆ ಕುಳಿತಿಲ್ಲ. ಈಗಾಗಲೇ ಎರಡು ಕಂಪನಿಗಳನ್ನು ಅಂದರೆ Krones, ಎನ್ನುವ ಜರ್ಮನಿ based ಕಂಪನಿಯಾಗಿದೆ. ಇದು packaging and bottling machine manufacturers ಆಗಿರುತ್ತದೆ. 1 ಲಕ್ಷ ಬಾಟಲ್‌ಗಳನ್ನೂ ಸಹ ಮಾಡುತ್ತಾರೆ. Depending upon the size of the industry ಮಾಡುತ್ತಾರೆ. ಈಗಾಗಲೇ ಇದನ್ನು ಜಾರಿಗೆ ತರುವಲ್ಲಿ ಪ್ರಾರಂಭ ಮಾಡಿದ್ದೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ಕೊನೆಯದಾಗಿ ನನ್ನ ವಿನಂತಿ ಏನೆಂದರೆ ದಯವಿಟ್ಟು Tire-2 cities ಬಳಸಬೇಕು. ಮೊನ್ನೆ ನೀವು ಏನು Investors Meet ಮಾಡಿದ್ದೀರಲ್ಲಾ, ಅದರಲ್ಲಿ ನಮ್ಮ ಗದಗ ಅನ್ನು ಸೇರಿಸಿಯೇ ಇಲ್ಲ. Maximum, ಬೆಂಗಳೂರು ಸಿಟಿ, ಬೆಂಗಳೂರು ಗ್ರಾಮಾಂತರ, ಮೈಸೂರು ಬಿಟ್ಟು ಬೇರೆ ಕಡೆ ಎಲ್ಲಿಯೂ ಇರುವುದಿಲ್ಲ. ನೀವು ಉದ್ದಿಮೆದಾರರಿಗೆ ಪ್ರೋತ್ಸಾಹ ಕೊಡಿ. ಅಲ್ಲಿ 5-6 ಕಂಪನಿಗಳು ಬಂದಿವೆ. Tier-2 cities ಅನ್ನು ಬೆಳೆಸಬೇಕು.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಇದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ. ಮೊನ್ನೆ ನಡೆದಂತಹ Global Investors Meet ನಲ್ಲಿ beyond Bengaluru 70 percent ಇವತ್ತಿನ ದಿವಸ projects ಗಳು ಅನುಮೋದನೆಯಾಗಿವೆ and MOU sign ಮಾಡಿದ್ದೇವೆ. 45% ಉತ್ತರ ಕರ್ನಾಟಕಕ್ಕೆ ಅನುಮೋದನೆಯಾಗಿವೆ. ಇದು ಮೊದಲ ಬಾರಿ ಈ ರೀತಿಯಾಗಿದೆ. ಇದರ ಬಗ್ಗೆ concern ಇದೆ, ಇದರ ಬಗ್ಗೆ ಸಂಪೂರ್ಣ ಅರಿವು ಇದೆ. ಇದೆಲ್ಲವನ್ನು ನಾವು follow up ಮಾಡುತ್ತಿದ್ದೇವೆ. Global Investors Meet ಆದ ಮೇಲೆ 2-3 ಮೀಟಿಂಗ್‌ಗಳನ್ನು ಮಾಡಿದ್ದೇನೆ. ಇದೆಲ್ಲವನ್ನು follow up ಮಾಡಿದರೂ ಕೂಡ ನಾವು ಈ ವರ್ಷ 2022 ರಲ್ಲಿ conversion 60% ಏನಿತ್ತು, ಅದನ್ನು 75% ವರೆಗೆ conversion ಗೆ ಹೋಗಬೇಕೆನ್ನುವ ವಿಚಾರಗಳು ನಮ್ಮಲ್ಲಿವೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೆ, ಹುಬ್ಬಳ್ಳಿ ಇನ್ಫೋಸಿಸ್ ಬಗ್ಗೆ ಸಚಿವರು ಉತ್ತರ ಕೊಡಲಿಲ್ಲ.

**ಸಭಾಪತಿಯವರು:–** ಶ್ರೀಯುತ ಸಂಕನೂರ ರವರೆ, ಸಚಿವರು ಉತ್ತರವನ್ನು ಹೇಳುತ್ತಾರೆ, ಕುಳಿತುಕೊಳ್ಳಿ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಹುಬ್ಬಳ್ಳಿ ಇನ್ಫೋಸಿಸ್ ಬಗ್ಗೆ ಈ ಸದನದಲ್ಲಿ ಹಿಂದೆ ಪ್ರಶ್ನೆ ಬಂದಿತ್ತು.

**ಸಭಾಪತಿಯವರು:–** ಇದರ ಬಗ್ಗೆ ಶ್ರೀಯುತ ಸಂಕನೂರ ರವರೆ, ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಸಚಿವರೇ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಆ ಸಮಯದಲ್ಲಿ ಇನ್‌ಪೋಸಿಸ್‌ನವರು ಬಂದು ಈಗಾಗಲೇ ಈ ಬಗ್ಗೆ process ಅನ್ನು ಪ್ರಾರಂಭ ಮಾಡಿದ್ದಾರೆ. ಮತ್ತೆ ಅದರ ಬಗ್ಗೆ ಮತ್ತೊಂದು ಸಭೆಯನ್ನು ಮಾಡಿ ಅದರ ಬಗ್ಗೆ ಏನೇನು ಕ್ರಮ ಕೈಗೊಳ್ಳಲಾಗಿದೆ, ಅದನ್ನು ತಿಳಿಸುತ್ತೇನೆ.

**ಸಭಾಪತಿಯವರು:–** ಸಚಿವರೆ, ಒಂದು ನಿಮಿಷ. ಅಲ್ಲಿ ಏನೂ ಮಾಡಿರುವುದಿಲ್ಲ. ಸುಮ್ಮನೆ ಹೇಳಬೇಡಿ.

**(ಗೊಂದಲ)**

ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಇದೇ ಸದನದಲ್ಲಿ ಕಳೆದ ಬಾರಿ ಹೇಳಿದ್ದೀರಿ. ಏನು ಕ್ರಮ ತೆಗೆದುಕೊಂಡಿಲ್ಲ, ಅದು ಹೇಗೆ ಇತ್ತೋ ಹಾಗೆಯೇ ಇದೆ.

**(ಗೊಂದಲ)**

**ಶ್ರೀ ಪ್ರದೀಪ್ ಶೆಟ್ಟರ್( ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, guest house ತರ use ಮಾಡುತ್ತಾರೆ, Infosys staff ಗಳು ಅಲ್ಲ walking, party and enjoy ಮಾಡುತ್ತಾರೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದಾದ ಮೇಲೆ ಸಭಾಧ್ಯಕ್ಷರ ಕೊಠಡಿಯಲ್ಲಿ ಸಭೆ ಮಾಡಲಾಗಿದೆ.

**ಸಭಾಪತಿಯವರು:–** ನೀವು ಏನಾದರೂ ಮಾಡಿಕೊಳ್ಳಿ, ಅಲ್ಲಿಗೆ ಸರ್ಕಾರ ಏನು ಕೊಟ್ಟಿದೆ. ಅದನ್ನು ಪೂರ್ಣಗೊಳಿಸಿ. ಶ್ರೀಯುತ ಸಂಕನೂರವರ ಪ್ರಶ್ನೆಗೆ ಚರ್ಚೆ ಸುಮಾರು 14 ನಿಮಿಷಗಳಾಯಿತು.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೆ, ಧನ್ಯವಾದಗಳು.

## ಕರ್ನಾಟಕ ವಿಧಾನ ಪರಿಷತ್ತು

1. ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
2. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 111
3. ಉತ್ತರಿಸುವ ದಿನಾಂಕ : 04.03.2025
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ತ್ರೈವಾರ್ಷಿಕ ಚುನಾವಣೆ ನಡೆಸಲು ವಿಳಂಬಕ್ಕೆ ಕಾರಣವೇನು? | **ಚುನಾವಣಾ ವಿಳಂಬಕ್ಕೆ ಕಾರಣಗಳು :**<br>1. ಸಂಘದ ಚುನಾವಣಾಧಿಕಾರಿಗೆ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಲವಾರು ಸದಸ್ಯರು ಸದಸ್ಯತ್ವದ ಕುರಿತು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ಸಂಘದ ಬೈಲಾ ನಿಯಮ ಸಂಖ್ಯೆ.2ರ ಅವಕಾಶಗಳಂತೆ ಸದಸ್ಯತ್ವ ಅರ್ಜಿಗಳು ಅಪೂರ್ಣವಾಗಿರುತ್ತವೆ.<br>2. ಕಲಂ 25ರ ವಿಚಾರಣಾ ವರದಿಯಂತೆ ಸಂಘದ ಸದಸ್ಯತ್ವ ಕುರಿತು ಯಾವುದೇ ಪತ್ರಿಕಾ ಪ್ರಕಟಣೆಯಾಗಲೀ, ಸಂಘದ ಅಧಿಕೃತ ವೆಬ್‌ಸೈಟಿನಲ್ಲಿಯಾಗಲೀ ಯಾವುದೇ ಪ್ರಚಾರ ನೀಡದೇ ದಿನಾಂಕ:25.02.2022ರಂದು ಸುಮಾರು 2235 ಅರ್ಜಿದಾರರ ಸದಸ್ಯತ್ವ ಶುಲ್ಕ ರೂ.39.97 ಲಕ್ಷಗಳನ್ನು ಒಂದೇ ವ್ಯಕ್ತಿಯು ಸಂಘದ ಬ್ಯಾಂಕಿನ ಖಾತೆಗೆ ದಿನಾಂಕ:25.02.2022 ರಂದೇ ಪಾವತಿಸಿದ್ದು, ಅದೇ ದಿನಾಂಕದಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಲ್ಲಾ ಅರ್ಜಿಗಳನ್ನು ಒಂದೇ ಬಾರಿಗೆ ಅನುಮೋದಿಸಿರುವುದು ನಿಯಮ ಬಾಹಿರವಾಗಿರುತ್ತದೆ.<br>3. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 25ರ ವಿಚಾರಣಾ ವರದಿಯನ್ವಯ ಸಂಘದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಲು ಕ್ರಮವಿಡಲಾಗುತ್ತಿದೆ ಹಾಗೂ ಸಂಘದ ಚುನಾವಣೆಯನ್ನು ಜರುಗಿಸಲು ಚುನಾವಣಾಧಿಕಾರಿಯನ್ನು ನೇಮಿಸಲಾಗಿರುತ್ತದೆ.<br>4. ಸಂಘದ ಚುನಾವಣೆ ಕುರಿತಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11952/2023 ಮತ್ತು ರಿಟ್ ಅರ್ಜಿ ಸಂಖ್ಯೆ:3802/2025 ದಾಖಲಾಗಿದ್ದು, ದಿನಾಂಕ:18.02.2025 ರಂದು ವಿಚಾರಣೆ ಬಂದಿದ್ದು, ಮುಂದಿನ ವಿಚಾರಣೆ ದಿನಾಂಕ ನಿಗದಿಯಾಗಿರುವುದಿಲ್ಲ.<br>ಈ ಮೇಲಿನ ಕಾರಣಗಳಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಚುನಾವಣೆ ನಡೆಸಲು ವಿಳಂಬವಾಗಿರುತ್ತದೆ. |

| | | |
|---|---|---|
| (ಆ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕುರಿತು ಆರೋಪಗಳ ಬಗ್ಗೆ ಈಗಾಗಲೇ ಒಂದು ಬಾರಿ ತನಿಖೆಯಾಗಿದ್ದರೂ ಕೂಡ ಈಗ ಮತ್ತೆ ನಿಯಮ 25ರ ಅಡಿಯಲ್ಲಿ ತನಿಖೆ ಮಾಡಿ ಚುನಾವಣೆಯನ್ನು ಇನ್ನಷ್ಟು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಿರುದ್ಧದ ದೂರು ಅಂಶಗಳ ಕುರಿತು ದಿನಾಂಕ:10.10.2022ರಲ್ಲಿ ದೂರು ಅರ್ಜಿ ವಿಚಾರಣೆ ನಡೆದಿರುತ್ತದೆ. ಆದರೆ ಕಲಂ 25ರ ಅಡಿಯಲ್ಲಿ ಒಂದು ಬಾರಿ ಮಾತ್ರ ವಿಚಾರಣೆ ನಡೆದು, ದಿನಾಂಕ:31.12.2024ರಂದು ವಿಚಾರಣಾ ವರದಿ ಸಲ್ಲಿಕೆಯಾಗಿರುತ್ತದೆ. ದೂರು ಅರ್ಜಿಯ ವಿಚಾರಣೆಯ ಅಂಶಗಳು ಹಾಗೂ ಕಲಂ 25ರ ಅಡಿಯ ವಿಚಾರಣಾ ಅಂಶಗಳು ಬೇರೆ ಬೇರೆಯಾಗಿರುತ್ತವೆ.<br><br>ವಿಚಾರಣೆ ಮಾಡುವ ಕಾರಣಕ್ಕಾಗಿ ಚುನಾವಣೆಯನ್ನು ನಡೆಸಲು ವಿಳಂಬವಾಗಿರುವುದಿಲ್ಲ. |
| (ಇ) | ಈಗಾಗಲೇ ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದರೂ ಕೂಡ ಸಕಾಲದಲ್ಲಿ ಚುನಾವಣೆಯನ್ನು ನಡೆಸದೇ ಆಡಳಿತಾತ್ಮಕ ಸಮಸ್ಯೆಗಳು ಎದುರಾಗುತ್ತಿರುವುದರಿಂದ ಯಾವ ಕಾಲಮಿತಿಯೊಳಗೆ ಈ ಸಮಸ್ಯೆಗಳನ್ನು ಬಗೆಹರಿಸಿ ಚುನಾವಣೆಯನ್ನು ನಡೆಸಲಾಗುವುದು? (ವಿವರಣೆ ನೀಡುವುದು) | ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 25ರ ವಿಚಾರಣಾ ವರದಿಯನ್ವಯ ಸಂಘದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ಚುನಾವಣೆಯನ್ನು ಜರುಗಿಸಬೇಕಾಗಿರುತ್ತದೆ.<br><br>ಸಂಘದ ಚುನಾವಣೆ ಕುರಿತಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ.11952/2023 ಮತ್ತು 3802/2025ರ ಆದೇಶದಂತೆ ಕ್ರಮ ಜರುಗಿಸಲಾಗುವುದು. |
| (ಈ) | ಆಡಳಿತಾಧಿಕಾರಿಯ ಅವಧಿಯಲ್ಲಿ ಹಮ್ಮಿಕೊಂಡಿರುವ ಚಟುವಟಿಕೆಗಳಿಗೆ ಸಿಬ್ಬಂದಿ ವೇತನ ಹಾಗೂ ಇತರೆ ಕೆಲಸಗಳಿಗೆ ಬಳಸಿದ ಅನುದಾನದ ಮೂಲ ಯಾವುದು? (ಸಂಪೂರ್ಣ ವಿವರಣೆ ನೀಡುವುದು) | ಸಿಬ್ಬಂದಿ ವೇತನ ಹಾಗೂ ಇತರೆ ಕೆಲಸಗಳಿಗೆ ಸದಸ್ಯರ ಸದಸ್ಯತ್ವದ ವಂತಿಗೆಯಿಂದ ಬಂದ ಹಣ ಹಾಗೂ ಬಾಡಿಗೆಯಿಂದ ಬಂದ ಮೊತ್ತದಲ್ಲಿ ಭರಿಸಲಾಗುತ್ತಿದೆ. |

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ತ್ರೈಮಾಸಿಕ ಚುನಾವಣೆ ನಡೆಸಲು ವಿಳಂಬಕ್ಕೆ ಕಾರಣವೇನು ಎನು ಎಂದು ಪ್ರಶ್ನೆಯನ್ನು ನಾನು ಕೇಳಿದ್ದೆ. ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ ಈ ವಿಜ್ಞಾನ ಪರಿಷತ್ತು ಬಹಳ ಹೆಸರಾದಂತಹ ಒಂದು

ಸಂಘಟನೆಯಾಗಿದೆ. ನಾಡೋಜ ಮತ್ತು ನಾಡಿನ ಹೆಸರಾಂತ ವಿಚಾರವಾದಿಯಾದಂತಹ ದಿವಂಗತ ಹೆಚ್. ನರಸಿಂಹಯ್ಯ ನವರು ಮಾಡಿದಂತಹ ಸಂಸ್ಥೆ ಇದಾಗಿದೆ. ಇದರ ಮೂಲ ಉದ್ದೇಶ ಏನೆಂದರೆ, ನಾಡಿನ ವೈಜ್ಞಾನಿಕ ಮನೋಭಾವವನ್ನು ಎಲ್ಲರಲ್ಲಿಯೂ ಅದರಲ್ಲೂ ಮುಖ್ಯವಾಗಿ ಮಕ್ಕಳಲ್ಲಿ ಮೂಡಿಸಲಿಕ್ಕೆ ಅದನ್ನು ಮಾಡಿದ್ದಾರೆ. ಮತ್ತೆ ಬಹಳಷ್ಟು ಜನ ಪ್ರತಿನಿಧಿಗಳು ಇದನ್ನು ಗಳಿಸಬೇಕೆಂದು ಇದನ್ನು ತಂದು, ಅವರು ಇದರ ಬಗ್ಗೆ ಸಾಕಷ್ಟು ಶ್ರಮವನ್ನು ಹಾಕಿದ್ದಾರೆ. 4 ದಶಕಗಳ ಕೆಲಸ ಮಾಡಿದಂತಹ ಒಂದು ಸಂಸ್ಥೆ ಇದಾಗಿದೆ.

**(ಮುಂದು)**

(016) 04.03.2025 11.30 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ. ನಮೋಶಿ (ಮುಂದು):-**

ಅದನ್ನು ನಾನು ನೇರವಾಗಿ ಹೇಳಬಯಸುತ್ತೇನೆ. ಈ ಸಂಸ್ಥೆ ಮುಚ್ಚಬೇಕೆನ್ನುವ ಕುತಂತ್ರವನ್ನು ಕೆಲವೇ ಕೆಲವು ಜನರು ಮಾಡಲಿಕ್ಕೆ ಹೊರಟಿದ್ದಾರೆ. ಒಂದೂವರೆ ವರ್ಷದಿಂದ ಚುನಾವಣೆಯಾಗಿರುವುದಿಲ್ಲ. ಅಲ್ಲಿಗೆ ಒಂದು ಕಾಸು ಹಣ ಕೊಟ್ಟಿರುವುದಿಲ್ಲ. ಎರಡು ಬಾರಿ ಚುನಾವಣೆಯನ್ನು ಘೋಷಣೆ ಮಾಡಿ, ಪಟ್ಟಿ ಸರಿಯಿಲ್ಲವೆಂದು ರದ್ದು ಮಾಡುತ್ತಾರೆ. ಈ ಸಂಸ್ಥೆಯನ್ನು ನಾನು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಹೋಲಿಕೆ ಮಾಡಿ ಹೇಳುತ್ತಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚುನಾವಣೆಯನ್ನು ಹೇಗೆ ಮಾಡಲಾಗುತ್ತದೆ? ಸದಸ್ಯತ್ವವನ್ನು ಹೇಗೆ ಮಾಡಲಾಗುತ್ತದೆ? ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದು ಅಲ್ಲಿ ಸದಸ್ಯತ್ವದ ಅರ್ಜಿಗಳನ್ನು ಪಡೆದುಕೊಂಡು ಭರ್ತಿ ಮಾಡಿ ಹಣ ಪಾವತಿಸಿ ರಶೀತಿಯನ್ನು ಪಡೆದುಕೊಳ್ಳುತ್ತಾರೆ. ಗುರುತಿನ ಚೀಟಿಗಳನ್ನು ತೆಗೆದುಕೊಂಡಿರುತ್ತಾರೆ. ಎಲ್ಲಾ ನಿಯಮದ ಪ್ರಕಾರ ಮಾಡಿದ್ದಾರೆ. ಒಂದೇ ಸಲ ಹಣ ಪಾವತಿಸಲಾಗಿದೆ ಎಂದು ಆಪಾದನೆ ಮಾಡುತ್ತಾರೆ. ವಿಜಯಪುರದಿಂದ, ಕಲಬುರಗಿಯಿಂದ, ಕಮಲಾಪುರದಿಂದ ಹೀಗೆ ಪ್ರತಿಯೊಂದು ಕಡೆಗಳಿಂದಲೂ ಬಂದು ರೂ.5,000ಗಳನ್ನು ಖರ್ಚು ಮಾಡಿ ಬೆಂಗಳೂರಿಗೆ ಯಾರಾದರೂ ಬರುತ್ತಾರೆಯೇ? ಅವರವರ ಊರಿನಿಂದ ಪ್ರತಿನಿಧಿಗಳು ಅರ್ಜಿಗಳನ್ನು ತೆಗೆದುಕೊಂಡು ಬಂದು ಅದೇ ಕಛೇರಿಯಲ್ಲಿ ಕೊಟ್ಟು ರಸೀತಿಯನ್ನು ಪಡೆದು ಸದಸ್ಯತ್ವದ ಗುರುತಿನ ಚೀಟಿಯನ್ನು ಸಹ ಪಡೆದುಕೊಂಡಿರುತ್ತಾರೆ. ಸದಸ್ಯತ್ವ ಸರಿಯಿಲ್ಲವೆಂದು ಸುಮ್ಮನೇ ಹೇಳಬಹುದೇ? ತಪ್ಪು ವರದಿಯನ್ನು ಕೊಟ್ಟಿದ್ದಾರೆ. ದಯಮಾಡಿ ಈ ಹೆಸರಾಂತ ಸಂಸ್ಥೆಯನ್ನು ಮುಚ್ಚುವಂತಹ ಕೆಲಸವನ್ನು ಮಾಡಬಾರದೆಂದು ಮಾನ್ಯ ಸಚಿವರಲ್ಲಿ ಕೈಜೋಡಿಸಿ ನಾನು ವಿನಂತಿ ಮಾಡುತ್ತೇನೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು "ಬಾಲ ವಿಜ್ಞಾನ" ಎನ್ನುವ ಪತ್ರಿಕೆಯ ಮೂಲಕ ಮೂಢನಂಬಿಕೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸಲಾಗುತ್ತದೆ. ಇದು ನಮ್ಮ ಭಾಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿತ್ತು.

ಇಲ್ಲಿ ನಮ್ಮ ಭಾಗದ ಸಚಿವರು ಕುಳಿತಿದ್ದಾರೆ. ಗಾಣಗಾಪುರ, ಘತ್ತರಗಾ... ಘತ್ತರಗಾದಲ್ಲಿ ಮೂಢನಂಬಿಕೆಗಳ ವಿರುದ್ಧ ಅರಿವನ್ನು ಮೂಡಿಸಿ ಅದೆಲ್ಲವನ್ನೂ ಬಂದ್ ಮಾಡಲಾಗಿದೆ, and the credit goes to Vijnana Parishat. ಅಂತಹ ಸಂಸ್ಥೆಯನ್ನು ಮುಚ್ಚಲಿಕ್ಕೆ ಹೇಗೆ ಅನುಮತಿ ಕೊಟ್ಟಿದ್ದೀರಿ ಎಂದು ತಿಳಿಯುತ್ತಿಲ್ಲ. ತಾವು ಕೋರ್ಟ್‌ಗೆ ಹೋಗಿದ್ದಾರೆ ಎಂದು ಹೇಳುತ್ತಿದ್ದೀರಿ. ಚುನಾವಣೆ ಮಾಡದಿರುವ ಕಾರಣ ನ್ಯಾಯ ಸಿಗುತ್ತದೆ ಎಂದು ಕೋರ್ಟ್‌ಗೆ ಹೋಗಿದ್ದಾರೆ.

**ಶ್ರೀ ಕೆ.ಎನ್.ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಜ್ಞಾನ ಪರಿಷತ್ತನ್ನು ಹಿರಿಯ ಮುತ್ಸದ್ದಿಗಳಾದ ಶ್ರೀ ಹೆಚ್.ನರಸಿಂಹಯ್ಯನವರಾದಿಯಾಗಿ ಹಲವು ಸೇರಿ ಪ್ರಾರಂಭಿಸಿದ್ದು, ಅದು ಚೆನ್ನಾಗಿ ನಡೆಯಬೇಕು ಎನ್ನುವುದು ನಮ್ಮೆಲ್ಲರ ಆಶಯ. ಅದರಲ್ಲಿ ಎರಡನೆಯ ಮಾತಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಯಾರಾದರೂ ಸದಸ್ಯರಾಗಬೇಕಾದರೆ ಅವರೇ ಬಂದು ಅರ್ಜಿಯನ್ನು ಭರ್ತಿ ಮಾಡಬೇಕು. ಅವರ ವಾಸದ ವಿಳಾಸವನ್ನು ಕರಾರುವಾಕ್ಕಾಗಿ ಕೊಡಬೇಕೆಂದು ಬೈಲಾದಲ್ಲಿ ಇದೆ. ಒಮ್ಮಿಂದೊಮ್ಮೆಲೆ ಒಬ್ಬನೇ ಮನುಷ್ಯ ರೂ.39,92,000/-ಗಳನ್ನು ಬ್ಯಾಂಕ್‌ಗೆ ಜಮಾ ಮಾಡಿ incomplete form ಗಳನ್ನು.....

**ಶ್ರೀ ಶಶೀಲ್ ಜಿ. ನಮೋಶಿ:-** ಅದನ್ನು ಕಛೇರಿಯಲ್ಲಿ submit ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ನಮೋಶಿಯವರೆ, ಮಾನ್ಯ ಸಚಿವರು ಹೇಳುವುದನ್ನು ಪೂರ್ಣವಾಗಿ ಕೇಳಿ.

**ಶ್ರೀ ಕೆ.ಎನ್.ರಾಜಣ್ಣ:-** ಒಬ್ಬನೇ ಮನುಷ್ಯ ರೂ.39,97,000/- ಹಣವನ್ನು ಬನಶಂಕರಿಯ ಬ್ಯಾಂಕ್ ಒಂದರಲ್ಲಿ remittance ಮಾಡಿದ್ದಾರೆ. ಅವರು ಯಾರು remittance ಮಾಡಿದ್ದಾರೆಯೋ ಅವರ ಸಹಿಯೂ ಇರುವುದಿಲ್ಲ. ಆದರೆ ಮೊಬೈಲ್ ನಂಬರ್ ಇದೆ. ಮೊಬೈಲ್ ನಂಬರ್ ಯಾವುದೆಂದು ಪತ್ತೆ ಮಾಡಿ ನೋಡಿದರೆ ಒಬ್ಬನೇ ವ್ಯಕ್ತಿ ಇದ್ದಾನೆ. ಅವನ ಹೆಸರನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಇವರೇ ತಿಳಿಸಿದಂತೆ ಅವರು ಬಂದು ಅರ್ಜಿಯೊಂದಿಗೆ ಫೋಟೋ ಐಡಿಯನ್ನು ಕೊಡಬೇಕು. ಇದೆಲ್ಲವನ್ನೂ ಮಾಡಿದ್ದರೆ ಈ ಸಮಸ್ಯೆಯೇ ಉಂಟಾಗುತ್ತಿರಲಿಲ್ಲ. ಒಮ್ಮೆಲೆ ರೂ.39,97,000/- ಜಮೆ ಮಾಡಿದ್ದಾರೆ. Form ಗಳು ತೀರಾ incomplete ಇವೆ. ನಾನು ಎಲ್ಲವನ್ನೂ verify ಮಾಡಿಸಿದ್ದೇನೆ. ಅವರೇ ಬಂದು ವಿಳಾಸದ ಮಾಹಿತಿ ಎಲ್ಲವನ್ನೂ ಕೊಟ್ಟಿದ್ದರೆ ಈ ರೀತಿಯ ತೊಂದರೆಯಾಗುತ್ತಿರಲಿಲ್ಲ.

ಎರಡನೆಯದಾಗಿ ಇದೆಲ್ಲಾ enquiry ಗಳಾಗಿವೆ, ಲೋಕಾಯುಕ್ತಕ್ಕೂ ಹೋಗಿದೆ. ಸಿವಿಲ್ ನ್ಯಾಯಾಲಯದಲ್ಲಿಯೂ ಒಂದು dispute ಇದ್ದು, ಈ ಎಲ್ಲಾ ಕೇಸ್‌ಗಳು ನಡೆಯುತ್ತಿವೆ. ಅದಕ್ಕೆ ನಾವು Administrator ಅನ್ನು ಹಾಕಿದ್ದು, ಅವರಿಗೆ ಸುಮಾರು 7 ದೂರುಗಳು ಬಂದಿವೆ. ಅದರ ಬಗ್ಗೆ ತನಿಖೆಯನ್ನು

ಕೂಡ ಮಾಡಿಸಿದ್ದೇವೆ. ಕೆಲವು ಸಾಬೀತಾಗಿವೆ, ಕೆಲವು ಸಾಬೀತಾಗಿರುವುದಿಲ್ಲ. ಅದಕ್ಕೆ ನಮ್ಮ ಇಲಾಖೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವುದಕ್ಕೆ ನಾವು ಸೂಚನೆ ಕೊಟ್ಟಿದ್ದೇವೆ. ಈ ಮಧ್ಯೆ ಕೋರ್ಟ್‌ನಲ್ಲಿ ಕೂಡ ಎರಡು ರಿಟ್ ಪಿಟಿಷನ್ ಬಾಕಿ ಇವೆ. ರಿಟ್ ಪಿಟಿಷನ್‌ನ prayer ಚುನಾವಣೆ ನಡೆಸಬೇಕು ಎಂಬುದಾಗಿದೆ. ಕೋರ್ಟ್ ಆದೇಶ ಏನು ಬರುತ್ತದೆ ಅದನ್ನೂ ನೋಡುತ್ತೇವೆ. ಈ ಮಧ್ಯೆ ಸಾಬೀತಾಗಿರುವ ಆರೋಪದ ಮೇಲೆ ಯಾವ ಕ್ರಮ ಕೈಗೊಳ್ಳಬೇಕೋ ಅದನ್ನು ಕೂಡ ತೆಗೆದುಕೊಳ್ಳಲಾಗುವುದು. ವಿಜ್ಞಾನ ಪರಿಷತ್ತು ಸಕ್ರಿಯವಾಗಿ ಕೆಲಸ ಮಾಡಬೇಕೆಂದು ಎಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ಆ ಉದ್ದೇಶಕ್ಕೆ ಪೂರಕವಾಗಿ ನಡೆದುಕೊಳ್ಳುತ್ತೇವೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಫಾರ್ಮ್ ತುಂಬಿ ತಂದುಕೊಡುತ್ತಾರೆ. ಎರಡು ಸಾವಿರ ರೂಪಾಯಿ ಹಣ ಕೊಟ್ಟಿದ್ದಾರೆ. ರಶೀತಿಯನ್ನು ತೆಗೆದುಕೊಂಡಿದ್ದಾರೆ. ಪದ್ಧತಿ ಪ್ರಕಾರವೇ ಮಾಡಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯೂ ಅಲ್ಲಿಗೆ ಬಂದು ಇದೆಲ್ಲವನ್ನೂ ಮಾಡುವುದಿಲ್ಲ. ನಾನು ಕಾಲಾವಕಾಶವನ್ನು ಕೇಳಿದ್ದು, ಏನಾದರೂ ಇದ್ದರೆ complete ಮಾಡಿ ಎಂದು ಹೇಳಿರುತ್ತಾರೆ. ಈ ರೀತಿಯ ಸಂಸ್ಥೆಗಳಿಗೆ ಸದಸ್ಯತ್ವವನ್ನು ಮಾಡುವುದಕ್ಕೆ ಇದೇ ಪದ್ಧತಿ ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಊರಿನಿಂದ ಇಲ್ಲಿಗೆ ಬರುವುದಿಲ್ಲ. ಲಕ್ಷಾಂತರ ಜನ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಿದ್ದಾರೆ. ಎಲ್ಲರೂ ಬೆಂಗಳೂರಿನ ಕಛೇರಿಗೆ ಬಂದು ಸದಸ್ಯತ್ವವನ್ನು ಮಾಡಿರುತ್ತಾರೆಯೇ? ಒಬ್ಬರು ಎಲ್ಲರಿಂದಲೂ ಮೊತ್ತವನ್ನು ಸಂಗ್ರಹಿಸಿ ಬ್ಯಾಂಕ್‌ಗೆ ಪಾವತಿಸಿದ್ದಾರೆ. ಇದು continuous process. ಒಂದು ದಿವಸದ್ದಲ್ಲ. Continuous process ನಲ್ಲಿ ಏನೂ ತಪ್ಪಿರುವುದಿಲ್ಲ. ಕೆಲವು ಜನರು ಅದಕ್ಕೆ ಆಕ್ಷೇಪ ವ್ಯಕ್ತ ಪಡಿಸುತ್ತಾರೆ. ರಾಜ್ಯದ ಎಲ್ಲಾ ಭಾಗಗಳಿಂದಲೂ genuine members ಬಂದಿರುತ್ತಾರೆ. ಅವರು ಒಬ್ಬರೇ ಮಾಡಬೇಕೆಂದಿದ್ದರೆ ಎಲ್ಲರೂ ಕಲಬುರಗಿಯವರೇ ಇರುತ್ತಿದ್ದರು. ಹಾಗೇನಿಲ್ಲ. ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಬೇಕೆನ್ನುವ ಶಿಕ್ಷಕರಿದ್ದಾರೆ, ಉಪನ್ಯಾಸಕರಿದ್ದಾರೆ. 18 ವರ್ಷ ಮೇಲ್ಪಟ್ಟವರು ಯಾರೇ ಇದ್ದರೂ ಸದಸ್ಯರಾಗಬಹುದು ಎಂದು ನಿಯಮ ಹೇಳುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಾದರಿಯಲ್ಲಿಯೇ ಇದನ್ನೂ ಮಾಡಲಾಗಿದೆ. ಏಕೆ ನಿಲ್ಲಿಸಲಾಗುತ್ತಿದೆ? ದಯವಿಟ್ಟು ಚುನಾವಣೆ ಮಾಡಬೇಕು ಎಂದು ಮಾನ್ಯ ಸಚಿವರನ್ನು ಕೋರುತ್ತೇನೆ. ಒಬ್ಬರೇ ತಂದು ಏಕೆ ಹಣವನ್ನು ಕಟ್ಟುತ್ತಾರೆ? ಆ ರೀತಿ ಆಗಿಲ್ಲ.

**ಶ್ರೀ ಕೆ.ಎನ್.ರಾಜಣ್ಣ:-** 'ಆಗಿಲ್ಲ' ಎಂದು ನೀವು ಹೇಳುತ್ತೀರಿ, 'ಆಗಿದೆ' ಎಂದು ನಾನು ಹೇಳುತ್ತೇನೆ. ಪತ್ರಿಕೆಯಲ್ಲಿಯಾದರೂ ಪ್ರಕಟಣೆಯನ್ನು ಕೊಡುವಂಥದ್ದು ಸರ್ವೆ ಸಾಮಾನ್ಯವಾಗಿ ಮಾಡತಕ್ಕದ್ದು. Enrolment ಮಾಡುವುದಕ್ಕೆ ಪತ್ರಿಕೆಗಳಲ್ಲಿ ಎಲ್ಲಿಯೂ ಕೂಡ ಬರಲಿಲ್ಲ. ಅದು ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆ, ಯಾವಾಗ

ಬೇಕಾದರೂ ಮಾಡಬಹುದು. ಆದರೆ ಇವರ ಬೈಲಾದಲ್ಲಿ ಸದಸ್ಯತ್ವವನ್ನು ಹೊಂದುವವರು ಯಾವುದೇ ಪುರಾವೆಯನ್ನು ನೀಡತಕ್ಕದ್ದು, ವೋಟರ್ ಐಡಿ ಕಾರ್ಡ್ ನೀಡತಕ್ಕದ್ದು ಎಂದು ಇದೆ. ಅದನ್ನು follow ಮಾಡದೆ ಒಬ್ಬ ಮನುಷ್ಯ ರೂ.39,97,000/- ಹಣವನ್ನು ಕಟ್ಟಿದ್ದಾರೆಂದರೆ ಹೇಗೆ? ಅರ್ಜಿ ನಮೂನೆಗಳನ್ನು ಕೂಡ ಪೂರ್ಣವಾಗಿ ಭರ್ತಿ ಮಾಡಿರುವುದಿಲ್ಲ. ಅವೆಲ್ಲವನ್ನೂ ಸರಿಪಡಿಸಿ ವಿಜ್ಞಾನ ಪರಿಷತ್ತು ಸರಿಯಾಗಿ ಕೆಲಸ ಮಾಡಲಿಕ್ಕೆ ಏನು ಬೇಕೋ ಅದನ್ನು ಮಾಡೋಣ ಎಂದು ಹೇಳುತ್ತಿದ್ದೇನೆ. ಇದಕ್ಕಿಂತ ಇನ್ನೇನು ಆಗಬೇಕು ಹೇಳಿ?

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಕೆ.ಎಸ್.ನವೀನ್ ಮತ್ತು ಮಾನ್ಯ ಟಿ.ಎ.ಶರವಣ ಅವರದ್ದಾಗಿದ್ದು, ಉತ್ತರ ನೀಡಲು ಕಾಲಾವಕಾಶ ಕೇಳಿದ್ದಾರೆ. ಸಣ್ಣ ಕೈಗಾರಿಕೆ ಸಚಿವರು ಯಾರು? ಮಾನ್ಯ ಶರವಣ ಅವರೆ, ಕಾಲಾವಕಾಶ ಕೇಳಿದ್ದಾರೆ. ಮುಂದಿನ ಮಂಗಳವಾರ ಕೊಡಬೇಕೆಂದು ಹೇಳಿದ್ದೇನೆ. ಮಾನ್ಯ ರಾಜಣ್ಣ ಅವರೆ, ಮಾನ್ಯ ಸಣ್ಣ ಕೈಗಾರಿಕೆ ಸಚಿವರಿಗೆ ಮುಂದಿನ ಮಂಗಳವಾರ ದಿನಾಂಕ 11.03.2025ರಂದು ಉತ್ತರ ಕೊಡಬೇಕೆಂದು ತಿಳಿಸಿ.

**ಶ್ರೀ ಕೆ.ಎನ್.ರಾಜಣ್ಣ:-** ಮಾನ್ಯ ಸಭಾಪತಿಯವರೆ, ತಾವು ಹೇಳಿದಂತೆ ಮುಂದಿನ ಮಂಗಳವಾರ ಉತ್ತರವನ್ನು ಕೊಡಿಸುತ್ತೇವೆ ಎಂದು ಹೇಳಿದ ಮೇಲೆಯೂ ಪುನಃ ಏಕೆ ಅವರು ಮಾತನಾಡುತ್ತಿದ್ದಾರೆ?

(ಮುಂದು)

(017) 04-03-2025/11.40/ಎಂವಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಹದಿನೈದು ದಿನಗಳ ಮುಂಚೆ ಪ್ರಶ್ನೆಗಳನ್ನು ಕೇಳಿರುತ್ತೇವೆ. ಅದು starred question ಆಗಬೇಕಾದರೆ, ನಮಗೆ star ಇರಬೇಕು.

**(ಗೊಂದಲ)**

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಅದು starred question ಆಗಿದೆಯಲ್ಲವೇ?

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಈಗ ಮತ್ತೆ ಉತ್ತರ ಕೊಡುವುದಕ್ಕೆ ಸಮಯ ತೆಗೆದುಕೊಳ್ಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಹದಿನೈದು ದಿವಸ ಸಮಯ ತೆಗೆದುಕೊಂಡಿದ್ದರು ಅದಕ್ಕೆ ನಾನು ಮುಂದಿನ ಮಂಗಳವಾರ ಉತ್ತರ ನೀಡಬೇಕೆಂದು ತಿಳಿಸಿದ್ದೇನೆ. ಆಗ ಅವರು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಇದು ಒಂದೇ ಅಲ್ಲ. ಇದು ಯಾವಾಗಲೂ ನಿರಂತರವಾಗಿ ನಡೆಯುತ್ತಿದೆ. ಸರ್ಕಾರ ಯಾವಾಗ ನೋಡಿದರೂ ಇದೇ ರೀತಿಯೆ?

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನನ್ನದು ಒಂದು ಮನವಿ ಇದೆ. ಕಳೆದ ಎರಡು ಅಧಿವೇಶನದಲ್ಲಿ ನನ್ನ ಎರಡು starred questions ಗಳಿಗೆ ತಾವು ಇದೇ ರೀತಿ ಸರ್ಕಾರಕ್ಕೆ ಮಾಹಿತಿ ಕೇಳಿದ್ದೀರಿ. ಆದರೆ, ಅವರು ಉತ್ತರವನ್ನು ಕೊಡಲೇ ಇಲ್ಲ. ಸದನ ಮುಗಿದು ಹೋಯಿತು, ನನಗೆ ಉತ್ತರ ಬರಲೇ ಇಲ್ಲ. ಸದನ ಮುಕ್ತಾಯಗೊಂಡರೂ ಸಹ ನನ್ನ ಪ್ರಶ್ನೆಗೆ ಉತ್ತರವೇ ಬರಲಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರ ಸಿಕ್ಕಿಲ್ಲವೆಂದರೆ ಏನು? ನಾವು ಕಳೆದ ಬಾರಿ ಸುಮಾರು 788 ಪ್ರಶ್ನೆಗಳನ್ನು ಕೇಳಿದ್ದೇವೆ. ಇನ್ನೂ ಸುಮಾರು 300 ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಾಕಿಯಿವೆ. ಅದಕ್ಕೆ ತಾವು ಏನಾದರೂ ಸರ್ಕಾರಕ್ಕೆ ಚಾಟಿ ಬೀಸಿದ್ದೀರಾ? ಇವತ್ತಿನವರೆಗೂ ಉತ್ತರಗಳು ಬಂದಿಲ್ಲ. ತಾವು ಚೆಕ್ ಮಾಡಿ ನೋಡಿ. ಕಳೆದ ಅಧಿವೇಶನದ ಸುಮಾರು 300 ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ನಾನು ಹೇಳುವುದನ್ನು ತಾವು ಕೇಳಿ. ಬಹಳ ಜೋರು ಮಾಡಬೇಡಿ. ನನಗೆ ಎಲ್ಲಾ ಗೊತ್ತಿದೆ. ಮಾನ್ಯ ಸಚಿವರಾದ ಶ್ರೀ ಕೆ.ಎನ್.ರಾಜಣ್ಣನವರೆ ನಾನು ಹೇಳುವುದನ್ನು ಕೇಳಿ. ನಾನು ಪ್ರತಿಬಾರಿ ಸರ್ಕಾರಕ್ಕೆ ಹೇಳುತ್ತಿರುತ್ತೇನೆ. ಮಾನ್ಯ ಸದಸ್ಯರುಗಳು ಪ್ರಶ್ನೆಯನ್ನು ಹಾಕಿದಾಗ ಅವರಿಗೆ ಉತ್ತರವನ್ನು ಕೊಡಲಿಲ್ಲವೆಂದರೆ, ಏನಾಗುತ್ತದೆಂದು ತಾವು ಅರ್ಥ ಮಾಡಿಕೊಳ್ಳಿ. ತಾವು ಒಂದಾನೊಂದು ಕಾಲದಲ್ಲಿ ಸದಸ್ಯರಾಗಿ ಇದ್ದಂತಹವರು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಏನೇ ಪ್ರಶ್ನೆ ಬಂದರೂ ಸಹ ಈ ಸದನ ಮುಗಿಯುವುದರೊಳಗೆ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕೆಂದು ಕಡ್ಡಾಯವಾಗಿ ಹೇಳುತ್ತೇನೆ.

**(ಗೊಂದಲ)**

**ಶ್ರೀ ಕೆ.ಎನ್. ರಾಜಣ್ಣ:-** ಮಾನ್ಯ ಸಭಾಪತಿಯವರೇ, ಯಾವ ಸದಸ್ಯರಿಗೂ ಸಹ ಅಸಮಾಧಾನವಾಗದಂತಹ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತಿದೆ.

**(ಗೊಂದಲ)**

**ಸಭಾಪತಿಯವರು:-** ನಾನು ಪ್ರಶ್ನೋತ್ತರವನ್ನು 12.15 ಗಂಟೆಗೆ close ಮಾಡುತ್ತೇನೆ. ತಾವು ಏನು ಬೇಕಾದರೂ ಮಾಡಿಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ನಮ್ಮ ಪ್ರಶ್ನೆಗಳಿಗೆ ಉತ್ತರ ಬರುತ್ತಿಲ್ಲ. ಪ್ರಶ್ನೆಗಳಿಗೆ ಮಾಹಿತಿ ಕೊಡುವಂಥದ್ದು ಇಲ್ಲವೆಂದರೆ ಏನು?

**(ಗೊಂದಲ)**

**ಸಭಾಪತಿಯವರು:-** ನಾನು ಪ್ರಶ್ನೋತ್ತರವನ್ನು 12.15 ಗಂಟೆಗೆ close ಮಾಡುತ್ತೇನೆ. ತಾವುಗಳು ಏನು ಹುಡುಗಾಟಿಕೆ ಮಾಡುತ್ತೀರಾ? ನಾನು ಹೇಳುವಂತಹ ಮಾತನ್ನು ಕೇಳಬೇಕು. ನಾನು ಸದನವನ್ನು ಹೇಗೆ ನಡೆಸಬೇಕು?

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಒಪ್ಪಿಕೊಳ್ಳುತ್ತೇವೆ. ತಾವು ನಮ್ಮ ರಕ್ಷಣೆಗೆ ಬರಬೇಕು. ಹಿಂದಿನ ಅಧಿವೇಶನದಲ್ಲಿ ನಾವು ಕೇಳಿರುವಂತಹ 843 ಪ್ರಶ್ನೆಗಳಿಗೆ 380 ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿರತಕ್ಕಂಥದ್ದು. ಉಳಿದ ಪ್ರಶ್ನೆಗಳಿಗೆ ಏಕೆ ಉತ್ತರ ಬಂದಿಲ್ಲವೆಂದು ಸರ್ಕಾರ ಉತ್ತರ ನೀಡಲಿ. ಈಗ ನಮ್ಮ ಪ್ರಶ್ನೆಗೆ ಮತ್ತೆ ಒಂದು ವಾರ ಸಮಯ ಕೇಳುತ್ತಿದ್ದಾರೆ. ಹಾಗಾದರೆ, ನಾವು ಪ್ರಶ್ನೆ ಕೇಳುವುದೆ ಬೇಡವೇ? ಅದು ನಮ್ಮ ಹಕ್ಕು ಅಲ್ಲವೇ? ಪ್ರಶ್ನೆಯನ್ನು ಕೇಳುವುದು ಬೇಡವೆಂದರೆ ನಾವು ಪ್ರಶ್ನೆಯನ್ನು ಕೇಳುವುದೇ ಬೇಡ. ಹಾಗಾದರೆ, ನಾವು ಸದನಕ್ಕೆ ಏಕೆ ಬರಬೇಕು? ಪ್ರತಿ ಅಧಿವೇಶನದಲ್ಲೂ ಸಹ ಇದೇ ರೀತಿ ಮಾಡುತ್ತಾರೆ. ತಾವು ನಮ್ಮ ರಕ್ಷಣೆಗೆ ಬನ್ನಿ ಎಂದು ನಾವು ನಿಮ್ಮನ್ನು ಕೇಳಿಕೊಳ್ಳುತಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೆ, ತಮಗೆ ಬುದ್ಧಿ ಇದೆಯೋ ಇಲ್ಲವೋ, ನಿಮ್ಮ ರಕ್ಷಣೆಗೆ ಎಂದೇ ಉತ್ತರವನ್ನು next week ಕೊಡಬೇಕೆಂದು strict ಆಗಿ ತಿಳಿಸಿದ್ದೇನೆ. ಈಗ ನಾನು ಏನು ಮಾಡುವುದು?

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯಿತು ತಾವು ನಮಗೆ ರಕ್ಷಣೆ ಕೊಡಿಸಿ, ಇದು ಮತ್ತೆ ಮುಂದುವರೆಯಬಾರದು ಎಂದು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣರವರೆ, ನಾನು ಸರ್ಕಾರಕ್ಕೆ ತಿಳಿಸಿದ್ದೇನೆ. ತಾವು ಸುಮ್ಮನೆ ಕೆಲಸವಿಲ್ಲದೆ ಮಾತನಾಡುತ್ತೀರಿ.

**(ಗೊಂದಲ)**

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 32 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 04.03.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕರಾವಳಿ ಹಾಗೂ ಮಲೆನಾಡು ಭಾಗಗಳಲ್ಲಿ ಅಡಿಕೆಗೆ ಎಲೆ ಚುಕ್ಕಿ ರೋಗ ಹಾಗೂ ಹಳದಿ ರೋಗ ವಿಪರೀತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>Yes. |
| ಆ) | ಈ ರೋಗಗಳಿಂದ ತೊಂದರೆಗೊಳಗಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರಕ್ಕೆ ಇದೆಯೇ; ಈ ರೋಗಗಳಿಂದ ಅಡಿಕೆ ತೋಟಗಳ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಔಷಧಿಯಿಂದ ಈ ರೋಗವನ್ನು ತಡೆಗಟ್ಟಬಹುದು; ಈ ರೋಗಕ್ಕೆ ಇರುವ ಔಷಧಿಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಲಾಗಿದೆಯೇ; ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು; (ವಿವರ ಒದಗಿಸುವುದು) | ಎಲೆ ಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗಗಳಿಂದ ತೊಂದರೆಗೊಳಗಾಗಿರುವ ರೈತರಿಗೆ ಪ್ರತ್ಯೇಕವಾಗಿ ಪರಿಹಾರ ನೀಡುವ ಪ್ರಸ್ತಾವನೆ ಇರುವುದಿಲ್ಲ.<br><br>There is no compensation to leaf spot and yellow leaf disease affected Arecanut farmers.<br><br>**ಅಡಿಕೆ ಎಲೆಚುಕ್ಕೆ ಹಾಗೂ ಹಳದಿ ಎಲೆ ರೋಗಗಳಿಂದ ಅಡಿಕೆ ತೋಟಗಳ ರಕ್ಷಣೆಗೆ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ.**<br>**ಎಲೆಚುಕ್ಕೆ ರೋಗ:**<br>1. 2023-24ನೇ ಸಾಲಿನಲ್ಲಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.4000.00 ಗಳಂತೆ 1.5 ಹೆಕ್ಟೇರ್ ವರೆಗೆ ಪ್ರತಿ ಫಲಾನುಭವಿಗೆ ಗರಿಷ್ಠ ರೂ.6000/- ಮೊತ್ತದ ಸಸ್ಯ ಸಂರಕ್ಷಣಾ ಔಷಧಿಗಳನ್ನು 6250 ಹೆಕ್ಟೇರ್ ಪ್ರದೇಶಕ್ಕೆ ವಿತರಿಸಿ ರೂ. 250.00 ಲಕ್ಷಗಳ ಅನುದಾನವನ್ನು 12,300 ಅಡಿಕೆ ಬೆಳೆಗಾರರಿಗೆ ಸಹಾಯಧನವನ್ನು ನೀಡಲಾಗಿರುತ್ತದೆ.<br>2. ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಳೆಯ ಕಟಾವು ಹಾಗೂ ಸಿಂಪರಣೆಗಾಗಿ (ದೋಟಿ) ಖರೀದಿಸಲು ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದವರಿಗೆ ಶೇ.40 ರಷ್ಟು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಶೇ.50 ರಂತೆ ಸಹಾಯಧನ ನೀಡಲಾಗುತ್ತಿದೆ. 2023-24 ನೇ ಸಾಲಿನಲ್ಲಿ 1201 ಫಲಾನುಭವಿಗಳಿಗೆ ರೂ.366.68 ಲಕ್ಷಗಳ ಸಹಾಯಧನ ನೀಡಲಾಗಿದೆ.<br>3. ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣ ಕುರಿತು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ |

ವಿಶ್ವವಿದ್ಯಾಲಯದ ತಜ್ಞರ ಸಹಯೋಗದೊಂದಿಗೆ ತರಬೇತಿ, ಕಾರ್ಯಾಗಾರಗಳು ಹಾಗೂ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದರ ಮೂಲಕ ಅರಿವು ಮೂಡಿಸಲಾಗುತ್ತಿದೆ.

4. ಇಲಾಖೆಯಿಂದ ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣಕ್ಕಾಗಿ, ಹೆಕ್ಸೋಕೊನೊಜೋಲ್ (Hexoconazole), ಟೆಬುಕೊನೊಜೋಲ್ (Tebuconazole), ಪ್ರೋಪಿಕೊನೊಜೋಲ್ (Propiconazole) ಮತ್ತು ಪ್ರೋಪಿನೇಬ್ (Propineb) ಎಂಬ ಸಸ್ಯ ಸಂರಕ್ಷಣಾ ಔಷಧಿಗಳನ್ನು ತಜ್ಞರ ಶಿಫಾರಸ್ಸಿನನ್ವಯ ಹಾನಿಯಾದ ಪ್ರದೇಶದ ರೈತರಿಗೆ ವಿತರಿಸಲಾಗುತ್ತಿದೆ.
5. ಅಡಿಕೆ ಎಲೆ ಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗಗಳ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ನೇಮಿಸಿರುವ ವೈಜ್ಞಾನಿಕ ತಂಡದ ಸಮಿತಿಯು ಫೈಟೋಸ್ಯಾನಿಟರಿ (Phytosanitory) ಕ್ರಮಗಳ ಅಳವಡಿಕೆ (ರೋಗ ಬಾಧಿತ ಸಸ್ಯದ ಭಾಗಗಳನ್ನು ತೆಗೆಯುವುದು ಮತ್ತು ನಾಶಪಡಿಸುವುದು), ಪೋಷಕಾಂಶಗಳ ನಿರ್ವಹಣೆ, ಸಸ್ಯ ಸಂರಕ್ಷಣೆ ಕ್ರಮಗಳ ಅಳವಡಿಕೆ ಹಾಗೂ ತಾಂತ್ರಿಕ ಮಾಹಿತಿ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಶಿಫಾರಸ್ಸು ಮಾಡಿದೆ.
6. ಈ ಅನ್ವಯ ಎಲೆ ಚುಕ್ಕೆ ರೋಗದಿಂದ ಹಾನಿಯಾಗಿರುವ ಸುಮಾರು 53977 ಹೆಕ್ಟೆರ್ ಪ್ರದೇಶಕ್ಕೆ ರೂ.225.73 ಕೋಟಿಗಳಿಗೆ ಪ್ರಸ್ತಾವನೆ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುದಾನ 60:40 ರ ಅನುಪಾತದಲ್ಲಿದ್ದು, ಈ ಕಾರ್ಯಕ್ರಮವು 2 ವರ್ಷಗಳ ಅವಧಿಯದ್ದಾಗಿರುತ್ತದೆ.
7. 2024-25 ನೇ ಸಾಲಿಗೆ ರೂ. 112.83 ಕೋಟಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು, ಇದರಲ್ಲಿ ಕೇಂದ್ರ ಪಾಲಿನ ಅನುದಾನ ರೂ. 6771.95 ಲಕ್ಷಗಳಲ್ಲಿ ರೂ. 3700.00 ಲಕ್ಷಗಳನ್ನು (60%) ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಅನುಷ್ಠಾನಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.
8. ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣ ಕುರಿತು ಸಂಶೋಧನೆ ಕೈಗೊಳ್ಳಲು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ರವರಿಗೆ 2023-24 ನೇ ಸಾಲಿನಲ್ಲಿ ರೂ.43.61 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ಸಂಶೋಧನೆಯು ಪ್ರಗತಿಯಲ್ಲಿರುತ್ತದೆ.

| | | |
|---|---|---|
| | | **ಹಳದಿ ಎಲೆ ರೋಗ:**<br>1. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳುಮೆಣಸು, ಜಾಯಿಕಾಯಿ, ಬೆಣ್ಣೆ ಹಣ್ಣು ಹಾಗೂ ಇತರೆ ಬೆಳೆಗಳನ್ನು ಬೆಳೆಯಲು ಆಯಾ ಬೆಳೆಗೆ ಅನುಗುಣವಾಗಿ ಶೇ.40 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.11952 ರಿಂದ ರೂ.123483 ರವರೆಗೆ ಸಹಾಯಧನವನ್ನು 4 ಹೆಕ್ಟೇರ್ ವರೆಗೆ ನೀಡಲಾಗಿದೆ. 2023-24 ನೇ ಸಾಲಿನಲ್ಲಿ 811.11 ಹೆಕ್ಟೇರ್ ಪ್ರದೇಶದ ನಿರ್ವಹಣೆಗೆ 731 ಫಲಾನುಭವಿಗಳಿಗೆ ರೂ. 149.30 ಲಕ್ಷ ಸಹಾಯಧನ ನೀಡಲಾಗಿರುತ್ತದೆ.<br>2. ಅಡಿಕೆ ಹಳದಿ ಎಲೆ ರೋಗದ ನಿರ್ವಹಣೆ ಕುರಿತು 21 ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅಂದಾಜು 3000 ರೈತರು ತರಬೇತಿಯ ಪ್ರಯೋಜನವನ್ನು ಪಡೆದಿರುತ್ತಾರೆ.<br>3. ಸದರಿ ರೋಗ ಬಾಧೆಗೆ ನಿರ್ಧಿಷ್ಟವಾದ ಕಾರಣಗಳನ್ನು ಕಂಡು ಹಿಡಿಯಲು ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಕೇಂದ್ರ (CPCRI) ವಿಟ್ಲ, ದಕ್ಷಿಣ ಕನ್ನಡ ರವರಿಗೆ ರೂ.50.00 ಲಕ್ಷಗಳ ಅನುದಾನವನ್ನು ಪ್ರಯೋಗಾಲಯದ ಉನ್ನತೀಕರಣಕ್ಕಾಗಿ ಒದಗಿಸಲಾಗಿದೆ. ಇದರಿಂದ ರೋಗವನ್ನು ತುರ್ತಾಗಿ ಕಂಡುಹಿಡಿಯಲು ಸಹಕಾರಿಯಾಗುತ್ತಿದೆ.<br>4. ಹಳದಿ ಎಲೆ ರೋಗ ರಹಿತ ಅಡಿಕೆ ಸಸಿಗಳನ್ನು ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಕೇಂದ್ರ (CPCRI) ವಿಟ್ಲ, ದಕ್ಷಿಣ ಕನ್ನಡ ರವರಿಂದ ಉತ್ಪಾದಿಸಲಾಗುತ್ತಿದೆ.<br>5. ಇಲಾಖಾ ವತಿಯಿಂದ ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆಗಳ ಕುರಿತು ವಿಶ್ವವಿದ್ಯಾಲಯದ ತಜ್ಞರು ಹಾಗೂ ಇಲಾಖೆಯ |

| | | |
|---|---|---|
| | | ಅಧಿಕಾರಿಗಳ ಸಹಯೋಗದೊಂದಿಗ ಕೃಪಿಡ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಹಾಗೂ ತರಬೇತಿ/ಕಾರ್ಯಾಗಾರಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br><br>6. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯ MIDH ನ "INNOVATIVE RESEARCH COMPONENT" ಅಡಿಯಲ್ಲಿ ರೂ. 689 ಲಕ್ಷಗಳ ವೆಚ್ಚದಲ್ಲಿ ಸಂಶೋಧನೆ ಕೈಗೊಳ್ಳಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>**<u>ಕೆಳಕಂಡ ಔಷಧಿಗಳಿಂದ ಎಲೆ ಚುಕ್ಕೆ ರೋಗವನ್ನು ನಿಯಂತ್ರಿಸಬಹುದು:-</u>**<br><br>ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣಕ್ಕಾಗಿ ತಜ್ಞರ ಶಿಫಾರಸ್ಸಿನಂತೆ ಹೆಕ್ಸೋಕೊನೊಜೋಲ್ (Hexoconazole), ಟೆಬುಕೊನೊಜೋಲ್ (Tebuconazole), ಪ್ರೋಪಿಕೊನೊಜೋಲ್ (Propiconazole) ಮತ್ತು ಪ್ರೋಪಿನೇಬ್ (Propineb) ಸಸ್ಯ ಸಂರಕ್ಷಣಾ ಔಷಧಿಗಳಿಂದ ರೋಗವನ್ನು ನಿಯಂತ್ರಿಸಬಹುದಾಗಿರುತ್ತದೆ.<br><br>**ಕೆಳಕಂಡ ಕ್ರಮಗಳಿಂದ ಹಳದಿ ಎಲೆ ರೋಗವನ್ನು ನಿಯಂತ್ರಿಸಬಹುದು:-**<br><br>ಹಳದಿ ಎಲೆ ರೋಗವನ್ನು ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆಗಳ ಹಾಗೂ ಅಡಿಕೆ ಬದಲಾಗಿ ಪರ್ಯಾಯ ಬೆಳೆಗಳನ್ನು ಬೆಳೆಸುವ ಮೂಲಕ ನಿಯಂತ್ರಿಸಬಹುದು.<br><br>**<u>ಈ ರೋಗಗಳಿಗೆ ಇರುವ ಔಷಧಿಗಳು ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಲಾಗುತ್ತಿದೆ.</u>**<br><br>ಅಡಿಕೆ ಎಲೆ ಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗಗಳ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ನೇಮಿಸಿರುವ ವೈಜ್ಞಾನಿಕ ತಂಡದ ಸಮಿತಿಯು ರೋಗ ಬಾಧಿತ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡಿ ಎಲೆ ಚುಕ್ಕೆ ರೋಗದ ಹರಡುವಿಕೆಗೆ ಪ್ರಮುಖ ಕಾರಣಗಳು, ರೋಗದ ತೀವ್ರತೆ ಮತ್ತು ಹಾನಿಯ ಪ್ರಮಾಣದ ಬಗ್ಗೆ ಪರಿಶೀಲಿಸಿ ಸಸ್ಯ ಸಂರಕ್ಷಣಾ ಔಷಧಿಗಳಿಂದ ರೋಗವನ್ನು ತಡೆಗಟ್ಟಬಹುದಾಗಿ ತಿಳಿಸಿರುತ್ತಾರೆ. ಅದರಂತೆ ಕೃಷಿ ಮತ್ತು ತೋಟಗಾರಿಕೆ |

| | | |
|---|---|---|
| | | ಅಧಿಕಾರಿಗಳ ಸಹಯೋಗದೊಂದಿಗ ಕೃಪಿಡ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಹಾಗೂ ತರಬೇತಿ/ಕಾರ್ಯಾಗಾರಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br><br>6. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯ MIDH ನ "INNOVATIVE RESEARCH COMPONENT" ಅಡಿಯಲ್ಲಿ ರೂ. 689 ಲಕ್ಷಗಳ ವೆಚ್ಚದಲ್ಲಿ ಸಂಶೋಧನೆ ಕೈಗೊಳ್ಳಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>**<u>ಕೆಳಕಂಡ ಔಷಧಿಗಳಿಂದ ಎಲೆ ಚುಕ್ಕೆ ರೋಗವನ್ನು ನಿಯಂತ್ರಿಸಬಹುದು</u>:-**<br><br>ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣಕ್ಕಾಗಿ ತಜ್ಞರ ಶಿಫಾರಸ್ಸಿನಂತೆ ಹೆಕ್ಸೋಕೊನೊಜೋಲ್ (Hexoconazole), ಟೆಬುಕೊನೊಜೋಲ್ (Tebuconazole), ಪ್ರೋಪಿಕೊನೊಜೋಲ್ (Propiconazole) ಮತ್ತು ಪ್ರೋಪಿನೇಬ್ (Propineb) ಸಸ್ಯ ಸಂರಕ್ಷಣಾ ಔಷಧಿಗಳಿಂದ ರೋಗವನ್ನು ನಿಯಂತ್ರಿಸಬಹುದಾಗಿರುತ್ತದೆ.<br><br>**ಕೆಳಕಂಡ ಕ್ರಮಗಳಿಂದ ಹಳದಿ ಎಲೆ ರೋಗವನ್ನು ನಿಯಂತ್ರಿಸಬಹುದು:-**<br><br>ಹಳದಿ ಎಲೆ ರೋಗವನ್ನು ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆಗಳ ಹಾಗೂ ಅಡಿಕೆ ಬದಲಾಗಿ ಪರ್ಯಾಯ ಬೆಳೆಗಳನ್ನು ಬೆಳೆಸುವ ಮೂಲಕ ನಿಯಂತ್ರಿಸಬಹುದು.<br><br>**<u>ಈ ರೋಗಗಳಿಗೆ ಇರುವ ಔಷಧಿಗಳು ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಲಾಗುತ್ತಿದೆ.</u>**<br><br>ಅಡಿಕೆ ಎಲೆ ಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗಗಳ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ನೇಮಿಸಿರುವ ವೈಜ್ಞಾನಿಕ ತಂಡದ ಸಮಿತಿಯು ರೋಗ ಬಾಧಿತ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡಿ ಎಲೆ ಚುಕ್ಕೆ ರೋಗದ ಹರಡುವಿಕೆಗೆ ಪ್ರಮುಖ ಕಾರಣಗಳು, ರೋಗದ ತೀವ್ರತೆ ಮತ್ತು ಹಾನಿಯ ಪ್ರಮಾಣದ ಬಗ್ಗೆ ಪರಿಶೀಲಿಸಿ ಸಸ್ಯ ಸಂರಕ್ಷಣಾ ಔಷಧಿಗಳಿಂದ ರೋಗವನ್ನು ತಡೆಗಟ್ಟಬಹುದಾಗಿ ತಿಳಿಸಿರುತ್ತಾರೆ. ಅದರಂತೆ ಕೃಷಿ ಮತ್ತು ತೋಟಗಾರಿಕೆ |

| | | |
|---|---|---|
| | | ವಿಜ್ಞಾನಗಳ ವಿಶ್ವವಿದ್ಯಾಲಯದ ತಜ್ಞರ ಸಹಯೋಗದೊಂದಿಗೆ ತರಬೇತಿ, ಕಾರ್ಯಾಗಾರಗಳು ಹಾಗೂ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದರ ಮೂಲಕ ಅರಿವು ಮೂಡಿಸಲಾಗುತ್ತಿದೆ.<br><br>ಸದರಿ ರೋಗಗಳನ್ನು ತಡೆಗಟ್ಟಲು ಈ ಮೇಲಿನಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>**Steps taken for the management of arecanut leaf spot disease as given below.**<br>**Leaf spot disease:**<br>1. For the year 2023-24, plant protection chemicals were distributed at the rate of Rs.4000.00 per hectare to the farmers up to 1.5 hectares with a maximum amount of Rs.6000/- per beneficiary for an area of 6250 hectares with Rs. 250.00 lakhs given as subsidy to 12,300 arecanut growers.<br>2. For arecanut growers, subsidy of 40% for general category and 50% for Scheduled Castes/Scheduled Tribes is being given under Agricultural Mechanization Scheme to purchase areca sprayers (Doti) cum harvester. During the year 2023-24, 1201 beneficiaries have been given a subsidy of Rs. 366.68 lakhs.<br>3. Awareness programmes are organised viz. trainings, workshops and demonstrations in collaboration with scientists from University of Agriculture and Horticulture Science on disease control of arecanut leaf spot.<br>4. Plant protection chemicals i.e. Hexoconazole, Tebuconazole, Propiconazole and Propineb were distributed by the department to the farmers in the affected areas as recommendation given by the scientist for the control of arecanut leaf spot disease.<br>5. A scientific committee constituted by the Central Government for the control of Arecanut leaf spot and yellow leaf disease has recommended phytosanitary measures (Cutting and removal of disease affected plant parts), Nutrition management, plant protection chemicals and awareness programmes.<br>6. For the total disease affected area of about |

| | | |
|---|---|---|
| | | 53977 hectares, a proposal has been submitted with a budget of Rs. 225.73 Crores to the Central Government. The funding will be shared between the central and state governments in a 60:40 ratio over two years.<br>7. For the financial year 2024-25, a proposal of Rs. 112.83 crore has been submitted. From that, the Central Government share of Rs. 6,771.95 lakh (60%) out of Rs. 3,700.00 lakh has been released. Accordingly, steps taken to the implementation.<br>8. The University of Agricultural and Horticultural Sciences, Shivamogga, has been granted Rs. 43.61 lakh for the year 2023-24 to conduct research on the control of arecanut leaf spot disease. Currently, the research is in progress.<br><br>**Yellow leaf disase:**<br><br>1. Under the Comprehensive Horticulture Development scheme, financial assistance has been provided to encourage farmers in areas affected by arecanut yellow leaf disease to cultivate alternative commercial horticultural crops such as banana, coconut, coffee, cocoa, black pepper, nutmeg, butter fruit (avocado), and other suitable crops. Depending on the crop, farmers receive 40% assistance per hectare, ranging from Rs. 11,952 to Rs. 1,23,483, for up to 4 hectares. In the financial year 2023-24, a total subsidy of ₹149.30 lakh has been granted to 731 beneficiaries for the maintenance of 811.11 hectares.<br>2. A total of 21 training sessions have been conducted on managing arecanut yellow leaf disease, benefiting around 3000 farmers.<br>3. To identify the specific causes of yellow leaf disease, Rs. 50 lakh has been granted to the Central Plantation Crops Research Institute (CPCRI), Vittal, Dakshina Kannada, for laboratory upgradation. This |

| | | |
|---|---|---|
| | | is helping in the rapid detection of the disease.<br>4. Central Plantation Crops Research Institute (CPCRI), Vittal, Dakshina Kannada, is producing disease free arecanut seedlings.<br>5. The department, in collaboration with university experts and officials, is promoting best practices for arecanut plantation management, including nutrient management, construction of drainage channels, use of green manure, and supply of fertilizers. Awareness is being created through guidebooks, pamphlets, and various media platforms, along with training sessions and workshops for farmers.<br>**6.** To carryout research, a proposal of Rs. 689 lakhs has been submitted to the Central Government under the "Innovative Research Component" of the National Horticulture Mission (MIDH).<br><br>**Leaf spot disease can be prevented by below given plant protection chemicals**.<br><br>To prevent arecanut leaf spot disease, the scientific committee has recommended the use of plant protection fungicides such as Hexaconazole, Tebuconazole and Propiconazole.<br><br>**Yellow leaf disease can be prevented by below given steps.**<br><br>Yellow leaf disease can be prevented through nutrient management in arecanut plantations, construction of drainage channels, use of green manure, application of fertilizers and cultivation of alternative crops instead of arecanut.<br><br>**Creating awareness to the farmers about management practices.**<br><br>For the management of arecanut leaf spot disease and yellow leaf disease, a scientific committee appointed by the Central |

| | | |
|---|---|---|
| | | Government visited the affected districts of Chikkamagaluru, Shivamogga, and Dakshina Kannada. The team assessed the spread, severity, and impact of leaf spot disease and concluded that the disease can be controlled using plant protection fungicides. Accordingly, in collaboration with experts from the University of Agricultural and Horticultural Sciences, training sessions, workshops, and demonstrations are being organized to create awareness among farmers.<br><br>The above mentioned measures are being implemented to prevent these diseases. |
| ಇ) | ಎಲೆ ಚುಕ್ಕಿ ಹಾಗೂ ಹಳದಿ ರೋಗಗಳಿಗೆ ಸೂಕ್ತ ಔಷಧಿಗಳನ್ನು ಅಡಿಕೆ ಬೆಳೆಗಾರರಿಗೆ ಉಚಿತವಾಗಿ ನೀಡಲು ಕೈಗೊಂಡ ಕ್ರಮಗಳೇನು; | **ಎಲೆ ಚುಕ್ಕೆ ರೋಗ**:<br><br>2023-24ನೇ ಸಾಲಿನಲ್ಲಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.4000.00 ಗಳಂತೆ 1.5 ಹೆಕ್ಟೇರ್ ವರೆಗೆ ಪ್ರತಿ ಫಲಾನುಭವಿಗೆ ಗರಿಷ್ಠ ರೂ.6000/- ಮೊತ್ತದ ಸಸ್ಯ ಸಂರಕ್ಷಣಾ ಔಷಧಿಗಳನ್ನು 6250 ಹೆಕ್ಟೇರ್ ಪ್ರದೇಶಕ್ಕೆ ವಿತರಿಸಿ ರೂ. 250.00 ಲಕ್ಷಗಳ ಅನುದಾನವನ್ನು 12,300 ಅಡಿಕೆ ಬೆಳೆಗಾರರಿಗೆ ಸಹಾಯಧನ ನೀಡಲಾಗಿರುತ್ತದೆ.<br><br>**ಹಳದಿ ಎಲೆ ರೋಗ**:<br><br>ಹಳದಿ ಎಲೆ ರೋಗವನ್ನು ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆಗಳ ಹಾಗೂ ಅಡಿಕೆ ಬದಲಾಗಿ ಪರ್ಯಾಯ ಬೆಳೆಗಳನ್ನು ಬೆಳೆಸುವ ಮೂಲಕ ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ರೋಗದ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳ ಶಿಫಾರಸ್ಸು ಇರುವುದಿಲ್ಲ ಹಾಗೂ ನೀಡಲಾಗುತ್ತಿಲ್ಲ.<br><br>**Leaf spot disease**:<br>During the year 2023-24, plant protection chemicals were distributed at the rate of Rs.4000.00 per hectare to the farmers up to 1.5 hectares with a maximum amount of Rs.6000/- per beneficiary for an area of 6250 hectares with Rs. 250.00 lakhs given as subsidy to 12,300 arecanut growers. |

| | | |
|---|---|---|
| | | **Yellow leaf disease**:<br><br>For the management of yellow leaf disease, nutrient management, construction of drainage channels, use of green manure, and supply of fertilizers. There is no recommended plant protection chemicals for the control of the disease and not provided. |
| ಈ) | ಈ ಭಾಗಗಳಲ್ಲಿ ಅಡಿಕೆ ಬದಲು ಪರ್ಯಾಯ ಬೆಳೆ ಬೆಳೆಸಲು ಸರ್ಕಾರವು ಕೈಗೊಂಡ ಕ್ರಮಗಳೇನು; ಕಾಫಿಯನ್ನು ಪರ್ಯಾಯವಾಗಿ ಬೆಳೆಯಲು, ಪ್ರೋತ್ಸಾಹಿಸಲು ಸರ್ಕಾರವು ಕ್ರಮ ವಹಿಸುವುದೇ; ಸಹಾಯಧನ ನೀಡಲಾಗುವುದೇ; ಸದರಿ ಜಿಲ್ಲೆಗಳಲ್ಲಿ ಯಾವ ಯಾವ ಪ್ರದೇಶಗಳು ಕಾಫಿ ಬೆಳೆಯಲು ಯೋಗ್ಯವಾಗಿವೆ? (ವಿವರ ಒದಗಿಸುವುದು) | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳು ಮೆಣಸು, ಜಾಯಿಕಾಯಿ, ಬೆಣ್ಣೆ ಹಣ್ಣು ಹಾಗೂ ಇತರೆ ಬೆಳೆಗಳನ್ನು ಬೆಳೆಯಲು ಆಯಾ ಬೆಳೆಗೆ ಅನುಗುಣವಾಗಿ ಶೇ.40 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.11952 ರಿಂದ ರೂ.123483 ರವರೆಗೆ ಸಹಾಯಧನವನ್ನು 4 ಹೆಕ್ಟೇರ್ ವರೆಗೆ ನೀಡಲಾಗಿದೆ. 2023-24 ನೇ ಸಾಲಿನಲ್ಲಿ 811.11 ಹೆಕ್ಟೇರ್ ಪ್ರದೇಶದ ನಿರ್ವಹಣೆಗೆ 731 ಫಲಾನುಭವಿಗಳಿಗೆ ರೂ. 149.30 ಲಕ್ಷ ಸಹಾಯಧನ ನೀಡಲಾಗಿರುತ್ತದೆ. ಈ ಕಾಫಿಯನ್ನು ಸಹ ಪರ್ಯಾಯ ಬೆಳೆಯನ್ನಾಗಿ ಪರಿಗಣಿಸಲಾಗುತ್ತಿದೆ.<br><br>ಹಳದಿ ಎಲೆ ರೋಗವು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಶೃಂಗೇರಿ ನರಸಿಂಹರಾಜ ಪುರ ಮತ್ತು ಕಳಸ ತಾಲ್ಲೂಕುಗಳಲ್ಲಿ ಕಂಡು ಬಂದಿದ್ದು, ಈಗಾಗಲೇ ಕಾಫಿಯನ್ನು ಮಿಶ್ರ ಬೆಳೆಯಾಗಿ ಹಾಗೂ ಮುಖ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಹಳದಿ ಎಲೆ ರೋಗವು ಕಂಡು ಬಂದಿದ್ದು, ಸದರಿ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯುವುದು ಸೂಕ್ತವಿರುವುದರ ಬಗ್ಗೆ ಕಾಫಿ ಮಂಡಳಿ ವತಿಯಿಂದ ಕೇಂದ್ರೀಯ ಕಾಫಿ ಸಂಶೋಧನಾ ಕೇಂದ್ರ (CCRI), ಬಾಳೆಹೊನ್ನೂರು ರವರ ಸಮೀಕ್ಷೆ ಮಾಡಿದ್ದು, ಅಂತಿಮ ವರದಿ ನೀರಿಕ್ಷಿಸಲಾಗಿದೆ.<br><br>ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಸಂಪಾಜೆ ಪ್ರದೇಶದಲ್ಲಿ ಹಳದಿ ಎಲೆ ರೋಗ ಕಂಡು ಬಂದಿದ್ದು, ಈ ಪ್ರದೇಶದಲ್ಲಿ ಕಾಫಿಯನ್ನು ಮಿಶ್ರ ಬೆಳೆಯಾಗಿ ಹಾಗೂ ಮುಖ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ.<br><br>Under the CHD scheme, financial assistance has |

| | | |
|---|---|---|
| | | been provided to encourage farmers in arecanut yellow leaf disease affected areas to cultivate alternate commercial horticultural crops such as banana, coconut, coffee, cocoa, black pepper, nutmeg, butter fruit (avocado) and other suitable crops. Depending on the crop, 40% of assistance per hectare is provided, ranging from Rs. 11,952 to Rs. 1,23,483 for up to maximum of 4 hectares. During 2023-24, a total subsidy of Rs.149.30 lakhs has been granted to 731 beneficiaries for the maintenance of 811.11 hectares.<br><br>Arecanut yellow leaf disease has been found in the Koppa, Sringeri, Narasimharajapura and Kalasa taluks of Chikkamagaluru district. Coffee is already being cultivated both as an intercrop and main crop.<br><br>Arecanut yellow leaf disease has been occurred in Sullia taluk of Dakshina Kannada district. The Central Coffee Research Institute (CCRI), Balehonnur, conducted a survey to assess the suitability of coffee cultivation in the affected area and the final report is awaited.<br><br>This disease has been occurred in the Sampaje area of Madikeri taluk in Kodagu district. In this region, coffee is being cultivated both as an intercrop as well as main crop. |

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅವರು ನೀಡಿರುವ ಉತ್ತರ ಅಷ್ಟು ತೃಪ್ತಿದಾಯಕವಾಗಿಲ್ಲ. ನಮ್ಮ ಸುಳ್ಯ ಮತ್ತು ಪುತ್ತೂರು ಭಾಗದ ರೈತರು ಅಡಿಕೆ ಎಲೆಚುಕ್ಕೆ ಹಾಗೂ ಹಳದಿ ಎಲೆ ರೋಗಗಳಿಂದ ಹೈರಾಣಾಗಿ ಹೋಗಿದ್ದಾರೆ. ಇದರಿಂದ ಸಂಪೂರ್ಣವಾಗಿ ಬೆಳೆ ನಾಶವಾಗಿ ಹೋಗಿದೆ. ಆ ಕಾರಣಕ್ಕೋಸ್ಕರ ಶೀಲಿಂಧ್ರಗಳಿಗೆ ಮದ್ದು ಸಿಂಪರಣೆಗೆ ಸರಿಯಾದ ಮದ್ದು ಮಾರುಕಟ್ಟೆ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಸಿಗುತ್ತಿಲ್ಲ. ಅದರ ಜೊತೆಗೆ ಪೋಷಕಾಂಶಗಳನ್ನು ಸಹ ಸರಿಯಾಗಿ ಕೊಡುತ್ತಿಲ್ಲ. ಆ ಕಾರಣಕ್ಕೋಸ್ಕರ ರೈತರು ಸೋತು ಹೈರಾಣಾಗಿದ್ದಾರೆ.

ಅದಕ್ಕೋಸ್ಕರ ಸರ್ಕಾರ ಇದಕ್ಕೆ ಸರಿಯಾದ ಕ್ರಮವನ್ನು ಕೈಗೊಳ್ಳಬೇಕು. ಅದರ ಜೊತೆಗೆ ಔಷಧಿಗಳ ಕೊರತೆ ಸಹ ಉಂಟು. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಔಷಧಿಗಳನ್ನು ನೀಡಿದ್ದೇವೆಂದು ಹೇಳಿದ್ದಾರೆ. ಈಗ ಒಂದು ಎಕರೆಗೆ ಕೇವಲ ಅರ್ಧ ಲೀಟರ್ ಔಷಧಿಯನ್ನು ಮಾತ್ರ ನೀಡಿದ್ದಾರೆ. ಅದು ಯಾವುದಕ್ಕೂ ಸಾಕಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ಶೇಕಡಾ 60ರಷ್ಟು ಅನುದಾನ ಬಂದಿದೆ. ಆದರೆ, ಅದು ಇನ್ನೂ ಕೂಡ ಬಿಡುಗಡೆಯಾಗಿಲ್ಲ. ಮತ್ತೆ ಅದು ರೈತರ ಕೈಗೆ ಸೇರಿಲ್ಲ. ಅಂದರೆ, ಶೇಕಡಾ 60:40 ಅಂದರೆ ರಾಜ್ಯ ಮತ್ತು ಕೇಂದ್ರದಿಂದ ರೈತರಿಗೆ ಅನುದಾನ ಸಿಗಬೇಕು. ಆದರೆ, ಕೇಂದ್ರ ಸರ್ಕಾರದಿಂದ ಸುಮಾರು 32 ಕೋಟಿ ರೂಪಾಯಿಗಳ ಅನುದಾನ ಬಂದಿದೆ. ಆದರೆ, ರಾಜ್ಯ ಸರ್ಕಾರದ ಅನುದಾನ ಎಲ್ಲಿದೆ? ಅದನ್ನು ಸೇರಿಸಿಕೊಂಡು ರೈತರಿಗೆ ಕೊಡುವಂತಹ ಕೆಲಸ ಆಗಬೇಕು. ಇದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಹಾಗೆ, ಕೇಂದ್ರ ಸರ್ಕಾರದ ಅನುದಾನ ಬಂದಿದೆ. ರಾಜ್ಯ ಸರ್ಕಾರದ ಅನುದಾನವನ್ನು matching grant ಅನ್ನು ಕೊಟ್ಟು, ಅದನ್ನು ಆದಷ್ಟು ಬೇಗನೆ ಅನುದಾನವನ್ನು ಕೊಡುವುದಕ್ಕೆ ಸಂಪೂರ್ಣವಾಗಿ ತಯಾರಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ ಈ ಎಲೆಚುಕ್ಕೆ ರೋಗದಲ್ಲಿ ಒಂದು ಹೆಕ್ಟೇರ್‌ಗೆ 1,200/- ರೂಪಾಯಿಗಳಂತೆ ಕೊಡುತ್ತಿದ್ದೇವೆ. ಆ ನಿಟ್ಟಿನಲ್ಲಿ ಅದು ಕಡಿಮೆಯಾಗಿದೆ ಎಂಬುದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ. ಅದರ ಬಗ್ಗೆಯೂ ಕೂಡ ಗಮನವನ್ನು ಕೊಟ್ಟು, ಮತ್ತೆ ಇದನ್ನು ಹೆಚ್ಚಿಗೆ ಮಾಡಬೇಕು ಎನ್ನುವ ದೃಷ್ಟಿಕೋನದಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಮಾನ್ಯ ಸದಸ್ಯರ ಪಕ್ಷದ ಸರ್ಕಾರವೇ ಇದೆ. ಅವರ ಪಕ್ಷದ ಸರ್ಕಾರ ಇರುವುದರಿಂದ ಇನ್ನು ಹೆಚ್ಚಿನ ಅನುದಾನ ಕೊಡಿಸುವುದಕ್ಕೆ ಅವರು ಪ್ರಯತ್ನಪಡಲಿ, ನಾವು ಸಹ ಮಾಡುತ್ತೇವೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ಹೆಕ್ಟೇರ್‌ಗೆ 1,200/- ಎಂದು ತಿಳಿಸಿದ್ದಾರೆ. ಆದರೆ ಅದು ಯಾವುದಕ್ಕೂ ಸಾಕಾಗುವುದಿಲ್ಲ. ಈಗ ಶಿಲೀಂದ್ರ ರೋಗ ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಾರಂಭವಾಗುತ್ತದೆ. ರೈತರ ಕಂಗು ಬೆಂಕಿ ಹಚ್ಚಿದ ಹಾಗೆ ಆಗಿದೆ. ಅವರು disease forecast ಎಂದುಕೊಂಡು ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಾರಂಭ ಮಾಡಬೇಕು. ಆ ಸಂದರ್ಭದಲ್ಲಿ quality ಸುಣ್ಣ ಕೂಡ ಸಿಗುವುದಿಲ್ಲ. ಅದಕ್ಕೆ ಯಾವ ರೀತಿ ಮದ್ದನ್ನು ಸಿಂಪಡಿಸಬಹುದು ಎಂದು 2023-24ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾಲಯಕ್ಕೆ ಸುಮಾರು ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ, ಅದರ ವರದಿ ಇನ್ನೂ ಕೂಡ ಬಂದಿಲ್ಲ. ಇದು ಯಾವಾಗ ಬರುತ್ತದೆ? ಈಗ ರೈತ ಸೋತು ಆಗಿದೆ. ರೈತನ ಅಂಗಳದಲ್ಲಿ ಅಡಕೆ ಬೆಳೆ ಅರ್ಧದಷ್ಟು ಕಡಿಮೆಯಾಗಿದೆ. ಅವರು ಪರ್ಯಾಯ ಬೆಳೆಗೆ ಯಾವ ರೀತಿಯ ಕ್ರಮವನ್ನು ಕೈಗೊಂಡಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದೆ ಹೋದರೆ ರೈತ ಕಂಗಲಾಗುತ್ತಾನೆ. ಅದಕ್ಕೆ ತಕ್ಷಣ ಇದನ್ನು ಅನುಷ್ಠಾನ ಮಾಡಬೇಕು. ಮತ್ತೆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆಂದು ತಿಳಿಸಬೇಕು. ಇದೊಂದು ಸಾರ್ವಜನಿಕವಾಗಿ ಅತ್ಯಂತ

ಮಹತ್ವದ ಪ್ರಶ್ನೆ. ರೈತರು ಹೈರಾಣಾಗಿ ಹೋಗಿದ್ದಾರೆ. ಮಾನ್ಯ ಸಚಿವರು ಕಾಫಿಗೆ ಪರ್ಯಾಯ ಬೆಳೆ ಮಾಡಬಹುದು ಎಂದು ಉತ್ತರ ನೀಡಿದ್ದಾರೆ. ಕಾಫಿಗೆ ಪರ್ಯಾಯ ಬೆಳೆ ಮಾಡುವುದಕ್ಕೆ ಸರ್ಕಾರ ಏನು ಮಾಡಿದೆ? ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಎಲ್ಲವನ್ನು ಸಹ ಮಾಡಲಾಗುತ್ತದೆ ಎಂದು ಉಂಟು. ಆದರೆ, ಮಾಡಿದ್ದೇವೆಂದು ಯಾವುದೂ ಸಹ ಇಲ್ಲ. ರೈತರ ಕಣ್ಣೀರನ್ನು ಒರೆಸುವುದಕ್ಕೆ ಸರ್ಕಾರ ಮತ್ತು ಮಾನ್ಯ ಸಚಿವರು ತಕ್ಷಣಕ್ಕೆ ಅದಕ್ಕೆ ಬದ್ಧರಾಗಬೇಕು. ಆ ಮುಖಾಂತರ ಈ ದೇಶದ ಬೆನ್ನೆಲುಬು ರೈತರಿಗೆ ಶಕ್ತಿ ತುಂಬಿದರೆ ಮಾತ್ರ ನಮ್ಮ ಎಲ್ಲಾ ಇಡೀ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇರಬಹುದು ಈ ಎಲ್ಲದಕ್ಕೂ ಸಹ ಶಕ್ತಿ ಬರುತ್ತದೆ. ನೀಡಿರುವ ಎಲ್ಲಾ ಉತ್ತರದಲ್ಲೂ ಸಹ ಸಮಂಜಸವಿಲ್ಲ. ಅದಕ್ಕೆ ಇದನ್ನು ಅರ್ಧಗಂಟೆ ವಿಸ್ತಾರವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, ನಾವು ಕೇಂದ್ರ ಸರ್ಕಾರಕ್ಕೆ ಒಟ್ಟು 112 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಅದರಲ್ಲಿ ಸುಮಾರು 37 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿ ನಮ್ಮ ರಾಜ್ಯ ಸರ್ಕಾರದ matching grant ಅನ್ನು ಕೊಡುತ್ತೇವೆ ಎನ್ನುವುದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಕೊಟ್ಟಿದ್ದೇನೆ. ಮುಖ್ಯವಾಗಿ ಮಾರ್ಗಸೂಚಿ ಪ್ರಕಾರ ಒಂದು ಹೆಕ್ಟೇರ್‌ಗೆ 1,200/- ರೂಪಾಯಿಗಳು ಎಂದು ಇದೆ. ಅದರೆ scientist ಗಳ ಪ್ರಕಾರ ನಲವತ್ತು ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಖರ್ಚಾಗುತ್ತದೆ ಎಂಬ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ನಾವು ಅದನ್ನು ಸಹ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಕಳುಹಿಸಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿ ಆ ಮಾರ್ಗಸೂಚಿಗಳ ಪ್ರಕಾರ ನಾವು ಕಳುಹಿಸಿರುವ ಡಿ.ಪಿ.ಆರ್. ಪ್ರಕಾರ ಕೊಟ್ಟರೆ, ತಕ್ಷಣ ನಾವು ಸಹ ಹಣವನ್ನು ಬಿಡುಗಡೆ ಮಾಡುತ್ತೇವೆ. ಅದರ ಬಗ್ಗೆ ಮಾನ್ಯ ಸದಸ್ಯರು ಯಾವುದೇ ರೀತಿಯ ಅನುಮಾನ ಇಟ್ಟುಕೊಳ್ಳುವುದು ಬೇಡ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಸುಮಾರು 37 ಕೋಟಿ ರೂಪಾಯಿಗಳ ಅನುದಾನ ಬಂದಿದೆ. ಅದು ಬಂದು ಒಂದು ತಿಂಗಳಾಗಿದೆ. ಆದರೆ, ರಾಜ್ಯ ಸರ್ಕಾರದಿಂದ ಯಾವಾಗ ಕೊಡುತ್ತಾರೆ?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, ಅದು ಬಂದಿದೆ. ಆರ್ಥಿಕ ಇಲಾಖೆಯಲ್ಲಿ ಇದೆ. ಆದಷ್ಟು ಬೇಗ ಅದನ್ನು ಮಾಡುತ್ತೇವೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಮಾನ್ಯ ಸಭಾಪತಿಯವರೇ, ರೈತರು ಸೋತು ಹೋಗಿದ್ದಾರೆ. ಅವರಿಗೆ ಈ ಕ್ಲಿಪ್ತ ಸಮಯದಲ್ಲಿ ಬಂದರೆ ಮಾತ್ರ ರೈತರಿಗೆ ಒಂದು ಶಕ್ತಿ ತುಂಬಿದಂತೆ ಆಗುತ್ತದೆ. ಒಂದು ತಿಂಗಳಾದರೂ ಸಹ ರಾಜ್ಯದಿಂದ ಇನ್ನು ಹಣ ಏಕೆ ಬಂದಿಲ್ಲವೆಂದು ಕೇಳುವಂಥದ್ದು. ಒಟ್ಟು ಸೇರಿಸಿಕೊಂಡು ಕೊಡುವಂತಹ ಕೆಲಸ ಆಗಬೇಕು. ಇಲ್ಲವಾದರೆ ರೈತರು ಸೋಲುತ್ತಾರೆ. ಮತ್ತೆ ಪರ್ಯಾಯ ಬೆಳೆಗೆ ಯಾವ ರೀತಿಯ ಸಬ್ಸಿಡಿಯನ್ನು ಕೊಡುತ್ತಾರೆ. ಇದರಲ್ಲಿ ಕಾಫಿಯನ್ನು ತಂದಿದ್ದಾರೆ. ಅಲ್ಲಿ ಸುಮಾರು ಜನರು ತೆಂಗಿನ ಜೊತೆಗೆ ಕಾಫಿ

ಬೆಳೆಯನ್ನು ಸಹ ತಮ್ಮ ಸ್ವಂತದಲ್ಲಿ ಬೆಳೆಯುತ್ತಿದ್ದಾರೆ. ಅದಕ್ಕೆ ಸರ್ಕಾರ ಯಾವ ರೀತಿಯ ಶಕ್ತಿ ತುಂಬುವ ಕೆಲಸ ಮಾಡುತ್ತದೆ. ಅಲ್ಲಿ ಏನೂ ಕೆಲಸ ಆಗಿಲ್ಲ. ಅದಕ್ಕೋಸ್ಕರ ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕು.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ, ಕೇಂದ್ರ ಸರ್ಕಾರದ ಅನುದಾನ matching grant ಅನ್ನು ಆದಷ್ಟು ಬೇಗನೆ ಕೊಟ್ಟು, ರೈತರಿಗೆ ಮುಟ್ಟುವಂತಹ ಕೆಲಸ ಮಾಡುತ್ತೇವೆ.

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5(36)
ಮಾನ್ಯ ಸದಸ್ಯರ ಹೆಸರು : ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 04.03.2025
ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ನಗರ-ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಅನಧಿಕೃತ ಮನೆ ನಿವೇಶನಗಳ ಮಾಲೀಕರಿಗೆ ಒಂದು ಬಾರಿಗೆ ಅನ್ವಯಿಸಿ ಇ-ಖಾತೆಗೆ ಸಮಾನಂತರವಾದ ಬಿ-ಖಾತಾ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ. | ಕರ್ನಾಟಕ ಮನಿಸಿಪಲ್ ಕಾಯ್ದೆಗಳ ತಿದ್ದುಪಡಿಯಂತೆ ಕರ್ನಾಟಕ ಪೌರಸಭೆಗಳ (ತೆರಿಗೆ) ನಿಯಮಗಳು 1965 ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ಶೆಡ್ಯೂಲ್ 3 ರ ತೆರಿಗೆ ನಿಯಮಗಳಿಗೆ ತಿದ್ದುಪಡಿ ತರಲಾಗಿ (ಅನುಬಂಧ-1) ದಿನಾಂಕ:11-02-2025ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ ಪ್ರಸ್ತುತ ಅನಧಿಕೃತ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿ, ಇ-ಖಾತಾ ನೀಡಲು ಕ್ರಮವಹಿಸಲಾಗಿರುತ್ತದೆ. |
| ಆ. | ಸದರಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ರೂಪಿಸಿರುವ ನಿಯಮ, ಷರತ್ತು ಹಾಗೂ ಮಾನದಂಡಗಳೇನು: | ಇ-ಆಸ್ತಿ ತಂತ್ರಾಂಶದಲ್ಲಿ ಖಾತಾ ಸೃಜನೆ ಮಾಡಲು ಅನುಸರಿಸಬೇಕಾದ ಕ್ರಮಗಳು ಮತ್ತು ತೆಗೆದುಕೊಳ್ಳಬೇಕಾದ ದಾಖಲೆಗಳ ಕುರಿತು ವ್ಯವಸ್ಥಿತ ಕಾರ್ಯಾಚರಣೆ ವಿಧಾನವನ್ನು ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ:17-02-2025 ರಲ್ಲಿ ಹೊರಡಿಸಲಾಗಿದೆ (ಅನುಬಂಧ-2). |
| ಇ. | ಯಾವ ಕಾಲಮಿತಿಯೊಳಗೆ ನಗರ-ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಅನಧಿಕೃತ ಮನೆ ನಿವೇಶನಗಳ ಮಾಲೀಕರಿಗೆ ಒಂದು ಬಾರಿಗೆ ಅನ್ವಯಿಸಿ ಇ-ಖಾತೆಗೆ ಸಮಾನಂತರವಾದ ಬಿ-ಖಾತೆ ನೀಡುವ ಪ್ರಕ್ರಿಯೆ ಪ್ರಾರಂಭಿಸಲಾಗುವುದು: | ದಿನಾಂಕ:11-02-2025 ರಿಂದ ಅನಧಿಕೃತ ಸ್ವತ್ತುಗಳಿಗೆ ಖಾತಾ ನೀಡಲು ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. |

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನಾನು ಕಳೆದ ಮೂರು ಅಧಿವೇಶನಗಳಿಂದ ಸತತವಾಗಿ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಬಹಳ ಒಳ್ಳೆಯವರು. ಅವರ ಮಾತು ಕಡಿಮೆ. ಆದರೆ, ಅವರ ಬಳಿ ಎರಡು ರೆಡಿ ಉತ್ತರಗಳು ಮಾತ್ರ ಇರುತ್ತದೆ. ಒಂದು ಅಧಿಕಾರಿಗಳನ್ನು ಕರೆದು ಮಾತನಾಡುತ್ತೇವೆ. ಮತ್ತೊಂದು ತಮ್ಮನ್ನು ಕರೆದು ಸಭೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ, ಸಮಸ್ಯೆಗೆ ಪರಿಹಾರ ಮಾತ್ರ ಇಲ್ಲ. ಇದು ಇಡೀ ರಾಜ್ಯದ ಎಲ್ಲಾ ಪಟ್ಟಣ ಮತ್ತು ನಗರ ಪಂಚಾಯಿತಿಗಳಲ್ಲಿರುವ ಸಮಸ್ಯೆ. ಅದು ಇಲ್ಲವೆಂದು ಹೇಳುವುದಕ್ಕೆ ಸರ್ಕಾರ ಒಂದು ಸಣ್ಣ ಹೆಜ್ಜೆ ಮುಂದೆ ಹೋಗಿದೆ. ಆ ದೃಷ್ಟಿಯಲ್ಲಿ ಅವರನ್ನು ನಾನು ಅಭಿನಂದಿಸುತ್ತೇನೆ. (ಮುಂದು)

(18) 04.03.2025 11.50 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ಮುಂದು):-**

ನಗರ ಮತ್ತು ಪಟ್ಟಣ ನಿವಾಸಿಗಳಿಗೆ ಸಿಹಿ ಸುದ್ದಿ, ಅನಧಿಕೃತ ಮನೆಗಳಿಗೆ 'ಬಿ' ಖಾತೆ ಎಂದು ಬಹಳ ದೊಡ್ಡ ರೀತಿಯಲ್ಲಿ ಸರ್ಕಾರಕ್ಕೆ ಪ್ರಚಾರ ಸಿಕ್ಕಿರುತ್ತದೆ. ಆದರೆ, ಇದರಲ್ಲಿ ಏನಾಗಿದೆಯೆಂದರೆ, 'ಇ' ಖಾತೆಗೆ ಸಮಾನಾಂತರವಾಗಿ 'ಬಿ' ಖಾತೆ ಕೊಡಬೇಕೆಂದು ನಾವು ಕೇಳಿರುವಂಥದ್ದಾಗಿದೆ. ಈಗಾಗಲೇ ಭೂ ಪರಿವರ್ತನೆ ಆಗಿ, ಮನೆ ಕಟ್ಟಿಕೊಂಡಿರುತ್ತಾರೆ ಎಂಬ ದೃಷ್ಟಿಯಿಂದ ನಾವು ಕೇಳಿರುತ್ತೇವೆ. ಆದರೆ, ಇದರಲ್ಲಿ ಏನಾಗಿದೆಯೆಂದರೆ, ಲೆಕ್ಕಕ್ಕುಂಟು ಆಟಕ್ಕಿಲ್ಲ ಎನ್ನುವಂಥದ್ದಾಗಿದೆ. ಇದರಿಂದ ಸರ್ಕಾರಕ್ಕೆ ಒಂದಷ್ಟು ಟ್ಯಾಕ್ಸ್ ಬರುತ್ತದೆ ಎಂದು ಹೇಳುವುದನ್ನು ಬಿಟ್ಟರೆ, ಇದರಿಂದಾಗಿ ಹೊಸ ಮನೆ ಕಟ್ಟಿಕೊಳ್ಳುವುದಕ್ಕೆ ಲೈಸೆನ್ಸ್ ಆಗಲಿ, ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಆಗಲಿ ಅಥವಾ ಇನ್ನೊಬ್ಬರಿಗೆ ಮಾರಾಟ ಮಾಡುವುದಕ್ಕೆ ಆಗಲಿ, ಸರ್ಕಾರ ಕೊಟ್ಟಿರುವಂತಹ 'ಬಿ' ಖಾತೆಯಿಂದ ಏನೂ ಪ್ರಯೋಜನ ಆಗುವುದಿಲ್ಲ. ಮುಡಾ ವ್ಯವಸ್ಥೆಯ ಬಗ್ಗೆ ಮಾತನಾಡಿದರೆ, ಸುಪ್ರೀಂ ಕೋರ್ಟ್‌ನ ಒಂದು ತೀರ್ಪಿನ ಆಧಾರವಾಗಿ ಹೇಳುತ್ತಾರೆ. ಆದರೆ, ಸಮಸ್ಯೆಗೆ ಪರಿಹಾರದ ದೃಷ್ಟಿಯಿಂದ ಏನು ಮಾಡಬೇಕೆಂಬುದನ್ನು ಸರ್ಕಾರ ಯೋಚನೆ ಮಾಡಬೇಕಲ್ಲವೇ? ಸರ್ಕಾರಕ್ಕೆ ಆದಾಯದ ಉತ್ಪತ್ತಿಯ ದೃಷ್ಟಿಯಿಂದ ಹೇಳುವುದಾದರೆ, ಕ್ರಯಪತ್ರಗಳು ಆದರೆ ಸರ್ಕಾರಕ್ಕೆ ಸಾಕಷ್ಟು ಆದಾಯ ಬರುತ್ತದೆ. ಅಲ್ಲದೇ, ಪ್ರಸ್ತುತ ಸರ್ಕಾರ ಕಷ್ಟದ ಪರಿಸ್ಥಿತಿಯಲ್ಲಿದೆ. ಆ ದೃಷ್ಟಿಯಲ್ಲಾದರೂ ಇದಕ್ಕೊಂದು ಶೀಘ್ರವಾದ ಪರಿಹಾರವನ್ನು ಹುಡುಕಬೇಕು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಮುಡಾದಲ್ಲಿ ಕೊಟ್ಟಿದ್ದಾರೆ. ಗ್ರಾಮ ಪಂಚಾಯತಿಯಲ್ಲಿ, ಪಟ್ಟಣ ಪಂಚಾಯತಿ ಹಾಗೂ ನಗರ ಪಂಚಾಯತಿಯಲ್ಲಿಯೂ ಸಹ ಇದೇ ಸಮಸ್ಯೆ ಆಗಿರುತ್ತದೆ. ಆದರೆ, ಮುಡಾದಲ್ಲಿ ಯಾವುದೇ ಸಿಬ್ಬಂದಿಗಳೇ ಇರುವುದಿಲ್ಲ. ಒಂದು ವೇಳೆ ಅದು ಬಂದರೂ ಕೂಡ, ಅವರಿಗೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ದಯಮಾಡಿ ಮುಡಾದವರಿಗೆ ವಿನ್ಯಾಸ ನಕ್ಷೆ ಕೊಟ್ಟರೆ, ಕನಿಷ್ಟ ಪಕ್ಷ ಮನೆ ಕಟ್ಟುವುದಕ್ಕಾದರೂ ಒಂದು ಅವಕಾಶ ಆಗುತ್ತದೆ. ಈ ವಿಚಾರದಲ್ಲಿ ಸಮಸ್ಯೆಗೆ ಪರಿಹಾರ ಏನು ಮಾಡಬಹುದು ಎಂದು ಸರ್ಕಾರ ಚಿಂತನೆ ಮಾಡಬೇಕು. ಬದಲಾಗಿ, ಕೇವಲ 'ಬಿ' ಖಾತೆ ಕೊಟ್ಟು ಸುಮ್ಮನೆ ಕುಳಿತರೆ ಆಗುವುದಿಲ್ಲ. ಇದು ಊಟಕ್ಕೆ ಇಲ್ಲದ ಉಪ್ಪಿನಕಾಯಿ ರೀತಿ ಈ 'ಬಿ' ಖಾತೆ ಕೊಟ್ಟಿರುವುದಾಗಿದೆ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. 'ಬಿ' ಖಾತೆ ಕೊಡುವುದು ಸ್ಟೇಜ್ ಏನಿದೆ ಎಂದು ಕೇಳಿದ್ದಾರೆ. 'ಬಿ' ಖಾತೆ ಕೊಡುವುದನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಎರಡನೆಯ ಪ್ರಶ್ನೆಯಲ್ಲಿ, ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಏನು ಎಂದು ಕೇಳಿದ್ದಾರೆ. ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಟ್ಟಿದ್ದೇವೆ. ಮೂರನೆಯದಾಗಿ, ಇದಕ್ಕೆ ಟೈಮ್ ಲಿಮಿಟ್ ಏನು ಎಂದು ಕೇಳಿದ್ದಾರೆ. ಅದಕ್ಕೆ 3 ತಿಂಗಳು ಇದೆ ಎಂದು ಉತ್ತರ ನೀಡಿದ್ದೇವೆ. 'ಬಿ' ಖಾತೆ ನೀಡುವುದು ನಮ್ಮ ಸರ್ಕಾರದ ಒಂದು ಐತಿಹಾಸಿಕ ತೀರ್ಮಾನವಾಗಿದೆ. ಈ ವಿಚಾರದಲ್ಲಿ ಕಳೆದ 40 ವರ್ಷಗಳಿಂದ ಜನ

ಸಮಸ್ಯೆಯಲ್ಲಿದ್ದರು. ಇದರಿಂದಾಗಿ, ಸುಮಾರು ಜನ ಬಡವರು ತಮ್ಮ ಕಣ್ಣಲ್ಲಿ ನೀರು ಹಾಕುತ್ತಿದ್ದರು. ನಮ್ಮ ಸರ್ಕಾರ ಮತ್ತು ನಮ್ಮ ಮುಖ್ಯಮಂತ್ರಿಯವರಾದ ಶ್ರೀ ಸಿದ್ಧರಾಮಯ್ಯನವರು, ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್, ನಗರಾಭಿವೃದ್ಧಿ ಸಚಿವರಾದ ಶ್ರೀ ಸುರೇಶ್ ಬಿ.ಎಸ್. ರವರು, ಕಂದಾಯ ಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರನ್ನೊಳಗೊಂಡಂತೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಲಾಗಿದೆ. ಶ್ರೀ ಈಶ್ವರ್ ಖಂಡ್ರೆಯವರು ಸದರಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸದರಿ ಸಮಿತಿಯಲ್ಲಿ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡಿ, 'ಬಿ' ಖಾತೆಯನ್ನು ಈಗಾಗಲೇ ಇಶ್ಯೂ ಮಾಡಿದ್ದೇವೆ. ಸದರಿ 'ಬಿ' ಖಾತೆಯಿಂದ ಜನರಿಗೆ ಏನು ಉಪಯೋಗವಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಜನರ ಹತ್ತಿರ ಯಾವುದೇ ದಾಖಲಾತಿಗಳು ಇರಲಿಲ್ಲ ಮತ್ತು ಅವರು ತಮ್ಮ ಸ್ವತ್ತನ್ನು ಮಾರಾಟ ಮಾಡುವುದಕ್ಕೆ ಯಾವುದೇ ಅಧಿಕಾರ ಇರಲಿಲ್ಲ. ಈ ಹಿಂದೆ ನಾವು ಯಾವುದಾದರೂ ಓಣಿಯಲ್ಲಿ ಹೋದಾಗ, ಅಲ್ಲಿನ ಜನರು ನಮ್ಮನ್ನು, ನಮ್ಮಲ್ಲಿ ರಸ್ತೆ ಇಲ್ಲ, ಚರಂಡಿ ಇಲ್ಲ, ವಿದ್ಯುತ್ ದೀಪಗಳು ಇಲ್ಲ ಈ ರೀತಿಯ ಅನೇಕ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದರು. ಆದರೆ, ಆ ಬಗ್ಗೆ ಮುನಿಸಿಪಾಲಿಟಿ, ಸಿ.ಎಂ.ಸಿ. ಅಥವಾ ಟಿ.ಎಂ.ಸಿ. ನಲ್ಲಿ ಯಾವುದು ರೆಕಾರ್ಡ್ ಇರಲಿಲ್ಲ. ಅದರಿಂದಾಗಿ, ಅವರು ಟ್ಯಾಕ್ಸ್ ಪಾವತಿ ಮಾಡುವುದಕ್ಕೆ ಸಮಸ್ಯೆ ಇತ್ತು. ಆದರೆ, 'ಬಿ' ಖಾತೆಯಿಂದ ಅವರಿಗೆ ಟ್ಯಾಕ್ಸ್ ಕಟ್ಟುವುದಕ್ಕೆ ಅನುಕೂಲವಾಗುತ್ತದೆ. **(ಗೊಂದಲ)** ಇದು ನಮ್ಮ ಸರ್ಕಾರದ ಒಂದು ಐತಿಹಾಸಿಕ ತೀರ್ಮಾನವಾಗಿದೆ.

**ಸಭಾಪತಿಯವರು:-** ಇದರಲ್ಲಿ ತಮ್ಮ ಅಂತಿಮ ತೀರ್ಮಾನ ಏನು ಎಂಬುದನ್ನು ತಿಳಿಸಿ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಕಳೆದ 40 ವರ್ಷಗಳ ಅವಧಿಯಲ್ಲಿ ಅನೇಕ ಸರ್ಕಾರಗಳು ಅಧಿಕಾರಕ್ಕೆ ಬಂದಿದ್ದರೂ ಸಹ, ಈ ವಿಚಾರದಲ್ಲಿ ಯಾವುದೇ ತೀರ್ಮಾನ ಆಗಿರಲಿಲ್ಲ. ಆದರೆ, ನಮ್ಮ ಸರ್ಕಾರದಲ್ಲಿ ಒಂದು ಐತಿಹಾಸಿಕ ಹೆಜ್ಜೆ ಇಟ್ಟು ಒಂದು ತೀರ್ಮಾನ ಮಾಡಿದ್ದಾರೆ. ನನ್ನ ಪ್ರಕಾರವಾಗಿ ಇಡೀ ದೇಶದಲ್ಲಿ ಇದೊಂದು ಐತಿಹಾಸಿಕ ತೀರ್ಮಾನವಾಗಿದೆ. ಈಗ ಮಾನ್ಯ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. ರವರು ನಮಗೆ ಆತ್ಮೀಯರಾಗಿದ್ದು, ಈ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಅಧಿಕಾರಿಗಳ ಜೊತೆ ವೈಯಕ್ತಿಕವಾಗಿ ಚರ್ಚೆ ಮಾಡಿ, ಖಂಡಿತವಾಗಿ ಈ ವಿಚಾರದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲದೇ, ಈ ವಿಚಾರದಲ್ಲಿ ಎಲ್ಲರ ಸಮಸ್ಯೆಗೆ ಪರಿಹಾರವಾಗಬೇಕು. ಮೊದಲನೆ ಮಹಡಿ ಅಥವಾ ಎರಡನೆ ಮಹಡಿ ಕಟ್ಟುವುದಕ್ಕೆ ಅನುಮತಿ ಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. 'ಎ' ಖಾತೆ ಇರುವಂತಹ ನಿವೇಶನಗಳಲ್ಲಿ ಮನೆ ಕಟ್ಟುವುದಕ್ಕೆ ಈಗಾಗಲೇ ಅನುಮತಿ ಇದೆ. ಆದರೆ, 'ಬಿ' ಖಾತೆ ಇರುವಂತಹವರಿಗೆ ಈಗ ಅನುಮತಿ ನೀಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಏಕೆಂದರೆ, ಜನರ ಹತ್ತಿರ ತಮ್ಮ ಸ್ವತ್ತಿನ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಜೊತೆಗೆ, ಸಿ.ಎಂ.ಸಿ. ಅಥವಾ ಟಿ.ಎಂ.ಸಿ.ಯಲ್ಲಿಯೂ ಸಹ ಯಾವುದೇ ದಾಖಲೆ ಇರಲಿಲ್ಲ. ಆದರೆ, ಇದನ್ನು ಸರಿ ಮಾಡುವ ಪ್ರಕ್ರಿಯೆ ಈಗ ಪ್ರಾರಂಭವಾಗಿದೆ. ಆದಾಗ್ಯೂ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಪ್ರತಾಪ್ ಸಿಂಹ್ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಜನರ ಹತ್ತಿರ ಯಾವುದೇ ದಾಖಲೆಗಳು ಇರಲಿಲ್ಲ ಎಂದು ಹೇಳುವಂತಹ ಮಾನ್ಯ ಸಚಿವರ ಮಾಹಿತಿ ಸರಿಯಲ್ಲ.

**(ಗೊಂದಲ)**

**ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜನರ ಹತ್ತಿರ ಯಾವುದೇ ದಾಖಲೆಗಳು ಇರಲಿಲ್ಲ. ಸದರಿ ಜಮೀನುಗಳು ಮಾಲೀಕರ ಹೆಸರಿನಲ್ಲಿಯೇ ಇದ್ದವು.

**ಶ್ರೀ ಪ್ರತಾಪ್ ಸಿಂಹ್ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರವನ್ನು ಮನಸ್ಸಿನಲ್ಲಿಟ್ಟುಕೊಂಡು ಇಡೀ ರಾಜ್ಯವನ್ನು ತುಲನೆ ಮಾಡಬಾರದು. ಗ್ರಾಮದಲ್ಲಿ ರೆವಿನ್ಯೂ ಇಲಾಖೆಯವರೇ, ಭೂ ಪರಿವರ್ತನೆ ಮಾಡಿದಂತಹ ಜಾಗ ಅದು. ಅಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ಜಾಗ ಅದು. ಅಂತಹ ನಿವೇಶನಗಳಿಗೆ ನಾವು ಕೇಳುತ್ತಿದ್ದೇವೆ. ಅಂದರೆ, ಮೊದಲು ಮನೆ ಕಟ್ಟಿರುವುದಕ್ಕೆ ಸರ್ಕಾರದಿಂದ 'ಬಿ' ಖಾತೆ ಬದಲಾಗಿ ಫಾರಂ ನಂ.3 (ಎ) ಕೊಡಬೇಕು ಎನ್ನುವುದು ನಮ್ಮ ಒತ್ತಾಯ ಇರುವಂಥದ್ದಾಗಿದೆ. ಆದರೆ, ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ, ಆ ಜಾಗದಲ್ಲಿ ಭೂ ಪರಿವರ್ತನೆ ಮಾಡಿದಾಗ ಕಂದಾಯ ಇಲಾಖೆಯವರು ದಾಖಲಾತಿ ಇಲ್ಲದೇ, ಇತರೆ ಮಾರ್ಗಗಳು ಇಲ್ಲದೇ ಭೂ ಪರಿವರ್ತನೆ ಆದೇಶ ಕೊಡುತ್ತಾರೆಯೇ? ಅದು ಒಂದೇ ಸರ್ಕಾರದ ಇನ್ನೊಂದು ವಿಭಾಗ ಕೊಟ್ಟಿರುವಂಥದ್ದಾಗಿದೆ. ಇನ್ನೊಂದು ಸಮಾಧಾನಕರವಾದ ವಿಷಯ ಏನೆಂದರೆ, ಅಲ್ಲಿನ ನಿವಾಸಿಗಳಿಗೆ ಡೋರ್ ನಂಬರ್ ಸಿಕ್ಕಿದೆ ಮತ್ತು ಸರ್ಕಾರಕ್ಕೆ ಟ್ಯಾಕ್ಸ್ ಸಿಕ್ಕಿದೆ. ಅದನ್ನು ಬಿಟ್ಟರೆ, ಅದನ್ನು ಹಿಡಿದುಕೊಂಡು ಅಲ್ಲಿನ ನಿವಾಸಿಗಳು ಏನು ಮಾಡಬೇಕೆಂಬುದನ್ನು ಸರ್ಕಾರ ತಿಳಿಸಬೇಕು. ಏಕೆಂದರೆ, ಅದರಿಂದಾಗಿ ಆತ ಅಲ್ಲಿ ಮನೆ ಕಟ್ಟುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅದಕ್ಕೆ ಲೈಸೆನ್ಸ್ ಕೊಡುವುದಿಲ್ಲ; ಆ ಜಮೀನು ಬೇರೆಯವರಿಗೆ ಮಾರಾಟ ಮಾಡಲು ಕ್ರಯಪತ್ರ ಮಾಡುವುದಕ್ಕೆ ಆಗುವುದಿಲ್ಲ; ಬ್ಯಾಂಕಿನಿಂದ ಸಾಲ ಪಡೆಯುವುದಕ್ಕೆ ಆಗುವುದಿಲ್ಲ; ನಾನು ಅದಕ್ಕೋಸ್ಕರ ಮತ್ತೆ ಮತ್ತೆ ಹೇಳುತ್ತಿರುವುದೇನೆಂದರೆ, ಬೆಂಗಳೂರು ನಗರದಲ್ಲಿ ಆಗುವಂತಹ ಅವಾಂತರಗಳನ್ನು ಗ್ರಾಮೀಣ ಪ್ರದೇಶದ ಸಣ್ಣ ಸಣ್ಣ ಸಿಂಗಲ್ ಸೈಟ್‌ಗಳಿಗೆ ಅಥವಾ split ಸೈಟುಗಳಿಗೆ ಅನ್ವಯ ಮಾಡಬಾರದು. ಏಕೆಂದರೆ, ಅಲ್ಲಿನ ನಿವಾಸಿಗಳ ಹತ್ತಿರ ಎಲ್ಲಾ ದಾಖಲಾತಿಗಳು ಇವೆ. ಅವರಿಗೆ ಒಂದು ವಿಶೇಷವಾದಂತಹ ರಿಯಾಯಿತಿ ಕೊಟ್ಟು, ಫಾರಂ ನಂ.3 (ಎ) ಕೊಡಿ ಎಂದು ನಾವು ಹೇಳುತ್ತಿದ್ದೇವೆ.

**ಶ್ರೀ ಸುರೇಶ್ ಬಿ.ಎಸ್. (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನಾನೇ ಉತ್ತರ ನೀಡುತ್ತೇನೆ. ಮಾನ್ಯ ಸದಸ್ಯರು ಹೇಳಿರುವ ಪ್ರಕಾರ, 'ಎ' ಖಾತೆ ಮತ್ತು 'ಬಿ' ಖಾತೆ ಎಂಬ ಸ್ಕೀಮ್‌ಗಳು ಬೆಂಗಳೂರು ನಗರದಲ್ಲಿವೆ. ಬೆಂಗಳೂರು ನಗರದಲ್ಲಿ ಯಾವ ಯಾವ ಜಮೀನುಗಳು ಭೂ ಪರಿವರ್ತನೆ ಆಗಿತ್ತು, ಆ ಜಮೀನುಗಳಿಗೆ 'ಎ' ಖಾತೆಯನ್ನು ನೀಡುತ್ತಿದ್ದರು. ಉಳಿದ ಭಾಗದಲ್ಲಿಯೂ ಸಹ ಅದನ್ನೇ ಕೊಡುತ್ತಿದ್ದರು. ತದನಂತರ, ಬಹಳಷ್ಟು ಮಾನ್ಯ ಸದಸ್ಯರ ಒತ್ತಾಯದ ಮೇರೆಗೆ ಹಾಗೂ ಕಳೆದ ಅಧಿವೇಶನದಲ್ಲಿ ಮಾನ್ಯ ಡಿ.ಎಸ್. ಅರುಣ್‌ರವರು ಈ ಬಗ್ಗೆ ಪ್ರಶ್ನೆ ಕೇಳಿದ್ದರು ಮತ್ತು ವಿಧಾನಸಭೆಯಲ್ಲಿಯೂ ಸಹ ಬಹಳ ಲೀಡರ್‌ಗಳ ಒತ್ತಾಯ ಇತ್ತು.

ಯಾವುದೇ ಅಧಿಕೃತ ಖಾತೆಗಳಿಲ್ಲದೇ, ಜಮೀನು ಬೇರೆಯವರಿಗೆ ವರ್ಗಾವಣೆಯಾಗುತ್ತಿರಲಿಲ್ಲ. ಆದರೆ, ನಮ್ಮ ಸರ್ಕಾರ 'ಬಿ' ಖಾತೆ ಕೊಟ್ಟ ನಂತರ, ಜಮೀನುಗಳು ಬೇರೆಯವರಿಗೆ ವರ್ಗಾವಣೆಯಾಗುತ್ತದೆ. ಅಂದರೆ, ಜನರು ತಮ್ಮ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ನಾವು ಅವಕಾಶ ಕಲ್ಪಿಸಿದ್ದೇವೆ. ಜೊತೆಗೆ, ಈ ರಾಜ್ಯದಲ್ಲಿ ಸುಮಾರು ಐವತ್ತೈದು ಲಕ್ಷ ಮನೆಗಳಿಗೆ ಯಾವುದೇ ಖಾತೆ ಇರಲಿಲ್ಲ. ಇದರಿಂದಾಗಿ, ಸರ್ಕಾರಕ್ಕೆ ಯಾವುದೇ ರೀತಿಯ ತೆರಿಗೆ ಬರುತ್ತಿರಲಿಲ್ಲ. ಉದಾಹರಣೆಗೆ, ನನ್ನ ಮನೆ ಇದ್ದರೆ, ಅದಕ್ಕೆ ಯಾವುದೇ ದಾಖಲಾತಿಗಳು ಇರಲಿಲ್ಲ. ಬದಲಾಗಿ, ನಮ್ಮ ತಾತ ಅಥವಾ ಮುತ್ತಾತ ಕೊಟ್ಟಿದ್ದಂತಹ ಯಾವುದೋ ಒಂದು ಪೇಪರ್ ಇತ್ತೇ ವಿನಃ, ಆ ಜಮೀನಿಗೆ ಸಂಬಂಧಿಸಿದಂತೆ, ಯಾವುದೇ ಖಾತೆ ಇರಲಿಲ್ಲ ಅಥವಾ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ದಾಖಲಾಗಿರಲಿಲ್ಲ. ಆದರೆ, ಇದು ನಮ್ಮ ಸರ್ಕಾರದ ಐತಿಹಾಸಿಕ ತೀರ್ಮಾನವಾಗಿದೆ. ನಮ್ಮ ಸರ್ಕಾರ ಮಾಡಿರುವಂಥದ್ದಾಗಿದೆ. ಇಡೀ ರಾಜ್ಯದಲ್ಲಿರುವಂತಹ ಸುಮಾರು ಐವತ್ತೈದು ಲಕ್ಷ ಕುಟುಂಬಗಳಿಗೆ, ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಅನುಕೂಲವಾಗಲಿ ಎಂದು ಮಾಡಿರುವಂತಹ ತೀರ್ಮಾನ ಆಗಿದೆ. ಇದರಿಂದ, ಸರ್ಕಾರಕ್ಕೂ ಕೂಡ ತೆರಿಗೆ ಬರುತ್ತಿರಲಿಲ್ಲ. ಅಲ್ಲಿ, ನೀರು, ರಸ್ತೆ, ವಿದ್ಯುತ್ ದೀಪಗಳು ಈ ರೀತಿಯ ಎಲ್ಲಾ ಸೌಕರ್ಯಗಳನ್ನು ಕೊಟ್ಟರು ಸಹ, ಸರ್ಕಾರಕ್ಕೆ ಆ ಮನೆಗಳಿಂದ ಒಂದು ರೂಪಾಯಿ ತೆರಿಗೆ ಬರುತ್ತಿರಲಿಲ್ಲ. ಆದರೆ, ಮಾನವೀಯತೆಯ ದೃಷ್ಟಿಯಿಂದ ನಮ್ಮ ಕಾಂಗ್ರೆಸ್ ಸರ್ಕಾರ ಜನರಿಗೆ ಖಾತೆ ಕೊಡುವಂಥದ್ದನ್ನು ಮಾಡಿದೆ.

**ಶ್ರೀ ಪ್ರತಾಪ್ ಸಿಂಹ್ ನಾಯಕ್ ಕೆ.:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವ ವಿಚಾರಕ್ಕೆ ನಾನು ಆಗಲೇ ಮಾತನಾಡುತ್ತಾ, ಈ ವಿಚಾರದಲ್ಲಿ ಒಂದು ಸಣ್ಣ ಹೆಜ್ಜೆ ಮುಂದೆ ಇಟ್ಟಿದೆ. ಅದನ್ನು ನಾನು ಅಭಿನಂದಿಸುತ್ತೇನೆ. ಆದರೆ, ಅದನ್ನು ಇಟ್ಟುಕೊಂಡು ನಾವು ಏನು ಮಾಡಬೇಕೆಂದು ನಾನು ಕೇಳುತ್ತಿದ್ದೇನೆ? ಹಾಗಾಗಿ, 'ಬಿ' ಖಾತೆಯನ್ನು 'ಇ' ಖಾತೆ ಮಾಡುವುದಕ್ಕೆ ಏನು ಮಾಡುತ್ತೀರಿ ಎಂಬುದನ್ನು ನಾನು ಕೇಳುತ್ತಿದ್ದೇನೆ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಇದು ಸಣ್ಣ ಹೆಜ್ಜೆಯಲ್ಲ.

**ಶ್ರೀಮತಿ ಬಲ್ಕೀಸ್ ಬಾನು:–** ಮಾನ್ಯ ಸಭಾಪತಿಯವರೇ, ಇದೊಂದು ಐತಿಹಾಸಿಕವಾದಂತಹ ತೀರ್ಮಾನವಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂಬುದನ್ನು ಕೇಳಿ. ಅದಕ್ಕೆ ನ್ಯಾಯ ಒದಗಿಸಿಕೊಡುವುದಕ್ಕೆ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ತಿಳಿಸಿ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದ ಈ ತೀರ್ಮಾನದಿಂದ ಎಲ್ಲಾ ಜನರು ಬಹಳ ಖುಷಿಯಾಗಿದ್ದಾರೆ ಮತ್ತು ಇದರಿಂದಾಗಿ ಸಾರ್ವಜನಿಕರಿಗೆ ಒಳ್ಳೆಯದಾಗಿದೆ. ಹಾಗಾಗಿ, ಜನರು ನಮ್ಮ ಸರ್ಕಾರದ ತೀರ್ಮಾನವನ್ನು ಒಪ್ಪಿಕೊಂಡಿದ್ದಾರೆ.

**ಪ್ರಶ್ನೆ ಸಂಖ್ಯೆ: 02**

**ಸಭಾಪತಿಯವರು:-** ಮಾನ್ಯ ಎನ್. ರವಿಕುಮಾರ್‌ರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶ ಕೇಳಿರುತ್ತಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ 3ನೇ ಬಾರಿಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದು, ಮೂರು ಬಾರಿಯೂ ಕೂಡ ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಇದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ರಾಜ್ಯದಲ್ಲಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ಎಂದು ಕೇಳಿರುತ್ತೇನೆ. ಕಳೆದ ತಿಂಗಳು 21ನೇ ತಾರೀಖು ಈ ಪ್ರಶ್ನೆಯನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಡಲಾಗಿರುತ್ತದೆ. ಹಾಗಾಗಿ, ನನ್ನ ಪ್ರಶ್ನೆಗೆ ಏತಕ್ಕೆ ಉತ್ತರ ನೀಡುವುದಕ್ಕೆ ಆಗುತ್ತಿಲ್ಲ? ಕಳೆದ ಮೂರು ಬಾರಿ ಕೂಡ ಮಾನ್ಯ ಸಚಿವರಿಗೆ ನಾನು ಅದೇ ಪ್ರಶ್ನೆಯನ್ನು ಕೇಳಿರುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಮೂರು ಬಾರಿ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ತಮ್ಮ ಉತ್ತರ ಏನು ಹೇಳಿ?

(ಮುಂದು)

(019) 04.03.2025 12.00 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಹೀಂಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಂಪೂರ್ಣವಾಗಿ ವಿವರವನ್ನು ಕೇಳಿದ್ದಾರೆ. ಹಾಗಾಗಿ,...

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗಾಗಲೇ ಮಾನ್ಯ ರವಿಕುಮಾರ್‌ರವರು 3 ಸಲ ಪ್ರಶ್ನೆಯನ್ನು ಕೇಳಿದ್ದು, ತಾವು ಉತ್ತರ ಒದಗಿಸಿಲ್ಲವೆಂದರೆ ತಪ್ಪಾಗುತ್ತದೆ. ಹಾಗಾಗಿ, ಮುಂದಿನ ಮಂಗಳವಾರ ಉತ್ತರ ಒದಗಿಸಬೇಕು.

**ಶ್ರೀ ರಹೀಂಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಆಗಲಿ, ಉತ್ತರವನ್ನು ಒದಗಿಸುತ್ತೇನೆ.

## ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 44
2. ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04.03.2025
4. ಉತ್ತರಿಸುವವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಆದೇಶ ಸಂಖ್ಯೆ:ಐಡಿಡಿ67 ಐಟಿಎಸ್ 2022 ಬೆಂಗಳೂರು, ದಿನಾಂಕ:7ನೇ ನವೆಂಬರ್ 2023 ರಂತೆ ಜಾರಿಗೆ ತರಲಾಗಿರುವ ರಾಜ್ಯ ನಗರ ಅನಿಲ ವಿತರಣೆ (ಸಿಜಿಡಿ) ನೀತಿಯಂತೆ, ಅಳವಡಿಕೆ ಶುಲ್ಕವನ್ನು ಪ್ರತಿ ಮೀಟರಿಗೆ ರೂ. 1ಕ್ಕೆ ಇಳಿಸಿರುವುದರಿಂದ ನೇರ ಆರ್ಥಿಕ ಪರಿಣಾಮವಾಗಿ ಸರ್ಕಾರದ ಬೊಕ್ಕಸಕ್ಕೆ ಹಾನಿ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ (PNGRB) ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಿರುವ 18 ಭೌಗೋಳಿಕ ಪ್ರದೇಶಗಳಲ್ಲಿ (GA) ನಗರ ಅನಿಲ ವಿತರಣೆ ಯೋಜನೆಗಳನ್ನು ಅನುಷ್ಠಾನಗೊಳಿಸಲು 8 ನಗರ ಅನಿಲ ವಿತರಣೆ ಸಂಸ್ಥೆಗಳನ್ನು ಅಧಿಕೃತವಾಗಿ ನೇಮಿಸಿದೆ. ಇದರ ಅಡಿಯಲ್ಲಿ, ನಗರ ಅನಿಲ ವಿತರಣೆ ಸಂಸ್ಥೆಗಳು, ಕೊಳವೆ ನೈಸರ್ಗಿಕ ಅನಿಲ ವಿತರಣೆಯನ್ನು (ಪಿ.ಎನ್.ಜಿ) ಗೃಹಬಳಕೆಗೆ, ವಾಣಿಜ್ಯ ಮತ್ತು ಕೈಗಾರಿಕಾ ವಿಭಾಗಗಳಿಗೆ ಪೂರೈಸಲು ಮತ್ತು ಕಂಪ್ರೆಸ್ಡ್ ನೈಸರ್ಗಿಕ ಅನಿಲ (ಸಿ.ಎನ್.ಜಿ) ಮೂಲಕ ವಾಹನಗಳಿಗೆ ಇಂಧನವನ್ನು ಪೂರೈಸಲು ನಗರ ಅನಿಲ ವಿತರಣೆ ಜಾಲವನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಹೊಂದಿವೆ. CNG ಸ್ಟೇಷನ್ ಗಳ ಮೂಲಕ ವಾಹನಗಳಿಗೆ ಇಂಧನವಾಗಿ ಪೂರೈಸಲಾಗುತ್ತಿದೆ.<br><br>ಭಾರತ ಸರ್ಕಾರವು ಸಿಜಿಡಿ ಯೋಜನೆಗಳನ್ನು ಸಾರ್ವಜನಿಕ ಉಪಯುಕ್ತತೆ ಯೋಜನೆಗಳೆಂದು ಪರಿಗಣಿಸಿದೆ. ಈ ಯೋಜನೆಗಳು ಗೃಹಬಳಕೆಗಾಗಿ ಹಾಗೂ ವಾಹನ ಇಂಧನವಾಗಿ ಶುದ್ಧ ಮತ್ತು ಹಸಿರು ಇಂಧನ ತರುವುದಲ್ಲದೆ, ಇದು ರಾಜ್ಯದ ಸುಸ್ಥಿರ ಕೈಗಾರಿಕ ಬೆಳವಣಿಗೆಗೆ ಒಂದು ಸಾಧನವಾಗಿದೆ.<br><br>ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಕಾರ್ಯದರ್ಶಿ, ಅವರ ಪತ್ರ ದಿ.08.07.2021ರಲ್ಲಿ ಪ್ರಾಮಾಣೀರಣ ಸೇರಿದಂತೆ ಸಿಜಿಡಿ ವಲಯದ ತ್ವರಿತ ಅಭಿವೃದ್ಧಿಗಾಗಿ ಏಕರೂಪದ ಚೌಕಟ್ಟನ್ನು ರಚಿಸಲು ಅನುಕೂಲವಾಗುವಂತೆ ಸಿಜಿಡಿ ನೀತಿಯನ್ನು ರಚಿಸಲು ವಿನಂತಿಸಿರುತ್ತಾರೆ. ಇದರಲ್ಲಿ ರಸ್ತೆ ಪುನರ್ ಸ್ಥಾಪನೆ/ಅನುಮತಿ ಶುಲ್ಕವು ಸೇರಿರುತ್ತದೆ.<br>ಇದಲ್ಲದೆ, ಭಾರತದಲ್ಲಿ ಕೆಲವು ರಾಜ್ಯಗಳು ಅಳವಡಿಸಿಕೊಂಡಿರುವ Best Practicesಗಳನ್ನು ಉಲ್ಲೇಖಿಸಿದ್ದು, ಇದರಲ್ಲಿ ಉತ್ತರ ಪ್ರದೇಶ ರಾಜ್ಯದಲ್ಲಿ ಪ್ರತಿ ಕಿಮೀಗೆ ರೂ.1000/- ಗಳ ಅನುಮತಿ ಶುಲ್ಕವನ್ನು ನಿರ್ದಿಷ್ಟವಾಗಿ ಪಟ್ಟಿ ಮಾಡಲಾಗಿರುತ್ತದೆ. **(ಪತ್ರದ ಪ್ರತಿ ಅನುಬಂಧ -1 ರಲ್ಲಿ ಲಗತ್ತಿಸಿದೆ.)** |

| | | |
|---|---|---|
| | | ಕಾರ್ಯದರ್ಶಿ, PNGRB ಅವರ ಪತ್ರ ದಿನಾಂಕ: 15.09.2021ರ ಮೂಲಕ ಕರ್ನಾಟಕ ರಾಜ್ಯದಲ್ಲಿ CGD ನೀತಿಯನ್ನು ಸೂಕ್ತವಾಗಿ ಅಳವಡಿಸಿಕೊಳ್ಳುವುದನ್ನು ಪರಿಗಣಿಸಲು ವಿನಂತಿಸಿ, ಇದು CGDಯ ತ್ವರಿತ ಅನುಷ್ಠಾನಕ್ಕಾಗಿ ಅನುಮತಿಗಳು / ಅನುಮೋದನೆಗಳನ್ನು ಪಡೆಯುವಲ್ಲಿ ತಪ್ಪಿಸಬಹುದಾದ ವಿಳಂಬವನ್ನು ತಡೆಯುತ್ತದೆ ಎಂದು ತಿಳಿಸಿರುತ್ತಾರೆ.<br><br>ಇದಲ್ಲದೆ, ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ವಸತಿ ಮತ್ತು ನಗರ ವ್ಯವಹಾರಗಳ ಸಚಿವರು, ಅವರ ಪತ್ರ ದಿನಾಂಕ: 02.10.2021 ರನ್ವಯ ರಸ್ತೆ ಮರು ಸ್ಥಾಪನೆ/ಅನುಮತಿ ಶುಲ್ಕಗಳ ಪ್ರಮಾಣೀಕರಣವನ್ನು ಒಳಗೊಂಡಂತೆ CGD ನೀತಿಯನ್ನು ಬೆಂಬಲಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರವನ್ನು ವಿನಂತಿಸಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಸಮೃದ್ಧ, ಹಸಿರು ಮತ್ತು ಸ್ವಚ್ಛ ಪರಿಸರವನ್ನು ತರಲು ನೈಸರ್ಗಿಕ ಅನಿಲದ ಬಳಕೆಯನ್ನು ಹೆಚ್ಚಿಸಲು ಮತ್ತು ಅನಿಲ ಆಧಾರಿತ ಆರ್ಥಿಕತೆಯ ಅಭಿವೃದ್ಧಿಗೆ ರಾಜ್ಯ ಸರ್ಕಾರದ ನೆರವನ್ನು ಕೋರಿರುತ್ತಾರೆ.<br><br>ಉತ್ತರ ಪ್ರದೇಶ ಹಾಗೂ ಬೇರೆ ರಾಜ್ಯಗಳಲ್ಲಿರುವ ಇಂತಹ ಪ್ರಗತಿಪರ ಉಪಕ್ರಮಗಳನ್ನು ಗಮನಿಸಿ. ರಾಜ್ಯದ ಸಿಜಿಡಿ ಮೂಲಭೂತ ಸೌಕರ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಹಾಗೂ "ರಾಜ್ಯದ ನಗರ ಅನಿಲ ಪೈಪ್ ಪೈನ್ ಮೂಲಸೌಕರ್ಯ ವಿತರಣಾ ಜಾಲದ ಅಭಿವೃದ್ಧಿ ನೀತಿ " ಯನ್ನು ರಚಿಸಿದೆ.<br><br>ರಾಜ್ಯದಲ್ಲಿ ನೈಸರ್ಗಿಕ ಅನಿಲದ ಬಳಕೆಯನ್ನು ಉತ್ತೇಜಿಸುವುದು ಮತ್ತು ರಾಜ್ಯದಾದ್ಯಂತ ಅನಿಲ ಪೈಪ್ ಲೈನ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವುದು ನೀತಿಯ ಮುಖ್ಯ ಉದ್ದೇಶವಾಗಿದೆ. ನೀತಿಯ ಮೂಲಕ ವಿವಿಧ ಜಿಲ್ಲೆಗಳಲ್ಲಿ ಅನುಮತಿ ಶುಲ್ಕಗಳ ಅಸಮಾನತೆಯನ್ನು ತೆಗೆದುಹಾಕಲು ಮತ್ತು ರಾಜ್ಯಾದ್ಯಂತ ಏಕರೂಪದ ಅನುಮತಿ ಶುಲ್ಕಗಳು ಅನ್ವಯವಾಗುವಂತೆ ಮಾಡಲಾಗಿದೆ.<br><br>ನಗರ ಅನಿಲ ವಿತರಣಾ ಸಂಸ್ಥೆಗಳು ತಮ್ಮ ಭೌಗೋಳಿಕ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಿಜಿಡಿ ಹಾಗೂ ಅನುಮತಿ ಶುಲ್ಕಗಳಲ್ಲಿನ ಕಡಿತದ ಲಾಭವನ್ನು ಸಾರ್ವಜನಿಕರಿಗೆ ವರ್ಗಾಯಿಸುವ ಷರತ್ತನ್ನು ಈ ನೀತಿಯ ಅಧ್ಯಾಯ 6ರ ಷರತ್ತು (xii) ನಲ್ಲಿ ಸೇರಿಸಲಾಗಿದ್ದು, ಅದರಂತೆ ಸಿಜಿಡಿ ನೀತಿಯನ್ನು ದಿನಾಂಕ:07.11.2023ರ ಅಧಿಸೂಚನೆ ರನ್ವಯ ಹೊರಡಿಸಲಾಗಿರುತ್ತದೆ. ಸದರಿ ನೀತಿಯನ್ನು ಹೊರಡಿಸಿದನಂತರ, ಅನಿಲ ಪೈಪ್ ಅಳವಡಿಕೆ ಮತ್ತು ಮೇಲ್ವಿಚಾರಣಾ ಶುಲ್ಕಗಳನ್ನು ಮೀಟರ್‌ಗೆ ರೂ.1/-ಕ್ಕೆ ಇಳಿಸುವ ಅನುಗುಣವಾದ ಪ್ರಯೋಜನವನ್ನು CGD ಸಂಸ್ಥೆಗಳು ತಮ್ಮ ಭೌಗೋಳಿಕ ಪ್ರದೇಶಗಳಲ್ಲಿ PNG |

| | | |
|---|---|---|
| | | ಮತ್ತು CNG ಶುಲ್ಕಗಳಲ್ಲಿ ಸಾರ್ವಜನಿಕರಿಗೆ ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳಲು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ (MoPNG) ಮತ್ತು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ (PNGRB) ಎರಡಕ್ಕೂ ದಿನಾಂಕ: 08.11.2023 ರ ಪತ್ರದ ಮೂಲಕ ವಿನಂತಿಸಲಾಗಿರುತ್ತದೆ. ನೀತಿಯ ಈ ಉಪಕ್ರಮಗಳಿಂದ ಬರುವ ಲಾಭವನ್ನು ಯಾವುದೇ CGD ಸಂಸ್ಥೆಗಳು ತಮ್ಮಲ್ಲಿ ಉಳಿಸಿಕೊಳ್ಳದೇ ಸಾರ್ವಜನಿಕರಿಗೆ ವರ್ಗಾಯಿಸಲು ಇದು ಅನುವು ಮಾಡಿಕೊಡುತ್ತದೆ.<br><br>ನೀತಿಯ ಮೂಲಕ ಸರ್ಕಾರವು ಆರ್ಥಿಕ, ಅನುಕೂಲಕರ ಮತ್ತು ಪರಿಸರಸ್ನೇಹಿ ಇಂಧನವನ್ನು ಅಂದರೆ ರಾಜ್ಯದಾದ್ಯಂತ ಪ್ರತಿಯೊಂದು ಮನೆಗೂ PNG ತರಲು ಹಾಗೂ ಅನಿಲ ಪೈಪ್ ಲೈನ್ ಮೂಲಸೌಕರ್ಯವನ್ನು ಹೆಚ್ಚಿಸಲು ಪ್ರಯತ್ನಿಸಿದೆ. ಇದು ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿ ಮತ್ತು ಉದ್ಯೋಗವನ್ನು ಉತ್ತೇಜಿಸುತ್ತದೆ. ನೀತಿಯ ಮೂಲಕ ರಾಜ್ಯದಲ್ಲಿ ಹೆಚ್ಚುತ್ತಿರುವ ವಾಹನ ಮಾಲಿನ್ಯದ ಮೇಲೆ ನಿಯಂತ್ರಣ ಹಾಕಲು ಸರ್ಕಾರವು ಪರಿಸರಸ್ನೇಹಿ ಇಂಧನ CNG ಯನ್ನು ಪರ್ಯಾಯ ಇಂಧನವಾಗಿ ಲಭ್ಯವಾಗುವಂತೆ ಮಾಡಲು ಪ್ರಯತ್ನಿಸಿದೆ.<br><br>ಸರ್ಕಾರದ ಉಪಕ್ರಮಗಳನ್ನು ಕೇವಲ ಅನಿಲ ಪೈಪ್ ಹಾಕಲು ಅನುಮತಿ ಶುಲ್ಕದ ಆದಾಯದ ದೃಷ್ಟಿಯಿಂದ ಅಳೆಯಲಾಗುವುದಿಲ್ಲ. ಆದರೆ CGD ಮೂಲಸೌಕರ್ಯದಿಂದ ಉದ್ಭವಿಸಬಹುದಾದ ಸಾಮಾಜಿಕ ಪ್ರಯೋಜನಗಳು ಮತ್ತು ಪರಿಸರ ಪ್ರಯೋಜನಗಳ ಪರಿಭಾಷೆಯಲ್ಲಿ ಅಳೆಯಬೇಕಾಗಿರುತ್ತದೆ. ಹಾಗಾಗಿ, ಆರ್ಥಿಕ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ | ಅನಿಲ ವಿತರಣೆ ನೀತಿ ಜಾರಿಗೆ ತರುವ ಪೂರ್ವದಲ್ಲಿ ಇದರಿಂದ ಉಂಟಾಗಬಹುದಾದ ಆರ್ಥಿಕ ಪರಿಣಾಮಗಳ ವಿಶ್ಲೇಷಣೆ ಮಾಡಲಾಗಿದೆಯೇ? | ಆರ್ಥಿಕ ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿ ನೀತಿಯನ್ನು ಸಿದ್ಧಪಡಿಸಲಾಗಿದೆ. |
| ಇ | ಹಾಗಿದ್ದಲ್ಲಿ ಸದರಿ ನೀತಿಯ ಆರ್ಥಿಕ ಪರಿಣಾಮಗಳೇನು; ಈ ನಿಟ್ಟಿನಲ್ಲಿ ಆರ್ಥಿಕ ಇಲಾಖೆಯು ವ್ಯಕ್ತಪಡಿಸಿರುವ ಅಭಿಪ್ರಾಯವೇನು; (ಮಾಹಿತಿಯನ್ನು ಒದಗಿಸುವುದು) | ಆರ್ಥಿಕ ಇಲಾಖೆಯ ಸಹಮತಿ ಹಾಗೂ ಸಚಿವ ಸಂಪುಟದ ಅನುಮೋದನೆಯ ಮೇರೆಗೆ ರಾಜ್ಯ ನಗರ ಅನಿಲ ವಿತರಣೆ (ಸಿಜಿಡಿ) ನೀತಿಯನ್ನು ಹೊರಡಿಸಲಾಗಿರುತ್ತದೆ. |
| ಈ | ರಾಜ್ಯ ನಗರ ಅನಿಲ ವಿತರಣೆ (ಸಿಜಿಡಿ) ನೀತಿ ಜಾರಿಗೆ ಬಂದನಂತರ ಯಾವ ಯಾವ ಅನಿಲ ವಿತರಣೆ ಸಂಸ್ಥೆಗಳಿಗೆ , ನಗರ ಸ್ಥಳೀಯ ಸಂಸ್ಥೆಗಳಿಗೆ, ಲೋಕೋಪಯೋಗಿ | ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ (PNGRB) ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಿರುವ 18 ಭೌಗೋಳಿಕ ಪ್ರದೇಶಗಳಲ್ಲಿ (GA) ನಗರ ಅನಿಲ ವಿತರಣೆ ಯೋಜನೆಗಳನ್ನು ಅನುಷ್ಠಾನಗೊಳಿಸಲು 8 ನಗರ ಅನಿಲ ವಿತರಣೆ ಸಂಸ್ಥೆಗಳನ್ನು ಅಧಿಕೃತವಾಗಿ ನೇಮಿಸಲಾಗಿದೆ. ಈ 8 CGD ಸಂಸ್ಥೆಗಳಿಂದ |

| | | |
|---|---|---|
| | ಇಲಾಖೆಯಿಂದ ಎಷ್ಟು ಕಿ.,ಮೀ., ಉದ್ದದವರೆಗೆ ಅನಿಲ ಕೊಳವೆ ಅಳವಡಿಸಲು ಅನುಮತಿ ನೀಡಲಾಗಿದೆ; | ಸ್ವೀಕೃತವಾಗಿರುವ ಅನುಮತಿ ಶುಲ್ಕಗಳ ಹಾಗೂ ತೆರಿಗೆ ಆದಾಯದ ವಿವರಗಳನ್ನು **ಅನುಬಂಧ - 2 ರಲ್ಲಿ** ಒದಗಿಸಿದೆ. |
| ಉ | ಸದರಿ ಅನುಮತಿಗಳಿಗೆ ಪಡೆದಿರುವ ಶುಲ್ಕ ಎಷ್ಟು ನೀತಿ ಜಾರಿಗೆ ಬರುವ ಪೂರ್ವದಲ್ಲಿ ಜಾರಿಯಲ್ಲಿದ್ದ ಶುಲ್ಕದಂತೆ ಅನುಮತಿ ನೀಡಿದ್ದರೆ ವಸೂಲಾಗಬಹುದಾಗಿದ್ದ ಶುಲ್ಕ ಎಷ್ಟು (ಮಾಹಿತಿ ನೀಡುವುದು) ಹಾಗೂ ನಷ್ಟಎಷ್ಟು? (ಮಾಹಿತಿ ಒದಗಿಸುವುದು) | ಮೇಲೆ ವಿವರಿಸಿರುವಂತೆ, ಸರ್ಕಾರದ ಉಪಕ್ರಮಗಳನ್ನು ಕೇವಲ ಅನಿಲ ಪೈಪ್ ಲೈನ್ ಅಳವಡಿಕೆಯ ಅನುಮತಿ ಶುಲ್ಕದ ಆದಾಯದ ದೃಷ್ಟಿಯಿಂದ ಅಳೆಯಲಾಗುವುದಿಲ್ಲ. ಆದರೆ CGD ಮೂಲಸೌಕರ್ಯದಿಂದ ಮುಂದೆ ಉದ್ಭವಿಸಬಹುದಾದ ಸಾಮಾಜಿಕ ಪ್ರಯೋಜನಗಳು ಮತ್ತು ಪರಿಸರ ಪ್ರಯೋಜನಗಳ ಪರಿಭಾಷೆಯಲ್ಲಿ ಅಳೆಯಬೇಕಾಗಿರುತ್ತದೆ. |

तरुण कपूर
सचिव
Tarun Kapoor
Secretary

सत्यमेव जयते

भारत सरकार
पेट्रोलियम एवं प्राकृतिक गैस मंत्रालय
शास्त्री भवन, नई दिल्ली - 110 001
Government of India
Ministry of Petroleum and Natural Gas
Shastri Bhawan, New Delhi - 110 001
Tel. : 011-23383501, 011-23383562
Fax : 011-23070723
E-mail : sec.png@nic.in

DO No.L-16016/17/2020-GP-II
July 08, 2021

Dear Sir,

It is my pleasure to inform you that the Government of India is taking steps to make available cleaner fuel to the masses and industrial/ commercial establishments by ushering in a Gas based Economy. Since May 2014, the City Gas Distribution (CGD) networks have expanded from 34 Geographical Areas to 232 GAs after completion of 9th and 10th CGD bidding rounds covering about 53% of the country's area and 70% of country's population. Expanding gas availability to public at large will facilitate in meeting our CoP 21 commitments for reduction in carbon emissions. The Government is further planning to expand the reach of CGD through 11th round of bidding of geographical areas on a pan India basis.

2. To bring synergy among various stakeholders of Natural gas sector, a National Conclave on "Emerging Opportunities in Natural Gas sector" was organised in New Delhi on 23.01.2020. During the national conclave, a Draft CGD policy was released with a request to all the states to adopt the same for uniformity in regulatory and procedural aspects for expeditious expansion of CGD network.

3. During these years of expansion of CGD across the Country, the sector has seen various best practices in various aspects adopted by different states. A note on the same is attached herewith (Annex-1). These pertain mostly to standardisation and rationalising of road cut and restoration charges, considering CGD development as public utility for the purpose of giving time bound permission for various activities, for the same, etc. In order to facilitate creation of uniform framework for the expeditious development of CGD sector, it requested to consider following:
Adoption of Draft CGD policy as per local conditions:

i. Phase wise conversion of State Transport Corporation fleet to CNG in time bound manner – the State government may consider conversion of 10% of the State Transport Bus fleet to CNG in FY 2021-22 and 25% in the next FY.
ii. Issuance of suitable instruction to Real Estate Regulatory Authorities for mandatory provision for PNG facilities in the projects for allowing registration.
iii. Standardization of Road Restoration/permission charges in line with the best practices in the sector.
iv. Fixing a time frame for permission
v. Regular Review at of progress of CGD networks district level (by DMs) on lines of review of centre sector projects.

4. This Ministry has also nominated specific CGD entities for coordinating with the state Governments (list enclosed. Annex-2)). I request you to personally look in to the matters and instruct the concerned for way forward at the earliest. CGD entities in your region have already been instructed to contact the concerned authorities.

With regards,

Yours sincerely

Encl: As above

[Tarun Kapoor]

Shri P Ravi Kumar
Chief Secretary
Government of Karnataka
M S Building, Ambedkar Veedhi
Bengaluru- 560001.

Annexure 1

**Best Practices adopted by various State Government:**

(1) UP- Government vide order dated 30.05.2018 has provided guidelines for Bank Guarantee and restoration charges for laying of CGD infrastructure in the State. Permission charges are Rs 1000 per KM and bank guarantee is 5000/- per pit.

(2) AP- State Government vide order dated 22.01.2021 has standardised Road restoration charges across the State and also provided Technical specification of Restoration and other General guidelines.

(3) Gujarat- Ahmedabad Municipal Corporation have hired 4-5 PMC (Project management Consultants) as a third party to validate the restoration work done by utility company. After their validation, municipal corporation issue NOC to utility company and return deposited amount to utility company.

(4) Haryana- Government vide order dated 04.09.20 has issued policy for establishment of Retail Outlets CNG/PNG stations wherein provision for single window portal has been given and timelines for various permissions have been provided. The guideline provides for deemed approval in case the time line is breached.

**Policy initiatives by Central and State Governments**

Central Government has taken following policy initiatives for expeditious development of CGD Sector:

- Allocation of Domestic Gas to CGD sector under no cut category.
- "Public Utility Status" granted to CGD network
- Ministry of Defence issued guidelines for use of PNG in its residential areas/unit lines
- Advisory Issues by Ministry of Housing and Urban Affairs for:
  - Modification in Building Regulations/bylaws to incorporate PNG as utility at design stage;
  - Standardisation of Road Restoration (RR) permission charges and time lines for granting permissions by Municipal Authorities for laying CGD networks, and
  - Earmarking land plots for CNG station at town planning stage in existing and proposed Master Plan / Zonal Plans of the city.
- Directions to CPWD and NBCC to have the provisions of PNG in all Government/Public sector Residential complexes.
- DIPP notified amended Rule 2018 to ease out process to set up Compressed Natural Gas (CNG) dispensing facilities at existing Retail outlets(ROs).

Annexure 2

List of State Level CGD coordinator

| SN | State | State Level Coordinator |
|---|---|---|
| 1 | Andhra Pradesh | Consortium of AG&P LNG Marketing Pvt Ltd. |
| 2 | Assam | Assam Gas Company Limited |
| 3 | Bihar | Indian Oil Corporation Limited |
| 4 | Chandigarh | IndianOil-Adani Gas Private Limited |
| 5 | Dadra & Nagar Haveli | Gujarat Gas Limited |
| 6 | Daman and Diu | IndianOil-Adani Gas Private Limited |
| 7 | Delhi | Indraprastha Gas Limited |
| 8 | Goa | Goa Natural Gas Private Limited |
| 9 | Gujarat | Gujarat Gas Limited |
| 10 | Haryana | Indraprastha Gas Limited |
| 11 | Himachal Pradesh | Bharat Gas Resources Limited |
| 12 | Jharkhand | GAIL (India) Limited |
| 13 | Karnataka | Consortium of AG&P LNG Marketing Pvt. Ltd |
| 14 | Kerala | IndianOil-Adani Gas Private Limited |
| 15 | Madhya Pradesh | Indian Oil Corporation Limited |
| 16 | Maharashtra | Mahanagar Gas Limited |
| 17 | Odisha | Bharat Gas Resources Limited |
| 18 | Puducherry | Torrent Gas Private Limited |
| 19 | Punjab | Gujarat Gas Limited |
| 20 | Rajasthan | Torrent Gas Private Limited |
| 21 | Tamil Nadu | Torrent Gas Private Limited |
| 22 | Telangana | Bhagyanagar Gas Limited |
| 23 | Uttar Pradesh | Green Gas Limited |
| 24 | Uttarakhand | GAIL Gas Limited |
| 25 | West Bengal | Hindustan Petroleum Corporation Limited |

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಒಂದು ಖುಷಿ ವಿಚಾರವೇನೆಂದರೆ, ಉತ್ತರದ ಮೊದಲ ಪುಟದ ಮೇಲ್ಭಾಗದಲ್ಲಿ 'ಕರ್ನಾಟಕದ ವಿಧಾನ ಪರಿಷತ್ತು' ಎಂಬುದರ ಬದಲಾಗಿ 'ಕರ್ನಾಟಕ ವಿಧಾನಸಭೆ' ಹಾಗೂ ಅದರ ಕೆಳಗೆ ಡಿ.ಎಸ್. ಅರುಣ್ ಎಂದು ನಮೂದಾಗಿರುವುದನ್ನು ನೋಡಿದರೆ ನಾವು ಸಹ ಮುಂದೆ ಒಂದು ದಿನ ವಿಧಾನಸಭೆಗೆ ಹೋಗಬೇಕೆಂಬ ಇಚ್ಛೆಯನ್ನಿಟ್ಟುಕೊಂಡಿದ್ದು, ಅದು ಇವತ್ತೇ ಸೇರಿಸಿದಂತಾಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಡಿ.ಎಸ್.ಅರುಣ್‌ರವರು ತಾವು ವಿಧಾನಸಭೆಗೆ ಹೋಗಿ ಬಿಡಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ವಿಧಾನಸಭೆಗೆ ಹೋಗಲು ಸಾಧ್ಯವಾಗದ ಪ್ರಯುಕ್ತ ವಿಧಾನ ಪರಿಷತ್ತಿಗೆ ಬಂದಿರುವುದು. ಮಾನ್ಯ ಸಚಿವರು ಸುದೀರ್ಘವಾಗಿ ಉತ್ತರವನ್ನು ನೀಡಿದ್ದು, ನಾನು ಕೇಳಿರುವ ಪ್ರಶ್ನೆಗೆ ಪಾಲಿಸಿ ಬಗ್ಗೆ ಉತ್ತರ ಒದಗಿಸಲಾಗಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ (ಪಿ.ಎನ್.ಜಿ.ಆರ್.ಬಿ.) ಪಾಲಿಸಿ ಬಗ್ಗೆ ವಿವರವನ್ನು ಒದಗಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆಯೇನೆಂದರೆ, ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್‌ಗಾಗಿ ಪ್ರತಿ ಮೀಟರ್‌ಗೆ ಎಷ್ಟು ರೂಪಾಯಿ ಕಲೆಕ್ಷನ್ ಮಾಡಲಾಗುತ್ತದೆ. ಅಂದರೆ, ಪರವಾನಗಿ ಶುಲ್ಕ ಹಾಗೂ ಮೇಲ್ವಿಚಾರಣೆ ಶುಲ್ಕ. ಎರಡೂ ಒಳಗೊಂಡಂತೆ, PWD (Public Works Department) road use ಮಾಡುತ್ತೇವೆಯೇ ಅಥವಾ Urban local Bodies ಗಳಿಂದ ಉಪಯೋಗಿಸಲಾಗುತ್ತದೆಯೇ? ಯಾವಾಗ ಒಂದು ಮೀಟರ್‌ಗೆ ಇಷ್ಟು ಶುಲ್ಕ ಭರಿಸಿ ಎಲ್ಲಾ ಇಲಾಖೆಯಿಂದ ಪಡೆದುಕೊಳ್ಳಲಾಗುತ್ತದೆ? ಸಾಮಾನ್ಯವಾಗಿ ರೂ.1,857 + ಮೇಲ್ವಿಚಾರಣೆ ಶುಲ್ಕವಾಗಿ ರೂ.100 ಸಂಗ್ರಹಿಸಲಾಗುತ್ತದೆ. ರೂ.1,957 ರಂತೆ ಮೀಟರ್‌ಗೆ ತಗಲುವುದಾದರೆ ಒಂದು ಕಿಲೋ ಮೀಟರ್‌ಗೆ ರೂ.19,57,000 ಗಳಾಗುತ್ತವೆ. ಆದರೆ, ಮಾನ್ಯ ಸಚಿವರ ಉತ್ತರದಲ್ಲಿ ಕಿಲೋ ಮೀಟರ್‌ಗೆ ರೂ.1,000 ಎಂದು ತಿಳಿಸಲಾಗಿದೆ. ಸಾಮಾನ್ಯವಾಗಿ ಒಂದು ಕಿಲೋ ಮೀಟರ್‌ಗೆ ರೂ.19,57,000 ಗಳಾಗುತ್ತವೆ. ಆದರೆ, ಸರ್ಕಾರ ಒಂದು ಕಿಲೋ ಮೀಟರ್‌ಗೆ ಕೇವಲ ರೂ.1,000 ಸಂಗ್ರಹಿಸುತ್ತಿದೆ. ಹಾಗಾಗಿ, ನನ್ನ ಮೊದಲ ಪ್ರಶ್ನೆಯೇನೆಂದರೆ, ಇದಕ್ಕೆ ತಗಲುವ ಒಟ್ಟಾರೆ ಹೊರೆಯನ್ನು ಯಾರು ಭರಿಸುತ್ತಾರೆ ಎಂಬುದ್ದಾಗಿದೆ. ಎರಡನೆಯದಾಗಿ, ಇದರೊಳಗೆ ನಗರಾಭಿವೃದ್ಧಿ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆ ಮತ್ತು ವಿವಿಧ ಇಲಾಖೆಗಳು ಸೇರ್ಪಡೆಗೊಳ್ಳುತ್ತವೆ. ಆರ್ಥಿಕ ಇಲಾಖೆಯಿಂದ ಆಗುವಂಥ ನಷ್ಟವಾಗುವುದೇನಿದೆ,... ಕೇಂದ್ರ ಸರ್ಕಾರದ ಯೋಜನೆಯಿಂದಾಗಿ ಒಟ್ಟು ಆದಾಯದಲ್ಲಿ ನಷ್ಟವಾಗುತ್ತದೆ ಎಂದು ಹೇಳುತ್ತಾರೆ. ಹಾಗೆಯೇ ಉತ್ತರ ಪ್ರದೇಶ ರಾಜ್ಯದಲ್ಲಿ ಪ್ರತಿ ಕಿಲೋ ಮೀಟರ್‌ಗೆ ರೂ.1,000/- ಗಳ ಅನುಮತಿ ಶುಲ್ಕವನ್ನು ನಿರ್ದಿಷ್ಟವಾಗಿ ಪಟ್ಟಿ ಮಾಡಿ ಅನುಬಂಧ-1 ರಲ್ಲಿ ತಿಳಿಸಿದ್ದು, ಆ ರಾಜ್ಯವನ್ನು ಬಿಟ್ಟು ಬೇರೆ ರಾಜ್ಯಕ್ಕೆ ಸಂಬಂಧಿಸಿದಂತೆ ಹೇಳಬಹುದಾಗಿತ್ತಲ್ಲವೇ? ಹಾಗಾಗಿ, ಇದರಲ್ಲಿ ನಮ್ಮ ನಗರ ಸಂಸ್ಥೆಗಳಿಗೆ ಬರುವಂಥ ಆದಾಯದಲ್ಲಿ ಆಗುವಂಥ ದೊಡ್ಡ ನಷ್ಟವೇನಿದೆ ಅದನ್ನು ಹೇಗೆ ಭರಿಸಲಾಗುತ್ತದೆ. ಏಕೆಂದರೆ, ನನಗೆ ಬಂದಿರುವ ಮಾಹಿತಿ ಪ್ರಕಾರ ಒಟ್ಟು

ಮೀಟರ್‌ಗೆ ಸುಮಾರು ರೂ.5,100 ಕೋಟಿಗಳಷ್ಟು ನಷ್ಟವಾಗುತ್ತದೆ. ಇದನ್ನು ಹೇಗೆ ಭರಿಸಲಾಗುತ್ತದೆ ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಸಿ.ಜಿ.ಡಿ. ಪಾಲಿಸಿ ಏನಿದೆ, ಇದನ್ನು ನಾನು ಉತ್ತರದ 'Annexure-1' ನಲ್ಲಿ ಕೊಟ್ಟಿದ್ದೇನೆ. The relevant portion of the letter dated 08th July 2021 from Sri. Tarun Kapoor, Secretary to Government of India, Ministry of Petroleum and Natural Gas, to the Chief Secretary of Karnataka in 'Annexure-1' reads as follows;

*"....CGD across the Country, the sector has seen various best practices in various aspects adopted by different States. ...In order to facilitate creation of uniform framework for the expeditious development of CGD sector, it requested to consider following;...*

*(iii) Standardization of Road Restoration/permission charges in line with the best practices in the Sector.....*

*....This ministry has also nominated specific CGD entities for coordinating with the State Governments (list enclosed Annex-2). I request you to personally look into the matters and instruct the concerned for way forward at the earliest. CGD entities in your region have already been instructed to contact the concerned authorities."*

Secondly, the relevant portion of the letter dated 15th September 2021, from the Secretary, Petroleum and Natural Gas Regulatory Board to the Chief Secretary, Karnataka reads as follows;

*"Support to City Gas Distribution (CGD) entities in the development of CGD network....*

*....You are requested to kindly give necessary instructions to the concerned authorities for considering the requests from the authorized CGD entities on*

*priority and prevent avoidable delays in obtaining clearances/permissions for expeditions implementation of the CGD networks in the State. This would go a long way in promoting use of natural gas, which is clean, environment friendly and cheaper fuel. This would also enable to achieve the country's objective of shifting to a gas-based ecoomy and reducing pollution levels."*

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ಉತ್ತರವನ್ನು ಕಳುಹಿಸಿಕೊಡಲಾಗಿದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಉತ್ತರ ಏನೆಂಬುದನ್ನು ಸುದೀರ್ಘವಾಗಿ ತಿಳಿಸಬೇಕಾಗುತ್ತದೆ. What prompted this ಎಂಬುದನ್ನು ಹೇಳಬೇಕಾಗುತ್ತದೆ. ಮೂರನೆಯದಾಗಿ, ದಿನಾಂಕ: 02 ಅಕ್ಟೋಬರ್ 2021 ರಂದು ಪೆಟ್ರೋಲಿಯಂ ಸಚಿವರಾಗಿದ್ದ ಶ್ರೀ ಹರ್ದೀಪ್ ಸಿಂಗ್ ಪುರಿರವರು ಸಹ ಅಂದಿನ ದಿವಸ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಸವರಾಜ ಬೊಮ್ಮಾಯಿರವರಿಗೆ ಕೆಳಕಂಡಂತೆ ಪತ್ರ ಬರೆದಿರುತ್ತಾರೆ.

*"….As the CGD infrastructure is already in Bengaluru, the support of Government of Karnataka is crucial in reaping the benefits of eco-friendly fuel for economic development of the State….. …Standardization of Road Restoration/permission charges in line with the best practices in the Sector…..*

*….I seek your intervention in increasing utilization of natural gas and development of Gas Based economy to bring in prosperous , greener and clean environment in the State of Karnataka."*

ಏತಕ್ಕಾಗಿ ಈ ಪಾಲಿಸಿ ತರಬೇಕಾಗಿತ್ತು ಎಂಬುದನ್ನು ತಿಳಿಸಿದ್ದಾರೆ. ಅದರಂತೆ ನಾವು ಸಿ.ಜಿ.ಡಿ. ಪಾಲಿಸಿಯನ್ನು ತರುತ್ತೇವೆ. ಈ ಪಾಲಿಸಿಯನ್ನು ತಂದಿದ್ದು, ಮಾನ್ಯ ಡಿ.ಎಸ್.ಅರುಣ್‌ರವರು ಬೇರೆ ಬೇರೆ ರಾಜ್ಯಗಳಲ್ಲಿ ಪ್ರತಿ ಕಿಲೋ ಮೀಟರ್ ಶುಲ್ಕ ಎಷ್ಟಿದೆ ಎಂಬುದರ ಜೊತೆಗೆ ಉತ್ತರ ಪ್ರದೇಶದ ಕುರಿತು ಉದಾಹರಣೆ ಕೊಟ್ಟರು. ಉತ್ತರ ಪ್ರದೇಶದಲ್ಲಿ ಮೀಟರ್ ಶುಲ್ಕ ರೂ.1/- ರೂಪಾಯಿ ಇದ್ದರೆ, ತೆಲಂಗಾಣ, ಆಂಧ್ರ ಪ್ರದೇಶ ಹಾಗೂ ಕೇರಳಾ ರಾಜ್ಯಗಳಲ್ಲಿ ಮೀಟರ್ ಶುಲ್ಕ '0' ಇದೆ. ಒಂದು ರೂಪಾಯಿ ಸಹ ಇಲ್ಲ. ಹಾಗಾಗಿ, ಮಾನ್ಯ ಸದಸ್ಯರೇ, Best Practices ಎಂದು ಹೇಳುತಾರೆ…. ಉತ್ತರ ಪ್ರದೇಶದ ರಾಜ್ಯದಲ್ಲಿ ಪ್ರತಿ ಕಿಲೋ ಮೀಟರ್‌ಗೆ ರೂ.1,000/- ಗಳು ಅನುಮತಿ ಶುಲ್ಕ. ರಾಜಸ್ಥಾನದಲ್ಲಿ ಪ್ರತಿ ಕಿಲೋ ಮೀಟರ್‌ಗೆ ರೂ.1,000/- ಅನುಮತಿ ಶುಲ್ಕ ಇದೆ. ಆಂಧ್ರ ಪ್ರದೇಶ, ತೆಲಂಗಾಣ,

ಕೇರಳಾ ರಾಜ್ಯಗಳಲ್ಲಿ ಪ್ರತಿ ಕಿಲೋ ಮೀಟರ್ ಶುಲ್ಕ '೦' ಇದೆ. ತದನಂತರ ಸಿ.ಎನ್.ಜಿ. ಇಂಧನವನ್ನು ಮನೆಗಳಿಗೆ, ಗ್ಯಾಸ್ ಸ್ಟೇಷನ್‌ಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರದ ನಿರ್ಣಯವೇನಿತ್ತು, ಅದರ ಪ್ರಕಾರ ಪಾಲಿಸಿ ತರಲಾಗಿದೆ. ಅಷ್ಟೇ ಅಲ್ಲದೇ end users ಗೆ ಹೋಗಬೇಕು. ರೂ.1/- ಮೀಟರ್ ಶುಲ್ಕ ಮಾಡಿದ್ದು, ಅದರ ನಷ್ಟದ ಬಗ್ಗೆ ಮಾನ್ಯ ಡಿ.ಎಸ್.ಅರುಣ್‌ರವರು ಕೇಳಿದ್ದು, it is not a loss. It has to be passed on to the end users. ಈ ಉದ್ದೇಶದಿಂದಾಗಿ ಹಿಂದೆಯೇ GAIL (Gas Authority of India Limited), Bharat Petroleum Corporation Limited ಗಳನ್ನು ಒಳಗೊಂಡಂತೆ 8 entities ಗೆ ಪತ್ರ ಬರೆಯಲಾಗುತ್ತದೆ. ನಾವು ಅವರಿಂದ undertakings ಅನ್ನು ಸಹ ತೆಗೆದುಕೊಂಡಿದ್ದು, "Accordingly, GAIL Gas Limited hereby, undertakes that, the corresponding benefit of reduction in the overall project cost, due to the reduction in permission charges would be extended to public with respect to PNG (Piped Natural Gas) and CNG (Compressed Natural Gas) price in Bengaluru (Urban and Rural) Districts and Dakshina Kannada District." ಮಾನ್ಯ ಸದಸ್ಯರು ನಷ್ಟ ಎಷ್ಟಾಯಿತೆಂದು ಕೇಳಿದ್ದರು, ಅದಕ್ಕಾಗಿ end users ಗೆ ಕೊಡಬೇಕೆಂದು ಮಾಡಬೇಕೆಂದು ಷರತ್ತು ವಿಧಿಸಿದ್ದು, ಅದರ ಪ್ರಕಾರ undertaking ಅನ್ನು ಸಹ ಕೊಡುತ್ತಿದ್ದೇವೆ. ಈ ಸಂಬಂಧ ಆರ್ಥಿಕ ಇಲಾಖೆ ಸಹ concurrence ನೀಡಿದೆ. ಲೋಕೋಪಯೋಗಿ ಇಲಾಖೆ ಹಾಗೂ ಇನ್ನಿತರೆ ಇಲಾಖೆಯಲ್ಲಿ ಏನೇನು ಆಗಿದೆ ಎಂಬುದರ ವಿವರವನ್ನು ಮಾನ್ಯ ಸದಸ್ಯರು ಕೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿ ತಿಳಿಸಲಾಗಿದೆ. After CGD policy, PNGR Board ನಿಂದ ಅನುಮತಿ ನೀಡಿದ್ದನ್ನು, ಸುಮಾರು 76.36 ಕಿ. ಮೀಟರ್ ಹಾಗೂ ಸ್ಥಳೀಯ ಸಂಸ್ಥೆಗಳಿಂದ 870 ಕಿ. ಮೀಟರ್ ಕೊಡಲಾಗಿದೆ. ಕಟ್ಟಕಡೆಯದಾಗಿ,...

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಒದಗಿಸಿದ್ದು ಸಾಕು ಕುಳಿತುಕೊಳ್ಳಿ. ಇದು ಪ್ರಶ್ನೋತ್ತರ ಅವಧಿ ಆಗಿದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, 2015ನೇ ಸಾಲಿನಲ್ಲಿ 8 entities ಬಂದಿತ್ತು. ಬೆಂಗಳೂರಿನಲ್ಲಿ GAIL Gas Limited ಪ್ರಾರಂಭವಾಗಿತ್ತು. ಒಟ್ಟು targets ರೂ.66,25,277 ಆಗಿತ್ತು. ಸಿ.ಎನ್.ಜಿ. ಸ್ಟೇಷನ್ 1,022 ಆಗಿತ್ತು. The achievements from 2015 to 2023, ಪಿ.ಎನ್.ಜಿ ಸ್ಟೇಷನ್.

4.7 ಲಕ್ಷ ಆಗಿತ್ತು. ಸಿ.ಎನ್.ಜಿ. ಸ್ಟೇಷನ್ 320 ಆಗಿತ್ತು. ಈ ಒಂದು ವರ್ಷದ ಪಾಲಿಸಿ ಬಂದ ಮೇಲೆ PNG (Piped Natural Gas) station ನಲ್ಲಿ ಸುಮಾರು 1.02 ಲಕ್ಷವಾಗಿದೆ.

(ಮುಂದು)

(20) 04.03.2025/12.10/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ. ಪಾಟೀಲ (ಮುಂದು):-**

ಆಮೇಲೆ CNG (Compressed Natural Gas) stations ನಲ್ಲಿ ಸುಮಾರು 154 ಆಗಿದೆ. ಇಲ್ಲಿಯವರೆಗೂ cumulative achievements ಅನ್ನು ನೋಡಿದಾಗ, PNG stations 5.10 ಲಕ್ಷಗಳು ಹಾಗೂ CNG stations ಸುಮಾರು 470. ಈ permission ಅನ್ನು ನಾವು ಏನು ಮಾಡಿದ್ದೇವೆಯೆಲ್ಲಾ, ಅದನ್ನು ಸ್ವಲ್ಪ Urban Local Bodies ಗಳಿಗೆ ಸಹಾಯ ಮಾಡಿದರೆ, we can achieve it in the next five years. ಎಲ್ಲವೂ ಕೂಡ 55-65 ಲಕ್ಷ ಇದ್ದಾರೆ. ಸ್ವಲ್ಪ local bodies support ಮಾಡಿದರೆ, ಎಲ್ಲವನ್ನು ಪೂರ್ಣಗೊಳಿಸುವುದಕ್ಕೆ ಆಗುತ್ತದೆ.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ...

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಕೊನೆಯ ಪ್ರಶ್ನೆಯಾಗಿದೆ. Urban Development Department, Finance Department and PWD (Public Works Department) ನಿಂದ concurrence ತೆಗೆದುಕೊಂಡು ಮಾಡಿದಿದ್ದರೆ, ಯಾವುದೇ ತೊಂದರೆ ಇರುತ್ತಿರಲಿಲ್ಲ. ನನ್ನ ಬಳಿರುವ ಮಾಹಿತಿಯ ಪ್ರಕಾರ ಆರ್ಥಿಕ ಇಲಾಖೆಯವರು ಇದನ್ನು ಒಪ್ಪಿಲ್ಲ. ಲೋಕೋಪಯೋಗಿ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯಿಂದಲೂ concurrence ತೆಗೆದುಕೊಂಡಿಲ್ಲ. ಮಾನ್ಯ ಸಚಿವರೇ, ಅದರ ಬಗ್ಗೆ ಎಲ್ಲಿಯೂ ಉತ್ತರದಲ್ಲಿ ಕೊಟ್ಟಿಲ್ಲ. ನೀವು ಆಗಾಗ ಅದಾನಿಯವರ ಬಗ್ಗೆ ಮಾತನಾಡುವಾಗ, ನೀವು ಅದಾನಿಯವರಿಗೆ ಈ ತರಹ support ಮಾಡಿದಿರಿ. ಆ ತರಹ support ಮಾಡಿದಿರಿ ಎಂದು ಬೈಯುತ್ತಿರುತ್ತೀರಾ. ಮಾನ್ಯ ಸಚಿವರೇ, ನಮ್ಮ ಸರ್ಕಾರವಿದ್ದಾಗ, ಇದನ್ನು ಎರಡು ಬಾರಿ reject ಮಾಡಿದೆ. ನಮ್ಮ ಪಕ್ಷದ ಸರ್ಕಾರವಿದ್ದಾಗ, ಎರಡು ಬಾರಿ ಸಚಿವ ಸಂಪುಟದಲ್ಲಿ ಇದರ ಬಗ್ಗೆ ಚರ್ಚೆಯಾದಾಗ, ಇದು ಆಗುವುದಿಲ್ಲ. ಇದು ನಮಗೆ ಹೊರೆಯಾಗುತ್ತದೆ. ಇದು ಬೇರೆ ರೀತಿಯಲ್ಲಿ compensate ಮಾಡಿದರೆ ಮಾತ್ರ ಮಾಡುತ್ತೇವೆಂದು ಸಚಿವ ಸಂಪುಟದಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವಂತಹದ್ದು. ಆದರೆ ನೀವು 2023ರಲ್ಲಿ

ಸಚಿವ ಸಂಪುಟದ ಅನುಮೋದನೆ ತೆಗೆದುಕೊಂಡು ಇದನ್ನು ಮಾಡಿರುವುದನ್ನು ನೋಡಿದರೆ, ಇದರೊಳಗೆ ಯಾವ ಗ್ಯಾಸ್ ಕಂಪನಿಗೆ ಇಷ್ಟೊಂದು ಬೆಂಬಲ ಕೊಡುತ್ತಿದ್ದೀರಾ ಎನ್ನುವುದೊಂದು.

**ಶ್ರೀ ಎಂ.ಬಿ. ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ತಾವೇ ನನಗೆ ಉತ್ತರ ಕೊಡಬೇಕು. ಇದು GAIL (Gas Authority of India Ltd.) ಯಾರದು?

**ಶ್ರೀ ಡಿ.ಎಸ್. ಅರುಣ್:-** ಕೇಂದ್ರ ಸರ್ಕಾರದ್ದು.

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, BPCL (Bharat Petroleum Corporation Ltd) ಯಾರದು? ೩ CGD (City Gas Distribution) entities ಟೆಂಡರ್ ಮೇಲೆ ತುಂಬಿಸಲಾಗಿದೆ. ನೀವು ಸುಮ್ಮನೆ ಅದಾನಿ ಹಾಗೂ ಅಂಬಾನಿ ಎಂದು ಅಪಾದನೆ ಮಾಡಿದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಸಚಿವರೇ, ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸದಸ್ಯರೇ, ತಾವು ತಪ್ಪು ಮಾಹಿತಿ ಹೇಳಬೇಡಿ. ಮಾನ್ಯ ಸಭಾಪತಿಯವರೇ, already ಇದು ಆರ್ಥಿಕ ಇಲಾಖೆಯವರದು. ಸಚಿವ ಸಂಪುಟದಲ್ಲಿ ಆರ್ಥಿಕ ಇಲಾಖೆಯವರು ಪ್ರಸ್ತಾಪವನ್ನು ಪರಿಶೀಲಿಸಿದೆ. ಆರ್ಥಿಕ ಇಲಾಖೆಯವರು ಪ್ರಸ್ತಾಪಿಸಿದ Draft Karnataka City Gas Distribution Policy ಗೆ ಆರ್ಥಿಕ ಇಲಾಖೆಯು ಸಮ್ಮತಿಸಿದೆ. ಮಾನ್ಯ ಸದಸ್ಯರೇ, ತಾವು ಸುಮ್ಮನೆ ಎದ್ದು ಏತಕ್ಕೆ ಮಾತನಾಡುತ್ತೀರಾ? ತಮಗೆ ಇಷ್ಟೆಲ್ಲಾ ಹೇಳಿದ್ದೇನೆ. What prompted ಅಂದರೆ, ಕೇಂದ್ರ ಸರ್ಕಾರದ Chairman, GAIL ರವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮತ್ತು ನನ್ನ ಹತ್ತಿರ ಬಂದು, ಬೇರೆ ಬೇರೆ ರಾಜ್ಯಗಳಲ್ಲಿ ಈ ತರಹ ಇದೆ. The Government should facilitate to make this possible, ಅಂತಾ ಅವರು ಹೇಳಿ, ಇವತ್ತಿನ ದಿವಸ ಜನರಿಗೆ ಮತ್ತು ಪರಿಸರಕ್ಕೂ ಅನುಕೂಲವಾಗುತ್ತದೆ ಎಂದು ಅವರು ಬಂದು ನಮಗೆಲ್ಲಾ ಮನವಿ ಮಾಡಿದ ಮೇಲೆ... ನಾನು ಇರಬಹುದು ಮತ್ತೊಬ್ಬರು ಇರಬಹುದು.

**ಶ್ರೀ ಡಿ.ಎಸ್. ಅರುಣ್:-** ಅವರು revenue ಕೊಡುತ್ತಾರೆ. ತಾವು ಅದನ್ನು ಏಕೆ ಅಷ್ಟೊಂದು ಒಂದು ಮೀಟರ್‌ಗೆ ಒಂದು ರೂಪಾಯಿ ಬೇರೆ ಬೇರೆ ರಾಜ್ಯಗಳನ್ನು ...

**ಸಭಾಪತಿಯವರು:-** ಮಾನ್ಯ ಎಂ. ನಾಗರಾಜುರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಚಿವರೇ, ತಾವು ಅದನ್ನೇ ಮಾಡಿ. ಬೇರೆ ಬೇರೆ ರಾಜ್ಯಗಳನ್ನು ಏತಕ್ಕೆ ...

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸದಸ್ಯರೇ, ತಾವು ಈ ತರಹ ಮಾಡುವುದು ಸರಿಯಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಸಾಕು ಮಾಡಿ. ಮಾನ್ಯ ಎಂ. ನಾಗರಾಜುರವರೇ, ತಮ್ಮ ಪ್ರಶ್ನೆಯನ್ನು ಕೇಳಿ. ಮಾನ್ಯ ಹೇಮಲತಾ ನಾಯಕ್‌ರವರ ಪ್ರಶ್ನೆಯನ್ನು ನಾಳೆ zero-hour ನಲ್ಲಿ ನೀಡಲಾಗುವುದು

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 81
ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 04-03-2025
ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಮತ್ತು ಕೇಂದ್ರ ಸಹಭಾಗಿತ್ವದಿಂದ ಅನುಷ್ಠಾನಗೊಳಿಸುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. | ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಅವ್ಯವಹಾರಗಳ ಕುರಿತು ನಿರ್ದಿಷ್ಟ ದೂರುಗಳು ದಾಖಲಾಗಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿ /ಸಿಬ್ಬಂದಿಗಳು ಯರ್ಾರು; ಅವರ ವಿರುದ್ಧ ಸರ್ಕಾರ ಯಾವ ರೀತಿಯ ಕಾನೂನಾತ್ಮಕ ಕ್ರಮ ಕೈಗೊಂಡಿದೆ; | ಅನ್ವಯಿಸುವುದಿಲ್ಲ. |
| ಇ) | ಆರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿರುವ ಮೊತ್ತವೆಷ್ಟು ಆ ಪೈಕಿ ರಾಜ್ಯದ ಹಾಗೂ ಕೇಂದ್ರ ಸರ್ಕಾರದ ಮೊತ್ತವೆಷ್ಟು; (ವರ್ಷವಾರು ಪ್ರತ್ಯೇಕ ಮಾಹಿತಿ ನೀಡುವುದು) | ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದ 07 ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ಮತ್ತು ಬೆಂಗಳೂರು ನಗರಗಳು ಆಯ್ಕೆಯಾಗಿರುತ್ತದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಇಲ್ಲಿಯವರೆಗೆ ಬಿಡುಗಡೆಯಾದ ರೂ.6854.5 ಕೋಟಿ ಅನುದಾನದಲ್ಲಿ ರೂ.6472.08 ಕೋಟಿ ವೆಚ್ಚ ಮಾಡಲಾಗಿದೆ ವೆಚ್ಚದ ವರ್ಷವಾರು ವಿವರಗಳು ಈ ಕೆಳಗಿನಂತಿದೆ: |

ರೂ. ಕೋಟಿಗಳಲ್ಲಿ

| ವರ್ಷ | ಬಿಡುಗಡೆಯಾದ ಅನುದಾನ | | | ವೆಚ್ಚ | | |
|---|---|---|---|---|---|---|
| | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು |
| 2015-16 | 12 | 0 | 12 | 0 | 0 | 0 |
| 2016-17 | 388 | 400 | 788 | 6.99 | 0 | 6.99 |
| 2017-18 | 436 | 420 | 856 | 23.17 | 6.12 | 29.29 |
| 2018-19 | 134 | 158 | 292 | 103.40 | 5.38 | 108.78 |
| 2019-20 | 355 | 37 | 392 | 633.12 | 67.89 | 701.01 |

| | | | | | | | | |
|---|---|---|---|---|---|---|---|---|
| | | 2020-21 | 241 | 582 | 823 | 640.04 | 655.22 | 1295.26 |
| | | 2021-22 | 865.16 | 1303 | 2168.16 | 811.17 | 985.14 | 1796.31 |
| | | 2022-23 | 604.84 | 129 | 733.84 | 529.27 | 999.99 | 1529.26 |
| | | 2023-24 | 318.50 | 397.50 | 716 | 319.34 | 220.04 | 539.38 |
| | | 2024-25 | 36.75 | 36.75 | 73.5 | 240.24 | 225.56 | 465.8 |
| | | **ಒಟ್ಟು** | **3391.25** | **3463.25** | **6854.5** | **3306.74** | **3165.34** | **6472.08** |
| ಈ) | ಈ ಅವ್ಯವಹಾರದಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವೆಷ್ಟು ಮತ್ತು ಈ ನಷ್ಟದ ಮೊತ್ತವನ್ನು ಹಿಂಪಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಉದ್ಭವಿಸುವುದಿಲ್ಲ. | | | | | | |

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರ ನನಗೆ ಸಮಧಾನವಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ರಾಜ್ಯ ಮತ್ತು ಕೇಂದ್ರ ಸಹಭಾಗಿತ್ವದಿಂದ ಅನುಷ್ಠಾನಗೊಳಿಸುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿವಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಅವ್ಯವಹಾರಗಳ ಕುರಿತು ನಿರ್ದಿಷ್ಟ ದೂರುಗಳು ದಾಖಲಾಗಿರುವುದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರವನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ವಿಚಾರವನ್ನು ಹೇಳಬಯಸುತ್ತಿದ್ದೇನೆ. ಜನವರಿ ತಿಂಗಳ ಮೊದಲನೇ ವಾರದಲ್ಲಿ ಮಾನ್ಯ ಸಚಿವರು ವಿಧಾನಸೌಧದಲ್ಲಿ ಒಂದು ಸಭೆ ಮಾಡಿ, ಅವರು ಹೇಳುವುದೇನೆಂದರೆ, "The Karnataka Government is all set to probe into allegations of irregularities in the works of Smart City project…."

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನೇ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಓದುತ್ತಿರುವುದನ್ನು ನೋಡಿ, ಒಂದೇ ವಾಕ್ಯದಲ್ಲಿ ಹೇಳಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಒಂದು ವಾಕ್ಯವಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಒಂದೇ ವಾಕ್ಯದಲ್ಲಿ ಇದೆ ಎಂದು ಹೇಳುತ್ತಲೇ ಇದ್ದೀರಾ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಒಂದೇ ವಾಕ್ಯದಲ್ಲಿ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಪ್ರಶ್ನೆ ಕೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು ಕಛೇರಿಯಲ್ಲಿ ಒಂದು ಸಭೆ ಮಾಡಿ, ಅವರು ಹೇಳುವುದೇನೆಂದರೆ, irregularities ಆಗಿರುವುದಕ್ಕೆ ನಾನು Committee ಅನ್ನು setup ಮಾಡುತ್ತಿದ್ದೇನೆ. The Committee will have technical experts from universities and, the Indian Institute of Science. Irregularities ಆಗಿರುವುದನ್ನು ಕಂಡು ಹಿಡಿಯುವುದಕ್ಕೆ ನಾನು ಒಂದು ಕಮಿಟಿಯನ್ನು ರಚನೆ ಮಾಡುತ್ತಿದ್ದೇನೆ ಎಂದು ಮಾನ್ಯ ಸಚಿವರು announce ಮಾಡುತ್ತಾರೆ. ಯಾವುದೇ ದೂರುಗಳು ಇಲ್ಲದೇ ಇರುವ ಕಡೆ ಯಾವ ರೀತಿ ಕಮಿಟಿಯನ್ನು ರಚನೆ ಮಾಡಿದರು ಎನ್ನುವ ಒಂದು ವಿಚಾರವಾದರೆ, ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಒಂದೊಂದು ಸಿಟಿಗೆ ಸಾವಿರ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಾರೆ. ಅಂದರೆ ಆರೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆರು ಸಿಟಿಗಳನ್ನು ಸ್ಮಾರ್ಟ್ ಸಿಟಿಯಾಗಿ ಮಾಡುತ್ತಾರೆ. ಬೆಂಗಳೂರನ್ನು ಸೇರಿಸಿದರೆ, ಏಳು ಸಿಟಿ ಆಗುವಂತಹದ್ದನ್ನು ನಾನು ನೋಡಿದ್ದೇನೆ. ಅದಕ್ಕೆ ಕೊಟ್ಟಿರುವಂತಹ ಹಣವನ್ನು deviate ಮಾಡಿರುವ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ಬಂದಿರುವ ಬಗ್ಗೆ ನಾನು ಸದನದಲ್ಲಿ ಮಾಹಿತಿ ನೀಡುವುದಕ್ಕೆ ಇಚ್ಛೆ ಪಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನ್ನು ಸಾಕು ಮಾಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಬೆಳಗಾವಿ ಸ್ಮಾರ್ಟ್ ಸಿಟಿಯ ಬಗ್ಗೆ ಹೇಳುವುದಾದರೆ, ಅಲ್ಲಿಂದ ಒಂದು ರಸ್ತೆ ಖಾನಾಪುರ ರಸ್ತೆಗೆ connect ಆಗುತ್ತದೆ. ಅವರು ಭೂ ಸ್ವಾಧೀನ ಪಡಿಸಿಕೊಳ್ಳದೇ ರಸ್ತೆಯನ್ನು ಮಾಡುತ್ತಾರೆ. ಅದಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಈ ವಿಷಯದ ಕುರಿತಾಗಿ ಮಾನ್ಯ ನ್ಯಾಯಾಲಯಕ್ಕೆ ಹೋದರೆ, ಮಾಲೀಕರ ಪರವಾಗಿ ಕೇಸ್ ಆಗುತ್ತದೆ. ಬೆಳಗಾವಿ ಮಹಾನಗರ ಪಾಲಿಕೆಯ ಮೇಲೆ ಇಪ್ಪತ್ತು ಕೋಟಿ ರೂಪಾಯಿಗಳಷ್ಟು ದಂಡವನ್ನು ಹಾಕುತ್ತಾರೆ. Is it not an irregularity? Is it not a misleading statement by the Hon'ble Minister?

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರ ಹೆಂಡತಿಯ ಊರು ಬೆಳಗಾವಿ ಆಗಿರುವುದರಿಂದ, ತಾವು ಕಾಳಜಿ ವಹಿಸಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಹೆಂಡತಿ ಊರು ಎಂದು ಕೇಳುತ್ತಿಲ್ಲ. ಬೆಳಗಾವಿ ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವಾಗಿರುವುದರಿಂದ ನಾನು ಕೇಳುತ್ತಿದ್ದೇನೆ. ಮಾನ್ಯ ಸಚಿವರೇ, ಬೆಳಗಾವಿಯಲ್ಲಿ ಆಗಿಲ್ಲ ಎಂದು ಹೇಳಿದಿರಿ.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ನಾಗರಾಜುರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ಹತ್ತು .......ಇರಬೇಕಾದರೆ, .... ಲೂಟಿ ಹೊಡೆದಿದ್ದನ್ನು ಇಲ್ಲ ಎಂದು ಹೇಳುವುದಕ್ಕೆ ಹೇಗೆ ಸಾಧ್ಯ ಎನ್ನುವ ಮಾತನ್ನು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ನಾಗರಾಜುರವರೇ, ಆಯಿತು. ತಾವು ಕುಳಿತುಕೊಳ್ಳಿ.

**Sri NAGARAJU M.:–** Hon'ble Chairman sir, the money has been looted for three years and the Government should investigate it.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಮಾತನಾಡಿ.

**ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು T.V. panel ನಲ್ಲಿ ಕುಳಿತುಕೊಳ್ಳುತ್ತಾರಲ್ಲ, ಆ ತರಹ aggressive ಆಗಿಬಿಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅದು ಹಾಗಲ್ಲ.

**ಶ್ರೀ ಬಿ.ಎಸ್. ಸುರೇಶ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಿಗೆ ಸಮಾಧಾನವಾಗಿ ಉತ್ತರವನ್ನು ಹೇಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮದೇನಿಲ್ಲ. ಸರ್ಕಾರಕ್ಕೆ ಗಂಭೀರವಾಗಿ ತೆಗೆದುಕೊಂಡಿಲ್ಲ ಎನ್ನುವುದನ್ನು ಅವರ ಪಕ್ಷದ ಸದಸ್ಯರೇ ಹೇಳುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳುತ್ತಿರುವುದೇನೆಂದರೆ, ಭ್ರಷ್ಟಚಾರದ ಬಗ್ಗೆ ವೈರಿಗಳನ್ನು.....ನಾನು ಸರ್ಕಾರದ ವಿರುದ್ಧವಲ್ಲ ಎನ್ನುವ ಮಾತನ್ನು ಸದನಕ್ಕೆ ಹೇಳಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ರಾಜ್ಯದ ಸಮಸ್ಯೆಗಳು ಬಂದಾಗ ಪಕ್ಷದ ವಿಚಾರಗಳು ಬರಬಾರದು. ನಾವು ಒಬ್ಬ ನಾಗರೀಕರಾಗಿಯೂ ಮತ್ತು ಜನಪ್ರತಿನಿಧಿ ಕೇಳುವ ಪ್ರಶ್ನೆಯಲ್ಲಿ ರಾಜಕೀಯ ಮಾಡುವಂತಹದ್ದು ಎಷ್ಟು ಸರಿ ಎನ್ನುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೇಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಸಮಸ್ಯೆ ಏನೆಂಬುದು ನಮಗೆ ಗೊತ್ತಾಗಿದೆ.

**ಶ್ರೀ ಎಂ. ನಾಗರಾಜು:–** ಇಲ್ಲಿ ಸಮಸ್ಯೆ ಏನಿಲ್ಲ. ಭ್ರಷ್ಟಚಾರವಾಗಿರುವುದು ಹೊರಗಡೆ ಬರಬೇಕು.

**ಸಭಾಪತಿಯವರು:–** ಮಾನ್ಯ ನಾಗರಾಜುರವರೇ, ತಾವು ಕುಳಿತುಕೊಳ್ಳಿ. ಡಾ|| ತಳವಾರ್ ಸಾಬಣ್ಣನವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ತಾವು ಹುಡುಗಾಟಿಕೆ ಮಾಡುತ್ತೀರಾ.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾಗರಾಜುರವೇ, ಒಂದು ನಿಮಿಷ ಕೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಮೂರು ವರ್ಷಗಳ ಅವ್ಯವಹಾರಗಳ ಬಗ್ಗೆ ತನಿಖೆಯಾಗಬೇಕು. ಇಲ್ಲವೆಂದರೆ ಅರ್ಧ ಗಂಟೆಗಳ ಕಾಲ ಚರ್ಚೆಗೆ ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಸಭಾಪತಿಯವರಿಗೆ ಗೌರವ ಕೊಡುತ್ತೀರೋ ಇಲ್ಲವೋ ಹೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ತಮಗೆ ಗೌರವ ಕೊಡುತ್ತೇನೆ. I need an answer. It is my right.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಅವೊತ್ತಿನ ದಿನದಿಂದ ಹೇಳುತ್ತಿದ್ದೇನೆ. ಮೂರು ವರ್ಷಗಳ ಕಾಲ ಬಿ.ಜೆ.ಪಿ.,ಯವರು ನಡೆಸಿರುವ ಅವ್ಯವಹಾರಗಳು ಹೊರಗಡೆ ಬರಬೇಕು ಎಂಬುದು ನನ್ನ ಅಭಿಲಾಷೆ. **(ಗೊಂದಲ)** ಅದು ಹೊರಗಡೆ ಬರಬೇಕು. ಅದರ ಬಗ್ಗೆ ನನಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸದಸ್ಯರೇ, ತಾವು ಕೇಳಿರುವ ಬಗ್ಗೆ ಉತ್ತರ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ ಒಂದೇ ನಿಮಿಷದಲ್ಲಿ ಉತ್ತರವನ್ನು ಹೇಳಿಬಿಡಿ.

**(ಗೊಂದಲ)**

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಸದನ ಪ್ರಾರಂಭಿಸಿ ಈಗಾಗಲೇ ಒಂದು ಗಂಟೆ ಆಗಿದೆ.

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು ಟಿ.ವಿ. ಎಂದು ತಿಳಿದುಕೊಂಡು ಮಾತನಾಡುತ್ತಿದ್ದಾರೆ.

**ಶ್ರೀ ಎಂ. ನಾಗರಾಜು:-** ಇದಕ್ಕೆ ನನ್ನ ಆಕ್ಷೇಪವಿದೆ. ನಾನು ಟಿ.ವಿ. ಎನ್ನುವಂತಹ ಮಾತನ್ನು...

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ನಾಗರಾಜುರವೇ, ತಾವು ಟಿ.ವಿಯಲ್ಲಿ ಚೆನ್ನಾಗಿ ಚರ್ಚೆ ನಡೆಸುತ್ತೀರಾ ಎಂದು ಹೇಳುತ್ತಿದ್ದೇನೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಚಿವರೇ, ನಾನು ಟಿ.ವಿ.ಯಲ್ಲಿ ಚರ್ಚೆಯನ್ನು ಚೆನ್ನಾಗಿ ಮಾಡುವುದಕ್ಕೆ ಇಲ್ಲಿಗೆ ಬಂದಿರುವಂತಹದ್ದು. ಮಾನ್ಯ ಸಚಿವರೇ, ಉತ್ತರ ಚೆನ್ನಾಗಿ ಕೊಡಬೇಕು. ತಾವು ದಯವಿಟ್ಟು, ಹೇಳಿ.

**(ಗೊಂದಲ)**

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಟಿ.ವಿಯಲ್ಲಿ ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ಅದರ ಪ್ರಕಾರ ಇಲ್ಲಿ ಮಾಡುತ್ತಾರೆ ಎಂದು ನಾನು ಹೇಳುವುದಕ್ಕೆ ಹೊರಟಿದ್ದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರ ಸ್ವಭಾವವೇ ಹಾಗೇ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳಿದರು ಎಂಬುದು ನನಗೆ ಗೊತ್ತಾಗಲಿಲ್ಲ. ಅವರು ಅಷ್ಟು ವೇಗವಾಗಿ ಹೇಳಿದರು.

**ಶ್ರೀ ಬಿ.ಎಸ್. ಸುರೇಶ:-** ಅದು ನನಗೆ ಗೊತ್ತಾಯಿತು.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಹಾಗಾದರೆ ನಾನು ಮತ್ತೊಮ್ಮೆ ಹೇಳಬೇಕಾಗುತ್ತದೆ. ಬಿ.ಜೆ.ಪಿ.ಯವರಿಗೆ ಸತ್ಯ ಅರ್ಥವಾಗಿರುವುದಿಲ್ಲ. ಏನಾದರೂ ಅವ್ಯವಹಾರಗಳಾದರೆ,....., **(ಗೊಂದಲ)** ಮಾನ್ಯ ಸಭಾಪತಿಯವರೇ, ನನಗೆ ಮತ್ತೊಮ್ಮೆ ಅವಕಾಶ ಕೊಡಬೇಕಾಗುತ್ತದೆ. ಅವರಿಗೆ ಅರ್ಥವಾಗಿಲ್ಲ. ಮತ್ತೊಮ್ಮೆ ಅರ್ಥ ಮಾಡಿಸಬೇಕಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ. ಮಾನ್ಯ ಸಚಿವರೇ, ತಮ್ಮ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿಗೆ ಪರಿವರ್ತಿಸಿದ್ದೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ಅದು ಬೇಡ. ಅದನ್ನು ಏತಕ್ಕೆ ಮಾಡುತ್ತೀರಾ?

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಶ್ರೀ ತಳವಾರ್ ಸಾಬಣ್ಣನವರೇ, ತಮ್ಮ ಪ್ರಶ್ನೆಯನ್ನು ಕೇಳಿ.

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 10 (07) |
| ವಿಧಾನ ಪರಿಷತ್ ಸದಸ್ಯರ ಹೆಸರು | : ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶಿತರು) |
| ಉತ್ತರಿಸುವವರು | : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : 04.03.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ಹತ್ತಿರವಿರುವ ಶ್ರೀ ಸಿಮೆಂಟ್ ಕಂಪನಿ ಭೂ ಪರಿಹಾರ ವಿತರಣೆಯಲ್ಲಿ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ 05.01.2010 ರಂದು ನಡೆದ SHLCC ಸಭೆಯಲ್ಲಿ ಮೆ\|\| ಶ್ರೀ ಸಿಮೆಂಟ್ ಲಿಮಿಟೆಡ್ ಘಟಕಕ್ಕೆ ರೂ. 1000 ಕೋಟಿ ಬಂಡವಾಳ ಹೂಡಿಕೆ ಮಾಡಿ 3 MTPA ಸಿಮೆಂಟ್ ಘಟಕವನ್ನು ಕೊಡ್ಲಾ ಹಾಗೂ ಬೆನಕನಹಳ್ಳಿ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ ಇಲ್ಲಿ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ.<br>ಮೆ\|\| ಶ್ರೀ ಸಿಮೆಂಟ್ ಲಿಮಿಟೆಡ್, ಕಲಬುರಗಿ ಜಿಲ್ಲೆ ರವರು ಅಂದಾಜು 1348.38 ಎಕರೆ ಖಾಸಗಿ ಕೃಷಿ ಭೂಮಿಯನ್ನು ಎಕರೆಗೆ ರೂ.2.35 ಲಕ್ಷದಂತೆ KLR ಕಾಯ್ದೆ Section 109ರಡಿ ಖರೀದಿಸಿರುತ್ತದೆ.<br>ನಂತರ, ರೈತರು ಹೆಚ್ಚಿನ ಭೂ ಪರಿಹಾರ ಕೋರಿದ್ದರಿಂದ, ಈ ವಿಷಯವಾಗಿ ರೈತರೊಂದಿಗೆ ಚರ್ಚಿಸಿ, ಪ್ರತಿ ಎಕರೆಗೆ ರೂ.3.65 ಲಕ್ಷ ಹೆಚ್ಚುವರಿ ಪರಿಹಾರವಾಗಿ ಪಾವತಿಸಲಾಗಿರುತ್ತದೆ.<br>ತದನಂತರ, ಮೆ\|\| ಶ್ರೀ ಸಿಮೆಂಟ್ ಲಿಮಿಟೆಡ್ ಯೋಜನೆಯ ಅನುಷ್ಠಾನದ ಸಮಯದಲ್ಲಿ, ರೈತರು ಮತ್ತೆ ಹೆಚ್ಚುವರಿ ಭೂ ಪರಿಹಾರ ಬೇಡಿಕೆ ಕೋರಿದ್ದರಿಂದ, ಕಂಪನಿಯು ಮಾನವೀಯ ನೆಲೆಯಲ್ಲಿ ಪರಿಗಣಿಸಿ ಮತ್ತು ಆ ಪ್ರದೇಶದಲ್ಲಿ ಶಾಂತಿ ಕಾಪಾಡಲು ಜಿಲ್ಲಾಧಿಕಾರಿಗಳು, ಗುಲ್ಬರ್ಗಾರವರ ಉಪಸ್ಥಿತಿಯಲ್ಲಿ ಹೆಚ್ಚುವರಿ ಪರಿಹಾರವನ್ನು ಪ್ರತಿ ಎಕರೆಗೆ ರೂ.2 ಲಕ್ಷಗಳನ್ನು ನೀಡಿರುತ್ತದೆ.<br>ಹೀಗೆ ಒಟ್ಟಾರೆಯಾಗಿ 3 ಕಂತುಗಳಲ್ಲಿ ಪ್ರತಿ ಎಕರೆಗೆ ರೂ.8,00,000/- ಗಳ ಭೂ ಪರಿಹಾರವನ್ನು ನೀಡಿರುವುದಾಗಿ ಘಟಕದವರು ತಿಳಿಸಿರುತ್ತಾರೆ. |
| ಆ | ಕಂಪನಿಯು 400-500 ರೈತರಿಂದ 1100 ಎಕರೆ ಭೂಮಿ ಸ್ವಾಧೀನ ಪಡಿಸಿಕೊಂಡು ಪ್ರತಿ ಎಕರೆಗೆ ರೂ.11.68 ಲಕ್ಷ ಪರಿಹಾರ ನೀಡುವ ಬದಲಿಗೆ ಕಂಪನಿ ರೈತರಿಗೆ ರೂ.8.68 ಲಕ್ಷ ಪ್ರತಿ ಎಕರೆಗೆ ಪರಿಹಾರ ನೀಡಿರುವುದು ಸರಿಯೇ; | |
| ಇ | ಬಾಕಿ ಭೂ ಪರಿಹಾರ, ಸಿಮೆಂಟ್ ಧೂಳಿನಿಂದ ಬೆಳೆಹಾನಿಗೆ ಪರಿಹಾರ ಮತ್ತು ಭೂಮಿ ಕಳೆದುಕೊಂಡವರಿಗೆ ಉದ್ಯೋಗ ನೀಡಬೇಕೆಂಬ ರೈತರ ಬೇಡಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; | ರೈತರಿಗೆ ಹೆಚ್ಚುವರಿ ಭೂ ಪರಿಹಾರವನ್ನು ಈಗಾಗಲೇ ಪಾವತಿಸಲಾಗಿರುತ್ತದೆ ಮತ್ತು ಕಂಪನಿಯು ಭೂಮಿಯನ್ನು ಖರೀದಿಸಿರುವುದರಿಂದ ಆ ಭೂಮಿಗಳ ಬೆಳೆ ಪರಿಹಾರ ಅನ್ವಯಿಸುವುದಿಲ್ಲ.<br>ರೈತರ ಮತ್ತು ಕಂಪನಿಯ ನಡುವಿನ ಒಪ್ಪಂದದ ಪ್ರಕಾರ ಕಂಪನಿಯು 483 ಭೂಸಂತ್ರಸ್ಥರಿಗೆ ಉದ್ಯೋಗ ಒದಗಿಸಬೇಕಾಗಿದ್ದು, ಇಲ್ಲಿಯವರೆಗೆ 338 ಭೂಸಂತ್ರಸ್ಥರಿಗೆ ಉದ್ಯೋಗ ಒದಗಿಸಿರುತ್ತದೆ. ಬಾಕಿ ಉಳಿದ 145 ಭೂಸಂತ್ರಸ್ಥರಿಗೆ ಅರ್ಹತೆ, ವಯಸ್ಸು ಮಾನದಂಡಗಳ ಮೇರೆಗೆ ಉದ್ಯೋಗವನ್ನು ನೀಡಬೇಕಾಗಿರುತ್ತದೆ. |
| ಈ | ಕಂಪನಿ ನಿಯಮಗಳನ್ನು ಗಾಳಿಗೆ ತೂರಿ ರೈತರೊಂದಿಗೆ ಚೆಲ್ಲಾಟವಾಡುತ್ತಿರುವ ಶ್ರೀ ಸಿಮೆಂಟ್ ಕಂಪನಿಯ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ? | |

| | | |
|---|---|---|
| | | ಮುಂದುವರೆದಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಲಬುರಗಿ ರವರು ಈ ಘಟಕದ ಚಟುವಟಿಕೆಯಿಂದ ಉಂಟಾಗುವ ಧೂಳಿನಿಂದ ಬೆಳೆಗಳ ಹಾನಿ ಕುರಿತು ವರದಿ ನೀಡುವಂತೆ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಸೇಡಂ ಇವರಿಗೆ ದಿನಾಂಕ 04.02.2025ರಂದು ಪತ್ರ ಬರೆದಿದ್ದು, ವರದಿ ನಿರೀಕ್ಷಣೆಯಲ್ಲಿದೆ.<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕೃಷಿ ಇಲಾಖೆಯ ವರದಿಗಳು ಬಂದ ನಂತರ ನಿಯಮಾನುಸಾರ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುತ್ತದೆ. |

**ಡಾ॥ ತಳವಾರ್ ಸಾಬಣ್ಣ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕೊಟ್ಟಿರುವಂತಹ ಮರೆಮಾಚಿದ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ. ಮರೆಮಾಚಿದ ಮಾಹಿತಿ ಏಕೆ ಎಂದು ಹೇಳಿದರೆ, ಇದರಲ್ಲಿ ವಾಸ್ತವತೆ ಇಲ್ಲ. ಈ ಪ್ರಶ್ನೆಯು ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಕೊಡ್ಲಾ ಬಳಿಯ ಶ್ರೀ ಸಿಮೆಂಟ್ ಕಾರ್ಖಾನೆಗೆ ಸಂಬಂಧಪಟ್ಟಿರುವಂತಹದ್ದು. ಅಲ್ಲಿ 1348 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ರೈತರಿಂದ ಜಮೀನನ್ನು ಖರೀದಿ ಮಾಡಬೇಕಾದಾಗ, ಕೆಲವು ರೈತರಿಂದ ಕೃಷಿ ಭೂಮಿಯನ್ನು ಎಕರೆಗೆ ರೂ.2.35 ಲಕ್ಷದಂತೆ ಕೊಟ್ಟು, ನಂತರ ರೈತರು ಹೆಚ್ಚಿನ ಭೂ ಪರಿಹಾರಕ್ಕಾಗಿ ಹೋರಾಟ ಮಾಡಿದಾಗ, ರೂ. 8 ಲಕ್ಷದವರೆಗೆ ಪರಿಹಾರವನ್ನು ಕೊಟ್ಟಿದ್ದಾರೆ. ಅವರ ಜಮೀನಿನ ಪಕ್ಕದ ರೈತರಿಗೆ ಪ್ರತಿ ಎಕರೆಗೆ ರೂ. 11.68 ಲಕ್ಷಗಳನ್ನು ಕೊಟ್ಟಿದ್ದಾರೆ. ನಮ್ಮ ಜಮೀನು ಒಂದೇ ಮತ್ತು ಅವರು ಜಮೀನು ಒಂದೇ ಮತ್ತು ಕಂಪನಿ ಒಂದೇ ಆಗಿದೆ ಎಂದು ರೈತರು ಹೇಳಿದ್ದಾರೆ. ಆದರೆ ರೈತರಿಗೆ ಕೊಟ್ಟಿರುವಂತಹ ಭೂ ಪರಿಹಾರದಲ್ಲಿ ತಾರತಮ್ಯವಿದೆ ಎಂಬುದು ನನ್ನ ಮುಖ್ಯ ಪ್ರಶ್ನೆಯಾಗಿದೆ. ಇದಕ್ಕೆ ಮಾನ್ಯ ಸಚಿವರು ಮಾಹಿತಿಯನ್ನು ನೀಡಿದರೆ, ನಾನು ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇನೆ.

(ಮುಂದು)

(21) 04.03.2025/12.20/ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಸರಿಯಾದ ಉತ್ತರವನ್ನೇ ಕೊಟ್ಟಿದ್ದೇನೆ. ನಾನು ಹೋಮ್ ವರ್ಕ್ ಮಾಡಿಕೊಂಡೇ ಉತ್ತರ ಕೊಡುತ್ತೇನೆ. ಶ್ರೀ ಸಿಮೆಂಟ್ ಕಂಪನಿ 2010ನೇ ಇಸವಿಯಲ್ಲಿ ಪ್ರಾರಂಭವಾಗಿರುತ್ತದೆ. SHLCC (State High Level Clearance Committee) ಸಭೆಯಲ್ಲಿ ಮೆ॥ ಶ್ರೀ ಸಿಮೆಂಟ್ ಘಟಕಕ್ಕೆ ರೂ. 1,000 ಕೋಟಿಗೆ ಬಂಡವಾಳ ಹೂಡಿಕೆ ಮಾಡಿ 3 MTPA ಸಿಮೆಂಟ್ ಘಟಕವನ್ನು ಕೊಡ್ಲಾ ಹಾಗೂ ಬೆನಕನಹಳ್ಳಿ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ ಇಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದೇನೆ. ಮೇ॥ ಶ್ರೀ ಸಿಮೆಂಟ್ ಲಿಮಿಟೆಡ್, ಕಲಬುರಗಿ ಜಿಲ್ಲೆಯವರು ಅಂದಾಜು ರೂ.1348.38 ಎಕರೆ ಖಾಸಗಿ ಕೃಷಿ

ಭೂಮಿಯನ್ನು ಎಕರೆಗೆ ರೂ.2.35 ಲಕ್ಷದಂತೆ KLR ಕಾಯ್ದೆಯ Section 109 ರಡಿ ಖರೀದಿಸಲಾಗಿದೆ. ನಂತರ ರೈತರು ಹೆಚ್ಚಿನ ಭೂ ಪರಿಹಾರ ಕೋರಿದ್ದರಿಂದ, ಆಗ ರೈತರೊಂದಿಗೆ ಚರ್ಚಿಸಿ ಪ್ರತಿ ಎಕರೆಗೆ ರೂ.3.65 ಲಕ್ಷ ಹೆಚ್ಚುವರಿ ಪರಿಹಾರವನ್ನು ಪಾವತಿಸಲಾಗುತ್ತದೆ. ನಾನು 2010ನೇ ಸಾಲಿನದ್ದು ಹೇಳುತ್ತಿದ್ದೇನೆ. ತದನಂತರ ಮೆ॥ ಶ್ರೀ ಸಿಮೆಂಟ್ ಲಿಮಿಟೆಡ್ ಯೋಜನೆಯ ಅನುಷ್ಠಾನದ ಸಮಯದಲ್ಲಿ, ರೈತರು ಮತ್ತೆ ಹೆಚ್ಚುವರಿ ಭೂ ಪರಿಹಾರ ಬೇಡಿಕೆ ಕೋರಿದ್ದರಿಂದ, ಕಂಪನಿಯು ಮಾನವೀಯ ನೆಲೆಯಲ್ಲಿ ಪರಿಗಣಿಸಿ ಮತ್ತು ಆ ಪ್ರದೇಶದಲ್ಲಿ ಶಾಂತಿ ಕಾಪಾಡಲು ಜಿಲ್ಲಾಧಿಕಾರಿಗಳು, ಗುಲಬರ್ಗಾರವರು ಹೆಚ್ಚುವರಿ ಪರಿಹಾರವನ್ನು ಪ್ರತಿ ಎಕರೆಗೆ ರೂ. 2,00,000 ಗಳನ್ನು ಕೊಡುತ್ತಾರೆ. ಒಟ್ಟು 3 ಕಂತುಗಳಲ್ಲಿ ಪ್ರತಿ ಎಕರೆಗೆ ರೂ.8,00,000/- ಗಳ ಭೂಪರಿಹಾರವನ್ನು ನೀಡಿರುತ್ತೇವೆ. ಇದರಲ್ಲಿ ಒಪ್ಪಂದದ ಪ್ರಕಾರ ಕಂಪನಿಯು 483 ಭೂಸಂತ್ರಸ್ಥರಿಗೆ ಉದ್ಯೋಗ ಒದಗಿಸಬೇಕಾಗಿತ್ತು, ಅದರ ಬಗ್ಗೆ ಕೂಡ ಹೇಳಿದ್ದಾರೆ. ಇದಲ್ಲದೇ KLR (Karnataka Land Reforms) ಕಾಯ್ದೆಯ Section 109 ಮಾಡಿದ ನಂತರ ಮಾನ್ಯ ಸದಸ್ಯರಿಗೆ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. Karnataka Land Reforms Actನ Section 79 (a) & (b) ಅಡಿಯಲ್ಲಿ ಆಗ ಒಬ್ಬರು Assistant Commissioner ಯವರು ಇರುತ್ತಾರೆ. ಅವರು ಏನು ಮಾಡುತ್ತಾರೆಂದರೆ, Section 79 (a) & (b) ಅಡಿಯಲ್ಲಿ ಆದೇಶ ಮಾಡಿದ್ದನ್ನು cancel ಮಾಡಿರುತ್ತಾರೆ. ಅದು ನಂತರ ಕ್ಯಾಬಿನೆಟ್‌ಗೆ ಬಂದು ತೀರ್ಮಾನವಾಗಿ 2010ರಲ್ಲಿ ಪ್ರತಿ ಎಕರೆಗೆ ರೂ.8,00,000/- ಗಳ ಭೂಪರಿಹಾರವನ್ನು ಕೊಟ್ಟನಂತರ, ಅದನ್ನು lease ಗೆ convert ಮಾಡುತ್ತಾರೆ. ಏಕೆಂದರೆ Section 79 (a) & (b) ನ್ನು ಹೊಡೆದು ಹಾಕಿದ ಮೇಲೆ ಅವರು ಫ್ಯಾಕ್ಟರಿ ಎಲ್ಲಾ ಮಾಡಿಬಿಟ್ಟಿರುತ್ತಾರೆ. ಸುಮಾರು 30 ವರ್ಷಗಳ ಕಾಲ ಅದನ್ನು convert ಮಾಡುತ್ತಾರೆ. ಅದನ್ನು ಮಾಡಿ ಪ್ರತಿ ಎಕರೆಗೆ ಹತ್ತು ಸಾವಿರಕ್ಕೆ ಹೋಗುತ್ತದೆ. ಇದರಲ್ಲಿ ನಡೆದು ಬಂದಿರತಕ್ಕಂಥದ್ದು.

**ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ತಮ್ಮ ಸರ್ಕಾರದ Assistant Commissioner ಯವರ ನೇತೃತ್ವದಲ್ಲಿ ಆಗಿರತಕ್ಕಂಥ ಸಭೆಯ ನಡಾವಳಿಗಳು ನನ್ನ ಹತ್ತಿರ ಇದೆ. ಅಧಿಕಾರಿಗಳು ಕೂಡ ಒಪ್ಪಿಕೊಂಡಿದ್ದಾರೆ. ಆ ಕಂಪನಿಯವರು ಕೂಡ ಒಪ್ಪಿಕೊಂಡಿದ್ದಾರೆ. ರೂ. 11,68,000 ಗಳನ್ನು ಪರಿಹಾರ ಕೊಡುತ್ತೇವೆಂದು ತೆಗೆದುಕೊಂಡಿದ್ದಾರೆ. ಅಲ್ಲಿನ ರೈತರು ಹೋರಾಟ ಮಾಡುತ್ತಿದ್ದಾರೆ. ಇದು ಪತ್ರಿಕೆಗಳಲ್ಲೂ ಕೂಡ ವರದಿಯಾಗಿದೆ. ನಾನು ಪತ್ರಿಕೆಗಳ ಆಧಾರದ ಮೇಲೆ ಮತ್ತು Assistant Commissioner ಯವರ ನಡಾವಳಿಗಳ ಆಧಾರದ ಮೇಲೆ ಮಾತನಾಡುತ್ತಿದ್ದೇನೆ. ಅದಕ್ಕಾಗಿ ಮರೆಮಾಚಿದ ಮಾಹಿತಿಯನ್ನು ಅಧಿಕಾರಿಗಳಿಗೆ, ಕಂಪನಿಯವರು ಕೊಟ್ಟಿದ್ದಾರೆ. ಇದನ್ನು ನಾನು ಸುಳ್ಳು ಹೇಳುತ್ತಿಲ್ಲ. ಅವರು ಕೊಟ್ಟಿರತಕ್ಕಂಥ ಸುಳ್ಳನ್ನು ಮಾನ್ಯ ಸಚಿವರು ಇಲ್ಲಿ ಪ್ರಸ್ತುತ ಪಡಿಸುತ್ತಿದ್ದಾರೆ ಅಷ್ಟೇ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳುವುದು ಇಷ್ಟೇ. ರೈತರ ಹೊಲಗಳು ಅಕ್ಕಪಕ್ಕದಲ್ಲಿದೆ. ಒಬ್ಬ ರೈತರಿಗೆ ಪ್ರತಿ ಎಕರೆಗೆ ರೂ. 8 ಲಕ್ಷಗಳನ್ನು ಕೊಡುತ್ತಾರೆ. ಇನ್ನೊಬ್ಬ ರೈತರಿಗೆ ರೂ.11,68,000ಗಳನ್ನು ಕೊಟ್ಟಿದ್ದಾರೆ ಎಂದರೆ ಇದು ತಾರತಮ್ಯ ಅಲ್ಲವೇ? ಇವತ್ತಿನ

ದಿವಸ ಈ ಸರ್ಕಾರ ರೈತರ ಪರವಾಗಿರದೇ ರೈತರ ವಿರೋಧಿ ಆಗಿದೆ. ಸರ್ಕಾರ ಆ ಕಂಪನಿಯ ಪರವಾಗಿಲ್ಲವೆಂದು ನಾನು ಸರ್ಕಾರದ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೇನೆ. ಹಾಗಾಗಿ, ನನ್ನ ಉದ್ದೇಶ ಇಷ್ಟೇ. ಅಲ್ಲಿರತಕ್ಕಂಥ 463 ರೈತರಿಗೆ ತಾರತಮ್ಯ ಆಗಿದೆ. ಇನ್ನೊಮ್ಮೆ ತಾವು ಕೊಟ್ಟಂತಹ ಮಾಹಿತಿ ಪ್ರಕಾರ 154 ಜನರಿಗೆ ನೌಕರಿ ಕೊಡಬೇಕು. ಮತ್ತೆ ಈಗಾಗಲೇ ಅಲ್ಲಿ ಅಪಘಾತಗಳಾಗುತ್ತಿವೆ. ಅಲ್ಲಿ ರೈತರಿಗೆ ಯಾವುದೇ ರೀತಿಯಿಂದ security ಇಲ್ಲ. ಹಾಗಾಗಿ, ಸರ್ಕಾರ ಕಂಪನಿ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆ ರೈತರಿಗೆ ಪರಿಹಾರ ಕೊಡಿಸಬೇಕು. ರೈತರಿಗೆ ಏನು ರೂ.3.65 ಲಕ್ಷ ಪರಿಹಾರ ಕೊಡಬೇಕಾಗಿದೆಯಲ್ಲಾ ಆ ಪರಿಹಾರದ ಹಣ ಕೊಟ್ಟರೆ ಸಾಕು. ಬೇರೆ ಏನೂ ಉದ್ದೇಶವಿಲ್ಲ. ಇಷ್ಟು ನನ್ನ ಪ್ರಶ್ನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ರೈತ ಕುಟುಂಬದ ಹಿನ್ನೆಲೆಯಿಂದ ಬಂದಂತವರು. ನಾನು ಮಾನ್ಯ ಸದಸ್ಯರಿಗೆ ವಿವರಣೆಯನ್ನು ಕೊಟ್ಟಿದ್ದೇನೆ. KLR ಕಾಯ್ದೆಯ Section 109ರಲ್ಲಿ ಮೊದಲು ಖರೀದಿ ಆಗಿರತಕ್ಕಂಥದ್ದು. ಬಹುಶಃ ಅವರು ಇದನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ಭಾವಿಸಿದ್ದೇನೆ. ಜಮೀನು ಖರೀದಿ ಮಾಡಿಕೊಂಡು ಇವತ್ತಿನ ದಿವಸ 3 ಭಾಗದಲ್ಲಿ 3 ಕಂತುಗಳಲ್ಲಿ ಪ್ರತಿ ಎಕರೆಗೆ ರೂ. 8,00,000/-ಗಳನ್ನು ರೈತರಿಗೆ ಕೊಡುತ್ತಾರೆ. ನಾನು ಆ ಕಾರ್ಖಾನೆ ಪರವಾಗಿ ಮಾತನಾಡುತ್ತಿಲ್ಲ. ಆಗಿರುವುದನ್ನು ನಾನು ಇವತ್ತಿನ ದಿವಸ ವಿವರಿಸುತ್ತಿದ್ದೇನೆ. ಇವತ್ತಿನ ದಿವಸ Assistant Commissioner ಯವರು ಇಲ್ಲ. ಆ Assistant Commissioner ಯವರು ಅದನ್ನು Section 79 (a) & (b) ಅಡಿಯಲ್ಲಿ ಆದೇಶ ಮಾಡುತ್ತಾರೆ. ನಾನು ಆ ಕಂಪನಿ ಪರವಾಗಿ ಮಾತನಾಡುತ್ತಿಲ್ಲ. ಆ ಕಂಪನಿಯವರು ಅದನ್ನು ಅಪೀಲ್ ಮಾಡುತ್ತಾರೆ, question ಮಾಡುವುದಿಲ್ಲ. ಅಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಅದಕ್ಕೆ ಸುಮಾರು 30 ವರ್ಷಗಳಿಗೆ lease ಗೆ ಕೊಡುತ್ತಾರೆ. ಅದು ಯಾವ ಕ್ಯಾಬಿನೆಟ್ ಎಂದು ನನಗೆ ಗೊತ್ತಿಲ್ಲ. ಇದರ ಜೊತೆಗೆ ಪ್ರತಿ ಎಕರೆಗೆ ರೂ.10,000 ಗಳು ಎಂದು ನಿಗದಿಪಡಿಸುತ್ತಾರೆ. ಒಂದು ಕಡೆ ನಾವು Ease of Doing Business ಎಂದು ಹೇಳುತ್ತೇವೆ. ಆದಾಗ್ಯೂ ಕೂಡ ಇವತ್ತಿನ ದಿವಸ ಮಾನ್ಯ ಸದಸ್ಯರು ರೈತರಿಗೆ ಅನ್ಯಾಯವಾಗಿದೆಯೆಂದು ಹೇಳಿದ್ದಾರೆ. ಸಂಪೂರ್ಣವಾಗಿ Section 79 (a) & (b) ಅಡಿಯಲ್ಲಿ ಖರೀದಿ ಆಗಿರುವುದರಿಂದ ಸುಮಾರು 30 ವರ್ಷಗಳಿಗೆ lease ಗೆ convert ಆಗಿದೆ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಪ್ರತಿ ಎಕರೆಗೆ ರೂ.10,000 ಗಳ rent ನ್ನು ಕೂಡ ಕೊಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಕೆಲವು ರೈತರಿಗೆ ಹೆಚ್ಚುವರಿ ಪರಿಹಾರ ಕೊಡಬೇಕೆಂದು ಕೇಳುತ್ತಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಅವರನ್ನು ಕರೆದು ಮೀಟಿಂಗ್ ಮಾಡುತ್ತೇನೆ. ಇವತ್ತಿನ ದಿವಸ ಅಲ್ಲಿ ಏನಾದರು ತಾರತಮ್ಯಗಳು ಆಗಿದ್ದರೆ, ನಿಶ್ಚಿತವಾಗಿ ನಾನು ಅದನ್ನು ಬಗೆಹರಿಸುತ್ತೇನೆ. ನಾನು ಅವರನ್ನು ಕರೆಸಿ ಮಾತನಾಡುತ್ತೇವೆ. ಅವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಜಮೀನು ಖರೀದಿ ಮಾಡಲಾಗಿದ್ದು, ತದನಂತರ ಸುಮಾರು 30 ವರ್ಷಗಳಿಗೆ ಲೀಜ್‌ಗೆ convert ಆಗಿದೆ.

**ಡಾ.ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ difference amount ಆ ರೈತರಿಗೆ ಪರಿಹಾರ ಕೊಡಬೇಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಯಿತು ಪರಿಹಾರ . .. ಅದು ಖರೀದಿ ಹೋಗಿ lease ಗೆ convert ಆಯಿತು.

**ಡಾ. ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅವರೆಲ್ಲಾ ಗೋಮಾಳ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ. Reserve Forest ಅನ್ನು ಒತ್ತುವರಿ ಮಾಡಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು meeting ಮಾಡುತ್ತೇನೆ. ಅವರ್ಯಾರಿಗಾದರೂ ರೈತರಿಗೆ ತೊಂದರೆಯಾಗಿದ್ದರೆ ಕಂಡಿತವಾಗಿಯು ಕೂಡ ಅದನ್ನು ಬಗೆಹರಿಸಿಕೊಡುತ್ತೇನೆ.

**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **84** |
| ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 04.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೆಲವು ಭಾಗದ ಸರ್ಕಾರಿ ಜಾಗಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಳೆದ 02 ವರ್ಷಗಳಲ್ಲಿ ಇಂತಹ ಎಷ್ಟು ಅಕ್ರಮ ಗಣಿಗಾರಿಕೆ ಪ್ರಕರಣಗಳು ದಾಖಲಾಗಿವೆ; ಸದರಿ ಪ್ರಕರಣಗಳಿಗೆ ಸರ್ಕಾರ ಕೈಗೊಂಡ ಕಠಿಣ ಕ್ರಮಗಳಾವುವು; (ಜಿಲ್ಲಾವಾರು / ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಹೌದು.<br>➢ ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮುಖ್ಯ ಖನಿಜಗಳ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.<br>➢ ಕಳೆದ ಎರಡು ವರ್ಷಗಳಲ್ಲಿ ಉಪಖನಿಜಗಳ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ: |

**ಅನಧಿಕೃತ ಕಲ್ಲು ಗಣಿಗಾರಿಕೆ :-**

| ಕ್ರ. ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | 2023-24 | 610 | 794.54 | 183 |
| 2. | 2024-25 (ಜನವರಿ-2025ರ ಅಂತ್ಯಕ್ಕೆ) | 447 | 454.99 | 118 |
| | ಒಟ್ಟು | 1057 | 1249.53 | 301 |

**ಅನಧಿಕೃತ ಮರಳು ಗಣಿಗಾರಿಕೆ :-**

| ಕ್ರ. ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | 2023-24 | 300 | 120.10 | 109 |
| 2. | 2024-25 (ಜನವರಿ-2025ರ ಅಂತ್ಯಕ್ಕೆ) | 155 | 70.83 | 75 |
| | ಒಟ್ಟು | 455 | 190.93 | 184 |

- 2 -

| | | |
|---|---|---|
| | | ಕಳೆದ ಎರಡು ವರ್ಷಗಳಲ್ಲಿ ಉಪಖನಿಜಗಳ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಜಿಲ್ಲಾವಾರು/ ತಾಲ್ಲೂಕುವಾರು ಮಾಹಿತಿಯ ವಿವರಗಳನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. |
| ಆ) | ಸದರಿ ಗಣಿಗಾರಿಕೆ ನಡೆಸಲು ಬಳಸುತ್ತಿರುವ ಲಾರಿಗಳು ಪರ್ಮಿಟ್ ಇಲ್ಲದೇ ಚಲಾಯಿಸು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಲಾರಿ ಮಾಲೀಕರು ಮತ್ತು ಚಾಲಕರ ವಿರುದ್ಧ ಕೈಗೊಂಡ ಕ್ರಮಗಳಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು) | ಹೌದು.<br><br>ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಖನಿಜಗಳ ಅಕ್ರಮ ಸಾಗಾಣಿಕೆಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ಪತ್ತೆ ಹಚ್ಚಿ, ಸದರಿಯವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆ ಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ: |

**ಅನಧಿಕೃತ ಮುಖ್ಯ ಖನಿಜ ಸಾಗಾಣಿಕೆ :-**

| ಕ್ರ. ಸಂ | ವರ್ಷ | ದಂಡ ವಿಧಿಸಿದ ವಾಹನಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷ ಗಳಲ್ಲಿ) | ದಾಖಲಿಸಿರುವ ಮೊಕದ್ದಮೆ ಗಳ ಸಂಖ್ಯೆ |
|---|---|---|---|---|
| 1. | 2023-24 | 10 | 07.98 | 01 |
| 2. | 2024-25 (ಜನವರಿ 2025ರ ಅಂತ್ಯಕ್ಕೆ) | 07 | 02.76 | 05 |
| | ಒಟ್ಟು | 17 | 10.74 | 06 |

**ಅನಧಿಕೃತ ಕಲ್ಲು ಸಾಗಾಣಿಕೆ :-**

| ಕ್ರ. ಸಂ | ವರ್ಷ | ದಂಡ ವಿಧಿಸಿದ ವಾಹನಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷ ಗಳಲ್ಲಿ) | ದಾಖಲಿಸಿರುವ ಮೊಕದ್ದಮೆ ಗಳ ಸಂಖ್ಯೆ |
|---|---|---|---|---|
| 1. | 2023-24 | 3930 | 1388.71 | 12 |
| 2. | 2024-25 (ಜನವರಿ 2025ರ ಅಂತ್ಯಕ್ಕೆ) | 4381 | 1379.406 | 14 |
| | **ಒಟ್ಟು** | **8311** | **2,768.116** | **26** |

. . . 3

| | | |
|---|---|---|
| | | **ಅನಧಿಕೃತ ಮರಳು ಸಾಗಾಣಿಕೆ :-**<br>**ಕ್ರ. ಸಂ.** \| **ವರ್ಷ** \| **ದಂಡ ವಿಧಿಸಿದ ವಾಹನಗಳ ಸಂಖ್ಯೆ** \| **ವಿಧಿಸಿದ ದಂಡ (ರೂ.ಲಕ್ಷಗಳಲ್ಲಿ)** \| **ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ**<br>1. \| 2023-24 \| 3355 \| 787.17 \| 805<br>2. \| 2024-25 (ಜನವರಿ-2025 ರವರೆಗೆ) \| 2834 \| 607.00 \| 938<br>**ಒಟ್ಟು** \| **6189** \| **1394.17** \| **1743**<br>ವಿವರಗಳನ್ನು **ಅನುಬಂಧ-01** ರಲ್ಲಿ ಒದಗಿಸಿದೆ. |
| ಇ) | ಈ ರೀತಿಯ ಅಕ್ರಮ ಗಣಿಗಾರಿಕೆ ನಡೆಸುವಲ್ಲಿ ಇಲಾಖೆ ಅಧಿಕಾರಿಗಳು ಶಾಮೀಲಾಗಿರುವುದನ್ನು ಸರ್ಕಾರ ಪರಿಶೀಲಿಸಿದೆಯೇ; ಹಾಗಿದ್ದಲ್ಲಿ, ಸದರಿ ಅಧಿಕಾರಿಗಳ ವಿರುದ್ಧ ಕೈಗೊಂಡ ಸೂಕ್ತ ಕ್ರಮಗಳ್ಯಾವುವು? (ಪೂರ್ಣ ಮಾಹಿತಿ ಒದಗಿಸುವುದು) | ಕಳೆದ ಎರಡು ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ವಿಫಲರಾಗಿರುವ 05 ಸಂಖ್ಯೆಯ ಅಧಿಕಾರಿಗಳ ವಿರುದ್ಧ ವಿಚಾರಣೆಯನ್ನು ಕೈಗೊಳ್ಳಲು ಮಾನ್ಯ ಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-02** ರಲ್ಲಿ ಒದಗಿಸಿದೆ. |

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) (ಶ್ರೀ ಕೆ.ಅಬ್ದುಲ್ ಜಬ್ಬರ್ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ರಾಜ್ಯದ ಹಲವು ಭಾಗಗಳಲ್ಲಿ ಸರ್ಕಾರಿ ಜಾಗದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲವೆಂದು ಹೇಳಿದ್ದಾರೆ. ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದು daylight robbery ಇದ್ದಹಾಗೆ. ರಾಜ್ಯದ ಎಲ್ಲಾ ಭಾಗಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅದು ಕರಾವಳಿ ಭಾಗದಲ್ಲೂ ಕೂಡ ಆಗುತ್ತಿದೆ, ಬೇರೆ ಬೇರೆ ಭಾಗಗಳಲ್ಲೂ ಕೂಡ ನಡೆಯುತ್ತಿದೆ. ಆದರೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ದಾಖಲಾಗಿಲ್ಲವೆಂದು ಹೇಳಿದ್ದಾರೆ. ಮತ್ತೆ ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಉಪಖನಿಜಗಳ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳನ್ನು ದಾಖಲು ಮಾಡಿದ್ದೇವೆಂದು ಹೇಳಿದ್ದಾರೆ. ಆ ಪ್ರಕರಣಗಳು logical end ಎಂದು ಪ್ರಶ್ನೆ ಕೇಳಿದ್ದರೆ ಅದಕ್ಕೂ ಕೂಡ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಅದೇ ರೀತಿ ಸದರಿ ಗಣಿಗಾರಿಕೆ ನಡೆಸಲು ಬಳಸುತ್ತಿರುವ ಲಾರಿಗಳು ಪರ್ಮಿಟ್ ಇಲ್ಲದೇ ಚಲಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಂತಹ ಲಾರಿ ಮಾಲೀಕರು ಮತ್ತು ಚಾಲಕರ ವಿರುದ್ಧ ಕೈಗೊಂಡ ಕ್ರಮಗಳಾವುವು ಎಂದು ಪ್ರಶ್ನೆ ಕೇಳಿದ್ದಾರೆ. ಅವರ ಮೇಲೆ ಸಾಕಷ್ಟು ಕೇಸ್‌ಗಳನ್ನು ದಾಖಲು ಮಾಡಿರುವುದಕ್ಕೆ ಉದಾಹರಣೆಯನ್ನು ಕೊಟ್ಟಿದ್ದಾರೆ. ಆದರೆ ಅವರಿಂದ ದಂಡ

ವಸೂಲಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಅಕ್ರಮ ಗಣಿಗಾರಿಕೆ ಮಾಡುವುದು ತಪ್ಪು. ಅವರು ಅದನ್ನು ಎಲ್ಲಿಂದ ತರುತ್ತಿದ್ದಾರೆ ಎಂಬುದರ ಬಗ್ಗೆ investigation ಮಾಡುತ್ತಿಲ್ಲ. ಅದರ ಮೇಲೆ ಅವರನ್ನು ಬಂಧಿಸಿದ್ದಾರೆ. Seize ಮಾಡಿದ್ದಾರೆ ಮತ್ತು ದಂಡ ವಸೂಲಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಸರ್ಕಾರ ಅವರಿಂದ ಬರೀ ದಂಡ ವಸೂಲಿ ಮಾಡಿದರೆ ಅಕ್ರಮ ಗಣಿಗಾರಿಕೆ ನಡೆಸುವುದನ್ನು ಹೇಗೆ ತಡೆಯುವುದಕ್ಕೆ ಸಾಧ್ಯ ಎಂದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ನಾವು ಸರ್ಕಾರದ ಭಾಗದಲ್ಲಿ ಇರತಕ್ಕಂಥವರು. ಅಕ್ರಮ ಗಣಿಗಾರಿಕೆಯನ್ನು ತಡೆಯದಿದ್ದರೆ ಇಂತಹ ಗಣಿಗಾರಿಕೆಯಿಂದಾಗಿ ಕಳ್ಳರಿಂದ ಸರ್ಕಾರಿ ಜಾಗವೇ ಇಲ್ಲದಂತಾಗುತ್ತದೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ’ಸೋಜಾ ರವರೇ, ಇದು ಮಾನ್ಯ ಕೆ.ಅಬ್ದುಲ್ ಜಬ್ಬರ್ ರವರ ಪ್ರಶ್ನೆ ಅಲ್ಲ, ನಿಮ್ಮ ಪ್ರಶ್ನೆ ಎಂದು ಹೇಳಿ.

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಸಭಾಪತಿಯವರೇ, ಹಾಗಾಗಿ, ನಾನು ಈ ಪ್ರಶ್ನೆಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಅಲ್ಲದೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ “ ಕಳೆದ 2 ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ವಿಫಲರಾಗಿರುವ 5 ಅಧಿಕಾರಿಗಳ ವಿರುದ್ಧ ವಿಚಾರಣೆಯನ್ನು ಕೈಗೊಳ್ಳಲು ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿರುತ್ತದೆ” ಎಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಅವರಿಂದ ಯಾವುದೇ ಫಲಿತಾಂಶ ಬಂದಿಲ್ಲ. ಬಹುಶಃ ಆ ಅಧಿಕಾರಿಗಳು ನಿವೃತ್ತಿಯಾಗಿದ್ದಾರೋ ಅಥವಾ ಇನ್ನೇನಾಗಿದ್ದಾರೋ ಗೊತ್ತಿಲ್ಲ. ಆದರೆ, ಇದರ ಬಗ್ಗೆ ಶೀಘ್ರವಾಗಿ ತನಿಖೆ ಮಾಡಲು ಸರ್ಕಾರದ ಮುಂದೆ ಯಾವ ಆಲೋಚನೆ ಇದೆ ಎಂದು ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಕಳೆದ ಎರಡು ವರ್ಷಗಳಲ್ಲಿ ಈಗಾಗಲೇ ನಾಲ್ಕನೇ ಬಾರಿ ಇದೇ ಪ್ರಶ್ನೆ ಬರುತ್ತಿದೆ. ಇದಕ್ಕೆ ಉತ್ತರ ಕೊಡುತ್ತಿದ್ದೇವೆ.

**ಸಭಾಪತಿಯವರು:-** ಅಂದರೆ ನಿಮಗೂ ಕೆಲಸ ಇಲ್ಲ, ಅವರಿಗೂ ಕೆಲಸ ಇಲ್ಲ ಆ ರೀತಿ ಆಗಿದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಹೌದು. ಆ ರೀತಿ ಆಗಿದೆ.

**ಸಭಾಪತಿಯವರು:-** ಶ್ರೀ ಐವನ್ ಡಿ’ಸೋಜಾ ರವರೇ, ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೋ ಅದನ್ನು ನೋಡಿಕೊಂಡುಬಿಡಿ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ನೀವಿಬ್ಬರೂ ದಾವಣಗೆರೆಯವರು, ಪ್ರೀತಿ ಜಾಸ್ತಿ ಅದಕ್ಕಾಗಿ ಪ್ರಶ್ನೆ ಕೇಳಿದ್ದಾರೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಏನೆಂದು ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಮಾನ್ಯ ಸದಸ್ಯರ ಪರವಾಗಿ ಇವರು ಪ್ರಶ್ನೆ ಕೇಳುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಅಬ್ದುಲ್ ಜಬ್ಬರ್ ಹಾಗೂ ನಾನು

ಕೂಡ ದಾವಣಗೆರೆಯವರು. ರಾಜಕೀಯವಾಗಿ ಗಣಿಗಾರಿಕೆಯಲ್ಲಿ involve ಆಗದಿದ್ದರೆ, ಅಧಿಕಾರಿಗಳ ಮೇಲೆ ಅದನ್ನು ಬಿಟ್ಟರೆ ಎಲ್ಲಾ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತದೆ.

**Mr.Chairman:-** correct.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ರಾಜಕಾರಣಿಗಳು ಇದರಲ್ಲಿ interfere ಆದಾಗ ಮಾತ್ರ ಈ ರೀತಿ ಆಗುವುದು. ಈಗ ಉಡುಪಿ ಮತ್ತು ಮಂಗಳೂರು ಕ್ಷೇತ್ರದಲ್ಲಿ ಬಹಳ ಚೆನ್ನಾಗಿ ಬಿಗಿಯಾಗಿ ನಡೆಯುತ್ತಿದೆ. ಆ ರೀತಿ ನಡೆದರೆ ಸರ್ಕಾರಕ್ಕೆ revenue ಕೂಡ ಬರುತ್ತದೆ. ಅಧಿಕಾರಿಗಳು ಎಚ್ಚೆತ್ತುಕೊಂಡು ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಉಡುಪಿ ಮತ್ತು ಮಂಗಳೂರು ಕ್ಷೇತ್ರದಲ್ಲಿ ಒಳ್ಳೆಯ ರೀತಿಯಲ್ಲಿ ನಡೆಯುತ್ತಿರುವುದನ್ನು ತಾವು ಕೂಡ ನೋಡುತ್ತಿದ್ದೀರಿ. ಅಲ್ಲಿ ಯಾವುದೇ complaint ಇಲ್ಲ. ಒಳ್ಳೆಯ ರೀತಿಯಿಂದ ಸರ್ಕಾರಕ್ಕೆ ವರಮಾನ ಕೂಡ ಬರುತ್ತಿದೆ. ಮುಖ್ಯವಾಗಿ One Time Settlement ಕೂಡ ಮಾಡುತ್ತಿದ್ದೇವೆ. ಅದು ಒಂದು ಬಂದರೆ ನಮಗೆ ಮುಂಚೆ ನಡೆದಂತಹ ಎಲ್ಲಾ ದೋಷಗಳು ಪರಿಹಾರವಾಗುತ್ತದೆ ಎಂದು ನನ್ನ ಭಾವನೆ.

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 56
ಮಾನ್ಯ ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 04-03-2025
ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ನಗರಸಭೆಗೆ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ಸ್ವಚ್ಛ ಭಾರತ್ ಮಿಷನ್-1.10 ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಂದಿದೆ; ಈ ಅನುದಾನವನ್ನು ಯಾವ ಯಾವ ಕಾಮಗಾರಿಗೆ ಮತ್ತು ಖರೀದಿಗಳಿಗೆ ಬಳಸಿಕೊಳ್ಳಲಾಗಿದೆ; | ಸ್ವಚ್ಛ ಭಾರತ್ ಮಿಷನ್ (ನಗರ)-1.0 ಯೋಜನೆಯಡಿಯಲ್ಲಿ ಕೋಲಾರ ನಗರಸಭೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರೂ. 595.66 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ. (ರೂ. ಲಕ್ಷಗಳಲ್ಲಿ) |

| ಕ್ರ. ಸಂ. | ವರ್ಷ | ಬಿಡುಗಡೆಯಾಗಿರುವ ಒಟ್ಟು ಮೊತ್ತ |
|---|---|---|
| 1 | 2021-22 | 0.00 |
| 2 | 2022-23 | 595.66 |
| 3 | 2023-24 | 0.00 |
| | **ಒಟ್ಟು** | **595.66** |

ಅನುದಾನ ಬಳಸಿಕೊಂಡಿರುವ ಕಾಮಗಾರಿಗಳ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಇ.ವಿ. ಚಾರ್ಜಿಂಗ್ ಪಾಯಿಂಟ್, ಸಿ.ಸಿ.ಟಿ.ವಿ. ಕ್ಯಾಮರಾ ಸೇರಿದಂತೆ ಖರೀದಿಸಿರುವುದರಲ್ಲಿ ಸುಮಾರು ರೂ. 2.4 ಕೋಟಿಗೂ ಅಧಿಕ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ರೂ. 2.40 ಕೋಟಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ; (ರೂ. ಲಕ್ಷಗಳಲ್ಲಿ) |

| ಕ್ರ. ಸಂ. | ವಾಹನ / ಯಂತ್ರೋಪಕರಣಗಳ ವಿವರ | ಪ್ರಮಾಣ | ಅಂದಾಜು ಮೊತ್ತ |
|---|---|---|---|
| 1 | ವಿದ್ಯುತ್ ಮಿನಿ ಟಿಪ್ಪರ್ | 6 | 98.00 |
| 2 | ಟ್ರ್ಯಾಕ್ಟರ್ ಇಂಜಿನ್ | 2 | 20.00 |
| 3 | ಪುಷ್ ಕಾರ್ಟ್ | 15 | 5.50 |
| 4 | ವೀಲ್ ಬ್ಯಾರೋ | 12 | 3.0 |
| 5 | ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ | 1 | 48.00 |
| 6 | ಕಾಂಪ್ಯಾಕ್ಟರ್ | 1 | 51.00 |
| 7 | ಸಿ.ಸಿ. ಕ್ಯಾಮೆರಾಗಳು | 6 | 6.50 |
| 8 | ಇ.ವಿ. ವಾಹನಗಳ ಚಾರ್ಜಿಂಗ್ ಪಾಯಿಂಟ್ | 2 | 8.00 |
| | **Total** | **45** | **240.00** |

ಮೇಲ್ಕಂಡ ಕ್ರ.ಸಂ. (1) ರಿಂದ (7) ರವರೆಗಿನ ಘಟಕಗಳನ್ನು ನಿಯಮಾನುಸಾರ ದರಗಳ ಅನುಮೋದನೆ ಪಡೆದು ಅಂದಾಜುಪಟ್ಟಿ ತಯಾರಿಸಿ ನಿಯಮಾನುಸಾರ GeM ಪೋರ್ಟಲ್‌ನಲ್ಲಿ (Government

| | | |
|---|---|---|
| | | e-Marketplace) ಖರೀದಿಸಿರುತ್ತಾರೆ.<br><br>ಆದರೆ ಕ್ರ.ಸಂ. (8)ರ ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಪಾಯಿಂಟ್‌ಗೆ (Charging point for EV Vehicles) ಎಸ್.ಆರ್. ದರಗಳು ಲಭ್ಯವಿಲ್ಲದಿರುವುದರಿಂದ ಕೊಟೇಷನ್ ದರಗಳನ್ನು ಪಡೆದು ಸಕ್ಷಮ ಪ್ರಾಧಿಕಾರದಿಂದ ದರಗಳಿಗೆ ಅನುಮೋದನೆ ಪಡೆದು, ಅದರಂತೆ ಅಂದಾಜುಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಕರೆಯಬೇಕಿರುತ್ತದೆ.<br><br>ಆದರೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರು ನೇರವಾಗಿ ಪ್ಯಾಕೇಜ್ ನಲ್ಲಿಯೇ ಇ.ವಿ. ಚಾರ್ಜಿಂಗ್ ಪಾಯಿಂಟ್ ಅನ್ನು ನಮೂದಿಸಿ ಟೆಂಡರ್ ಕರೆದಿರುವ ಬಗ್ಗೆ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆರವರು ಸದರಿಯವರನ್ನು ಅಮಾನತುಗೊಳಿಸುವಂತೆ ಶಿಫಾರಸ್ಸು ಮಾಡಿ ದಿನಾಂಕ: 22-10-2024 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಈ ಮೇರೆಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು, ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ನಗರಸಭೆ ಕೋಲಾರರವರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿಸಿಎ) 1957ರ ನಿಯಮ 10(1)ರಡಿ ಸೇವೆಯಿಂದ ಅಮಾನತ್ತುಗೊಳಿಸಲು, ಸರ್ಕಾರಕ್ಕೆ ದಿನಾಂಕ: 02.12.2024 ರಂದು ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 84 ಬಿಎಂಎಸ್ 2024 (ಇ), ದಿನಾಂಕ: 09-12-2024 ರಂತೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |

| | | |
|---|---|---|
| | | e-Marketplace) ಖರೀದಿಸಿರುತ್ತಾರೆ.<br><br>ಆದರೆ ಕ್ರ.ಸಂ. (8)ರ ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಪಾಯಿಂಟ್‌ಗೆ (Charging point for EV Vehicles) ಎಸ್.ಆರ್. ದರಗಳು ಲಭ್ಯವಿಲ್ಲದಿರುವುದರಿಂದ ಕೊಟೇಷನ್ ದರಗಳನ್ನು ಪಡೆದು ಸಕ್ಷಮ ಪ್ರಾಧಿಕಾರದಿಂದ ದರಗಳಿಗೆ ಅನುಮೋದನೆ ಪಡೆದು, ಅದರಂತೆ ಅಂದಾಜುಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಕರೆಯಬೇಕಿರುತ್ತದೆ.<br><br>ಆದರೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರು ನೇರವಾಗಿ ಪ್ಯಾಕೇಜ್ ನಲ್ಲಿಯೇ ಇ.ವಿ. ಚಾರ್ಜಿಂಗ್ ಪಾಯಿಂಟ್ ಅನ್ನು ನಮೂದಿಸಿ ಟೆಂಡರ್ ಕರೆದಿರುವ ಬಗ್ಗೆ, ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆರವರು ಸದರಿಯವರನ್ನು ಅಮಾನತುಗೊಳಿಸುವಂತೆ ಶಿಫಾರಸ್ಸು ಮಾಡಿ ದಿನಾಂಕ: 22-10-2024 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಈ ಮೇರೆಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು, ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ನಗರಸಭೆ ಕೋಲಾರರವರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿಸಿಎ) 1957ರ ನಿಯಮ 10(1)ರಡಿ ಸೇವೆಯಿಂದ ಅಮಾನತ್ತುಗೊಳಿಸಲು, ಸರ್ಕಾರಕ್ಕೆ ದಿನಾಂಕ: 02.12.2024 ರಂದು ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 84 ಬಿಎಂಎಸ್ 2024 (ಇ), ದಿನಾಂಕ: 09-12-2024 ರಂತೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |

| | | |
|---|---|---|
| ಇ) | ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಇದುವರೆಗೂ ಖರೀದಿ ಮಾಡಲಾಗಿರುವ ಪರಿಕರಗಳು ಯಾವುವು; ಹಾಗೂ ಖರೀದಿ ಮಾಡುವ ಸಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ: | ಸ್ವಚ್ಛ ಭಾರತ ಮಿಷನ್ (ನ) – 1.0 ಯೋಜನೆಯಡಿಯಲ್ಲಿ ಖರೀದಿ ಮಾಡಲಾಗಿರುವ ಪರಿಕರಗಳ ವಿವರ ಈ ಕೆಳಕಂಡಂತಿದೆ.<br>1. 06 ಸಂಖ್ಯೆಯ ವಿದ್ಯುತ್ ಚಾಲಿತ ಮಿನಿ ಟಿಪ್ಪರ್‌ಗಳು.<br>2. 02 ಸಂಖ್ಯೆಯ ಟ್ರ್ಯಾಕ್ಟರ್ ಇಂಜಿನ್‌ಗಳು.<br>3. ತಳ್ಳುಗಾಡಿ (Push Cart) ಗಳು.<br>4. ವೀಲ್ ಬ್ಯಾರೋಗಳು.<br>5. ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ ವಾಹನ.<br>6. ಕಾಂಪ್ಯಾಕ್ಟರ್ ವಾಹನ.<br>7. ಸಿ.ಸಿ. ಕ್ಯಾಮೆರಾಗಳು.<br>8. ವಿದ್ಯುತ್ ಚಾಲಿತ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್.<br>ಮೇಲ್ಕಂಡ ಪರಿಕರಗಳನ್ನು ಕೆ.ಟಿ.ಪಿ.ಪಿ. ನಿಯಮಾವಳಿಗಳ ರೀತ್ಯಾ GeM Portal (Government e-Marketplace) ನಲ್ಲಿ ಖರೀದಿ ಮಾಡಲಾಗಿರುತ್ತದೆ. |
| ಈ) | ಪರಿಕರಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿತ್ತೆ; ಹಾಗಿದ್ದಲ್ಲಿ, ಟೆಂಡರ್ ನಲ್ಲಿ ಭಾಗವಹಿಸಿದ ಗುತ್ತಿಗೆದಾರರೂ ಯಾರ್ಯಾರು? (ಸಂಪೂರ್ಣ ಮಾಹಿತಿ ಒದಗಿಸುವುದು) | ಸದರಿ ಪರಿಕರಗಳನ್ನು ಸರಬರಾಜು ಮಾಡಲು ಜೆಮ್ (GeM) ಪೋರ್ಟಲ್ ನಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿರುತ್ತದೆ. |

| ಕ್ರ. ಸಂ. | ಪರಿಕರಗಳು | ಭಾಗವಹಿಸಿರುವ ಗುತ್ತಿಗೆದಾರರು |
|---|---|---|
| ಪ್ಯಾಕೇಜ್ - 1 | 1. ಟ್ರ್ಯಾಕ್ಟರ್ ಇಂಜಿನ್‌ಗಳು.<br>2. Front End with Back Hoe Loader<br>3. ಕಾಂಪ್ಯಾಕ್ಟರ್ ವಾಹನ,<br>4. ಸಿ.ಸಿ. ಕ್ಯಾಮೆರಾಗಳು,<br>5. charging point for EV vehicles | 1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲ್ಯೂಷನ್ಸ್. |
| ಪ್ಯಾಕೇಜ್ -2 | 1. ವಿದ್ಯುತ್ ಚಾಲಿತ ಮಿನಿ ಟಿಪ್ಪರ್ ವಾಹನ,<br>2. ತಳ್ಳುಗಾಡಿಗಳು<br>3. ವೀಲ್ ಬ್ಯಾರೋಗಳು | 1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲೂಷನ್ಸ್. |

ಅನುಬಂಧ-1

(ರೂ. ಲಕ್ಷಗಳಲ್ಲಿ)

| ಕಾಮಗಾರಿಯ ವಿವರ | ವೆಚ್ಚ ಮಾಡಲಾದ ಮೊತ್ತ |
|---|---|
| ಲ್ಯಾಂಡ್‌ಫಿಲ್ ಸೈಟ್‌ನ ಸಮಗ್ರ ಅಭಿವೃದ್ಧಿ | 475.22 |
| EV ವಾಹನಗಳಿಗೆ 2 ಸಂಖ್ಯೆಯ ಚಾರ್ಜಿಂಗ್ ಪಾಯಿಂಟ್‌ಗಳನ್ನು ಖರೀದಿಸುವುದು | 8.00 |
| 15 ಸಂಖ್ಯೆಯ ಪುಷ್‌ಕಾರ್ಟ್‌ಗಳನ್ನು ಖರೀದಿಸುವುದು. | 5.46 |
| 12 ಸಂಖ್ಯೆಯ ವೀಲ್ ಬ್ಯಾರೋಗಳನ್ನು ಖರೀದಿಸುವುದು | 2.96 |
| 1 ಸಂಖ್ಯೆಯ ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ ಅನ್ನುಖರೀದಿಸುವುದು | 47.27 |
| 1 ಸಂಖ್ಯೆಯ ಕಾಂಪ್ಯಾಕ್ಟರ್ ನ್ನುಖರೀದಿಸುವುದು | 47.67 |
| 6 ಸಂಖ್ಯೆಯ ಸಿ.ಸಿ. ಕ್ಯಾಮೆರಾಗಳನ್ನು ಖರೀದಿಸುವುದು | 6.49 |
| **ಒಟ್ಟು** | **593.07** |

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೋಲಾರ ನಗರ ಸಭೆಗೆ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ಸ್ವಚ್ಛ ಭಾರತ್ ಮಿಷನ್-1.10 ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಂದಿದೆ, ಆ ಹಣದಲ್ಲಿ ಅವ್ಯವಹಾರ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆನು. ಅದಲ್ಲದೇ ಸುಮಾರು ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರೂ.595.66 ಲಕ್ಷ ಹಣ ಬಂದಿರತಕ್ಕಂಥದ್ದಲ್ಲಿ ಸುಮಾರು ರೂ.240 ಲಕ್ಷಗಳಿಗೂ ಅಧಿಕ ವ್ಯವಹಾರ ಆಗಿದೆ ಎಂಬುದನ್ನು ನಾನು ಕೇಳಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ಅದರಲ್ಲಿ 6 ವಿದ್ಯುತ್ ಮಿನಿ ಟಿಪ್ಪರ್ ರೂ.98.00 ಲಕ್ಷ ಪೇಮೆಂಟ್ ಮಾಡಿದ್ದಾರೆ. ಅಂದರೆ ಟಾಟ ಏಸ್ ಒಂದು ಗಾಡಿಗೆ ಸುಮಾರು ರೂ.10 ಲಕ್ಷ ಪೇಮೆಂಟ್ ಮಾಡಿದ್ದಾರೆ. ಅದರಲ್ಲಿ ರೂ. 16.33 ಲಕ್ಷಗಳು ಪೇ ಮಾಡಿದ್ದಾರೆ. ಆದರೆ ಅದರ ಬೆಲೆ ಸುಮಾರು ರೂ.10 ಲಕ್ಷ ಇರುತ್ತದೆ. ಅದೇ ರೀತಿ 2 ಟ್ರಾಕ್ಟರ್ ಇಂಜಿನ್‌ಗೆ ಇವರು ರೂ. 20 ಲಕ್ಷ ಪೇ ಮಾಡಿದಾರೆ. ಮಾನ್ಯ ಸಭಾಪತಿಯವರೇ, ಆ ಇಂಜಿನ್ ಬೆಲೆ ಎಷ್ಟೆಂದು ತಮಗೂ ಕೂಡ ಗೊತ್ತಿದೆ. ನಾವು ಬರೀ ಇಂಜಿನ್ ಖರೀದಿಸಿದರೆ ಅದರ ಬೆಲೆ ಕೇವಲ ರೂ.5,50,000ಗಳು ಮಾತ್ರ ಇರುತ್ತದೆ.

(ಮುಂದು)

(22)4.3.2025/12.30/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದರಾಜು (ಮುಂದು):-**

ಇವರು 10 ಲಕ್ಷ ರೂಪಾಯಿಗಳನ್ನು ಪೇಮೆಂಟ್ ಮಾಡಿದ್ದಾರೆ. ಅಂದರೆ ಇದರಲ್ಲಿ ಶೇ.50ಕ್ಕಿಂತಲೂ ಹೆಚ್ಚು ಅವ್ಯವಹಾರವಾಗಿದೆ. ಅದೇ ರೀತಿ ತಳ್ಳುಗಾಡಿಗಳಿಗೆ ರೂ. 36,000/- ಕೊಟ್ಟಿದ್ದಾರೆ. ಆದರೆ ಅದರ ಮಾರುಕಟ್ಟೆ ಬೆಲೆ ರೂ.10,000/-ಕ್ಕಿಂತಲೂ ಕಡಿಮೆ ಇದೆ. ಇದೇ ರೀತಿ ವೀಲ್ ಬ್ಯಾರೋ, ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ, ಕಾಂಪ್ಯಾಕ್ಟರ್‌ಗಳಿಗೆ ಅದೇರೀತಿ ಮಾಡಿದ್ದಾರೆ. ಒಂದು ಸಿ.ಸಿ. ಕ್ಯಾಮೆರಾಗೆ ರೂ. 01,08,000/- ಪೇ ಮಾಡಿದ್ದಾರೆ. ಅದು ರೂ. 10,000/- ಬೆಲೆ ಬಾಳುವುದಿಲ್ಲ. ಅಂದರೆ ಸುಮಾರು 900/- ರೂಪಾಯಿಗಳಷ್ಟು ಇದರಲ್ಲಿ ಅವ್ಯವಹಾರ ಮಾಡಿದ್ದಾರೆ. ಒಟ್ಟಾರೆಯಾಗಿ ಇದರಲ್ಲಿ ಬಹಳ ಅವ್ಯವಹಾರಗಳಾಗಿದೆ. ಇದರ ಬಗ್ಗೆ ನಡೆದ ವಿಚಾರಣೆಯಲ್ಲಿ ಅವ್ಯವಹಾರ ಸಾಬೀತಾಗಿ ಶ್ರೀ ಪ್ರವೀಣ್ ಎಂಬ ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದ್ದಾರೆ. ಈ ಹಗರಣದಲ್ಲಿ ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅವ್ಯವಹಾರವಾಗಿರುವ ಹಣವನ್ನು ವಾಪಸ್ ಪಡೆದಿಲ್ಲ. ಅಲ್ಲದೇ Mines and Geology department ಅವರು land filling ನಲ್ಲಿ ಬಂಡೆಯನ್ನು ಒಡೆದು ಏನು ಹಳ್ಳ ಮಾಡಿದ್ದರು, ಆ ಹಳ್ಳ ಮಾಡಿದ ಜಾಗದಲ್ಲಿ land refill ಮಾಡಿ ಕಸ ವಿಲೇವಾರಿ ಮಾಡುವುದಕ್ಕೆ ಆ ಜಾಗವನ್ನು ಕೊಟ್ಟಿದ್ದರು. ಇದಕ್ಕೆ ರೂ. 04,75,22,000/- ಬಿಲ್ ಡ್ರಾ ಮಾಡಿದ್ದಾರೆ. ಬರೀ land refill ಗೆ ಇಷ್ಟು ಹಣವನ್ನು ಡ್ರಾ ಮಾಡಿದ್ದರೆ ಇದರಲ್ಲಿ ಎಷ್ಟು ಅವ್ಯವಹಾರವಾಗಿದೆ ಎಂಬುದನ್ನು ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಬೇಕು. ಇದರ ತನಿಖೆಯನ್ನು ಯಾವಾಗ ಪೂರ್ಣಗೊಳಿಸುತ್ತಾರೆ? ಅವ್ಯವಹಾರದಲ್ಲಿ ಭಾಗಿಯಾದಂಥವರ ಮೇಲೆ ಯಾವಾಗ ಕ್ರಮ ತೆಗೆದುಕೊಳ್ಳುತ್ತಾರೆ? ಈ ಅವ್ಯವಹಾರದ ಹಣವನ್ನು ಯಾವಾಗ ವಸೂಲಿ ಮಾಡುತ್ತಾರೆ ಎಂಬುದಕ್ಕೆ ಸ್ಪಷ್ಟೀಕರಣ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)**:- ಮಾನ್ಯ ಸಭಾಪತಿಯವರೇ, ಶ್ರೀ ಗೋವಿಂದರಾಜುರವರು ಕೇಳಿರುವ ಪ್ರಶ್ನೆಯಲ್ಲಿ ಸ್ವಲ್ಪ irregularities ಆಗಿದೆ. ಸರ್ಕಾರ ಈಗಾಗಲೇ ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದೆ. ಈಗ ಒಂದು ತಿಂಗಳನೊಳಗೆ ಅದರ ತನಿಖೆಯನ್ನು ಮಾಡಿಸಿ ವರದಿ ತರಿಸಿಕೊಂಡು ತಕ್ಷಣವೇ ರಿಕವರಿ ಮಾಡುತ್ತೇವೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು ಮೂರು ವರ್ಷಗಳಾಗಿದೆ. ಈ ಹಣ ಯಾರ್ಯಾರ ಕೈ ಬದಲಾವಣೆಯಾಗಿದೆಯೋ ಗೊತ್ತಿಲ್ಲ. 'ಸ್ವಚ್ಛ ಭಾರತ್ ಮಿಷನ್' ಪ್ರಧಾನ ಮಂತ್ರಿಗಳ ಬಹಳ ಅಚ್ಚು ಮೆಚ್ಚಿನ ಕಾರ್ಯಕ್ರಮವಾಗಿದೆ. ಇದರ ಉದ್ದೇಶವೇನೆಂದರೆ, ನಗರವನ್ನು ಸ್ವಚ್ಛವಾಗಿಡಲು ಇ.ವಿ. ವಾಹನಗಳನ್ನು ಖರೀದಿ ಮಾಡಿದ್ದು ಇಲ್ಲಿಯವರೆಗೂ ಅದನ್ನು ಬಳಕೆ ಮಾಡದೇ ಶೆಡ್‌ನಲ್ಲಿ ನಿಲ್ಲಿಸಿಕೊಂಡಿದ್ದಾರೆ. ಅದರಲ್ಲಿ ಅವ್ಯವಹಾರವಾಗಿದೆ. ಅವ್ಯವಹಾರ ತನಿಖೆಯಾಗುವವರೆಗೂ ಯಾವುದೇ ವಾಹನಗಳನ್ನು ಬಳಕೆ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ನೀವು ತನಿಖೆಯನ್ನು ಪೂರ್ತಿ ಮಾಡಿದರೆ ಖರೀದಿ ಮಾಡಿರುವ

ವಾಹನಗಳಿರಬಹುದು, ಎಲ್ಲಾ ಉಪಕರಣಗಳೂ ಗೋಡೌನ್‌ನಲ್ಲಿ ಬಿದ್ದಿವೆ. ಸುಮಾರು 5½ ಕೋಟಿ ರೂಪಾಯಿಗಳಷ್ಟು ಸರ್ಕಾರದ ಹಣ ಇದರಲ್ಲಿ ದುರುಪಯೋಗವಾಗಿದೆ. ಒಂದು ತಿಂಗಳು ಸಮಯವನ್ನು ತೆಗೆದುಕೊಂಡಿದ್ದಾರೆ. ಆ ಒಂದು ತಿಂಗಳಿನಲ್ಲಿ ವಿಚಾರಣೆ ಮಾಡಿ ನಮಗೆ ಮಾಹಿತಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಕೊಡುತ್ತೇನೆ.

**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 10
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 04.03.2025
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೇತ್ರಾವತಿ ನದಿ ಸೇರಿದಂತೆ ಇತರ ನದಿಗಳ ನೀರು ಕಲುಷಿತಗೊಂಡಿದೆ ಎಂಬ ವರದಿ ಪ್ರಕಟವಾಗಿದ್ದು, ಈ ನೀರನ್ನು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯಲು ಬಳಸುವುದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಲು ಇಲಾಖೆ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕುಡಿಯುವ ನೀರನ್ನು ನೇತ್ರಾವತಿ ನದಿಗೆ ಬಂಟ್ವಾಳ ಗ್ರಾಮದ ತುಂಬೆ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಿಸಿ, ನೀರನ್ನು ಮೇಲೆತ್ತಲಾಗುತ್ತಿದೆ. ಇಲ್ಲಿಂದ ನೀರನ್ನು ಪೂರ್ಣ ಪ್ರಮಾಣದಲ್ಲಿ ಶುದ್ಧೀಕರಿಸಿ, ವಿತರಣಾ ಜಾಲದ ಮೂಲಕ ಸಾರ್ವಜನಿಕರಿಗೆ ಪೂರೈಕೆ ಮಾಡಲಾಗುತ್ತಿದೆ. ಶುದ್ಧೀಕರಣ ಸಮಯದಲ್ಲಿ ನೀರಿನ PH, Turbidity ಮತ್ತು ಇತರೆ ಅಗತ್ಯ ಗುಣಮಟ್ಟಗಳನ್ನು ಪರೀಕ್ಷಿಸಲಾಗುತ್ತಿದೆ. ಪ್ರತಿ ತಿಂಗಳು ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಹಾಗೂ ಪ್ರಮುಖ ಪಂಪ್ ಹೌಸ್‌ಗಳಲ್ಲಿ ಬಯೋಲಾಜಿಕಲ್ ಟೆಸ್ಟ್‌ಗಳನ್ನು ಮಾಡಲಾಗುತ್ತಿದ್ದು, ಕುಡಿಯುವ ನೀರಿನಿಂದಾಗಿ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಅಥವಾ ಆರೋಗ್ಯ ಇಲಾಖೆಯಿಂದ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಆ) | ಮಂಗಳೂರು ಮಹಾನಗರಕ್ಕೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಶುದ್ಧಿಕರಿಸದೇ ಗ್ರಾಹಕರಿಗೆ ವಿತರಿಸುತ್ತಿರುವ ಬಗ್ಗೆ ವರದಿಗಳಿದ್ದು, ಇದನ್ನು ಪರೀಕ್ಷಿಸಿದಾಗ ಕುಡಿಯಲು ನೀರು ಯೋಗ್ಯವಲ್ಲ ಎಂದು ವರದಿ ಬಂದಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆಯಿಂದ ಸಾರ್ವಜನಿಕರಿಗೆ ಪೂರೈಸಲಾಗುತ್ತಿರುವ ಕುಡಿಯುವ ನೀರನ್ನು ಕಾಲಕಾಲಕ್ಕೆ ಪರೀಕ್ಷೆಗೊಳಪಡಿಸಲಾಗುತ್ತಿದ್ದು, ಅದರಂತೆ ರೇಚಕ ಸ್ಥಾವರಗಳು ಮತ್ತು ಪಂಪ್ ಹೌಸ್‌ಗಳಿಂದ ನೀರಿನ ಮಾದರಿಗಳನ್ನು ಸಂಗ್ರಹಿಸಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯದಿಂದ ಅಂಗೀಕೃತವಾದ ಮೀನುಗಾರಿಕೆ ಕಾಲೇಜಿನ ಪ್ರಯೋಗಾಲಯದಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದು, ಪಾಲಿಕೆಯಿಂದ ಪೂರೈಕೆಯಾಗುತ್ತಿರುವ ನೀರು ಕುಡಿಯಲು ಯೋಗ್ಯವಾಗಿರುತ್ತದೆ ಎಂದು ಇತ್ತೀಚಿನ ವರದಿಯಲ್ಲಿ ದೃಢಪಟ್ಟಿರುತ್ತದೆ. ಸದರಿ ವರದಿಯ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಇ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 4 ಒಳಚರಂಡಿ ಘಟಕಗಳು STP ಗಳು ಸಂಪೂರ್ಣ ನಿಷ್ಕ್ರಿಯಗೊಂಡಿದ್ದು, ಒಳಚರಂಡಿ ನೀರು ಶುದ್ಧೀಕರಿಸದೇ ಸಾರ್ವಜನಿಕ ರಾಜಕಾಲುವೆಗಳಲ್ಲಿ ಹರಿಯುತ್ತಿರುವ ಮೂಲಕ ಭೂಮಿಯಲ್ಲಿ ಪ್ರಸರಿಸಿ ಪರಿಸರ | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ಜಾಲವನ್ನು ಶೇಕಡಾ 65% ರಷ್ಟು ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಉಳಿದ ಮನೆಗಳು ಇಂಗು ಗುಂಡಿಗಳನ್ನು ಅವಲಂಬಿಸಿರುತ್ತವೆ. ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 4 STP ಗಳು ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳು ಈ ಕೆಳಕಂಡಂತಿವೆ.<br><br>1. **ಕಾವೂರು STP:-** ಸದರಿ STP ಯ ಸಾಮರ್ಥ್ಯವು 43.5 MLD ಗಳಾಗಿದ್ದು, ಪ್ರಸ್ತುತ 25 ರಿಂದ 30 MLD ಗಳಷ್ಟು ಜಲತ್ಯಾಜ್ಯವು STP ಗೆ ಬರುತ್ತಿದೆ. ಸದರಿ STP ಯಲ್ಲಿ TTP ಯನ್ನು |

| | | |
|---|---|---|
| | ಭಾಗಗಳ ನೀರು ಕಲುಷಿತಗೊಂಡಿರುವ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; STP ನಿರ್ವಹಣೆಗೆ ವರ್ಷವಾರು ಖರ್ಚು ಮಾಡಿರುವ ಹಣ ಎಷ್ಟು? (ವಿವರ ನೀಡುವುದು) | ಅಳವಡಿಸಿದ್ದು, ಸಂಸ್ಕರಿಸಿ ಬಳಸಿದ ನೀರನ್ನು ಸಂಪೂರ್ಣವಾಗಿ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಸದರಿ STP ಹಾಗೂ ಸಂಬಂಧಿಸಿದ ವೆಟ್‌ವೆಲ್‌ಗಳನ್ನು ಮಹಾನಗರ ಪಾಲಿಕೆ ಹಾಗೂ MSEZ (30%:70% ಅನುಪಾತದಲ್ಲಿ) ನಿರ್ವಹಣೆ ಮಾಡಲಾಗುತ್ತಿದ್ದು, ಸದರಿ STP ಯ ವಾರ್ಷಿಕ ನಿರ್ವಹಣೆಗೆ ಒಟ್ಟಾರೆ ರೂ. 9,80,35,877.00 ಗಳು ವೆಚ್ಚವಾಗುತ್ತಿದ್ದು, ಅದರಲ್ಲಿ ಮಹಾನಗರ ಪಾಲಿಕೆ ವಂತಿಕೆ ರೂ.2,94,10,763.00 ಗಳಾಗಿರುತ್ತದೆ. ಸದರಿ ವಂತಿಕೆಯನ್ನು ಮಹಾನಗರ ಪಾಲಿಕೆಯ ನಿಧಿಯಡಿಯಲ್ಲಿ ಭರಿಸಲಾಗುತ್ತಿದೆ.<br>**2. ಪಚ್ಚನಾಡಿ STP:-** ಸದರಿ STP ಯ ಸಾಮರ್ಥ್ಯವು 8.75 MLD ಗಳಾಗಿದ್ದು ಪ್ರಸ್ತುತ 7.5 MLD ಗಳಷ್ಟು ಜಲ ತ್ಯಾಜ್ಯವು STP ಗೆ ಬರುತ್ತಿದೆ. STP ಯಲ್ಲಿ ಸಂಸ್ಕರಿಸಿದ ಶೇಕಡಾ 75ರಷ್ಟು ಬಳಸಿದ ನೀರನ್ನು ಪಿಲಿಕುಳ TTP ಯ ಮೂಲಕ ಪುನಃ ಸಂಸ್ಕರಿಸಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪಿಲಿಕುಳ ಗಾಲ್ಫ್ ಕ್ಲಬ್ ರವರಿಗೆ ಸರಬರಾಜು ಮಾಡಲಾಗುತ್ತಿದೆ. ಉಳಿದ ಶೇಕಡಾ 25ರಷ್ಟು ಸಂಸ್ಕರಿಸಿ ಬಳಸಿದ ನೀರನ್ನು ಮರವೂರು ಅಣೆಕಟ್ಟಿನ ಕೆಳಭಾಗಕ್ಕೆ ಪಂಪ್ ಮಾಡಲಾಗುತ್ತಿದೆ. ಮುಂದುವರೆದು, NGT ಅನುದಾನದಡಿಯಲ್ಲಿ ಸದರಿ STP ಯನ್ನು SBR ತಂತ್ರಜ್ಞಾನಕ್ಕೆ ಮೇಲ್ದರ್ಜೆಗೇರಿಸಲು ಅನುಮೋದನೆಯಾಗಿದ್ದು, ಪ್ರಸ್ತುತ ಟೆಂಡರ್ ಕರೆಯುವ ಹಂತದಲ್ಲಿದೆ. ಸದರಿ STP ಹಾಗೂ ಸಂಬಂಧಿಸಿದ ವೆಟ್ ವೆಲ್‌ಗಳ ವಾರ್ಷಿಕ ನಿರ್ವಹಣಾ ವೆಚ್ಚವು ರೂ.1,57,27,000.00 ಗಳಾಗಿದ್ದು, ಮಹಾನಗರ ಪಾಲಿಕೆಯ ನಿಧಿಯಡಿಯಲ್ಲಿ ಭರಿಸಲಾಗುತ್ತಿದೆ.<br>**3. ಬಜಾಲ್ STP:-** ಸದರಿ STP ಯ ಸಾಮರ್ಥ್ಯವು 20 MLD ಗಳಾಗಿದ್ದು ಪ್ರಸ್ತುತ 9 ರಿಂದ 10MLD ಗಳಷ್ಟು ಬಳಸಿದ ನೀರು STP ಗೆ ಬರುತ್ತಿದೆ. STP ಯಲ್ಲಿ ಸಂಸ್ಕರಿಸಿ ಬಳಸಿದ ನೀರನ್ನು ನೇತ್ರಾವತಿ ನದಿಗೆ ಬಿಡಲಾಗುತ್ತಿದೆ. NGT ಅನುದಾನದಡಿಯಲ್ಲಿ ಸದರಿ STP ಯನ್ನು ಮೇಲ್ದರ್ಜೆಗೇರಿಸಲು ಅನುಮೋದನೆಯಾಗಿದ್ದು, ಪ್ರಸ್ತುತ ಟೆಂಡರ್ ಕರೆಯುವ ಹಂತದಲ್ಲಿದೆ. ಸದರಿ STP ಹಾಗೂ ಸಂಬಂಧಿಸಿದ ವೆಟ್‌ವೆಲ್‌ಗಳ ವಾರ್ಷಿಕ ನಿರ್ವಹಣಾ ವೆಚ್ಚವು ರೂ.1,98,34,560.00 ಗಳಾಗಿದ್ದು, ಮಹಾನಗರ ಪಾಲಿಕೆಯ ನಿಧಿಯಡಿಯಲ್ಲಿ ಭರಿಸಲಾಗುತ್ತಿದೆ.<br>**4. ಸುರತ್ಕಲ್ STP:-** ಸದರಿ STP ಯ ಸಾಮರ್ಥ್ಯವು 16.5 MLD ಗಳಾಗಿದ್ದು ಪ್ರಸ್ತುತ 8 MLD ಗಳಷ್ಟು ಬಳಸಿದ ನೀರು STP ಗೆ ಬರುತ್ತಿದೆ. STP ಯಲ್ಲಿ ಸಂಸ್ಕರಿಸಿ ಬಳಸಿದ ನೀರನ್ನು ನಂದಿನಿ ನದಿಗೆ ಬಿಡಲಾಗುತ್ತಿದೆ. ಸದರಿ STP ಹಾಗೂ ಸಂಬಂಧಿಸಿದ ವೆಟ್ ವೆಲ್‌ಗಳಿಗೆ ವಾರ್ಷಿಕ ನಿರ್ವಹಣಾ ವೆಚ್ಚವು ರೂ.1,51,80,000.00 ಗಳಾಗಿದ್ದು, ಮಹಾನಗರ ಪಾಲಿಕೆಯ ನಿಧಿಯಡಿಯಲ್ಲಿ ಭರಿಸಲಾಗುತ್ತಿದೆ. |

| | | |
|---|---|---|
| | | ಮುಂದುವರೆದು, ಪಾಲಿಕೆ ವ್ಯಾಪ್ತಿಯಲ್ಲಿನ ಕುದ್ರೋಳಿ, ಪಾಂಡೇಶ್ವರ, ಕಡೇಕಾರ್, ಕೊಡಿಯಾಲ್‌ಗುತ್ತು ವೆಟ್‌ವೆಲ್‌ಗಳ ಎಲೆಕ್ಟ್ರೋಮೆಕ್ಯಾನಿಕಲ್ ಉಪಕರಣಗಳನ್ನು ಮೇಲ್ದರ್ಜೆಗೇರಿಸಲು ಸ್ಮಾರ್ಟ್ ಸಿಟಿ ಅನುದಾನದಡಿಯಲ್ಲಿ ಮಹಾನಗರ ಪಾಲಿಕೆ ವತಿಯಿಂದ ಟೆಂಡರ್ ಕರೆದಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.<br><br>ಮಂಗಳೂರು ಮಹಾನಗರ ಪಾಲಿಕೆಗೆ NGT ಅನುದಾನದಡಿಯಲ್ಲಿ ರೂ. 40.00 ಕೋಟಿಗಳು ಅನುಮೋದನೆಗೊಂಡಿದ್ದು, ಪಚ್ಚನಾಡಿ ಮತ್ತು ಬಜಾಲ್ ಸಂಸ್ಕರಣಾ ಘಟಕಗಳ ಮೇಲ್ದರ್ಜೆಗೇರಿಸುವ ಕಾಮಗಾರಿ, ಅತ್ತಾವರದಲ್ಲಿ ಹೊಸ ವೆಟ್‌ವೆಲ್ ನಿರ್ಮಾಣ ಮತ್ತು ಪಾಲಿಕೆಯ ವ್ಯಾಪ್ತಿಯಲ್ಲಿ ಹಾನಿಗೊಂಡ 8.5 ಕಿ.ಮೀ. ಹಳೆಯ ಮುಖ್ಯ ಒಳಚರಂಡಿ ಕೊಳವೆ ಮಾರ್ಗದ ಮರುನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆ ವತಿಯಿಂದ ಅಂದಾಜು ಪಟ್ಟಿಯನ್ನು ತಯಾರಿಸಿ, ದಿನಾಂಕ 12.11.2024 ರಂದು ಕೆ.ಯು.ಐ.ಡಿ.ಎಫ್.ಸಿ. ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>15ನೇ ಹಣಕಾಸು ಯೋಜನೆಯಡಿಯಲ್ಲಿ ರೂ.4 ಕೋಟಿಗಳ ಮೊತ್ತದಲ್ಲಿ ಕಂಡತ್‌ಪಳ್ಳಿ ವೆಟ್‌ವೆಲ್ ನಿರ್ಮಾಣ, ರೂ.4.5 ಕೋಟಿಗಳ ಮೊತ್ತದಲ್ಲಿ ಬಿಜೈ ಆನೆಗುಂಡಿ ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರುನಿರ್ಮಾಣ, ರೂ.1.5 ಕೋಟಿಗಳ ಮೊತ್ತದಲ್ಲಿ ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರುನಿರ್ಮಾಣ ಕಾಮಗಾರಿಯನ್ನು ಪ್ರಸ್ತಾಪಿಸಿದ್ದು, ಪ್ರಸ್ತುತ ಟೆಂಡರ್ ಕರೆಯಲಾಗಿದ್ದು, ಕಾರ್ಯಾದೇಶ ನೀಡುವ ಹಂತದಲ್ಲಿದೆ.<br><br>ಮಹಾನಗರ ಪಾಲಿಕೆಯ ಸಾಮಾನ್ಯ ಅನುದಾನದಡಿಯಲ್ಲಿ (ನೀರು ಸರಬರಾಜು ಮತ್ತು ಒಳಚರಂಡಿ ನಿಧಿ) ಪಾಲಿಕೆ ವ್ಯಾಪ್ತಿಯಲ್ಲಿ ಉಂಟಾಗುವ ಆಳುಗುಂಡಿಗಳ ದುರಸ್ತಿ, ಹಳೆಯ ಹಾನಿಗೊಳಗಾಗಿರುವ ಪೈಪ್‌ಗಳ ದುರಸ್ತಿಯನ್ನು ಕೈಗೊಳ್ಳಲಾಗುತ್ತಿದೆ ಮತ್ತು ಪಾಲಿಕೆಯ ಒಳಚರಂಡಿ ವಿಭಾಗಕ್ಕೆ ಸಂಬಂಧಿಸಿದ ಜೆಟ್ಟಿಂಗ್ ಮೆಶಿನ್, ಡಿಸಿಲ್ಟಿಂಗ್ ಮೆಶಿನ್, ಗಲ್‌ಪಿಟ್ ಗಳಿಂದ ಕಾಲಕಾಲಕ್ಕೆ ವ್ಯವಸ್ಥಿತವಾಗಿ ಒಳಚರಂಡಿ ಕೊಳವೆ ಮಾರ್ಗವನ್ನು ನಿರ್ವಹಣೆ ಮಾಡಲಾಗುತ್ತಿದೆ. |
| ಈ) | ಮಹಾನಗರ ಪಾಲಿಕೆ ವ್ಯಾಪ್ತಿಯ STP (Sewage Treatment Plant) ಗಳು ಸಂಪೂರ್ಣ ಕಾರ್ಯನಿರ್ವಹಿಸದೇ ಇರುವುದರಿಂದ ಒಳಚರಂಡಿ ನೀರು ನದಿಗಳಿಗೆ ಮತ್ತು ಸಾರ್ವಜನಿಕ ತೋಡುಗಳಲ್ಲಿ ಹರಿದುಬಿಟ್ಟಿದ್ದು, ಇದರ ಪರಿಣಾಮವಾಗಿ ರೋಗರುಜಿನಗಳು ಹರಡದಂತೆ ತಡೆಗಟ್ಟುವ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು? | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಜಲ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು (STP) ಸ್ಥಾಪಿಸಲಾಗಿದ್ದು, ಬಳಸಿದ ನೀರು ಒಳಚರಂಡಿಯ ಕೊಳವೆ ಮಾರ್ಗಗಳು ಮತ್ತು ವೆಟ್‌ವೆಲ್‌ಗಳ ಮೂಲಕ ಸಂಸ್ಕರಣಾ ಘಟಕಗಳನ್ನು ತಲುಪಿ, ಸಂಸ್ಕರಣೆಗೊಂಡು, ನಂತರ ಸದರಿ ಬಳಸಿದ ನೀರು ನದಿಗಳ ಮೂಲಕ ಸಮುದ್ರವನ್ನು ಸೇರುತ್ತಿದೆ.<br><br>ಕಾವೂರು STP ಯಲ್ಲಿ ಸಂಸ್ಕರಿಸಿ ಬಳಸಿದ ನೀರನ್ನು ಕಾರ್ಖಾನೆಗಳ ಉಪಯೋಗಕ್ಕೆ ಸರಬರಾಜು ಮಾಡಲಾಗುತ್ತಿದ್ದು, ಪಚ್ಚನಾಡಿ STP ಯಲ್ಲಿ ಸಂಸ್ಕರಣೆಗೊಂಡ ಬಳಸಿದ ನೀರನ್ನು ಭಾಗಶ: ಪಿಲಿಕುಳ ನಿಸರ್ಗಧಾಮದ ಉದ್ಯಾನವನಗಳಿಗೆ ಬಳಸಲಾಗುತ್ತಿದೆ. |

ಅನುಬಂಧ

**COLLEGE OF FISHERIES**
Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

Telefax : 0824-2246384 (Off)
Mobile : 09900136070
Email fisheriesmicrobiologymangalore@gmail.com

NO. FCM/AAHM/Rev.Fund/Analysis/2024-25/36 09.01.2025

**SAMPLE DETAILS**

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1254 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

**TEST REPORT**

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Professor and Head
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

.TAKA VETERINARY, ANIMAL AND FISHERIES SCIENCES UNIVERSITY

COLLEGE OF FISHERIES
Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

NO. FCM/AAHM/Rev.Fund/Analysis/2024-25/37 09.01.2025

SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1255 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Professor & Head
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

TAKA VETERINARY, ANIMAL AND FISHERIES SCIENCES UNIVERSITY

**COLLEGE OF FISHERIES**
Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

Telefax : 0824-2246384 (Off)
Mobile : 09900136070
Email fishmicrobiolmangalore@gmail.com

NO. FCM/AAHM/Rev.Fund/Analysis/2024-25/38 09.01.2025

**SAMPLE DETAILS**

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1256 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

**TEST REPORT**

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS **OF POTABLE QUALITY.** (SAFE FOR DRINKING)

Head of the Department
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

.TAKA VETERINARY, ANIMAL AND FISHERIES SCIENCES UNIVERSITY

## COLLEGE OF FISHERIES

Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

Telefax : 0824-2246384 (Off)
Mobile : 09900136070
Email fishmicrobiolmangalore@gmail.com

NO. FCM/AAHM/Rev.Fund/Analysis/2024-25/39 09.01.2025

### SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1257 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

### TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

# COLLEGE OF FISHERIES

Department of Aquatic Animal Health Management
(Previously Dept. of Fisheries Microbiology)
Kankanady, Mangalore 575 002
Karnataka, INDIA

Head of the Department

NO. FCM/AAHM/Rev.Fund/Analysis/2024-25/40 09.01.2025

## SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1258 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

## TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

.TAKA VETERINARY, ANIMAL AND FISHERIES SCIENCES UNIVERSITY

## COLLEGE OF FISHERIES

Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

Telefax : 0824-2246384 (Off)
Mobile : 09900136070
Email: fishmicrobiolmangalore@gmail.com

NO. FCM/AAHM/Rev.Fund/Analysis/2024-25/41 09.01.2025

### SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1259 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

### TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

(ಉತ್ತರದ ಪ್ರತಿ ಲಗತ್ತಿಸಿದೆ)

ATAKA VETERINARY, ANIMAL AND FISHERIES SCIENCES UNIVERSITY

**COLLEGE OF FISHERIES**
Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

Telefax : 0824-2246384 (Off)
Mobile : 09900136070
Email fishmicrobiolmangalore@gmail.com

NO. FCM/AAHM/Rev.Fund/Analysis/2024-25/42 09.01.2025

## SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1260 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

## TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru 575 002

Note: This report of analysis is for your information and guidance only and not valid for commercial or legal Purposes

Scanned with OKEN Scanner

...TAKA VETERINARY, ANIMAL AND FISHERIES SCIENCES UNIVERSITY

## COLLEGE OF FISHERIES

Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

Telefax: 0824 2246351 (Off)
Mobile: [illegible]
E-mail: [illegible]

NO. FCM/AAHM/[illegible]/2024-25/[illegible] 09.01.2025

### SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - [illegible] | | |
| ANALYSIS REQUIRED | POTABILITY | | |
| SAMPLE GIVEN BY CUSTOMER ~~[illegible]~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

### TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
[illegible] Aquatic Animal Health Management
Karnataka Veterinary Animal & Fisheries Sciences University
College of Fisheries, Mangaluru - 575 002

Note: This report of analysis is for your information and guidance only and not valid for commercial or legal Purposes.

KARNATAKA VETERINARY ANIMAL AND FISHERIES SCIENCES UNIVERSITY

# COLLEGE OF FISHERIES

Department of Aquatic Animal Health Management
(Erstwhile Dept. of Fisheries Microbiology)
Kankanady, Mangalore - 575 002
Karnataka, INDIA

No: KCF/AAHM/Bacterial Analysis/2024-25/44 09.01.2025

## SAMPLE DETAILS

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1062 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

## TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

CONCLUSION: BACTERIOLOGICALLY, THE WATER SAMPLE IS OF POTABLE QUALITY.
(SAFE FOR DRINKING)

Head of the Department
Dept. of Aquatic Animal Health Management
Karnataka Veterinary, Animal & Fisheries Sciences University
College of Fisheries, Mangalore - 575 002

Note: This report of analysis is for your information and guidance only and not valid for commercial or legal Purposes.

...TAKA VETERINARY, ANIMAL AND FISHERIES SCIENCES UNIVERSITY

COLLEGE OF FISHERIES
Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

Head of the Department

NO. FCM/AAHM/Rev.Fund/Analysis/2024-25/45 09.01.2025

**SAMPLE DETAILS**

| | | | |
|---|---|---|---|
| SAMPLE SUBMITTED BY | MANGALURU CITY CORPORATION, MANGALURU | | |
| TYPE OF SAMPLE | SAMPLE - 1263 | | |
| ANALYSIS REQUIRED | POTABILITY | | |
| SAMPLE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | |
| SAMPLE RECEIVED ON | 07.01.25 | TEST COMPLETED ON | 09.01.2025 |
| REFERENCE STANDARD | IS 10500 : 2012 | | |

**TEST REPORT**

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
Professor and Head
Department of Aquatic Animal Health Management
Karnataka Veterinary Animal & Fisheries Sciences University, Bidar
College of Fisheries, Mangaluru - 575 002

Note: This report of analysis is for your information and guidance ... Purposes.

...AKA VETERINARY, ANIMAL AND FISHERIES SCIENCES UNIVERSITY

# COLLEGE OF FISHERIES

Department of Aquatic Animal Health Management
(Previously Dept. of Fisheries Microbiology)
Kankanady, Mangalore - 575 002
Karnataka, INDIA

...f the Department

Telefax : 0824-2246384 (Off)
Mobile : 09900136070
Email fishmicrobiolmangalore@gmail.com

NO. FCM/AAHM/Rev.Fund/Analysis/2024-25/46 09.01.2025

## SAMPLE DETAILS

| | | | |
|---|---|---|---|
| ...LE SUBMITTED BY | MANGALURU CITY CORPORATION, MANGALURU | | |
| ...OF SAMPLE | SAMPLE - 1264 | | |
| ...YSIS REQUIRED | POTABILITY | | |
| ...LE GIVEN BY CUSTOMER/~~SAMPLE COLLECTED BY LAB~~ | | CONDITION OF SAMPLE | - |
| ...E RECEIVED ON | 07.01.25 | TEST COMPLETED ON | 09.01.2025 |
| ...ENCE STANDARD | IS 10500 : 2012 | | |

## TEST REPORT

| Sl. No. | Parameters | Units | Result | Acceptable Limit (IS 10500 : 2012) |
|---|---|---|---|---|
| 1. | Total coliform count | MPN/100 ml | <2 | Shall not be detectable in any 100 ml sample |
| 2. | Faecal coliform count | MPN/100 ml | Nil | |

COMMENT: BACTERIOLOGICALLY, THE WATER SAMPLE IS OF POTABLE QUALITY. (SAFE FOR DRINKING)

Head of the Department
...of Aquatic Animal Health Management
...Veterinary Animal & Fisheries Sciences University, Bidar
...ege of Fisheries, Mangaluru 575 002

Note: This report of analysis is for your information and guidance only and not valid for commercial or legal Purposes.

1254- HLPS*
*1255- Padil GLSR*
*1256- Bendoor inlet*
*1257- Bendoor outlet*
*1258- Karavali Pump House*
*1259- MUDA Pump House*
*1260- Kottara Pump House*
*1261- Panambur Inlet*
*1262- Panambur outlet*
*1263- Kulur Pump House*
*1264- Kavoor Pump House*

**ಶ್ರೀ ಐವನ್ ಡಿ’ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದೇನೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಸಾಮಾನ್ಯ ಸಭೆಯಲ್ಲಿ ಒಂದು ದೊಡ್ಡ ಚರ್ಚೆಯಾಯಿತು. ಅದು ಪತ್ರಿಕೆಗಳಲ್ಲಿ ಬಂದಿದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಶೇ. 50ರಷ್ಟು ಜನರಿಗೆ ಸಂಸ್ಕರಿಸದ ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ‘ನೇತ್ರಾವತಿ’ ನದಿಯಿಂದ ನೀರನ್ನು ತಂದು ಅದನ್ನು ಸಂಸ್ಕರಿಸಿ ನಗರಪಾಲಿಕೆಗಳ ವ್ಯಾಪ್ತಿಯಲ್ಲಿರುವವರಿಗೆ ನೀರನ್ನು ಒದಗಿಸಬೇಕು. ಅದು ನಮ್ಮ ಕೆಲಸ. ನಗರ ಪಾಲಿಕೆಯಲ್ಲಿ ಇಷ್ಟು ದೊಡ್ಡ ಗಲಾಟೆಯಾಗಿದೆ. ಶೇ. 50ರಷ್ಟು ಜನರಿಗೆ ನೇತ್ರಾವತಿ ನದಿಯಿಂದ ನೇರವಾಗಿ ನೀರನ್ನು ತಂದು ಅದನ್ನು ಮೊದಲ ಹಂತದಲ್ಲಿ ಮಾತ್ರ ಸಂಸ್ಕರಿಸಿ ಜನರಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ, ಇದರಿಂದ ರೋಗರುಜಿನಗಳು ಬರುತ್ತಿದೆ. ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗಿದೆ ಎಂದು ಮಹಾನಗರ ಪಾಲಿಕೆಯಲ್ಲಿ ದೊಡ್ಡ ಚರ್ಚೆಯಾಯಿತು. ಆದರೆ ಉತ್ತರದಲ್ಲಿ ಇಲ್ಲ, ಎಲ್ಲವನ್ನೂ ಟೆಸ್ಟ್ ಮಾಡಿದ್ದೇವೆ ನಾವು ಕೊಡುತ್ತಿರುವ ನೀರು ಸರಿಯಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ನೀರಿನ ಪ್ರಶ್ನೆ. ನಾನು ಮಂಗಳೂರು ಮಹಾನಗರ ಪಾಲಿಕೆಯನ್ನು ಪ್ರತಿನಿಧಿಸುತ್ತೇನೆ. ಅದನ್ನು ಅಗೌರವ ಮಾಡುವುದಕ್ಕೆ ಬಯಸುವುದಿಲ್ಲ. ಆದರೆ ಇದು ಜನಜೀವನದ ಪ್ರಶ್ನೆಯಾಗಿದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಮಂಗಳೂರಿಗೆ ಭೇಟಿ ನೀಡಿ, ಈಗ ಚುನಾಯಿತ ಪ್ರತಿನಿಧಿಗಳ ಆಡಳಿತ ಅವಧಿ ದಿನಾಂಕ 28.2.2025ಕ್ಕೆ ಮುಗಿದಿದೆ. ನಾಲ್ಕು ದಿವಸಗಳಾದರೂ ಇದುವರೆಗೂ ಆಡಳಿತಾಧಿಕಾರಿಯನ್ನು ನೇಮಕ ಮಾಡಿಲ್ಲ. ತಾವು ಏನು ಮಾಡುತ್ತಿದ್ದೀರಿ ಎಂಬುದು ನನ್ನ ಮೊದಲನೇ ಪ್ರಶ್ನೆ. ಎರಡನೆಯದಾಗಿ, ಎಸ್.ಟಿ.ಪಿ.ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದ್ದೀರಿ. ನಮ್ಮಲ್ಲಿ ನಾಲ್ಕು ಎಸ್.ಟಿ.ಪಿ.ಗಳಿವೆ. ಒಳಚರಂಡಿಯಲ್ಲಿ ಹರಿಯಬೇಕಾದ ನೀರು ಸಂಪೂರ್ಣವಾಗಿ ಸಾರ್ವಜನಿಕ ತೋಡುಗಳಲ್ಲಿ

ಹರಿಯುತ್ತಿವೆ, ರಾಜಕಾಲುವೆಗಳಲ್ಲಿ ಹರಿಯುತ್ತಿದೆ. ಎಲ್ಲರ ಬಾವಿಗಳಲ್ಲಿನ ನೀರು ಕೆಟ್ಟು ಹೋಗಿದೆ. ಯಾವ ಬಾವಿಯ ನೀರೂ ಕುಡಿಯಲು ಯೋಗ್ಯವಾಗಿಲ್ಲ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಮಂಗಳೂರು ನಗರ ಇದೆ ಎಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ನಾನು STP (Sewage Treatment Plant) ಗಳಿಗೆ ಸಹ ಭೇಟಿ ನೀಡಿದ್ದೇನೆ. ನಾಲ್ಕು STP ಗಳು ಕೂಡ ನಿರ್ವಹಣೆಯಾಗಿಲ್ಲ. ಜನರೇಟರ್ ಇಲ್ಲ, ಅಲ್ಲಿಗೆ ಬೇಕಾದ ಅಧಿಕಾರಿಗಳಿಲ್ಲ. STP ಗಳು totally defunct ಆಗಿಬಿಟ್ಟಿವೆ. ಆದರೂ ತಾವು ಒಂದು STP ಯ ನಿರ್ವಹಣೆಗೆ ಪ್ರತಿ ವರ್ಷ 1½ ಕೋಟಿ ರೂಪಾಯಿಗಳನ್ನು ನಗರಪಾಲಿಕೆಯಿಂದ ಟೆಂಡರ್ ಮೂಲಕ ಕೊಡಲಾಗುತ್ತಿದೆ ಎಂದು ಹೇಳುತ್ತೀರಿ. ಆ ಟೆಂಡರ್‌ಗಳಲ್ಲಿರುವ ಅಧಿಕಾರಿಗಳನ್ನು ನೋಡಿದರೆ, ಇಂಜಿನಿಯರ್ ಇರಬೇಕಾದ ಜಾಗದಲ್ಲಿ ಯಾರೋ ಒಬ್ಬ ರಿಕ್ಷಾ ಡ್ರೈವರ್‌ನ ಹೆಸರನ್ನು ಹಾಕಿ ಸಂಬಳವನ್ನು ತೆಗೆದುಕೊಳ್ಳುತ್ತಾರೆ. ಬೇರೆ ಬೇರೆ ಕೆಲಸದವರು, social media ದವರನ್ನು ಸೇರಿಸಿ ಸಂಬಳ ತೆಗೆದುಕೊಳ್ಳುತ್ತಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ;

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

**ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಐವನ್ ಡಿಸೋಜಾರವರು 5-6 ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ ನನಗಿರುವಂತಹ ಮಾಹಿತಿ ಪ್ರಕಾರ ನಾವು ನೇತ್ರಾವತಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟನ್ನು ನಿರ್ಮಾಣ ಮಾಡಿದ್ದೇವೆ. ನಾವು ಅದರಿಂದ ನೀರನ್ನು ಲಿಫ್ಟ್ ಮಾಡಿ ಶುದ್ಧೀಕರಣ ಮಾಡಿ ಇಡೀ ಮಂಗಳೂರು ಮಹಾನಗರ ಪಾಲಿಕೆಗೆ ನೀರನ್ನು ಕೊಡುತ್ತಿದ್ದೇವೆ. ಅಲ್ಲಿ laboratories ಇದೆ. ಅಲ್ಲಿ ಎಲ್ಲಾ ಟೆಸ್ಟ್‌ಗಳನ್ನು PH and Turbidity of water ಮತ್ತು ಇತರ ಎಲ್ಲಾ ಅಗತ್ಯ ಗುಣಮಟ್ಟಗಳನ್ನೂ ನಾವು ಪರಿಶೀಲನೆ ಮಾಡಿ ಅದು ಸರಿಯಾಗಿದೆ ಎಂದ ಮೇಲೆ ನಗರಪಾಲಿಕೆಗೆ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ನಮಗೆ ನಿರ್ದಿಷ್ಟವಾಗಿ ಯಾವುದೇ ದೂರುಗಳು ಬಂದಿಲ್ಲ. ಮಾನ್ಯ ಐವನ್ ಡಿ'ಸೋಜಾರವರು ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿರುವುದರಿಂದ ಹೋಗಿ ನೋಡಬೇಕಾಗಿದೆ. ಕಾವೂರು, ಪಚ್ಚನಾಡಿ, ಬಜಾಲ್ ಮತ್ತು ಸುರತ್ಕಲ್‌ಗಳಲ್ಲಿ ನಾಲ್ಕು STP ಗಳಿವೆ. ನಾಲ್ಕು STP ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. STP ಗಳ ಮುಖಾಂತರ ಶುದ್ಧೀಕರಿಸಿದ ಕೊಳಚೆ ನೀರನ್ನು ಮಾತ್ರ ಹೊರಗಡೆ ಬಿಡುತ್ತಿದ್ದೇವೆ. ಶುದ್ಧೀಕರಣ ಮಾಡಿದ ನೀರನ್ನು ಮಾತ್ರ ನದಿಗೆ ಬಿಡಬೇಕೆಂದು NGT (National Green Tribunal) ಆದೇಶವಿದೆ. ನಾವು ಅದರ ಪ್ರಕಾರವೇ ಮಾಡುತ್ತಿದ್ದೇವೆ. ನನ್ನ ಪ್ರಕಾರ ಕುಡಿಯುವ ನೀರಿನ ಸಮಸ್ಯೆಯಾಗಲೀ ಅಥವಾ STP ಗಳಲ್ಲಾಗಲೀ ಯಾವುದೇ ಸಮಸ್ಯೆಗಳಿಲ್ಲ. ಆದರೂ ಮಾನ್ಯ ಸದಸ್ಯರು ನನಗೆ ಖುದ್ದಾಗಿ ಬಂದು ನೋಡುವುದಕ್ಕೆ ಹೇಳುತ್ತಿದ್ದಾರೆ. ನಾನು ಅಧಿವೇಶನ ಮುಗಿದ ನಂತರ ಮಂಗಳೂರಿಗೆ ಭೇಟಿ ಕೊಟ್ಟು ಕುಡಿಯುವ ನೀರಿನ ಸಮಸ್ಯೆ ಏನಾದರೂ ಇದ್ದರೆ ಅದನ್ನು ಪರಿಶೀಲಿಸುತ್ತೇನೆ. ನಾಲ್ಕು STP ಗಳಿಗೆ ಎಲ್ಲಾ ಜನಪ್ರತಿನಿಧಿಗಳ ಜೊತೆಗೆ ಹೋಗಿ ಅಲ್ಲೇನಾದರೂ ಸಮಸ್ಯೆಗಳಿದ್ದ ಪಕ್ಷದಲ್ಲಿ ಪರಿಹಾರ ಮಾಡಿಕೊಡುತ್ತೇನೆ. ಹಾಗೂ ಅಲ್ಲಿನ Local

Bodies ಆಡಳಿತಾವಧಿ ಮುಗಿದಿರುವ ಬಗ್ಗೆ ತಿಳಿಸಿದ್ದಾರೆ. ಅದರ ಬಗ್ಗೆ ಕೂಡಲೇ ನಾನು ನಮ್ಮ ಇಲಾಖೆಯ ಕಾರ್ಯದರ್ಶಿಯವರ ಜೊತೆ ಮಾತನಾಡಿ ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾವು ನೇತ್ರಾವತಿ ನದಿಯಿಂದ ನೀರನ್ನು ತರುತ್ತೇವೆ. ಈ ನದಿಯ ನೀರೇ ಮಲಿನವಾಗಿದೆಯೆಂದು ಕೇಂದ್ರದ ಜಲ ಶಕ್ತಿ ಮಿಷನ್‌ನವರು ರಿಪೋರ್ಟ್ ಕೊಟ್ಟಿದ್ದಾರೆ. ಈ ನದಿಯ ನೀರು ಮಲಿನವಾಗಿದೆ ಏಕೆಂದರೆ, ಒಳಚರಂಡಿಯ ನೀರು ನದಿಗೆ ಹೋಗುತ್ತಿದೆ. What the report says is, "*A total of 17 river stretches in Karnataka are polluted mainly due to discharge of untreated or partially treated sewage water and industrial effluents in their catchments*". ಅದರಲ್ಲಿ ಯಾವ್ಯಾವ ನದಿಗಳೆಂದು ಸಹ ಹೇಳಿದ್ದಾರೆ. According to the Central Pollution Control Board, the stretches of ಕೃಷ್ಣ, ತುಂಗಭದ್ರ, ಮಲಪ್ರಭ, ಕಾಳಿ ಮತ್ತು ಬೇರೆ ಬೇರೆ ನದಿಗಳಾದ ಭೀಮ, ಕಾವೇರಿ, ಕಬಿನಿ, ಶಿಂಶಾ, ಅರ್ಕಾವತಿ, ಲಕ್ಷ್ಮಣತೀರ್ಥ ಅದರಲ್ಲಿ ನೇತ್ರಾವತಿ ನದಿ ಕೂಡ ಸೇರಿದೆ. ನೇತ್ರಾವತಿ ನದಿ ನೀರೇ ಮಲಿನವಾಗಿದೆ. ಅದೇ ನೀರನ್ನು ಕುಡಿಯಲು ಹೇಳಿದರೆ ಹೇಗೆ?

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, generalize ಮಾಡಿ ಹೇಳಿದರೆ ಪ್ರಯೋಜನವಾಗುವುದಿಲ್ಲ. ನಾನು ಮಾನ್ಯ ಐವನ್ ಡಿ'ಸೋಜಾರವರಿಗೆ ಸ್ಪಷ್ಟವಾಗಿ ಹೇಳುವುದೇನೆಂದರೆ, ನಾವು ಎಲ್ಲಾ ಪಂಪ್‌ಹೌಸ್‌ಗಳನ್ನೂ ಮಾಡಿದ್ದು, ಅಲ್ಲಿ ಎರಡು ವಿಶ್ವವಿದ್ಯಾಲಯಗಳಿವೆ. ಅಲ್ಲಿ ಎರಡು laboratories ಗಳಿವೆ, ಅಲ್ಲಿ ಪ್ರತಿ ದಿವಸ ನೀರನ್ನು ಪರಿಶೀಲಿಸಿ ಸರಬರಾಜು ಮಾಡುತ್ತೇವೆ. Generalize ಮಾಡಿ ಕಾವೇರಿ, ಇತ್ಯಾದಿ ಎಂದು ಹೇಳಲು ಬರುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಸಹ ರಿಪೋರ್ಟ್ ಮಾಡಿಸಿದ್ದೇನೆ.

**ಶ್ರೀ ಬಿ.ಎಸ್. ಸುರೇಶ:-** ಮಂಗಳೂರಿನಲ್ಲಿರುವ laboratories ನಲ್ಲಿ ಟೆಸ್ಟ್ ಮಾಡಿ ನೀರನ್ನು ಕೊಡುತ್ತಿದ್ದೇವೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ನಾವು ಸಹ ನೀರನ್ನು ಟೆಸ್ಟ್ ಮಾಡಿಸಿದ್ದೇವೆ. College of Fisheries report ಏನು ಹೇಳುತ್ತದೆಂದರೆ; "As per bacterial microbiology test, the water is not potable quality and not safe for direct drinking".

(ಮುಂದು)

(23) 04.03.2025 (12.40) ಹೆಚ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈ ವರದಿಯಲ್ಲಿರುವ ಅಂಶಗಳು ಸತ್ಯವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದನ್ನು ಸರಿಪಡಿಸಿ.

**ಶ್ರೀ ಬಿ.ಎಸ್.ಸುರೇಶ್:-** ಸನ್ಮಾನ್ಯ ಸಭಾಪತಿಯವರೇ, ನಾನು ಮಂಗಳೂರಿಗೆ ಭೇಟಿ ನೀಡುತ್ತೇನೆ.

**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 08**

**ಉತ್ತರಿಸಬೇಕಾದ ದಿನಾಂಕ : 04.03.2025**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಸಹಕಾರಿ ಸಂಘಗಳಿವೆ: ಇವುಗಳನ್ನುಯಾವ ರೀತಿ ವಿಂಗಡಿಸಲಾಗಿದೆ: (ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಒಟ್ಟು 46925 ಸಹಕಾರ ಸಂಘಗಳಿರುತ್ತವೆ.<br><br>ಕಾರ್ಯನಿರತ: 40847; ಸ್ಥಗಿತ: 2676; ಸಮಾಪನೆ: 3402; ಒಟ್ಟು: 46925<br><br>ಜಿಲ್ಲಾವಾರು ಸಂಘಗಳ ವಿವರವನ್ನು **ಅನುಬಂಧ 1**ರಲ್ಲಿ ಲಗತ್ತಿಸಿದೆ.<br>ರಾಜ್ಯದಲ್ಲಿರುವ ಸಹಕಾರ ಸಂಘಗಳನ್ನು 50 ರೀತಿಯಲ್ಲಿ ವಿಂಗಡಿಸಲಾಗಿದೆ. ವರ್ಗವಾರು ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |
| ಆ) | ಸದರಿ ಸಂಘಗಳ ಸ್ಥಿತಿ ಗತಿಗಳನ್ನು ಗಮನಿಸಿ, ಸರ್ಕಾರ ಯಾವ ಸುಧಾರಣಾ ವ್ಯವಸ್ಥೆ ರೂಪಿಸಿದೆ: (ವಿವರ ಒದಗಿಸುವುದು) | ಕರ್ನಾಟಕ ಸಹಕಾರ ಸಂಘ ಕಾಯ್ದೆ 1959ರ<br><br>1)ಕಲಂ 63ರಡಿ ಪ್ರತಿ ವರ್ಷ ಪ್ರತಿಯೊಂದು ಸಹಕಾರ ಸಂಘದ ಲೆಕ್ಕಪರಿಶೋಧನೆಯನ್ನು ಸಪ್ಟೆಂಬರ್ 1ನೇ ತಾರೀಖಿನ ಒಳಗಾಗಿ ಮುಕ್ತಾಯಗೊಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ.<br><br>2) ಕಲಂ 64ರಡಿ ಸಂಘದ ವ್ಯವಹಾರಗಳ ಬಗ್ಗೆ ಆಡಳಿತಾತ್ಮಕ ನ್ಯೂನ್ಯತೆ ಬಗ್ಗೆ ವಿಚಾರಣೆಯನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>3) ಕಲಂ 65ರಡಿ ಸಂಘದ ಲೆಕ್ಕ ಪುಸ್ತಕಗಳ ಪರಿಶೀಲನೆಯನ್ನು ನಡೆಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಮೇಲ್ಕಾಣಿಸಿದಂತೆ ಕಲಂ 63, 64 ಮತ್ತು 65 ರಂತೆ ಕ್ರಮವಹಿಸಿ ಲೆಕ್ಕಪರಿಶೋಧನಾ ವರದಿಯಲ್ಲಿ, ವಿಚಾರಣಾ ವರದಿಯಲ್ಲಿ ಮತ್ತು ಪರಿಶೀಲನಾ ವರದಿಯಲ್ಲಿ ಸಂಘದ ಅವ್ಯವಹಾರಗಳ ಬಗ್ಗೆ ಮತ್ತು ನ್ಯೂನ್ಯತೆಗಳ ಬಗ್ಗೆ ವರದಿಯಾದಲ್ಲಿ, ಈ ಬಗ್ಗೆ ಕಲಂ 68 ಮತ್ತು ಕಲಂ 70ರ ರಡಿ ನ್ಯೂನ್ಯತೆಗಳನ್ನು ಸರಿಪಡಿಸಲು ಮತ್ತು ಹಣದುರುಪಯೋಗ |

| ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು |
|---|---|---|---|
| 40847 | 2676 | 3402 | 46925 |

| | | |
|---|---|---|
| | | ಪ್ರಕರಣಗಳಲ್ಲಿ ವಸೂಲಾತಿಗಾಗಿ ಕ್ರಮವಿಡಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಈ ರೀತಿಯಲ್ಲಿ ಸಹಕಾರ ಸಂಘಗಳ ಸ್ಥಿತಿ ಗತಿಗಳನ್ನು ಗಮನಿಸಿ ಸುಧಾರಣೆಯನ್ನು ಕೈಗೊಳ್ಳುವ ವ್ಯವಸ್ಥೆಯನ್ನು ರೂಪಿಸಲಾಗಿದೆ.<br>ಸಹಕಾರ ಸಂಘಗಳನ್ನು ಬಲಗೊಳಿಸಿ ಗ್ರಾಮೀಣ ಭಾಗದ ಜನರಿಗೆ ಅವಶ್ಯಕ ಸೇವೆ ಮತ್ತು ಸೌಲಭ್ಯಗಳನ್ನು ನೀಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.<br><br>1.ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ರಾಜ್ಯ ಸಹಕಾರಿ ಕೃಷಿ ಅಭಿವೃದ್ಧಿ ಬ್ಯಾಂಕುಗಳ ಗಣಕೀಕರಣಗೊಳಿಸುವುದು.<br>2.ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಜನೌಷಧಿ ಕೇಂದ್ರಗಳನ್ನಾಗಿ ಪರಿವರ್ತಿಸುವುದು.<br>3.ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಾಮನ್ ಸರ್ವೀಸ್ ಕೇಂದ್ರಗಳನ್ನಾಗಿ ಪರಿವರ್ತಿಸುವುದು.<br>4.ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ತೆರೆಯುವುದು |
| ಇ) | ಎಷ್ಟು ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿದೆ: | 1941 ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿದೆ. |
| ಈ) | ಸರ್ಕಾರಕ್ಕೆ ಆದಾಯ ತಂದುಕೊಡುತ್ತಿದ್ದ ಸಹಕಾರಿ ಲೆಕ್ಕ ಪರಿಶೋಧನಾ ಇಲಾಖೆ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗಿರುವ ಇಲಾಖೆಯಾಗಿ ಪರಿವರ್ತನೆಯಾಗಲು ಕಾರಣಗಳೇನು: | ಸಹಕಾರ ಸಂಘಗಳ ಕಾಯ್ದೆಗೆ 2013ರಲ್ಲಿ ಸಮಗ್ರ ತಿದ್ದುಪಡಿಯಾದ ನಂತರ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರು ಹಾಗೂ ಇಲಾಖಾ ಲೆಕ್ಕಪರಿಶೋಧಕರು ನಿರ್ವಹಿಸುತ್ತಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 98-U ರನ್ವಯ ರಾಜ್ಯ ಸಹಕಾರ ಬ್ಯಾಂಕ್ ಹಾಗೂ ಕೇಂದ್ರ ಸಹಕಾರಿ ಬ್ಯಾಂಕುಗಳು ರಾಷ್ಟ್ರೀಯ ಬ್ಯಾಂಕಿನಿಂದ ಅನುಮೋದಿತವಾದ ಪಟ್ಟಿಯಿಂದ ಆಯ್ಕೆ ಮಾಡಿದ ಸನ್ನದು ಲೆಕ್ಕಿಗನಿಂದ ತನ್ನ ಲೆಕ್ಕಗಳನ್ನು ಪರಿಶೋಧನೆ ಮಾಡಿಸಿ ಪ್ರಮಾಣಿಸಿಕೊಳ್ಳತಕ್ಕದು ಎಂದು ಇರುತ್ತದೆ. ಅಧಿಕ ದುಡಿಯುವ ಬಂಡವಾಳವಿರುವ ಸಹಕಾರ ಸಂಘಗಳು ಸನ್ನದು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದು, ಕಡಿಮೆ ದುಡಿಯುವ ಬಂಡವಾಳ ಹೊಂದಿರುವ ಸಹಕಾರ ಸಂಘಗಳು ಇಲಾಖಾ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದು, ಇದರಿಂದಾಗಿ ಇಲಾಖೆಗೆ ಬರುವ ಆದಾಯ (ಲೆಕ್ಕಪರಿಶೋಧನಾ ಶುಲ್ಕ ಹಾಗೂ ವೆಚ್ಚ) ಗಣನೀಯವಾಗಿ ಕಡಿಮೆಯಾಗುತ್ತಿದೆ. |

<table>
<tr><td></td><td></td><td>

**ಸಹಕಾರ ಕಾಯ್ದೆಗೆ 2013ರ ತಿದ್ದುಪಡಿಯ ಮುನ್ನ ಈ ಕೆಳಕಂಡಂತೆ ರಾಜಸ್ವ ಜಮೆಯಾಗಿರುತ್ತದೆ.**

| ವರ್ಷ | ಮೊಬಲಗು(ಲಕ್ಷಗಳಲ್ಲಿ)(ರೂ.ಗಳಲ್ಲಿ) |
|---|---|
| 2010-11 | 3,400.00 |
| 2011-12 | 3,702.00 |
| 2012-13 | 4,145.00 |

ತಿದ್ದುಪಡಿಯ ನಂತರ ಸಹಕಾರ ಸಂಘಗಳ ಕಾಯ್ದೆ, 1959 ಕಲಂ 63(1)ರನ್ವಯ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ, ಕಲಂ 33(1)ರ ರನ್ವಯ ವಾರ್ಷಿಕ ಮಹಾಸಭೆಯಲ್ಲಿ ಲೆಕ್ಕಪರಿಶೋಧಕರ ನೇಮಕಾತಿಯನ್ನು ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರಿಂದ ಹೆಚ್ಚಿನ ಸಂಘಗಳು ಸನ್ನದು ಲೆಕ್ಕಪರಿಶೋಧಕರು/ ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಇಲಾಖೆಯ ರಾಜಸ್ವವು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಇತ್ತೀಚಿನ 03 ವರ್ಷಗಳ ಅಂಕಿಅಂಶಗಳು ಈ ಕೆಳಕಂಡಂತೆ ಇರುತ್ತವೆ.

| ವರ್ಷ | ಮೊಬಲಗು(ಲಕ್ಷಗಳಲ್ಲಿ) |
|---|---|
| 2021-22 | 1,175.53 |
| 2022-23 | 1,208.75 |
| 2023-24 | 1,101.84 |

ಅದಲ್ಲದೆ ಪ್ರತಿ ವರ್ಷ ಕ್ಷೇತ್ರೀಯ ಲೆಕ್ಕಪರಿಶೋಧನಾ ಸಿಬ್ಬಂದಿಗಳ ಸಂಖ್ಯೆ ನಿವೃತ್ತಿ ಹಾಗೂ ಇತ್ಯಾದಿ ಕಾರಣಗಳಿಂದ ಕಡಿಮೆಯಾಗುತ್ತಿದ್ದು, ಯಾವುದೇ ಹೊಸದಾಗಿ ನೇಮಕಾತಿ ಪ್ರಕ್ರಿಯೆಯು ಕಳೆದ 10 ವರ್ಷಕ್ಕೂ ಮೇಲ್ಪಟ್ಟು ನಡೆಯದ ಕಾರಣಕ್ಕೂ ಸಹಾ ಆದಾಯ ಕಡಿಮೆಯಾಗಲು ಕಾರಣವಾಗಿದೆ.

</td></tr>
<tr><td>ಉ)</td><td>ಸದರಿ ಇಲಾಖೆಯನ್ನು ಬಲಪಡಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು?</td><td>

- ಆರ್ಥಿಕ ಇಲಾಖೆಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ವರ್ಗಾಯಿಸಲಾಗಿದ್ದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯನ್ನು ಸರ್ಕಾರದ ಆದೇಶ ಸಂಖ್ಯೆ:ಸಇ/66/ಸಿಇಎA/2023, ದಿನಾಂಕ: 21-09-2023 ರ ಮೂಲಕ ಸಹಕಾರ ಇಲಾಖೆಯ ನಿಯಂತ್ರಣಕ್ಕೆ ಬಂದಿರುತ್ತದೆ.

- ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಆಡಳಿತಾತ್ಮಕ ಗುಣಮಟ್ಟ ಹೆಚ್ಚಿಸಲು 03 ಅಪರ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

</td></tr>
</table>

| | | |
|---|---|---|
| | | ➢ ಇಲಾಖೆಯಲ್ಲಿ ಖಾಲಿಯಿರುವ 399 ಲೆಕ್ಕಪರಿಶೋಧಕರ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತುತ ಆರ್ಥಿಕ ಇಲಾಖೆಯ ಪರಿಶೀಲನೆಯ ಹಂತದಲ್ಲಿರುತ್ತದೆ.<br><br>➢ ಇಲಾಖೆಯಲ್ಲಿ ಖಾಲಿಯಿರುವ 138 ಗ್ರೂಪ್ 'ಸಿ' ಹುದ್ದೆಗಳನ್ನು (ಬೆರಳಚ್ಚುಗಾರರು, ದ್ವಿತೀಯ ದರ್ಜೆ ಸಹಾಯಕರು ಮತ್ತು ಪ್ರಥಮ ದರ್ಜೆ ಸಹಾಯಕರು) ಭರ್ತಿ ಮಾಡಲು ಸರ್ಕಾರದ ಪರಿಶೀಲನೆಯ ಹಂತದಲ್ಲಿರುತ್ತದೆ.<br><br>➢ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುವ ಸಲುವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ವಿಧೇಯಕವು ಘನತೆವೆತ್ತ ರಾಜ್ಯಪಾಲರ ಅನುಮೋದನೆಗೆ ಬಾಕಿ ಇರುತ್ತದೆ.<br><br>➢ ಪ್ರತಿ ವರ್ಷ ರಾಜ್ಯದಲ್ಲಿರುವ ಸಹಕಾರ ಸಂಘಗಳ ಪೈಕಿ 1/3 ರಷ್ಟು ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಕಡ್ಡಾಯವಾಗಿ ಇಲಾಖಾ ಲೆಕ್ಕಪರಿಶೋಧಕರಿಂದಲೇ ನಿರ್ವಹಿಸಬೇಕು ಎಂಬುದರ ಬಗ್ಗೆ ಸಹಕಾರ ಕಾಯ್ದೆಗೆ ತಿದ್ದುಪಡಿ ತರುವ ಕಾರ್ಯ ಸರ್ಕಾರದ ಹಂತದಲ್ಲಿ ಚಾಲನೆಯಲ್ಲಿರುತ್ತದೆ.<br><br>ಈ ಯೋಜನೆಗಳಿಂದಾಗಿ ಇಲಾಖೆಯು ಹೆಚ್ಚಿನ ರೀತಿಯಲ್ಲಿ ಬಲವರ್ಧನೆಗೊಂಡು ಸಂಘಗಳಲ್ಲಿ ನಡೆಯುವ ಅವ್ಯವಹಾರಗಳನ್ನು ಹೆಚ್ಚಿನ ಮಟ್ಟದಲ್ಲಿ ಕಂಡು ಹಿಡಿಯಬಹುದಾಗಿದೆ. ಸಹಕಾರ ಸಂಘಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚಿನ ಪಾರದರ್ಶಕತೆ ಕಂಡುಬರಲಿದ್ದು, ಇದರಿಂದ ಇಲಾಖೆಯು ಹೆಚ್ಚು ಸಧೃಡ ವಾಗುತ್ತದೆ. |

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ರಾಮೋಜಿಗೌಡ ಇವರ ಚುಕ್ಕೆ ಗುರುತಿನ ಪ್ರ.ಸಂ 15(08)ಕ್ಕೆ

ಅನುಬಂಧ-1

| ಕ್ರ.ಸಂ | ಜಿಲ್ಲೆಯ ಹೆಸರು | ಸಹಕಾರ ಸಂಘಗಳ ಸಂಖ್ಯೆ | | | |
|---|---|---|---|---|---|
| | | ಕಾರ್ಯನಿರತ | ಸ್ಥಗಿತ | ಸಮಾಪನ | ಒಟ್ಟು |
| | ಬೆಂಗಳೂರು ಪ್ರಾಂತ್ಯ | | | | |
| 1 | ಬೆಂಗಳೂರು 1ನೇ ವಲಯ | 716 | 46 | 61 | 823 |
| 2 | ಬೆಂಗಳೂರು 2ನೇ ವಲಯ | 488 | 13 | 58 | 559 |
| 3 | ಬೆಂಗಳೂರು 3ನೇ ವಲಯ | 679 | 16 | 43 | 738 |
| 4 | ಬೆಂಗಳೂರು 4ನೇ ವಲಯ | 700 | 0 | 69 | 769 |
| 5 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 1064 | 7 | 73 | 1144 |
| 6 | ಕೋಲಾರ ಜಿಲ್ಲೆ | 1388 | 61 | 231 | 1680 |
| 7 | ರಾಮನಗರ ಜಿಲ್ಲೆ | 1237 | 60 | 74 | 1371 |
| 8 | ಚಿಕ್ಕಬಳ್ಳಾಪುರ ಜಿಲ್ಲೆ | 1281 | 119 | 192 | 1592 |
| 9 | ತುಮಕೂರು ಜಿಲ್ಲೆ | 2093 | 68 | 139 | 2300 |
| 10 | ಚಿತ್ರದುರ್ಗ ಜಿಲ್ಲೆ | 765 | 59 | 242 | 1066 |
| 11 | ದಾವಣಗೆರೆ ಜಿಲ್ಲೆ | 1265 | 90 | 153 | 1508 |
| 12 | ಶಿವಮೊಗ್ಗ ಜಿಲ್ಲೆ | 1262 | 0 | 73 | 1335 |
| | ಒಟ್ಟು | **12938** | **539** | **1408** | **14885** |
| | ಕಲಬುರಗಿ ಪ್ರಾಂತ | | | | |
| 1 | ಬೀದರ | 736 | 81 | 309 | 1126 |
| 2 | ಯಾದಗಿರ | 665 | 98 | 29 | 792 |
| 3 | ಕಲಬುರಗಿ | 1155 | 57 | 239 | 1451 |
| 4 | ಕೊಪ್ಪಳ | 669 | 66 | 79 | 814 |
| 5 | ರಾಯಚೂರು | 900 | 176 | 131 | 1207 |
| 6 | ಬಳ್ಳಾರಿ | 1238 | 132 | 98 | 1468 |
| | ಒಟ್ಟು | **5363** | **610** | **885** | **6858** |
| | ಮೈಸೂರು ಪ್ರಾಂತ | | | | |
| 1 | ಮೈಸೂರು | 2345 | 202 | 89 | 2636 |
| 2 | ಚಾಮರಾಜನಗರ | 724 | 56 | 48 | 828 |
| 3 | ಮಂಡ್ಯ | 2073 | 174 | 42 | 2289 |
| 4 | ಹಾಸನ | 1963 | 31 | 57 | 2051 |
| 5 | ಚಿಕ್ಕಮಗಳೂರು | 639 | 0 | 20 | 659 |
| 6 | ಕೊಡಗು | 307 | 13 | 26 | 346 |
| 7 | ದಕ್ಷಿಣ ಕನ್ನಡ ಜಿಲ್ಲೆ | 838 | 30 | 29 | 897 |
| 8 | ಉಡುಪಿ | 702 | 1 | 13 | 716 |
| | ಒಟ್ಟು | **9591** | **507** | **324** | **10422** |

| ಜಿಲ್ಲೆಯ ಹೆಸರು | ಸಹಕಾರ ಸಂಘಗಳ ಸಂಖ್ಯೆ | | | |
|---|---|---|---|---|
| | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು |
| ಬೆಳಗಾವಿ ಪ್ರಾಮತ | | | | |
| 1 ಬೆಳಗಾವಿ | 5528 | 612 | 266 | 6406 |
| 2 ವಿಜಯಪುರ | 1435 | 71 | 105 | 1611 |
| 3 ಬಾಗಲಕೋಟೆ | 1903 | 95 | 129 | 2127 |
| 4 ಧಾರವಾಡ | 918 | 121 | 91 | 1130 |
| 5 ಗದಗ | 992 | 75 | 81 | 1148 |
| 6 ಹಾವೇರಿ | 1281 | 37 | 56 | 1374 |
| 7 ಕಾರವಾರ | 898 | 9 | 57 | 964 |
| **ಒಟ್ಟು** | **12955** | **1020** | **785** | **14760** |
| ಪ್ರಾಂತ್ಯವಾರು ಮಾಹಿತಿ | | | | |
| 1 ಬೆಂಗಳೂರು ಪ್ರಾಂತ್ರ | 12938 | 539 | 1408 | 14885 |
| 2 ಕಲಬುರಗಿ ಪ್ರಾಂತ | 5363 | 610 | 885 | 6858 |
| 3 ಮೈಸೂರು ಪ್ರಾಂತ | 9591 | 507 | 324 | 10422 |
| 4 ಬೆಳಗಾವಿ ಪ್ರಾಮತ | 12955 | 1020 | 785 | 14760 |
| **ಒಟ್ಟು** | **40847** | **2676** | **3402** | **46925** |

(ಸಹಕಾರ ಸಂಘಗಳ ಜಂಟಿ ನಿಬಂಧಕರು)
(ಆಡಳಿತ ಮತ್ತು ಅಭಿವೃದ್ಧಿ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯಶ್ರೀ ರಾಮೋಜಿಗೌಡ ಇವರ ಚುಕ್ಕೆ ಗುರುತಿನ ಪ್ರ.ಸಂ 15(08)ಕ್ಕೆ

ಅನುಬಂಧ-2

| ಕ.ಸಂ | ವಿವಿಧ ಸಹಕಾರ ಸಂಘಗಳು |
|---|---|
| 1 | ಬಹುರಾಜ್ಯ ಮಟ್ಟದ ಸ.ಸಂ.ಗಳು |
| 2 | ರಾಜ್ಯಮಟ್ಟದ ಸಹಕಾರ ಸಂಘಗಳು |
| 3 | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು |
| 4 | ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು |
| 5 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು |
| 6 | ಲ್ಯಾಂಪ್ಸ್ ಸಹಕಾರ ಸಂಘಗಳು |
| 7 | ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು |
| 8 | ಸಹಕಾರ ಗ್ರೈನ್ ಬ್ಯಾಂಕ್‌ಗಳು |
| 9 | ಪಟ್ಟಣ ಸಹಕಾರ ಬ್ಯಾಂಕ್‌ಗಳು |
| 10 | ಇತರ ಪತ್ತಿನ ಸಹಕಾರ ಸಂಘಗಳು |
| 11 | ನೌಕರರ ಪತ್ತಿನ ಸಹಕಾರ ಸಂಘಗಳು |
| 12 | ತಾಲ್ಲೂಕ ವ್ಯವಸಾಯೋತ್ಪನ್ನ ಸಹಕಾರ ಸಂಘಗಳು |
| 13 | ಇತರೇ ಮಾರಾಟ ಸಹಕಾರ ಸಂಘಗಳು |
| 14 | ಸಹಕಾರ ಸಕ್ಕರೆ ಕಾರ್ಖಾನೆ |
| 15 | ಸಂಸ್ಕರಣ ಸಹಕಾರ ಸಂಘಗಳು |
| 16 | ಸಹಕಾರ ನೂಲಿನ ಗಿರಣಿಗಳು |
| 17 | ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳು |
| 18 | ಲೈವ್‌ಸ್ಟಾಕ್ ಸಹಕಾರ ಸಂಘಗಳು (ಪಶು ಸಂಗೋಪನೆ,ಕೋಳಿ,ಕುರಿ,ಹಂದಿ ಸಾಕಾಣಿಕೆ,ಇತ್ಯಾದಿ) |
| 19 | ಹಾಲು ಉತ್ಪಾದಕರ ಸಹಕಾರ ಸಂಘಗಳು |
| 20 | ಸಹಕಾರಿ ಹಾಲು ಒಕ್ಕೂಟ |
| 21 | ಸಂಯುಕ್ತ ಬೇಸಾಯಿ ಸಹಕಾರ ಸಂಘಗಳು |
| 22 | ಏತ ನೀರಾವರಿ ಸಹಕಾರ ಸಂಘಗಳು |
| 23 | ನೀರು ಬಳಕೆದಾರರ ಸಹಕಾರ ಸಂಘಗಳು |
| 24 | ಮೀನುಗಾರಿಕೆ ಸಹಕಾರ ಸಂಘಗಳು |
| 25 | ನೇಕಾರರ ಸಹಕಾರ ಸಂಘಗಳು |
| 26 | ಇತರ ಕೈಗಾರಿಕಾ ಸಹಕಾರ ಸಂಘಗಳು |
| 27 | ಕೈಗಾರಿಕಾ ಸಹಕಾರ ಸಂಘಗಳು |
| 28 | ಗ್ರಾಹಕರ ಸಹಕಾರ ಸಂಘಗಳು |
| 29 | ಕೇಂದ್ರ ಸಹಕಾರ ಸಗಟು ಮಳಿಗೆ |
| 30 | ಗೃಹ ನಿರ್ಮಾಣ ಸಹಕಾರ ಸಂಘಗಳು |
| 31 | ಅರಣ್ಯ ಕುಲಿಗಾರರ ಸಹಕಾರ ಸಂಘಗಳು |
| 32 | ಕಾರ್ಮಿಕರ ಸಹಕಾರ ಸಂಘಗಳು |
| 33 | ಜಿಲ್ಲಾ ಸಹಕಾರ ಒಕ್ಕೂಟ |
| 34 | ಜಿಲ್ಲಾ ಸಹಕಾರ ಮಹಮಂಡಳಿ |
| 35 | ವಿವಿದೋದ್ದೇಶ ಸಹಕಾರ ಸಂಘಗಳು |
| 36 | ವಿದ್ಯಾರ್ಥಿ ಗ್ರಾಹಕರ ಸಹಕಾರ ಸಂಘಗಳು |
| 37 | ಕ್ಲಾರೀಕ ಸಹಕಾರ ಸಂಘಗಳು |

| | |
|---|---|
| 38 | ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳು |
| 39 | ಗರೀಬ ಹಠಾವೂ ಸಹಕಾರ ಸಂಘಗಳು |
| 40 | ದರ್ಜಿಗಳ ಸಹಕಾರ ಸಂಘಗಳು |
| 41 | ಚರ್ಮ ಹದ ಮಾಡುವ ಸಹಕಾರ ಸಂಘಗಳು |
| 42 | ಮರ ಬಳಗಾರರ ಸಹಕಾರ ಸಂಘಗಳು |
| 43 | ಹ್ಯಾಂಡ್ ಪೌಂಡಿಂಗ್ ಸಹಕಾರ ಸಂಘಗಳು |
| 44 | ಮಡಿವಾಳ ಸಹಕಾರ ಸಂಘಗಳು |
| 45 | ವಿದ್ಯುಚ್ಛಕ್ತಿ ಸಹಕಾರ ಸಂಘಗಳು |
| 46 | ಸಾರಿಗ ಸಹಕಾರ ಸಂಘಗಳು |
| 47 | ಸಹಕಾರಿ ಆಸ್ಪತ್ರೆಗಳು |
| 48 | ಸಹಕಾರಿ ಮುದ್ರಣಗಳು |
| 49 | ಉಣ್ಣೆ ನೇಕಾರರ ಸಹಕಾರ ಸಂಘಗಳು |
| 50 | ಇತರ ಸ.ಸಂಗಳು |

(ಸಹಕಾರ ಸಂಘಗಳ ಜಂಟಿ ನಿಬಂಧಕರು
(ಆಡಳಿತ ಮತ್ತು ಅಭಿವೃದ್ಧಿ)

**ಶ್ರೀ ರಾಮೋಜಿಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಒಟ್ಟು ಎಷ್ಟು ಸಹಕಾರಿ ಸಂಘಗಳಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೆ; ಸುಮಾರು 1,941 ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಈ 1,941 ಸಹಕಾರ ಸಂಘಗಳ ಪೈಕಿ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಪ್ರಶ್ನೆಯನ್ನು ಈಗ ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಹಲವಾರು ಗೃಹ ನಿರ್ಮಾಣ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಸ್ಥಾಪನೆಗೊಂಡು 5-10 ವರ್ಷಗಳಾಗಿದ್ದರೂ ಸಹ ಇಲ್ಲಿಯವರೆವಿಗೂ ಒಂದೇ ಒಂದು ನಿವೇಶನಗಳನ್ನು ಸಂಘದ ಸದಸ್ಯರಿಗೆ ಹಂಚಿಕೆ ಮಾಡದೇ ಇರುವ ಹಲವಾರು ಗೃಹ ನಿರ್ಮಾಣ ಸಹಕಾರ ಸಂಘಗಳು ಅಸ್ತಿತ್ವದಲ್ಲಿವೆ. ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಒಂದು ಮನೆ ಕಟ್ಟಬೇಕು; ತನ್ನ ಮಕ್ಕಳ ಮದುವೆ ಮಾಡಬೇಕೆನ್ನುವ ಸಾಧನೆಯ ಗುರಿಯನ್ನು ಇಟ್ಟುಕೊಂಡಿರುತ್ತಾನೆ. ಬೆವರು ಸುರಿಸಿ ದುಡಿದು ತಿಂಗಳಿಗೆ ಸುಮಾರು 30, 40, 50 ಸಾವಿರ ರೂಪಾಯಿಗಳನ್ನು ಸಂಬಳವಾಗಿ ಪಡೆಯುವವರು ಕೂಡಿಟ್ಟಿರುವಂತಹ ಹಣವನ್ನು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಿವೇಶನ ಪಡೆಯಲು ಕಂತಿನ ರೂಪದಲ್ಲಿ ಹಣವನ್ನು ಕಟ್ಟುತ್ತಿರುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆದಿದೆ, ಹಣ ಕಟ್ಟಿಸಿಕೊಂಡಿರುವಂತಹ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ರೆವಿನ್ಯೂ ದಾಖಲೆಗಳ ಬಗ್ಗೆ ಅನುಭವವಿರುವುದಿಲ್ಲ. ಇಂತಹ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಹಣವೂ ಇಲ್ಲ; ಆ ಹಣ ಎಲ್ಲಿಗೆ ಹೋಗಿದೆ ಎನ್ನುವುದು ಗೊತ್ತಿಲ್ಲ; ಹಣವನ್ನು ಕಟ್ಟಿಸಿಕೊಂಡು ಸುಮಾರು 5, 10, 15 ವರ್ಷಗಳಾಗಿದ್ದರೂ ಸಹ ಇಲ್ಲಿಯವರೆವಿಗೂ ನಿವೇಶನಗಳನ್ನು ಹಂಚಿಕೆ ಮಾಡಿಲ್ಲ. ಸರ್ಕಾರ ಇದರ ಬಗ್ಗೆ ಯಾವ ಕ್ರಮವನ್ನು ಜರುಗಿಸಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕಾಗಿದೆ. ಏಕೆಂದರೇ, ಬಡವರ ದುಡ್ಡು ಈ ರೀತಿ ಪೋಲಾಗಬಾರದು.

**ಸಭಾಪತಿಯವರು:–** ಮಾನ್ಯ ರಾಮೋಜಿಗೌಡರೇ, ಮಾನ್ಯ ಸಚಿವರು ಉತ್ತರವನ್ನು ನೀಡಲಿ ನಂತರ ತಾವು ಉಪ ಪ್ರಶ್ನೆಗಳನ್ನು ಕೇಳಿ.

**ಶ್ರೀ ಕೆ.ಎನ್.ರಾಜಣ್ಣ(ಸಹಕಾರ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅವರು ಕೇಳಿರುವಂತಹ ಪ್ರಶ್ನೆಯಲ್ಲಿ ಎಲ್ಲಿಯೂ ಸಹ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಮತ್ತು ಅವುಗಳ ಕಾರ್ಯಚಟುವಟಿಕೆಗಳ ಬಗ್ಗೆ ಉಲ್ಲೇಖವಿಲ್ಲ. ಮಾನ್ಯ ಸದಸ್ಯರಿಗೆ ಈ ವಿಚಾರದ ಬಗ್ಗೆ ನನಗಿಂತಲೂ ಹೆಚ್ಚು ಮಾಹಿತಿ ಇದೆಯೆಂದು ನಾನು ಭಾವಿಸುತ್ತೇನೆ. ರಾಜ್ಯದಲ್ಲಿ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಿವೆ; ಈ ಗೃಹ ನಿರ್ಮಾಣ ಸಹಕಾರ ಸಂಘಗಳು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ; ಅವುಗಳಲ್ಲಿರುವ ಲೋಪಗಳೇನು; ಆ ಲೋಪಗಳನ್ನು ಯಾವ ರೀತಿಯಲ್ಲಿ ಸರಿಪಡಿಸಬಹುದು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಏನು ಸಲಹೆಗಳನ್ನು ನೀಡುತ್ತಾರೆ. ಆ ಸಲಹೆಗಳ ಆಧಾರದ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಗೃಹ ನಿರ್ಮಾಣ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳ ಬಗ್ಗೆ ನನಗೂ ಸಹ ಸಮಾಧಾನವಿಲ್ಲ. ಏಕೆಂದರೇ, ಒಂದೇ ಒಂದು ಗೃಹ ನಿರ್ಮಾಣ ಸಹಕಾರ ಸಂಘ ತನ್ನ ಸದಸ್ಯರ ಜ್ಯೇಷ್ಠತಾ ಪಟ್ಟಿಯನ್ನು ಇಟ್ಟುಕೊಂಡಿಲ್ಲ. ಮೂಲ ಸದಸ್ಯ ಹಣವನ್ನು ಕಟ್ಟಿದ್ದರೂ ಸಹ ಆತನಿಗೆ ನಿವೇಶನವನ್ನು ಹಂಚಿಕೆ ಮಾಡದೇ; ಬೇರೆ ಯಾರನ್ನೋ ನಾಮಿನಲ್ ಮೆಂಬರ್ ಎಂದು ಮಾಡಿಕೊಂಡು ಅವರನ್ನು ಪಟ್ಟಿಗೆ ಸೇರಿಸಿಕೊಳ್ಳುವುದು ಮತ್ತು ಬೇರೆ ಕಡೆಗಳಲ್ಲಿ ನಿವೇಶನಗಳನ್ನು ನೀಡುವಂತಹ ಕೆಲಸವನ್ನು ಮಾಡುತ್ತಿವೆ. ಕೆಲವು ಗೃಹ ನಿರ್ಮಾಣ ಸಂಘಗಳನ್ನು ಹೊರತುಪಡಿಸಿದರೆ, ಶೇಕಡಾ ೨೦ರಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಎಲ್ಲ ಫ್ರಾಡ್ ಗಿರಾಕಿಗಳೇ ಇರುತ್ತಾರೆ. ಇದರ ಬಗ್ಗೆ ಯಾವುದೇ ಅನುಮಾನಗಳಿಲ್ಲ.

ಮಾನ್ಯ ರಾಮೋಜಿಗೌಡರಿಗೆ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ನನಗಿಂತ ಹೆಚ್ಚು ಮಾಹಿತಿ ಇದೆ. ಅವರು ಯಾವ ಸಲಹೆಗಳನ್ನು ನೀಡುತ್ತಾರೆ, ಆ ಸಲಹೆಗಳ ಮೇರೆಗೆ ಕಠಿಣ ಕ್ರಮವನ್ನು ಜರುಗಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ರಾಮೋಜಿಗೌಡ:-** ಸನ್ಮಾನ್ಯ ಸಭಾಪತಿಯವರೇ, ಸುಮಾರು ಕೆಲವೊಂದು ಗೃಹ ನಿರ್ಮಾಣ ಸಹಕಾರ ಸಂಘಗಳು 10-15 ವರ್ಷಗಳ ಕಾಲ ತಮ್ಮ ಸದಸ್ಯರಿಂದ ಸುಮಾರು 500 ಕೋಟಿ ಅಥವಾ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿರುತ್ತವೆ. ಆದರೆ, ಆ ಸಂಘದ ಅಧ್ಯಕ್ಷರಿಗೆ ಕಂದಾಯ ದಾಖಲೆಗಳ ಬಗ್ಗೆ ಅರಿವು ಇರುವುದಿಲ್ಲ. ಯಾರೋ ದಳ್ಳಾಳಿಗಳು ಮತ್ತು ಮಧ್ಯವರ್ತಿಗಳು ಬಂದು ಈ ಸಂಘದವರ ಜೊತೆಗೆ ಎಂ.ಓ.ಯು., ಮಾಡಿಕೊಂಡು ಜಮೀನು ನೀಡುವುದಾಗಿ 100-200 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ನಿಜವಾದ ರೈತರಿಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಮಾನ್ಯ ಸಚಿವರು ಒಂದು ಕಮಿಟಿಯನ್ನು ರಚನೆ ಮಾಡಿ, ಇದರ ಬಗ್ಗೆ ಸುದೀರ್ಘವಾಗಿರುವ ಚರ್ಚೆ ಮಾಡಿ, ಬಡವರು ಸುಮಾರು 10-15 ವರ್ಷಗಳ ಹಿಂದೆ ಕಟ್ಟಿರುವಂತಹ ದುಡ್ಡಿಗೆ ಈಗಲಾದರೂ ಒಂದು ನಿವೇಶನವನ್ನು ಕೊಟ್ಟರೇ ಸಹಕಾರ ಕ್ಷೇತ್ರಕ್ಕೆ ಉತ್ತಮವಾಗಿರುವ ಗೌರವ ಬರುತ್ತದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಇದರ ಬಗ್ಗೆ ಮಾನ್ಯ ಸಹಕಾರ ಸಚಿವರು ವಿಶೇಷವಾಗಿರುವ ಗಮನಹರಿಸಿ, ವರ್ಷಾನುಗಟ್ಟಲೇ ಯಾರು ನಿವೇಶನವನ್ನು ಪಡೆದುಕೊಳ್ಳುವುದರಿಂದ ವಂಚಿತರಾಗಿದ್ದಾರೆ ಅವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಮೂಲಕ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೆ.ಎನ್.ರಾಜಣ್ಣ:-** ಸನ್ಮಾನ್ಯ ಸಭಾಪತಿಯವರೇ, ಕಮಿಟಿ ರಚನೆ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಯಾವ ರೀತಿಯ ಕಮಿಟಿ ರಚನೆ ಮಾಡಬೇಕೆಂದು ತಾವೇ ಹೇಳಬೇಕಾಗಿದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟರೇ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ.

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆ ಮುಗಿಯಿತು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 04ನೇ ಮಾರ್ಚ್-2025, ಸಮೂಹ-02ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 88 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**04ಪ್ರಕಟಣೆಗಳು**

**ಅ)** ಸಭಾಪತಿಯವರು ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವವರ ನಾಮನಿರ್ದೇಶನ ಪಟ್ಟಿ.

**ಸಭಾಪತಿಯವರು:- ಅ)** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ ೨೮ ಮೇರೆಗೆ ಮಾನ್ಯ ಸಭಾಪತಿಯವರು ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಈ ಮುಂದಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಗಿದೆ;

1. ಶ್ರೀ ಬಿ.ಕೆ. ಹರಿಪ್ರಸಾದ್
2. ಶ್ರೀಮತಿ ಭಾರತಿ ಶೆಟ್ಟಿ
3. ಶ್ರೀ ಎಸ್.ಎಲ್.ಭೋಜೇಗೌಡ
4. ಶ್ರೀ ಮಂಜುನಾಥ್ ಭಂಡಾರಿ

**ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಲು ಸಿದ್ಧರಿದ್ದಾರೆ. ದಯವಿಟ್ಟು ಅವಕಾಶವನ್ನು ನೀಡಿ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿಯಲ್ಲಿ ಅವರು ಉತ್ತರ ಕೊಡುವಾಗ ತಾವು ಮಾತನಾಡುವುದು ಸರಿಯಾಗಿದೆಯೇ?

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೇ, ಪೀಠಕ್ಕೆ ನಾನು ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೇ, ಇದನ್ನು ತಾವು ವಿಧಾನ ಪರಿಷತ್ತು ಎಂದು ತಿಳಿದುಕೊಂಡಿದ್ದೀರಿ? ಅಥವಾ ಬೇರೆ ಏನೆಂದು ತಿಳಿದುಕೊಂಡಿದ್ದೀರಿ.

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮನವಿಗೆ ಪತ್ರ ಬರೆದಿದ್ದೇನೆ, ಇಬ್ಬರೂ ಹೊರಗೆ ಹೋಗಿ. ನಾನು ಹೊಸದಾಗಿ ಸದಸ್ಯನಾಗಿ ಈ ಸದನಕ್ಕೆ ಬಂದಾಗ ಮಾನ್ಯ ಸದಸ್ಯರುಗಳ ಹುಟ್ಟುಹಬ್ಬಕ್ಕೆ ಶುಭಾಶಯವನ್ನು ಕೋರುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಇವತ್ತು ಆ ಪದ್ಧತಿಯನ್ನು ಪುನರ್ ಆರಂಭ ಮಾಡುತ್ತಿದ್ದೇನೆ.

**ಆ) ಸದಸ್ಯರಾದ ಡಾ: ಡಿ.ತಿಮ್ಮಯ್ಯನವರ ಜನ್ಮದಿನ ನಿಮಿತ್ತ ಶುಭಾಶಯ ಕೋರಿಕೆ**

**ಸಭಾಪತಿಯವರು:–** ಆತ್ಮೀಯರಾದ ಡಾ॥ ಡಿ.ತಿಮ್ಮಯ್ಯನವರು ಈ ದಿನ ಅಂದರೇ, ಮಾರ್ಚ್ 04ನೇ ತಾರೀಖಿನಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಅವರಿಗೆ ಈ ಸದನದ ಮೂಲಕ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುತ್ತಿದ್ದೇನೆ. ಈ ಶುಭ ಸಂದರ್ಭದಲ್ಲಿ ಭಗವಂತನು ಅವರಿಗೆ ಆರೋಗ್ಯ ಮತ್ತು ದೀರ್ಘಾಯುಷ್ಯವನ್ನು ಕರುಣಿಸಲಿ ಮತ್ತು ಶಾಸಕರಾಗಿ ಹೆಚ್ಚು ಹೆಚ್ಚು ಜನ ಸೇವೆ ಮಾಡುವ ಮೂಲಕ ಅವರು ಸಾರ್ವಜನಿಕ ಜೀವನದಲ್ಲಿ ಉನ್ನತ ಮಟ್ಟಕ್ಕೆ ಏರಲಿ ಎಂದು ಈ ಸದನದ ಪರವಾಗಿ ಶುಭವನ್ನು ಹಾರೈಸುತ್ತಿದ್ದೇನೆ.

**ಇ) ಶ್ರೀ ಎನ್.ರವಿಕುಮಾರ್‌ರವರು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ನೇಮಕಗೊಂಡಿರುವುದಕ್ಕೆ ಅಭಿನಂದನೆ.**

ಶ್ರೀ ಎನ್.ರವಿಕುಮಾರ್‌ರವರು ನಿನ್ನೆ ದಿನ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಆಯ್ಕೆಗೊಂಡಿದ್ದಾರೆ ಅವರಿಗೂ ಸಹ ಈ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**(ಸದನದ ಎಲ್ಲ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**೦೫. ನಿಯಮ ೫೯ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಗಳಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು.**

\- - -

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಗಳಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ, ಪ್ರತಿ ಬಾರಿಯಂತೆ ಅದನ್ನು ನಿಯಮ ೩೩೦ಕ್ಕೆ ಪರಿವರ್ತಿಸಲಾಗಿದೆ. ಇದು ಇತ್ತೀಚಿನ ಸಂಗತಿಯಲ್ಲ, ಒಂದು ವರ್ಷದಿಂದ ನಡೆದುಕೊಂಡು ಬಂದಿದೆ. ನಿಯಮ ೩೩೦ಕ್ಕೆ ಇದನ್ನು ಪರಿವರ್ತನೆ ಮಾಡಿದರೆ, ಸದರಿ ವಿಚಾರದ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಕಾಲಾವಕಾಶ ದೊರೆಯುತ್ತದೆ ಮತ್ತು ಎಲ್ಲಾ ಮಾನ್ಯ ಸದಸ್ಯರುಗಳಿಗೂ ಮಾತನಾಡುವುದಕ್ಕೆ ಅವಕಾಶ ದೊರೆದಂತಾಗುತ್ತದೆ. ಆದ್ದರಿಂದ ಈ ವಿಚಾರವನ್ನು ನಿಯಮ ೩೩೦ಕ್ಕೆ ಪರಿವರ್ತಿಸಲಾಗಿದೆ.

**(ನಿಯಮ ೩೩೦ಕ್ಕೆ ಪರಿವರ್ತಿಸಲಾಯಿತು)**

**ಶ್ರೀ ಎಸ್.ಎನ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಇದು ನಿನ್ನೆ ಮೊನ್ನೆಯಿಂದ ನಡೆದಿರುವ ವಿಚಾರವಲ್ಲ.

**ಸಭಾಪತಿಯವರು:-** ನಿಲುವಳಿ ಸೂಚನೆಯನ್ನು ನೀಡುವುದು ಮಾನ್ಯ ವಿರೋಧ ಪಕ್ಷದ ನಾಯಕರ ಹಕ್ಕಾಗಿದೆ; ಕೆ.ಪಿ.ಎಸ್.ಸಿ.ಗೆ ಸಂಬಂಧಪಟ್ಟಂತೆ ಪ್ರತಿದಿನ ಪತ್ರಿಕೆಗಳಲ್ಲಿ ವಿಚಾರಗಳು ಬರುತ್ತಿವೆ. ಅದನ್ನು ನಾನು ನೋಡಿದ್ದೇನೆ. ಅದಕ್ಕಾಗಿ ಸದರಿ ವಿಚಾರವನ್ನು ನಿಯಮ ೩೩೦ಕ್ಕೆ ಪರಿವರ್ತಿಸಲಾಗುತ್ತಿದೆ. ಎಷ್ಟು ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಕೇಳುತ್ತಾರೆ, ಅವರೆಲ್ಲರಿಗೂ ಅವಕಾಶವನ್ನು ನೀಡಲಾಗುತ್ತದೆ. ಈಗ ಶೂನ್ಯವೇಳೆ ಪ್ರಸ್ತಾವಗಳು, ಶ್ರೀ ಸಿ.ಟಿ.ರವಿ ಮತ್ತು ಶ್ರೀ ಶಾಂತರಾಮ ಬುಡ್ನ ಸಿದ್ದಿ.

## ೦೬. ನಿಯಮ ೫೮ಎ ಮೇರೆಗೆ ಶೂನ್ಯವೇಳೆ ಸೂಚನೆಗಳು

**ಅ) ವಿಷಯ:- ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನೀರು ಪೂರೈಕೆಗೆ ಬೋರ್‌ವೆಲ್ ಕೊರೆಸಲು ಹಾಗೂ ಜಾನುವಾರುಗಳಿಗೆ ಮೇವು ಪೂರೈಕೆಗೆ ಗೋ-ಶಾಲೆ ತೆರೆಯುವ ಕುರಿತು.**

---

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಬೇಸಿಗೆ ಆರಂಭವಾಗಿದ್ದು, ಈ ಬಾರಿ ಹೆಚ್ಚಿನ ಪ್ರಮಾಣದ ತಾಪಮಾನವನ್ನು ಎದುರಿಸಬೇಕಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ನಡುವೆ ರಾಜ್ಯದ ಹಲವು ಜಿಲ್ಲಾ ಕೇಂದ್ರಗಳು ಸೇರಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಕಾಣಿಸುವ ಭೀತಿ ಎದುರಾಗಿದ್ದು, ಈ ಕುರಿತು “ಉದಯವಾಣಿ” ದಿನಪತ್ರಿಕೆಯಲ್ಲಿ ಸವಿಸ್ತಾರ ವರದಿ ಪ್ರಕಟವಾಗಿದೆ.

ರಾಜ್ಯದ ೧೬೦೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಮತ್ತು ೧೪ಕ್ಕೂ ಹೆಚ್ಚು ಜಿಲ್ಲಾ ಕೇಂದ್ರಗಳಲ್ಲಿ ನೀರಿಗೆ ಹಾಹಾಕಾರ ಸ್ಥಿತಿ ನಿರ್ಮಾಣವಾಗಿದ್ದು ಬೇಸಿಗೆ ನಿರ್ವಹಣೆ ಹೇಗೆಂಬ ಪ್ರಶ್ನೆ ಎದ್ದಿದೆ. ರಾಜ್ಯದ ರಾಜಧಾನಿ ಬೆಂಗಳೂರು, ಕೋಲಾರ ಮತ್ತು ದಕ್ಷಿಣ ಕನ್ನಡ ಸೇರಿ ಹಲವು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತ ಕಂಡಿರುವುದರಿಂದ ನೀರಿನ ಅಭಾವವುಂಟಾಗಿದ್ದರೆ, ಬೆಂಗಳೂರು ಗ್ರಾಮಾಂತರ, ಯಾದಗಿರಿ, ಕಲಬುರಗಿ, ಚಿಕ್ಕಮಗಳೂರು, ಕೊಪ್ಪಳ, ವಿಜಯಪುರ, ಬಳ್ಳಾರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನೀರಿನ ಸಮಸ್ಯೆ ತಲೆದೋರಿದೆ. ಬೇಸಿಗೆ ಆರಂಭದಲ್ಲೇ ಈ ಪರಿಸ್ಥಿತಿ ಇದ್ದರೆ, ಬೇಸಿಗೆ ಮಧ್ಯಭಾಗದಲ್ಲಿ ಮತ್ತು ಬೇಸಿಗೆ ಅಂತ್ಯದಲ್ಲಿ ಪರಿಸ್ಥಿತಿ ಕೈಮೀರುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರ ಈ ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸಭೆ ನಡೆಸಿ, ನೀರಿನ ಸಮಸ್ಯೆ ತಲೆದೋರದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಬೇಕು. ಜನರಿಗೆ ಕುಡಿಯುವ ನೀರು ಪೂರೈಸಲು ಅಗತ್ಯವಿರುವೆಡೆ ಬೋರ್‌ವೆಲ್‌ಗಳನ್ನು ಕೊರೆಸಲು ಮತ್ತು ಜಾನುವಾರುಗಳಿಗೆ ಮೇವು ಪೂರೈಕೆಗೆ ಗೋ-ಶಾಲೆ ತೆರೆಯಲು ಅಗತ್ಯ ಹಣ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಅಗ್ರಹಿಸುತ್ತೇನೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ಧಿ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, “ಬೇಸಿಗೆ ಆರಂಭಕ್ಕೆ ಅರ್ಧ ರಾಜ್ಯದಲ್ಲಿ ನೀರಿಗೆ ತತ್ವಾರ” ಎಂಬ ಶೀರ್ಷಿಕೆಯಡಿ “ಉದಯವಾಣಿ” ದಿನ ಪತ್ರಿಕೆಯಲ್ಲಿ ಉಲ್ಲೇಖಿಸಿದ ಕೆಲವು ಅಂಶಗಳನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ರಾಜ್ಯದಲ್ಲಿ ಈಗಾಗಲೇ ಬೇಸಿಗೆ ಬಿಸಿ ತಾರಕಕ್ಕೆ ಏರಿದ್ದು ಈ ಬಾರಿ ಭಾರಿ ಪ್ರಮಾಣದ ತಾಪಮಾನವನ್ನು ಎದುರಿಸಬೇಕಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಬೆನ್ನಲ್ಲೇ ರಾಜ್ಯದ ಹಲವು ಜಿಲ್ಲಾ

ಕೇಂದ್ರಗಳು ಸೇರಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಕಾಣಿಸುವ ಭೀತಿ ಇದೆ. ಪತ್ರಿಕೆ ಗ್ರೌಂಡ್ ರಿಪೋರ್ಟ್ ಸಿದ್ಧಪಡಿಸಿದ ವರದಿ ಅನ್ವಯ 1600ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಮತ್ತು 14ಕ್ಕೂ ಹೆಚ್ಚು ಜಿಲ್ಲಾ ಕೇಂದ್ರಗಳಲ್ಲಿಯೂ ನೀರಿಗೆ ಹಾಹಾಕಾರ ಎದ್ದಿರುವುದು ಗೊತ್ತಾಗಿದೆ.

ರಾಜಧಾನಿ ಬೆಂಗಳೂರು, ಕೋಲಾರ ಮತ್ತು ದಕ್ಷಿಣ ಕನ್ನಡ ಸೇರಿ ಹಲವು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತ ಕಂಡಿದೆ. ಹಾಗಾಗಿ ಬೆಂಗಳೂರು ಗ್ರಾಮಾಂತರ, ಯಾದಗಿರಿ, ಬೆಳಗಾವಿ, ಶಿವಮೊಗ್ಗ, ದಾವಣಗೆರೆ ಕಲಬುರಗಿ, ಚಿಕ್ಕಮಗಳೂರು, ಕೊಪ್ಪಳ, ವಿಜಯಪುರ, ಬಳ್ಳಾರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನೀರಿನ ಸಮಸ್ಯೆ ಈಗಾಗಲೇ ತಲೆದೋರಿದ್ದು, ಬೇಸಿಗೆಯ ಮಧ್ಯಕಾಲದಲ್ಲಿ ಯಾವ ಹಂತವನ್ನು ಬೇಕಾದರೂ  ತಲುಪಬಹುದಾಗಿದೆ.

ಹೀಗಾಗಿ ಬೇಸಿಗೆ ನಿರ್ವಹಣೆ ಕುರಿತು ಕರ್ನಾಟಕ ಸರ್ಕಾರವು ತುರ್ತು ಕ್ರಮ ಕೈಗೊಳ್ಳಬೇಕು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಶ್ರೀ ಎಸ್.ಎನ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

(ಮುಂದು)

(024) 04.03.2024/ 12.50/ ಪಿಕೆ-ಎಕೆ (ಸಭಾಪತಿಗಳ ಉಪಸ್ಥಿತಿ)

**ಆ) ವಿಷಯ: ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಛಯ ಭವನ ನಿರ್ಮಾಣದ ಕಾಮಗಾರಿಯನ್ನು ಮುಕ್ತಾಯಗೊಳಿಸಿ ಲೋಕಾರ್ಪಣೆಗೊಳಿಸುವ ಕುರಿತು**

- - -

**ಶ್ರೀ ಎಂ.ಪಿ.ಸುಜಾ ಕುಶಾಲಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ಸೊರಗಿವೆ ಸಮುದಾಯ ಭವನ" ಎನ್ನುವ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಸುದ್ದಿಯಲ್ಲಿ ಕೊಡಗು ಜಿಲ್ಲೆಯಲ್ಲಿ ನಿರ್ಮಾಣಗೊಂಡ ಅನೇಕ ಸಮುದಾಯ ಭವನಗಳು ಸಮರ್ಪಕ ನಿರ್ವಹಣೆ ಇಲ್ಲದೆ ಪಾಳು ಬಿದ್ದಿರುವ ಕುರಿತು ವರದಿಯಾಗಿತ್ತು.

ನಾನಾ ಸಮುದಾಯಗಳಿಗೆ ಅನುಕೂಲವಾಗಲೆಂದು ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ನಾನಾ ಇಲಾಖೆಗಳಿಂದ ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ. ಸುಸಜ್ಜಿತ ಕಟ್ಟಡ ನಿರ್ಮಾಣದ ಬಳಿಕ ಆಯಾ ಸಮುದಾಯಗಳು, ಸಮಿತಿಗಳಿಗೆ ಆ ಸಮುದಾಯ ಭವನಗಳ ನಿರ್ವಹಣೆಯ ಜವಾಬ್ದಾರಿ ನೀಡಲಾಗುತ್ತದೆ. ಇಂತಹ ಸಮುದಾಯ ಭವನಗಳ ಸ್ಥಿತಿಗತಿ ಬಗ್ಗೆ ಯಾವುದೇ ಇಲಾಖೆಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಇದರಿಂದ ಜಿಲ್ಲೆಯಲ್ಲಿ ಹಲವು ಭವನಗಳು ನಿರ್ವಹಣೆ ಇಲ್ಲದೇ ಸೊರಗಿವೆ. ಸಾರ್ವಜನಿಕ ಸಭೆ, ಸಮಾರಂಭಗಳಿಗಾಗಿ ನಿರ್ಮಿಸಲು ಉದ್ದೇಶಿಸಿರುವ ಹಲವು ತಾಲ್ಲೂಕು, ಜಿಲ್ಲಾ ಮಟ್ಟದ ಭವನಗಳು ವರ್ಷಗಳಿಂದ ನಿರ್ಮಾಣದ ಹಂತದಲ್ಲಿಯೇ ಇದ್ದು, ಕಾಮಗಾರಿ ಮುಕ್ತಾಯವಾಗದೇ ಸರ್ಕಾರದ ಹಣ ವ್ಯರ್ಥವಾಗುತ್ತಿದೆ. ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಛಯ ಭವನ ನಿರ್ಮಾಣ ಕಾಮಗಾರಿ ಇನ್ನೂ ಪೂರ್ಣಗೊಳ್ಳದೆ ಇರುವುದು ಇದಕ್ಕೆ ನಿದರ್ಶನವಾಗಿದೆ.

ಆದ್ದರಿಂದ ಸಮರ್ಪಕವಾದ ನಿರ್ವಹಣೆಯ ಕೊರತೆಯಿಂದ ಅವನತಿಯತ್ತ ಸಾಗುತ್ತಿರುವ ಕೆಲ ಸಮುದಾಯ ಭವನಗಳ ನಿರ್ವಹಣೆಯನ್ನು ಸರ್ಕಾರದ ಮಟ್ಟದಲ್ಲಿ ವಹಿಸುವಂತೆ, ನಿರ್ಮಾಣದ ಹಂತದಲ್ಲಿಯೇ ಬಾಕಿ ಇರುವ ಭವನಗಳ ಕಾಮಗಾರಿಯನ್ನು ಶೀಘ್ರ ಮುಗಿಸುವಂತೆ ಮತ್ತು 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಛಯ ಭವನ ನಿರ್ಮಾಣದ ಕಾಮಗಾರಿಯನ್ನು ಕೂಡಲೇ ಮುಕ್ತಾಯಗೊಳಿಸಿ ಲೋಕಾರ್ಪಣೆಗೊಳಿಸಬೇಕೆಂದು ಕೋರಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಇದಕ್ಕೆ ಉತ್ತರ ಕೊಡಿಸುತ್ತೇನೆ.

**ಇ) ವಿಷಯ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾಲಯಗಳು, ಸಹಕಾರ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಕುರಿತು.**

- - -

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾಲಯಗಳು, ಸಹಕಾರ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಬಗ್ಗೆ ವಿಜಯವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ರಾಜ್ಯ ಸರ್ಕಾರದಲ್ಲಿ 2025ರ ಜನವರಿ 24ರವರೆಗೆ ವಿವಿಧ ಇಲಾಖೆಗಳಲ್ಲಿ 916 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇದ್ದು, ಈ ಪೈಕಿ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಅತೀ ಹೆಚ್ಚು 530, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ 185, ಜಲಸಂಪನ್ಮೂಲ ಇಲಾಖೆಯಲ್ಲಿ 112 ಹುದ್ದೆಗಳು ಖಾಲಿ ಇರುತ್ತವೆ. ಬ್ಯಾಕ್‌ಲಾಗ್ ಹುದ್ದೆಗಳನ್ನು ಆರು ತಿಂಗಳ ಒಳಗೆ ಭರ್ತಿ ಮಾಡುವಂತೆ ಹೈಕೋರ್ಟ್ ಆದೇಶ ಸಹ ನೀಡಿತ್ತು. ಆದರೆ ಬಹುತೇಕ ಇಲಾಖೆಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದು ತಿಳಿದು ಬಂದಿರುತ್ತದೆ. ಪರಿಣಾಮ 2024ರ ಮಾರ್ಚ್ 26ರಂದೇ ನ್ಯಾಯಾಂಗ ನಿಂದನಾ ಅರ್ಜಿ ದಾಖಲಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಸಹಮತದ ಅವಶ್ಯಕತೆ ಇರುವುದಿಲ್ಲ. ಈ ಹುದ್ದೆಗಳನ್ನು ಸಾಮಾನ್ಯ ಹುದ್ದೆಗಳೊಂದಿಗೆ ಸೇರಿಸಿ ನೇಮಕಾತಿ ಅಧಿಸೂಚನೆ ಹೊರಡಿಸಲು ಸಹ ಅವಕಾಶ ಇಲ್ಲ. ಪ್ರತ್ಯೇಕ ಅಧಿಸೂಚನೆ ಹೊರಡಿಸಬೇಕೆಂದು ನಿರ್ದೇಶನಗಳಿವೆ. ಆದರೆ ಈ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಲೇ ಬರುತ್ತಿದೆ. ಇನ್ನು ಮುಂಬಡ್ತಿಯಲ್ಲೂ ಪರಿಶಿಷ್ಟ ಜಾತಿಗೆ ಶೇಕಡ 17, ಪರಿಶಿಷ್ಟ ಪಂಗಡಕ್ಕೆ ಶೇಕಡಾ 7 ಮೀಸಲಾತಿ ನೀಡಬೇಕಿದ್ದು, 1999ರ ಫೆಬ್ರವರಿ 3 ಮತ್ತು ಏಪ್ರಿಲ್ 13ರಂದು ಹೊರಡಿಸಿದ್ದ ಡಿಪಿಎಆರ್‌ಸರ್ಕಾರಿ ಆದೇಶಗಳನ್ನು ಹಿಂಪಡೆಯಬೇಕು. ಈ ಆದೇಶಗಳಿಂದ ಮುಂಬಡ್ತಿ ವಂಚಿತರಾದವರಿಗೆ ವಂಚಿತರಾದ ದಿನಾಂಕದಿಂದಲೇ ಮುಂಬಡ್ತಿಗೆ ಪರಿಗಣಿಸಬೇಕಾಗಿದೆ. ಅಲ್ಲದೇ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ 2001ರ ಪೂರ್ವ ಮತ್ತು ನಂತರದ ಹುದ್ದೆಗಳಿಗೂ ಈ ನಿಯಮಗಳನ್ನು ಅನ್ವಯಿಸಬೇಕಾಗಿದೆ.

ಸರ್ಕಾರ ಸಹ ಈ ಎಲ್ಲಾ ವಿಚಾರಗಳನ್ನು ಮನಗಂಡಿದ್ದು, ಸಚಿವ ಸಂಪುಟ ಉಪ ಸಮಿತಿ ಅಗತ್ಯ ತಿದ್ದುಪಡಿ ತರಲು ಮುಂದಾಗಿರುವುದು ಸಮಾಧಾನಕರ ಸಂಗತಿಯಾಗಿದ್ದು, ಈ ವಿಚಾರದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಬ್ಯಾಕ್‌ಲಾಗ್ ಹುದ್ದೆಗಳು ಯಾವುದೇ ವಿಳಂಬವಿಲ್ಲದೆ ಭರ್ತಿಯಾಗುವಂತೆ ಅಗತ್ಯ ಕ್ರಮ ಕೈಗೊಂಡು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಹಾಗೂ ನೌಕರರಿಗೆ ಅನುಕೂಲ ಮಾಡಿಕೊಡಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ.

**ಈ) ವಿಷಯ: ರಾಜ್ಯದಲ್ಲಿ ಕೇಂದ್ರ ಸರ್ಕಾರದ ನರೇಗಾ ಯೋಜನೆಯಡಿ ಹಣ ದುರ್ಬಳಕೆ ಆಗಿರುವ ಕುರಿತು.**

- - -

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ (ಮನರೇಗಾ) ರಾಜ್ಯದಲ್ಲಿ ಒಂದೇ ವರ್ಷದಲ್ಲಿ ರೂ.669.92 ಕೋಟಿ ದುರ್ಬಳಕೆ ಆಗಿರುವುದು ಸಾಮಾಜಿಕ ಲೆಕ್ಕ ಪರಿಶೋಧನಾ ವರದಿಯಿಂದ ಪತ್ತೆಯಾಗಿರುವ ವಿಷಯ 'ವಿಜಯವಾಣಿ 'ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಹಾಗೂ ಗ್ರಾಮೀಣ ಭಾಗಗಳಲ್ಲಿ ದುಡಿಯುವ ಕಾರ್ಮಿಕರಿಗೆ ಕೆಲಸ ಒದಗಿಸುವ ಉದ್ದೇಶದಿಂದ 2013-14ನೇ ಸಾಲಿನಿಂದ ನರೇಗಾ ಯೋಜನೆ ಜಾರಿಗೊಳಿಸಲಾಗಿದೆ. ರಾಜ್ಯದ 31 ಜಿಲ್ಲೆಗಳ ಗ್ರಾಮ ಪಂಚಾಯಿತಿ ಹಾಗೂ ಅನುಷ್ಠಾನ ಇಲಾಖೆಗಳಲ್ಲಿ 2022-23ನೇ ಸಾಲಿನ ಲೆಕ್ಕ ಪರಿಶೀಲನೆ ನಡೆಸಿದ್ದ ಪರಿಶೋಧಕರು ಹಣ ದುರುಪಯೋಗವಾಗಿರುವುದನ್ನು ದಾಖಲೆ ಸಮೇತ ಪತ್ತೆ ಮಾಡಿರುವುದು ತಿಳಿದು ಬಂದಿರುತ್ತದೆ. ಕಾಮಗಾರಿ ಮಾಡದೇ ಕೂಲಿ ಹಣ ಪಾವತಿ ಮಾಡಿರುವುದು, ಯೋಜನೆಗೆ ಮೀಸಲಿಟ್ಟ ಹಣವನ್ನು ಮೀರಿ ಹೆಚ್ಚುವರಿ ಹಣ ಪಾವತಿಸಿರುವುದು, ಬೇರೆ ಯೋಜನೆಗಳಿಗೆ ನರೇಗಾ ಹಣ ನೀಡಿರುವುದು, ಸತ್ತವರ ಹೆಸರಿನಲ್ಲೂ ಕೂಲಿ ಪಾವತಿಸಿರುವಂಥ ದೋಷಗಳು ಕಂಡುಬಂದಿರುತ್ತವೆ. ಇದರೊಂದಿಗೆ ಹಲವು ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳನ್ನು ಒದಗಿಸದೇ ಲೋಪವೆಸಗಲಾಗಿದೆ.

2013-2014ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಕೈಗೊಂಡಿರುವ ಕಾಮಗಾರಿಗಳ ಕೂಲಿ ಮೊತ್ತದಲ್ಲಿ ಸುಮಾರು ರೂ. 4,500 ಕೋಟಿ ಮೊತ್ತಕ್ಕೆ ಯಾವುದೇ ದಾಖಲೆ ಸಲ್ಲಿಕೆಯಾಗದಿರುವುದನ್ನು ಸಹ ಪತ್ರಿಕೆ ಉಲ್ಲೇಖಿಸಿರುತ್ತದೆ. ಹಣ ದುರುಪಯೋಗವಾಗಿರುವುದನ್ನು ವಸೂಲಿ ಮಾಡಲು ಕ್ರಮ ಜರುಗಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಯುಕ್ತರು ಸೂಚಿಸಿ ನಾಲ್ಕು ತಿಂಗಳು ಕಳೆದಿದ್ದರೂ ಹಣ ವಸೂಲಾತಿಗೆ ಸಿ.ಇ.ಓ.ಗಳು ಕ್ರಮ ಜರುಗಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿರುತ್ತದೆ. ದುರುಪಯೋಗವಾದ ಹಣವನ್ನು ವಸೂಲಿ ಮಾಡಲು ಜಿಲ್ಲಾ ಮಟ್ಟದಲ್ಲಿ ವಸೂಲಾತಿ ಕೋಶ ರಚಿಸಬೇಕೆಂಬ ನಿಯಮವಿದ್ದರೂ ಬಹುತೇಕ ಜಿಲ್ಲೆಗಳಲ್ಲಿ ಈ ಕೋಶ ನಿಷ್ಕ್ರಿಯೆಗೊಂಡಿದ್ದು, ವಸೂಲಿ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಒಟ್ಟಾರೆ ಸರ್ಕಾರದ 9 ಇಲಾಖೆಗಳಲ್ಲಿ ನರೇಗಾ ಹಣ ದುರ್ಬಳಕೆಯಾಗಿರುವುದು ಕಂಡುಬಂದಿದ್ದು, ಸರ್ಕಾರ ದುರ್ಬಳಕೆ ಆಗಿರುವ ಹಣ ವಸೂಲಿಸಲು ಒಂದು ವಿಶೇಷ ಸಮಿತಿ ರಚನೆ ಮಾಡಬೇಕು ಹಾಗೂ ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಉ) ವಿಷಯ: ಸಾರ್ವಜನಿಕರಿಗೆ ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಆಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ನೀಡುವ ಬಗ್ಗೆ.**

- - -

**ಡಾ:ಧನಂಜಯ ಸರ್ಜಿ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅತ್ಯಂತ ವಿಲಕ್ಷಣ ಹಾಗೂ ಅಷ್ಟೇ ಗಂಭೀರವಾದ ಪಿಡುಗಿನ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. "ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಯಲ್ಲಿ ಪ್ರಕಟವಾದ "Dog bite cases, rabies deaths see surge across Karnataka" ಎಂಬ ಗಂಭೀರ ವಿಷಯವನ್ನು ವಸ್ತುನಿಷ್ಠವಾಗಿ ಪ್ರಕಟಿಸಲಾಗಿದೆ.

ರಾಜ್ಯದಲ್ಲಿ ಆರೋಗ್ಯ ಇಲಾಖೆಗೆ ತಲೆನೋವಾಗುವಷ್ಟು ನಾಯಿ ಕಡಿತ ಹಾಗೂ ರೇಬಿಸ್ ಪ್ರಕರಣಗಳು ವರದಿಯಾಗುತ್ತಿವೆ. ಕಳೆದ ವರ್ಷ 3,65,522 ನಾಯಿ ಕಡಿತ ಪ್ರಕರಣಗಳು ಹಾಗೂ 42 ಜನ ವೃತಪಟ್ಟಿದ್ದು, ಈ ವರ್ಷದ ಜನವರಿಯಿಂದ ಇದುವರೆಗೆ 66,459 ನಾಯಿ ಕಡಿತ ಹಾಗೂ 8 ಮೃತಪಟ್ಟಿರುವ ಪ್ರಕರಣಗಳು ನಮ್ಮ ರಾಜ್ಯದಲ್ಲಿ ನಡೆದಿರುವುದು ಆತಂಕಕಾರಿ ಹಾಗೂ ಖೇದಕರ ಸಂಗತಿಯಾಗಿದೆ. ಕೋವಿಡ್ ನಂತರದ ವರ್ಷಗಳಲ್ಲಿ ನಾಯಿ ಕಡಿತ ಮತ್ತು ರೇಬಿಸ್ ಪ್ರಕರಣಗಳಲ್ಲಿ ಅತೀ ಹೆಚ್ಚಳ ಕಾಣುತ್ತಿದ್ದು, ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಶೇ.47ರಷ್ಟು ಹೆಚ್ಚಳವಾಗಿದೆ. ಬೆಂಗಳೂರಿನಲ್ಲಿ 2,419 ನಾಯಿ ಕಡಿತ ಪ್ರಕರಣಗಳು ಹಾಗೂ 4 ರೇಬಿಸ್‌ನಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ರಾಜ್ಯದ ರಾಜಧಾನಿಯಾಗಿ ಎಲ್ಲಾ ಸೌಲಭ್ಯ ಹಾಗೂ ತಿಳುವಳಿಕೆ ಇದ್ದಾಗ್ಯೂ ಈ ಅಂಕಿ ಅಂಶಗಳು ಸರ್ಕಾರದ ನಿಷ್ಕ್ರಿಯತೆ ಹಾಗೂ ಕರ್ತವ್ಯ ವೈಫಲ್ಯವನ್ನು ಎತ್ತಿ ತೋರಿಸುತ್ತದೆ.

ಪತ್ರಿಕೆಯಲ್ಲಿ ವರದಿಯಾದಂತೆ ಸಂಪೂರ್ಣ ವ್ಯಾಕ್ಸಿನೇಷನ್ ಮಾಡದಿರುವುದು ಹಾಗೂ ನಾಯಿಗಳ ಸಂಖ್ಯೆ ನಿಯಂತ್ರಣ ಸೇರಿದಂತೆ ಹಲವು ನಿರ್ಲಕ್ಷ್ಯಗಳಿಂದ ರೇಬಿಸ್ ಮತ್ತು ನಾಯಿ ಕಡಿತದ ಕುರಿತು ತಿಳುವಳಿಕೆ ಕೊರತೆಯಿಂದಾಗಿ ಮಾರಣಾಂತಿಕವಾಗಲು ಕಾರಣವಾಗುತ್ತಿದೆ.

ಇದರೊಂದಿಗೆ, ಕಳೆದ ವರ್ಷ 13,235 ಹಾವು ಕಡಿತ ಪ್ರಕರಣಗಳು ಮತ್ತು 101 ಜನ ಹಾವು ಕಡಿತದಿಂದ ಮೃತಪಟ್ಟಿದ್ದು, ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ 1,600ಕ್ಕೂ ಹೆಚ್ಚು ಹಾವು ಕಡಿತ ಪ್ರಕರಣ ಹಾಗೂ 12 ಜನ ಹಾವು ಕಡಿತದಿಂದ ಸಾವು ಸಂಭವಿಸಿರುವುದಾಗಿ ವರದಿಯಾಗಿದೆ. ಹಳ್ಳಿ ಪ್ರದೇಶಗಳಲ್ಲಿ ತಿಳುವಳಿಕೆ ಕೊರತೆಯಿಂದಾಗಿ ಮದ್ದು, ನಾಟಿ ಔಷಧಿಗಳ ಮೊರೆ ಹೋಗುವುದರಿಂದ ವಿಷಪೂರಿತ ಹಾವು ಕಡಿತ ಪ್ರಕರಣಗಳಲ್ಲಿ ಸಾವು ಸಂಭವಿಸುತ್ತಿವೆ.

ಅಂಕಿ ಅಂಶಗಳು ಆತಂಕಕಾರಿಯಾಗಿವೆ. ಆರೋಗ್ಯ ಇಲಾಖೆಯು ಇತರೆ ಇಲಾಖೆಗಳೊಂದಿಗೆ ಹಾಗೂ ಸ್ಥಳೀಯಾಡಳಿತದ ಸಹಯೋಗದೊಂದಿಗೆ ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಆಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ಸಾರ್ವಜನಿಕರಿಗೆ ನೀಡಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಸಭಾಪತಿಯವರು:-** ಇದು ಬಹಳ ಗಂಭೀರವಾದ ವಿಷಯವಾಗಿದೆ; ಆದಷ್ಟು ಶೀಘ್ರವಾಗಿ ಗಮನಹರಿಸಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಊ) ವಿಷಯ: ಉಡುಪಿ ಜಿಲ್ಲೆಯ ಬ್ರಹ್ಮಾವರದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನೆಲಸಮ ಮಾಡಿ ರೈತ ವರ್ಗಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.**

- --

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಉಡುಪಿ ಜಿಲ್ಲೆಯ ಬ್ರಹ್ಮಾವರದ ದಕ್ಷಿಣ ಕನ್ನಡ .ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಪುನಶ್ಚೇತನ ಮತ್ತು ಕಾರ್ಖಾನೆಯನ್ನು ಸಾಲ ಮುಕ್ತಗೊಳಿಸುವ ಭರವಸೆಯೊಂದಿಗೆ ದಿನಾಂಕ 6.11.2020ರಂದು ಆಯ್ಕೆಯಾದ 10 ಸದಸ್ಯರ ಆಡಳಿತ ಮಂಡಳಿಯು ಸಾಲ ಮರುಪಾವತಿ ಹೆಸರಿನಲ್ಲಿ ಕಾರ್ಖಾನೆಯ ತಳಪಾಯದ ಕಲ್ಲನ್ನೂ ಬಿಡದೆ ಕಿತ್ತು ಮಾರಾಟ ಮಾಡಿರುವುದಲ್ಲದೇ ಕಾರ್ಖಾನೆಯ ಗುಜರಿ (ಸ್ಕ್ರಾಪ್) ಮಾರಾಟ ಪ್ರಕ್ರಿಯೆಯಲ್ಲಿ ನಿಯಮಬಾಹಿರವಾಗಿ ವರ್ತಿಸಿ, ಸರ್ಕಾರಕ್ಕೆ ಹಾಗೂ ರೈತರಿಗೆ ರೂ. 14 ಕೋಟಿಗಳಿಗೂ ಹೆಚ್ಚಿನ ಪ್ರಮಾಣದ ಮೊತ್ತವನ್ನು ವಂಚಿಸಿದೆ. ಅಲ್ಲದೇ ಈ ಬಗ್ಗೆ ನ್ಯಾಯಾಲಯದ ಆದೇಶದಂತೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ದಿನಾಂಕ 25.10.2023ರಂದು ಕ್ರೈಂ 203/2023 ರಂತೆ ಪ್ರಕರಣ ದಾಖಲಾಗಿದೆಯಾದರೂ ಪ್ರಕರಣದಲ್ಲಿ ಆಪಾದಿತರಾಗಿರುವ ಅಧಿಕಾರಿಗಳ ತನಿಖೆ ನಡೆಸಲು ಸರ್ಕಾರದ ಪೂರ್ವಾನುಮತಿ ಪಡೆಯುವುದಕ್ಕಾಗಿ 14.8.2024ರಂದು ಪೊಲೀಸ್ ಇಲಾಖೆಯು ರಾಜ್ಯ ಸರ್ಕಾರದ ಒಳಾಡಳಿತ ಇಲಾಖೆಯನ್ನು ಕೋರಿದ್ದರೂ, ಇಲ್ಲಿಯ ತನಕ ಪೂರ್ವಾನುಮತಿ ದೊರೆತಿಲ್ಲ.

ರೈತ ಸಂಘದ ಅಧ್ಯಕ್ಷರಾದ ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾದ ಶ್ರೀ ಪ್ರತಾಪಚಂದ್ರ ಶೆಟ್ಟಿಯವರ ನೇತೃತ್ವದಲ್ಲಿ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಗೇಟ್‌ನ ಬಳಿಯಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದು, ಕಳೆದ 10 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿದ್ದು, ಈ ಭಾಗದ ಎಲ್ಲಾ ರೈತರು ಇದರಲ್ಲಿ ಪಾಲ್ಗೊಂಡಿದ್ದಾರೆ. ಜಿಲ್ಲೆಯ ಹಿತಾಸಕ್ತಿಯ ದೃಷ್ಟಿಯಿಂದ ಈ ಹಗಲು ದರೋಡೆ ಪ್ರಕರಣವನ್ನು ಭೇದಿಸಿ, ಅನ್ಯಾಯಕ್ಕೆ ಒಳಗಾಗಿರುವ ಜಿಲ್ಲೆಯ ರೈತರಿಗೆ ಹಾಗೂ ಜನ ಸಾಮಾನ್ಯರಿಗೆ ನ್ಯಾಯ ಕೊಡಿಸುವ ಬಗ್ಗೆ ಹಾಗೂ ರಾಜ್ಯದ ಬೊಕ್ಕಸಕ್ಕೆ ನಷ್ಟ ಮಾಡಿರುವವರ ವಿರುದ್ಧ ಸಮರ್ಪಕವಾಗಿ ತನಿಖೆ ನಡೆಸುವ ವಿಚಾರವು ಅತಿ ಮಹತ್ವದ ವಿಚಾರವಾಗಿದ್ದು, ರಾಜ್ಯದ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರು ಈ ಬಗ್ಗೆ ಕೂಡಲೇ ಕ್ರಮಕೈಗೊಂಡು ಅನಿರ್ದಿಷ್ಟಾವಧಿ ಮುಷ್ಕರವನ್ನು ಮಾಡುತ್ತಿರುವ ರೈತರಿಗೆ ನ್ಯಾಯವನ್ನು ಒದಗಿಸಿಕೊಡಬೇಕಾಗಿ ಮತ್ತು ಸಕ್ಕರೆ ಕಾರ್ಖಾನೆಯನ್ನು ನೆಲಸಮ ಮಾಡಿ ರೈತ ವರ್ಗಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

(ಮುಂದು)

**ಋ) ವಿಷಯ: ಡಿಸೆಂಬರ್ 2024 ರಂದು ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಡೆಸಲಾದ ಕೆ.ಎ.ಎಸ್. ಪೂರ್ವಭಾವಿ ಪರೀಕ್ಷಾ ಪತ್ರಿಕೆಯಲ್ಲಿ ನ್ಯೂನತೆಗಳು ಕಂಡು ಬಂದಿರುವುದರಿಂದ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆದು, ಮರು ಅಧಿಸೂಚನೆ ಹೊರಡಿಸುವ ಬಗ್ಗೆ.**

------

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ರಾಜ್ಯದಾದ್ಯಂತ ದಿನಾಂಕ 29-12-2024 ರಂದು ನಡೆಸಲಾದ ಕೆ.ಎ.ಎಸ್. ಶ್ರೇಣಿಯ ಗ್ರೂಪ್ ಎ ಹಾಗೂ ಗ್ರೂಪ್ ಬಿ ಹುದ್ದೆಗಳ ಪರೀಕ್ಷಾ ಪ್ರಶ್ನೆ ಪತ್ರಿಕೆಯಲ್ಲಿ ಹಲವು ತಪ್ಪುಗಳು ಕಂಡು ಬಂದಿದ್ದು, ಪ್ರಶ್ನೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಲ್ಲಿ ಪ್ರಮಾದವಾಗಿದೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದು ಕರ್ನಾಟಕ ಲೋಕಸೇವಾ ಆಯೋಗದಿಂದ ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಕೆ.ಎ.ಎಸ್. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳನ್ನು ಭರ್ತಿ ಮಾಡಲು ಪರೀಕ್ಷೆಯನ್ನು ನಡೆಸಲಾಗಿತ್ತು. ಆದರೆ, ಕೆ.ಪಿ.ಎಸ್.ಸಿ. ವತಿಯಿಂದ ಸಿದ್ಧಪಡಿಸಲಾದ ಕೆ.ಎ.ಎಸ್. ಪತ್ರಿಕೆಯಲ್ಲಿ ಪ್ರಮಾದಗಳು ಕಂಡುಬಂದಿವೆ. ಈಗಾಗಲೇ ಈ ಹಿಂದೆ ದಿನಾಂಕ 27-08-2024 ರಂದು ನಡೆಸಲಾಗಿದ್ದ ಪರೀಕ್ಷೆಯಲ್ಲಿಯೂ ಕೂಡ ಪ್ರಶ್ನೆಗಳ ಭಾಷಾಂತರದಲ್ಲಿ ತಪ್ಪು, ವಾಸ್ತವಾಂಶಗಳ ತಪ್ಪುಗಳಿಂದ ಕನ್ನಡ ಮಾಧ್ಯಮ ಅಭ್ಯರ್ಥಿಗಳು ಸೇರಿದಂತೆ ಎಲ್ಲಾ ಅಭ್ಯರ್ಥಿಗಳಿಗೆ ಅನ್ಯಾಯವಾಗಿತ್ತು. ಈ ಹಿನ್ನೆಲೆಯಲ್ಲಿ ಮರು ಪರೀಕ್ಷೆಯನ್ನು ರಾಜ್ಯದಾದ್ಯಂತ ನಡೆಸಲಾಗಿತ್ತು. ಆದರೆ ಇದೀಗ ಎರಡನೇ ಬಾರಿಗೆ ನಡೆಸಲಾದ ಮರು ಪರೀಕ್ಷೆಯಲ್ಲಿಯೂ ಮತ್ತೆ ಅದೇ ದೋಷಗಳು ಕಂಡುಬಂದಿದ್ದು ವಿಶೇಷವಾಗಿ ಮತ್ತೆ ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ.

ಈ ಆರೋಪದ ಹಿನ್ನೆಲೆ ಕೆ.ಪಿ.ಎಸ್.ಸಿ. ಕಾರ್ಯದರ್ಶಿಗೆ ಪತ್ರ ಬರೆದು ಮರು ಪರೀಕ್ಷೆಯನ್ನು ನಡೆಸುವಂತೆ ಅಭ್ಯರ್ಥಿಗಳು ಮನವಿ ಮಾಡಿದ್ದರೂ ಕೂಡ ಯಾವುದೇ ಪ್ರಯೋಜನಗಳು ಆಗದೆ ಇರುವುದರಿಂದ, ಪ್ರಶ್ನೆ ಪತ್ರಿಕೆಯಲ್ಲಿ ಉಂಟಾದ ಲೋಪದಿಂದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದರಿಂದ ಈ ಬಗ್ಗೆ ಅಭ್ಯರ್ಥಿಗಳು ಕೋರ್ಟ್ ಮೊರೆ ಹೋಗಿದ್ದರು. ಪ್ರಕರಣವು ಕೋರ್ಟ್‌ನಲ್ಲಿ ಬಾಕಿ ಇದ್ದರೂ ಕೂಡ ಕೋರ್ಟ್ ಹಾಗೂ ಅಭ್ಯರ್ಥಿಗಳ ಮನವಿಗೆ ಸ್ಪಂದಿಸದೆ ತರಾತುರಿಯಲ್ಲಿ ಪೂರ್ವಭಾವಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಕರ್ನಾಟಕ ಲೋಕ ಸೇವಾ ಆಯೋಗದಿಂದ ದಿನಾಂಕ 29-12-2024 ರಂದು ನಡೆದ ಕೆ.ಎ.ಎಸ್. ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿಯೂ ಕೂಡ ಆಗಸ್ಟ್ 27 ರಂದು ನಡೆದ ಪರೀಕ್ಷೆಯಂತೆ ಭಾಷಾಂತರದಲ್ಲಿ ಸಾಕಷ್ಟು ಲೋಪದೋಷಗಳು

ಕಂಡು ಬಂದಿರುವುದರಿಂದ ಗ್ರಾಮೀಣ ಹಾಗೂ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು, ಸಾವಿರಾರು ಅಭ್ಯರ್ಥಿಗಳಿಗೆ ವಯೋಮಿತಿಯ ಕಾರಣದಿಂದಾಗಿ ಇದು ಕೊನೆಯ ಅವಕಾಶವಾಗಿರುವುದರಿಂದ ಹಾಗೂ ಈ ನೇಮಕಾತಿಯ ಅಧಿಸೂಚನೆಯು ಹಲವಾರು ಕಾರಣಗಳಿಂದ ಗೊಂದಲಗಳಿಂದ ಕೂಡಿದ್ದು, ಹಾಲಿ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆದು ಮರು ಅಧಿಸೂಚನೆಯನ್ನು ಹೊರಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಕೋರುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಎ) ವಿಷಯ: ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಮುಂತಾದ ಕಾರಣಗಳಿಂದ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವ ಬಗ್ಗೆ.**

------

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದ 9 ವಿಶ್ವವಿದ್ಯಾಲಯಗಳಾದ ಬಾಗಲಕೋಟೆ, ಬೀದರ್, ಹಾಸನ, ಚಾಮರಾಜನಗರ, ಹಾವೇರಿ, ಕೊಡಗು, ಕೊಪ್ಪಳ ಮಹಾರಾಣಿ ವಿಶ್ವವಿದ್ಯಾಲಯ, ಮಂಡ್ಯ ಮತ್ತು ನೃಪತುಂಗ ವಿಶ್ವವಿದ್ಯಾಲಯಗಳನ್ನು ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಬೋಧಕೇತರ/ಬೋಧಕರ ಸಿಬ್ಬಂದಿ ಕೊರತೆ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಸೇರಿದಂತೆ ಅನೇಕ ಕಾರಣಗಳನ್ನು ನೀಡಿ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ರಾಜ್ಯ ಸರ್ಕಾರವು ಮುಚ್ಚುವ ನಿರ್ಧಾರ ಮಾಡಿರುವುದು ಖಂಡನೀಯ ವಿಷಯವಾಗಿದೆ.

ಏಕೆಂದರೆ, ಇವುಗಳು ಮುಖ್ಯವಾಗಿ ಹಿಂದುಳಿದ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಾಗಿವೆ. ಸ್ಥಾಪನೆಗೊಂಡಿರುವ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರದಿಂದಾಗಿ ವಿಶೇಷವಾಗಿ ಬಡ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಲ್ಲದೇ ಪ್ರಾದೇಶಿಕವಾಗಿಯೂ ಸಹ ಆಯಾ ಜಿಲ್ಲೆಗಳ ಸರ್ವಾಂಗೀಣಾಭಿವೃದ್ಧಿಗೆ ಮಾರಕವಾಗುವುದರ ಜೊತೆಗೆ ರೈತಾಪಿ ಹಿಂದುಳಿದ ವರ್ಗದ ಮಕ್ಕಳ ಉನ್ನತ ಶಿಕ್ಷಣ ಪಡೆಯುವ ಕನಸು ಸಹ ಗಗನ ಕುಸುಮವಾಗಲಿದೆ ಹಾಗೂ ಬಡ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕನ್ನು ರಾಜ್ಯ ಸರ್ಕಾರವೇ ಕಸಿದುಕೊಂಡಂತಾಗುವುದಲ್ಲವೇ? ಆ ಭಾಗದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುವುದಿಲ್ಲವೇ? ಆದ್ದರಿಂದ ಸರ್ಕಾರವು ಈ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರವನ್ನು ಈ ಕೂಡಲೇ ಹಿಂಪಡೆಯಬೇಕು.

2021-22ರಲ್ಲಿ ಈ ಹಿಂದೆ ಬಿಜೆಪಿ ಸರ್ಕಾರವು ವಿಶ್ವವಿದ್ಯಾಲಯಗಳ ಅವಶ್ಯಕತೆಗೆ ಹಾಗೂ ಅದರ ಬಗ್ಗೆ ಸಾಕಷ್ಟು ಪರಿಶೀಲಿಸಿ/ಚರ್ಚಿಸಿ ವಿಚಾರ ವಿನಿಮಯ ಮಾಡಿದ ನಂತರ ಅಂದಿನ ಉನ್ನತ ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿಗಳು ಈ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದಾರೆ ಹಾಗೂ ಸದರಿ ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಕೂಡ ಅನುದಾನ ಹಂಚಿಕೆ ಮಾಡಲಾಗಿತ್ತು. ಆದರೆ ಇಲ್ಲಿಯವರೆಗೂ ಸಹ ಯಾವುದೇ ಅನುದಾನ ಮಂಜೂರಾಗದೇ ಇರುವುದು ದುರದೃಷ್ಟಕರ ಸಂಗತಿಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಬಿಡಬೇಕು ಹಾಗೂ ಈ ಕೂಡಲೇ ಸದರಿ ವಿಶ್ವವಿದ್ಯಾಲಯಗಳ ಶ್ರೇಯೋಭಿವೃದ್ಧಿಗೆ ರಾಜಕೀಯ ಮಾಡದೇ ಈ ಹಿಂದೆ ನೀಡಲಾದ ಆಯವ್ಯಯದಲ್ಲಿ ಹಂಚಿಕೆ ಮಾಡಲಾದ

ಅನುದಾನದ ಜೊತೆಗೆ ಮುಂಬರುವ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಿ ಶಿಕ್ಷಣ ಕ್ಷೇತ್ರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರವು ಮುಂದಾಗಬೇಕೆಂದು ರಾಜ್ಯದಾದ್ಯಂತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಘಟನೆ/ಪಾಲಕರು/ಶಿಕ್ಷಣ ತಜ್ಞರು ಸೇರಿದಂತೆ ಸರ್ಕಾರದ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರದ ವಿರುದ್ಧ ಪ್ರತಿಭಟನೆಗಳನ್ನು ನಡೆಸುತ್ತಿರುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ ಮತ್ತು ಪ್ರತಿ ಜಿಲ್ಲೆಗೊಂದು ವಿಶ್ವವಿದ್ಯಾಲಯ ಆಗಬೇಕೆನ್ನುವುದನ್ನು ಸಹ ಹೊಸ ಶಿಕ್ಷಣ ನೀತಿಯ ಆಶಯವಾಗಿದೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ ಎಂದು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಹಾಗೂ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ, ವಂದನೆಗಳು.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೇ, ನಿಮಗೆ ಮಾತನಾಡಿ ಎಂದರೆ ಕುದುರೆಯ ವೇಗದ ರೀತಿ ಮಾತನಾಡುತ್ತೀರಿ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾಗರಾಜುರವರಿಗೆ ನಿಧಾನವಾಗಿ ಮಾತನಾಡುವುದಕ್ಕೆ ಹೇಳಿ.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಮಾನ್ಯ ರಾಮಲಿಂಗಾರೆಡ್ಡಿಯವರು ನಿಧಾನವಾಗಿ ಮಾತನಾಡುವುದಕ್ಕೆ ಹೇಳಿ ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಗುರುಗಳು ಅವರೇ.

**ಸಭಾಪತಿಯವರು:-** ನಾನು ಕಲಿಯುವ ಹಾಗಿಲ್ಲ, ನನ್ನ ಮಕ್ಕಳು ಕಲಿಯುವ ಹಾಗಿಲ್ಲ, ನಮ್ಮ ಅಪ್ಪ ಕಲಿಯುವ ಹಾಗಿಲ್ಲ ಎಂದು ನಮ್ಮ ಗುರುಗಳು ಹೇಳುತ್ತಿದ್ದರು.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನನ್ನ ಗುರುಗಳು ರಾಮಲಿಂಗಾರೆಡ್ಡಿ ಸಾಹೇಬ್ರು.

**ಏ) ವಿಷಯ: ಕರ್ನಾಟಕ ಪಶ್ಚಿಮ ಘಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಭೂಕುಸಿತ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕ ಕಾಮಗಾರಿಗಳನ್ನು ತಡೆಗಟ್ಟುವ ಬಗ್ಗೆ.**

------

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ 03-03-2025 ರಂದು **"ಅಪಾಯದಲ್ಲಿ ಪಶ್ಚಿಮ ಘಟ್ಟ"** ಎಂದು 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಅನಿಯಂತ್ರಿತ ಪ್ರವಾಸೋದ್ಯಮ, ಹೆಚ್ಚುತ್ತಿರುವ ಅಭಿವೃದ್ಧಿ ಚಟುವಟಿಕೆಗಳಿಂದ ಕರ್ನಾಟಕದ ಪಶ್ಚಿಮ ಘಟ್ಟ ಮತ್ತಷ್ಟು ಅಪಾಯದ ಸನ್ನಿವೇಶ ಎದುರಿಸುತ್ತಿದೆ. ಕಂದಾಯ ಮತ್ತು ವಿಪತ್ತು ನಿರ್ವಹಣಾ ವಿಭಾಗವು ರಾಜ್ಯ ಸರ್ಕಾರಕ್ಕೆ ಈ ಸಂಬಂಧ ವರದಿ ಸಲ್ಲಿಸಿದ್ದು, ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಪಶ್ಚಿಮ ಘಟ್ಟದಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ಅಪಾಯ ಸಂಭವಿಸಲಿದೆ ಎಂದು ಎಚ್ಚರಿಕೆ ನೀಡಿದೆ.

ಪಶ್ಚಿಮ ಘಟ್ಟ ಕಳೆದ 19 ವರ್ಷಗಳಲ್ಲಿ 1,403 ಭೂಕುಸಿತಗಳನ್ನು ಕಂಡಿದ್ದು, 98 ಜನರು ಮೃತಪಟ್ಟಿದ್ದಾರೆ. ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕವಾಗಿ ಗುಡ್ಡಗಳನ್ನು ಕಡಿದಿರುವುದು, ರಸ್ತೆ ವಿಸ್ತರಣೆಗಾಗಿ ಆಗಿರುವ ಭೂಭಾಗದ ವ್ಯತ್ಯಾಸ, ಮಣ್ಣಿನ ಸವಕಳಿ, ಸಣ್ಣ ತೊರೆಗಳಿಂದ ಸೃಷ್ಟಿಯಾಗಿರುವ ಇಳಿಜಾರು, ಮಾನವ ನಿರ್ಮಿತ ಒತ್ತಡಗಳಿಂದಾಗಿ ಭೂಕುಸಿತ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ. ಅಲ್ಲದೆ, ಪಶ್ಚಿಮ ಘಟ್ಟದ ಎಂಟು ಜಿಲ್ಲೆಗಳ ವ್ಯಾಪ್ತಿಯ 31,231 ಚದರ ಕಿ.ಮೀ. ಪ್ರದೇಶದಲ್ಲಿ ಭೂಕುಸಿತದ ಅಪಾಯವಿದೆ ಎಂದು ವರದಿಯಲ್ಲಿ ಹೇಳಲಾಗಿದೆ ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರಯುಕ್ತ ಸದರಿ ಪಶ್ಚಿಮ ಘಟ್ಟದಲ್ಲಿ ಇನ್ನೂ ಮುಂದೆಯಾದರೂ ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕವಾಗಿ ಕಾಮಗಾರಿಗಳನ್ನು ತಡೆಗಟ್ಟುವ ಕುರಿತು ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಆಗಲೇ ಇರಲಿಲ್ಲ. ಯಾರ್ಯಾರು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿರುತ್ತಾರೆ, ಅವರಿಗೆ ಸದನದ ಮುಗಿಯುವುದರೊಳಗೆ ಉತ್ತರ ಕೊಡಿಸಬೇಕು. ಸ್ಟ್ರಿಕ್ಟ್ ಆಗಿ ನಿಮ್ಮ ಅಧಿಕಾರಿಗಳಿಗೆ ಹೇಳಿ. ಮೂರು ಅಧಿವೇಶನಗಳಿಂದಲೂ ಉತ್ತರವನ್ನು ಕೊಟ್ಟಿಲ್ಲ. ಅದಕ್ಕೆ ಈಗ ನಾನು ಸ್ಟ್ರಿಕ್ಟ್ ಆಗಿ

ಹೇಳುತ್ತಿದ್ದೇನೆ. ನೀವು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೂ ತೆಗೆದುಕೊಂಡು ಬನ್ನಿ. ಈ ಸದನದಲ್ಲಿ ಪ್ರಸ್ತಾಪಿಸುವ ಎಲ್ಲಾ ಪ್ರಶ್ನೆಗಳಿಗೂ ಸದನ ಮುಗಿಯುವುದರೊಳಗೆ ಉತ್ತರ ಬರಬೇಕು.

(ಮುಂದು)

(26) 04/03/2025 1:10 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**07. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**(ಮೊದಲನೇ ಪಟ್ಟಿ)**

**I ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ಭಾರತ ಸಂವಿಧಾನದ 213ರ ಅನುಚ್ಛೇದದ 2(ಎ)ನೇ ಖಂಡದ ಮೇರೆಗೆ:**

1. ದಿನಾಂಕ:29.01.2025 ರಂದು ಹೊರಡಿಸಲಾದ, 2025 ರ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧ್ಯಾದೇಶ ಸಂಖ್ಯೆ 01.
2. ದಿನಾಂಕ:12.02.2025 ರಂದು ಹೊರಡಿಸಲಾದ, 2025ರ ಕರ್ನಾಟಕ ಕಿರು (micro) ಸಾಲ ಮತ್ತು ಸಣ್ಣ ಸಾಲ(ಬಲವಂತದ ಕ್ರಮಗಳ ಪ್ರತಿಬಂಧಕ) ಅಧ್ಯಾದೇಶ ಸಂಖ್ಯೆ 02.

**II ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ,

**(ಅ) 1978ರ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

1. 2016 ರ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳ ನಿಯಮ 12ನ್ನು ತಿದ್ದುಪಡಿ ಮಾಡಿ ದಿನಾಂಕ: 27.11.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಇ 16 ಮುಭನಿ 2022.
2. 2016 ರ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳಲ್ಲಿ ಅನುಸೂಚಿಯ ಪ್ರತಿಸ್ಥಾಪನೆಯನ್ನು ರಚಿಸಿ, ದಿನಾಂಕ:11.11.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಇ 03 ಮುಭನಿ 2023.

**(ಆ) 1978 ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

1977 ರ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 9ಕ್ಕೆ ತಿದ್ದುಪಡಿಗೊಳಿಸಿ, ದಿನಾಂಕ:18.09.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 295 ಸೇನೆನಿ 2023.

**III ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**1978 ರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

2004 ರ ಕರ್ನಾಟಕ ನ್ಯಾಯಾಂಗ ಸೇವಾ (ನೇಮಕಾತಿ) ನಿಯಮಗಳ ನಿಯಮ 2, 4, 5 ಮತ್ತು 9ನ್ನು ತಿದ್ದುಪಡಿ ಮಾಡಿ, ದಿನಾಂಕ:15.11.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಲಾ-ಎಲ್‌ಎಸಿ/130/2024.

**IV ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಪರವಾಗಿ):-** ಮಾನ್ಯ ಸಭಾಪತಿಯವರೆ,

**1978 ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

2001 ರ ಕರ್ನಾಟಕ ಕೈಗಾರಿಕೆಗಳು ಮತ್ತು ವಾಣಿಜ್ಯ ಸೇವಾ (ನೇಮಕಾತಿ) (ತಿದ್ದುಪಡಿ)
ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ, ದಿನಾಂಕ: 04.10.2024 ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಸಿಐ 69 ಐಸಿಎಸ್ 2021.

**V ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**2003 ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 182ರ ಮೇರೆಗೆ:**

1. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪೀರ್ ಟು ಪೀರ್ ಸೌರವಿದ್ಯುತ್ ವಹಿವಾಟಿನ ಅನುಷ್ಠಾನ) ವಿನಿಯಮಗಳನ್ನು ರಚಿಸಿ, ದಿನಾಂಕ:06.08.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಎಸ್/03/1/560.
2. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಸಂಪನ್ಮೂಲ ಸಮರ್ಪಕತೆಯ ಚೌಕಟ್ಟು) ವಿನಿಯಮಗಳನ್ನು ರಚಿಸಿ, ದಿನಾಂಕ:23.09.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಎಫ್/30/ಗಿ೦ಟ.10/690.
3. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಶುಲ್ಕ) ವಿನಿಯಮಗಳನ್ನು ರಚಿಸಿ, ದಿನಾಂಕ:26.11.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕವಿನಿಆ/ಎನ್/48/2024/988.

**VI ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**2020 ರ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮದ ಪ್ರಕರಣ 16(2)ರ ಮೇರೆಗೆ:**

2020 ರ ಕರ್ನಾಟಕ ಸಾಂಕ್ರಾಮಿಕ ರೋಗಗಳ ವಿನಿಮಯಗಳನ್ನು ತಿದ್ದುಪಡಿ ಮಾಡಲು ವಿನಿಯಮಗಳನ್ನು ರಚಿಸಿ, ದಿನಾಂಕ:10.10.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ 250 ಸಿಜಿಎಮ್ 2024.

**VII ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**1909ರ ಅನಂದ್ ವಿವಾಹ ಅಧಿನಿಯಮದ 6(4)ರ ಪ್ರಕರಣದ ಮೇರೆಗೆ:**

1909 ರ ಅನಂದ್ ವಿವಾಹ ಅಧಿನಿಯಮ(1909ರ ಕೇಂದ್ರ ಅಧಿನಿಯಮ(7)ರ 6ನೇ ಉಪ-ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಿ, ದಿನಾಂಕ:05.10.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಂಡಬ್ಲ್ಯೂಡಿ 331 ಎಂಡಿಎಸ್ 2022.

**VIII ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**1978ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

2003ರ ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) ನಿಯಮಗಳ ಅನುಸೂಚಿ-IIಕ್ಕೆ ತಿದ್ದುಪಡಿ ಮಾಡಿ, ದಿನಾಂಕ:25.07.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಇಇ 43 ಎಫ್‌ಇಜಿ 2024(ಇ).

**IX ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**2024 ರ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮದ ಪ್ರಕರಣ 22(3)ಮೇರೆಗೆ:**

2024 ರ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ನಿಯಮಗಳನ್ನು ರೂಪಿಸಿ, ದಿನಾಂಕ:29.06.2024 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕಾಇ/274/ಎಲ್‌ಇಟಿ/2023.

**(ಎರಡನೇ ಪಟ್ಟಿ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉಪ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ,

**(1) ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 394 ಉಪಬಂಧಗಳ ಅನ್ವಯ ಹಾಗೂ ಕಾಡಾ ಅಧಿನಿಯಮ 1980ರ ಕಲಂ 24ರನ್ವಯ.**

1. ಕಾವೇರಿ ನೀರಾವರಿ ನಿಗಮ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಕಾಡಾ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಶಿವಮೊಗ್ಗ ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಕಾಡಾ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಕೃಷ್ಣಾ ಮೇಲ್ದಂಡೆ ಯೋಜನೆ ಭೀಮರಾಯನಗುಡಿ ಯಾದಗಿರಿ ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

4. ಕಾಡಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(2) ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಅನುಸೂಚಿತ 09ರ ಭಾಗ-2ರಲ್ಲಿ ನಿಯಮ 12ರಂತೆ ಲೆಕ್ಕಪತ್ರಗಳ ಸ್ಥಾಯಿ ಸಮಿತಿ ಸಮಿತಿಗೂ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020ರ ಅನುಚ್ಛೇದ 2009(4)ರಂತೆ** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿ.ಬಿ.ಎಂ.ಪಿ) 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**II. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ಕಂಪನಿಗಳ ಕಾಯ್ದೆ 2013ರ ತಿದ್ದುಪಡಿ ಕಾಯ್ದೆ 394(2)ರ ಅಡಿಯಲ್ಲಿ**

ಕರ್ನಾಟಕ ರಾಜ್ಯ ಪೋಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**III. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವ ಪರವಾಗಿ):-** ಮಾನ್ಯ ಸಭಾಪತಿಯವರೆ,

**ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳು, 1987ರ ಸೆಕ್ಷನ್ 18(4) ಮತ್ತು (6)ರನ್ವಯ**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇದರ 2018-19 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

**IV. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, **ಕಂಪನಿ ಕಾಯ್ದೆ 2013ರ ಪರಿಚ್ಛೇದ-394ರನ್ವಯ**

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**V. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ಕಂಪನಿ ಕಾಯ್ದೆ 2013ರ ಕಲಂ 394(2) ರನ್ವಯ ಮತ್ತು ಕಂಪನಿ ಕಾಯ್ದೆ 2013 (18 ಆಫ್ 2013), ಸೆಕ್ಷನ್ 7 ಉಪ ಸೆಕ್ಷನ್(2)ರನ್ವಯ ಮತ್ತು ಕಂಪನಿಗಳ ನಿಯಮ 18 (Incorporation)2014 ರನ್ವಯ.**

1. ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಕ-ರೈಡ್ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ(ಕರ್ನಾಟಕ) ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಬಿ-ರೈಡ್ ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
5. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
6. ಸಿಬಿಐಸಿ ತುಮಕೂರು ಇಂಡಸ್ಟ್ರೀಸ್ ಟೌನ್‌ಶಿಪ್ ನಿಯಮಿತದ 2018-19 ರಿಂದ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
7. ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

8. ಕರ್ನಾಟಕ ಟ್ರಸ್ಟೀ ಕಂಪನಿ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**VI. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ಕಂಪನಿಗಳ ಕಾಯ್ದೆ 2013ರ ಕಲಂ 395(1) ರನ್ವಯ**

1. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ದಿ. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರಿಸ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
5. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**VII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**(1) ಕಂಪನಿಗಳ ಕಾಯ್ದೆ 2013ರ ನಿಯಮ 394(2) (1)ರನ್ವಯ ಮತ್ತು 395 ರನ್ವಯ ಮತ್ತು ಅಯೋಗದ ಆಧಿನಿಯಮ 2002ರ ಅಧ್ಯಾಯ-3 ಪ್ರಕರಣದ 9 ಮತ್ತು ಅಧ್ಯಾಯ-4 ಪ್ರಕರಣದ 12(7) 2013ರನ್ವಯ**

1. ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಡಾ. ಬಾಬು ಜಗನಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ (ಲಿಡ್‌ಕರ್) 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ.

**VIII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಅನುಚ್ಛೇದ 262(3)ರನ್ವಯ**

1. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಬೀದರ್ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಗದಗ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 300ರ ಉಪಪ್ರಕರಣ (5)ರನ್ವಯ.**

1. ರಾಮನಗರ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಉತ್ತರ ಕನ್ನಡ (ಕಾರವಾರ) ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ವರದಿ.
4. ವಿಜಯನಗರ (ಹೊಸಪೇಟೆ) ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.
5. ರಾಯಚೂರು ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.
6. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.
7. ಯಾದಗಿರಿ ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.
8. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ.

**IX. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**(1) ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 2016ರ ಕಲಂ 78(2)ರಡಿ ಮತ್ತು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳ 2017ರ ನಿಯಮ 49ರಡಿ ಮತ್ತು (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳ 2017ರ ನಿಯಮ 77(4)ರಡಿ ಮತ್ತು (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳ 2016ರ ನಿಯಮ 48(4)ರಂತೆ**

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ 2023-24ನೇ ಸಾಲಿನ ವಾರ್ಷಿಕ

ವರದಿ ಮತ್ತು 2021-22ನೇ ಲೆಕ್ಕಪರಿಶೋಧನಾ ವರದಿ.

**X. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ):-**

ಮಾನ್ಯ ಸಭಾಪತಿಯವರೆ,

**ಕಂಪನಿಗಳ ಕಾಯ್ದೆ 2013ರ ಕಲಂ 395(1)(ಬಿ) ರಡಿ**

ಕರ್ನಾಟಕ ಪಲ್ಪ್‌ವುಡ್ ನಿಯಮಿತ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**XI. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

(1) **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 57ರಂತೆ**

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇದರ 2023-24ನೇ ಸಾಲಿನ ವಾರ್ಷಿಕ ವರದಿ.

(2) **ಕಂಪನಿಗಳ ಕಾಯ್ದೆ 2013ರ ಕಲಂ 394(2) ರನ್ವಯ**

1. ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕ್ಟ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣದ ಸಂಸ್ಥೆ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಆಹಾರ ಕರ್ನಾಟಕ ನಿಯಮಿತ ಸಂಸ್ಥೆ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್, ಬೆಂಗಳೂರು 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
5. ದಿ ಮೈಸೂರು ಟೊಬ್ಯಾಕೋ ಕಂಪನಿ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**XII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ತೋಟಗಾರಿಕೆ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ IX ಸೆಕ್ಷನ್ 57 ರನ್ವಯ ಮತ್ತು ಕಂಪನಿ ಕಾಯ್ದೆ ಕಲಂ 2013ರ ಸೆಕ್ಷನ್ 294(2)ರ ಪ್ರಕಾರ**

1. ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ 2023-24ನೇ ಸಾಲಿನ

ವಾರ್ಷಿಕ ವರದಿ.

2. ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯುಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

**XIII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ(ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಪರಿಚ್ಛೇದ 27(5)ರನ್ವಯ**

ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳು.

**XIV. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**ದಿ. ರಾಜೀವ್‌ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ ಆಕ್ಟ್ 1994(ಕರ್ನಾಟಕ ಆಕ್ಟ್ ನಂ44 ಆಫ್ 1994)ರ ಪ್ರಕರಣ 43ರನ್ವಯ**

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ವರದಿ.

**XV. ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೆ,

**(1) ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 2004ರ ಸೆಕ್ಷನ್ 43(3)ರನ್ವಯ ಮತ್ತು 1956ರ ಕಂಪನಿ ಅಧಿನಿಯಮಗಳ ಕಲಂ 619(4)ರನ್ವಯ**

1. ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇದರ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ 2021-22 ರಿಂದ 2023-24ನೇ ಸಾಲಿನ ವಾರ್ಷಿಕ ವರದಿಗಳು.

**XVI. ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ,

**ಕಂಪನಿಗಳ ಕಾಯ್ದೆ 2013ರ ಕಲಂ 395(1)(ಬಿ) ರನ್ವಯ**

1. ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ 2022-23ನೇ ಸಾಲಿನ ವಾರ್ಷಿಕ ವರದಿ.

3. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

4. ಕರ್ನಾಟಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

**XVII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**(1) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48(5) & 49 ರನ್ವಯ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 68-ಡಿ (2) ರನ್ವಯ & 68ಸಿ(4) ರನ್ವಯ.**

1. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2020-21 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

5. ಗದಗ-ಬೇಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

6. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

8. ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ

10. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

11. ಗೋಕಾಕ ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

12. ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ 2019-20 ರಿಂದ 2021-22ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

13. ಅರಕಲಗೂಡು ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

14. ರಾಮದುರ್ಗ ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

15. ತಿಪಟೂರು ಯೋಜನಾ ಪ್ರಾಧಿಕಾರದ 2021-22 ಮತ್ತು 2022-23ನೇಸಾಲಿನ ಲೆಕ್ಕಪರಿಶೋಧನಾ ವರದಿಗಳು.

16. ಶಿರಸಿ ಯೋಜನಾ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

17. ಇಲಕಲ್ಲ ನಗರ ಯೋಜನಾ ಪ್ರಾಧಿಕಾರದ 2020-21 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

18. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.

19. ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ 2020-21 ರಿಂದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

20. ಮುಧೋಳ ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು

21. ಪುತ್ತೂರು (ದಕ್ಷಿಣ ಕನ್ನಡ) ನಗರ ಯೋಜನಾ ಪ್ರಾಧಿಕಾರದ 2021-22 ರಿಂದ 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

22. ಚೆನ್ನೈ-ಬೆಂಗಳೂರು ಇಂಡಸ್ಟ್ರೀಸ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರದ ತುಮಕೂರು 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

**(2) ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 102(ಎಂ ಮತ್ತು**

**ಅನುಸೂಚಿ 9ರ ನಿಯಮ 13ರನ್ವಯ**

1. ವಿಜಯಪುರ ಮಹಾನಗರ ಪಾಲಿಕೆ 2023-24ನೇ ಸಾಲಿನ ವಾರ್ಷಿಕ ವರದಿ.
2. ಮೈಸೂರು ಮಹಾನಗರ ಪಾಲಿಕೆ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಶಿವಮೊಗ್ಗ ಮಹಾನಗರ ಪಾಲಿಕೆ 2016-17 ರಿಂದ 2021-22ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2013-14 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
4. ಬಳ್ಳಾರಿ ಮಹಾನಗರ ಪಾಲಿಕೆಯ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2018-19 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**XVIII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**(1) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮ 1992ರ ಆಧ್ಯಾಯ-06 ವಿಭಾಗ 26(3)ರನ್ವಯ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ.

**(2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 50(1) (2) ರನ್ವಯ ಮತ್ತು 47(4)ರನ್ವಯ**

1. ಮೈಸೂರು ವಿಶ್ವವಿದ್ಯಾಲಯದ 2023-24ನೇ ಸಾಲಿನ ವಾರ್ಷಿಕ ವರದಿ
2. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇದರ 2023-24ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸಾರಣ ವರದಿ.
3. ಕಲಬುರಗಿ ವಿಶ್ವವಿದ್ಯಾಲಯದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ.
4. ತುಮಕೂರು ವಿಶ್ವವಿದ್ಯಾಲಯದ 2023-24ನೇ ಸಾಲಿನ ವಾರ್ಷಿಕ ವರದಿ.
5. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇದರ 2023-24 ಸಾಲಿನ ವಾರ್ಷಿಕ ವರದಿ ಹಾಗೂ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಬೆಂಗಳೂರು ಉತ್ತರ (ಕೋಲಾರ) ವಿಶ್ವವಿದ್ಯಾಯದ 2023-24 ಸಾಲಿನ ವಾರ್ಷಿಕ ವರದಿ ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ. .
7. ಬೆಂಗಳೂರು ವಿಶ್ವವಿದ್ಯಾಯ (ಜ್ಞಾನಭಾರತಿ) ಬೆಂಗಳೂರು ಇದರ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

8. ಬೆಂಗಳೂರು ನಗರ ವಿಶ್ವವಿದ್ಯಾಲಯದ (ಸೆಂಟ್ರಲ್ ಕಾಲೇಜು) ಬೆಂಗಳೂರು ಇದರ 2023-24 ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ಕುವೆಂಪು ವಿಶ್ವವಿದ್ಯಾಲಯದ 2023-24ನೇ ಸಾಲಿನ ವಾರ್ಷಿಕ ವರದಿ.

**(3) ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಬೆಂಗಳೂರು ಅಧಿನಿಯಮ 2018ರ ಅಧ್ಯಾಯ-XII ರ ಕಲಂ 42ರನ್ವಯ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಬೆಂಗಳೂರು ಅಧಿನಿಯಮ 2018ರ ಅಧ್ಯಾಯ 39(3) ಮತ್ತು ಸಾಮಾನ್ಯ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಕಲಂ 47(3) ರನ್ವಯ**

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2017-18 ರಿಂದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**XIX. ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-**

ಮಾನ್ಯ ಸಭಾಪತಿಯವರೆ, **ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 (2014ರ ಕರ್ನಾಟಕ ಅಧಿನಿಯಮ ಸಂಖ್ಯೆ 32, ದಿನಾಂಕ:06.09.2014) ಅಧ್ಯಾಯ-V ಪ್ರಾಧಿಕಾರದ ನಿಧಿ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆಯ ಅಧಿನಿಯಮ 37ರಲ್ಲಿ**

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**ಸಭಾಪತಿಯವರು:-** ಮಂಡಿಸಲಾಯಿತು.

## ೦8. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ.ಸ.:-** ಮಾನ್ಯ ಸಭಾಪತಿಯವರೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1. | ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.50) | 08/01/2025 | ರಾಜ್ಯಪಾಲರು |
| 2. | ಕರ್ನಾಟಕ ಧನವಿನಿಯೋಗ (ಸಂ.5) ವಿಧೇಯಕ, 2024 (ವಿ.ಸಂ.53) | 08/01/2025 | ರಾಜ್ಯಪಾಲರು |
| 3. | ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.51) | 10/01/2025 | ರಾಜ್ಯಪಾಲರು |
| 4. | ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.56) | 09/01/2025 | ರಾಜ್ಯಪಾಲರು |
| 5. | ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024 (ವಿ.ಸಂ.45) | 09/01/2025 | ರಾಜ್ಯಪಾಲರು |
| 6. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.49) | 08/01/2025 | ರಾಜ್ಯಪಾಲರು |
| 7. | ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 (ವಿಧೇಯಕ ಸಂ-42) | 08/01/2025 | ರಾಜ್ಯಪಾಲರು |
| 8. | ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.44) | 08/01/2025 | ರಾಜ್ಯಪಾಲರು |
| 9. | ಕರ್ನಾಟಕ ಅಂತರ್ಜಲ(ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.48) | 09/01/2025 | ರಾಜ್ಯಪಾಲರು |
| 10. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.47) | 09/01/2025 | ರಾಜ್ಯಪಾಲರು |
| 11. | ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ಎರಡನೇತಿದ್ದುಪಡಿ) ವಿಧೇಯಕ, 2024 (ವಿ.ಸಂ.27) | 21/01/2025 | ರಾಜ್ಯಪಾಲರು |
| 12. | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.41) | 30/01/2025 | ರಾಜ್ಯಪಾಲರು |
| 13. | ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.46) | 07/02/2025 | ರಾಜ್ಯಪಾಲರು |

**ಸಭಾಪತಿಯವರು:-** ಮಂಡಿಸಲಾಯಿತು.

**೦೯. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ**

**ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ಪ್ರಸ್ತಾಪವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2025 ನೇ ಇಸವಿ ಮಾರ್ಚ್, ೦3ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ."

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

## 10. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ವಿಧಾನ ಪರಿಷತ್ತಿನ ಶಾಸಕರುಗಳಾದ ನಾವುಗಳೆಲ್ಲರೂ ಅವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುವ ಈ ಸಂದರ್ಭದಲ್ಲಿ ಅವರು ಮಾಡಿದ ಭಾಷಣ ಮತ್ತು ಅಲ್ಲಿ ಉಲ್ಲೇಖಿಸಿದ ವಿಚಾರಗಳನ್ನು ನಾನು ಬೆಂಬಲಿಸುತ್ತೇನೆ. ರಾಜ್ಯಪಾಲರು ಮಾಡುವ ಭಾಷಣವೆಂದರೆ, it is only a ceremonial ಭಾಷಣ ಎಂಬುದಾಗಿ ಯಾವಾಗಲೂ ಹೇಳುತ್ತಾರೆ. ಈ ರೀತಿಯ ಭಾಷಣಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯೋಜಿಸುತ್ತವೆ. ಸಂಸತ್ತಿನಲ್ಲಿ ರಾಷ್ಟ್ರಪತಿಗಳು ಭಾಷಣ ಮಾಡುತ್ತಾರೆ ಮತ್ತು ರಾಜ್ಯದಲ್ಲಿ ರಾಜ್ಯಪಾಲರು ಭಾಷಣ ಮಾಡುತ್ತಾರೆ. ರಾಜ್ಯಪಾಲರು ಎಂದರೆ ಅವರು ಸರ್ಕಾರದ ಮುಖ್ಯಸ್ಥರಾಗಿರುತ್ತಾರೆ. ಇವರ ಭಾಷಣದ ಪ್ರತಿಯೊಂದು ಶಬ್ದದಲ್ಲಿ "ನನ್ನ ಸರ್ಕಾರ, ನಾನು" ಎಂಬುದಾಗಿ ಹೇಳುವ ಉಲ್ಲೇಖಗಳಿರುತ್ತವೆ. ಈ ರೀತಿಯ ಉಲ್ಲೇಖಗಳನ್ನು ಏಕೆ ಮಾಡಲಾಗಿರುತ್ತದೆ ಎಂದರೆ, ಸರ್ಕಾರದ ಮುಖ್ಯಸ್ಥರಾಗಿ ಅವರ ವಿಚಾರಗಳು ಹಾಗೂ ಅಸ್ತಿತ್ವದಲ್ಲಿರುವ ಸರ್ಕಾರವು ಏನು ಕೆಲಸಗಳನ್ನು ಮಾಡಿದೆ, ಯಾವ ರೀತಿಯ ಪ್ರಗತಿಯನ್ನು ಸಾಧಿಸಿದೆ, ರಾಜ್ಯದ ಜನಜೀವನ ಮಟ್ಟವನ್ನು ಯಾವ ರೀತಿಯಾಗಿ ರಕ್ಷಣೆ ಮಾಡಿದೆ, ರಾಜ್ಯದ ಸಂಪತ್ತನ್ನು ಯಾವ ರೀತಿಯಾಗಿ ವಿತರಣೆ ಮಾಡಿದೆ, ರಾಜ್ಯದ ಜನರಿಗೆ ಯಾವ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ ಎಂಬುದರ ಬಗ್ಗೆ ರಾಜ್ಯದ ಎಲ್ಲಾ ಇಲಾಖೆಗಳ ಬಗೆಗಿನ ಒಂದು ರೀತಿಯಾದ ಸಂಕ್ಷಿಪ್ತ ವರದಿಯನ್ನು ವರ್ಷಕ್ಕೊಮ್ಮೆ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡುವುದು ನಮ್ಮೆಲ್ಲರಿಗೂ ಸಂತೋಷವನ್ನು ತರುತ್ತದೆ. ನಾವುಗಳೆಲ್ಲರೂ ಕೋಟು, ಬೂಟುಗಳನ್ನು ಹಾಕಿಕೊಂಡು ಎದುರುಗಡೆ ಕುಳಿತುಕೊಳ್ಳುತ್ತೇವೆ. ರಾಜ್ಯಪಾಲರ ಜೊತೆಗೆ ಸಭಾಪತಿ, ಸಭಾಧ್ಯಕ್ಷರು, ಮುಖ್ಯಮಂತ್ರಿಗಳು ಬರುವಂತಹ ಸಂದರ್ಭವನ್ನು ನೋಡುವುದಕ್ಕೆ ಬಹಳ ಕಾತುರರಾಗಿರುತ್ತೇವೆ. ಅಲ್ಲಿ ಒಳ್ಳೆಯ ಭಾಷಣ ಹಾಗೂ ಒಳ್ಳೆಯ ಸಂಗೀತ, ಪೋಲೀಸ್ ಬ್ಯಾಂಡ್‌ಗಳಿರುತ್ತವೆ. ಆಗ ರಾಷ್ಟ್ರಗೀತೆಯನ್ನು ಹಾಡುವ ರೀತಿ ಎಲ್ಲವೂ ನಮಗೆ ದೊಡ್ಡ ಗೌರವ, ಘನತೆಗಳನ್ನು ತಂದು ಕೊಡುತ್ತವೆ.

**(ಈ ಹಂತದಲ್ಲಿ ಶ್ರೀ ಎಸ್.ಎಲ್.ಭೋಜೇಗೌಡ ರವರು ಸಭಾಪೀಠವನ್ನು ಅಲಂಕರಿಸಿದರು)**

ದೊಡ್ಡ ಘನತೆ, ಗೌರವಗಳನ್ನು ತಂದು ಕೊಡುವ ಈ ಸಂದರ್ಭದಲ್ಲಿ ರಾಜ್ಯಪಾಲರನ್ನು ನಾವು ಸ್ವಾಗತಿಸಿ, ಅವರು ಹೋಗುವ ತನಕ ನಾವುಗಳು ಎಲ್ಲಿ ಕುಳಿತುಕೊಂಡಿದ್ದೇವೆಯೋ, ಅಲ್ಲಿಯೇ ಕುಳಿತುಕೊಳ್ಳುವುದರ ಮೂಲಕ ನಾವು ದೊಡ್ಡ ಗೌರವವನ್ನು ರಾಜ್ಯಪಾಲರಿಗೆ ನೀಡುತ್ತೇವೆ. ರಾಜ್ಯಪಾಲರ ಹುದ್ದೆಯು ಸಂವಿಧಾನಿಕ ಹುದ್ದೆಯಾಗಿದೆ. ನಾನು ಪದವಿ ಓದುವ ಸಂದರ್ಭದಲ್ಲಿ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದೆನು. ನಾನು ಕಾಲೇಜಿಗೆ ಹೋಗುವ ಸಂದರ್ಭದಲ್ಲಿ, ರಾಜ್ಯಶಾಸ್ತ್ರ ವಿಷಯದ ತರಗತಿ ಇದೆ ಎಂದರೆ, ಎಲ್ಲಾ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಬರುತ್ತಿದ್ದರು. ಇದಕ್ಕೆ

ಕಾರಣವೇನೆಂದರೆ, ಅಲ್ಲಿ Rudolf Mascarechas ಎನ್ನುವ ಉಪನ್ಯಾಸಕರಿದ್ದರು. ಇವರು ರಾಜ್ಯಶಾಸ್ತ್ರ ವಿಷಯದ ತರಗತಿಗಳನ್ನು ತೆಗೆದುಕೊಂಡರೆ, ಎಲ್ಲಾ ವಿದ್ಯಾರ್ಥಿಗಳು ಹಾಜರಾಗುತ್ತಿದ್ದರು. ನಾವುಗಳು ಬೇರೆ ವಿಷಯದ ತರಗತಿಗಳಗೆ ಚಕ್ಕರ್ ಹೊಡೆಯುತ್ತಿದ್ದರೂ, ರಾಜ್ಯಶಾಸ್ತ್ರ ವಿಷಯದ ತರಗತಿಗೆ ತಪ್ಪದೇ ಹಾಜರಾಗುತ್ತಿದ್ದೆವು. ಭಾರತದ ಸಂವಿಧಾನ ಎಂಬುದು ಬಂದಾಗ, ಇದರ ಬಗ್ಗೆ ತಿಳುವಳಿಕೆಯನ್ನು ತೆಗೆದುಕೊಳ್ಳುವುದು ಹಾಗೂ ಇದಕ್ಕೆ ಸ್ಪಂದಿಸುವುದು ಬಹಳ ಉತ್ತಮವಾದ ವಿಷಯವಾಗಿದ್ದು, ಇದು ಬಾಲ್ಯದಿಂದಲೂ ಬಂದುಬಿಟ್ಟಿದೆ. ನಂತರದಲ್ಲಿ ನಾವು ವಕೀಲರಾದೆವು. ತಾವೂ ಸಹ ಅಖಿಲ ಭಾರತೀಯ ವಕೀಲರ ಪರಿಷತ್ತಿನ ಸದಸ್ಯರಾಗಿದ್ದಿರಿ. ನಾವು ಕಾನೂನಿಗೆ ಹೆಚ್ಚಿನ ಗೌರವವನ್ನು ನೀಡುವವರಾಗಿದ್ದೇವೆ. ಕಾನೂನಿನ ಪುಸ್ತಕವನ್ನು ಹೆಚ್ಚಿನ ಪ್ರಮಾಣದಲ್ಲಿ ದಿನಬಳಕೆ ಮಾಡುವವರು. ಇಲ್ಲಿ ಸದನದಲ್ಲಿ ನಾವು ಸಭಾಪತಿಯವರೇ ಎಂದು ಹೇಳುತ್ತೇವೆ; ಅದೇ ರೀತಿಯಾಗಿ ನ್ಯಾಯಾಲಯದಲ್ಲಿ ನಾವು "Your Honour" ಎಂಬುದಾಗಿ ಹೇಳುತ್ತೇವೆ. ಈ ರೀತಿಯ ಸ್ವಲ್ಪ ಮಟ್ಟದ ವ್ಯತ್ಯಾಸವಿದೆ. ಈ ರೀತಿಯ ಎಲ್ಲಾ ವಿಚಾರಗಳನ್ನು ನಾವು ಗಮನದಲ್ಲಿಟ್ಟುಕೊಂಡು ತಮ್ಮ ಅನುಮತಿಯೊಂದಿಗೆ ಇವತ್ತಿನ ದಿವಸ ರಾಜ್ಯಪಾಲರು ಮಾಡಿರುವ ಭಾಷಣವನ್ನು ಅವಲೋಕಿಸಿದಾಗ, ರಾಜ್ಯ ಸರ್ಕಾರವು ಯಾವ ಕಡೆಗೆ ಹೋಗುತ್ತಿದೆ ಎನ್ನುವುದನ್ನು ಅದರಲ್ಲಿ ಸೂಚ್ಯವಾಗಿ ಹೇಳಿದ್ದಾರೆ. ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಅಂದರೆ 1 ರಿಂದ 117 ಪ್ಯಾರಾಗಳವರೆಗೆ ಸುಮಾರು ಒಂದು ಗಂಟೆ ಹತ್ತು ನಿಮಿಷಗಳ ಕಾಲದವರೆಗೆ ಬಹಳ ವಿಸ್ತಾರವಾದ ಭಾಷಣವನ್ನು ಮಾಡಿದ್ದಾರೆ. ಆ ಭಾಷಣದ ಸಂದರ್ಭದಲ್ಲಿ "pin drop silence" ಎನ್ನುವಂತಹ ವಾತಾವರಣವಿತ್ತು. ಈ ವಾತಾವರಣದಲ್ಲಿಯೇ ನಾವುಗಳೆಲ್ಲರೂ ರಾಜ್ಯಪಾಲರ ಭಾಷಣವನ್ನು ಕೇಳಿದ್ದೇವೆ ಹಾಗೂ ಅದನ್ನು ಅರಗಿಸಿಕೊಂಡಿದ್ದೇವೆ. ಹೀಗಾಗಿ ರಾಜ್ಯಪಾಲರ ಭಾಷಣದಲ್ಲಿನ ಅಂಶಗಳನ್ನೇ ನಾನು ಪುನರುಚ್ಚರಿಸುವುದಕ್ಕೆ ಹೋಗುವುದಿಲ್ಲ. ಅದರಲ್ಲಿನ ಎಲ್ಲಾ ಅಂಶಗಳನ್ನು ನಾವುಗಳು ತಿಳದುಕೊಂಡಿದ್ದೇವೆ. ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾನು ಕೆಲವೊಂದು ಅಂಕಿ-ಅಂಶಗಳನ್ನು ಈ ಸಂದರ್ಭದಲ್ಲಿ ತೆಗೆದುಕೊಂಡು ಬಂದಿದ್ದು, ಅವುಗಳನ್ನು ನನ್ನ ಭಾಷಣದಲ್ಲಿ ಬಳಸಿಕೊಳ್ಳಲು "part of my speech" ಎಂಬಂತೆ ಅಳವಡಿಸಿಕೊಳ್ಳಲು ತಾವು ಅನುಮತಿಯನ್ನು ನೀಡುವಂತೆ ಕೋರುತ್ತೇನೆ. ಅದನ್ನು ನಾನು ಸಂಪೂರ್ಣವಾಗಿ ಓದುವುದಿಲ್ಲ.

**ವೈಸ್ ಛೇರ್ಮನ್:-** ಸಭಾಪತಿಯವರು ಅರ್ಧ ಗಂಟೆಗಳ ಸಮಯವನ್ನು ನಿಗದಿಪಡಿಸಿದ್ದಾರೆ.

(ಮುಂದು)

(25)04-03-2025 (1-20) bkp-vk (ವೈಸ್‌ಛೇರ್ಮನ್ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ(ಮುಂದು)**

ಮಾನ್ಯ ಸಭಾಪತಿಯವರೆ, ನಾನು ಒಂದು ಗಂಟೆ ಸಮಯವನ್ನು ಕೇಳಿದ್ದೇನೆ. Because, I must initiate it. ಹೀಗಾಗಿ, ಏನು ಆಂಶಗಳಿವೆ, ಅದನ್ನು part of the document ಎಂದು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ಒಂದು ಭಾಷಣದಲ್ಲಿ ನಾನು ಗುರುತಿಸಿರುವಂತಹ ಮುಖ್ಯಾಂಶಗಳು ಏನೆಂದರೆ ರಾಜ್ಯ ಸರ್ಕಾರ, ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿದ್ಧರಾಮಯ್ಯನವರು ಕಳೆದ ಬಜೆಟ್ ಮಂಡನೆ ಮಾಡುವಾಗ Rs. 3,71,383 crore ಬಜೆಟ್ ಅನ್ನು 2024-25ನೇ ಸಾಲಿಗೆ ಮಂಡನೆ ಮಾಡಿರುತ್ತಾರೆ. ಬಜೆಟ್ ಅನ್ನು ಮಂಡನೆ ಮಾಡಿದ ಮೇಲೆ ಈ ಬಜೆಟ್ ಯಾವ ರೀತಿ ಜಾರಿಗೆ ಬಂದಿದೆ ಎಂದು ಹೇಳುವಂತಹದ್ದು ಮತ್ತೊಂದು ಬಜೆಟ್ ಅನ್ನು ಮಂಡನೆ ಮಾಡುವ ಮುಂಚೆ ನಮ್ಮ ಮುಂದೆ ಇರುವಂತಹ ಸವಾಲುಗಳಾಗಿದೆ. ಕಳೆದ ಬಜೆಟ್‌ನಲ್ಲಿ ಮಾಡಿದಂತಹ 334 ಘೋಷಣೆಗಳ ಪೈಕಿ 331ಕ್ಕೆ ಆದೇಶವನ್ನು ಮಾಡಿ ಪ್ರಕಟ ಮಾಡಲಾಗಿದೆ. So, I would say, this is one of the best budget and implementable budget. ನಾನು ಮೊನ್ನೆ ನಮ್ಮ ಊರಿನಲ್ಲಿನ ಒಂದು ಶಂಕುಸ್ಥಾಪನೆಗೆಂದು ಹೋಗಿದ್ದೆ. ಆಗ ಆ ಒಂದು ಏರಿಯಾದಲ್ಲಿ ಇದ್ದಂತಹ ಜನರು ನನ್ನ ಹತ್ತಿರ ಬಂದು ಏನು ಹೇಳಿದರು ಎಂದರೆ ಒಂದು ವರ್ಷದ ಹಿಂದೆ ಇಲ್ಲಿಯೇ ಒಂದು ಶಂಕುಸ್ಥಾಪನೆಯಾಗಿತ್ತು. ಹೀಗಾಗಿ, ಇದನ್ನು ಇನ್ನು ಸ್ವಲ್ಪ ದೂರದ ಜಾಗದಲ್ಲಿಯೇ ಮಾಡಿ ಎಂದು ಹೇಳಿದರು. ಅಂದರೆ, ಒಂದು ವರ್ಷದ ಹಿಂದೆ ಮಾಡಿದಂತಹ ಅಥವಾ ಹಲವು ವರ್ಷಗಳ ಹಿಂದೆ ಮಾಡಿದಂತಹ ಶಂಕುಸ್ಥಾಪನೆ ಹತ್ತಿರ ಮತ್ತೊಂದು ಮಾಡಿದರೆ ಹೇಗೆ, ಅದು ಒಂದು ವರ್ಷವಾದರೂ ಜಾರಿಯಾಗಿಲ್ಲ. ನೀವು ಮತ್ತೊಂದು ಶಂಕುಸ್ಥಾಪನೆಯನ್ನು ಇಟ್ಟುಕೊಂಡು ಬಂದಿದ್ದೀರಿ, ಇದು ಅಗಲಿಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಹೇಳಿದರು. ಅಂದರೆ ಜನಸಾಮಾನ್ಯರಲ್ಲಿ ಇವತ್ತು ಬಜೆಟ್‌ಗಳನ್ನು ಮಾಡುತ್ತಾರೆ, ಅದು ಜಾರಿಗೆ ಬರುವುದಿಲ್ಲ. ಘೋಷಣೆಗಳನ್ನು ಮಾಡುತ್ತಾರೆ, ಅದು ಕಾರ್ಯಗತವಾಗುವುದಿಲ್ಲವೆಂದು ಹೇಳುವಂತಹದ್ದು ಬಹಳ ದೊಡ್ಡ ಆಲೋಚನೆ ಇದೆ. ಆ ಒಂದು ಚಿಂತನೆ ಕೂಡ ಇದೆ. ಆದರೆ 16 ಬಜೆಟ್‌ಗಳನ್ನು ಮಂಡನೆ ಮಾಡಿದಂತಹ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಏನು ಬಜೆಟ್ ಅನ್ನು ಮಂಡಿಸುತ್ತಾರೋ ಆ ಒಂದು ಬಜೆಟ್ it is implementable. ಅಂದರೆ, ಅದು ಕಾರ್ಯಗತವಾಗುವಂತಹ ಬಜೆಟ್ ಆಗಿರುತ್ತದೆ. ಇದರ ಬಗ್ಗೆ ನನಗೆ ದೊಡ್ಡ ಹೆಮ್ಮೆ ಇದೆ. ಇದನ್ನು ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀಮಾನ್ ಸಿದ್ಧರಾಮಯ್ಯನವರು ತೆಗೆದುಕೊಂಡಂತಹ ಅನೇಕ ಯೋಜನೆಗಳು ಕನಿಷ್ಟ ಕಷ್ಟ ಇರಬಹುದು ಅಥವಾ ಬೇರೆ ಏನಾದರೂ ಆರ್ಥಿಕ ಸಂಕಷ್ಟಗಳು ಇರಬಹುದು. ಅದರ ಮಧ್ಯ ಕೂಡ he has presented a implementable budget because, 16 ಬಜೆಟ್‌ಗಳನ್ನು ಮಂಡನೆ ಮಾಡಿರುವಂತಹ ಮಾನ್ಯ ಮುಖ್ಯಮಂತ್ರಿಗಳಿಗೆ ಅಗಾಧವಾಗಿರುವಂತಹ ಅನುಭವ

ಇದೆ. ಒಬ್ಬ ಆರ್ಥಿಕ ಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಆ ಒಂದು ಚಿಂತನೆ ಮತ್ತು ಆ ಒಂದು commitment ಏನು ಇತ್ತಲ್ಲಾ, ಅದನ್ನು ನಾನು ಮಾತ್ರ ಒಪ್ಪಿಕೊಳ್ಳುವುದಲ್ಲ, ಬಹುಶಃ opponent bench ನವರು ಸಹ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಸಿದ್ಧರಾಮಯ್ಯನವರ commitment towards the downtrodden peoples. ಬಡವರ, ಸಾಮಾನ್ಯ ವರ್ಗದವರ ಮತ್ತು ದಲಿತರ, ರೈತರ ಕಾರ್ಮಿಕರ, ಸಮಾಜದ ಎಲ್ಲಾ ವರ್ಗದವರ ಜನರ ಬಗ್ಗೆ ಅವರಿಗೆ ಇರತಕ್ಕಂತಹ ಪ್ರೀತಿ, ವಿಶ್ವಾಸವನ್ನು ನಾನು ಮಾತ್ರವಲ್ಲ, ಶ್ರೀಮಾನ್ ನಾರಾಯಣಸ್ವಾಮಿಯವರು ಸಹ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ ಅಥವಾ ಎಲ್ಲರೂ ಒಪ್ಪಿಕೊಳ್ಳುವಂತಹ ವಿಚಾರವೇ ಆಗಿರುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ಜನಜೀವನದ ಬಗ್ಗೆ ಮಾತನಾಡುವುದಾದರೆ ರಾಜ್ಯದ ಬಜೆಟ್ ಎನ್ನುವಂತಹದ್ದು ಅಥವಾ ರಾಜ್ಯಪಾಲರು ಮಾಡಿದ ಭಾಷಣ ಎನ್ನುವಂತಹದ್ದು, ಜನಜೀವನ ಮಟ್ಟವನ್ನು ಸಮಾಜದಲ್ಲಿ ಯಾವರೀತಿ ಇದೆ ಎನ್ನುವುದನ್ನು ತಿಳಿದುಕೊಳ್ಳಲಿಕ್ಕೆ ಇರುವಂತಹ ಪಾಠವಾಗಿದೆ. ಬಜೆಟ್‌ನಲ್ಲಿ ಇದೆಲ್ಲಾ ನಮಗೆ ಕಾಣಲಿಕ್ಕೆ ಸಿಗುವುದಿಲ್ಲ. ಈ ಅಂಕಿ-ಅಂಶಗಳು ಸಿಗುವುದಿಲ್ಲ. ನಾವು ಅಂಕಿ-ಅಂಶಗಳನ್ನು ಹುಡುಕಿ ಹೋಗಬೇಕಾಗುತ್ತದೆ. ಆದರೆ, ಈ ರಾಜ್ಯಪಾಲರ ಭಾಷಣದಲ್ಲಿ ಇರತಕ್ಕಂತಹ ಅಂಕಿ-ಅಂಶಗಳು ಬಹುಶಃ ಮುಂದೆ ಬಜೆಟ್ ಅನ್ನು ಹೇಗೆ ತರಬಹುದು ಎಂದು ನಮಗೆ ಎಲ್ಲೋ ಒಂದು ಕಡೆ ದಿಕ್ಕನ್ನು ತೋರಿಸುತ್ತದೆ, ನಾನು ಮುಖ್ಯಮಂತ್ರಿಯವರ ಆಶಯವನ್ನು, ಈ ರಾಜ್ಯದ ಕ್ಯಾಬಿನೆಟ್ ಸಚಿವರ ಆಶಯವನ್ನು ಸಕಾರ ಮಾಡುತ್ತದೆ. ಎಲ್ಲಿಯೋ ಒಂದು ಕಡೆ ಸಮಾಜದ ಎಲ್ಲಾ ವ್ಯಕ್ತಿಗಳ ಜೀವನದ ಮಟ್ಟದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ತರುವಂತಹ ರೀತಿಯಲ್ಲಿ ಮತ್ತು ಅದರಲ್ಲಿ ಸುಧಾರಣೆಯನ್ನು ತರುವಂತಹ ರೀತಿಯಲ್ಲಿ ಮುಂದಿನ ಪೀಳಿಗೆಯ ಯುವಕರನ್ನು, ಮಕ್ಕಳನ್ನು ಮುಂದಿನ ಒಳ್ಳೆಯ ಪ್ರಜೆಗಳನ್ನಾಗಿ ಈ ಸಮಾಜಕ್ಕೆ ಕೊಡುವ ರೀತಿಯಲ್ಲಿ ಒಂದು ಬಜೆಟ್ ಅನ್ನು ಸರ್ಕಾರ ಮಂಡನೆ ಮಾಡಬೇಕೆಂದು ನನಗೆ ಅನಿಸುತ್ತದೆ. ನಾನು ಒಂದು ಭಾಷಣವನ್ನು ಕೇಳಿದ್ದೇನೆ. ಇತ್ತೀಚೆಗೆ ಭಾರತ ದೇಶದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ಮೋದಿಜೀಯವರು ಒಂದು ಭಾಷಣವನ್ನು ಮಾಡಿದರು. ಅದನ್ನು ಪಾರ್ಲಿಮೆಂಟ್‌ನಲ್ಲಿ ಮಾಡಿದರೋ ಅಥವಾ ಹೊರಗಡೆ ಮಾತನಾಡಿದರೋ ಗೊತ್ತಿಲ್ಲ. But I watched it in the youtube and read it in the newspapers. ಅವರು ಏನು ಹೇಳಿದರು ಎಂದರೆ ಸರ್ಕಾರಗಳು ಇರುವಂತಹದ್ದು ವ್ಯಾಪಾರ ಮಾಡಲಿಕ್ಕೆ ಅಲ್ಲ,"Government is there to see the welfare of the people." ಜನ ಜೀವನವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುವುದು ಮತ್ತು ಅವರ ಕಷ್ಟ ಕಾರ್ಪಣ್ಯವನ್ನು ಕೇಳುವುದೇ ಸರ್ಕಾರದ ಕೆಲಸವಾಗಬೇಕೇ ಹೊರತು, ವ್ಯಾಪಾರ ಮಾಡಿ ದುಡ್ಡು ಸಂಗ್ರಹ ಮಾಡಿ ಅದರ ಮೂಲಕ ಲಾಭಗೊಳಿಸುವಂತಹದ್ದು ಅಲ್ಲ. So that I am going to Disinvestment ಎನ್ನುವಂತಹ ಮಾತನ್ನು ಹೇಳಿದರು. Partially I welcome that, and I agree with that. ಸರ್ಕಾರ ವ್ಯಾಪಾರ ಮಾಡಿದರೆ ಪ್ರಜೆಗಳು ಏನಾಗಬೇಕು. ಇದಕ್ಕೆ ಒಂದು ಗಾದೆ ಇದೆ:. "ರಾಜ

ವ್ಯಾಪಾರಿಯಾದರೆ ಪ್ರಜೆಗಳು ಬಿಕಾರಿಯಾಗುತ್ತಾರೆ". ಸರ್ಕಾರ ಇರುವುದು ವ್ಯಾಪಾರ ಮಾಡಲಿಕ್ಕೆ ಅಲ್ಲ, the Government should have the commitment for downtrodden people and the persons who have achieved the excellence in their life. ಅದನ್ನು ಮಾಡಲಿಕ್ಕೆ ನಾವು ಏನು ಮಾಡುತ್ತೇವೆ. ಅದರ ಕಲ್ಪನೆಯು ರಾಜ್ಯಪಾಲರ ಭಾಷಣದಲ್ಲಿದೆ. ಆ ಚಿಂತನೆಯು ಭಾಷಣದಲ್ಲಿದೆ. That is why I fully support the Governors speech. ಅವರು ಏನೆಲ್ಲಾ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ, ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

ಇನ್ನು, ನಾವು ಸಮಾನತೆ ಮತ್ತು ಸಂವಿಧಾನದ ಬಗ್ಗೆ ಮಾತನಾಡುತ್ತೇವೆ. The very first day we read the constitution in our House. ಅದರಲ್ಲಿ ನಾವು ಹೇಳಿದ್ದೇವೆ. ಸಮಾನತೆ ಆರ್ಥಿಕ ನ್ಯಾಯ, ಸಾಮಾಜಿಕ ನ್ಯಾಯ, ರಾಜಕೀಯ ನ್ಯಾಯದಲ್ಲಿ ಸಮಪಾಲು ಕೊಡಬೇಕೆಂದು ನಾವು ಕೇಳಿದ್ದೇವೆ. ಕನ್ನಡದ ಬಗ್ಗೆ ನಮಗೆ ಇರುವಂತಹ ಪ್ರೀತಿ ತೋರಿಸಬೇಕೆಂದು ಹೇಳುತ್ತೇವೆ. ಮಾನ್ಯ ಸಭಾಪತಿಯವರು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಭಾಷೆಯ ಬಗ್ಗೆ ಗೌರವವನ್ನು ಹೆಚ್ಚಿಗೆ ತರಬೇಕೆಂದು ಹೇಳಿದ್ದಾರೆ. I think you must have a lot of background for it. ಈಗ ಏನಾಗುತ್ತಿದೆ ಎಂದರೆ ಎನ್ನುವುದಕ್ಕೆ ಬ್ಯಾಕ್‌ಗ್ರೌಂಡ್ ಅನ್ನು ಇಟ್ಟುಕೊಂಡು ಹೇಳಿದ್ದೀರಿ, ತಾವು ಅದನ್ನು ವಿವರಿಸಿ ಹೇಳಲಿಲ್ಲ. ಆದರೆ, ನಾವು ತಿಳಿದುಕೊಂಡಿದ್ದೇವೆ. ಅದು ಏನೆಂದರೆ ನಮ್ಮ ಗೀತೆಯನ್ನು ಹಾಡಿಸುವಂತಹದ್ದು ಅವಶ್ಯಕತೆ ಇದೆ ಎಂದು ಹೇಳುವಂತಹದ್ದು ಆಗಿದೆ. ಇದೇ ರೀತಿಯಲ್ಲಿ commitment. ಇವತ್ತು ದೇಶದ hunger strike ಅಥವಾ ದೇಶದ ಸಂಪತ್ತು ಯಾವ ರೀತಿ ಉಪಯೋಗವಾಗುತ್ತಿದೆ ಎನ್ನುವುದನ್ನು ನೋಡಿದರೆ One percent of the total assets is with 42.5 percent people. ಅದೇ ರೀತಿ ಶೇಕಡ 50 ಮಂದಿ ಹತ್ತಿರ 2.8% ಇದೆ. ನಾನು ಈ ವಿಚಾರವಾಗಿ ನಾನು ಏನು ಹೇಳಲಿಕ್ಕೆ ಬಯಸುತ್ತೇನೆಂದರೆ disparity ಇದೆ. ಅಜಗಜಾಂತರ ವ್ಯತ್ಯಾಸ ಇದೆ. One percent people are in a position of 45 percent and 2.8 percent people are enjoying the 50 percent. There is a lot of disparity between these two. ಅದನ್ನು ಹೇಗೆ ಸರಿ ಮಾಡಬೇಕಾಗುತ್ತದೆ? ಅದನ್ನು ಯಾವ ರೀತಿಯಲ್ಲಿ ಮಾಡುತ್ತೀರಿ? I would only say, ಸನ್ಮಾನ್ಯ ಸಿದ್ದರಾಮಯ್ಯನವರು ಮಕ್ಕಳಿಗೆ ಶಾಲೆಗೆ ಹೋಗಲಿಕ್ಕೆ promote ಮಾಡಿದರು. ಶಾಲೆಗಳನ್ನು ಕಟ್ಟಿದರು. ಹಾಸ್ಟೆಲ್‌ಗಳನ್ನು ಕಟ್ಟಿದರು ಮತ್ತು ಮಕ್ಕಳು ಶಾಲೆಗಳಿಗೆ ಹೋಗಲಿಕ್ಕೆ ಹಾಸ್ಟೆಲ್‌ಗಳು ಸಿಗದೇ ಇದ್ದರೆ ಅವರುಗಳಿಗೆ ಇಂತಿಷ್ಟು ದುಡ್ಡು ಎಂದು ಕೊಟ್ಟರು. ಅದು ವಿದ್ಯಾಶ್ರೀ ಯೋಜನೆ ಆಗಿದೆ. ತಿಂಗಳಿಗೆ 1500 ರೂಪಾಯಿಗಳನ್ನು ಕೊಟ್ಟರು. 10 ತಿಂಗಳಿಗೆ 15,000 ರೂಪಾಯಿಗಳನ್ನು ಕೊಟ್ಟರು. This is how we need to promote the human resources. ನಾನು ನನ್ನ ಊರಿನಲ್ಲಿ ಒಂದು ಶಾಲೆಗೆ ಹೋಗಿದ್ದೆ. ಮಧ್ಯಾಹ್ನದ ವೇಳೆಗೆ ಹೋದಾಗ ಅಲ್ಲಿ ಒಂದು ಕಟ್ಟಡ ಆಗುತ್ತಿತ್ತು. ನಾನು ಸಹ ಅದಕ್ಕೆ

ಅನುದಾನ ಕೊಟ್ಟಿದ್ದೆ. ಅಲ್ಲಿ ಕಟ್ಟಡ ಹೇಗಿದೆ ಎಂದು ನೋಡಿದಾಗ ಅಲ್ಲಿ ಮಕ್ಕಳು ಸಾಲಾಗಿ ಕುಳಿತಿದ್ದಾರೆ. ಎದುರಿನಲ್ಲಿ ಒಂದು ಮುದ್ದೆ, ಅಲ್ಲಿ ಮೊಟ್ಟೆಯನ್ನು ಯಾರು ತಿನ್ನುವುದಿಲ್ಲ, ಅದರ ಬದಲಿಗೆ ಒಂದು ಬಾಳೆಹಣ್ಣು ಕೊಟ್ಟಿದ್ದರು, ಮಕ್ಕಳು ಕುಳಿತುಕೊಂಡು ಬಹಳ ಚೆನ್ನಾಗಿ ಊಟ ಮಾಡುವುದನ್ನು ನೋಡಿದಾಗ ಈ ದೇಶದ ಸಂಪತ್ತನ್ನು ಮತ್ತು ಮುಂದೆ ಏನಾನದರೂ ಸಮಾನತೆಯನ್ನು ತರಬೇಕಾದರೆ one percent ಗೆ ತರಬೇಕಾಗಿದೆ, ಅಂತಹ ಜನರನ್ನು ನಾವು ಬೆಳೆಸುವಂತಹದ್ದು ಅವಶ್ಯಕತೆ ಇದೆ. ಅಂತಹ forcible ಜನರನ್ನು ನಾವು ತರುವಂತಹದ್ದು ಅಗತ್ಯತೆ ಇದೆ. ಇಂದಿನ ಮಕ್ಕಳೆ ಮುಂದಿನ ಜನಾಂಗ ಎಂದು ನಾವು ಬಹಳ ಭಾಷಣ ಮಾಡಿದ್ದೇವೆ. ಅಂತಹವರಿಗೆ ನಾವು ಇವತ್ತು ಪ್ರಮೋಷನ್ ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೆ, ತಾವು ಶಿಕ್ಷಕರ ಕ್ಷೇತ್ರದಿಂದ ಬರುತ್ತಿದ್ದೀರಿ. ಶಾಲೆಗಳ ಪರಿಸ್ಥಿತಿ ಏನಿತ್ತು ಎಂದು ತಾವು ನೋಡಿದ್ದೀರಿ, ಯಾವರೀತಿ ಇದೆ, ಇವತ್ತು ಮಧ್ಯಾಹ್ನದ ಊಟ ಕೊಡುವುದನ್ನು ಬಿಟ್ಟು, ಯಾರು ಶಾಲೆಗೆ ಬರುವುದಿಲ್ಲ. ಅವರುಗಳನ್ನು ಕರೆದುಕೊಂಡು ಬಂದರೆ ನಾವು ಅವರಿಗೆ ಪ್ರೊತ್ಸಾಹಧನ ಕೊಡುವಂತಹದ್ದು ಇದೆ.

**(ಮುಂದು.)**

**(026) 04.03.2025 01.30 ಎಸ್‌ವಿ-ವಿಕೆ (ವೈಸ್ ಛೇರ್‌ಮನ್‌ರವರ ಉಪಸ್ಥಿತಿ)**

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಮಕ್ಕಳಿಗೆ ಕನ್ನಡ ಭಾಷೆ ಬರುವುದಿಲ್ಲ. ಯಾವುದೋ ಊರಿನಿಂದ ಬಂದು ಟೆಂಟ್‌ಗಳಲ್ಲಿದ್ದಂತಹ ಮಕ್ಕಳನ್ನು ಸರ್ಕಾರಿ ಶಾಲೆಗಳ ಅಧ್ಯಾಪಕರು ಕರೆತಂದು there the teacher speaks in Hindi with the students. ಅವರು ಈಗ ಬಂದಿದ್ದಾರಷ್ಟೆ, ಕನ್ನಡ ಕಲಿಯುತ್ತಾರೆ ಎಂದು ಹೇಳಿದರು. ಕನ್ನಡದಲ್ಲಿ ಕೆಲವು ಶಬ್ದಗಳನ್ನು ಮಾತನಾಡಿದರು. ನನಗೆ ಆದಂತಹ ಸಂತೋಷ ಬೇರೆ ಯಾರಿಗೂ ಆಗಿಲ್ಲ. ಅಲ್ಲಿ ಬಿ.ಇ.ಓ ಗಳು ಇದ್ದರು and that is called the upliftment of human resources. ಇದಕ್ಕೆ ಪ್ರಾಮುಖ್ಯತೆಯನ್ನು ಈ ಸರ್ಕಾರ ಕೊಡುತ್ತದೆ. ಮಕ್ಕಳಿಗೆ ಬಿಸಿಯೂಟ, ಮೊಟ್ಟೆ, ಅವರಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ತರಬೇತಿ. ಇದು ನಮ್ಮ ಸಮಾಜಕ್ಕೆ ಬೇಕಾಗಿರುವುದು. ಸರ್ಕಾರ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವುದು ಸರಿಯಷ್ಟೆ. ಈಗಷ್ಟೆ ಸದನದಲ್ಲಿ ಚರ್ಚೆಯಾಯಿತು. ಮಾನ್ಯ ಎಂ.ಬಿ.ಪಾಟೀಲರು ಇಲ್ಲಿಯೇ ಕುಳಿತಿದ್ದಾರೆ. ಇಡೀ ದೇಶದಲ್ಲಿ ಕೈಗಾರಿಕೆಯಲ್ಲಿ ತಮ್ಮ ಮಕ್ಕಳಿಗೆ ಉದ್ಯೋಗವನ್ನು ಕೊಡುವಂಥದ್ದು, ಅಭಿವೃದ್ಧಿ ಮಾಡುವಂಥದ್ದು. Invest Karnataka 2025 ಯೋಜನೆಯ ಬಗ್ಗೆ ನಾನು ಪತ್ರಿಕೆಯಲ್ಲಿ ಓದಿದೆನು. ಅತ್ಯಂತ best project he has done it. ಎಷ್ಟೋ

ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ತಂದರು. ಮಕ್ಕಳಿಗೆ ಉದ್ಯೋಗವನ್ನು ಕೊಡುವಂತಹ ಕೆಲಸವನ್ನು ಮಾಡಿದರು. ಜನರಿಗೆ ಮೂಲಭೂತ ಸೌಕರ್ಯವನ್ನು ಕೊಡುವಂತಹ ಕೆಲಸವನ್ನು ಮಾಡಿದರು. This is what I appreciate.

ಮಾನ್ಯ ಸಭಾಪತಿಯವರೆ, ತಾವು-ನಾವು ಮಂಗಳೂರಿನ ಕೆಡಿಪಿ ಸಭೆಯಲ್ಲಿ ಒಟ್ಟಿಗೆ ಚರ್ಚೆ ಮಾಡಿದ್ದೆವು. ಇವತ್ತು ಹೈನುಗಾರಿಕೆ ಮಾಡುವವರಿಗೆ ಸರ್ಕಾರ ಪ್ರೋತ್ಸಾಹಧನವನ್ನು ಕೊಡುತ್ತಿದೆ. ಕೆ.ಎಂ.ಎಫ್ ನಲ್ಲಿ ಒಂದು ದಿನಕ್ಕೆ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಅದರಲ್ಲಿ ರೂ.1500 ಕೋಟಿ ಬರುತ್ತಿದೆ. ಹಸು ಅವರದ್ದು, ಹಾಲು ತೆಗೆಯುವವರು ಅವರು, ಹಸು ಸಾಕಿ ಹಾಲು ತೆಗೆದು ತಂದು ಮಾರುಕಟ್ಟೆಗೆ ಕೊಟ್ಟರೆ ಒಂದು ಲೀಟರ್ ಮೇಲೆ ರೂ.5 – ರೂ.6 ಪ್ರೋತ್ಸಾಹಧನವನ್ನು ಕೊಡುವಂಥದ್ದು. Is it not the upliftment of the human resources? ಇದು ಪ್ರೋತ್ಸಾಹ ಅಲ್ಲವೆ? ಈ ಚಿಂತನೆ ನಮಗೆ ಬರದೆ ಇದ್ದಿದ್ದರೆ ನಮ್ಮ ಸಮಾಜ ಎಲ್ಲಿ ಹೋಗುತ್ತಿತ್ತು? I am talking about the smallest issues. ಈ ಸಮಾಜದಲ್ಲಿ ರೈತರಿಗೆ ಯಾವ ರೀತಿ ಪ್ರೋತ್ಸಾಹ ದೊರೆಯುತ್ತಿದೆ ಎನ್ನುವುದು ಒಂದು ಅಂಶ.

ಮುಂದುವರೆಯುತ್ತಾ ದೇಶದಲ್ಲಿ ನಾವು ಒಂದು ಕ್ರಾಂತಿಯನ್ನು ಮಾಡಿದೆವು. ಪತ್ರಿಕೆಯಲ್ಲಿ ಬಂದಿತು. "ವಿಶ್ವಕ್ಕೆ ಕರ್ನಾಟಕವೇ ಮಾದರಿ; ಸಿದ್ದು ಸರ್ಕಾರಕ್ಕೆ ಗವರ್ನರ್ ಭೇಷ್, ಅಭಿವೃದ್ಧಿಯ ಬಗ್ಗೆ ವಿಶ್ವದ ಅರ್ಥಶಾಸ್ತ್ರಜ್ಞರು ವಿವಿಧ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳನ್ನುದ್ದೇಶಿಸಿ ಗವರ್ನರ್ ಗೆಹ್ಲೋಟ್ ಭಾಷಣ" ಎಂದು ಪ್ರಕಟವಾಯಿತು. ಕರ್ನಾಟಕವು ಹೇಗೆ ವಿಶ್ವಕ್ಕೆ ಮಾದರಿಯಾಯಿತು ಎಂದರೆ 'Karnataka is the model for all the states.' 'Karnataka is having 6.5 crore people.' ಇಲ್ಲಿ ಹಸಿವು ಇಲ್ಲವೆ, ಬಡತನವಿಲ್ಲವೆ? I will give you the statistics. Karnataka is considered as one of the poorest states. ಬಡತನ ಇನ್ನೂ ಇದೆ. ದೇಶದಲ್ಲಿ ನಾವು ಇನ್ನೂ 11ನೇ ಸ್ಥಾನದಲ್ಲಿದ್ದೇವೆ. ಬಡತನ ಇದೆ. ವಿಶ್ವದಲ್ಲಿ ಭಾರತ 108ನೇ ಸ್ಥಾನದಲ್ಲಿದೆ. ಬಡತನ ಇದೆ. ಇತ್ತೀಚೆಗೆ ನಾನು ಒಂದು ಕ್ರಿಕೆಟ್ ಟೂರ್ನಮೆಂಟ್‌ಗೆ ಹೋಗಿದ್ದೆನು. ರಾತ್ರಿ 09 ಗಂಟೆಗೆ ಅಲ್ಲಿ ಅಂತಿಮ ಮ್ಯಾಚ್ ಇತ್ತು. ಅಲ್ಲಿಗೆ ಹೋದರೆ ಬಹಳಷ್ಟು ಜನ ಮಹಿಳೆಯರು ಕುಳಿತಿದ್ದಾರೆ. ಇದುವರೆವಿಗೂ ನನ್ನ ಅನುಭವದಲ್ಲಿ ಮಹಿಳೆಯರು ಕ್ರಿಕೆಟ್ ನೋಡಲಿಕ್ಕೆ ಕುಳಿತದ್ದನ್ನು ನಾನು ನೋಡಿರಲಿಲ್ಲ. Either youngster ಇರುತ್ತಾರೆ ಅಥವಾ ಮಧ್ಯವಯಸ್ಕರು ಅಥವಾ ಕ್ರಿಕೆಟ್ ಪ್ರೇಮಿಗಳಿರುತ್ತಾರೆ. ಅಲ್ಲಿಗೆ ಹೋದಾಗ ಸುಮಾರು 200ರಿಂದ 250 ಮಹಿಳೆಯರಿದ್ದರು. ಆಯೋಜಕರನ್ನು ಕರೆದು ಇಷ್ಟು ರಾತ್ರಿ ಹೊತ್ತಿನಲ್ಲಿ ಇಷ್ಟು ಮಹಿಳೆಯರು ಇಲ್ಲಿಗೆ ಏಕೆ ಬಂದಿದ್ದಾರೆ ಎಂದು ನಾನು ಕೇಳಿದೆನು. ನಾವು ಒಂದು ಚೀಲ ಅಕ್ಕಿಯನ್ನು ಕೊಡುತ್ತಿದ್ದೇವೆ, ಅದರ

ವಿತರಣೆಯಿರುವುದರಿಂದ ಬಂದಿದ್ದಾರೆಂದು ಹೇಳಿದರು. ಅಕ್ಕಿ ಕೊಡುವುದನ್ನು ನಾನು ಗೌರವಿಸುತ್ತೇನೆ. ಆದರೆ ಜನ ಇನ್ನೂ ಬಯಸುವವರಿದ್ದಾರೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. Still people are behind that.

ಸರ್ಕಾರ ಇವತ್ತು ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಐದು ಗ್ಯಾರಂಟಿಗಳನ್ನು ಇಡೀ ಭಾರತ ದೇಶದ ಯಾವುದೇ ರಾಜ್ಯದಲ್ಲಿ ಇಷ್ಟು systematic ಆಗಿ ಅನುಷ್ಠಾನಕ್ಕೆ ತರಲು ಸಾಧ್ಯವೇ ಇಲ್ಲವೆಂದು ನಾನು ಹೇಳಬಯಸುತ್ತೇನೆ. I will give all the statistics to you. DBT (Direct Benefit Transfer) ಮೂಲಕ ನೇರವಾಗಿ ಹಣ ಅವರ ಖಾತೆಗೆ ಹೋಗುತ್ತದೆ. ಏಜೆಂಟ್ ಇಲ್ಲ, ಮಧ್ಯವರ್ತಿ ಇಲ್ಲ. ನಿನ್ನ ದುಡ್ಡು ನಿನಗೆ, ಗೃಹಲಕ್ಷ್ಮಿ ಯೋಜನೆಯಲ್ಲಿ ಎರಡು ಮೂರು ತಿಂಗಳು ವಿಳಂಬವಾಗಿರುವುದನ್ನು ನಾನು ಒಪ್ಪುತ್ತೇನೆ. ಅದು ತಾಂತ್ರಿಕ ಕಾರಣಗಳಿಂದಾಗಿ. ಆದರೆ ಇದರ ಅವಶ್ಯಕತೆ ಇತ್ತೋ ಇಲ್ಲವೋ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ 1.22 ಕೋಟಿ ಜನರು ಗೃಹಲಕ್ಷ್ಮಿ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. 2011ರ ಜನಗಣತಿಯ ಪ್ರಕಾರ 2.74 ಕೋಟಿ ಜನಸಂಖ್ಯೆ ಇದೆ. ಅದಕ್ಕೆ ರೂ.37.640 ಕೋಟಿಗಳನ್ನು ನೀಡಿದ್ದೇವೆ. 1.63 ಕೋಟಿ ಕುಟುಂಬಗಳು ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳಾಗಿದ್ದು, 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಲ್ಲಿ 67.8 ಕೋಟಿ ಫಲಾನುಭವಿಗಳಿದ್ದಾರೆ. ಅದೇ ರೀತಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆಯಾದ ಶಕ್ತಿ ಯೋಜನೆಯ ಫಲಾನುಭವಿಗಳು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅದೇ ರೀತಿ 2.58 ಲಕ್ಷ ಜನರು ಯುವನಿಧಿ ಯೋಜನೆಯ ಫಲಾನುಭವಿಗಳಾಗಿದ್ದು, ರೂ.286.08 ಕೋಟಿಗಳು ಇದಕ್ಕೆ ಮೀಸಲಾಗಿದೆ. Everyone has accepted it. ತಾಂತ್ರಿಕ ತೊಂದರೆಗಳಿಂದಾಗಿ ಕೆಲವರು ಫಲಾನುಭವಿಗಳಾಗದೆ ಇರಬಹುದು. ಆದರೆ ಅರ್ಜಿ ಹಾಕಿರುವವರಿಗೆ ನೂರಕ್ಕೆ ನೂರರಷ್ಟು ಈ ಸೌಲಭ್ಯ ಲಭಿಸಿದೆ. ಸುಮಾರು ರೂ.52,000 ಕೋಟಿ programme ನಮ್ಮದು. ಸರ್ಕಾರ ಬಂದು 18 ತಿಂಗಳಾಯಿತು. ಇವತ್ತಿನವರೆಗೆ ಸುಮಾರು ರೂ.70,000 ಕೋಟಿಗಳನ್ನು ನೇರವಾಗಿ ಸಮಾಜದ ಎಲ್ಲಾ ವರ್ಗಗಳ ಜನರಿಗೆ ಮುಟ್ಟಿದೆ ಎಂದರೆ ಇದು ಸಮಾಜದಲ್ಲಿ ಆಗಿರುವ ದೊಡ್ಡ ಬದಲಾವಣೆ ಅಲ್ಲವೆ? ಇದನ್ನು ಕ್ರಾಂತಿಕಾರಿ ಬದಲಾವಣೆ ಎಂದು ನಾನು ಕರೆಯುತ್ತೇನೆ. ಯಾವ ಸರ್ಕಾರ ತನ್ನ ಬಜೆಟ್‌ನಲ್ಲಿ ಯಾವುದೇ ಜಾತಿ-ಮತ ಭೇದವಿಲ್ಲದೆ ರೂ.70,000 ಕೋಟಿಗಳನ್ನು ನೇರವಾಗಿ ಫಲಾನುಭವಿಗೆ ಕೊಡುತ್ತದೆ? all communities and all sections of people. That is why ಇವತ್ತು ನಾವು ಬಲವರ್ಧನೆಗೊಂಡಿದ್ದೇವೆ. This is the great achievement of Shri Siddaramaiah's

Government in Karnataka ಎಂದು ಹೇಳಬಯಸುತ್ತೇನೆ. ಅದಕ್ಕಾಗಿ ರಾಜ್ಯಪಾಲರು ಕರ್ನಾಟಕ ಈಗ ವಿಶ್ವಕ್ಕೆ ಮಾದರಿ ಎನ್ನುವಂತಹ ಮಾತನ್ನು ಹೇಳಿದರು.

ಅದೇ ರೀತಿಯಲ್ಲಿ ಮೂಲಭೂತ ಸೌಕರ್ಯಗಳಿಗೆ ಏನೆಲ್ಲಾ ಬೇಕು? ನಾನು ಈ ಪುಸ್ತಕದಲ್ಲಿ ಓದಬೇಕಾದರೆ ಒಂದು ವಿಚಾರ ನನ್ನ ಗಮನಕ್ಕೆ ಬಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಾದ ರೈಲ್ವೆಯ ಅಭಿವೃದ್ಧಿಗಾಗಿ ರೂ.1000 ಕೋಟಿ ನೀಡಲಾಗಿದೆ. ಜಾಗ ಕೊಟ್ಟಿದ್ದೇವೆ. ನಮ್ಮ share 50% ಅಂದರೆ ರೂ.1000 ಕೋಟಿಗಳನ್ನು ಕೊಟ್ಟಿದ್ದೇವೆ. ಅದೇ ರೀತಿ ಏರ್‌ಪೋರ್ಟ್, ಬೇರೆ ಬೇರೆ ಸವಲತ್ತುಗಳಿರಬಹುದು, ಅದಕ್ಕೂ ನಾವು ಕೊಟ್ಟಿದ್ದೇವೆ. ಆರೋಗ್ಯದ ದೃಷ್ಟಿಯಿಂದಲೂ ನಾವು ಬೇಕಾದಷ್ಟು ಯೋಜನೆಗಳನ್ನು ಮಾಡಿದ್ದೇವೆ. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ಸಮಾಜದಲ್ಲಿ ಎಲ್ಲಾ ವರ್ಗದ ಜನರ ಅಭ್ಯುದಯ ನಮಗೆ ಬೇಕಾಗಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. (ಮುಂದು)

(029) 04-03-2025/1.40/ಎಂವಿ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ನಮ್ಮ ದೇಶದ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯಕ್ಕೆ ನಾವು ತೆಗೆದುಕೊಂಡಂತಹ ಕಾರ್ಯಕ್ರಮಗಳು ಮತ್ತು ಅನುಷ್ಠಾನ ಮಾಡಿದಂತಹ ರೀತಿ ಇಡೀ ಭಾರತ ದೇಶದಲ್ಲಿ ಒಂದು ರೀತಿಯ ಕ್ರಾಂತಿಯನ್ನೇ ಉಂಟು ಮಾಡಿತು. ನಾವು ಬೇರೆ ಯಾವುದಾದರೂ ರಾಜ್ಯಗಳಿಗೆ ಹೋದರೆ, ನೀವು ಇದನ್ನು ಕರ್ನಾಟಕದಲ್ಲಿ ಹೇಗೆ ಅನುಷ್ಠಾನ ಮಾಡಿದ್ದೀರಿ ಎಂದು ಕೇಳುತ್ತಾರೆ. ಸಾರಿಗೆಗೆ ಸಂಬಂಧಪಟ್ಟಂತೆ ತೆಲಂಗಾಣ ರಾಜ್ಯದವರು ಇಲ್ಲಿಗೆ ಬಂದು ಬಸ್‌ಗಳಲ್ಲಿ ಜನರು ಹೇಗೆ ಹೋಗುತ್ತಾರೆಂದು ನೋಡುತ್ತಾರೆ. ಒಬ್ಬ ಮಹಿಳೆ ಒಂದು ಆಧಾರ್ ಕಾರ್ಡ್‌ನ ಪ್ರತಿ ಇಟ್ಟುಕೊಂಡು ಬಸ್‌ಗಳಿಗೆ ಹತ್ತುವುದು ಮಾತ್ರ ಅವರ ಜವಾಬ್ದಾರಿ. ಅವರು ಎಲ್ಲಿ ಇಳಿಯುತ್ತಾರೆ ಮತ್ತು ಹೇಗೆ ಇಳಿಯುತ್ತಾರೆಂದು ಕೇಳುವಂತಿಲ್ಲ. ಅವರು ಬೇಕಾದಲ್ಲಿ ಇಳಿಯಬಹುದು ಮತ್ತು ಬೇಕಾದಲ್ಲಿ ಅವರು ಬಸ್‌ಗೆ ಬೋರ್ಡ್ ಆಗಬಹುದು. ಇದು ಸಮಾಜದ ಚಿಂತನೆಯನ್ನು ಬದಲಾವಣೆ ಮಾಡಿದೆ. ಸಮಾಜದ ಜನರ ಮನಸ್ಸನ್ನು ಪರಿವರ್ತನೆ ಮಾಡಿದೆ. ಅಂದರೆ, ನಮಗೆ ನಮ್ಮ ಸರ್ಕಾರ ಇದೆ ಎಂದು. ಡಾ:ಬಿ.ಆರ್.ಅಂಬೇಡ್ಕರ್ ರವರು ಏನು ತಮ್ಮ ಚಿಂತನೆಯನ್ನು ಬಯಸಿದ್ದರು, ಈ ಚಿಂತನೆಯ ಮೂಲ ಉದ್ದೇಶವೇ ಸಮಾಜದಲ್ಲಿ ಎಲ್ಲಾ ವರ್ಗಗಳ ಜನರಿಗೆ ನ್ಯಾಯ ಸಿಗಬೇಕು. ಮತ್ತೆ ಅವರು ಆರ್ಥಿಕವಾಗಿ ಸಬಲರಾಗಬೇಕು ಎಂದು. If they are economically strong, they can go forward in their thinking. ನಮ್ಮಲ್ಲಿ ದುಡ್ಡು ಇಲ್ಲದೇ ಇದ್ದರೆ, ನಾವು ಹೋಗುವುದಕ್ಕೆ ಇಚ್ಛೆ ಇರುತ್ತಿರಲಿಲ್ಲ. ಇವತ್ತು ನಾವು ಸಂಪಾದನೆ ಮಾಡಿದಂತಹ ದುಡ್ಡಿನಿಂದ ಸಮಾಜದಲ್ಲಿ ಒಳ್ಳೆಯ ಕೆಲಸಗಳನ್ನು

ಮಾಡಬಹುದು ಎನ್ನುವಂತಹ ರೀತಿಯಲ್ಲಿ ಇವತ್ತು ಈ ಒಂದು ಚಿಂತನೆ ಜಾರಿಯಾಗಿದೆ. ಈಗ ಪ್ರಾದೇಶಿಕ ಅಸಮಾನತೆ ಕೂಡ ಇತ್ತು. ನಾನು ಒಂದು statistics ಅನ್ನು ತೆಗೆದುಕೊಂಡಿದ್ದೇನೆ. ನಾವು ಹೆಚ್ಚು ಒತ್ತನ್ನು ಕೊಡುವಂತಹ ಜಿಲ್ಲೆಗಳು ಯಾವುದು ಎಂದು ನೋಡುತ್ತಿದ್ದೆ. ಅದರಲ್ಲಿ ಗುಲ್ಬರ್ಗ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳು. ಈ ಜಿಲ್ಲೆಗಳಿಗೆ ಆರ್ಟಿಕಲ್ 371(ಜೆ) ಯನ್ನು ಏಕೆ ಜಾರಿಗೆ ತಂದಿದ್ದೇವೆ ಮತ್ತು ಅಲ್ಲಿಗೆ ಹೆಚ್ಚು ಅನುದಾನವನ್ನು ಏಕೆ ಕೊಡುತ್ತೇವೆಂದು ಹೇಳಬೇಕಾದರೆ, ಈ ಜಿಲ್ಲೆಗಳಲ್ಲಿ ಬಡತನ ಹೆಚ್ಚು ತಾಂಡವವಾಡುತ್ತಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಅಭಿವೃದ್ಧಿಯ ಕೆಲಸಗಳಾಗಿವೆ. ಇವತ್ತು ಬೇರೆ ಬೇರೆ ರೀತಿಯಲ್ಲಿ ಬದಲಾವಣೆಗಳಾಗಿವೆ. ಆದರೆ, ಕೆಲವೊಂದು ಜಿಲ್ಲೆಗಳಿಗೆ ಇನ್ನೂ ಹೆಚ್ಚಿನ ಸಹಕಾರ ಕೊಡುವಂತಹ ಅವಶ್ಯಕತೆ ಇದೆ. ಹಾಗಾಗಿ ಇವತ್ತು ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೆ ಸಮಾನತೆಯನ್ನು ಕೊಟ್ಟು, ಎಲ್ಲಾ ವರ್ಗಗಳಿಗೆ ಬಹುಶಃ ಎಸ್.ಸಿ/ಎಸ್.ಟಿ. ಸಮಾಜದವರಿಗೆ ಕಾನೂನಿನಲ್ಲಿ ತಿದ್ದುಪಡಿಯನ್ನು ತಂದು, ಅವರ ಹಣ ಅವರಿಗೇ ಹೋಗಬೇಕು ಒಂದು ವೇಳೆ ಖರ್ಚು ಮಾಡದೇ ಇದ್ದರೂ, it has to be rotated. ಅದು ಮುಂದಿನ ವರ್ಷಕ್ಕೆ carry forward ಆಗಬೇಕು. ಹಣವನ್ನು ಖರ್ಚು ಮಾಡದೇ ಇದ್ದರೆ, ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂಬ ನಿಯಮವನ್ನು ಜಾರಿಗೆ ತಂದಿರತಕ್ಕಂಥದ್ದು ಕೂಡ ಒಂದು ಕ್ರಾಂತಿಕಾರಕ ಚಿಂತನೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದು ನಮಗೆ ಚಿಲ್ಲರೆಯಾಗಿ ಕಾಣಬಹುದು. ಇವತ್ತು ಒಬ್ಬರು ಕಂಟ್ರಾಕ್ಟ್ ಮಾಡುತ್ತಾರೆಂದು ಜಿಲ್ಲಾ ಪಂಚಾಯತ್‌ನಲ್ಲಿ ಹೋಗಿ ಕೇಳಿದರೆ ಗೊತ್ತಾಗುತ್ತದೆ. ಇದು ಈ ಕಂಟ್ರಾಕ್ಟ್ ನಿಮಗೆ ಸಿಗುವುದಿಲ್ಲ. ಇದು ಎಸ್.ಸಿ./ಎಸ್.ಟಿ. ಸಮುದಾಯದವರಿಗೆ ಮೀಸಲು ಎಂದು ಹೇಳುವ ಮಟ್ಟಕ್ಕೆ ಅಧಿಕಾರಿಗಳ ಬಾಯಿಯಿಂದ ಮಾತು ಬರುವುದಕ್ಕೆ ಪ್ರಾರಂಭವಾಯಿತು.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೆ, ಒಂದು ನಿಮಿಷ. ಮಾನ್ಯ ಸಭಾನಾಯಕರು ಮತ್ತು ಸರ್ಕಾರದ ಮುಖ್ಯ ಸಚೇತಕರು ಇಬ್ಬರು ಸದನದಲ್ಲಿ ಇದ್ದೀರಿ. ಬೆಳಗ್ಗೆ ಪೀಠದಿಂದ ಕಡ್ಡಾಯವಾಗಿ ಇರಬೇಕಾದಂತಹ ಸಚಿವರುಗಳು ಯಾರು ಎಂದು ಹೇಳಿದ್ದಾರೆ. ದಯಮಾಡಿ ಅಧಿಕಾರಿಗಳು ಸಹ ಇಲ್ಲಿ ಇರಬೇಕು. ತಾವು ಅದನ್ನು ದಯಮಾಡಿ ನೋಡಿ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ ):-** ಮಾನ್ಯ ಸಭಾಪತಿಯವರೆ, ದಯಮಾಡಿ ಎಂಬ ಪದ ಬೇಡ. ತಾವು ಆದೇಶ ಮಾಡಿ.

**ವೈಸ್ ಛೇರ್ಮನ್:-** ಈಗ ಪೀಠದಿಂದ ಆದೇಶ ಕೊಟ್ಟ ಮೇಲೆ ಅದನ್ನು ಪಾಲನೆ ಮಾಡಬೇಕಾಗಿರುವಂಥದ್ದು ಅಧಿಕಾರಿಗಳ ಕರ್ತವ್ಯ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಕೊಡುವಂತಹ ಸಂದರ್ಭದಲ್ಲಿ ಆ honour ಅನ್ನು ಸ್ವೀಕಾರ ಮಾಡುವುದಕ್ಕೆ ನಾವು ಇಲ್ಲವೆಂದು ಹೇಳಿದರೆ ಸದನದ ಬಗ್ಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎಂಬುದರ ಬಗ್ಗೆ ಸ್ವಲ್ಪ ಅಲೋಚನೆ ಮಾಡಬೇಕಾಗುತ್ತದೆ. ಇದು ಮಾನ್ಯ ಸಭಾನಾಯಕರು ಮತ್ತು ಮಾನ್ಯ ಮುಖ್ಯಸಚೇತಕರ ಕರ್ತವ್ಯ. ದಯಮಾಡಿ ಮಾನ್ಯ ಸದಸ್ಯರು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಬಡತನದ ಬಗ್ಗೆ ಮಾತನಾಡುತ್ತಿದ್ದೆ. ಬಡತನ ಎಲ್ಲಿಯವರೆಗೆ hunger ಇದೆ ಎಂದರೆ, ನಮ್ಮ ಜಿಲ್ಲೆಗಳಲ್ಲಿ ದಾವಣಗೆರೆ 24ನೇ ಸ್ಥಾನದಲ್ಲಿದೆ. ಹಾವೇರಿ ಜಿಲ್ಲೆ 27 ಸ್ಥಾನದಲ್ಲಿದೆ. ರಾಯಚೂರು ಜಿಲ್ಲೆ 28ನೇ ಸ್ಥಾನದಲ್ಲಿದೆ. ಕಲಬುರಗಿ ಜಿಲ್ಲೆ 29ನೇ ಸ್ಥಾನದಲ್ಲಿದೆ. ಯಾದಗಿರಿ ಜಿಲ್ಲೆ 30ನೇ ಸ್ಥಾನದಲ್ಲಿದೆ. ಅಂದರೆ, ಬಡತನದ ರೇಖೆಯೊಳಗೆ ಕೂಡ ನಮ್ಮ ರಾಜ್ಯದ ಒಳಗಡೆ ಈ ಜಿಲ್ಲೆಗಳು ಇವತ್ತು ಆ ಒಂದು ಬಡತನದ ರೇಖೆಗಿಂತ ಕೆಳಗಿದ್ದಾರೆ ಮತ್ತು ಅಲ್ಲಿ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇದೆ. ನಾವು ಇಡೀ ದೇಶಕ್ಕೆ ಹೋಲಿಕೆ ಮಾಡಿದರೆ, 1990-2022 ರವರೆಗಿನ statistics ಏನು ಹೇಳುತ್ತದೆಂದರೆ, Karnataka is in the 11th place among the 22 States. ನಾವು ಬಹಳ ಮುಂದೆ ಇದ್ದೇವೆ. ನಮ್ಮ ರೈತರು ಬಹಳ ಶ್ರೀಮಂತರಾಗುತ್ತಿದ್ದಾರೆ, ಬೆಳೆ ಇದೆ ಮತ್ತು ಎಲ್ಲಾ ಇದೆ. ಈ ಎಲ್ಲದರ ಮಧ್ಯೆ ಕೂಡ, we are in the 11th place. Andhra Pradesh is in the first place and the West Bengal is in the last place. ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಇವತ್ತು ನಮ್ಮ ರಾಜ್ಯದ ಅಭಿವೃದ್ಧಿಗೆ ಬೇಕಾದಂತಹ ಪಾಲು ಬರಬೇಕಾಗಿದೆ. Mr. Siddaramaiah was addressing a meeting. ಅವರು ಮಾತನಾಡುವಾಗ ಏನು ಹೇಳಿದರು ಎಂದರೆ, ನಾವು 100 ರೂಪಾಯಿ ತೆರಿಗೆ ಕಟ್ಟಿದರೆ, ರಾಜ್ಯಕ್ಕೆ ಬರುವುದು ಕೇವಲ 13 ರೂಪಾಯಿ ಮಾತ್ರವೆಂದು, i.e., 13%. Within that constraint, ನಾವು ಇವತ್ತು ರಾಜ್ಯವನ್ನು ಸುಭದ್ರ ಮತ್ತು ಆರೋಗ್ಯಕರ ರಾಜ್ಯದ ಕಡೆಗೆ ಬೆಳೆಸುವಂತಹ ಅವಶ್ಯಕತೆ ಇದೆ. ಜಾರ್ಖಂಡ್‌ಗೆ ಮೊದಲನೆ ಸ್ಥಾನ ಬರುತ್ತದೆ. ಆಂಧ್ರ ಪ್ರದೇಶಕ್ಕೂ ನಮಗೂ ಏನು ವ್ಯತ್ಯಾಸವಿದೆ. ನಮ್ಮಲ್ಲಿ ಏನಾದರೂ resources ಕಡಿಮೆ ಇದೆಯೇ? Assam is in the second place. ಹೌದು ಅವರಿಗೆ ಕಾಫಿ ತೋಟವಿದೆ. ಅದು ನಮ್ಮಲ್ಲಿ ಇಲ್ಲವೇ? ನಮ್ಮಲ್ಲಿ Tea estates ಇಲ್ಲವೇ? How we are promoting them? Bihar is in the third place, Chhattisgarh is in the fourth place, National Capital Territory of Delhi is in the fifth place and Gujarat is in the sixth place. ನಮ್ಮ ಮೇಲೆ ಇರತಕ್ಕಂಥದ್ದು, ಜಾರ್ಖಂಡ್, ಜಮ್ಮು ಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶ. ಅವರಿಗಿಂತ ಒಂದು ಹೆಜ್ಜೆ ಮುಂದೆ ಇದ್ದೇವೆ. ನಾವು ಕೈಗಾರಿಕೆಗಳಲ್ಲಿ ಮುಂದೆ ಇದ್ದೇವೆ. ನಾವು ಬುದ್ಧಿವಂತರಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಮುಂದೆ ಇದ್ದೇವೆ. ಎಲ್ಲಾ ಇದ್ದರೂ ಕೂಡ we are not able to compete with the other States and we are also lacking, ಎಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ಇದು ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಇದುವರೆಗೆ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರ ಕಳೆದ ಸರ್ಕಾರ ಸುಮಾರು 37,662/- ಕೋಟಿ ರೂಪಾಯಿಗಳನ್ನು ಡಾ:ಡಿ.ಎಂ.ನಂಜುಡಪ್ಪ ಸಮಿತಿಯ ವರದಿ ಪ್ರಕಾರ ಹಣವನ್ನು ಬಿಡುಗಡೆ ಮಾಡಿದೆ. ನಾನು ಈ ಭಾಗಕ್ಕೆ ಸಂಬಂಧಪಟ್ಟಂತೆ ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ಸಮಾನತೆಯನ್ನು ತರುವಂತಹ ಅವಶ್ಯಕತೆ ಇದೆ. ಅದೇ ರೀತಿ ಜಾಗತಿಕ ಹೂಡಿಕೆಗಳು, ಮೊನ್ನೆ ಮೊನ್ನೆ ವಿಶ್ವದ ಹತ್ತೊಂಬತ್ತು ಪ್ರಮುಖ ದೇಶಗಳು ಎಲ್ಲಾ ದಾಖಲೆಗಳನ್ನು

ಮುರಿದು ಹೂಡಿಕೆಯಲ್ಲಿ ಹೊಸ ದಾಖಲೆಯನ್ನು ಬರೆದಿದೆ. ಸುಮಾರು 10.22 ಲಕ್ಷ ಕೋಟಿ ರೂಪಾಯಿಗಳಷ್ಟು ಮೊತ್ತದ ಹಣವನ್ನು ಹೂಡಿಕೆ ಮಾಡಲು ಒಡಂಬಡಿಕೆಯಾಗಿದೆ. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದಕ್ಕೂ ಸಹ ಸಾಧ್ಯವಾಗುತ್ತದೆ ಮತ್ತು ನೆರವಾಗುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೆ, ತಮ್ಮ ಸಮಯ ಮುಗಿದಿದೆ. ಇನ್ನು ನಿಮಗೆ ಎಷ್ಟು ಸಮಯ ಬೇಕು? lunch break ಕೊಡಬೇಕಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಎರಡು ಗಂಟೆಯ ಒಳಗೆ ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ನಿಮ್ಮ ಸಮಯ ಮುಗಿದಿದೆ. Can you conclude in another five minutes?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, I will conclude by 2O' clock ನನಗೆ ಇನ್ನೂ ಕೇವಲ ಹದಿನೈದು ನಿಮಿಷ ಸಾಕು.

**ವೈಸ್ ಛೇರ್ಮನ್:-** ಆಡಳಿತ ಪಕ್ಷದವರು ಅರ್ಥ ಮಾಡಿಕೊಳ್ಳಿ. ವಿರೋಧ ಪಕ್ಷದವರು ಈಗಾಗಲೇ ಸುಮಾರು 13 ಜನ ಸದಸ್ಯರ ಲಿಸ್ಟ್ ಅನ್ನು ಕಳುಹಿಸಿದ್ದಾರೆ. ನಾನು ಎಲ್ಲರಿಗೂ ಸಹ accommodate ಮಾಡಬೇಕಲ್ಲವೇ? ಹಾಗಾಗಿ ದಯಮಾಡಿ ತಾವುಗಳು ಸಹಕಾರ ನೀಡಬೇಕು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇನ್ನು ಮೂರ್ನಾಲ್ಕು ದಿವಸ ಇದೆ.

**ವೈಸ್ ಛೇರ್ಮನ್:-** ನಿಮ್ಮ ಮಾತು ಮುಗಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಈಗ 2.00 ಗಂಟೆಗೆ lunch break ಕೊಡುತ್ತೇನೆ. ಆದುದರಿಂದ ಎರಡು ಗಂಟೆಯ ಒಳಗೆ ತಮ್ಮ ಮಾತನ್ನು ಮುಗಿಸಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಜಾಗತಿಕ ಹೂಡಿಕೆಯಲ್ಲಿ ನಮ್ಮ ಕೆಲಸಗಳು ಆಗಿವೆ. ಇನ್ನು GST & CST ಬಗ್ಗೆ ಮಾತನಾಡುತ್ತಿದ್ದೇವೆ. ಇವತ್ತು ಈ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಎಕ್ಸೈಸ್ ಈ ಎರಡನ್ನು ಬಿಟ್ಟರೆ, ನಾವು ನೇರವಾಗಿ ಯಾವುದೇ ತೆರಿಗೆಯನ್ನು ಕಲೆಕ್ಟ್ ಮಾಡುವಂತೆ ಇಲ್ಲ. Everything goes to the Central Government. ನಾವು ಅಲ್ಲಿಂದ ಪಡೆದುಕೊಳ್ಳುವಂತಹ ಅನಿವಾರ್ಯತೆ ಇದೆ. ಇವತ್ತು ಇಲ್ಲಿ ನಮ್ಮ ಮಿತ್ರರು ಕುಳಿತುಕೊಂಡಿದ್ದಾರೆ. ಕೇಂದ್ರ ಸರ್ಕಾರದಿಂದ GST & CST ಎಷ್ಟು ಕೋಟಿ ರೂಪಾಯಿ ಹಣ ಬರಬೇಕಾಗಿರುವಂಥದ್ದು ಇದೆ. We are in the second highest place in tax collection. ನಮ್ಮ ಅಭಿವೃದ್ಧಿ ಮತ್ತು ಜನಸಾಮಾನ್ಯರ ಕಾರ್ಯಕ್ರಮಗಳಿಗೆ ಬರುತ್ತಿಲ್ಲವೆಂದು ಈ ಒಂದು ಸಂದರ್ಭದಲ್ಲಿ ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. (ಮುಂದು)

(030) 04.03.2025 01.50 LL-BNS (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಅದೇ ರೀತಿ, ವಸತಿ ವಿಚಾರದ ಬಗ್ಗೆ ಹೇಳುವುದಾದರೆ, ಇವೊತ್ತಿನ ದಿವಸ ರಾಜ್ಯದಲ್ಲಿ ವಸತಿಗಾಗಿ ಬಹಳಷ್ಟು ಅರ್ಜಿಗಳು ಇವೆ. ತಾವು ಕೂಡ ಇದನ್ನು ನೋಡಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಗೆ ತಾವು ಬಂದಾಗ ಈ ವಿಚಾರ ಚರ್ಚೆಯಾಗಿರುತ್ತದೆ. ಕಳೆದ 5 ವರ್ಷಗಳಲ್ಲಿ ಒಂದೇ ಒಂದು ಮನೆ ಕೊಟ್ಟಿರುವುದಿಲ್ಲ. ಆಗ ತಾವು ಏತಕ್ಕೆ ಕೊಟ್ಟಿರುವುದಿಲ್ಲ ಎಂದು ಕೇಳಿರುತ್ತೀರಿ. Why have you not intervened? ಏತಕ್ಕೆ ನೀವು ಅಧಿಕಾರಿಗಳ ಜೊತೆ ಮಾತನಾಡಿರುವುದಿಲ್ಲ ಎಂದು ಕೇಳಿರುತ್ತೀರಿ. ಆದರೆ, 36,780 ಮನೆಗಳನ್ನು ಈಗಾಗಲೇ ಲೋಕಾರ್ಪಣೆ ಮಾಡಲಾಗಿದೆ. 39,843 ಮನೆಗಳನ್ನು ಸದ್ಯದಲ್ಲಿಯೇ ಲೋಕಾರ್ಪಣೆ ಮಾಡತಕ್ಕಂತಹ ವಿಚಾರದಲ್ಲಿ ನಾವು ಕ್ರಮವನ್ನು ಕೈಗೊಂಡಿದ್ದೇವೆ. ಅಂದರೆ, ವಸತಿ ಎನ್ನುವುದು ಬಹಳ ಮುಖ್ಯವಾದ ವಿಚಾರವಾಗಿರುತ್ತದೆ. ಅದೇ ರೀತಿ, 2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ. ಅಡಿಯಲ್ಲಿ 27,674 ಕೋಟಿ ರೂಪಾಯಿಗಳು; ಟಿ.ಎಸ್.ಪಿ. ಅಡಿಯಲ್ಲಿ 11,447 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಖರ್ಚು ಮಾಡಿದೆ. ಒಟ್ಟಾರೆಯಾಗಿ, 39,121 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಇದೇ ರೀತಿ, ಈ ರಾಜ್ಯದಲ್ಲಿ ಶೇಕಡ 17 ರಷ್ಟು ಜನ ಅಲ್ಪಸಂಖ್ಯಾತರು ಇದ್ದಾರೆ. ಅದು ಮುಸ್ಲಿಂ ಇರಬಹುದು, ಕ್ರಿಶ್ಚಿಯನ್ ಇರಬಹುದು, ಪಾರ್ಸಿಗಳು ಇರಬಹುದು ಅಥವಾ ಸಿಖ್ ಇರಬಹುದು. ಶೇಕಡ 17 ರಷ್ಟು ಎಂದರೆ, ಸುಮಾರು 97 ಲಕ್ಷ ಜನರು. ಇಷ್ಟೊಂದು ಸಂಖ್ಯೆಯ ಅಲ್ಪಸಂಖ್ಯಾತರು ಈ ರಾಜ್ಯದಲ್ಲಿ ಇರುವಂತಹ ಸಂದರ್ಭದಲ್ಲಿ, ಇವೊತ್ತಿನ ದಿವಸ ಇಡೀ ದೇಶದ ಬಜೆಟ್ ಅನ್ನು ನಾವು ನೋಡಿದರೆ, ಈ ಸಮುದಾಯಕ್ಕೆ ಬಜೆಟ್‌ನಲ್ಲಿ ಬಂದಿರತಕ್ಕಂತಹ ಒಟ್ಟಾರೆ ಹಣ 2608.93 ಕೋಟಿ ರೂಪಾಯಿಗಳು ಮಾತ್ರ. But, in the State, 96.1 ಲಕ್ಷ ಜನಸಂಖ್ಯೆ ಇರುವಂತಹ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರು ಈ ರಾಜ್ಯಕ್ಕೆ 2,888.42 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಅವರ ಅಭ್ಯುದಯಕ್ಕಾಗಿ; ಅವರ ಶಿಕ್ಷಣಕ್ಕಾಗಿ; ಶಾಲೆ; ಅವರನ್ನು ಈ ಸಮಾಜದಲ್ಲಿ ಮುಂದೆ ತರುವುದಕ್ಕೆ ಬೇಕಾದಂತಹ ಯೋಜನೆಗಳು; ಹಾಸ್ಟೆಲ್‌ಗಳು; ವಿದ್ಯಾರ್ಥಿವೇತನಗಳು; ವಿದೇಶಕ್ಕೆ ಹೋಗಿ ಅಧ್ಯಯನ ಮಾಡುವುದಕ್ಕಾಗಿ ವಿದ್ಯಾರ್ಥಿವೇತನಗಳು;... ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮ ರಾಜ್ಯದ ಸುಮಾರು 21,000 ವಿದ್ಯಾರ್ಥಿಗಳು ಭಾರತದಿಂದ ಬೇರೆ ಬೇರೆ ರಾಷ್ಟ್ರಗಳಿಗೆ ಹೋಗಿ ಅವರು ಅಧ್ಯಯನ ಮಾಡಿದಂತಹ ವಿಷಯಗಳಲ್ಲಿ ತಜ್ಞರಾಗಿ ನಮ್ಮ ದೇಶಕ್ಕೆ ವಾಪಸ್ಸು ಬಂದು ಸೇವೆ ಸಲ್ಲಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅವರಿಗಾಗಿ ಸುಮಾರು 20,000 ರೂಪಾಯಿಗಳನ್ನು ನೇರವಾಗಿ ಸಹಾಯ ಮಾಡತಕ್ಕಂತಹ ಯೋಜನೆಗಳು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಲ್ಲಿದೆ. ಇದು ಏತಕ್ಕೆ ಮಾಡುತ್ತೇವೆ ಎಂದರೆ, ಸಂಪದ್ಭರಿತವಾದಂತಹ ದೇಶ ನಮ್ಮದಾಗಬೇಕು. ನಮ್ಮ ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆಯಬೇಕು. ಈ ದೇಶದಲ್ಲಿ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂದು ಮಾನ್ಯ ಪ್ರಧಾನ ಮಂತ್ರಿಗಳು ಹೇಳುತ್ತಾರೆ. ಆದರೆ,

ಅಲ್ಪಸಂಖ್ಯಾತರ ವಿದ್ಯಾಭ್ಯಾಸಕ್ಕಾಗಿ ಒಟ್ಟಾರೆ ಮೀಸಲಿಟ್ಟಂತಹ ಹಣ ಎಷ್ಟು ಎಂದು ಹೇಳಿದರೆ, 3,183 ಕೋಟಿ ರೂಪಾಯಿಗಳನ್ನು ಭಾರತ ದೇಶದ ಎಲ್ಲಾ 30 ರಾಜ್ಯಗಳಿಗೆ ಸಂಬಂಧಿಸಿದಂತೆ ಮೀಸಲಿಡಲಾಗಿದೆ. So, disparity ಇದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಬಹಳ ಅಜಗಜಾಂತರ ವ್ಯತ್ಯಾಸವಿದೆ. ಈ ದೇಶದ ಜನರೆಲ್ಲರೂ ಒಗ್ಗಟ್ಟಾಗಿ ಇರಬೇಕೆಂದು ಹೇಳುವ ಚಿಂತನೆ ಇರಬೇಕೇ ಹೊರತು, ಬೇರೆ ಚಿಂತನೆ ಇರಬಾರದು. ಆದರೆ, ಅಲ್ಪಸಂಖ್ಯಾತ ಸಮುದಾಯಕ್ಕೆ ಶೇಕಡ ಎಷ್ಟು ಮೀಸಲಿಡಲಾಗಿದೆ ಎಂದು ಕೇಳಿದರೆ, 0.01% of the Central Budget ರಷ್ಟು ಮಾತ್ರ ಮೀಸಲಾಗಿಡಲಾಗಿದೆ. ಅಂದರೆ, ಇವೊತ್ತಿನ ದಿವಸ ಎಲ್ಲರ ಹಕ್ಕು ಎಲ್ಲರಿಗೂ ಸಿಗಬೇಕು ಎಂದು ನಾನು ಹೇಳುತ್ತೇನೆ. ಅಲ್ಪಸಂಖ್ಯಾತರ ನಿಯೋಗ, ಹಿಂದೂಗಳ ಬೇರೆ ಬೇರೆ ಸಮುದಾಯದ ನಿಯೋಗ ಅಥವಾ ಎಸ್.ಸಿ./ಎಸ್.ಟಿ. ಸಮುದಾಯದ ನಿಯೋಗ ಮಾನ್ಯ ಸಿದ್ದರಾಮಯ್ಯನವರನ್ನು ಭೇಟಿ ಮಾಡಲು ಹೋದಾಗ, ಅವರು ಒಂದು ಮಾತನ್ನು ಹೇಳುತ್ತಿದ್ದರು. ಅದೇನೆಂದರೆ, ಹೌದು, ಬಜೆಟ್‌ನ ಸಮಾನ ಹಕ್ಕು ಎಲ್ಲರಿಗೂ ಬರಬೇಕು. ಅದು ಜನಸಂಖ್ಯೆಗೆ ಅನುಗುಣವಾಗಿ ಇರಬೇಕು. ಆದರೆ, ಈ ಹಂಚಿಕೆ ಮಾಡುವಂಥದ್ದನ್ನು ಬಿಟ್ಟು ಇವೊತ್ತಿನ ದಿವಸ ಸಮಾಜದಲ್ಲಿ ಜಿ.ಎಸ್.ಟಿ., ಸಿ.ಎಸ್.ಟಿ. ದುಡ್ಡು ನಮ್ಮ ರಾಜ್ಯಕ್ಕೆ ಬರುತ್ತಿಲ್ಲ. ಅಲ್ಪಸಂಖ್ಯಾತರಿಗೆ ಬೇಕಾದಂತಹ ಸವಲತ್ತುಗಳನ್ನು ಕೊಡುವುದಕ್ಕೆ ಹಣ ನೀಡುತ್ತಿಲ್ಲ. ಅಂದರೆ, ಎಲ್ಲಿಯೋ ಒಂದು ಕಡೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಕಾಂಗ್ರೆಸ್ ಇದೆ; ಕೇಂದ್ರ ಸರ್ಕಾರ ಬಿಜೆಪಿ ಇದೆ ಎಂದು ಹೇಳುವಂತಹ ಧೋರಣೆಯ ಭಾವನೆಯನ್ನು ಜನರ ಮುಂದೆ ಕೊಂಡೊಯ್ಯುವಂತಹ ಪ್ರಯತ್ನವನ್ನು ಕೇಂದ್ರ ಸರ್ಕಾರ ಇವೊತ್ತಿನ ದಿವಸ ಮಾಡುತ್ತಿದೆ. ಇದು ಕರ್ನಾಟಕ ರಾಜ್ಯದ ಬೆಳವಣಿಗೆಗೆ ಒಂದು ಒಳ್ಳೆಯ ಲಕ್ಷಣ ಅಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವೊತ್ತಿನ ದಿವಸ ಎಲ್ಲಾ ಸರ್ಕಾರಗಳನ್ನು ಒಂದೇ ರೀತಿಯಲ್ಲಿ ನೋಡತಕ್ಕಂಥದ್ದನ್ನು ನಾವು ಕಲಿಯಬೇಕು. ಅದನ್ನು ನಾವು ಮಲತಾಯಿ ಧೋರಣೆ ಎಂದು ಹೇಳುತ್ತೇವೆ. ಅದು ಸರಿಯಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ. ಏಕೆಂದರೆ, ತಮ್ಮ ಪ್ರಸ್ತಾಪವನ್ನು ಅನುಮೋದಿಸಬೇಕಲ್ಲವೇ? ನಂತರ, ತಮ್ಮದೇ ಪಕ್ಷದ ಇತರ ಸದಸ್ಯರುಗಳಿಗೆ ಮಾತನಾಡಲು ಅವಕಾಶ ನೀಡಬೇಕಲ್ಲವೇ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಆಯಿತು. ನಮ್ಮ ರಾಜ್ಯದಲ್ಲಿ ಇವೊತ್ತಿನ ದಿವಸ ಕಂದಾಯ ಇಲಾಖೆ ಇರಬಹುದು, ನೀರಾವರಿ ಇಲಾಖೆ ಇರಬಹುದು, ಕಾನೂನು ಮತ್ತು ಸುವ್ಯವಸ್ಥೆ ಇರಬಹುದು, I would like to mention that, ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಹೇಳುವುದಾದರೆ, ನಾವು ಕರಾವಳಿ ಭಾಗದಿಂದ ಬರತಕ್ಕಂತಹವರು. ನಮ್ಮ ಭಾಗದಲ್ಲಿ ಸ್ವಲ್ಪ ಹೆಚ್ಚು ...

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ ಸೋಜಾರವರೇ, ತಾವು ಹಿರಿಯ ಸದಸ್ಯರಿದ್ದೀರಿ. ಅಲ್ಲದೇ, 2ನೇ ಬಾರಿ ಸದಸ್ಯರಾಗಿ ಆಯ್ಕೆಯಾಗಿ ಈ ಸದನಕ್ಕೆ ಬಂದಿರುತ್ತೀರಿ. ಈ ಸದನದಲ್ಲಿ ಸಮಯ ಎನ್ನುವುದು ಬಹಳ ಮುಖ್ಯವಾಗಿರುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇನ್ನು ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಅಂದರೆ, 2 ಗಂಟೆಗೆ ಸರಿಯಾಗಿ ನನ್ನ ಮಾತನ್ನು ಮುಕ್ತಾಯಗೊಳಸುತ್ತೇನೆ. ಹಾಗಾಗಿ, ತಾವು ಪುನಃ ನನಗೆ ಹೇಳುವಂತಹ ಅವಶ್ಯಕತೆ ಇರುವುದಿಲ್ಲ. ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಳೆದ 19 ತಿಂಗಳ ಅವಧಿಯಲ್ಲಿ ಯಾವುದೇ ಗಂಭೀರವಾಗಿರತಕ್ಕಂತಹ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಆಗಿರುವುದಿಲ್ಲ. ಇದು ಜನರಿಗೆ ನೆಮ್ಮದಿಯನ್ನು ಕೊಟ್ಟಿದೆ. ಇದರಿಂದಾಗಿ, ಸರ್ಕಾರದ ಬಗ್ಗೆ ಜನರಿಗೆ ಭರವಸೆ ಬಂದಿದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅದೇ ರೀತಿ, ಇನ್ನೊಂದು ಕಾರ್ಯಕ್ರಮವನ್ನು ತಮ್ಮ ಗಮನಕ್ಕೆ ತರಲೇಬೇಕು. ಅದೇನೆಂದರೆ, ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಜಾಪ್ರಭುತ್ವ ದಿನಾಚರಣೆಯನ್ನು ಆಚರಣೆ ಮಾಡಲಾಯಿತು. ಅದು ಎಲ್ಲಿಂದ ಎಲ್ಲಿಯವರೆಗೆ ಎಂದು ಹೇಳಿದರೆ, ಬೀದರ್ ನಿಂದ ಚಾಮರಾಜನಗರ ಜಿಲ್ಲೆಯವರೆಗೆ ಸುಮಾರು 2,500 ಕಿಲೋ ಮೀಟರ್ ಮಾನವ ಸರಪಳಿಯನ್ನು ಮಾಡಲಾಯಿತು. ಅದರಲ್ಲಿ ನಾನು ಮತ್ತು ತಾವು ಕೂಡ ಭಾಗವಹಿಸಿದ್ದೆವು. ಅಲ್ಲಿ ನಮ್ಮ ಸಂವಿಧಾನದಲ್ಲಿರುವ ಪ್ರಜಾಪ್ರಭುತ್ವದ ಪೀಠಿಕೆಯನ್ನು ಓದಲಾಯಿತು. ಅದರ ಮೂಲಕ ಇಂದಿನ ಮಕ್ಕಳಿಗೆ ಒಂದು ಭರವಸೆ ಕೊಟ್ಟು, ನಿಮಗೆ ಭವಿಷ್ಯ ಇದೆ. ಈ ರಾಷ್ಟ್ರ ನಿಮ್ಮ ರಕ್ಷಣೆಗೆ ಇದೆ. ಹಾಗಾಗಿ, ನಿಮ್ಮ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಯಾರಿಂದಲೂ ಆಗುವುದಿಲ್ಲ ಎನ್ನುವಂತಹ ಚಿಂತನೆಯನ್ನು ನಾವು ಪ್ರಜಾಪ್ರಭುತ್ವದ ದಿನವನ್ನು ಆಚರಣೆ ಮಾಡುವುದರ ಮೂಲಕ, ಗಿನ್ನಿಸ್ ರೆಕಾರ್ಡ್ ಮಾಡುವುದಕ್ಕೆ ಇಡೀ ಭಾರತ ದೇಶಕ್ಕೆ ನಾವು ಕರೆಯನ್ನು ಕೊಟ್ಟಿದ್ದೇವೆ.

ಇವೊತ್ತಿನ ದಿವಸ, ಸಾಮಾಜಿಕ ಅಸಮಾನತೆ, ದ್ವೇಷದ ರಾಜಕಾರಣ. ಒಬ್ಬರನ್ನು ನೋಡಿದರೆ, ಇನ್ನೊಬ್ಬರಿಗೆ ಆಗುವುದಿಲ್ಲ. ರಾಜ್ಯಕ್ಕೆ ಏನೇ ಇರಬಹುದು. ಒಬ್ಬರು ಚುನಾಯಿತರಾದ ಮೇಲೆ ಪುನಃ ನಾವು ಒಗ್ಗಟ್ಟಾಗಿ ಸರ್ಕಾರದಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ. ಆದರೆ, ಇವೊತ್ತಿನ ದಿವಸ ಏನು ಆಗುತ್ತಿದೆ ಎಂದರೆ, ದ್ವೇಷದ ರಾಜಕಾರಣ ನಡೆಯುತ್ತದೆ. ಯಾವ ರೀತಿಯಲ್ಲಿ ಕೂಡ ಇವೊತ್ತಿನ ದಿವಸ ಸರ್ಕಾರ ತಮ್ಮ ನೀತಿಗಳಲ್ಲಿ ಬದಲಾವಣೆಯನ್ನು ತರದೇ ಇದ್ದರೆ, ಸರ್ಕಾರವನ್ನು ಬಲಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರಾಜ್ಯದಲ್ಲಿ ಇರತಕ್ಕಂತಹ ಕ್ರಾಂತಿಕಾರಿ ಬದಲಾವಣೆಗಳು, ಚಿಂತನೆಗಳು ಬೇರೆ ಯಾವುದೇ ರಾಜ್ಯಗಳಲ್ಲಿ ಇಲ್ಲ. ತಮಗೆ ಗೊತ್ತಿರುವಂತೆ, ಯಾವುದೇ ಒಬ್ಬ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಸೀಟ್‌ಗೆ ಅಪ್ಲೈ ಮಾಡಿದರೆ, ಸಿ.ಇ.ಟಿ.ಯಲ್ಲಿ ಸೀಟು ಸಿಕ್ಕಿ, ಆತ ಪರೀಕ್ಷೆಗೆ ಕುಳಿತರೆ ಸಾಕು, ಸಿ.ಇ.ಟಿ. ಸೆಲ್‌ನಿಂದ ಆತನ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿಗೆ ನೇರವಾಗಿ ಹಣ ಹೋಗುವಂತಹ ಸಂದರ್ಭ ಈ ರಾಜ್ಯದಲ್ಲಿ ಕ್ರಾಂತಿಕಾರಿ ಬದಲಾವಣೆ ನಮ್ಮ ಸರ್ಕಾರದ

ಅವಧಿಯಲ್ಲಿ ಆಗಿದೆ. ಹಾಗಾಗಿ, ಈ ರಾಜ್ಯದಲ್ಲಿರುವ ನಾವೆಲ್ಲರೂ ಸಹ ಪುಣ್ಯವಂತರು ಮತ್ತು ಸಮಾಜದಲ್ಲಿ ಒಳ್ಳೆಯ ಚಿಂತನೆಯನ್ನು ಮಾಡಿದ್ದೇವೆ ಎಂದು ಹೇಳುವುದರ ಜೊತೆಗೆ, ಈ ರಾಜ್ಯದ ಒಟ್ಟಾರೆ ಬೆಳವಣಿಗೆಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತಹ ಅವಶ್ಯಕತೆ ಇದೆ.

ಇದರ ಜೊತೆಗೆ, ಮಾನ್ಯ ಶಿಕ್ಷಣ ಸಚಿವರ ಒಂದು ಕಾರ್ಯಕ್ರಮವನ್ನು ಶಹಬ್ಬಾಸ್ ಎಂದು ಹೇಳುತ್ತೇನೆ. ಇತ್ತೀಚೆಗೆ, ನಾನು ಪೇಪರ್ ಓದುವಾಗ, ಬಾಳೆಹಣ್ಣಿಗಿಂತ ನನಗೆ ಮೊಟ್ಟೆ ಇಷ್ಟ ಎಂದು ಅನೇಕ ವಿದ್ಯಾರ್ಥಿಗಳು ಹೇಳಿರುವುದನ್ನು ನಾನು ಗಮನಿಸಿರುತ್ತೇನೆ. ಎಷ್ಟು ಮೊಟ್ಟೆ ಕೊಡುತ್ತಾರೆಂದರೆ, 1ನೇ ತರಗತಿಯಿಂದ 10 ನೇ ತರಗತಿಯವರೆಗೆ ಒಟ್ಟು 52.7 ಲಕ್ಷ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ. ವಿದ್ಯಾರ್ಥಿಗಳು ಪ್ರತಿ ತಿಂಗಳಲ್ಲಿ ಸುಮಾರು 6.64 ಕೋಟಿ ಮೊಟ್ಟೆ ಸೇವನೆ ಮಾಡಿರುತ್ತಾರೆ. ಈ ಹಿಂದೆ ಬಿಸಿಯೂಟದ ಜೊತೆ ವಾರದಲ್ಲಿ ಎರಡು ದಿನ ಮೊಟ್ಟೆ ವಿತರಣೆ ಇದ್ದಾಗ ಶೇಕಡಾ 93.66ರಷ್ಟು ವಿದ್ಯಾರ್ಥಿಗಳು ಮೊಟ್ಟೆ ಸೇವಿಸುತ್ತಿದ್ದರು. ಆದರೆ, ಈಗ ಇದರಲ್ಲಿ ನಮ್ಮ ಸರ್ಕಾರ ಮುಂದೆ ಹೋಗಿದ್ದು, ವಾರದಲ್ಲಿ 6 ದಿನ ಮೊಟ್ಟೆ ವಿತರಣೆ ಮಾಡಲು ಪ್ರಾರಂಭ ಮಾಡಿದ್ದರಿಂದ ಶೇಕಡ 98.97 ವಿದ್ಯಾರ್ಥಿಗಳ ಹಾಜರಾತಿ ಶಾಲೆಗಳಲ್ಲಿ ಹೆಚ್ಚಾಗಿರುತ್ತದೆ. ಇದು ಈ ದೇಶವನ್ನು ಕಟ್ಟತಕ್ಕಂತಹ ಕಾರ್ಯಕ್ರಮ ಅಲ್ಲವೇ? ಇದನ್ನು ನಾನು ವಿರೋಧ ಪಕ್ಷದವರಿಗೆ ಹೇಳುವುದಕ್ಕೆ ಬಯಸುತ್ತೇನೆ. ರಾಜ್ಯಪಾಲರು ಭಾಷಣ ಮಾಡಲು ಬರಬೇಕಾದರೆ, ಅವರ ಮುಂದೆಯೇ ಪ್ರತಿಭಟನೆ ಮಾಡಿದರು. ಅದೇನೆಂದರೆ, "ನೀವು ನಮ್ಮ ರಾಜ್ಯಪಾಲರ ಮುಖಾಂತರ ಪಾಠ ಓದಿಸುತ್ತಿದ್ದೀರಿ; ನೀವು ಏನೋನೋ ಮಾಡುತ್ತಿದ್ದೀರಿ; ನಿಮ್ಮ ಕೈಯಲ್ಲಿ ಓದಿಸಿದ್ದಕ್ಕಾಗಿ ನಮ್ಮ ಪ್ರತಿಭಟನೆ" ಎಂದು ಹೇಳುತ್ತಿದ್ದರು. ಅದಕ್ಕೆ ನಾನು, "ಯಾಕಪ್ಪಾ ಪ್ರತಿಭಟನೆ" ಎಂದು ಅವರನ್ನು ಕೇಳಿದೆನು. ಅಲ್ಲದೇ, "ನಿಮ್ಮ ರಾಜ್ಯಪಾಲರ ಬಗ್ಗೆ ನಿಮಗೆ ವಿಶ್ವಾಸ ಇಲ್ಲವೇ? ನಿಮ್ಮ ರಾಜ್ಯಪಾಲರನ್ನು ನೀವು ಒಪ್ಪಿಕೊಳ್ಳುವುದಿಲ್ಲವೇ" ಎಂದು ಸಹ ಕೇಳಿದೆನು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸದಸ್ಯರೇ, ತಾವು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಿದ್ದೀರಿ. ತಾವು ಸದನಕ್ಕೆ ಮಾತನಾಡುತ್ತಿದ್ದೀರಿ. ತಾವು ನನಗೆ ಮಾತನಾಡಬೇಡಿ. ನಮಗೆ ಗೊತ್ತಿದೆ. ನೀವು ವಿರೋಧ ಪಕ್ಷವನ್ನು ಉದ್ದೇಶಿಸಿ ಮಾತನಾಡಬೇಡಿ. ಏಕೆಂದರೆ, ರಾಜ್ಯಪಾಲರ ಭಾಷಣವನ್ನು ನಾವು ಕೂಡ ಓದಿಕೊಂಡಿದ್ದೇವೆ. ನೀವು ಸದನಕ್ಕೆ ಮಾತನಾಡಿ. ನಿಮ್ಮ ಸರ್ಕಾರದಲ್ಲಿ ನೀವು ಯಾವ ಘನ ಕಾರ್ಯಗಳನ್ನು ಮಾಡಿದ್ದೀರೋ ಅದನ್ನು ತಾವು ಹೇಳಿ. ಅಲ್ಲದೇ, ನಾವು ಈಗ ಯಾವುದೇ ವಿರೋಧವನ್ನು ಮಾಡಿರುವುದಿಲ್ಲ. ಅದೇ ರೀತಿ, ನಂತರ ನಾವು ಮಾತನಾಡುವುದನ್ನು ಕೇಳುವಂತಹ ಒಂದು ದೊಡ್ಡತನವನ್ನು ತಾವು ಇಟ್ಟುಕೊಳ್ಳಿ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಏನೆಂದರೆ,...

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳಿದ್ದೇನೆಂದರೆ, ಇವೊತ್ತಿನ ದಿವಸ ಏನು ನಡೆಯುತ್ತಿದೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ. ಅದು ಅವರಿಗೆ ಇಷ್ಟವಾಗುತ್ತದೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಆದರೆ, ಇವೊತ್ತಿನ ದಿವಸ ನಮ್ಮ ದೇಶದಲ್ಲಿ ದ್ವೇಷದ ರಾಜಕಾರಣ ನಡೆಯುತ್ತಿದೆ. ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಸಮಾಜ ನಡೆಯುವುದಕ್ಕೆ ಕೇಂದ್ರ ಸರ್ಕಾರ ಬಿಡುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ. (ಮುಂದು)

(031) 04.03.2025 2.00 ವೈಎಲ್-ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ರೀತಿ ಕಾಂಗ್ರೆಸ್ ಪಕ್ಷದವರೇ ಮಾಡುತ್ತಿರುವುದು.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಚೆನ್ನೈಗೆ ಹೋಗಿ "ಲೋಕಸಭಾ ಸ್ಥಾನಗಳನ್ನು ತೆಗೆದುಬಿಡುತ್ತೇವೆ, delimitation ತರುತ್ತೇವೆ, ನಮಗೆ ಬೇಕಾದ ಹಾಗೆ ನಾವು ರಾಜ್ಯದ constituency ಗಳನ್ನು ಗುರುತು ಮಾಡುತ್ತೇವೆ" ಎಂದು ಹೇಳುತ್ತಾರೆ. ಅಯ್ಯೋ! there is a form. ಯಾರ ಮೇಲೆ ತನಿಖೆ ಮಾಡಬೇಕು? ಏನು ಮಾಡಬೇಕು?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅವರಿಗೆ ಸೌಜನ್ಯತೆಯೇ ಇಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇವತ್ತಿನ ಪರಿಸ್ಥಿತಿ ಎಲ್ಲಿಗೆ ಹೋಗಿದ್ದೆ ಎಂದರೆ, ತಮಿಳುನಾಡಿನ ಮುಖ್ಯಮಂತ್ರಿಯಾದ ಶ್ರೀ ಸ್ಟಾಲಿನ್‌ರವರು "ತಡಬೇಡ, ಮದುವೆಯಾದ ಕೂಡಲೇ ಮಕ್ಕಳು ಮಾಡಿಕೊಳ್ಳಿ" ಎಂದು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದ್ದು, ಇದು ದೇಶಕ್ಕೆ ಶೋಭೆ ತರುವಂಥ ಹೇಳಿಕೆಯೇ?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅದು ಸಹ ಅವರ ಮೈತ್ರಿ ಪಕ್ಷವೇ ಅಲ್ಲವೇ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ರೀತಿಯ ವಿಚಾರಗಳನ್ನು ಸಮಾಜದಲ್ಲಿ ಕೆಣಕಿದಾಗ,... ಸಮಾಜದಲ್ಲಿ ವಕ್ಫ್ ವಿಚಾರ ಉದ್ಭವಿಸಿದ್ದು ನಾವು ಏನು ಬೇಕಾದರೂ ತೀರ್ಮಾನ ಕೈಗೊಳ್ಳುತ್ತೇವೆ.

ಹಾಗಾಗಿ, ಅವರು ಸಹ ಈ ಸಮಾಜದಲ್ಲಿ ಸಂವಿಧಾನವನ್ನು ಗೌರವಿಸಬೇಕು ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಹೇಗೆ ಸಂವಿಧಾನವನ್ನು ಗೌರವಿಸಿದ್ದಾರೆ ಎಂಬುದನ್ನು ನೋಡಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಸಂವಿಧಾನವನ್ನು ಗೌರವಿಸುವುದನ್ನು ಕಲಿಯಬೇಕು.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಘನತೆವೆತ್ತ ರಾಜ್ಯಪಾಲರನ್ನು ಯಾವ ರೀತಿ ಬರಮಾಡಿಕೊಂಡಿದ್ದಾರೆ, ಏನೇನು ಮಾಡಿದ್ದಾರೆ ಎಂಬುದನ್ನು ನೋಡಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಂಡರೆ, ಅವರನ್ನು ಜನ ಕ್ಷಮಿಸುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಹೇಗೆ ಗೌರವಿಸಿದ್ದಾರೆ ಎಂಬುದನ್ನು ನೋಡಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಕೆಲಸ ಮಾಡಿದರೆ ಜನ ಸುಮ್ಮನೆ ಇರುವುದಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ತಮ್ಮ ಮಾತನ್ನು ಮುಗಿಸಿ. ಊಟದ ಸಮಯವಾಗುತ್ತಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ತಾವು ನನಗೆ ಇನ್ನೂ ಮಾತನಾಡಲು ಬಿಡುವುದಿಲ್ಲ ಎಂಬುದು ಗೊತ್ತಾಯಿತ್ತು.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ನಾನು ಬಿಡುತ್ತಿಲ್ಲ ಎಂದಲ್ಲ, ಸಮಯ ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಮ್ಮ ವಾದವನ್ನು ಚಿಕ್ಕಮಗಳೂರಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಕೇಳಿದ್ದೇನೆ. ತಾವು ಪೀಠಕ್ಕೆ ಬಂದ ಮೇಲೆ ನನಗೆ ಗೊತ್ತಾಯಿತ್ತು, ನನ್ನ ಅವಧಿ ಕಡಿತಗೊಳ್ಳುತ್ತದೆ.

**ವೈಸ್ ಛೇರ್ಮನ್:–** ಮಾನ್ಯ ಐವನ್ ಡಿ'ಸೋಜಾರವರೇ, ಆ ರೀತಿ ಭಾವಿಸಬೇಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ಸಹ ನಮ್ಮ ಹಾಗೆ ಎದ್ದು, ಬಿದ್ದು ಈ ಸದನಕ್ಕೆ ಬಂದವರು. ನಾನು ಸಹ ೩ ಸಲ ಬಿದ್ದು, ಮತ್ತೆ ಎದ್ದು ultimately, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಎರಡನೇ ಬಾರಿಗೆ ನನ್ನನ್ನು ಇಲ್ಲಿಗೆ ಕರೆಸಿಕೊಂಡರು. I am very grateful to him. ನನ್ನಂಥವರು ಈ ಸದನಕ್ಕೆ ಬರಲು ಸಾಧ್ಯವಾಗಲಿಲ್ಲ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಗೆ ಚಿರಋಣಿಯಾಗಿರುತ್ತೇನೆ. ಅವರು ಮಾಡುವಂಥ ಕೆಲಸಗಳಿಗೆ ನನ್ನ ಬೆಂಬಲ ಇದೆ. ಘನತೆವೆತ್ತ ರಾಜ್ಯಪಾಲರು ಮಾಡಿರುವ ಭಾಷಣದ ಕುರಿತು ಬಿ.ಜೆ.ಪಿ. ಯವರು 'ಕಥೆ ಓದಿಸುತ್ತಾರೆ, ಚಿತ್ರ ಬಿಡಿಸಿದ್ದಾರೆ, ಬಣ್ಣ ಹಾಕಿದ್ದಾರೆ, ಸುಣ್ಣ ಹಾಕಿದ್ದಾರೆ' ಎಂದು ಹೇಳಿರುವಂಥ ಹೇಳಿಕೆಯನ್ನು ನೋಡಿದ್ದೆನು. No, this is the reality of the State. ಈ ರಾಜ್ಯದ ಜನಜೀವನದ ವಿಚಾರವನ್ನು ಸುಮಾರು ಆರೂವರೆ ಕೋಟಿ ಜನರ ಮುಂದೆ ಇಟ್ಟಿದ್ದಾರೆ. ಕಲ್ಲು ಹೊಡೆಯುವುದಾದರೆ ಹೊಡೆಯಿರಿ, ನಾನು ಕನ್ನಡಿ ಮುಂದೆ ಕುಳಿತಿದ್ದೇನೆ ಎಂದು ಹೇಳಿದ್ದಾರೆ. ಹಾಗಾಗಿ, ಈ ರಾಜ್ಯದ ಜನತೆಗೆ ಉತ್ತಮ ಸಂದೇಶವನ್ನು ನೀಡಿರುವಂಥ ಘನತೆವೆತ್ತ ರಾಜ್ಯಪಾಲರಿಗೆ ನಾನು ಅಭಿನಂದನೆ ಹಾಗೂ ಗೌರವವನ್ನು ಸಲ್ಲಿಸುತ್ತೇನೆ ಹಾಗೂ ಅವರ ಭಾಷಣವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ಸರ್ಕಾರ, is committed to the downtrodden and, committed to all sections of the people of the State. ಆ ಸರ್ಕಾರ ಇನ್ನೂ ಬಾಳಬೇಕು ಎಂಬುದನ್ನು ಹೇಳಬಯಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

(ಮಾನ್ಯ ಸಭಾಪತಿಯವರ ಆದೇಶದಂತೆ ಈ ಕೆಳಕಂಡ ದಾಖಲೆಗಳನ್ನು ಮಾನ್ಯ ಸದಸ್ಯರಾದ **ಶ್ರೀ ಐವನ್ ಡಿ'ಸೋಜಾ ರವರ** ಭಾಷಣದ ಭಾಗವಾಗಿ ಪರಿಗಣಿಸಲಾಗಿದೆ)

## STATE wise

### Beneficiaries & Grants

Sri. Ivan Dsouza, MLC Request - 03-03-2025

28-02-2025

| GRUHA LAKSHMI *upto* November 2024 | | |
|---|---|---|
| Name | Beneficiary Numbers (as per DBT) | Beneficiary wise Expenditure |
| | | |
| STATE | 1.22 Cr. | 37,640 Cr. |
| | | |
| | | |

| GRUHA JYOTHI *upto* January *2025* | | |
|---|---|---|
| Name | Beneficiary Numbers | Beneficiary wise Expenditure |
| | | |
| STATE | 1.63 Cr. | 13,373 Cr. |
| | | |
| | | |

| ANNA BHAGYA *upto* November 2024 | | |
|---|---|---|
| Name | Beneficiary Numbers | Beneficiary wise Expenditure as per DBT |
| | | |
| STATE (July-23 to Nov-24) | 67.85 Cr. | 11,136 Cr. |
| | | |
| | | |

| SHAKTHI *upto* 28th February 2025 | | |
|---|---|---|
| Name | Beneficiary Numbers | Beneficiary wise Expenditure |
| | | |
| STATE | 405.14 Cr. | 9,879 Cr. |
| | | |
| | | |

| YUVA NIDHI *From Dec. 2023 to* January *2025* | | |
|---|---|---|
| Name | Number of Youths Registered | Total Grants Released |
| | | |
| STATE | 2.58 Lakh | 286.08 Cr. |
| | | |
| | | |

Economic Survey Report over State

Kalaburgi revenue region (Ballari, Bidar, Kalaburgi, Koppal, Raichuru, Vijayanagar and Yadagiri districts), stood lowest in the per capita income of Rs.1,66,797, followed by Belagavi (Rs.1,81,911) and Mysore (Rs.3,02,060) regions during 2022-23.

Bangalore Urban district Per capita Income is Rs.7,60,362 is highest among all the districts, followed by Dakshina Kannada (Rs.4,92,074), Udupi (Rs.4,14,274) and Chikkamagaluru (Rs.3,77,968) are above the State Per capita Income ofRs.3,04,474 for 2022-23

The budgetary allocation for the Ministry of Minority Affairs has increased by Rs 574.31 crore to Rs 3,183.24 crore for 2024-25 as against the revised estimate of Rs 2,608.93 crore in 2023-24. Union Finance Minister Nirmala Sitharaman presented the Budget for 2024-25, her seventh straight presentation, surpassing the record of former prime minister Morarji Desai. This was the first budget of Prime Minister Narendra Modi-led government's third term in office.

The State 2024-25 2888.42 Cr.

Total population - 96.0 lakhs

Total percentage 16.28 lakhs

Union National Budget 24-25 → 3,183.24

Estimate revised 2,608.93

Table 11.11.2 : Human Development Index among major States in India, 1999 to 2022

| Sl.No. | States | 1999 | | 2005 | | 2015 | | 2022 | |
|---|---|---|---|---|---|---|---|---|---|
| | | HDI | Rank | HDI | Rank | HDI | Rank | HDI | Rank |
| 1 | Andhra Pradesh | 0.368 | 13 | 0.473 | 13 | 0.593 | 11 | 0.631 | 14 |
| 2 | Assam | 0.336 | 15 | 0.444 | 14 | 0.563 | 14 | 0.621 | 15 |
| 3 | Bihar | 0.292 | 17 | 0.367 | 19 | 0.536 | 20 | 0.590 | 20 |
| 4 | Chhattisgarh | - | | - | | 0.542 | 17 | 0.592 | 19 |
| 5 | NCT of Delhi | 0.783 | 1 | 0.750 | 2 | -** | - | 0.723 | 1 |
| 6 | Gujarat | 0.466 | 8 | 0.527 | 9 | 0.598 | 10 | 0.645 | 10 |
| 7 | Haryana | 0.501 | 5 | 0.552 | 7 | 0.628 | 6 | 0.652 | 9 |
| 8 | Himachal Pradesh | 0.581 | 3 | 0.652 | 3 | 0.643 | 2 | 0.680 | 3 |
| 9 | Jammu & Kashmir | 0.465 | 9 | 0.529 | 8 | 0.621 | 7 | 0.665 | 7 |
| 10 | Jharkhand | 0.268 | 20 | 0.376 | 17 | 0.556 | 15 | 0.600 | 17 |
| **11** | **Karnataka** | **0.432** | **10** | **0.519** | **10** | **0.611** | **8** | **0.644** | **11** |
| 12 | Kerala | 0.677 | 2 | 0.790 | 1 | 0.693 | 1 | 0.719 | 2 |
| 13 | Madhya Pradesh | 0.285 | 18 | 0.375 | 18 | 0.547 | 16 | 0.589 | 21 |
| 14 | Maharashtra | 0.501 | 6 | 0.572 | 5 | 0.642 | 3 | 0.668 | 6 |
| 15 | Odisha | 0.275 | 19 | 0.362 | 20 | 0.539 | 18 | 0.600 | 18 |
| 16 | Punjab | 0.543 | 4 | 0.605 | 4 | 0.641 | 4 | 0.678 | 4 |
| 17 | Rajasthan | 0.387 | 12 | 0.434 | 15 | 0.565 | 13 | 0.606 | 16 |
| 18 | Tamil Nadu | 0.480 | 7 | 0.570 | 6 | 0.633 | 5 | 0.676 | 5 |
| 19 | Telangana | - | | - | | | | 0.643 | 12 |
| 20 | Uttar Pradesh | 0.316 | 16 | 0.380 | 16 | 0.537 | 19 | 0.584 | 22 |
| 21 | Uttarakhand | 0.339 | 14 | 0.490 | 12 | 0.600 | 9 | 0.658 | 8 |
| 22 | West Bengal | 0.422 | 11 | 0.492 | 11 | 0.592 | 12 | 0.639 | 13 |
| | **India*** | **0.387** | | **0.467** | | **0.587** | | **0.629** | |

*Source: KSHDR-2015 & KSHDR-2022. ** Not estimated. (Ranks are not exactly comparable as methodological changes and addition*

**Table 11.11.3: HDI across the districts of Karnataka**

| Districts | Health Index | MYS Index | EYS Index | Education Index | Income Index | HDI | Rank |
|---|---|---|---|---|---|---|---|
| Bengaluru Urban | 0.770 | 0.662 | 0.693 | 0.678 | 0.770 | 0.738 | 1 |
| Dakshina Kannada | 0.757 | 0.479 | 0.712 | 0.595 | 0.720 | 0.687 | 2 |
| Chikkamagaluru | 0.770 | 0.465 | 0.687 | 0.576 | 0.672 | 0.668 | 3 |
| Udupi | 0.760 | 0.492 | 0.640 | 0.566 | 0.684 | 0.665 | 4 |
| Kodagu | 0.768 | 0.589 | 0.648 | 0.619 | 0.616 | 0.664 | 5 |
| Mandya | 0.764 | 0.446 | 0.704 | 0.575 | 0.607 | 0.644 | 6 |
| Bengaluru Rural | 0.762 | 0.503 | 0.611 | 0.557 | 0.625 | 0.643 | 7 |
| Ramanagar | 0.761 | 0.433 | 0.697 | 0.565 | 0.615 | 0.642 | 8 |
| Kolar | 0.771 | 0.537 | 0.662 | 0.599 | 0.567 | 0.640 | 9 |
| Shimoga | 0.755 | 0.385 | 0.710 | 0.547 | 0.623 | 0.636 | 10 |
| Uttara Kannada | 0.775 | 0.468 | 0.645 | 0.556 | 0.586 | 0.632 | 11 |
| Bagalkot | 0.774 | 0.458 | 0.625 | 0.542 | 0.594 | 0.629 | 12 |
| Chikkaballapur | 0.768 | 0.516 | 0.639 | 0.577 | 0.558 | 0.628 | 13 |
| Mysore | 0.759 | 0.460 | 0.653 | 0.557 | 0.577 | 0.625 | 14 |
| Hassan | 0.769 | 0.393 | 0.662 | 0.528 | 0.598 | 0.624 | 15 |
| Gadag | 0.767 | 0.424 | 0.703 | 0.563 | 0.559 | 0.623 | 16 |
| Tumkur | 0.759 | 0.383 | 0.629 | 0.506 | 0.606 | 0.615 | 17 |
| Bellary | 0.730 | 0.363 | 0.683 | 0.523 | 0.601 | 0.612 | 18 |
| Dharwad | 0.708 | 0.439 | 0.626 | 0.533 | 0.601 | 0.610 | 19 |
| Belgaum | 0.751 | 0.452 | 0.641 | 0.546 | 0.529 | 0.601 | 20 |
| Chamarajanagar | 0.776 | 0.344 | 0.633 | 0.488 | 0.573 | 0.601 | 21 |
| Bidar | 0.772 | 0.406 | 0.658 | 0.532 | 0.527 | 0.600 | 22 |
| Vijayapura | 0.771 | 0.381 | 0.667 | 0.524 | 0.532 | 0.599 | 23 |
| Chitradurga | 0.757 | 0.412 | 0.626 | 0.519 | 0.541 | 0.597 | 24 |
| Koppal | 0.765 | 0.399 | 0.640 | 0.520 | 0.524 | 0.593 | 25 |
| Davangere | 0.749 | 0.394 | 0.622 | 0.508 | 0.538 | 0.589 | 26 |
| Haveri | 0.762 | 0.365 | 0.527 | 0.446 | 0.533 | 0.566 | 27 |
| Raichur | 0.742 | 0.175 | 0.721 | 0.448 | 0.535 | 0.562 | 28 |
| Kalaburagi | 0.726 | 0.285 | 0.554 | 0.420 | 0.514 | 0.539 | 29 |
| Yadgir | 0.764 | 0.256 | 0.508 | 0.382 | 0.533 | 0.538 | 30 |
| Karnataka | 0.759 | 0.462 | 0.647 | 0.555 | 0.634 | 0.644 | |





*Source: Karnataka Human Development Report-2022. MYS: Mean years of Schooling, EYS: Expected Years of Schooling.*

***MINISTRY OF MINORITY AFFAIRS***

DEMAND NO. 70

**Ministry of Minority Affairs**

*(In ₹ crores)*

| | Actual 2022-2023 | | | Budget 2023-2024 | | | Revised 2023-2024 | | | Budget 2024-2025 | | |
|---|---|---|---|---|---|---|---|---|---|---|---|---|
| | Revenue | Capital | Total | Revenue | Capital | Total | Revenue | Capital | Total | Revenue | Capital | Total |
| Gross | 678.68 | 159.00 | 837.68 | 3032.60 | 65.00 | 3097.60 | 2543.93 | 65.00 | 2608.93 | 3179.49 | 3.75 | 3183.24 |
| *Recoveries* | *-34.99* | ... | *-34.99* | ... | ... | ... | ... | ... | ... | ... | ... | ... |
| *Receipts* | ... | ... | ... | ... | ... | ... | ... | ... | ... | ... | ... | ... |
| **Net** | **643.69** | **159.00** | **802.69** | **3032.60** | **65.00** | **3097.60** | **2543.93** | **65.00** | **2608.93** | **3179.49** | **3.75** | **3183.24** |
| A. The Budget allocations, net of recoveries, are given below: | | | | | | | | | | | | |
| **CENTRE'S EXPENDITURE** | | | | | | | | | | | | |
| **Establishment Expenditure of the Centre** | | | | | | | | | | | | |
| 1. Secretariat | 25.02 | ... | 25.02 | 31.00 | 4.00 | 35.00 | 31.00 | 4.00 | 35.00 | 33.62 | 2.00 | 35.62 |
| 2. Special Programme for Minorities | 61.56 | ... | 61.56 | 97.00 | ... | 97.00 | 86.69 | ... | 86.69 | 95.25 | 1.75 | 97.00 |
| **Total-Establishment Expenditure of the Centre** | **86.58** | **...** | **86.58** | **128.00** | **4.00** | **132.00** | **117.69** | **4.00** | **121.69** | **128.87** | **3.75** | **132.62** |
| **Central Sector Schemes/Projects** | | | | | | | | | | | | |
| 3. Quami Waqf Board Taraqqiati Scheme and Sahari Waqf Sampati Vikas Yojna | 5.12 | ... | 5.12 | 17.00 | ... | 17.00 | 8.00 | ... | 8.00 | 16.00 | ... | 16.00 |
| 4. *Education Empowerment* | | | | | | | | | | | | |
| 4.01 Pre-Matric Scholarship for Minorities | 43.95 | ... | 43.95 | 433.00 | ... | 433.00 | 400.00 | ... | 400.00 | 326.16 | ... | 326.16 |
| 4.02 Post-Matric Scholarship for Minorities | 29.00 | ... | 29.00 | 1065.00 | ... | 1065.00 | 1000.00 | ... | 1000.00 | 1145.38 | ... | 1145.38 |
| 4.03 Merit-cum-Means Scholarship for professional and technical courses (under graduate and post-graduate) | 34.89 | ... | 34.89 | 44.00 | ... | 44.00 | 25.00 | ... | 25.00 | 33.80 | ... | 33.80 |
| 4.04 Maulana Azad National Fellowship for Minority Students | 98.85 | ... | 98.85 | 96.00 | ... | 96.00 | 54.00 | ... | 54.00 | 45.08 | ... | 45.08 |
| 4.05 Free Coaching and allied schemes for Minorities | 25.00 | ... | 25.00 | 30.00 | ... | 30.00 | 14.00 | ... | 14.00 | 10.00 | ... | 10.00 |
| 4.06 Interest Subsidy on Educational loans for Overseas Studies | 24.00 | ... | 24.00 | 21.00 | ... | 21.00 | 7.00 | ... | 7.00 | 15.30 | ... | 15.30 |
| 4.07 Support for students clearing Prelims conducted by UPSC, SSC, State Public Service Commissions etc | 1.66 | ... | 1.66 | ... | ... | ... | ... | ... | ... | ... | ... | ... |
| *Total- Education Empowerment* | *257.35* | ... | *257.35* | *1689.00* | ... | *1689.00* | *1500.00* | ... | *1500.00* | *1575.72* | ... | *1575.72* |
| 5. *Skill Development and Livelihoods* | | | | | | | | | | | | |
| 5.01 Skill Development Initiatives | 65.28 | ... | 65.28 | 0.10 | ... | 0.10 | ... | ... | ... | ... | ... | ... |
| 5.02 Nai Manzil - the Integrated Educational and Livelihood Initiative | 7.62 | ... | 7.62 | 0.10 | ... | 0.10 | ... | ... | ... | ... | ... | ... |

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"



(In ₹ crores)

| | Actual 2022-2023 | | | Budget 2023-2024 | | | Revised 2023-2024 | | | Budget 2024-2025 | | |
|---|---|---|---|---|---|---|---|---|---|---|---|---|
| | Revenue | Capital | Total | Revenue | Capital | Total | Revenue | Capital | Total | Revenue | Capital | Total |
| 5.03 Upgrading Skills and Training in Traditional Arts/Crafts for Development (USTTAD) | 10.61 | ... | 10.61 | 0.10 | ... | 0.10 | ... | ... | ... | ... | ... | ... |
| 5.04 Scheme for Leadership Development of Minority Women | 0.62 | ... | 0.62 | 0.10 | ... | 0.10 | ... | ... | ... | ... | ... | ... |
| 5.05 Grants in aid to State Channelizing Agencies (SCAs) for implementation of NMDFC Programmes | 2.00 | ... | 2.00 | 3.00 | ... | 3.00 | 3.00 | ... | 3.00 | 3.00 | ... | 3.00 |
| 5.06 Equity contribution to National Minorities Development and Finance Corporation (NMDFC) | ... | 159.00 | 159.00 | ... | 61.00 | 61.00 | ... | 61.00 | 61.00 | ... | ... | ... |
| *Total- Skill Development and Livelihoods* | *86.13* | *159.00* | *245.13* | *3.40* | *61.00* | *64.40* | *3.00* | *61.00* | *64.00* | *3.00* | ... | *3.00* |
| *6. Special Programmes of Minorities* | | | | | | | | | | | | |
| 6.01 Research/Studies, Publicity, Monitoring and Evaluation of development Schemes for Minorities | 4.83 | ... | 4.83 | 20.00 | ... | 20.00 | 15.00 | ... | 15.00 | 20.00 | ... | 20.00 |
| 6.02 Hamari Dharohar for conservation and protection of culture and heritage of Minorities | ... | ... | ... | 0.10 | ... | 0.10 | ... | ... | ... | ... | ... | ... |
| 6.03 Scheme for containing population decline of small minority community | 2.70 | ... | 2.70 | 6.00 | ... | 6.00 | 3.00 | ... | 3.00 | 6.00 | ... | 6.00 |
| *Total- Special Programmes of Minorities* | *7.53* | ... | *7.53* | *26.10* | ... | *26.10* | *18.00* | ... | *18.00* | *26.00* | ... | *26.00* |
| *7. PM-Viraasat Ka Samvardhan (PM VIKAS)* | | | | | | | | | | | | |
| 7.08 PM-VIKAS Committed Liabilities | ... | ... | ... | 540.00 | ... | 540.00 | 325.86 | ... | 325.86 | 500.00 | ... | 500.00 |
| **Total-Central Sector Schemes/Projects** | **356.13** | **159.00** | **515.13** | **2275.50** | **61.00** | **2336.50** | **1854.86** | **61.00** | **1915.86** | **2120.72** | ... | **2120.72** |
| **Other Central Sector Expenditure** | | | | | | | | | | | | |
| **Statutory and Regulatory Bodies** | | | | | | | | | | | | |
| 8. National Commission for Minorities | 11.24 | ... | 11.24 | 15.00 | ... | 15.00 | 13.50 | ... | 13.50 | 14.00 | ... | 14.00 |
| 9. Special Officer for Linguistic Minorities | 1.98 | ... | 1.98 | 4.00 | ... | 4.00 | 2.88 | ... | 2.88 | 3.00 | ... | 3.00 |
| **Total-Statutory and Regulatory Bodies** | **13.22** | ... | **13.22** | **19.00** | ... | **19.00** | **16.38** | ... | **16.38** | **17.00** | ... | **17.00** |
| **Autonomous Bodies** | | | | | | | | | | | | |
| 10. Maulana Azad Education Foundation (MAEF) | ... | ... | ... | 0.10 | ... | 0.10 | ... | ... | ... | ... | ... | ... |
| **Others** | | | | | | | | | | | | |
| 11. Actual Recoveries | -34.99 | ... | -34.99 | ... | ... | ... | ... | ... | ... | ... | ... | ... |
| **Total-Other Central Sector Expenditure** | **-21.77** | ... | **-21.77** | **19.10** | ... | **19.10** | **16.38** | ... | **16.38** | **17.00** | ... | **17.00** |
| **TRANSFERS TO STATES/UTs** | | | | | | | | | | | | |
| **Centrally Sponsored Schemes** | | | | | | | | | | | | |
| **Umbrella Programme for Development of Minorities** | | | | | | | | | | | | |
| 12. Pradhan Mantri Jan Vikas Karyakaram | 222.67 | ... | 222.67 | 600.00 | ... | 600.00 | 550.00 | ... | 550.00 | 910.90 | ... | 910.90 |
| 13. Education Scheme for Madrasas and Minorities | 0.08 | ... | 0.08 | 10.00 | ... | 10.00 | 5.00 | ... | 5.00 | 2.00 | ... | 2.00 |

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"



(In ₹ crores)

| | Actual 2022-2023 | | | Budget 2023-2024 | | | Revised 2023-2024 | | | Budget 2024-2025 | | |
|---|---|---|---|---|---|---|---|---|---|---|---|---|
| | Revenue | Capital | Total | Revenue | Capital | Total | Revenue | Capital | Total | Revenue | Capital | Total |
| Total-Umbrella Programme for Development of Minorities | 222.75 | ... | 222.75 | 610.00 | ... | 610.00 | 555.00 | ... | 555.00 | 912.90 | ... | 912.90 |
| **Total-Centrally Sponsored Schemes** | 222.75 | ... | 222.75 | 610.00 | ... | 610.00 | 555.00 | ... | 555.00 | 912.90 | ... | 912.90 |
| ***Grand Total*** | *643.69* | *159.00* | *802.69* | *3032.60* | *65.00* | *3097.60* | *2543.93* | *65.00* | *2608.93* | *3179.49* | *3.75* | *3183.24* |
| **B. Developmental Heads** | | | | | | | | | | | | |
| **Social Services** | | | | | | | | | | | | |
| 1. Welfare of Scheduled Castes, Scheduled Tribes, Other Backward Classes and Minorities | 341.24 | ... | 341.24 | 1797.98 | ... | 1797.98 | 1599.72 | ... | 1599.72 | 1667.44 | ... | 1667.44 |
| 2. Social Security and Welfare | 174.17 | ... | 174.17 | 646.38 | ... | 646.38 | 414.06 | ... | 414.06 | 602.55 | ... | 602.55 |
| 3. Secretariat-Social Services | 25.02 | ... | 25.02 | 31.00 | ... | 31.00 | 31.00 | ... | 31.00 | 33.62 | ... | 33.62 |
| 4. Capital Outlay on Welfare of Scheduled Castes, Scheduled Tribes , Other Backward Classes and Minorities | ... | 159.00 | 159.00 | ... | 61.00 | 61.00 | ... | 61.00 | 61.00 | ... | ... | ... |
| 5. Capital Outlay on other Social Services | ... | ... | ... | ... | 4.00 | 4.00 | ... | 4.00 | 4.00 | ... | 3.75 | 3.75 |
| **Total-Social Services** | **540.43** | **159.00** | **699.43** | **2475.36** | **65.00** | **2540.36** | **2044.78** | **65.00** | **2109.78** | **2303.61** | **3.75** | **2307.36** |
| **Others** | | | | | | | | | | | | |
| 6. North Eastern Areas | ... | ... | ... | 309.70 | ... | 309.70 | 261.44 | ... | 261.44 | 318.70 | ... | 318.70 |
| 7. Grants-in-aid to State Governments | 103.26 | ... | 103.26 | 247.21 | ... | 247.21 | 237.54 | ... | 237.54 | 527.12 | ... | 527.12 |
| 8. Grants-in-aid to Union Territory Governments | ... | ... | ... | 0.33 | ... | 0.33 | 0.17 | ... | 0.17 | 30.06 | ... | 30.06 |
| **Total-Others** | **103.26** | **...** | **103.26** | **557.24** | **...** | **557.24** | **499.15** | **...** | **499.15** | **875.88** | **...** | **875.88** |
| **Grand Total** | **643.69** | **159.00** | **802.69** | **3032.60** | **65.00** | **3097.60** | **2543.93** | **65.00** | **2608.93** | **3179.49** | **3.75** | **3183.24** |

| | Budget Support | IEBR | Total | Budget Support | IEBR | Total | Budget Support | IEBR | Total | Budget Support | IEBR | Total |
|---|---|---|---|---|---|---|---|---|---|---|---|---|
| **C. Investment in Public Enterprises** | | | | | | | | | | | | |
| 1. Equity contribution to National Minorities Development and Finance Corporation | 159.00 | 711.79 | 870.79 | 61.00 | 886.00 | 947.00 | 61.00 | 826.00 | 887.00 | ... | 800.00 | 800.00 |
| **Total** | **159.00** | **711.79** | **870.79** | **61.00** | **886.00** | **947.00** | **61.00** | **826.00** | **887.00** | **...** | **800.00** | **800.00** |

1. **Secretariat:** The provision is for expenditure on Secretariat.

2. **Special Programme for Minorities:** This provision is for Haj Management in India and Saudi Arabia.

3. **Quami Waqf Board Taraqqiati Scheme and Sahari Waqf Sampati Vikas Yojna:** Qaumi Waqf Board Taraqqiati Scheme (QWBTS) & Shahari Waqf Sampatti Vikas Yojna (SWSVK) are being implemented for Computerization of Records, Strengthening of State Waqf Boards and to protect vacant urban Waqf land from encroachers and to develop it on commercial lines for generating more income in order to widen welfare activities respectively. Financial Assistance under QWBTS is provided to State/UT Waqf Boards (SWBs) for deployment of manpower for doing data entry in WAMSI Modules, GIS Mapping of waqf property, maintenance of Centralized Computing Facility (CCF), ERP Solution for better administration of SWBs, setting up of Video Conferencing facility in SWBs, Cash Award to Muttawalli/Management Committee, strengthen legal & accounting section for meeting training & administrative cost of SWBs.

Under SWSVY, financial assistance is provided to extend interest free loan to various Waqf Instiutions in the country for taking up economically viable buildings on the Urban Waqf land for development such as commercial complexes, marriage halls, hospitals, cold storages etc. Central Waqf Council (CWC) is the Implementing Agency for both schemes.

4.01. **Pre-Matric Scholarship for Minorities:** Pre-matric scholarship is provided to students from the minority communities who fulfill the eligibility criteria for studies in class IX and X in schools recognized by an appropriate authority.

4.02. **Post-Matric Scholarship for Minorities:** Post-matric scholarship is provided to students from minority communities who fulfill merit and means criteria for studies in class XI & XII levels including technical and vocational courses and to such eligible minority students for general courses at undergraduate, post graduate levels upto Ph.D level, in schools/colleges/institutes/universities recognized by an appropriate authority.

4.03. **Merit-cum-Means Scholarship for professional and technical courses (under graduate and post-graduate):** Scholarship is provided to students from minority communities who fulfill the eligibility criteria of merit and means for pursuing professional and technical courses at under-graduate and post-graduate levels in institutions recognized by an appropriate authority.

4.04. **Maulana Azad National Fellowship for Minority Students:** The objective of the scheme is to provide fellowships in the form of financial assistance to students belonging to Minority Communities to pursue higher studies at M. Phil and Ph.D level. The scheme covers all Universities/Institutions recognized by the University Grants Commission (UGC) under section 2(f) of the UGC Act. The fellowship is on the pattern of UGC Fellowships awarded to research students pursuing regular and full time M. Phil and Ph.D courses.

4.05. **Free Coaching and allied schemes for Minorities:** The objective of the scheme is to assist economically weaker section candidates belonging to minority communities by providing them opportunities for enhancing their knowledge, skills and capabilities for employment in government/private sector through competitive examinations/process of selection, and for admission in reputed institutions.

4.06. **Interest Subsidy on Educational loans for Overseas Studies:** This scheme is being implemented with the objective of providing interest subsidy on educational loans to students of Minority Communities selected for pursuing higher studies abroad.

4.07. **Support for students clearing Prelims conducted by UPSC, SSC, State Public Service Commissions etc:** The objective of the Scheme is to increase the representation of minority in Civil Services which is presently much lower than the proportion of minority in the population by giving direct financial support to candidates clearing Preliminary Examination of Group A and B posts of Union Public Service Commission (UPSC), State Public Service Commissions (SPSCs) and Staff Selection Commission (SSC).

5.01. **Skill Development Initiatives:** The scheme has been merged with PM-Viraasat Ka Samvardhan (PM VIKAS).

5.02. **Nai Manzil - the Integrated Educational and Livelihood Initiative:** The scheme has been merged with PM-Viraasat Ka Samvardhan (PM VIKAS).

5.03. **Upgrading Skills and Training in Traditional Arts/Crafts for Development (USTTAD):** The scheme has been merged with PM-Viraasat Ka Samvardhan (PM VIKAS).

5.04. **Scheme for Leadership Development of Minority Women:** The scheme has been merged with PM-Viraasat Ka Samvardhan (PM VIKAS).

5.05. **Grants in aid to State Channelizing Agencies (SCAs) for implementation of NMDFC Programmes:** The National Minorities Development & Finance Corporation (NMDFC) operates through State Channelising Agencies (SCAs).Grants-in-aid is being provided to SCAs to strengthen their capabilities and operations.

5.06. **Equity contribution to National Minorities Development and Finance Corporation (NMDFC):** The provision is for providing share capital to the National Minorities Development & Finance Corporation (NMDFC).

6.01. **Research/Studies, Publicity, Monitoring and Evaluation of development Schemes for Minorities:** The objective is to study, evaluate and monitor the programmes and schemes for welfare of minorities, including the 15 Point Programme, other area for studies and also carry out intensive multi- media campaign for dissemination of information of Ministry's programmes, schemes and initiatives.

6.02. **Hamari Dharohar for conservation and protection of culture and heritage of Minorities:** The scheme has been merged with PM-Viraasat Ka Samvardhan (PM VIKAS).

6.03. **Scheme for containing population decline of small minority community:** This scheme is a Central Sector Scheme with 100% central funding as grants- in-aid. The scheme will be implemented through the organisations/NGOs/societies of the small minority community concerned. The objective of the scheme is to arrest the declining trends in population of a small minority community.

7. **PM-Viraasat Ka Samvardhan (PM VIKAS):** Pradhan Mantri Virasat Ka Samvardhan (PM VIKAS), is a skilling initiative from MoMA focussing on the skilling, entrepreneurship and leadership training requirements of the minority and artisan communities across the country. The scheme is intended to be implemented in convergence with the Skill India Mission of Ministry of Skill Development & Entrepreneurship and through integration with the Skill India Portal (SIP). The scheme has the following components aiming to benefit approximately 9 lakh candidates the 15th Finance Commission Cycle

1. Skilling and Training Component

a. Traditional Training sub-component (earlier known as USTTAD and Hamari Dharohar)

b. Non-traditional Skilling sub-component (earlier known as Seekho aur Kamao)

2. Leadership and Entrepreneurship Component (earlier Nai Roshni)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"



3. Education Component (earlier Nai Manzil)

8. **National Commission for Minorities:** The provision is to meet the administrative expenditure of National Commission for Minorities.

9. **Special Officer for Linguistic Minorities:** The provision is to meet the administrative expenditure of the Special Officer for Linguistic Minorities.

10. **Maulana Azad Education Foundation (MAEF):** Maulana Azad Education Foundation (MAEF) is a voluntary, non-political, non-profit making, social service organization established to promote education among the educationally backward minorities. Interest on the investment of Corpus Fund given by the Government of India, is the only source of income for the Foundation. The schemes of the Foundation are for expansion and upgradation of existing institutions and for improvement in the educational status of backward minorities.

12. **Pradhan Mantri Jan Vikas Karyakaram:** PMJYK (Pradhan Mantri Jan Vikas Karyakaram) is a special area development programme. The objective of the PMJYK is to address the development, deficits in the selected Minority Concentration Areas (MCAs i.e identified districts headquarters blocks/towns/clusters of villages having substantial minority population which are relatively backward). The MsDP has been resturctured and revamped for implementation as Pradhan Mantri Jan Vikas Karyakaram.

13. **Education Scheme for Madrasas and Minorities:** To grant financial assistance to introduce modern subjects in Madarsas, teacher's Training and augmenting school infrastructure in minorities institutions.

1) Total Gruha Jyothi registrations - 1,72,79,199 Nos

2) Total Gruha Jyothi beneficiaries - 1,63,20,725 Nos

3) Total subsidy amount released by GoK - Rs.25,976 Crs

4) Total Zero bills issued - 1,09,51,893 Nos (for January 2025 month)

5) Total Net bills issued - 53,68,832 Nos (for January 2025 month)

| | Gruha Jyothi bill details Upto Jan-25 | | | | | | | | | | |
|---|---|---|---|---|---|---|---|---|---|---|---|
| Month | ESCOM's | District | Total No's Registered in Sevasindhu | Advance subsidy amount released by Gok 2023-24 | Total Zero Bills issued | | Total Net Bills issued | | Total bills issued and | | Percentage of Total bills issued against registration |
| | | | | | No's | Subsidy Amount (Rs.in Crs.) | No's | Subsidy Amount (Rs.in Crs.) | No's | Subsidy Amount (Rs.in Crs.) | |
| Cumulative | BESCOM | BANGALORE RURAL | 402176 | 5,889.14 | 257379 | 215.37 | 139918 | 221.01 | 397297 | 436.38 | 92.98 |
| | | BANGALORE URBAN | 4282142 | | 1795445 | 1799.63 | 2012040 | 2230.79 | 3807485 | 4030.43 | |
| | | CHIKKABALLAPURA | 321579 | | 254688 | 146.07 | 62527 | 64.41 | 317215 | 210.48 | |
| | | CHITRADURGA | 381148 | | 301434 | 171.08 | 76416 | 84.50 | 377850 | 255.58 | |
| | | DAVANAGERE | 517815 | | 362774 | 204.07 | 146785 | 164.38 | 509559 | 368.44 | |
| | | KOLAR | 367527 | | 272512 | 146.34 | 89304 | 101.00 | 361816 | 247.34 | |
| | | RAMANAGARA | 327191 | | 237710 | 118.51 | 85765 | 94.49 | 323475 | 213.00 | |
| | | TUMKUR | 728866 | | 555043 | 264.96 | 164383 | 167.13 | 719426 | 432.09 | |
| | | **Total** | **7328444** | **5889.14** | **4036985** | **3066.04** | **2777138** | **3127.71** | **6814123** | **6193.74** | |
| | MESCOM | DK | 558635 | 1,423.03 | 316506 | 328.09 | 202813 | 289.15 | 519319 | 617.23 | 91.96 |
| | | UDUPI | 345160 | | 201647 | 192.70 | 138007 | 170.91 | 339654 | 363.61 | |
| | | SHIMOGGA | 506706 | | 309349 | 184.28 | 148552 | 154.02 | 457901 | 338.30 | |
| | | CHIKMAGALUR | 350341 | | 215019 | 111.31 | 87434 | 82.22 | 302453 | 193.53 | |
| | | **Total** | **1760842** | **1423.03** | **1042521** | **816.37** | **576806** | **696.30** | **1619327** | **1512.67** | |
| | HESCOM | BAGALAKOTE | 423259 | 2,177.73 | 322499 | 152.96 | 93026 | 117.43 | 415525 | 270.38 | 97.63 |
| | | BELAGAVI | 1011555 | | 718903 | 390.62 | 269956 | 306.48 | 988859 | 697.10 | |
| | | DHARWAD | 510403 | | 326410 | 202.71 | 164368 | 204.38 | 490778 | 407.09 | |
| | | GADAG | 272689 | | 208606 | 101.78 | 59742 | 65.35 | 268348 | 167.13 | |
| | | HAVERI | 393065 | | 300579 | 146.24 | 88323 | 91.43 | 388902 | 237.68 | |
| | | UTTARA KANNADA | 391152 | | 265988 | 179.43 | 115877 | 136.99 | 381865 | 316.42 | |
| | | VIJAPURA | 446586 | | 321875 | 168.08 | 110794 | 140.45 | 432669 | 308.53 | |
| | | **Total** | **3448709** | **2177.73** | **2464860** | **1341.83** | **902086** | **1062.50** | **3366946** | **2404.33** | |
| | GESCOM | BALLARI | 283860 | 1,642.95 | 198966 | 133.80 | 78817 | 96.83 | 277783 | 230.63 | 95.70 |
| | | BIDAR | 358149 | | 261905 | 170.66 | 81726 | 99.49 | 343631 | 270.15 | |
| | | KALABURAGI | 560837 | | 396889 | 262.92 | 132020 | 157.18 | 528909 | 420.09 | |
| | | KOPPAL | 278253 | | 210479 | 133.32 | 61757 | 66.92 | 272236 | 200.25 | |
| | | RAICHUR | 311558 | | 230512 | 159.88 | 67131 | 82.11 | 297643 | 242.00 | |
| | | VIJAYA NAGAR | 238848 | | 169046 | 123.54 | 52706 | 65.80 | 221752 | 189.34 | |
| | | YADGIR | 196928 | | 152981 | 99.87 | 37778 | 38.21 | 190759 | 138.08 | |
| | | **Total** | **2228433** | **1642.95** | **1620778** | **1083.99** | **511935** | **606.54** | **2132713** | **1690.53** | |
| | CESC | MYSORE | 948974 | 1,424.71 | 647398 | 372.15 | 246207 | 294.99 | 893605 | 667.14 | 94.84 |
| | | CHAMARAJANAGARA | 272887 | | 216920 | 96.20 | 45435 | 45.40 | 262355 | 141.60 | |
| | | KODAGU | 156157 | | 103453 | 69.35 | 49139 | 44.88 | 152592 | 114.23 | |
| | | MANDYA | 503722 | | 359253 | 175.54 | 116584 | 124.57 | 475837 | 300.11 | |
| | | HASSAN | 542340 | | 391819 | 186.40 | 122742 | 113.01 | 514561 | 299.41 | |
| | | **Total** | **2424080** | **1424.71** | **1718843** | **899.63** | **580107** | **622.85** | **2298950** | **1522.48** | |
| | HUKKERI | BELAGAVI | 88691 | 46.22 | 67906 | 32.42 | 20760 | 17.35 | 88666 | 49.77 | 99.97 |
| | | **Total** | **88691** | **46.22** | **67906** | **32.42** | **20760** | **17.35** | **88666** | **49.77** | |
| | **Total** | | **17279199** | **12603.78** | **10951893** | **7240.29** | **5368832** | **6133.24** | **16320725** | **13373.53** | **94.45** |

Bengaluru, February 14, 2025 - The Karnataka government has announced the closure of nine out of ten newly established universities. This decision was made following a review by a Cabinet sub-committee chaired by Deputy Chief Minister D.K. Shivakumar. The sub-committee found that only one of the universities, Bidar University, was fully functional and financially viable.

The universities set to be closed include those in Hassan, Chamarajanagar, Haveri, Kodagu, Koppal, Bagalkot, Maharani Cluster in Bengaluru, Mandya, and Nrupatunga. The government cited the lack of availability of land and funds to develop infrastructure as key reasons for the closures.

**ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಗ್ಯಾರಂಟಿ ಯೋಜನೆಯನ್ನು ಪಡೆದ ಫಲಾನುಭವಿಗಳ ಸಂಖ್ಯೆ ಮತ್ತು ಒಟ್ಟು ಮೊತ್ತ**

| ಕ್ರ.ಸಂ. | ಯೋಜನೆ ಹೆಸರು | ಫಲಾನುಭವಿಗಳ ಸಂಖ್ಯೆ | ಒಟ್ಟು ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|
| 1 | ಶಕ್ತಿ ಯೋಜನೆ | 7,59,78,170 | 247.00 |
| 2 | ಗೃಹಲಕ್ಷ್ಮಿ ಯೋಜನೆ | 3,74,657 | 1020.00 |
| 3 | ಗೃಹ ಜ್ಯೋತಿ ಯೋಜನೆ | 5,61,428 | 639.94 |
| 4 | ಯುವನಿಧಿ ಯೋಜನೆ | 5,460 | 6.03 |
| 5 | ಅನ್ನಭಾಗ್ಯ | 2,76,683 | 17.02 |

**Karnataka not bankrupt, economy stable: Siddaramaiah rejects BJP claims**

The Karnataka Chief Minister has rejected opposition claims that the state is facing financial distress, blaming the previous BJP government for mismanagement. He cited pending liabilities of over Rs 2.7 lakh crore and accused the Centre of withholding funds.



*Karnataka Chief Minister Siddaramaiah.*

In Short

- Chief Minister Siddaramaiah denies opposition claims of financial distress
- BJP accused of past economic mismanagement in Karnataka
- Karnataka's economy stable with higher budget and tax revenue growth

Karnataka Chief Minister Siddaramaiah has rejected allegations by opposition leaders that the state is facing financial distress. BJP leaders, including State President BY Vijayendra and former Chief Minister Basavaraj Bommai, have claimed the state is on the verge of bankruptcy and that the financial system has collapsed. They have also criticised the government's welfare schemes.

"During the BJP's rule, the state's economy was pushed to the brink of collapse. Now, while sitting in the opposition, they are speaking as if they are great economists," the Chief Minister said.

# Global Investors Meet - Invest Karnataka 2025

## Investment Summary

Total investments committed to Karnataka as part of GIM is **INR 10.27 lakh Cr.** with employment generation of over **6 lakhs**. The following table captures the summary of investments.

| Category | Amount (in INR Cr) |
|---|---|
| Investment commitments recognised/announced | 4,03,533 |
| MoUs signed | 6,23,845 |
| **Total** | **10,27,378** |

~**75%** of these investments are outside Bengaluru district.

**More than 45% of these investments** are in North Karnataka. In Bijapur specifically, **INR 42k Cr.** Investment (~80% confirmed, others evaluating investment in Bijapur within Karnataka)

**Sector-wise investments**

Below table summarizes the investments across different sectors. The major share is contributed by Renewable Energy (41% of total investments), followed by Manufacturing - Core (15%), Sunrise sectors (14%), Infrastructure & Industrial/ Logistics Parks (11%), General manufacturing (10%) and Startup capital (9%).

| | Investment commitments recognised/ announced | MoUs signed | Total |
|---|---|---|---|
| Manufacturing - Sunrise Sectors *(A&D, Auto/EV, ESDM, R&D/GCC)* | 75,274 | 63,719 | 1,38,993 |
| Manufacturing - General *(Food and Agri, Textiles, pharma, machine tools, FMCG, etc)* | 52,400 | 52,619 | 1,05,019 |
| Manufacturing - Core *(Steel, Cement,etc)* | 16,143 | 1,43,700 | 1,59,843 |
| Renewable Energy | 81,356 | 3,44,425 | 4,25,781 |
| Infrastructure & Industrial/ Logistics *(City Gas Distribution, Telecom, Airports, Skilling infra, Data Centres, etc)* | 88,492 | 19,382 | 1,07,874 |
| Startup capital | 89,868 | | 89,868 |
| **Total** | **4,03,533** | **6,23,845** | **10,27,378** |

Of the projects from the industries department, ~**70%** of the projects are greenfield projects.

**List of key investment announcements during Global Investors Meet include**

1. **JSW Group -** INR 1,20,000 Cr. across renewable energy, cement, steel and affiliate businesses
2. **Baldota Steel & Power Limited** - INR 54,000 Cr. investment for an integrated steel plant.
3. **Lam Research -** INR 10,000 Cr. investment for semiconductor equipment manufacturing and R&D
4. **Volvo -** INR 1,400 Cr. for manufacturing of EV trucks
5. **Samvardhana Motherson** - INR 3,700 Cr. for manufacturing, engineering and assembly facilities
6. **Safran** - INR 225 Cr. for manufacturing of avionics
7. **Honda** - INR 600 Cr. For manufacturing of EV 2 Wheelers
8. **Emmvee Energy Private Limited** - INR 15,000 Cr. investment for manufacturing solar photovoltaic cells and modules.
9. **RSOLEC -** INR 5000 Cr. towards manufacturing of solar ingot wafers
10. **International Battery Company -** INR 390 Cr. for Li-Ion Cell manufacturing
11. **Krones -** INR 315 Cr. for bottling machine manufacturing
12. **NIDEC -** INR 600 Cr. for manufacturing of motors
13. **TASL -** INR 1,530 Cr. for Helicopter Final Assembly Line (FAL) for Airbus' H125, Gun manufacturing & other projects
14. **Wings Viterra -** INR 350 Cr. for multi pulse processing plant
15. **Balaji wafers** - INR 550 Cr for manufacturing and distribution of salty snacks and wafers
16. **Mahindra Susten Pvt Ltd.** - INR 36,000 Cr. across renewable energy projects and tourism
17. **Hero Future Energies** - INR 22,200 Cr. investment for projects in renewable energy, green hydrogen and its derivatives
18. **Epsilon Group** - INR 15,350 Cr. investment for manufacturing anode and cathode materials.
19. **Shree Cement Limited** - INR 8,350 Cr. Investment for integrated plant and clinker grinding unit
20. **Schneider Electric** - INR 2,247 Cr. for manufacturing of electrical products and related Research and Development (R&D) activities
21. **Hitachi Energy** - INR 1,000 Cr. across manufacturing and R&D
22. **Havells** - INR 710 Cr. For expansion of existing manufacturing at Tumkur and also new R&D facility in Banglaore
23. **Suzlon Energy Ltd.** - INR 21,950 Cr. investment for wind power projects and wind turbine generator manufacturing
24. **ESR Advisers** - INR 2,500 Cr for setting up industrial parks and data centres
25. **TVS Motor Company** - INR 2,000 Cr. to establish a state-of-art R&D facility

In addition, there were **11 KWIN MoUs signed** with both domestic and international universities including MoU signed with St.John's University from New York, United States of America.

In the lead up to GIM, MoU also signed with University of Liverpool for enhanced collaboration between Liverpool and Govt. of Karnataka

## Highlights

### Key Speakers

The event featured 75+ marquee speakers across 25+ sessions. The following key Industry leaders & speakers for inaugural included:

1. Mr. Anand Mahindra, Chairperson, Mahindra & Mahindra Ltd.
2. Mr. Sajjan Jindal, Managing Director, JSW Group
3. Ms. Geetanjali Kirloskar, Chairperson & MD, Kirloskar Systems
4. Kiran Mazumdar Shaw, Chairperson & Founder, Biocon
5. Prashant Prakash, Founding Partner, Accel
6. Sudarshan Venu, MD, TVS Motors

Global Investors Meet - Invest Karnataka 2025 featured an exceptional and diverse lineup of global speakers, unmatched in any previous investors' summit in the country. Notable international speakers included:

1. Martin Lundstedt, CEO & President, Volvo Group
2. George Papandreou, Former Prime Minister of Greece
3. Sebastian Thrun, Founder, Google X & Udacity
4. James Ong, Founder and Managing Director, Artificial Intelligence International Institute (AIII)
5. Jean-Noel Mahieu, EVP Operations, Safran
6. Michel Narchi, VP, Head of International Operations, Airbus
7. Dominik Heinrich, Global head of AI design, The Coca-Cola Company

### Key Sessions

- **"Fireside chat on AI, cybersecurity, and government"** brought insights from Ann Dunkin (Former CIO, U.S. Department of Energy) and Simon Long (Editor-at-large, The Economist) on strengthening digital resilience in an increasingly uncertain world.
- Discussion on **"India's economic trajectory amid global challenges"** featuring Montek Singh Ahluwalia and Salman Soz, who explored strategies for sustaining growth in a shifting global landscape.
- **"The Next Mile: Innovations Shaping the Future of Logistics"** brought together Martin Lundstedt (Volvo Group), Sandeep Deshmukh (ElasticRun), Chanakya Hridaya (Blackbuck), and Sumit Sharda (Amazon India) to explore advancements in supply chain efficiency.
- Industry leaders from Airbus, Safran, Rolls-Royce, and Collins Aerospace, offered insights into **India's growing role in aerospace and defense supply chains.**
- The session, **"From Diverse Paths to a Common Goal,"** featured an engaging conversation between filmmaker Kiran Rao, Microsoft India MD Irina Ghose, and Sukhi Singh (Sukhi's Gourmet Foods), moderated by Lakshmi Pratury (INKtalks), emphasizing the intersection of creativity, leadership, and entrepreneurship.
- The fireside chat on **"Thriving in Turbulence: How Nations Can Build Lasting Resilience"** featured George Papandreou, former Prime Minister of Greece, and Shashi Tharoor, Indian MP and Chairman of the Parliamentary Standing Committee on External Affairs.

**Country Partners & Pavilions**

- 19 country partners and 9 country pavilions for Global Investors Meet

The detailed list is as follows:

| Country Partner | Country Pavilion (Y/N) |
|---|---|
| Australia | |
| United Kingdom | |
| South Korea | Yes |
| France | |
| Italy | Yes |
| Norway | |
| Israel | |
| Netherlands | Yes |
| Japan | Yes |
| Thailand | Yes |
| Taiwan | Yes |
| Poland | |
| Slovenia | |
| Denmark | Yes |
| Malaysia | Yes |
| Switzerland | |
| Bahrain | |
| Singapore | |
| Germany | Yes |

**Future of Innovation Expo**

- Inaugurated by Hon'ble Deputy Chief Minister on 12th February
- **40+ companies** featured showcasing cutting-edge products in drone technology, space tech, agri-tech, health tech, and autonomous solutions for industries like manufacturing, aerospace, and defense. Global leaders such as **GE Healthcare, LAM Research, Toyota, and Honeywell** presented innovative solutions.
- The Karnataka Pavilion featured homegrown startups and innovation-driven enterprises contributing to the state's technology ecosystem. Some of these include startups like **Flying Wedge, Bellatrix, Skyserve, and Flux Auto**, demonstrating Karnataka's strength in technology and innovation.
- Additionally, several startups presented cutting-edge electric mobility solutions, including **Sarla Aviation with its e-VTOL technology** and Ather showcasing advancements in the electric two-wheeler sector, among others.
- Future of Innovation focused on next-generation technologies shaping industrial growth, sustainability, and transformation. It fostered collaborations, investments, and knowledge-sharing between leading enterprises, research institutions, and policymakers.

SME Connect

- Inaugurated by Hon'ble Deputy Chief Minister on 12th February
- The SME Connect initiative has emerged as a transformative platform, **empowering over 1,800 SMEs** through **15+ sessions** in **10 districts.**
- With a focus on Industry 4.0 and E-Commerce, the program **educated ~2,000 SMEs,** fostering digital and technological adoption critical for future-ready enterprises. The active **participation of 15 Industry associations** underscored the collaborative spirit of the initiative, highlighting its broad appeal and impact at the grassroots level.
- **60+ stalls for MSMEs** to showcase their innovative products and technologies as part of SME Connect

- The SME Portal serves as an ongoing platform designed to facilitate vendor development and build a robust supply chain ecosystem for SMEs. One of the standout features of the portal is its **AI-based matchmaking system**, which intelligently connects buyers and sellers based on their requirements, capabilities, and business profiles.
  Key benefits of the portal include:
  - **Vendor Development**: The platform helps SMEs integrate into larger supply chains, establishing themselves as key players in vendor networks.
  - **Ecosystem Building:** By connecting SMEs with buyers, industry leaders, and resources, the portal strengthens Karnataka's industrial ecosystem and fosters sustainable growth.
  - **Market Visibility:** It provides SMEs with opportunities to showcase their capabilities and offerings to a broader audience.

- Additionally, MSMEs that demonstrated excellence in adopting Industry 4.0 techniques through the SME Connect initiative were felicitated at the SME Connect Awards. This recognition highlighted Karnataka's commitment to technological advancement, digital transformation, and inclusive industrial growth.

Single Window System Launch

- **Digital-first platform** launched to streamline investment approvals and improve ease of doing business. Key features include:
  - **150+ business services integrated** from 30+ state departments and agencies
  - **Online Affidavit-Based Clearance (ABC) mechanism**, allowing manufacturing investors to start preparatory activities based on an affidavit submission, reducing delays in project execution.
  - **Integrated Land Management System** for seamless access to Karnataka Industrial Areas Development Board (KIADB) services such as land availability, allotment, and building plan approvals.

- A **GIS-Based Industrial Information System** helps investors assess zoning and siting regulations before acquiring land.
- Features like a **Know-Your-Approval Wizard, an Incentive Wizard and Calculator, and Udyog Mitra Assistant (UMA)**—an AI-powered chatbot for real-time multilingual assistance to enhance investor support.

**Industrial Policy Launch**

- The Government of Karnataka unveiled the New Industrial Policy 2025-30. Launched by Hon'ble Deputy Chief Minister, Shri D K Shivakumar, the policy aims to **generate 20 lakh jobs** and attract **INR 7.5 lakh crore in investments**. With a strong emphasis on sustainable manufacturing, advanced industries, and balanced regional development, the policy seeks to position Karnataka as a leader in Electronics System Design & Manufacturing (ESDM), Aerospace & Defense, Future Mobility, and Green Industry Practices. The policy also introduces **best-in-class incentives for logistics and warehousing** for the first time.

- Key highlights of the policy include
  - **Flexible subsidy options,** allowing industries to choose between Production-Linked Incentives (PLI) and Capital Subsidies
  - **Additional incentives for co-locating R&D and manufacturing units**
  - **Additional booster incentives** promoting higher female workforce participation
  - Enhanced incentives of 10% capital subsidy over 3 years for the development of industrial parks, creating world-class infrastructure for businesses.
  - **Sustainability-focused measures** such as capital subsidies for green initiatives, Zero Liquid Discharge (ZLD), and electrification of thermal processes
  - **Higher incentives for Zone 1 & Zone 2** with more backward & most backward talukas as per Nanjundappa report receiving 3% and 5% additional incentives
  - Policy also **expands Zone 1 coverage to 199 talukas**, ensuring equitable industrial benefits across the state.
  - Additionally, an additional 5% of total value of fixed assets for most backward taluks and additional 3% of total value of fixed assets for more backward taluks is provided as per Talukas categorized by Dr. D.M. Nanjundappa Committee Report.
  - Capital subsidy of upto 30% is provided based on zones for MSMEs.

## Clean Mobility Policy Launch

Clean Mobility Policy was launched by Shri K J George, Hon'ble Energy Minister

Key Highlights of the Karnataka Clean Mobility Policy 2025-2030:

- **Massive Investment & Job Creation -** The policy aims to attract ₹50,000 crore in investments across the clean mobility value chain, generating 1 lakh new jobs.

- **Attractive incentive package** - Subsidy of upto 25% of the total invested capex across the state including Bengaluru Urban and Bengaluru Rural region (20% capex subsidy)

- **Strengthening Karnataka's EV Leadership -** Karnataka already has 2.5 lakh registered EVs and 5,403 EV charging stations, making it the third-highest EV adopter in India. The state plans to install 2,600 more charging stations in public-private partnerships.

- **Clean Mobility Clusters** - The state will develop three world-class mobility clusters in Gauribidanur, Dharwad, and Harohalli, integrating OEMs, suppliers, R&D, and testing facilities to boost innovation and manufacturing.

- **Charging & Hydrogen Infrastructure -** The policy introduces capital subsidies for fast-charging stations, battery-swapping networks, and hydrogen stations, ensuring a robust clean energy network across Karnataka.

- **Boosting Innovation & Skill Development** - The state is partnering with global institutions and expanding EV-focused training programs in ITI, polytechnics, and universities to create a specialized workforce for the clean mobility sector.

- The policy also has a **broader focus covering both Electric Vehicles and Hydrogen-based vehicles**, given that the hydrogen economy is projected to expand significantly, with its market value expected to reach between $100 billion and $200 billion by 2040.

## Success Stories Booklet

- Highlighted Karnataka's pioneering advancements in ESDM, Aerospace & Defence, and emerging sectors, showcasing how global investors and homegrown enterprises have shaped its dynamic economy.
- More than just a collection of success stories, this booklet reflects Karnataka's bold vision, resilience, and commitment to sustainable and inclusive development, reinforcing its position as a global investment hub.
- Examples of companies featured in the success stories booklet include Gold Plus Glass, Aequs, Airbus, Centum, etc.

## IK Awards

- A grand **1st edition of Invest Karnataka Awards** ceremony celebrated industry pioneers who have played a crucial role in Karnataka's economic development. The prestigious awards, presented by Shri Piyush Goyal, honored companies excelling in investment, employment generation, R&D, sustainability, and innovation.

| Award | Description | Recipient |
|---|---|---|
| **Industrial Legacy Award** | Honors an individual creating a legacy and is a champion of industrial excellence & innovation in Karnataka | Late Shri Vikram Kirloskar (Posthumous Awardee) |
| **Innovation Excellence Award** | Highest number of India patents filed from Karnataka | Samsung R&D Institute India-Bangalore |
| **Diversity Leadership Excellence Award** | Highest number of females in workforce | Shahi Exports Private Limited |
| **Ecosystem Enabler Award** | Largest number of manufacturing clusters in Tier-2/3 regions | Aequs |
| **Pioneer in Karnataka's R&D Ecosystem Award** | 1st global R&D center set up in Karnataka | Texas Instruments India |
| **Investor of the Decade Award** | Largest investment generator in the last 10 years | JSW Group |
| **Champions of Employment Generation Award** | Largest employment generators in manufacturing | Tata Electronics Systems Solutions Private Limited |
| **Champions of Employment Generation Award** | Largest employment generators in IT | Infosys |
| **Sunrise Sector Pioneer Award** | Largest investments in the sunrise sectors in the past decade (Auto & EV) | Toyota Kirloskar Motor Private Limited |
| **Sunrise Sector Pioneer Award** | Largest investments in the sunrise sectors in the past decade (Biotechnology & Life Sciences) | Biocon Group |
| **Sunrise Sector Pioneer Award** | Largest investments in the sunrise sectors in the past decade (Aerospace & Defense) | RTX |
| **Sunrise Sector Pioneer Award** | Largest investments in the sunrise sectors in the past decade (Aerospace & Defense - Public Sector) | Hindustan Aeronautics Limited |
| **International Procurement Champion Award** | Largest procurement from Karnataka by an International Company | Boeing India |
| **Renewable Energy Excellence Award** | Highest installed capacity for Renewable Energy | ReNew Private Limited |

## SME Awards

The MSME Champion Awards aim to celebrate and honor outstanding achievements by Micro, Small, and Medium Enterprises (MSMEs) across various domains. These awards are a testament to the vital role MSMEs play in driving economic growth, fostering innovation, and generating employment opportunities.

**Celebrating Excellence Across Four Distinct Award Categories across 28 districts:**

1. **Best Performer in the District:** Recognizing MSMEs that have demonstrated exceptional performance and significant contributions within their respective districts.

2. **Sector Excellence Award:** Honoring MSMEs excelling in specific industrial sectors through innovation, growth, and impact.

3. **Outstanding Women Entrepreneur Award:** Acknowledging the achievements of women entrepreneurs leading successful MSMEs and inspiring change.

4. **Empowerment Achievement Award**: Recognizing MSMEs led by or significantly involving individuals with disabilities, celebrating their resilience, entrepreneurial spirit, and remarkable contributions to the business ecosystem.

| Sl. No. | District | Award category | Sector | Name |
|---|---|---|---|---|
| 1 | Bagalkote | Outstanding Woman Entrepreneur Award | | Netravati Polypack Private Limited |
| 2 | Bagalkote | Best Performer in the District | | Krishna Sagar Irrigations |
| 3 | Belagavi | Sector Excellence Award | Auto-Auto-Components-and-EV | Gokul Metatech Pvt. Ltd. |
| 4 | Belagavi | Sector Excellence Award | Clean-Energy | Leo Engineers |
| 5 | Belagavi | Best Performer in the District | | Vibratec Acoustic Products India Private Limited |
| 6 | Bellary | Best Performer in the District | | M/S Halleys Blue Steels Private Limited |
| 7 | Bengaluru-rural | Sector Excellence Award | others | Colorflex Global Pvt Ltd |
| 8 | Bengaluru-rural | Best Performer in the District | | Tiea Connectors Pvt Ltd |
| 9 | Bengaluru-urban | Sector Excellence Award | Healthcare-Biotech-and-Pharmaceuticals | Barcode Biosciences Pvt Ltd |
| 10 | Bidar | Best Performer in the District | | Karnataka Paper Industry |

| Sl. No. | District | Award category | Sector | Name |
|---|---|---|---|---|
| 11 | Chamrajnagar | Best Performer in the District | | Chenguang Natural Extracts (India) Pvt Ltd |
| 12 | Chikkaballapur | Best Performer in the District | | Srivasavi Adhesive Tapes Limited |
| 13 | Chitradurga | Best Performer in the District | | R R Agrotech |
| 14 | Dakshina-kannada | Best Performer in the District | | Oshima Systems Private Limited |
| 15 | Davangere | Best Performer in the District | | Sri Mallikarjuna Industries |
| 16 | Dharwad | Best Performer in the District | | Shri Sai Agro Equipments Private Limited |
| 17 | Gadag | Best Performer in the District | | Harsha Home Products |
| 18 | Hassan | Best Performer in the District | | Tek-Pik Industries Pvt Ltd |
| 19 | Haveri | Best Performer in the District | | Freshgreen Agro Exports Private Limited |
| 20 | Kalaburgi | Best Performer in the District | | Sankalp Irrigation Systems |
| 21 | Kodagu | Sector Excellence Award | FMCG-Retail-and-Agro-processing | Western Coffee Curers & Exports Private Limited |
| 22 | Kolar | Sector Excellence Award | Aerospace-and-Defense | Southfield Coatings Private Limited |
| 23 | Kolar | Best Performer in the District | | Micropore |
| 24 | Koppal | Best Performer in the District | | M/S: Nofh Private Limited, |
| 25 | Mandya | Best Performer in the District | | Rangsons Aerospace Private Limited |
| 26 | Mysuru | Sector Excellence Award | ESDM | Strategi Automation Solutions Pvt Ltd |
| 27 | Mysuru | Best Performer in the District | | Southern Artisans Craft Centre Private Limited |
| 28 | Raichur | Sector Excellence Award | Textiles-Handicrafts-and-Handlooms | Sri Nandishwar Gin Press Industries |
| 29 | Raichur | Best Performer in the District | | Kushi Agro Foods |
| 30 | Ramnagara | Sector Excellence Award | Machine-Tools-and-Capital-Goods | Trishul Winding Solutions Pvt |

| Sl. No. | District | Award category | Sector | Name |
|---|---|---|---|---|
| 31 | Ramnagara | Sector Excellence Award | Core-Manufacturing | Hipl India Pvt Ltd |
| 32 | Ramnagara | Best Performer in the District | | Kasturi Coconut Processing |
| 33 | Tumakuru | Empowerment Acheivement Award | | Earthens |
| 34 | Tumakuru | Best Performer in the District | | System Rack Technologies |
| 35 | Udupi | Best Performer in the District | | Adithya Exports |
| 36 | Uttara-kannada | Best Performer in the District | | S M Enterprises |
| 37 | Vijayapura | Best Performer in the District | | Gajalaxmi Metal Products |
| 38 | Yadgir | Best Performer in the District | | Asianagro And Food Processing Indutries |

VentuRISE

- VentuRISE is India's premium startup challenge for young businesses shaping the future of manufacturing. It has demonstrated unparalleled success in driving entrepreneurial innovation.
- One unique aspect of this edition of the challenge is that all the problem statements have been provided by the respective industry players themselves, ensuring that the solutions proposed by startups directly address real-world challenges.
- The challenge seeks to address critical industry pain points by providing a platform for budding startups to showcase their solutions and connect with potential investors and mentors.
- With over **900 applications and 170 startups invited to participate** in the TGS 2024 VentuRISE track, it has become a beacon of opportunity for emerging businesses.
- The showcase of **30+ startups at the TiE Global Summit Expo** provided them with unparalleled visibility, **while 15 expert mentors** offered actionable guidance, fostering growth and scalability.

After a rigorous competition between 45 startups, the following 3 startups emerged as winners:

| Sector | Winner | First Runner up | Second Runner Up |
|---|---|---|---|
| A&D | Nautical Wings Aerospace | SiriNor Technologies India Pvt Ltd | Nabhdrishti Aerospace Pvt Ltd |
| ESDM | Zepco Technologies Pvt Ltd | Medblue Innovations Pvt Ltd | Vyuhaa Med Data Pvt Ltd |

| | | | |
|---|---|---|---|
| **EV / Clean Mobility** | InfinityX Innovations Pvt Ltd | Li-Circle | E2SVD Pvt Ltd |

<u>Cultural Program & Dinner</u>

- The evening also featured a **vibrant cultural showcase** celebrating Karnataka's rich heritage, including performances by **Dr. Prakash Sontakke Ensemble, Aayana Dance Company**, and a breathtaking **3D visual projection on Bangalore Palace**.
- The day concluded with an **exclusive networking dinner**, where industry leaders, policymakers, and investors engaged in high-level discussions on Karnataka's growth trajectory.

Budget Amounced (State) - 3001.1
Budget allocation 2888.42.


**2011ರ ರಾಜ್ಯದ ಜನಸಂಖ್ಯೆಯ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆ ವಿವರ**

| Caste | Minority Population (In Lakhs) | Percentage (Total Population) | Minority Population (Percentage) |
|---|---|---|---|
| Muslims | 78.94 | 12.91 | 82.25% |
| Christians | 11.43 | 1.87 | 11.92% |
| Jains | 4.40 | 0.72 | 4.60% |
| Sikhs | 0.28 | 0.05 | 0.24% |
| Buddhists | 0.95 | 0.72 | 0.98% |
| Parsis | 0.011 | 0.01 | 0.01% |
| **Total** | **96.01** | **16.28** | **100%** |

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ 2020-21 ರಿಂದ ಒದಗಿಸಿರುವ ಆಯವ್ಯಯದ ವಿವರ

| ಕ್ರ.ಸಂ | ವರ್ಷ | ಒದಗಿಸಿರುವ ಆಯವ್ಯಯ (ರೂ. ಕೋಟಿಗಳಲ್ಲಿ) |
|---|---|---|
| 1 | 2020-21 | 902.39 |
| 2 | 2021-22 | 1342.64 |
| 3 | 2022-23 | 1443.14 |
| 4 | 2023-24 | 2037.23 |
| 5 | 2024-25 | 2888.42 |

(Rs .In Crores)




**ವೈಸ್ ಛೇರ್ಮನ್:-** ಈಗ ಸದನವು ಮುಕ್ತಾಯವಾಗಿ ಮಧ್ಯಾಹ್ನ 3.00 ಗಂಟೆಗೆ ಸೇರುವುದು.

(32) 04.03.2025/3.10/ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**(ಮಧ್ಯಾಹ್ನ 2 ಗಂಟೆ 3 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 17 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಸಭಾಪತಿಯವರು:-** ಶ್ರೀ ಯತೀಂದ್ರ ರವರೇ ತಾವು ಮಾತನಾಡಿ.

**ಡಾ.ಯತೀಂದ್ರ.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಜಂಟಿ ಅಧಿವೇಶನದಲ್ಲಿ ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನುದ್ದೇಶಿಸಿ ಭಾಷಣವನ್ನು ಮಾಡಿರುತ್ತಾರೆ. ಆ ರಾಜಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವನೆಯನ್ನು ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾ ರವರು ಮಾಡಿದ್ದಾರೆ. ಅದನ್ನು ಅನುಮೋದಿಸುವುದಕ್ಕೆ ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಕೃತಜ್ಞತೆಗಳನ್ನು ತಿಳಿಸಲು ಇಷ್ಟಪಡುತ್ತೇನೆ. ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಅನುಮೋದಿಸುವಾಗ ನಾನು ಈ ಸದನದಲ್ಲಿ ಇರಬೇಕಾಗಿತ್ತು. ಆದರೆ ಅದೇ ಸಮಯಕ್ಕೆ ಯಾರೋ ಒಬ್ಬರು ನನ್ನನ್ನು ಭೇಟಿ ಮಾಡಲು ಬಂದಿದ್ದರಿಂದ ನಾನು ಇಲ್ಲಿ ಇರುವುದಕ್ಕೆ ಆಗಿಲ್ಲ. ಅದಕ್ಕೆ ನಾನು ತಮ್ಮಲ್ಲಿ ಕ್ಷಮೆ ಕೇಳುತ್ತಿದ್ದೇನೆ. ಮತ್ತೆ ಇವತ್ತು ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಾಡಿದ್ದಾರೆ, ಅದಕ್ಕೆ ನಾನು ಅನುಮೋದನೆ ಮಾಡುತ್ತಿದ್ದೇನೆ.

ಪ್ರತಿಯೊಂದು ಬಜೆಟ್ ಅಧಿವೇಶನಕ್ಕೆ ಮುಂಚೆ ಗೌರವಾನ್ವಿತ ರಾಜ್ಯಪಾಲರು ಯಾವಾಗಲೂ ಕೂಡ ಜಂಟಿ ಅಧಿವೇಶನವನ್ನು ಕರೆಯುತ್ತಾರೆ. ಆ ಜಂಟಿ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಕೊಟ್ಟಂತಹ ಒಂದು document ಅನ್ನು ಅವರು ಓದುವಂತಹ ಒಂದು ಪರಿಪಾಠವಿದೆ, ಒಂದು ವಾಡಿಕೆ ಇದೆ. ಮತ್ತೆ ಆ document ಅನ್ನು ಸರ್ಕಾರವೇ ಕೊಡುತ್ತದೆ. ಯಾವುದೇ ಒಂದು ಸರ್ಕಾರ ಹಿಂದಿನ ವರ್ಷಗಳಲ್ಲಿ ತಾವು ಮಾಡಿದಂತಹ ಸಾಧನೆ ಮತ್ತು ಮುಂಬರುವ ದಿನಗಳಲ್ಲಿ ನಮ್ಮ ರಾಜ್ಯವನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು. ರಾಜ್ಯದ ಆರ್ಥಿಕ ಅಭಿವೃದ್ಧಿ ಹೇಗೆ ಮಾಡಬೇಕು, ರಾಜ್ಯದ ಸರ್ವತೋಮುಖ ಬೆಳವಣಿಗೆ ಹೇಗೆ ಮಾಡಬೇಕು ಎಂದು ಒಂದು ನೀಲಿನಕ್ಷೆಯನ್ನಿಟ್ಟುಕೊಂಡು, ಅದರ ಒಂದು ದೃಷ್ಟಿಕೋನವನ್ನು ಆ document ನಲ್ಲಿ ತಿಳಿಸಿರುತ್ತಾರೆ. ಅದನ್ನೇ ಗೌರವಾನ್ವಿತ ರಾಜ್ಯಪಾಲರು ಓದುತ್ತಾರೆ. ನಮ್ಮ ಸರ್ಕಾರ ಕೂಡ ಕಳೆದ ವರ್ಷ ನಾವೇನು ಸಾಧನೆಗಳನ್ನು ಮಾಡಿದ್ದೇವೆ ಮತ್ತು ಮುಂಬರುವ ದಿನಗಳಲ್ಲಿ ನಾವೇನು ಕಾರ್ಯಕ್ರಮಗಳನ್ನು ಕೊಡುತ್ತೇವೆ ಮತ್ತು ರಾಜ್ಯವನ್ನು ಹೇಗೆ ಅಭಿವೃದ್ಧಿ ಮಾಡಬೇಕು ಅಂದುಕೊಂಡಿದ್ದೇವೆ ಎನ್ನುವ ಒಂದು ಮಾಹಿತಿಯನ್ನು ಆ document ನಲ್ಲಿ ಗೌರವಾನ್ವಿತ ರಾಜ್ಯಪಾಲರ ಮೂಲಕ ನಾವು ಸದನಕ್ಕೆ ತಿಳಿಸಿಕೊಟ್ಟಿದ್ದೇವೆ. ಮತ್ತೆ ಯಾವುದೇ ಒಂದು ಸರ್ಕಾರ

ಒಂದು ಆರ್ಥಿಕ ನೀತಿಯನ್ನು ಅನುಸರಿಸಿದರೆ ಮತ್ತೆ ಏನಾದರೂ ಸಮಾಜಕ್ಕೆ ಕಲ್ಯಾಣ ಕಾರ್ಯಕ್ರಮಗಳನ್ನು ಕೊಟ್ಟರೆ ಅದಕ್ಕೆ ಸರ್ಕಾರದ ಅದರದೇ ಆದಂತಹ ಒಂದು ಸಿದ್ಧಾಂತ ಅಥವಾ economic philosophy ಅದರ ಹಿಂದೆ ಇರುತ್ತದೆ. ನಮ್ಮ ಸರ್ಕಾರದ ಒಂದು ಆರ್ಥಿಕ ಸಿದ್ಧಾಂತ ಅಥವಾ ನಮ್ಮ ಒಂದು ideology ಏನೆಂದರೆ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಯಾರು ಬಡವರು ಇದ್ದಾರೆ ಅವರು ಏಳಿಗೆ ಆಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಆರ್ಥಿಕ ಅಸಮಾನತೆ ಬಹಳಷ್ಟಿದೆ. ಇವತ್ತಿನ ದಿವಸ ಶ್ರೀಮಂತರು ಮತ್ತು ಬಡವರ ಮಧ್ಯೆ ಏನು ಅಂತರ ಇದೆ ಅದು ಜಾಸ್ತಿ ಆಗುತ್ತಿದೆ. (ಮುಂದು)

(33)4.3.2025/3.20/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಡಾ: ಯತೀಂದ್ರ. ಎಸ್ (ಮುಂದು):-**

ಈ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬೇಕು. ಸಮಾಜದಲ್ಲಿ ಯಾರು ಶೋಷಿತ ವರ್ಗದವರಿದ್ದಾರೆ ದಲಿತರಿರಬಹುದು, ಹಿಂದುಳಿದ ವರ್ಗದವರಿರಬಹುದು, ಅಲ್ಪಸಂಖ್ಯಾತರಿರಬಹುದು, ಮಹಿಳೆಯರಿರಬಹುದು, ರೈತರಿರಬಹುದು, ಕಾರ್ಮಿಕರು, ಅಂಕವಿಕಲರಿರಬಹುದು ಈ ಎಲ್ಲಾ ವರ್ಗದವರಿಗೂ ಕೂಡ ನಾವು ಸಾಮಾಜಿಕ ನ್ಯಾಯ ಕೊಡಬೇಕು. ಅವರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲ ತುಂಬಿಸಬೇಕೆನ್ನುವುದೇ ನಮ್ಮ ಸಿದ್ಧಾಂತ. ಆ ಒಂದು vision ಇಟ್ಟುಕೊಂಡು ಇವತ್ತು ಈ document ಅನ್ನು ಸಿದ್ಧಮಾಡಿದ್ದೇವೆ. ಇವತ್ತು ದೇಶದಲ್ಲಿ ಆರ್ಥಿಕ ಅಸಮಾನತೆ ಎಷ್ಟಾಗಿದೆ ಎಂದು ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಹೇಳಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಂದು ಬೆಳಗ್ಗೆ ತಾವು ಕೂಡ ಹೇಳಿದಿರಿ, ಇಷ್ಟಾದರೂ ಆಡಳಿತ ಪಕ್ಷದವರು ಇಷ್ಟು negligence ಇದ್ದರೆ ಹೇಗೆ? ಸದನದಲ್ಲಿ ಹಾಜರಿರಬೇಕಾದ ಒಂಭತ್ತು ಸಚಿವರಲ್ಲಿ ಎಂಟು ಜನ ಸಚಿವರು ಗೈರಾಗಿದ್ದಾರೆ. ಮಧ್ಯಾಹ್ನದ ನಂತರ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಹಿರಿಯ ಅಧಿಕಾರಿಗಳ ಪಟ್ಟಿಯನ್ನು ಸಹ ತೆಗೆಯಿರಿ. ಹೀಗಾದರೆ ಹೇಗೆ? ಇದು ರಾಜ್ಯಪಾಲರ ವಂದನಾ ನಿರ್ಣಯವಾಗಿದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮಾನ್ಯ ಸಭಾನಾಯಕರೇ, ಇದು ಮೇಲ್ಮನೆ. ನಾನು ಎಷ್ಟೋ ಸಲ ಹೇಳಿದ್ದೇನೆ, ಆಗ ಬರುತ್ತಾರೆ ಈಗ ಬರುತ್ತಾರೆ ಎಂದು ಹೇಳುವುದು ಸರಿಯಲ್ಲ. ನಾನು ಸಹ ಹೋಗಿ ಸರಿಯಾದ ಸಮಯಕ್ಕೆ ಸದನಕ್ಕೆ ಬಂದಿದ್ದೇನೆ. ಸದನ ನಡೆಯುವಾಗ ಎಲ್ಲರೂ ಬರಬೇಕು. ಸದನವೇನು ವರ್ಷಪೂರ್ತಿ ನಡೆಯುತ್ತದೆಯೇ? ಮಾನ್ಯ ಭೋಜೇಗೌಡರು ಹೇಳುತ್ತಿರುವುದು ಸರಿಯಾಗಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರಾದ ಕೆ.ಎನ್. ರಾಜಣ್ಣನವರು, ಮಾನ್ಯ ವೆಂಕಟೇಶ್‌ರವರು ಬಿಟ್ಟರೆ ಎಂಟು ಸಚಿವರು ಗೈರಾಗಿದ್ದಾರೆ.

**ಶ್ರೀ ಕೆ.ಎನ್. ರಾಜಣ್ಣ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರೇ, ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರ ಪಟ್ಟಿಯಲ್ಲಿ ನಿಮ್ಮ ಹೆಸರಿಲ್ಲ. ನೀವು ಉತ್ತರಿಸಬೇಕಾದ ಸಚಿವರ ಪಟ್ಟಿಯಲ್ಲಿರುವವರು. ಉತ್ತರಿಸಬೇಕಾದ ಸಚಿವರ ಪಟ್ಟಿಯೊಂದಿದೆ.

**ಶ್ರೀ ಕೆ.ಎನ್. ರಾಜಣ್ಣ:-** ಮಾನ್ಯ ಭೋಜೇಗೌಡರೇ, ಸರಿಯಾಗಿ ನೋಡಿ. ಮಾನ್ಯ ಸಭಾಪತಿಯವರು ಬೆಳಗ್ಗೆ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರ ಪಟ್ಟಿಯನ್ನು ಓದಿದರು.

**ಸಭಾಪತಿಯವರು:-** ಮಾನ್ಯ ರಾಜಣ್ಣನವರೇ, ನೀವು ಹೇಳಿದ್ದು ಸರಿಯಿದೆ. ಇರಬೇಕಾದ ಸಚಿವರುಗಳು ಇಲ್ಲ.

**ಶ್ರೀ ಕೆ.ಎನ್. ರಾಜಣ್ಣ:-** ಮಾನ್ಯ ಸಭಾಪತಿಯವರೇ, ಇವರು ನನ್ನ ಹೆಸರಿಲ್ಲ ಎಂದು ಹೇಳುತ್ತಿದ್ದಾರೆ, ನನ್ನ ಹೆಸರಿದೆ. ತಾವು ನನ್ನ ಹೆಸರನ್ನು ಓದಿದ್ದೀರಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರೇ, ಸ್ವಲ್ಪ ಅರ್ಥ ಮಾಡಿಕೊಳ್ಳಿ. ನಿಮ್ಮ ಹೆಸರನ್ನು ಓದಿದ್ದಾರೆ. ಸದನದಲ್ಲಿ ಕಡ್ಡಾಯವಾಗಿ . . .

**ಸಭಾಪತಿಯವರು:-** ಮಾನ್ಯ ರಾಜಣ್ಣನವರೇ, ನೀವು ಇಲ್ಲಿ ಕುಳಿತಿರುವುದಕ್ಕೆ appreciate ಮಾಡುತ್ತಿದ್ದೇವೆ.

**ಶ್ರೀ ಕೆ.ಎನ್. ರಾಜಣ್ಣ:-** ನಾನು ಕಡ್ಡಾಯವಲ್ಲವೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ನಾವು ನಿಮ್ಮನ್ನು appreciate ಮಾಡುತ್ತಿದ್ದೇವೆ. ನೀವು ಹೋಗಬಹುದು, ಕಡ್ಡಾಯ ಪಟ್ಟಿಯಲ್ಲಿಲ್ಲ. ನೀವಿಲ್ಲಿರುವುದಕ್ಕೆ ಬಹಳ ಸಂತೋಷ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಸಚಿವರಿಗೆ ಸ್ವಲ್ಪ ಹೇಳಿ. ಮಾನ್ಯ ಯತೀಂದ್ರರವರೇ, ಮಾತನಾಡಿ.

**ಶ್ರೀ ಎನ್.ಎಸ್. ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನನ್ನ ಗಮನಕ್ಕೆ ತಂದಿದ್ದೀರಿ, ನಾಳೆ ಎಲ್ಲವೂ ಸರಿಯಾಗುತ್ತದೆ.

**ಡಾ: ಯತೀಂದ್ರ. ಎಸ್:-** ಮಾನ್ಯ ಸಭಾಪತಿಯವರೇ, ದೇಶದಲ್ಲಿ ಆರ್ಥಿಕ ಅಸಮಾನತೆ ಎಷ್ಟಾಗಿದೆ ಎಂದು ನಾನು ಪ್ರಸ್ತಾಪ ಮಾಡುತ್ತಿದ್ದೆ. Oxfam ಎನ್ನುವ ಸಂಸ್ಥೆ ಪ್ರಪಂಚದಲ್ಲಿರುವ ಎಲ್ಲಾ ದೇಶಗಳಲ್ಲಿ ಆರ್ಥಿಕ ಅಸಮಾನತೆ ಹೇಗಿದೆ ಎನ್ನುವ ಬಗ್ಗೆ ಸ್ಟಡಿ ಮಾಡುತ್ತದೆ. ಅವರು 2029ರಲ್ಲಿ ಭಾರತದಲ್ಲಿರುವಂತಹ ಆರ್ಥಿಕ ಅಸಮಾನತೆ ಬಗ್ಗೆ ಒಂದು ವರದಿ ಕೊಟ್ಟಿದ್ದಾರೆ. ಅವರು ನಮ್ಮ ದೇಶದಲ್ಲಿ ಕೇವಲ 1% ಶ್ರೀಮಂತರು, top 1 percent earning people ಅವರು ದೇಶದ 40.5% ಒಟ್ಟು ಸಂಪತ್ತನ್ನು ಅನುಭವಿಸುತ್ತಿದ್ದಾರೆ. Bottom 50 percent, ಆದಾಯಗಳಿಕೆಯಲ್ಲಿ ಶೇ.50ಕ್ಕಿಂತ ಕೆಳಗಿರುವ ಜನರು ಕೇವಲ ಶೇ.3 ಸಂಪತ್ತನ್ನು ಅನುಭವಿಸುತ್ತಿದ್ದಾರೆ ಎಂದು ಹೇಳುತ್ತಾರೆ. ಇವತ್ತು ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ಶ್ರೀಮಂತರು ಕಟ್ಟುವ ತೆರಿಗೆ, ದೊಡ್ಡ ದೊಡ್ಡ ಉದ್ದಿಮೆದಾರರು, ಕಾರ್ಪೋರೇಟ್ ತೆರಿಗೆಯನ್ನು ಶೇ.30 ರಿಂದ ಶೇ.22ಕ್ಕೆ ಇಳಿಸಿದ್ದಾರೆ. ಶೇ.8ರಷ್ಟು

ಕಡಿಮೆಯಾಗಿದೆ. ಇದರಿಂದ ವರ್ಷಕ್ಕೆ ಹಲವಾರು ಲಕ್ಷ ಕೋಟಿಗಳು ಸರ್ಕಾರಕ್ಕೆ ನಷ್ಟವಾಗಿದೆ ಎಂದು newspaper ಗಳಲ್ಲಿ article ಬಂದಿದೆ. Direct tax ಆದಾಯ ತೆರಿಗೆ ಇರಬಹುದು, ಆಸ್ತಿ ತೆರಿಗೆ ಇರಬಹುದು ಆದಾಯ ಗಳಿಕೆ ಇರುವವರು ಕಟ್ಟುವಂತಹ ತೆರಿಗೆ ಕಡಿಮೆಯಾಗುತ್ತಿದೆ. ಆದರೆ ಆದಾಯ ಗಳಿಕೆ ಇಲ್ಲದಿರುವಂತಹ ಜನರು ಏನು indirect tax ಕಟ್ಟುತ್ತಾರೆ, GST, Excise Duty ಅಂತಹದ್ದು ಇವತ್ತು ಜಾಸ್ತಿಯಾಗುತ್ತಾ ಹೋಗುತ್ತಿದೆ. ಯಾರಿಗೆ ಆದಾಯ ಗಳಿಕೆ ಇಲ್ಲ, ಯಾರು ಬಡವರಿದ್ದಾರೆ, ಜನಸಾಮಾನ್ಯರಿದ್ದಾರೆ ಅವರ ಮೇಲೆ ತೆರಿಗೆ ಹೊರೆ ಜಾಸ್ತಿಯಾಗುತ್ತಿದೆ. ಅದರ ಜೊತೆಗೆ ಬೆಲೆ ಏರಿಕೆ ಕೂಡ ಜಾಸ್ತಿಯಾಗುತ್ತಿದೆ. ಹಾಗಾಗಿ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬೇಕು. ಬೆಲೆ ಏರಿಕೆ ಏನು ಜಾಸ್ತಿಯಾಗಿದೆ ಆ ಹೊರೆಯನ್ನು ಜನಸಾಮಾನ್ಯರಿಗೆ ಮತ್ತು ಬಡವರಿಗೆ ತಗ್ಗಿಸಬೇಕು ಎನ್ನುವ ಉದ್ದೇಶದಿಂದ ಹಲವಾರು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. 2013-2018ರವರೆಗೆ ಅಧಿಕಾರದಲ್ಲಿದ್ದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಹಲವಾರು ಭಾಗ್ಯಗಳನ್ನು ಕೊಟ್ಟು ಇದೇ ಸಿದ್ಧಾಂತದ ಅಡಿಯಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಆಗ ಹಲವಾರು ಭಾಗ್ಯಗಳನ್ನು ಕೊಟ್ಟಿದ್ದರಿಂದ ಜನಸಾಮಾನ್ಯರ ಜೀವನ ಉತ್ತಮವಾಗಿತ್ತು, ನಿರಾಳವಾಗಿತ್ತು. ಆಗ ನಾವು ನಮ್ಮ ಪ್ರಣಾಳಿಕೆಯಲ್ಲಿ 168 ಭರವಸೆಗಳನ್ನು ಕೊಟ್ಟಿದ್ದೆವು. 160ಕ್ಕೂ ಹೆಚ್ಚು ಭರವಸೆಗಳನ್ನು ನಾವು ಈಡೇರಿಸಿ 'ನುಡಿದಂತೆ ನಡೆದ ಸರ್ಕಾರ' ಎಂದು ಹೆಸರು ಕೂಡ ಪಡೆದಿದ್ದೇವೆ. ಹಾಗಾಗಿ 2023ರ ಚುನಾವಣೆಯಲ್ಲಿ ನಾವು ಏನು ಐದು ಗ್ಯಾರಂಟಿಗಳ ಭರವಸೆಯನ್ನು ಕೊಟ್ಟಿದ್ದೆವು, ಆ ಭರವಸೆಗಳನ್ನು ನಂಬಿ ಜನರು 136 ಕ್ಷೇತ್ರಗಳಲ್ಲಿ ಗೆಲ್ಲಿಸಿ ಬಹುಮತ ಕೊಟ್ಟು ನಮ್ಮನ್ನು ಮತ್ತೆ ಅಧಿಕಾರಕ್ಕೆ ತಂದಿದ್ದಾರೆ. ನಾವು ಐದು ಗ್ಯಾರಂಟಿಗಳನ್ನು ಕೊಟ್ಟಾಗ ಪ್ರತಿಪಕ್ಷದವರು ಬಹಳಷ್ಟು ಟೀಕೆ ಮಾಡಿದರು. ಆ ಐದು ಗ್ಯಾರಂಟಿಗಳನ್ನು ಕೊಡುವುದಕ್ಕಾಗುವುದಿಲ್ಲ, ವರ್ಷಕ್ಕೆ ರೂ. 60,000/- ಕೋಟಿ ಖರ್ಚಾಗುವಂತಹ ಕಾರ್ಯಕ್ರಮಗಳವು, ಇದು ಕೇವಲ ಚುನಾವಣಾ ಗಿಮಿಕ್ ಮಾತ್ರ, ಸುಳ್ಳು ಭರವಸೆಗಳನ್ನು ಕೊಡುತ್ತಿದ್ದಾರೆ ಎಂದು ಹೇಳಿದರು. ಆದರೆ ಜನರು ನಮ್ಮನ್ನು ನಂಬಿದರು, ನಾವು ಅಧಿಕಾರಕ್ಕೆ ಬಂದೆವು. ನಾವು ಅಧಿಕಾರಕ್ಕೆ ಬಂದ ಎಂಟು ತಿಂಗಳೊಳಗಡೆಯೇ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಅಷ್ಟು ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದಾರೆ. ಅದು ಸಣ್ಣ-ಪುಟ್ಟ ಕಾರ್ಯಕ್ರಮಗಳಲ್ಲ. ಇವತ್ತು ನಾವು ವರ್ಷಕ್ಕೆ ರೂ. 58,000-60,000/- ಕೋಟಿ ಖರ್ಚಾಗುವಂತಹ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ.

ಗ್ಯಾರಂಟಿ ಯೋಜನೆಗಳಿಂದ ನಮ್ಮ ರಾಜ್ಯಕ್ಕೆ ಎಷ್ಟೆಲ್ಲಾ ಒಳ್ಳೆಯದಾಗಿದೆ ಎಂಬ ಒಂದಷ್ಟು ವಿಷಯಗಳನ್ನು ನಿಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು 'ಗೃಹಲಕ್ಷ್ಮಿ' ಯೋಜನೆಯಲ್ಲಿ 1,26,24,547 ಮಹಿಳಾ ಫಲಾನುಭವಿಗಳಾಗಿದ್ದಾರೆ. ಅದಕ್ಕೆ ನಾವು ವರ್ಷಕ್ಕೆ ರೂ. 36,000/- ಕೋಟಿ ಹಣವನ್ನು ವೆಚ್ಚ ಮಾಡುತ್ತಿದ್ದೇವೆ. ಈ ಕಾರ್ಯಕ್ರಮದಿಂದ ಲಕ್ಷಾಂತರ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ. Media ದಲ್ಲಿ ಇದರ ಬಗ್ಗೆ ಬೇಕಾದಷ್ಟು ವರದಿಗಳು ಬಂದಿವೆ. Media ದಲ್ಲಿ ಒಂದು ವರದಿ ಇತ್ತು. ಒಬ್ಬ ವೃದ್ಧ ಮಹಿಳೆಯು ತನ್ನ ಮಗನನ್ನು ಕಳೆದುಕೊಂಡಿರುತ್ತಾಳೆ, ಮಗನನ್ನು ಕಳೆದುಕೊಂಡು ಶ್ರಾದ್ಧ ಕಾರ್ಯ ಮಾಡುವಾಗ ''*ಮಗನೇ, ನೀನೇನೂ*

*ಯೋಚನೆ ಮಾಡಬೇಡ, ಗೃಹಲಕ್ಷ್ಮಿ ಯೋಜನೆಯಿಂದ ನನಗೆ ತಿಂಗಳಿಗೆ ರೂ. 2,000/- ಬರುತ್ತದೆ ಹಾಗಾಗಿ ನೀನು ನೆಮ್ಮದಿಯಿಂದ ಹೋಗಿ ಬಾ, ಆ ಹಣದಲ್ಲಿ ನಾನು ಮುಂದಿನ ಜೀವನವನ್ನು ಸಾಗಿಸುತ್ತೇನೆ''* ಎಂದು ಹೇಳುತ್ತಾಳೆ. ಈ ರೀತಿ ಸಾಕಷ್ಟು ಸಂತ್ರಸ್ತ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಆಧಾರವಾಗಿದೆ. ಎಷ್ಟೋ ಜನ ಮಹಿಳೆಯರು ಸಣ್ಣ ಪುಟ್ಟ ವ್ಯಾಪಾರ ಮಾಡುವುದಕ್ಕೆ ಸಾಧ್ಯವಾಗಿದೆ. ಒಂದು ವರದಿ ಬಂದಿತ್ತು. ಅತ್ತೆಯೊಬ್ಬರು ತನ್ನ ಸೊಸೆಗೆ ಗೃಹಲಕ್ಷ್ಮಿ ಯೋಜನೆಯಿಂದ ಬಂದಂತಹ ಹಣವನ್ನು ಕೂಡಿಟ್ಟು Groceries Store ಒಂದನ್ನು ಮಾಡಿಕೊಟ್ಟಿದ್ದಾರೆ. ಎಷ್ಟೋ ಜನ ಮಹಿಳೆಯರು ಚಿನ್ನಾಭರಣಗಳನ್ನು ನೋಡುವುದಕ್ಕೆ ಆಗದವರು ಕೂಡ ಗೃಹಲಕ್ಷ್ಮಿ ಹಣವನ್ನು ಕೂಡಿಟ್ಟುಕೊಂಡು ಚಿನ್ನಾಭರಣಗಳನ್ನು ಖರೀದಿಸುವಂತಾಗಿದೆ. ಎಷ್ಟೋ ಜನ ಮಹಿಳೆಯರು ಮಕ್ಕಳ ಶಾಲಾ ಶುಲ್ಕ ಇರಬಹುದು, ಚಿಕಿತ್ಸೆಗಿರಬಹುದು, ಔಷಧಿಗಳಿಗೆ ವೆಚ್ಚ ಮಾಡುವುದಕ್ಕೆ ಇರಬಹುದು ಗೃಹಲಕ್ಷ್ಮಿ ಹಣವನ್ನು ಬಳಕೆ ಮಾಡಿಕೊಂಡಿದ್ದಾರೆ. ಇದರಿಂದಾಗಿ ಅವರ ಆರ್ಥಿಕ ಸ್ಥಿತಿ ಸ್ವಲ್ಪ ಉತ್ತಮವಾಗಿ ಅವರಿಗೂ ಕೂಡ ಆರ್ಥಿಕ ಶಕ್ತಿ ಬಂದಿದೆ.

'ಗೃಹಜ್ಯೋತಿ' ಯೋಜನೆಯಡಿಯಲ್ಲಿ ಸುಮಾರು 1 ಕೋಟಿ 62 ಲಕ್ಷ ಗ್ರಾಹಕರು ಇದರ ಫಲಾನುಭವಿಗಳಾಗಿದ್ದಾರೆ. ಇದಕ್ಕೆ ನಾವು ರೂ. 17,290 ಕೋಟಿ ಹಣವನ್ನು ಹಿಂದಿನ ವರ್ಷ ಖರ್ಚು ಮಾಡಿದ್ದೇವೆ. ಇವತ್ತು ರಾಜ್ಯದಲ್ಲಿ ಪ್ರತಿಯೊಂದು ಕುಟುಂಬವು ಸರಾಸರಿ 80-90 ಯುನಿಟ್ ವಿದ್ಯುತ್ ಅನ್ನು ಉಪಯೋಗಿಸುತ್ತಿದೆ. ಅದಕ್ಕೆ ಸುಮಾರು 600-700 ರೂಪಾಯಿಗಳು ಖರ್ಚು ಬರುತ್ತದೆ. ಇವತ್ತು 600-700 ರೂಪಾಯಿಗಳ ಹಣ ಉಳಿತಾಯವಾಗುತ್ತಿರುವುದರಿಂದ ಎಷ್ಟೋ ಕುಟುಂಬಗಳು ಆ ಹಣವನ್ನು ಸಂಸಾರ ನೀಗಿಸುವಂತಹ ಕೆಲಸಕ್ಕೆ, ಬೇರೆ ಖರ್ಚುಗಳಿಗೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ.

'ಶಕ್ತಿ' ಯೋಜನೆಯಡಿ ಸುಮಾರು 376 ಕೋಟಿ ಮಹಿಳೆಯರು ದಿನಾಂಕ 17.1.2025ರವರೆಗೆ ಪ್ರಯಾಣ ಮಾಡಿದ್ದಾರೆ. ಸುಮಾರು ರೂ. 8,215/- ಕೋಟಿ ಹಣ ಈ ಯೋಜನೆಗೆ ಖರ್ಚಾಗಿದೆ. ಬಡ ಹಾಗೂ ಮಧ್ಯಮವರ್ಗದ ಮಹಿಳೆಯರು ಶಕ್ತಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಹಿಂದೆಲ್ಲಾ ಮಹಿಳೆಯರಿಗೆ ತೀರ್ಥಕ್ಷೇತ್ರಗಳಿಗೆ ಹೋಗಬೇಕು, ದೇವಸ್ಥಾನಗಳನ್ನು ನೋಡಬೇಕು, ಪ್ರವಾಸಿ ಸ್ಥಳಗಳಿಗೆ ಹೋಗಬೇಕೆಂಬ ಆಸೆ ಇರುತ್ತಿತ್ತು. ಆದರೆ ಅವರಿಗೆ ಆಗುತ್ತಿರಲಿಲ್ಲ. ಎಲ್ಲದಕ್ಕೂ ಕೂಡ ತಮ್ಮ ಗಂಡ ಹಾಗೂ ಮಕ್ಕಳ ಬಳಿ ಕೈ ಚಾಚಬೇಕಾಗಿತ್ತು. ಆದರೆ ಇವತ್ತು ಉಚಿತ ಪ್ರಯಾಣವಿರುವುದರಿಂದ ಅವರು ಸ್ವಾಭಿಮಾನದಿಂದ ತಾವೇ ಪ್ರವಾಸಿ ಸ್ಥಳಗಳಿಗೆ, ತೀರ್ಥಕ್ಷೇತ್ರಗಳಿಗೆ ಹೋಗುತ್ತಿದ್ದಾರೆ. ಎಷ್ಟೋ ದೇವಸ್ಥಾನಗಳಲ್ಲಿ ಮಹಿಳಾ ಪ್ರವಾಸಿಗರ ಸಂಖ್ಯೆ ಜಾಸ್ತಿಯಾಗಿದೆ. ಹಾಗಾಗಿ ತೀರ್ಥಕ್ಷೇತ್ರಗಳಲ್ಲಿ economic activities ಕೂಡ ಜಾಸ್ತಿಯಾಗುತ್ತಿದೆ. ಎಷ್ಟೋ ಉದ್ಯೋಗಸ್ಥ ಮಹಿಳೆಯರಿಗೆ ಕೂಡ ಕೆಲಸಕ್ಕೆ ಹೋಗುವುದಕ್ಕೆ ಅನುಕೂಲವಾಗಿದೆ. ತಮ್ಮ ಪ್ರಯಾಣಕ್ಕೆ ಎಷ್ಟು ಖರ್ಚು ಮಾಡುತ್ತಿದ್ದರು ಅದನ್ನು ಉಳಿತಾಯ ಮಾಡುವುದಕ್ಕೆ ಸಾಧ್ಯವಾಗಿದೆ. ಇವತ್ತು ಒಂದು study ಆಗಿದೆ. JustJobs Network ಅವರು ಕರ್ನಾಟಕದಲ್ಲಿರುವ Fiscal Policy Institute ನ ಸಹಯೋಗದಲ್ಲಿ ಒಂದು ಅಧ್ಯಯನ

ಮಾಡಿದ್ದಾರೆ. ಅಧ್ಯಯನ ಹೇಳುವುದೇನೆಂದರೆ, ಶಕ್ತಿ ಯೋಜನೆಯಿಂದ ಬೆಂಗಳೂರಿನಂತಹ ಸಿಟಿಯಲ್ಲಿ ಒಬ್ಬ ಮಹಿಳೆ ತಿಂಗಳಿಗೆ ಸುಮಾರು ರೂ. 1,326/- ಗಳನ್ನು ಉಳಿತಾಯ ಮಾಡುವುದಕ್ಕೆ ಸಾಧ್ಯವಾಗಿದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆಯಷ್ಟು ಹಣ ಉಳಿತಾಯ ಮಾಡುವುದಕ್ಕೆ ಸಾಧ್ಯವಾಗಿದೆ. ಉಡುಪಿ ಜಿಲ್ಲೆಯಲ್ಲಿ ಮಹಿಳೆಯರು ತಿಂಗಳಿಗೆ ರೂ. 681/- ಉಳಿತಾಯ ಮಾಡುವುದಕ್ಕಾಗಿದೆ. ಚಾಮರಾಜನಗರ ಒಬ್ಬ ಮಹಿಳೆ ಜಿಲ್ಲೆಯಲ್ಲಿ ರೂ. 779/- ಉಳಿತಾಯ ಮಾಡುವುದಕ್ಕೆ ಸಾಧ್ಯವಾಗಿದೆ. ಇಷ್ಟೊಂದು ಹಣ ಉಳಿತಾಯವಾಗುತ್ತಿರುವುದರಿಂದ ಮಹಿಳೆಯರು ಆರ್ಥಿಕವಾಗಿ ಸಬಲರಾಗುವುದಕ್ಕೆ ಸಾಧ್ಯವಾಗಿದೆ. ಅದೇ ರೀತಿ Fiscal Policy Institute ನವರು ಮತ್ತೊಂದು study ಮಾಡಿದ್ದಾರೆ. ಅವರು female labour force participation rate ಏನಿದೆ ಅದು ಡಿಸೆಂಬರ್, 2022ರಲ್ಲಿ ಶೇ.25.1 ರಷ್ಟಿತ್ತು, ಅಕ್ಟೋಬರ್-ಡಿಸೆಂಬರ್ 2023ಕ್ಕೆ ಶೇ.30.2 ಆಗಿದೆ. ಮಹಿಳೆಯರ labour force ಅಂದರೆ ಉದ್ಯೋಗ ಮಾಡುವಂತಹ ಪರ್ಸೆಂಟೇಜ್ ಜಾಸ್ತಿಯಾಗಿದೆ.

(ಮುಂದು)

(34) 04.03.2025 (3.30) ಹೆಚ್‌ವಿ.ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ॥ ಎಸ್.ಯತೀಂದ್ರ (ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಯಾವುದೇ ಒಂದು ಸಮಾಜದಲ್ಲಿ ಮಹಿಳೆಯರು ಉದ್ಯೋಗಸ್ಥರಾದರೇ, work force ನಲ್ಲಿ ಭಾಗಿಗಳಾದರೇ, ಆ ಸಮಾಜ ಆರ್ಥಿಕವಾಗಿ ಬೆಳವಣಿಗೆಯನ್ನು ಹೊಂದುತ್ತದೆ ಎನ್ನುವ ಅಂಶವನ್ನು ನಮ್ಮ ರಾಜ್ಯದಲ್ಲಿ ನೋಡುವುದಕ್ಕೆ ಸಾಧ್ಯವಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಕೇವಲ ಮಹಿಳೆಯವರು ಮಾತ್ರವಲ್ಲ work force participation ಸಹ ಹೆಚ್ಚಾಗಿದೆ. "ಶಕ್ತಿ ಯೋಜನೆ" ಯಿಂದಾಗಿ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದನ್ನು ನಾವು ನೋಡುವುದಕ್ಕೆ ಸಾಧ್ಯವಾಗಿದೆ. ಮೊದಲು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯವರು ವ್ಯವಸಾಯ ಕ್ಷೇತ್ರದಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೇ, ಶಕ್ತಿ ಯೋಜನೆಯಿಂದಾಗಿ ಅವರುಗಳು ಇವತ್ತು ಬೇರೆಬೇರೆ ನಗರ ಪ್ರದೇಶಗಳಿಗೆ ಹೋಗುತ್ತಿದ್ದಾರೆ ಮತ್ತು ಬೇರೆಬೇರೆ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಈ ಯೋಜನೆಯಿಂದಾಗಿ ಬಹಳಷ್ಟು ಮಹಿಳೆಯರಿಗೆ ಅನುಕೂಲವಾಗಿದೆ. ಇಂದಿಗೂ ಸಾರಿಗೆ ಸಂಸ್ಥೆಗಳು ನಷ್ಟದಲ್ಲಿವೆ. ಆದರೇ, ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೇ ರೆವಿನ್ಯೂ ಹೆಚ್ಚಾಗಿದೆ. ಸೆಪ್ಟೆಂಬರ್ 2022ರ ವರ್ಷಾಂತ್ಯದಲ್ಲಿ ಸಾರಿಗೆ ಸಂಸ್ಥೆಯ ರೆವಿನ್ಯೂ 3,349 ಕೋಟಿ ರೂಪಾಯಿಗಳಾಗಿತ್ತು. 2023ರ ಏಪ್ರಿಲ್ ಮತ್ತು ಮೇ ತಿಂಗಳನ್ನು ಬಿಟ್ಟರೇ ಸುಮಾರು 3,930 ಕೋಟಿ ರೂಪಾಯಿಗಳಷ್ಟು ಆದಾಯ ಸಾರಿಗೆ ಸಂಸ್ಥೆಗೆ ಬಂದಿದೆ. ಶಕ್ತಿ ಯೋಜನೆಯಿಂದ ಇಷ್ಟೆಲ್ಲ ಅನುಕೂಲಗಳಾಗುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, "ಅನ್ನ ಭಾಗ್ಯ" ಯೋಜನೆಯಲ್ಲಿ ಸುಮಾರು 4,48,41,976 ಫಲಾನುಭವಿಗಳಿದ್ದಾರೆ. ಈ ಯೋಜನೆಯಡಿಯಲ್ಲಿ 5 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡಲಾಗುತ್ತಿದೆ ಮತ್ತು

ಇನ್ನೂ 5 ಕೆ.ಜಿ. ಅಕ್ಕಿಗೆ ಬದಲಾಗಿ ಮಾಸಿಕ 170 ರೂಪಾಯಿಗಳನ್ನು ಪ್ರತಿ ಫಲಾನುಭವಿಗಳ ಖಾತೆಗೆ ಹಾಕಲಾಗುತ್ತಿದೆ. ಒಂದು ವರ್ಷಕ್ಕೆ ಸುಮಾರು 10,009 ಕೋಟಿ ರೂಪಾಯಿಗಳು ಇದಕ್ಕಾಗಿ ವೆಚ್ಚವಾಗುತ್ತಿವೆ.

ಸನ್ಮಾನ್ಯ ಸಿದ್ದರಾಮಯ್ಯನವರು ಮೊದಲನೆಯ ಬಾರಿ ಮುಖ್ಯಮಂತ್ರಿಗಳಾಗಿದ್ದಾಗ, ಕರ್ನಾಟಕ ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಬಯಸಿದ್ದರು. ಅದಕ್ಕಾಗಿಯೇ "ಅನ್ನ ಭಾಗ್ಯ" ಕಾರ್ಯಕ್ರಮವನ್ನು ಜಾರಿಗೆ ತಂದರು. ಕಳೆದ ಬಾರಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 7 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಫಲಾನುಭವಿಗಳಿಗೆ ನೀಡಲಾಗುತ್ತಿತ್ತು. ಆದರೇ, ಈ ಬಾರಿ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡುವ ಮೂಲಕ ಬಡವರು ಹಸಿವಿನಿಂದ ಬಳಲುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿದೆ. ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿರುವ ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರು "ಅನ್ನ ಭಾಗ್ಯ ಕಾರ್ಯಕ್ರಮ ಜಾರಿಯಲ್ಲಿರುವುದರಿಂದ ರಾಜ್ಯದಲ್ಲಿರುವ ಎಷ್ಟೋ ಜನ ಬಡವರು ಬದುಕುವುದಕ್ಕೆ ಸಾಧ್ಯವಾಗಿದೆ. ಬರದ ಪರಿಸ್ಥಿತಿಯಲ್ಲಿಯೂ ಸಹ ಹಸಿವಿನಿಂದ ಸಾಯುವವರ ಸಂಖ್ಯೆ ಕಡಿಮೆಯಾಗಿದೆ" ಎನ್ನುವ ಮಾತನ್ನು ಹೇಳಿದ್ದರು.

ಸನ್ಮಾನ್ಯ ಸಭಾಪತಿಯವರೇ, "ಅನ್ನ ಭಾಗ್ಯ" ಯೋಜನೆಯಲ್ಲಿಯೂ ಸಹ ರಾಜ್ಯಕ್ಕೆ ಕೇಂದ್ರ ಸರ್ಕಾರ ಯಾವ ರೀತಿಯಲ್ಲಿ ಅನ್ಯಾಯ ಮಾಡಿತು ಎನ್ನುವುದನ್ನು ಹೇಳಬೇಕಾಗಿದೆ. ನಾವು 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡುತ್ತೇವೆಂದು ಈ ಯೋಜನೆಯನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಫುಡ್ ಕಾರ್ಪೋರೇಶನ್ ಆಫ್ ಇಂಡಿಯಾದಲ್ಲಿ ಅಗತ್ಯಕ್ಕಿಂತ ಹೆಚ್ಚು ಅಕ್ಕಿ ದಾಸ್ತಾನಿನಲ್ಲಿ ಇತ್ತು. ನಾವು ಒಂದು ಕೆ.ಜಿ. ಅಕ್ಕಿಗೆ 36 ರೂಪಾಯಿ 60 ಪೈಸೆಗಳನ್ನು ಕೊಡುತ್ತೇವೆಂದು ಹೇಳಿದರೂ ಸಹ ಕೇಂದ್ರ ಸರ್ಕಾರ ನಮಗೆ ಅಕ್ಕಿಯನ್ನು ಕೊಡುವುದಕ್ಕೆ ಒಪ್ಪಿಕೊಳ್ಳಲಿಲ್ಲ. ಅವರು ಅಕ್ಕಿಯನ್ನು ಕೊಟ್ಟಿದ್ದರೇ, ಅದನ್ನು ಬಡವರಿಗೆ ಹಂಚುತ್ತಿದ್ದೆವು. ಆದರೇ, ಕೇಂದ್ರ ಸರ್ಕಾರದವರು ಅದೇ ಅಕ್ಕಿಯನ್ನು "ಭಾರತ್ ರೈಸ್" ಎನ್ನುವ ಹೆಸರಿನಲ್ಲಿ ಒಂದು ಕೆ.ಜಿ. ಅಕ್ಕಿಗೆ 25 ರೂಪಾಯಿಗಳಂತೆ ಮಾರಾಟ ಮಾಡುವುದಕ್ಕೆ ಪ್ರಾರಂಭ ಮಾಡಿದ್ದರು. ಅವರ ಆ ಕಾರ್ಯಕ್ರಮ ಸಹ ವಿಫಲವಾಯಿತು, ಇದರ ಫಲವಾಗಿ ನಾವು 5 ಕೆ.ಜಿ. ಅಕ್ಕಿಯನ್ನು ಕೊಡುವುದಕ್ಕೆ ಆಗದೇ ಇದ್ದರೂ 170 ರೂಪಾಯಿಗಳನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಹಾಕುತ್ತಿದ್ದೇವೆ. ಈ ಬಾರಿ ಫುಡ್ ಕಾರ್ಪೋರೇಶನ್ ಆಫ್ ಇಂಡಿಯಾದವರಿಗೆ ಒಳ್ಳೆಯ ಬುದ್ಧಿ ಬಂದು ಅಕ್ಕಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಹೀಗಾಗಿ ಒಟ್ಟಾರೇ 10 ಕೆ.ಜಿ. ಅಕ್ಕಿಯನ್ನು ಜನರಿಗೆ ಕೊಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 1,65,014 ಫಲಾನುಭವಿಗಳು "ಯುವನಿಧಿ ಯೋಜನೆ"ಯ ಪ್ರಯೋಜವನ್ನು ಪಡೆದುಕೊಳ್ಳುತ್ತಿದ್ದಾರೆ. ನಿರುದ್ಯೋಗಿ ಯುವಕ ಯುವತಿಯರು ತಮಗೆ ಉದ್ಯೋಗ ಸಿಗದೇ ಇರುವಂತಹ ಸಂದರ್ಭದಲ್ಲಿ ಈ ಯೋಜನೆಯಡಿಯಲ್ಲಿ ಹಣವನ್ನು ನೀಡುವುದರ ಜೊತೆಗೆ ತರಬೇತಿಯನ್ನು ಸಹ ನೀಡಲಾಗುತ್ತಿದೆ. ಇದರಿಂದ ಅವರುಗಳು ಆರ್ಥಿಕವಾಗಿ ಆಸರೆ ಪಡೆಯುವುದಕ್ಕೆ ಮತ್ತು ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಈ 5 ಗ್ಯಾರಂಟಿಗಳು ಸೇರಿದಂತೆ ನಮ್ಮ ರಾಜ್ಯದಲ್ಲಿ ಕೊಡುವಂತಹ ಎಲ್ಲ ಕಲ್ಯಾಣ ಕಾರ್ಯಕ್ರಮಗಳಿಗೆ ಸರ್ಕಾರ ಒಂದು ವರ್ಷಕ್ಕೆ ಸುಮಾರು ೯೦,೦೦೦ ಕೋಟಿ ರೂಪಾಯಿಗಳನ್ನು ನೇರವಾಗಿ D.B.T. (Direct Benefit Transfer) ಅಥವಾ ಸಬ್ಸಿಡಿ ಮೂಲಕ ಜನರಿಗೆ ತಲುಪಿಸಲಾಗುತ್ತಿದೆ. ಪ್ರಾಯಶಃ ಪ್ರಪಂಚದಲ್ಲಿ ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ನೇರವಾಗಿ ಜನರಿಗೆ ತಲುಪಿಸುವಂತಹ ಕಾರ್ಯಕ್ರಮಗಳು ಯಾವುದಾದರು ಇದ್ದರೆ, ಅದು ನಮ್ಮ ಕರ್ನಾಟಕ ರಾಜ್ಯದಲ್ಲಿನ ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಮಾತ್ರ ಸಾಧ್ಯವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಸುಮಾರು 101 ಕೋಟಿ 31 ಲಕ್ಷ ಕುಟುಂಬಗಳಿವೆ. ಆ ಕುಟುಂಬಗಳ ಪೈಕಿ 1 ಕೋಟಿ 25 ಲಕ್ಷ ಕುಟುಂಬಗಳು ಒಂದಲ್ಲ ಒಂದು ಕಾರ್ಯಕ್ರಮಗಳ ಫಲಾನುಭವಿಗಳಾಗಿವೆ. ಆದ್ದರಿಂದ ರಾಜ್ಯದಲ್ಲಿರುವ ಬಹುತೇಕ ಜನರಿಗೆ ನಾವು ಕೊಡುತ್ತಿರುವ ಕಲ್ಯಾಣ ಕಾರ್ಯಕ್ರಮಗಳು ಒಂದಲ್ಲ ಒಂದು ರೀತಿಯಲ್ಲಿ ತಲುಪುತ್ತಿವೆ. ಅವರೆಲ್ಲರೂ ಸಹ ಫಲಾನುಭವಿಗಳಾಗಿದ್ದಾರೆ. ಇಷ್ಟೊಂದು ದೊಡ್ಡ ಕಲ್ಯಾಣ ಕಾರ್ಯಕ್ರಮಗಳನ್ನು ನೀಡುತ್ತಿರುವ ಸರ್ಕಾರ ಯಾವುದಾದರೂ ನಮ್ಮ ದೇಶದಲ್ಲಿದ್ದರೇ, ಅದು ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಮಾತ್ರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಗ್ಯಾರಂಟಿ ಸ್ಕೀಂಗಳನ್ನು ನಮ್ಮ ದೇಶದಲ್ಲಿ ಮಾತ್ರವಲ್ಲ ವಿಶ್ವದ ಬಹಳಷ್ಟು ಸಂಸ್ಥೆಗಳು ಅದನ್ನು ಮೆಚ್ಚಿಗೊಂಡಿವೆ. U.N. (United Nations) General Assembly ಅಧ್ಯಕ್ಷರು ನಮ್ಮ ರಾಜ್ಯಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಮಹಿಳಾ ಕೇಂದ್ರೀಕೃತವಾಗಿರುವ ನಮ್ಮ ಗ್ಯಾರಂಟಿ ಸ್ಕೀಂಗಳು ಮಹಿಳೆಯರಿಗೆ ಅನುಕೂಲ ಮಾಡುವಂತಹ ಮತ್ತು ಅವರಿಗೆ ಆರ್ಥಿಕವಾಗಿ ಶಕ್ತಿ ತುಂಬುವಂತಹ ಕೆಲಸ ಮಾಡುತ್ತಿರುವುದನ್ನು ಹಾಗೂ ಸಮಾಜದ ಎಲ್ಲ ವರ್ಗದವರಿಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶಕ್ತಿ ತುಂಬುವಂತಹ ಕೆಲಸ ಮಾಡುತ್ತಿರುವುದನ್ನು ಮೆಚ್ಚಿ ಶ್ಲಾಘನೆ ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಗ್ಯಾರಂಟಿ ಸ್ಕೀಂಗಳಿಂದ ರಾಜ್ಯದಲ್ಲಿರುವ ಜನರಿಗೆ ಒಳ್ಳೆಯದಾಗುತ್ತಿದೆ. ಬಡವರು ನಿಟ್ಟುಸಿರು ಬಿಟ್ಟು ಬೆಲೆಯೇರಿಕೆ ಮತ್ತು ತೆರಿಗೆಯ ಹೊರೆಯಿಂದ ಹೊರ ಬಂದು ಸ್ವಲ್ಪ ಅನುಕೂಲಕರವಾಗಿ ಬದುಕುವುದಕ್ಕೆ ಸಾಧ್ಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು "ಗ್ಯಾರಂಟಿ ಸ್ಕೀಂಗಳು ಜಾರಿಯಾದರೇ, ರಾಜ್ಯದ ಬೊಕ್ಕಸ ಖಾಲಿಯಾಗುತ್ತೆ ರಾಜ್ಯ ಸರ್ಕಾರ ದಿವಾಳಿಯಾಗುತ್ತದೆ" ಎನ್ನುವ ಟೀಕೆ ಮಾಡುತ್ತಿದ್ದರು. ಆದರೇ, ನಮ್ಮ ಸರ್ಕಾರ ಜನರ ಕೈಗೆ ನೇರವಾಗಿ ಹಣವನ್ನು ಕೊಡುತ್ತಿರುವುದರಿಂದ ಅವರು ವೆಚ್ಚ ಮಾಡುವ ಪ್ರಮಾಣ ಹೆಚ್ಚಾಗಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿ, ಜಿ.ಎಸ್.ಟಿ., ತೆರಿಗೆ ಸಂಗ್ರಹದ ಪ್ರಮಾಣವೂ ಹೆಚ್ಚಾಗಿದೆ. ಕರ್ನಾಟಕ ರಾಜ್ಯ ಇಡೀ ದೇಶದಲ್ಲಿಯೇ ಜಿ.ಎಸ್.ಟಿ., ತೆರಿಗೆ ಸಂಗ್ರಹದಲ್ಲಿ ಎರಡನೆಯ ಸ್ಥಾನದಲ್ಲಿದೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಸಹ ಉತ್ತಮವಾಗಿದೆ. ರಾಜ್ಯದ G.D.P. (Gross Domestic

Product) ಬೆಳವಣಿಗೆಯನ್ನು ದೇಶದ ಜಿ.ಡಿ.ಪಿ., ಬೆಳವಣಿಗೆಗೆ ಹೋಲಿಕೆ ಮಾಡಿದರೇ ನಮ್ಮ ರಾಜ್ಯದ ಜಿ.ಡಿ.ಪಿ. ಬೆಳವಣಿಗೆಯೇ ಹೆಚ್ಚಾಗಿದೆ. 2024-25ನೇ ಸಾಲಿನಲ್ಲಿ ನಮ್ಮ ದೇಶದ projected G.D.P. growth 6.5% ಇದ್ದರೇ, ನಮ್ಮ ರಾಜ್ಯದ ಜಿ.ಡಿ.ಪಿ ಬೆಳವಣಿಗೆ 9.4% ಇದೆ. ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆ ಕೂಡ ಚೆನ್ನಾಗಿದೆ ಎನ್ನುವುದು ಇದರಿಂದ ತಿಳಿದು ಬರುತ್ತದೆ.

ಪ್ರತಿ ವರ್ಷ ಕಾಂಗ್ರೆಸ್ ಸರ್ಕಾರ ತನ್ನ ಆಯವ್ಯಯದ ಗಾತ್ರವನ್ನು ಹೆಚ್ಚು ಮಾಡಿಕೊಳ್ಳುತ್ತಾ ಹೋಗುತ್ತಿದೆ. ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ, ಆಯವ್ಯಯ ಗಾತ್ರದ ಬೆಳವಣಿಗೆ ಸರಾಸರಿ ಶೇಕಡಾ 10ರಷ್ಟು ಇತ್ತು. ನಾವು ಇದರ ಗಾತ್ರವನ್ನು ಶೇಕಡಾ 18.3ಕ್ಕೆ ಹೆಚ್ಚಿಸಿದ್ದೇವೆ. ನಮ್ಮ ಸರ್ಕಾರದ ಅವಧಿಯಲ್ಲಿ tax growth rate ಶೇಕಡಾ 15ರಷ್ಟು ಇದೆ. ಆದರೇ, ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಅದರ ಪ್ರಮಾಣ ಶೇಕಡಾ 11ರಷ್ಟು ಇತ್ತು.

ಇನ್ನು ಬಂಡವಾಳ ವೆಚ್ಚದ ಬಗ್ಗೆ ಹೇಳಬೇಕಾದರೇ, ಆಯವ್ಯಯದಲ್ಲಿ ಆಸ್ತಿ ನಿರ್ಮಾಣ ಮಾಡುವುದಕ್ಕಾಗಿ ಬಂಡವಾಳ ವೆಚ್ಚವನ್ನು ಕಾಯ್ದಿರಿಸಲಾಗುತ್ತದೆ. ಅದನ್ನು ಈಗ ಶೇಕಡಾ 15.01ಕ್ಕೆ ಏರಿಸಲಾಗಿದೆ ಎನ್ನುವುದನ್ನು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿದೆ. ವಿರೋಧ ಪಕ್ಷದವರು ಅಭಿವೃದ್ಧಿ ಕಾಮಗಾರಿಗಳಿಗೆ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಈ ಅಂಕಿ ಅಂಶಗಳನ್ನು ನೋಡಿದಾಗ ಭಾರತೀಯ ಜನತಾ ಪಕ್ಷದವರು ಅಧಿಕಾರದಲ್ಲಿದ್ದಾಗ, ಎಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ಹಣವನ್ನು ನೀಡಿದ್ದರೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೊಟ್ಟಿದ್ದೇವೆ ಎನ್ನುವುದು ತಿಳಿದು ಬರುತ್ತದೆ. ನಮ್ಮ ನೆರೆ-ಹೊರೆಯ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ನಮ್ಮ ಕರ್ನಾಟಕ ರಾಜ್ಯವೇ ಬಂಡವಾಳ ವೆಚ್ಚವನ್ನು ಹೆಚ್ಚು ಮಾಡಿದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಹೇಳುವುದಾದರೇ ನಮ್ಮ ರಾಜ್ಯ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಮತ್ತು ವಿದೇಶಿ ಬಂಡವಾಳ ಹೂಡಿಕೆಯಲ್ಲಿಯೂ ಸಹ ನಮ್ಮ ರಾಜ್ಯ ದೇಶದಲ್ಲಿಯೇ ಎರಡನೆಯ ಸ್ಥಾನದಲ್ಲಿದೆ. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಬಂಡವಾಳ ಹೂಡಿಕೆದಾರರ ಸಮ್ಮೇಳನ ನಡೆದಿತ್ತು. ಅಲ್ಲಿ ಸುಮಾರು 10 ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಬಂಡವಾಳವನ್ನು ಹೂಡಿಕೆ ಮಾಡಲಾಗುತ್ತದೆಂದು ಎಷ್ಟೋ ಜನ ಹೂಡಿಕೆದಾರರು ಮತ್ತು ಉದ್ದಿಮೆದಾರರು ಮುಂದೆ ಬಂದಿದ್ದರು. ಇದು ನಮ್ಮ ರಾಜ್ಯದ ಮೇಲೆ ಹೂಡಿಕೆದಾರರಲ್ಲಿ ಆತ್ಮವಿಶ್ವಾಸ ಎಷ್ಟಿದೆ ಎನ್ನುವುದನ್ನು ತೋರಿಸುತ್ತದೆ. ಈ ಮೂಲಕ ನಾವು ಎಲ್ಲ ವರ್ಗದ ಜನರ ವಿಶ್ವಾಸವನ್ನು ಗಳಿಸಿಕೊಳ್ಳುತ್ತಿದ್ದೇವೆ. ನಮ್ಮ ಸರ್ಕಾರ ರಾಜ್ಯದಲ್ಲಿ ಸರ್ವತೋಮುಖ ಬೆಳವಣಿಯನ್ನು ಮಾಡುವಂತಹ ಪ್ರಯತ್ನ ಮಾಡುತ್ತಿದೆ. ಆದರೆ, ಕೇಂದ್ರ ಸರ್ಕಾರದವರಿಂದ ನಿಷ್ಪಕ್ಷಪಾತವಾದ ಸಹಕಾರ ದೊರಕಿದ್ದರೇ, ಇನ್ನೂ ಹೆಚ್ಚಿನ ಕೆಲಸ ಮಾಡಬಹುದಾಗಿತ್ತು. ಕರ್ನಾಟಕ ರಾಜ್ಯವನ್ನು ಇನ್ನೂ ಹೆಚ್ಚಿನ ಅಭಿವೃದ್ಧಿ ಪಥದೆಡೆಗೆ ತೆಗೆದುಕೊಂಡು ಹೋಗಬಹುದಾಗಿತ್ತು. ಆದರೆ, ಕೇಂದ್ರ ಸರ್ಕಾರ ನಿರಂತರವಾಗಿ ನಮಗೆ ಅನ್ಯಾಯ ಮಾಡಿಕೊಂಡೇ ಬರುತ್ತಿದೆ. ತಮಗೆಲ್ಲ ಗೊತ್ತಿರುವಂತೆ 14ನೇ ಹಣಕಾಸು ಆಯೋಗದಿಂದ ಶೇಕಡಾ 4.713ರಷ್ಟು tax devolution ಬರುತ್ತಿತ್ತು. ಆದರೇ, 15ನೇ ಹಣಕಾಸು

ಆಯೋಗದವರು tax devolution ನಲ್ಲಿ ಶೇಕಡಾ 3.64ರಷ್ಟನ್ನು ಮಾತ್ರ ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಸುಮಾರು 68,775 ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆಯೆಂದು ಅಂಕಿ ಅಂಶಗಳು ಹೇಳುತ್ತಿವೆ. ನಮ್ಮ ರಾಜ್ಯದಿಂದ ಸುಮಾರು 4 ಲಕ್ಷ ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಸಂಗ್ರಹ ಮಾಡಿ ಕೇಂದ್ರ ಸರ್ಕಾರಕ್ಕೆ ಕೊಡುತ್ತಿದ್ದೇವೆ. ಅದರಲ್ಲಿ ನಮಗೆ ಕೇವಲ 40 ರಿಂದ 50 ಸಾವಿರ ಕೋಟಿ ರೂಪಾಯಿಗಳು ಮಾತ್ರ ವಾಪಸ್ಸು ಬರುತ್ತಿದೆ. ಅಂದರೇ, ನಾವು ಒಂದು ರೂಪಾಯಿಯಷ್ಟು ತೆರಿಗೆಯನ್ನು ಕಟ್ಟಿದರೆ ನಮಗೆ ಹದಿನೈದು ಪೈಸೆಗಳು ಮಾತ್ರ ವಾಪಸ್ಸು ಬರುತ್ತಿದೆ. ನಾವು ಕೊಡುವ ಒಂದು ರೂಪಾಯಿ ತೆರಿಗೆ ನಮಗೇ ವಾಪಸ್ಸು ಬರಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಕೇಂದ್ರ ಸರ್ಕಾರದವರು ನಮಗೆ ಹದಿನೈದು ಪೈಸೆಗೆ ಬದಲಾಗಿ ಇಪ್ಪತ್ತೈದು ಪೈಸೆಗಳನ್ನಾದರೂ ವಾಪಸ್ಸು ಕೊಟ್ಟರೇ ಜನರಿಗೇ ಎಷ್ಟೋ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಚಿಂತನೆ ಮಾಡಬೇಕೆಂದು ಈ ಸದನದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ರಾಜ್ಯಕ್ಕೆ ಮತ್ತೊಂದು ರೀತಿಯಲ್ಲಿ ಅನ್ಯಾಯ ಮಾಡುತ್ತಿದೆ. ಹಿಂದೆ 'divisible pool of taxes' ಎಂದು ಇತ್ತು. ಇಡೀ ದೇಶದಿಂದ ಸಂಗ್ರಹವಾಗಿರುವ ತೆರಿಗೆಯನ್ನು ರಾಜ್ಯಗಳಿಗೆ ಎಷ್ಟು ಹಂಚಿಕೆ ಮಾಡಬಹುದು ಎನ್ನುವುದೇ 'divisible pool of taxes' ಆಗಿದೆ. ಇದರಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಇಲ್ಲಿಯವರೆಗೆ ಯಾವುದೇ ಕೇಂದ್ರ ಸರ್ಕಾರಗಳು ಸೇರಿಸಿರಲಿಲ್ಲ. ಹಿಂದೆ ಸೆಸ್ ಮತ್ತು ಸರ್‌ಚಾರ್ಜ್ ಕೇವಲ ಶೇಕಡಾ 8.1ರಷ್ಟು ಇತ್ತು. ಈಗ total tax collection ನಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ನ ಪ್ರಮಾಣ ಶೇಕಡಾ 14ರಷ್ಟು ಹೆಚ್ಚಾಗಿದೆ. ಒಟ್ಟಾರೇ ತೆರಿಗೆ ಸಂಗ್ರಹದಲ್ಲಿ ರಾಜ್ಯಗಳಿಗೆ ಶೇಕಡಾ 14ರಷ್ಟು ಬರುತ್ತಲೇ ಇಲ್ಲ. ಉಳಿದಿರುವಂತಹ ಶೇಕಡಾ 86ರಲ್ಲಿ ಮಾತ್ರ ರಾಜ್ಯಗಳಿಗೆ ಹಂಚಿಕೆ ಮಾಡಬೇಕಾಗಿರುವಂತಹ ಪರಿಸ್ಥಿತಿ ಇದೆ. ಈ ಕಾರಣದಿಂದಾಗಿ ರಾಜ್ಯಕ್ಕೆ ಬರುವಂತಹ ಹಣದ ಪ್ರಮಾಣದಲ್ಲಿ ಮತ್ತಷ್ಟು ಕಡಿಮೆಯಾಗಿದೆ. ಇದರಲ್ಲಿಯೂ ಸಹ ನಮಗೆ ಅನ್ಯಾಯವಾಗುತ್ತಿದೆ. ಸೆಸ್ ಮತ್ತು ಸರ್‌ಚಾರ್ಜ್ ಸೇರಿಸದೇ ಇರುವುದರಿಂದ ನಮ್ಮ ರಾಜ್ಯಕ್ಕೆ ಸುಮಾರು 53,359 ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆಯೆಂದು ಅಂಕಿ ಅಂಶಗಳು ಹೇಳುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಬಹಳಷ್ಟು ಭರವಸೆಗಳನ್ನು ನೀಡಿತ್ತು. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಆಯವ್ಯಯದಲ್ಲಿ ಘೋಷಣೆ ಮಾಡಲಾಗಿತ್ತು. ಆದರೇ, ಅದಕ್ಕೆ ಬೇಕಾಗಿರುವಂತಹ ಹಣವನ್ನು ಕೊಟ್ಟಿಲ್ಲ. ಅದೇ ರೀತಿಯಲ್ಲಿ 15ನೇ ಹಣಕಾಸು ಆಯೋಗದಲ್ಲಿ ನಮಗೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕಾಗಿ ವಿಶೇಷ ನಿಧಿಯೆಂದು ಸುಮಾರು 5,495 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಘೋಷಣೆ ಮಾಡಿತ್ತು, ಅದನ್ನು ಸಹ ಕೊಡಲಿಲ್ಲ. ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಂಡಿದ್ದರೆ ನಮ್ಮ ಬೆಂಗಳೂರಿನ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಅದಕ್ಕೂ ಸಹ ಕೇಂದ್ರ ಸರ್ಕಾರ ಅನುಮೋದನೆಯನ್ನು ಕೊಟ್ಟಿಲ್ಲ. ಮಹದಾಯಿ ಯೋಜನೆ ನೆನಗುದಿಗೆ ಬಿದ್ದಿರುವ ವಿಚಾರ ಎಲ್ಲರಿಗೂ ಗೊತ್ತಿದೆ. ನಮ್ಮ ರಾಜ್ಯಕ್ಕೆ ಬರ ಪರಿಸ್ಥಿತಿ ತಲೆದೋರಿದಾಗ,

ನಾವು ಕೇಂದ್ರ ಸರ್ಕಾರದಿಂದ 13,000 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ಕೇಳಿದ್ದರೇ, ಕೇವಲ 3,454 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. (ಮುಂದು)

(035) 04.03.2025/3.40 ಪಿಕೆ-ಎಕೆ (ಸಭಾಪತಿಗಳ ಉಪಸ್ಥಿತಿ)

**ಡಾ: ಯತೀಂದ್ರ ಎಸ್ (ಮುಂದುವರೆದಿದೆ)**

ರೂ. 3,454 ಕೋಟಿಗಳನ್ನು ಪಡೆಯಬೇಕಾದರೆ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಬೇಕಾಯಿತು. ಕೇಂದ್ರ ಸರ್ಕಾರದಿಂದ ನಮಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಕೇಂದ್ರ ಸರ್ಕಾರದ ಅಸಹಕಾರದ ಮಧ್ಯೆಯೂ ಕೂಡ ನಮ್ಮ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನರಿಗೆ ನೇರವಾಗಿ ಹಣ ತಲುಪಿಸಿ ಅವರ ಜೀವನವನ್ನು ಸುಗಮಗೊಳಿಸುವಂತಹ ಕೆಲಸವನ್ನು ಮಾಡುತ್ತಿದೆ. ಕೇಂದ್ರ ಸರ್ಕಾರದಿಂದ ನಮಗೆ ಸೂಕ್ತ ಸಹಕಾರ ಸಿಕ್ಕಿದರೆ ನಾವು ರಾಜ್ಯದ ಅಭಿವೃದ್ಧಿಯನ್ನು ಇನ್ನೂ ಚೆನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರದ ಸಾಧನೆಯನ್ನು ಮತ್ತು ಮುಂಬರುವ ದಿನಗಳಲ್ಲಿ ವಿಷನ್ ಏನು ಎನ್ನುವುದನ್ನು ತಿಳಿಸಿಕೊಟ್ಟಿದ್ದಾರೆ. ಅದು ರಾಜ್ಯದ ಅಭಿವೃದ್ಧಿಗೆ, ಬೆಳವಣಿಗೆಗೆ ಪೂರಕವಾಗಿದೆ. ಸಮಾಜದ ಎಲ್ಲಾ ಬಡವರ್ಗದವರನ್ನು ಮೇಲೆತ್ತುವ ಕೆಲಸ ಮಾಡುವ ನಿಟ್ಟಿನಲ್ಲಿ ಸಹಕಾರಿಯಾಗಿದೆ. ಸಮಾಜದಲ್ಲಿ ಯಾರು ಶೋಷಣೆಗೆ ಒಳಗಾಗುತ್ತಾರೋ ಅಂಥವರಿಗೆ ಸಾಮಾಜಿಕ ನ್ಯಾಯ ಕೊಡುವಂತಹ ಒಂದು ವಿಷನ್ ಆ ಡಾಕ್ಯುಮೆಂಟ್‌ನಲ್ಲಿದೆ. ನಮ್ಮ ಸರ್ಕಾರ ದಲಿತರ ಜನಸಂಖ್ಯೆ ಏನು ಶೇಕಡ 24.1 ಇದೆ, ಅದಕ್ಕನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಾಗಿಡಬೇಕು ಎನ್ನುವ ಕಾನೂನನ್ನು ತಂದಿತು. ಇಂತಹ ಕ್ರಾಂತಿಕಾರಿ ಕಾನೂನನ್ನು ತಂದದ್ದು ನಮ್ಮ ಕಾಂಗ್ರೆಸ್ ಸರ್ಕಾರ. ತೆಲ್ಲಂಗಾಣ ರಾಜ್ಯ ಬಿಟ್ಟು ಬೇರೆ ಯಾವ ರಾಜ್ಯಗಳಲ್ಲೂ ಇಂತಹ ಒಂದು ಕಾನೂನು ಇಲ್ಲ. ಈ ಬಾರಿ ಕೂಡ ನಾವು ರೂ. 39,000 ಕೋಟಿಗೂ ಹೆಚ್ಚು ಹಣವನ್ನು ದಲಿತರಿಗೋಸ್ಕರ ಮೀಸಲಾಗಿಟ್ಟಿದ್ದೇವೆ. ಸಾಮಾಜಿಕ ನ್ಯಾಯ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ ಎಂಬುದನ್ನು ಸರ್ಕಾರದ ಡಾಕ್ಯುಮೆಂಟ್ ಹೇಳುತ್ತಿದೆ. ದಿನೇ ದಿನೇ ಅಲ್ಪಸಂಖ್ಯಾತರ ಮೇಲೆ ಅನ್ಯಾಯ, ಶೋಷಣೆ ಜಾಸ್ತಿಯಾಗುತ್ತಿದೆ. ಅವರ ಅಭಿವೃದ್ಧಿಯನ್ನು ಕಡೆಗಣನೆ ಮಾಡುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಆ ರೀತಿ ಮಾಡಿಲ್ಲ. ಅಲ್ಪಸಂಖ್ಯಾತರಿಗೂ ನಾವು ಬೆಂಬಲ ಕೊಡಬೇಕು. ಅವರನ್ನು ನ್ಯಾಯವಾಗಿ ಮೇಲೆತ್ತಲು ಏನು ಕೆಲಸ ಮಾಡಬೇಕೋ ಆ ಕೆಲಸ ಮಾಡುವಂಥದ್ದನ್ನು ನಾವು ಡಾಕ್ಯುಮೆಂಟ್‌ನಲ್ಲಿ ತಿಳಿಸಿಕೊಟ್ಟಿದ್ದೇವೆ. ನಮ್ಮ ಸರ್ಕಾರ ಎಲ್ಲಾ ವರ್ಗದ ಜನರಿಗೆ ಒಳ್ಳೆಯದು ಮಾಡುತ್ತಿದೆ. ಆ ಡಾಕ್ಯುಮೆಂಟ್ ಏನಿದೆ, ಅದು ನಿಜವಾಗಿಯೂ ಜನರಿಗೆ ಶಕ್ತಿ ತುಂಬುವಂತಹ

ಡಾಕ್ಯುಮೆಂಟ್ ಆಗಿದೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತಾ, ಅದರ ಪ್ರಸ್ತಾವನೆಯನ್ನು ಅನುಮೋದನೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

## 11. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ:** ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಸರ್ಕಾರ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕುರಿತು.

– – –

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಸರ್ಕಾರ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಗಳೆ,

. . .

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸುವ ಯೋಜನೆಗಳು ಜಾರಿಯಲ್ಲಿರುವುದಿಲ್ಲ.

ಆದರೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನಮ್ಮೂರ ಶಾಲೆ ನಮ್ಮೂರ ಯುವಜನರು ಯೋಜನೆ ಜಾರಿಯಲ್ಲಿದ್ದು, ಸದರಿ ಯೋಜನೆಯಡಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮಾನ್ಯತೆ ಪಡೆದಿರುವ ಕ್ರೀಡಾ ಸಂಸ್ಥೆಗಳು ಆಯೋಜಿಸುವ ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರುವ ಕ್ರೀಡಾಪಟುಗಳನ್ನು ಹೊಂದಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ ಪ್ರೋತ್ಸಾಹವಾಗಿ ರೂ.1.00 ಲಕ್ಷ ಅನುದಾನ ನೀಡಲಾಗುವುದು. ಈ ಪೈಕಿ ರೂ.10,000.00ಗಳ ಪ್ರೋತ್ಸಾಹಧನವನ್ನು ಶಾಲೆಯ ದೈಹಿಕ ಶಿಕ್ಷಕರಿಗೆ ಮತ್ತು ಅಗತ್ಯ ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ರೂ.90,000.00 ಗಳನ್ನು ಎಸ್.ಡಿ.ಎಂ.ಸಿ. ಖಾತೆಗೆ ಬಿಡುಗಡೆ ಮಾಡಲಾಗುತ್ತದೆ. ಅನುದಾನ ಲಭ್ಯತೆಯ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶಿಷ್ಟ ಜಾತಿ ಮತ್ತುಪರಿಶಿಷ್ಟ ಪಂಗಡದ ಉಪಯೋಜನೆಯಡಿ 2024-25ನೇ ಸಾಲಿನಲ್ಲಿ ಕರ್ನಾಟಕ ವಸತಿಶಿಕ್ಷಣ ಸಂಸ್ಥೆಯ (ಕ್ರೈಸ್) 159 ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಕ್ರೀಡೆಯ ಬಗ್ಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ದೈನಂದಿನ ಅಭ್ಯಾಸಗಳಿಗೆ ಅವಶ್ಯಕವಿರುವ ಕ್ರೀಡಾಸಾಮಗ್ರಿಗಳನ್ನು ಒಂದು ವಸತಿ ಶಾಲೆಗೆ ರೂ.84,010/- ಗಳಂತೆ ಒಟ್ಟು ರೂ.1,33,57,590/- ಗಳ ವೆಚ್ಚದಲ್ಲಿ ಕ್ರೀಡಾಸಾಮಗ್ರಿಗಳನ್ನು ಒದಗಿಸಲಾಗಿದೆ.

**ಶ್ರೀ ಎನ್.ಎಸ್.ಬೋಸರಾಜು:-** 2023-24, 2024-25ನೇ ಸಾಲಿನಲ್ಲಿ ಇದಕ್ಕೆ ಯಾವುದೇ ರೀತಿಯ ಬಜೆಟ್ ಪ್ರಾವಿಷನ್ ಮಾಡಿಲ್ಲ. ಆದರೆ ಮೊದಲು, ಕ್ರೀಡಾ ಕೂಟಗಳಲ್ಲಿ ಉತ್ತಮ ಸಾಧನೆ ತೋರುವ ಕ್ರೀಡಾಪಟುಗಳನ್ನು ಹೊಂದಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ ಪ್ರೋತ್ಸಾಹವಾಗಿ ರೂ. 1.00 ಲಕ್ಷ ಅನುದಾನ ಮತ್ತು ಇದರಲ್ಲಿ ರೂ. 10,000ಗಳ ಪ್ರೋತ್ಸಾಹ ಧನವನ್ನು ಶಾಲೆಯ ದೈಹಿಕ ಶಿಕ್ಷಕರಿಗೆ ನೀಡಲಾಗುತ್ತಿತ್ತು. ಅಗತ್ಯ ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ರೂ. 90,000ಗಳನ್ನು ಎಸ್.ಡಿ.ಎಂ.ಸಿ.ಖಾತೆಗೆ ಬಿಡುಗಡೆ ಮಾಡಲಾಗುತ್ತಿತ್ತು. ಆದರೆ ಕಳೆದ 2 ವರ್ಷಗಳಿಂದ ಈ ಪ್ರಾವಿಷನ್ ಮಾಡಿಲ್ಲ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ 2024-25ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ (ಕ್ರೈಸ್) 159 ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಕ್ರೀಡೆಯ ಬಗ್ಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ದೈನಂದಿನ ಅಭ್ಯಾಸಗಳಿಗೆ ಅವಶ್ಯಕವಿರುವ ಕ್ರೀಡಾ ಸಾಮಗ್ರಿಗಳನ್ನು ಒಂದು ವಸತಿ ಶಾಲೆಗೆ ರೂ. 84,010 ಗಳಂತೆ ಒಟ್ಟು ರೂ.1,33,57,590 ಗಳ ವೆಚ್ಚದಲ್ಲಿ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗಿದೆ.

ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದರೋ ಅದನ್ನು ಕಳೆದ 2 ವರ್ಷಗಳಿಂದ ಕೊಟ್ಟಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಕೊಡಬೇಕು ಅಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು:-** ಕೊಡಬೇಕು. ಈಗ ತಾವು ಹೇಳುತ್ತಿರುವ ವಿಷಯವನ್ನು ಗಮನಿಸಿ, ಸರ್ಕಾರದ ಗಮನಕ್ಕೆ ತಂದು ಮುಂದಿನ ವರ್ಷದಿಂದ ಇದನ್ನು ಕೊಡುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ತಾವು ಕ್ರೀಡಾಪಟುಗಳೂ ಹೌದು, ದೈಹಿಕ ಶಿಕ್ಷಕರಾಗಿ ಕೆಲಸವನ್ನೂ ಸಹ ಮಾಡಿದ್ದೀರಿ. 8 ಸಲ ಎಂಎಲ್‌ಸಿಯಾಗಿ ಅಗಾಧವಾದ ಅನುಭವವನ್ನು ಪಡೆದಿದ್ದೀರಿ. ಕಳೆದ ಬಾರಿ ಬಜೆಟ್ ಅಧಿವೇಶನದಲ್ಲಿ ಮಾತನಾಡುತ್ತಾ . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮೈಕ್‌ನ ಮುಂದೆ ನಿಂತು ಮಾತನಾಡಿ. ಹೆಚ್ಚು ಆಕಡೆ ಈಕಡೆ ತಿರುಗಿ ಮಾತನಾಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಮಾತನಾಡುವಾಗ ಎಲ್ಲಾ ಕಡೆ ನೋಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರು, ನಿನ್ನೆ ನಾನು ಸೂಟ್ ಹಾಕಿಕೊಂಡು ಬಂದಿದೆ; ಅನ್ಯಾಯ ಮಾಡಿದಿರಿ ಎಂದು ಹೇಳಿದರು. ಹಾಗಾಗಿ ಇವತ್ತು ಅವರನ್ನು ಪೀಠದಲ್ಲಿ ಕುಳ್ಳಿರಿಸಿ ಹೋಗಿದ್ದೆ.

(ಸದನದಲ್ಲಿ ನಗು)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಮಾನ್ಯ ಭೋಜೇಗೌಡರು ತಮ್ಮ ಸ್ಥಾನದಲ್ಲಿದ್ದರೆ ಹೆಚ್ಚು ಮಾತನಾಡುತ್ತಾರೆಂದು ತಾವು ಪೀಠದಲ್ಲಿ ಕೂರಿಸಿ ಹೋಗಿದ್ದೀರಿ ಎಂದು ಕಾಣಿಸುತ್ತದೆ.

(ಸದನದಲ್ಲಿ ನಗು)

**ಶ್ರೀ ಎಸ್.ಎಲ್.ಭೋಜೇಗೌಡ:-** ಆಯಿತು, ಏನೇನು ಹೇಳುತ್ತೀರೋ ಹೇಳಿ. ಲೋಕೋ ಭಿನ್ನ ರುಚಿಃ. Love, it comes in all colours. Whatever color you want to say, I will welcome and very gladly accept all your compliments. Thank you very much.

ಮಾನ್ಯ ಸಭಾಪತಿಗಳೆ, ನಾವು ಓದಬೇಕಾದರೆ ಈ ರೀತಿ ಕ್ರೀಡಾ ಸಾಮಗ್ರಿಗಳ ಸೌಕರ್ಯಗಳು ಇರುತ್ತಿರಲಿಲ್ಲ. ಮೇಷ್ಟ್ರು ಇದ್ದರೆ ಸ್ಕೂಲ್ ಇಲ್ಲ; ಸ್ಕೂಲ್ ಇದ್ದರೆ ಮೇಷ್ಟ್ರು ಇರುತ್ತಿರಲಿಲ್ಲ. ನಾವು ಹಳ್ಳಿಯಲ್ಲೇ ಹುಟ್ಟಿ ಕನ್ನಡ ಮಾಧ್ಯಮದಲ್ಲೇ ಕಲಿತೆವು. ಈ ಸದನದಲ್ಲಿರುವ ಕೆಲವು ಸದಸ್ಯರು ಕಾನ್ವೆಂಟ್‌ನಲ್ಲಿ ಓದಿರುವುದು ಬಿಟ್ಟು ಬಹುತೇಕ ಎಲ್ಲಾ ಸದಸ್ಯರು ಹಳ್ಳಿಗಾಡಿನಲ್ಲಿ, ಕನ್ನಡ ಮಾಧ್ಯಮದಲ್ಲೇ ಓದಿರುತ್ತಾರೆ. ಮಾನ್ಯ ಸಭಾಪತಿಗಳೆ, ಇವತ್ತಿನ ಪರಿಸ್ಥಿತಿ, ವಾತಾವರಣ ಭಿನ್ನವಾಗಿದೆ. ನಾವು ಶಾಲೆಗೆ ಹೋಗುತ್ತಿದ್ದಾಗ ಕ್ರೀಡೆಗೆಂದು ಏನು ಸಮಯ ಇರುತ್ತಿತ್ತೋ ಆ ಅವಧಿಯಲ್ಲಿ ಇಡೀ ಶಾಲೆಗೆ ಅನ್ವಯಿಸುವಂತೆ ಒಂದು ಬೆಲ್ ಹೊಡೆದ ತಕ್ಷಣ ಎಲ್ಲಾ ವಿದ್ಯಾರ್ಥಿಗಳು ತಮ್ಮ ತರಗತಿಗಳಿಂದ ಆಚೆ ಬಂದು ತಮಗೆ ಬೇಕಾದ ಕ್ರೀಡೆಗಳನ್ನು ಆಡುತ್ತಿದ್ದರು. ಆಗ ನಾವು ಶಾಲೆಯ ಆವರಣದಲ್ಲಿದ್ದ ಮರಗಳನ್ನು ಹತ್ತಿ ಮರ-ಕೋತಿ ಆಟ ಆಡುತ್ತಿದ್ದೆವು. ಆದರೆ ಇವತ್ತು ಶಾಲಾ ಆವರಣದಲ್ಲಿ ಮರಗಳು ನೋಡುವುದಕ್ಕೂ ಸಿಗುವುದಿಲ್ಲ. ಮಾವಿನ ಮರಕ್ಕೆ ಒಂದು ಬೋರ್ಡ್ ನೇತು ಹಾಕಿ ಅಲ್ಲಿ ನಮಗೆ ಕಲಿಸುತ್ತಿದ್ದರು. ನಾವು ಆಗ ಸಾಲ್ಚೆಂಡು ಆಡುತ್ತಿದ್ದೆವು. ದಷ್ಟಪುಷ್ಟವಾಗಿ ಇರುವವರು ಕಬಡ್ಡಿ ಆಟವನ್ನು ಆಡುತ್ತಿದ್ದರು. ಲಗೋರಿ, ಗೋಲಿ ಆಟ ಇಂಥದ್ದು ಗ್ರಾಮೀಣ ಕ್ರೀಡೆಗಳು ಎಂದು ಏನು ಹೇಳುತ್ತೇವೆಯೋ ಅವು ಇಂದು ನಶಿಸಿ ಹೋಗಿವೆ. ನಮ್ಮ ಮಕ್ಕಳಿಗಂತೂ ಈ ರೀತಿಯ ಕ್ರೀಡೆಗಳಿತ್ತು ಎನ್ನುವುದು ಗೊತ್ತೇ ಇರುವುದಿಲ್ಲ. ಯುಗಾದಿ, ದೀಪಾವಳಿ ಹಬ್ಬಗಳಲ್ಲಿ, ಒಂದು ಕಲ್ಲಿಗೆ ಹರಿದಿದ್ದ ಬಟ್ಟೆಗಳನ್ನು ಸುತ್ತಿ ಸುತ್ತಿ ಹೊಲಿದು ಒಂದು ಚೆಂಡಿನ ರೀತಿ ಮಾಡಿ ಆಡುತ್ತಿದ್ದೆವು. ಹೊಳೆ-ಕೆರೆ ಸಿಕ್ಕಿದರೆ ಅದರಲ್ಲಿ ಈಜಾಡುತ್ತಿದ್ದೆವು. ಈಗಿನಂತೆ ಸ್ವಿಮ್ಮಿಂಗ್ ಪೂಲ್‌ಗಳನ್ನು ನಾವು ನೋಡಲಿಲ್ಲ. ಇವತ್ತಿನ ಪರಿಸ್ಥಿತಿ ಬಹಳ ಭಿನ್ನವಾಗಿದೆ. ಒಂದು ಸಲ ಒಬ್ಬ ಸಚಿವರು ಇಲ್ಲಿ ನಿಂತು ಒಂದು ಮಾತನ್ನು ಹೇಳಿದರು. ನಾನು ಅವರ ಹೆಸರು ಹೇಳಬಯಸುವುದಿಲ್ಲ. ಅವರು, ಮುಂದಿನ ವರ್ಷ ನೂರು ಜನರನ್ನು ಒಲಂಪಿಕ್‌ಗೆ ಕಳುಹಿಸುವಂತಹ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದರು. ನಾವು ಇಲ್ಲಿ ಪ್ರ್ಯಾಕ್ಟಿಕಲ್ ಆಗಿ ಮಾತನಾಡಬೇಕು.

100 ಜನರನ್ನು ಒಲಂಪಿಕ್‌ಗೆ ಕಳುಹಿಸಬೇಕಾದರೆ what is your infrastructure? ಅಂತಹ ಮೂಲ ಸೌಲಭ್ಯಗಳದ್ದು ಅದನ್ನು ಕೊಟ್ಟಾಗ 100 ಜನ ಅಲ್ಲ, 1000 ಜನರನ್ನೂ ಕಳುಹಿಸಬಹುದು. ಅಂತಹ ಮಾನವ ಶಕ್ತಿ ನಮ್ಮಲ್ಲಿ ಇದೆ. ಪ್ರಪಂಚದಲ್ಲಿ ಇವತ್ತು ಅತ್ಯಧಿಕ ಮಾನವ ಸಂಪನ್ಮೂಲ ಇರುವುದು ನಮ್ಮ ದೇಶದಲ್ಲಿ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಂತಹ ಒಂದು ಮಾನವ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದೇ ಇರುವಂಥದ್ದು ವಿಷಾದಕರ ಎಂದು ಹೇಳಬೇಕಾಗುತ್ತದೆ. (ಮುಂದು)

(36) 04-03-2025 3.50 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ಇವತ್ತು ಕೂಡ ಎಚ್ಚೆತ್ತುಕೊಳ್ಳಬೇಕಾಗುತ್ತದೆ. ನಾವು ಇದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕಾದ ಅನಿವಾರ್ಯ ಪರಿಸ್ಥಿತಿ ನಮ್ಮ ಮುಂದೆ ನಿಂತಿದೆ. ಯಾವುದಾದರು ಕ್ರೀಡೆ ನಡೆಯುತ್ತಿದ್ದರೆ ಅದರಲ್ಲಿ ಚಾಂಪಿಯನ್‌ಶಿಪ್ ಬಗ್ಗೆ, ಗೋಲ್ಡ್ ಮೆಡಲ್ ಬಗ್ಗೆ ನಾವು ಕುಳಿತುಕೊಂಡು ಕಣ್ಣರಳಿಸಿಕೊಂಡು ನೋಡುತ್ತಿರುತ್ತೇವೆ. ಅವರು ಸೋತಾಗ ನಮಗೆ ದುಃಖವಾಗುತ್ತದೆ. ದುಃಖವಾದಾಗ ಹಿಂದೆ ಅವರ effort ಏನೇನು ಇದೆ ಎನ್ನುವ ವಿಚಾರದಲ್ಲಿ ಒಬ್ಬರು ಕೂಡ ಯೋಚನೆ ಮಾಡುವುದಿಲ್ಲ. ಆ effort ಮಾಡಬೇಕಾದರೆ what is our contribution? ಸರ್ಕಾರದ ಕಾಂಟ್ರಿಬ್ಯೂಷನ್ ಏನಿದೆ? ನಮಗೆ ಕರ್ತವ್ಯ ಇರುವುದಿಲ್ಲವೇ? ಇವತ್ತು ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ. ನಮ್ಮಲ್ಲಿ ಒಂದೂವರೆ ಸಾವಿರ ಸರ್ಕಾರಿ ಜೂನಿಯರ್ ಕಾಲೇಜುಗಳಿವೆ. Let me show a single Physical Education Teacher? ಯಾವುದಾದರೂ ಒಂದು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಎಂಬುದನ್ನು ತೋರಿಸಿ ನೋಡೋಣ? ಸರ್ಕಾರಿ ಪಿ.ಯು. ಕಾಲೇಜುಗಳಲ್ಲಿ ಒಬ್ಬರೇ ಒಬ್ಬ ಸರ್ಕಾರದಿಂದ ನೇಮಕಾತಿ ಹೊಂದಿರುವ ದೈಹಿಕ ಶಿಕ್ಷಕರು ಮೊನ್ನೆ ರಾಮನಗರದಲ್ಲಿದ್ದರು, ಅವರು ಮೊನ್ನೆ ನಿವೃತ್ತಿಯಾದರು. ಒಂದೂವರೆ ಸಾವಿರ ಜೂನಿಯರ್ ಕಾಲೇಜುಗಳಲ್ಲಿ ಒಬ್ಬ ದೈಹಿಕ ಶಿಕ್ಷಕರು ಇಲ್ಲವೆಂದರೆ how can we expect about sports? ನಾವು ಕ್ರೀಡೆ ಬಗ್ಗೆ ಹೇಳುವುದಕ್ಕೆ ಏನಿದೆ? ಇವತ್ತು ನೇಮಕಾತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಆಳ್ವಾಸ್ ಸಂಸ್ಥೆ ಒಂದರಲ್ಲೇ ಸುಮಾರು 185 ಜನರು ದೈಹಿಕ ಶಿಕ್ಷಕರುಗಳಿದ್ದಾರೆ. Expert ಕಾಲೇಜುಗಳಲ್ಲಿ, EXCEL, Excellent ಕಾಲೇಜುಗಳಲ್ಲಿ, ಧರ್ಮಸ್ಥಳದ ಕಾಲೇಜುಗಳಲ್ಲಿ 120 ಜನರು ದೈಹಿಕ ಶಿಕ್ಷರುಗಳಿದ್ದಾರೆ. ಎಲ್ಲರೂ ಅಂತಹ ಶಾಲೆಗಳಿಗೆ ನಮ್ಮ ಹಳ್ಳಿ ಮಕ್ಕಳನ್ನು ಸೇರಿಸುವುದಕ್ಕಾಗುತ್ತದೆಯೇ? ದೈಹಿಕ ಶಿಕ್ಷಣ ಶಿಕ್ಷಣವಲ್ಲವೇ? It is a part of education ಅಲ್ಲವೇ?

**ಸಭಾಪತಿಯವರು:-** ಇಡೀ ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಕೇವಲ 20 ಮಂಜೂರಾದ ಹುದ್ದೆಗಳಿವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಪರಿಸ್ಥಿತಿಯಲ್ಲಿ ನಾವು ಅದರ ಬಗ್ಗೆ ಆಲೋಚನೆ ಮಾಡುತ್ತಿಲ್ಲ. ಸರ್ಕಾರ ಮಾತ್ರವಲ್ಲ, ಇದರಲ್ಲಿ ನಮ್ಮೆಲ್ಲರ ಪಾತ್ರ ಸೇರಿದೆ. ಈ ಪರಿಸ್ಥಿತಿಯಲ್ಲಿ ನಾವು ಮಾತನಾಡುವುದಕ್ಕೆ ಏನು ಹಕ್ಕು ಇದೆ? ಹಳ್ಳಿಗಾಡಿನ ಮಕ್ಕಳಲ್ಲಿ ಪ್ರತಿಭೆ ಎನ್ನುವಂಥದ್ದು it is not the property of anybody. ಇದು ಯಾರ ಸ್ವತ್ತು ಅಲ್ಲ. ಮಕ್ಕಳಲ್ಲಿ ಅವರದ್ದೇ ಆದಂತಹ ಪ್ರತಿಭೆ it is inbuilt. ಪ್ರತಿಭೆ ಎನ್ನುವಂಥದ್ದು ಅವರ ಜೊತೆಯಲ್ಲೇ ಹುಟ್ಟುತ್ತದೆ. ಅದನ್ನು ಆಚೆ ತೆಗೆಯಬೇಕಲ್ಲವೇ? ಆಚೆ ತೆಗೆಯಬೇಕಾದಂತಹ ಕೆಲಸ ಮನೆ ಮೊದಲ ಪಾಠ ಶಾಲೆ ತಂದೆ-ತಾಯಿಗಳದ್ದು ಇದೆ. ನಂತರ ಶಾಲೆಯಲ್ಲಿ ಅವರಿಗೆ ಯಾವುದರಲ್ಲಿ ಆಸಕ್ತಿ ಇದೆ ಎಂದು ಗುರುತು ಮಾಡಿ ಅದರಲ್ಲಿ ಮುಂದುವರೆಯುವುದಕ್ಕೆ ಅವಕಾಶ ಒದಗಿಸಬೇಕು. ಅದು ಸಂಗೀತ, ಕಲೆ, ಸಾಹಿತ್ಯ, ಕ್ರೀಡೆ, ಓದುವುದರಲ್ಲಿ ಆಸಕ್ತಿ ಇರಬಹುದು, ಅಂತಹ ಪ್ರತಿಭೆಯನ್ನು ಮಕ್ಕಳಲ್ಲಿ ಹುಡುಕಿ ಕಳುಹಿಸುವಂತಹ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳದಿದ್ದರೆ how can we expect quality education? SEP and NEP ಬಗ್ಗೆ ಮಾತನಾಡುತ್ತೇವೆ. What is SEP and NEP? Just because mere naming of NEP and SEP can we get quality education? What is there exactly inside the textbook, that is the most important. ನಾನು always one-word ಮುಂದುವರೆದು ಮಾತನಾಡುತ್ತೇನೆ. What business we have? What business… ಒಬ್ಬ ಶಿಕ್ಷಣ ಮಂತ್ರಿಯಾಗಿ ಅವರಿಗೆ ಪಠ್ಯ ಪುಸ್ತಕದಲ್ಲಿ ತಲೆ ಹಾಕುವುದಕ್ಕೆ ಏನು ಹಕ್ಕು ಇದೆ? ನನಗೆ ಏನು ಬಿಸನೆಸ್ ಇದೆ? ಸಾವಿರಾರು ಶಿಕ್ಷಣ ತಜ್ಞರು ಈ ನಾಡಿನಲ್ಲಿದ್ದಾರೆ. ಅಂತಹ ಉತ್ತಮವಾದ ಶಿಕ್ಷಣವನ್ನು ಪಠ್ಯ ಪುಸ್ತಕಗಳಲ್ಲಿ ತಯಾರು ಮಾಡಿ, ಪಠ್ಯ ಪುಸ್ತಕಗಳನ್ನು ನಮಗೆ ಕೊಟ್ಟು ನಮ್ಮ ಮಕ್ಕಳಿಗೆ ಯಾವ ರೀತಿಯ ಪಠ್ಯ ಪುಸ್ತಕಗಳನ್ನು ಕೊಟ್ಟರೆ ಆ ಪಠ್ಯ ಪುಸ್ತಕದ ಅಡಿಯಲ್ಲಿ ಅವರು ಉತ್ತಮವಾದ ಶಿಕ್ಷಣವನ್ನು ಪಡೆದು ನಾಡು ನುಡಿಗೆ ಹೆಸರಾಗುವಂತಹ, ಮನೆಗೆ ಬೆಳಕಾಗುವಂತಹ, ನಾಡಿಗೆ ಬೆಳಕಾಗುವಂತಹ ಮಕ್ಕಳನ್ನು ತಯಾರು ಮಾಡುವುದಕ್ಕಾಗುವುದಿಲ್ಲವೇ? ಅದಕ್ಕೆ ಶ್ರೀ ಗೋಪಾಲಕೃಷ್ಣ ಅಡಿಗರು "ಹೊಸ ನೆತ್ತರು ಕುಕ್ಕಿ ಹಾರಿ ಹೋಗುವ ಮುನ್ನ, ಹರಿಯದೀ ಮಾಂತ್ರಿಕನ ಮಾಟ ಮುಸುಳುವ ಮುನ್ನ, ಉತ್ಸಾಹ ಸಾಹಸದಿ ಉತ್ತುಂಗ ವೀಚಿಗಳ ಶುದ್ಧ ಸಾಗರವು ಬತ್ತಿ ಹೋಗುವ ಮುನ್ನ ಕಟ್ಟುವೆವು ನಾವು ಹೊಸ ನಾಡೊಂದನ್ನು ರಸದ ಬೀಡೊಂದನ್ನು" ಎಂದು ಹೇಳಿದ್ದಾರೆ. ಅಂತಹ ನಾಡನ್ನು ಕಟ್ಟುವಂತಹ ಮಕ್ಕಳನ್ನು ತಯಾರು ಮಾಡುವಂತಹ ಕೆಲಸವನ್ನು ನಾವು ಮಾಡಬೇಕು. ಆದ್ದರಿಂದ ಮಾನ್ಯ ಸಭಾನಾಯಕರೇ, ನಾನು ಪದೇಪದೇ ಹೇಳುತ್ತೇನೆ. ನಾನು ಬೆರಳು ಮಾಡಿ ಹೇಳುತ್ತಿಲ್ಲ. ಸರ್ಕಾರಕ್ಕೆ ಬೆರಳು ಮಾಡಿ ಹೇಳುತ್ತಿಲ್ಲ. ಆ ಕೆಲಸ ಆಗಬೇಕಲ್ಲವೇ? ನಾವು ಹೋಬಳಿ ಮಟ್ಟದ ಕ್ರೀಡಾಕೂಟ ನಡೆಸುತ್ತೇವೆ. ಪ್ರತಿಭಾ ಕಾರಂಜಿಯನ್ನು ನಡೆಸುತ್ತೇವೆ. ಇವತ್ತು ನಾವು ಶ್ರೀ ಗೋವಿಂದೇಗೌಡರವರನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಪ್ರತಿಭಾ ಕಾರಂಜಿ ಎನ್ನುವಂತಹ ಕಾರ್ಯಕ್ರಮವನ್ನು ಕೊಟ್ಟಂಥ ಶಿಕ್ಷಣ ಸಚಿವರು ನಮ್ಮ ಶ್ರೀ ಗೋವಿಂದೇಗೌಡರವರು. ಅವರು ನಮ್ಮ ನಾಡಿನವರು. ಅವರನ್ನು ಮಲೆನಾಡ ಗಾಂಧಿ ಎಂದು

ಕರೆಯುತ್ತೇವೆ. ಆ ಪ್ರತಿಭಾ ಕಾರಂಜಿಯ ಮುಖಾಂತರ ರಾಷ್ಟ್ರ ಮಟ್ಟಕ್ಕೆ ಅಂತರರಾಷ್ಟ್ರೀಯ ಮಟ್ಟಕ್ಕೆ ಮಕ್ಕಳನ್ನು ಕಳುಹಿಸಿ ಕೊಟ್ಟಿದ್ದೇವೆ. ಅದೇ ರೀತಿ ಹೋಬಳಿ ಮಟ್ಟದಲ್ಲಿ ಕ್ರೀಡಾಕೂಟ ನಡೆಯುತ್ತದೆ. ಅದಕ್ಕೆ ನಾವು 5,000 ರೂಪಾಯಿಗಳನ್ನು ಕೊಡುತ್ತೇವೆ. ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ 10,000 ರೂಪಾಯಿಗಳನ್ನು ಕೊಡುತ್ತೇವೆ. ಶ್ರೀ ಪುಟ್ಟಣ್ಣನವರು ಬಹಳಷ್ಟು ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ. ಇಲ್ಲಿ ಇರುವಂತಹ ಎಂ.ಎಲ್.ಎ.ಗಳು, ಎಲ್ಲಾ ಶಾಸಕರುಗಳು ಕೊಟ್ಟಿದ್ದಾರೆ. ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ 25,000 ರೂಪಾಯಿಗಳನ್ನು ಕೊಡುತ್ತೇವೆ. ಸಾವಿರಾರು ಮಕ್ಕಳು ಅವತ್ತು ಬಂದಿರುತ್ತಾರೆ, ನೂರಾರು ಶಿಕ್ಷಕರುಗಳು ಬಂದಿರುತ್ತಾರೆ, ಅವರು ಶಾಸಕರುಗಳನ್ನು ಅಥವಾ ಬೇರೆಯವರನ್ನು ಹಿಡಿದು ಸಾವಿರಾರು ಮಕ್ಕಳಿಗೆ ಊಟದ ವ್ಯವಸ್ಥೆಯನ್ನು ಮಾಡುತ್ತಾರೆ. ಕ್ರೀಡಾಕೂಟವನ್ನು ಹಳ್ಳಿಯ ಶಾಲೆಯವರು ಬಹಳ ಖುಷಿಯಿಂದ ಮಾಡುತ್ತಾರೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ಸರ್ಕಾರಕ್ಕೆ ನಿಮ್ಮ ಸಲಹೆಯನ್ನು ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಕಷ್ಟವನ್ನು ನಾನು ಹೇಳುತ್ತಿದ್ದೇನೆ. ಆ ಕಷ್ಟವನ್ನು ಕೇಳಿದರೆ ಹಾಗೆಯೇ ಸಲಹೆ ಸಿಕ್ಕಿಬಿಡುತ್ತದೆ. ಹಾಗಾಗಿ ಇವತ್ತು ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ, ಇವತ್ತು ಇಂತಹ ಪರಿಸ್ಥಿತಿಯಲ್ಲಿ ಆದಷ್ಟು ಬೇಗ ದೈಹಿಕ ಶಿಕ್ಷಕರನ್ನು ನೇಮಕ ಮಾಡುವ ವಿಚಾರದಲ್ಲಿ ಸರ್ಕಾರ ಮನಸ್ಸು ಮಾಡಬೇಕು. ಮಂಜೂರಾದ ಹುದ್ದೆಗಳು ಇರಬಹುದು ಅಥವಾ ಸಂಖ್ಯೆಗೆ ಅನುಗುಣವಾಗಿ ಇರಬಹುದು. ಮತ್ತೊಂದು ಬಹಳ ದುಃಖದ ವಿಚಾರವೇನೆಂದರೆ, ಮಾನ್ಯ ಪುಟ್ಟಣ್ಣನವರೇ, ಅದನ್ನು ತೆಗೆದಿದ್ದಾರೆಯೋ ಏನೋ ಗೊತ್ತಿಲ್ಲ. 300 ಮಕ್ಕಳಿದ್ದರೆ ಒಬ್ಬ ದೈಹಿಕ ಶಿಕ್ಷಕರನ್ನು ಕೊಡುತ್ತೇವೆ ಎನ್ನುವಂಥದ್ದು. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಲ್ಲ. Physical Education Teacher must be there and Physical Education is also a part of education. ಆ ಕೆಲಸ ಆಗಬೇಕು. 7ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಕೂಟ, ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಅತೀ ಹೆಚ್ಚಿನ ಹಣ ಕೊಡುವಂತಹ ವ್ಯವಸ್ಥೆ ಆಗಬೇಕು. ಇದರ ಜೊತೆಗೆ ಪ್ರತಿಭಾ ಕಾರಂಜಿಯನ್ನು ಸೇರಿಸಿಬಿಡಿ. ಆದಷ್ಟು ಬೇಗ ನಮ್ಮ ಮಕ್ಕಳಿಗೆ ಇಂತಹ ಸಲಕರಣೆಗಳನ್ನು ಕೊಡುವುದರ ಮುಖಾಂತರ, ತಾಲ್ಲೂಕು ಮಟ್ಟದಲ್ಲಿ ಬಹಳಷ್ಟು ಕ್ರೀಡಾಕೂಟಗಳು ನಡೆಯುತ್ತವೆ. ಹಳ್ಳಿ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸುತ್ತಾರೆ. ಅವರಿಗೆ ಕಾಲಿಗೆ ಚಪ್ಪಲಿ ಇರುವುದಿಲ್ಲ, ಬೇರೆ ಶಾಲೆಯ ಕಾನ್ವೆಂಟ್ ಮಕ್ಕಳು ಭಾಗವಹಿಸಿರುತ್ತಾರೆ, ಅವರೆಲ್ಲಾ ಒಳ್ಳೆಯ ಸಮವಸ್ತ್ರ, ಟ್ರ್ಯಾಕ್‌ಸೂಟ್ ಮತ್ತು ಶೂ ಗಳನ್ನು ಹಾಕಿಕೊಂಡು ಬಂದಿರುತ್ತಾರೆ. ಇವರು ಬರೀ ಕಾಲಿನಲ್ಲಿ ಬಂದಿರುತ್ತಾರೆ. ನಿಜವಾಗಿಯೂ ಅದನ್ನು ನೋಡಿ ಬಹಳ ಬೇಜರಾಗುತ್ತದೆ. ದಾನಿಗಳು, ಬೇರೆಯವರ ಸಹಾಯದಿಂದ ಅಂಥದ್ದನ್ನು ನೀಗಿಸಿರುವುದುಂಟು. ಸರ್ಕಾರಿ ಶಾಲೆಯ ಹಳ್ಳಿಗಾಡಿನ ಮಕ್ಕಳು ಯಾರು ಪ್ರತಿಭೆಯಿಂದ ಹಿಂದೆ ಇಲ್ಲ. ಆದರೆ ಅವಕಾಶಗಳಿಂದ ವಂಚಿತರಾಗಿ ಅವರಿಗೆ ಸ್ವಲ್ಪ ತೊಂದರೆಯಾಗಿರುವ

ಸಂದರ್ಭದಲ್ಲಿ ಅವಕಾಶ ವಂಚಿತರಾಗದ ರೀತಿಯಲ್ಲಿ ಸರ್ಕಾರ ಅವರ ಯೋಗಕ್ಷೇಮವನ್ನು ನೋಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ಇದರ ಬಗ್ಗೆ ಸರ್ಕಾರದ ಗಮನ ಸೆಳೆಯುವಂತಹ ಕೆಲಸ ಮಾಡಿದ್ದೇನೆ.

**ಸಭಾಪತಿಯವರು:–** ಶ್ರೀ ಸಂಕನೂರರವರೇ, ಸಂಕ್ಷಿಪ್ತವಾಗಿ ಮಾತನಾಡಿ. ಯಾರು ನೋಟೀಸ್ ಕೊಟ್ಟಿರುತ್ತಾರೆ ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಅನಿವಾರ್ಯವಾಗಿ ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ಗಮನ ಸೆಳೆಯುವ ಸೂಚನೆಯಲ್ಲಿ ಈಗಾಗಲೇ ಅವರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಭಾನಾಯಕರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ಉತ್ತರದಲ್ಲಿ ಏನು ಕೊಟ್ಟಿದ್ದಾರೆಂದರೆ, ಯಾವ ಸರ್ಕಾರಿ ಶಾಲೆಗಳು ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಸಾಧನೆ ಮಾಡುತ್ತಾರೆ ಅವರಿಗೆ ಮಾತ್ರ ಒಂದು ಲಕ್ಷ ರೂಪಾಯಿಗಳ ಅನುದಾನ ನೀಡಲಾಗುವುದು, ಈ ಪೈಕಿ ಹತ್ತು ಸಾವಿರ ರೂಪಾಯಿಗಳ ಪ್ರೋತ್ಸಾಹಧನವನ್ನು ಶಾಲೆಯ ದೈಹಿಕ ಶಿಕ್ಷಕರಿಗೆ ಮತ್ತು ಅಗತ್ಯ ಕ್ರೀಡಾ ಸಾಮಾಗ್ರಿಗಳ ಖರೀದಿಗಾಗಿ ೯೦,೦೦೦ ರೂಪಾಯಿಗಳನ್ನು ಆ ಶಾಲೆಗೆ ಕೊಡುತ್ತೇವೆಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಸಾಧನೆ ಮಾಡಿರುವ ಶಾಲೆಗಳಿಗಷ್ಟೇ ಕೊಟ್ಟರೆ ಉಳಿದ ಶಾಲೆಗಳ ಪರಿಸ್ಥಿತಿ ಏನು? ಶಿಕ್ಷಣ ಇಲಾಖೆಯೂ ಕೊಡುವುದಿಲ್ಲ, ಕ್ರೀಡಾ ಇಲಾಖೆಯೂ ಕೊಡುವುದಿಲ್ಲ. ಆ ಶಾಲೆಗಳಲ್ಲಿ ಕ್ರೀಡಾ ಚಟುವಟಿಕೆಗಳು ಹೇಗೆ ನಡೆಯಬೇಕು? ಆ ಶಾಲೆಗಳು ಸಾಧನೆ ಹೇಗೆ ಮಾಡಬೇಕು? ಇದು ಅಸಾಧ್ಯವಾದಂತಹ ಮಾತು. ಹೀಗಾಗಿ ಕ್ರೀಡಾ ಇಲಾಖೆ ಮತ್ತು ಶಿಕ್ಷಣ ಇಲಾಖೆ, ಇವರಿಬ್ಬರ ಜವಾಬ್ದಾರಿಯಾಗಿದೆ. ಅದು ಹೇಗೆ ಹಂಚಿಕೊಳ್ಳುತ್ತಾರೆಯೋ ಗೊತ್ತಿಲ್ಲ. ಪ್ರತಿಯೊಂದು ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಪಿ.ಯು ಕಾಲೇಜು ಇರಬಹುದು. ಎಲ್ಲಾ ಹಂತಗಳಲ್ಲೂ ಕೂಡ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸುವುದು ಅವರ ಕರ್ತವ್ಯವಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಆ ಕೆಲಸ ಆಗಬೇಕು, ಆ ಕೆಲಸ ಆಗುತ್ತಿಲ್ಲ. ಈಗ ವಿದ್ಯಾರ್ಥಿಗಳಿಂದ ಎರಡು ರೀತಿಯಲ್ಲಿ ಶುಲ್ಕವನ್ನು ಸಂಗ್ರಹ ಮಾಡುತ್ತಾರೆ. ಒಂದನೆಯದು, ಕ್ರೀಡಾ ವಂತಿಕೆ ಎಂದು ಸಂಗ್ರಹ ಮಾಡುತ್ತಾರೆ. ವಿದ್ಯಾರ್ಥಿಗಳಿಂದ 25 ರೂಪಾಯಿಗಳ ಕ್ರೀಡಾ ವಂತಿಕೆಯನ್ನು ಸಂಗ್ರಹ ಮಾಡುತ್ತಾರೆ. ಅದನ್ನು ಸಂಪೂರ್ಣವಾಗಿ ಸರ್ಕಾರಕ್ಕೆ ಭರಿಸುತ್ತಾರೆ. ಅದು ಉಳಿಯುವುದಿಲ್ಲ.

(ಮುಂದು)

(37) 04/03/2025 4:00 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):–**

ಕ್ರೀಡಾ ನಿಧಿ ಎಂಬುದಾಗಿ ಮತ್ತೊಂದು ನಿಧಿಯನ್ನು ಸಂಗ್ರಹಿಸುತ್ತಾರೆ, ಇದರಲ್ಲಿ ಸ್ವಲ್ಪ ಮೊತ್ತವು ಉಳಿಯುತ್ತದೆ; ಆದರೆ ಇದನ್ನು ಸರ್ಕಾರಕ್ಕೆ ಜಮೆ ಮಾಡಬೇಕು. ಸಂಗ್ರಹಣೆಗೊಂಡ ಕ್ರೀಡಾ ನಿಧಿಯಲ್ಲಿ ಉಳಿಯುವ ಮೊತ್ತದಲ್ಲಿ ತಾಲ್ಲೂಕು,

ಜಿಲ್ಲಾ ಮತ್ತು ರಾಜ್ಯ ಮಟ್ಟಗಳ ಕ್ರೀಡಾಕೂಟಕ್ಕೆ ಆಯ್ಕೆಗೊಳ್ಳುವ ಮಕ್ಕಳ ಟಿ.ಎ. ಮತ್ತು ಡಿ.ಎ. ಗಳಿಗೆ ಈ ಮೊತ್ತವು ಖರ್ಚಾಗುತ್ತದೆ. ಅಂದರೆ ಒಟ್ಟಾರೆಯಾಗಿ ಹೇಳುವುದಾದರೆ, ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಸರ್ಕಾರಿ ಶಾಲೆಗಳಲ್ಲಿ ಒಂದು ಪೈಸೆಯೂ ಸಹ ಉಳಿಯುವುದಿಲ್ಲ. ಹೀಗಾಗಿ ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಈ ವಾರದಲ್ಲಿ ಮಂಡನೆ ಮಾಡಲಾಗುವ ಆಯವ್ಯಯದಲ್ಲಿ, ಪ್ರತಿಯೊಂದು ಸರ್ಕಾರಿ ಶಾಲೆಗಳಿಗೆ ಅದು ಪ್ರಾಥಮಿಕ, ಪ್ರೌಢ ಅಥವಾ ಪದವಿ ಪೂರ್ವ ಯಾವುದೇ ಇರಬಹುದು, ಎಲ್ಲರಿಗೂ ಕ್ರೀಡಾ ಸಾಮಗ್ರಿಗಳನ್ನು ಒದಗಿಸುವ ಬಗ್ಗೆ ಆಯವ್ಯಯದಲ್ಲಿ ವಿಶೇಷವಾದ ಅನುದಾನವನ್ನು ಮೀಸಲಿಡಬೇಕೆಂದು ನಾನು ವಿನಂತಿಸುತ್ತೇನೆ.

ಇವತ್ತಿನ ದಿವಸ ನಮ್ಮ ಮಕ್ಕಳು ಕ್ರೀಡೆಯಲ್ಲಿ ಸಾಧನೆ ಮಾಡಬೇಕಾದರೆ, ಅವರಿಗೆ ತರಬೇತಿಗಳನ್ನು ನೀಡಬೇಕು. ಕಳೆದ 15 ವರ್ಷಗಳ ಹಿಂದೆ ಅಂದರೆ 2010 ನೇ ಇಸ್ವಿಯಲ್ಲಿ ದೈಹಿಕ ಶಿಕ್ಷಕರ ನೇಮಕಾತಿಯಾಗಿದ್ದು. ಈ ನೇಮಕಾತಿಯಾಗಿ ಈಗ್ಗೆ 15 ವರ್ಷಗಳಾದವು. ಯಾವುದೇ ಶಾಲೆಗಳಿಗೆ ದೈಹಿಕ ಶಿಕ್ಷಕರ ನೇಮಕಾತಿಯಾಗಿಲ್ಲ. ಅದು ಪ್ರಾಥಮಿಕ, ಪ್ರೌಢ ಅಥವಾ ಪದವಿ ಪೂರ್ವಗಳಿರಬಹುದು. ಪದವಿ ಪೂರ್ವ ಕಾಲೇಜುಗಳಲ್ಲಿ ಕೇವಲ ಒಂದೇ ಒಂದು ದೈಹಿಕ ಶಿಕ್ಷಕರ ನೇಮಕಾತಿಯಾಗಿಲ್ಲ. ಈಗಾಗಲೇ ಕಳೆದ ಐದು ವರ್ಷಗಳಿಂದ..., ಇವತ್ತಿನ ದಿವಸ ಆರ್ಥಿಕ ಇಲಾಖೆಯವರು 20 ಹುದ್ದೆಗಳನ್ನು ಮಂಜೂರು ಮಾಡಿದ್ದಾರೆ. ದೈಹಿಕ ಶಿಕ್ಷಕರ ನೇಮಕಾತಿಯನ್ನು ಮಾಡುತ್ತಿಲ್ಲ. ಈ ಬಗ್ಗೆ ನಾನು ಸದನದಲ್ಲಿ ಪ್ರಶ್ನೆ ಮಾಡಿದ್ದೇನೆ. ಹೀಗಾಗಿ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿಯಾಗಬೇಕು. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಲ್.ಭೋಜೇಗೌಡ ರವರು ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದಂತೆ, ನಾವುಗಳೆಲ್ಲರೂ 10-15 ದಿನಗಳವರೆಗೆ ಹೋರಾಟವನ್ನು ಮಾಡಿ, ಹಲವಾರು ಸಮಸ್ಯೆಗಳ ಕುರಿತಾಗಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೊಂದಿಗೆ ಎರಡು ದಿನಗಳ ಸಭೆಯನ್ನು ಮಾಡಿದ್ದೇವೆ. ಪದವಿ ಪೂರ್ವ ಕಾಲೇಜುಗಳಲ್ಲಿ 240 ದೈಹಿಕ ಶಿಕ್ಷಕರು ಇರಬೇಕು ಎಂಬುದಾಗಿ ಈ ಹಿಂದೆ ನಿಯಮ ಇತ್ತು. 240 ದೈಹಿಕ ಶಿಕ್ಷಕರು ಎಂದರೆ, ಅದು ಬಹಳವಾಗುತ್ತದೆ ಎಂದು ಹೇಳಿ, ಅದನ್ನು 120 ದೈಹಿಕ ಶಿಕ್ಷಕರು ಎಂಬುದಾಗಿ ಸಂಖ್ಯೆಯನ್ನು ಇಳಿಸಿದರು. ಆದರೆ, ಇವತ್ತಿನ ದಿವಸ ಆರ್ಥಿಕ ಇಲಾಖೆಯವರು ಪ್ರತಿ 500 ಮಕ್ಕಳಿಗೆ ಒಬ್ಬ ದೈಹಿಕ ಶಿಕ್ಷಕರು ಎಂಬುದಾಗಿ ಹೇಳಿದ್ದಾರೆ. ಇದರರ್ಥ ಮುಖ್ಯಮಂತ್ರಿಗಳಿಗೆ ಗೌರವವಿಲ್ಲವೇ? ಅವರು ತೆಗೆದುಕೊಂಡ ನಿರ್ಣಯಗಳಿಗೆ ಕಿಮ್ಮತ್ತು ಇಲ್ಲವೇ ಎಂದು ನಾನು ಕೇಳಬಯಸುತ್ತೇನೆ. 500 ವಿದ್ಯಾರ್ಥಿಗಳಿಗೆ ಒಬ್ಬ ದೈಹಿಕ ಶಿಕ್ಷಕರು ಇರಬೇಕು ಎಂದು ಆರ್ಥಿಕ ಇಲಾಖೆಯವರು ಟಿಪ್ಪಣಿಯನ್ನು ತಯಾರಿಸುತ್ತಾರೆ. ಸರ್ಕಾರವು ದಯಮಾಡಿ ಈ ವಿಷಯವನ್ನು ಇತ್ಯರ್ಥಪಡಿಸಬೇಕು. ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ತೆಗೆದುಕೊಂಡ ನಿರ್ಣಯದಂತೆ, ಪದವಿ ಪೂರ್ವ

ಕಾಲೇಜಿನಲ್ಲಿ ಪ್ರತಿ 120 ವಿದ್ಯಾರ್ಥಿಗಳಿಗೆ ಒಬ್ಬ ದೈಹಿಕ ಶಿಕ್ಷಕರ ನೇಮಕಾತಿಯಾಗಬೇಕು. ಇದನ್ನು ಸರಿಯಾಗಿ ತಿದ್ದುಪಡಿ ಮಾಡಬೇಕೆಂದು ನಾನು ವಿನಂತಿಸುತ್ತೇನೆ. ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಸಲಹೆ ನೀಡುವುದೇನೆಂದರೆ, ಮಕ್ಕಳಿಂದ ಸಂಗ್ರಹಣೆ ಮಾಡುವ ಕ್ರೀಡಾ ಶುಲ್ಕವನ್ನು ಸಂಪೂರ್ಣವಾಗಿ ಅವರಿಗಾಗಿಯೇ ವ್ಯಯ ಮಾಡುತ್ತಿಲ್ಲ. ಅಂದರೆ ಕ್ರೀಡೆಗಾಗಿಯೇ ಅದನ್ನು ವ್ಯಯ ಮಾಡುತ್ತಿಲ್ಲ. ಹೀಗಾಗಿ ಸರ್ಕಾರದ ವತಿಯಿಂದಲೇ ಕ್ರೀಡೆಗಾಗಿ ಖರ್ಚು ಮಾಡಬೇಕು. ಪ್ರಾಥಮಿಕ ಶಾಲೆಯಿಂದ ಹಿಡಿದು ಪದವಿ ಪೂರ್ವ ಕಾಲೇಜುಗಳವರೆಗೆ ಸಂಗ್ರಹ ಮಾಡುವ ಶುಲ್ಕವನ್ನು ಸಂಪೂರ್ಣವಾಗಿ ಕ್ರೀಡೆಗಾಗಿಯೇ ವ್ಯಯಿಸಬೇಕು. ಈ ಶುಲ್ಕವನ್ನು ಸರ್ಕಾರವು ತೆಗೆದುಕೊಳ್ಳುವ ಪ್ರಮೇಯವೇ ಉದ್ಭವಿಸುವುದಿಲ್ಲ. ಪುಸ್ತಕಗಳನ್ನು ಖರೀದಿಸಲು ಸಂಗ್ರಹವಾಗುವ ಆಯಾಯಾ ನಗರ ಪಾಲಿಕೆಯ ಕರದಲ್ಲಿ ಶೇಕಡ ಒಂದರಷ್ಟು ಹಣವನ್ನು ಗ್ರಂಥಾಲಯ ಇಲಾಖೆಗೆ ನೀಡಲಾಗುತ್ತದೆ. ಇತ್ತೀಚೆಗೆ, 5, 7 ಮತ್ತು 9 ನೇ ತರಗಳಗಳಲ್ಲಿ ಅಂದರೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಹೃದಯಾಘಾತ ಹಾಗೂ ಮತ್ತಿತರೆ ಕಾರಣಗಳಿಂದಾಗಿ ಮೃತರಾಗಿದ್ದಾರೆ. ಇವತ್ತಿನ ದಿವಸ ಚಿಕ್ಕ ಮಕ್ಕಳಲ್ಲಿಯೇ ಬಿ.ಪಿ., ಷುಗರ್ ಎನ್ನುವಂತಹ ಕಾಯಿಲೆಗಳು ಬರುತ್ತಿವೆ. ಕ್ರೀಡೆಗೆ ಪ್ರೋತ್ಸಾಹವನ್ನು ನೀಡಬೇಕೆಂಬುದರ ಬಗ್ಗೆ ನಾವುಗಳು ಮಾತನಾಡುತ್ತೇವೆ. ಆದರೆ, ವಾಸ್ತವವಾಗಿ ಇದನ್ನು ಜಾರಿಗೊಳಿಸಲಾಗುತ್ತಿಲ್ಲ. ಹೀಗಾಗಿ ದಯಮಾಡಿ ಸರ್ಕಾರವು ಸಂಗ್ರಹ ಮಾಡುವ ತೆರಿಗೆಯಲ್ಲಿ ಕ್ರೀಡೆಗಾಗಿಯೇ ಇಂತಿಷ್ಟು ಹಣ ಎಂಬುದಾಗಿ ವಸೂಲಿ ಮಾಡಿ ಕೊಡಬೇಕು. ಏಕೆಂದರೆ ಇದು ದೊಡ್ಡ ಇಲಾಖೆಯಾಗಿದ್ದು, ಲಕ್ಷಾಂತರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹೀಗಾಗಿ ಕ್ರೀಡೆಗಾಗಿ ಸರ್ಕಾರವು ಅಲ್ಪ ಪ್ರಮಾಣದ ಹಣವನ್ನು ನೀಡಿದರೆ ಅದು ಸಾಕಾಗುವುದಿಲ್ಲ. ಕೇವಲ 10-20 ಶಾಲೆಗಳಿಗೆ ಮಾತ್ರವೇ ನೀಡಿ, ಸಾವಿರಾರು ಶಾಲೆಗಳಿಗೆ ಕೊಡುವುದೇ ಇಲ್ಲ. ಈ ವಿಚಾರದಲ್ಲಿ ನಾನು ಸರ್ಕಾರಕ್ಕೆ ನೀಡುವ ಸಲಹೆ ಏನೆಂದರೆ, ಪುಸ್ತಕ ಖರೀದಿಗಾಗಿ ಕರ ಸಂಗ್ರಹಣೆ ಮಾಡುವ ರೀತಿಯಲ್ಲಿಯೇ ಕ್ರೀಡೆಗಾಗಿ ಕರ ಸಂಗ್ರಹಣೆ ಮಾಡಿ ಪ್ರತಿ ಶಾಲೆಗೆ ನೀಡಬೇಕು. ಕ್ರೀಡೆಗಾಗಿ ಅವಶ್ಯವಾಗಿರುವ ಸಲಕರಣೆಗಳನ್ನು ಸರಬರಾಜು ಮಾಡಬೇಕು. ಕಡ್ಡಾಯವಾಗಿ ದೈಹಿಕ ಶಿಕ್ಷಕರ ನೇಮಕಾತಿಯನ್ನು ಮಾಡಬೇಕು. ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರುಗಳೇ ಇಲ್ಲ. ದೈಹಿಕ ಶಿಕ್ಷಕರುಗಳ ಸಂಖ್ಯೆಯು ಎಲ್ಲಾ ಕಡೆಗಳಲ್ಲಿ ಕ್ಷೀಣಿಸುತ್ತಿದೆ. ಇದರ ಬಗ್ಗೆ ಸರ್ಕಾರವು ಹೆಚ್ಚಿನ ಒತ್ತನ್ನು ನೀಡಬೇಕು. ಇವತ್ತಿನ ದಿವಸ ಮಕ್ಕಳ ದೈಹಿಕ ಸಾಮರ್ಥ್ಯದಲ್ಲಿ ಹಿನ್ನೆಡೆಯಾಗುತ್ತಿದೆ. ಮಕ್ಕಳ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಒಂದು ಕಡೆ ಶಾಲಾ ವಿದ್ಯಾರ್ಥಿಗಳಿಗೆ ಬಿಸಿಯೂಟ, ಮೊಟ್ಟೆಗಳನ್ನು ನೀಡಲಾಗುತ್ತಿದೆ. ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೆ, ಎಲ್ಲಿಯೋ ಒಂದು ಕಡೆ ಈ ಅಂಶವನ್ನು ನಾವು ನಿರ್ಲಕ್ಷಿಸಿದ್ದೇವೆ. ಕ್ರೀಡೆಯನ್ನು ಪ್ರೋತ್ಸಾಹಿಸಲು, ಉತ್ತೇಜಿಸಲು ಹೆಚ್ಚಿನ ಅನುದಾನವನ್ನು ನೀಡಬೇಕು. ಮಕ್ಕಳಿಂದ ಸಂಗ್ರಹಿಸುವ ಶುಲ್ಕವನ್ನು ವಾಪಸ್ಸು ಮಾಡಬೇಕು. ಆಯಾ ನಗರ ಪಾಲಿಕೆಗಳಿಂದ ವಸೂಲಿ ಮಾಡಲಾಗುವ ಕರದಲ್ಲಿ ಇಂತಿಷ್ಟು ಶೇಕಡಾವಾರು ಕರವನ್ನು ಮಕ್ಕಳಿಗಾಗಿ

ಮತ್ತು ಕ್ರೀಡೆಗಾಗಿ ನೀಡಿದರೆ, ಖಂಡಿತವಾಗಿಯೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಅಂತರಾಷ್ಟ್ರೀಯ ಕ್ರೀಡಾಕೂಟಗಳಿಗೆ ಕಳುಹಿಸಿ ಕೊಡುವ ವ್ಯವಸ್ಥೆಗಳಾಗುತ್ತವೆ. ಸರ್ಕಾರವು ದಯಮಾಡಿ ದೈಹಿಕ ಶಿಕ್ಷಕರ ನೇಮಕಾತಿಯನ್ನು ಮಾಡಬೇಕು. ಕ್ರೀಡೆಗಾಗಿ ಬೇಕಾದ ಅನುದಾನವನ್ನು ನೀಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರವು ನೀಡಿರುವ ಲಿಖಿತ ಉತ್ತರದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸುವ ಯೋಜನೆಗಳು ಜಾರಿಯಲ್ಲಿರುವುದಿಲ್ಲ ಎಂದು ತಿಳಿಸಿದೆ. ಸರ್ಕಾರವು ಕ್ರೀಡಾ ತರಬೇತುದಾರರನ್ನು ನೇಮಕ ಮಾಡಿಲ್ಲ. ಕ್ರೀಡೆಗೆ ಅವಶ್ಯವಾದ ಕ್ರೀಡಾ ಸಾಮಗ್ರಿಗಳನ್ನು ನೀಡುವುದಿಲ್ಲ. ಕ್ರೀಡಾ ಪಟುಗಳಿಗೆ ಹಾಸ್ಟೆಲ್‌ಗಳೂ ಸಹ ಇಲ್ಲ. ಕ್ರೀಡೆಯನ್ನು ಪ್ರೋತ್ಸಾಹಿಸಬೇಕೆಂದು ನಾವುಗಳು ಸುಮ್ಮನೆ ಹೇಳುತ್ತಿದ್ದೇವೆ. ಯುವ ಸಬಲೀಕರಣ ಇಲಾಖೆಯಿಂದ ಕ್ರೀಡಾಪಟುಗಳಿಗೆ ಹಾಸ್ಟೆಲ್‌ಗಳನ್ನು ನಿರ್ಮಿಸುತ್ತೇವೆ ಎಂಬುದಾಗಿ ಸರ್ಕಾರವು ಹೇಳುತ್ತಿದೆ. ಆದರೆ, ಎಲ್ಲಿಯೂ ಒಂದು ಕಡೆಯಾದರೂ ಸಹ ಕ್ರೀಡಾ ಹಾಸ್ಟೆಲ್‌ಗಳಿಲ್ಲ. ಜಿಲ್ಲೆಗಳಲ್ಲಿ ಯಾವುದಾದರೂ ಹಾಸ್ಟೆಲ್‌ಗಳಿದ್ದರೆ, ಅಲ್ಲಿ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಆದರೆ, ಗ್ರಾಮೀಣ ಭಾಗದ ಕ್ರೀಡಾಪಟುಗಳನ್ನು ಉತ್ತೇಜಿಸಬೇಕು ಹಾಗೂ ಅವರುಗಳನ್ನು ಅಂತರಾಷ್ಟ್ರೀಯ ಕ್ರೀಡಾಕೂಟಗಳಿಗೆ ಕಳುಹಿಸಬೇಕು ಎಂಬುದಾಗಿ ಸುಳ್ಳನ್ನು ಹೇಳುವುದನ್ನು ಬಿಟ್ಟರೆ, ನಾವುಗಳು ಯಾರೂ ಸಹ ಈ ರೀತಿಯ ಪ್ರಯತ್ನಗಳನ್ನು ಮಾಡುವುದೇ ಇಲ್ಲ. ಏಕೆಂದರೆ, ಒಂದೊಂದು ಊರಿಗೆ ಕೇವಲ ಒಂದೊಂದು ಹಾಸ್ಟೆಲ್‌ಗಳು ಮಾತ್ರವೇ ಇವೆ. ಒಂದೊಂದು ಕ್ರೀಡೆಗೆ ಸಂಬಂಧಪಟ್ಟಂತೆ ಒಂದೊಂದು ಹಾಸ್ಟೆಲ್‌ಗಳನ್ನು ಪ್ರಾರಂಭಿಸಿದರೆ, ಗ್ರಾಮೀಣ ಕ್ರೀಡಾ ಪಟುಗಳನ್ನು ಉತ್ತೇಜಿಸಿ, ದೊಡ್ಡಮಟ್ಟಕ್ಕೆ ಅವರುಗಳನ್ನು ತೆಗೆದುಕೊಂಡು ಹೋಗಬಹುದು. ಇತ್ತೀಚೆಗೆ ಹೊಸದಾದ ಮಾರ್ಗಸೂಚಿಯೊಂದು ಬಂದಿದೆ. ಕರ್ನಾಟಕ ಲೋಕ ಸೇವಾ ಆಯೋಗದ ನೇಮಕಾತಿಯಲ್ಲಿ ಶೇಕಡಾ 2 ರಷ್ಟು ಹುದ್ದೆಗಳನ್ನು ಮೀಸಲಿಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ಈ ಸೌಲಭ್ಯವನ್ನು ಸ್ಥಗಿತಗೊಳಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಯಾವ ಕ್ರೀಡೆಗೆ ಎಷ್ಟು ಶೇಕಡಾವಾರು ಹುದ್ದೆಗಳನ್ನು ಮೀಸಲಿಡಬೇಕು ಎನ್ನುವುದರ ಬಗ್ಗೆ ಮಾರ್ಗಸೂಚಿ ಮಾಡಿಲ್ಲ ಎಂದು ತಿಳಿಸುತ್ತಾರೆ. ಈ ಮುಂಚೆ ಕ್ರೀಡಾ ಮೀಸಲಾತಿ ಎಂಬುದು ಇತ್ತು. ಮಕ್ಕಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ್ದರೆ, ಅವರುಗಳಿಗೆ ಮೀಸಲಾತಿ ಸೌಲಭ್ಯವನ್ನು ನೀಡಲಾಗುತ್ತಿತ್ತು. ಆದರೆ, ಈ ಮೀಸಲಾತಿಯ ಬಗ್ಗೆ ಸರ್ಕಾರವು ಸ್ಪಷ್ಟೀಕರಣವನ್ನು ನೀಡಿಲ್ಲ. ಹೀಗಾಗಿ ಈ ಸೌಲಭ್ಯವು ಸ್ಥಗಿತಗೊಂಡಿರುವುದರಿಂದ ಸರ್ಕಾರದ ನೇಮಕಾತಿಗಳಲ್ಲಿ ಕ್ರೀಡಾ ಮೀಸಲಾತಿಯ ಸೌಲಭ್ಯವು ಸಿಗುತ್ತಿಲ್ಲ. ಇದರ ಬಗ್ಗೆ ಸರ್ಕಾರವು ಗಮನಹರಿಸಬೇಕು. ಕ್ರೀಡಾ ತರಬೇತುದಾರರುಗಳಿಲ್ಲ, ಕ್ರೀಡಾ ಸಾಮಗ್ರಿಗಳಿಲ್ಲ, ಕ್ರೀಡಾ ಹಾಸ್ಟೆಲ್‌ಗಳಿಲ್ಲ. ಈ ರೀತಿಯ ಸೌಲಭ್ಯಗಳನ್ನು ನೀಡಿದ್ದಲ್ಲಿ, ಭವಿಷ್ಯದಲ್ಲಿ ಕ್ರೀಡಾ ಪಟುಗಳು ಕ್ರೀಡೆಗಳಲ್ಲಿ ಸಾಧನೆ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕ್ರೀಡಾ ಪಟುಗಳ ವಿಚಾರದಲ್ಲಿ ಹಲವಾರು ಸದಸ್ಯರುಗಳು ಈಗಾಗಲೇ ಚರ್ಚೆಯನ್ನು ಮಾಡಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಸರ್ಕಾರಕ್ಕೆ ನೀಡುವ ಸಲಹೆ ಏನೆಂದರೆ...., ಸಣ್ಣ ವಯಸ್ಸಿನ ಮಕ್ಕಳಿಗೆ ಬಿ.ಪಿ., ಷುಗರ್ ಇತ್ಯಾದಿ ಕಾಯಿಲೆಗಳು ಬರುತ್ತಿವೆ ಮತ್ತು ಆರೋಗ್ಯದ ದೃಷ್ಟಿಯಿಂದ ಕೆಲವೊಂದು ಚಟುವಟಿಕೆಗಳನ್ನು ನಾವು ಮಾಡಬೇಕಾಗುತ್ತದೆ ಎಂಬ ಅಂಶಗಳನ್ನು ಶ್ರೀ ಪುಟ್ಟಣ್ಣರವರು ಮಾತನಾಡುವ ಸಂದರ್ಭದಲ್ಲಿ ಉಲ್ಲೇಖಿಸಿದರು. ತಾವೂ ಸಹ ಬಹಳ ಅನುಭವಸ್ಥರಿದ್ದೀರಿ. ಈ ವಿಚಾರದಲ್ಲಿ ನಾನು ಒಂದು ಹೆಜ್ಜೆ ಮುಂದೆ ಹೋಗಿ ವಿಚಾರ ಮಾಡುವುದು ಏನೆಂದರೆ, ಅನುಭವದಲ್ಲಿ ಯೋಗ ಶಿಕ್ಷಕರನ್ನೂ ಸಹ ನೇಮಕ ಮಾಡಿದ್ದಲ್ಲಿ....,

**ಸಭಾಪತಿಯವರು:–** ಶ್ರೀ ಶರವಣರವರೇ ಈ ಸಂದರ್ಭದಲ್ಲಿ ನಾನು ನಿಮಗೊಂದು ಮಾಹಿತಿಯನ್ನು ನೀಡುತ್ತೇನೆ. ನಾನು ಈ ಹಿಂದೆ ಶಿಕ್ಷಣ ಸಚಿವನಾಗಿದ್ದಾಗ, ಯಾರು ದೈಹಿಕ ಶಿಕ್ಷಕರು ಇದ್ದರೋ, ಅವರುಗಳಿಗೆ ಕಡ್ಡಾಯವಾಗಿ ಯೋಗದ ತರಬೇತಿಯನ್ನು ನೀಡುವ ಕೆಲಸವನ್ನು ಮಾಡಲಾಗಿತ್ತು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಈ ಅಂಶವನ್ನು ತಾವು ಹೇಳಿರುವುದನ್ನು ನಾನು ಕೇಳಿದ್ದೇನು.

**ಸಭಾಪತಿಯವರು:–** ಈಗಿನ ಕಾಲದ ಎಲ್ಲಾ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕೇವಲ ಭೌತಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ವಿಷಯಗಳನ್ನು ಮಾತ್ರವೇ ಓದುವಂತೆ ಹೇಳುತ್ತಾರೆಯೇ ವಿನಃ ಯಾರೂ ಸಹ ಕ್ರೀಡೆಯ ಬಗ್ಗೆ ಕಾಳಜಿಯನ್ನು ಮಾಡುವುದಿಲ್ಲ. ಇದರಲ್ಲಿ ತಂದೆ ತಾಯಿಗಳ, ಸರ್ಕಾರದ ಎಲ್ಲರದ್ದೂ ದೋಷಗಳಿವೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಖಂಡಿತವಾಗಿಯೂ ಸಹ ತಾವು ಹೇಳುವುದು ಸರಿ ಇದೆ. ಅದಕ್ಕೋಸ್ಕರ ಸರ್ಕಾರವು ಮುಂಬರುವ ಆಯವ್ಯಯದಲ್ಲಾಗಲಿ ಅಥವಾ ಇನ್ಯಾವುದರಲ್ಲಾಗಲಿ ವಿಶೇಷವಾಗಿ ಮಕ್ಕಳ ಆರೋಗ್ಯದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಯೋಗದ ವಿಷಯವಾಗಿಯೇ ವಿಶೇಷವಾದ ತರಬೇತಿಯನ್ನು ನೀಡಬೇಕು ಹಾಗೂ ಇದನ್ನು ಒಂದು ವಿಷಯವಾಗಿ ಪರಿಗಣಿಸಿ, ವಾರಕ್ಕೆ ಎರಡು – ಮೂರು ತರಗತಿಗಳನ್ನು ಇದಕ್ಕಾಗಿಯೇ ಮೀಸಲಿಡಬೇಕು. ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಯೋಗವನ್ನು ಅಭ್ಯಾಸ ಮಾಡುವಂತಹ ಕೆಲಸವನ್ನು ಮಾಡಿದರೆ, ಬಹಳ ಒಳ್ಳೆಯದಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಬಿ.ಪಿ., ಷುಗರ್ ಎಂಬ ಕಾಯಿಲೆಗಳು "ಅರಿಶಿಣ-ಕುಂಕುಮ"ವಿದ್ದಂತೆ. ಇದನ್ನು ಸ್ವೀಕಾರ ಮಾಡಲೇ ಬೇಕು; ಏನೂ ಮಾಡುವುದಕ್ಕಾಗುವುದಿಲ್ಲ. ಸಮಾಜದಲ್ಲಿ ಇವುಗಳನ್ನು ನಾವು ಅಂಗೀಕರಿಸಿಕೊಂಡಿದ್ದೇವೆ. ಚಿಕ್ಕ ವಯಸ್ಸಿನಲ್ಲಿಯೇ ಈ ಕಾಯಿಲೆಗಳು ಬರುತ್ತವೆ; ಇಲ್ಲವೆಂತಲ್ಲ. ಹೀಗಾಗಿ ಒಂದಷ್ಟು ಮಟ್ಟಕ್ಕೆ

**ಸಭಾಪತಿಯವರು:–** ನಿಮಗೆ ಬಿ.ಪಿ., ಷುಗರ್ ಕಾಯಿಲೆಗಳಿವೆಯೇ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಬಿ.ಪಿ., ಷುಗರ್ ಎಂಬ ಕಾಯಿಲೆಗಳನ್ನು "ಅರಿಶಿಣ-ಕುಂಕುಮ"ದ ರೀತ್ಯ ನಾವು ಸ್ವೀಕಾರ ಮಾಡಿದ್ದೇವೆ, ಅಂದರೆ ಅಲ್ಲಿಗೆ ಮುಗಿಯಿತು.

(ಮುಂದು)

(38) 04—3-2025 (4-10) bkp-vk ಸಭಾಪತಿಯವರ ಉಪಸ್ಥಿತಿ

**ಶ್ರೀ ಟಿ.ಎ. ಶರವಣ(ಮುಂದು)**

ಯೋಗಾಯೋಗದಿಂದ ಸರ್ವ ರೋಗ ನಿವಾರಣೆ ಎಂದು ಹೇಳುತ್ತೇವೆ. ಆ ರೋಗ ನಿವಾರಣೆಯಾಗಬೇಕೆಂದರೆ ಯೋಗ ಕ್ಲಾಸ್ ಬಹಳ ಮುಖ್ಯ ಇರುತ್ತದೆ. ದಯಮಾಡಿ, ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಲ್ಲಿ ಅದರ ಬಗ್ಗೆ ಅರಿವು ಮೂಡಿಸುವಂತಹ ಕೆಲಸ ಮಾಡಬೇಕು. ಇದನ್ನು ಕ್ಲಾಸ್‌ಗಳಲ್ಲಿ ಮಾಡಿದರೆ ಅವರ ಪೋಷಕರು, ತಂದೆ-ತಾಯಿಂದಿರು ಮನೆಯಲ್ಲಿ ಅದನ್ನು ಅಭ್ಯಾಸ ಮಾಡುವಂತಹ ಕೆಲಸವನ್ನು ಮಾಡುತ್ತಾರೆ. ಏಕೆಂದರೆ, ನೀವು " "ನಿನಗೂ ಶುಗರ್ ಮತ್ತು ಬಿಪಿ ಇದೆಯಾ" ಎಂದು ಕೇಳಿದಿರಿ. ಹೌದು, 20ನೇ ವಯಸ್ಸಿನಲ್ಲಿ ರಲ್ಲಿ ಫಿಗರ್ ಆಗಿದ್ದೆವು, 30ನೇ ವಯಸ್ಸಿನಲ್ಲಿ sugar ಆಗಿಬಿಟ್ಟಿದ್ದೇವೆ. 40 ರಲ್ಲಿ ಪ್ರೆಶರ್, 50 ರಲ್ಲಿ ಕ್ಯಾನ್ಸರ್, 60 ರಲ್ಲಿ ಡಮಾರ್ ಆಗುತ್ತೇವೆ. ಆದಾದ ಮೇಲೆ 70-80-90 ರಲ್ಲಿ ನಿಮ್ಮ ರೀತಿಯಲ್ಲಿ ತುಂಬಾ ಚೆನ್ನಾಗಿ, ಆರೋಗ್ಯವಾಗಿ ಯಾರು ಇದ್ದಾರೋ ಅವರೇ ಸೂಪರ್ ಆಗಿರುತ್ತಾರೆ.

ಮಾನ್ಯ ಸಭಾಪತಿಯವರೆ, ಇದು ಗೊತ್ತಿರುವಂತಹ ವಿಚಾರವಾಗಿದೆ. ಆದ್ದರಿಂದ, ಬಹುಶಃ ಇದನ್ನು ತಾವು ಕೂಡ ಸರ್ಕಾರಕ್ಕೆ ಸ್ವಲ್ಪ ಸಲಹೆಗಳನ್ನು ಕೊಟ್ಟು ಆ ಒಂದು ಯೋಗಾಭ್ಯಾಸವನ್ನು ಮತ್ತು ಮೆಡಿಟೇಷನ್ ಅನ್ನು ಮಾಡಬೇಕು. ನಾವು ಸೂರ್ಯ ನಮಸ್ಕಾರವನ್ನು ಮಾಡುತ್ತೇವೆ. ವಿಧಾನಸೌಧದ ಮುಂದೆ ರಥಸಪ್ತಮಿ ಬಂದಾಗ 108 ಸೂರ್ಯ ನಮಸ್ಕಾರಗಳನ್ನು ಮಾಡುತ್ತೇವೆ. ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ಮೋದಿಯವರು 'ಯೋಗಾ ಡೇ' ಎಂದು ಹೇಳಿ, ಅದನ್ನು ಅನುಷ್ಠಾನಕ್ಕೆ ತಂದರು. ಅದನ್ನು ವಿಧಾನಸೌಧದ ಮುಂದೆ ಜೂನ್ ತಿಂಗಳಿನಲ್ಲಿ "ಯೋಗ ಡೇ' ಎಂದು ಹೇಳಿ ಸರ್ಕಾರ ಈಗ ಆಯುಷ್ ಇಲಾಖೆಯಿಂದ ಮಾಡುತ್ತಿರುವುದೆಲ್ಲಾ ಬಹಳ ಉತ್ತಮವಾದ ಬೆಳವಣಿಗೆಯಾಗಿದೆ. ಇದರಿಂದಾಗಿ ಜೊತೆಗೆ ಇದನ್ನು ಮಾಡಿದರೆ ಸಮಾಜಕ್ಕೆ ಇನ್ನಷ್ಟು ಒಂದು ಒಳ್ಳೆಯ ಆರೋಗ್ಯಕರವಾದ, ಉತ್ತಮವಾದಂತಹ ಮಕ್ಕಳನ್ನು ನೀಡಬಹುದಾಗಿದ್ದು ಅವರ ಭವಿಷ್ಯಕ್ಕೋಸ್ಕರ ಉತ್ತಮ ಭವಿಷ್ಯಕ್ಕೋಸ್ಕರ ಇದನ್ನು ತರಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಡಿ.ಟಿ. ಶ್ರೀನಿವಾಸ್(ಡಿಟಿಎಸ್)(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ನಮ್ಮ ಶ್ರೀಮಾನ್ ಎಸ್.ಎಲ್.ಭೋಜೇಗೌಡರು ಮಾತನಾಡಿದರೆ ಸಭೆ ಪೂರ್ತಿ ಒಂದು ಬಾರಿಯಾದರೂ ನಗಬೇಕಾಗುತ್ತದೆ. ಹೀಗಾಗಿ, ಅವರ ಮಾತಿನಲ್ಲಿ ಒಂದಿಷ್ಟು ವಿಶೇಷತೆ ಸಹ ಇರುತ್ತದೆ.

ಜೊತೆಯಲ್ಲಿ ಒಂದು ಹೊಸತನವೂ ಇರುತ್ತದೆ. ಅದೇ ನಿಟ್ಟಿನಲ್ಲಿ ಇವತ್ತು ಯುವ ಸಬಲೀಕರಣ ಇಲಾಖೆ ವತಿಯಿಂದ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣದ ವಿಚಾರದಲ್ಲಿ ಕ್ರೀಡೆಗೆ ಆದ್ಯತೆ ಇಲ್ಲ ಎನ್ನುವ ವಿಚಾರವನ್ನು ನಾವು ಎತ್ತಿಕೊಂಡಿದ್ದೇವೆ. ಇತಿಹಾಸವನ್ನು ನಾವು ಸಂಪೂರ್ಣವಾಗಿ ಮರೆತು ಹೋದಂತಹ ಸಂದರ್ಭದಲ್ಲಿ ಇತಿಹಾಸ ಎಂದು ಹೇಳಿದರೆ ಗ್ರಾಮೀಣ ಕ್ರೀಡೆಗಳು ಅಂದರೆ, ಅದು ಗಿಲ್ಲಿದಾಂಡು ಆಟ ಇರಬಹುದು, ಗೋಲಿ ಆಟ ಇರಬಹುದು, ಮರಕೋತಿ ಆಟ ಇರಬಹುದು, ಇವುಗಳೆಲ್ಲವೂ ಇವತ್ತು ಎಲ್ಲಿಯೂ ಕಂಡು ಬರುವುದಿಲ್ಲ. ಚಿಕ್ಕಂದಿನಲ್ಲಿ ನಾವು ಈ ಆಟಗಳನ್ನೆಲ್ಲಾ ಆಡುತ್ತಾ ದೇಹವನ್ನು ಒಂದು ರೀತಿಯಲ್ಲಿ ದಂಡಿಸಿಕೊಂಡು ಗ್ರಾಮಾಂತರ ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಸದೃಢವಾಗಿ ಇರುತ್ತಿದ್ದೆವು. ಇವತ್ತಿನ ದಿವಸ ಪೂರ್ಣ ಪ್ರಮಾಣದಲ್ಲಿಯಾದರೆ ಯಾವುದಕ್ಕೆ ಒತ್ತು ಎಂದರೆ, ಬರಿ ಶಿಕ್ಷಣದ ವಿಷಯ ಅಂದರೆ ಓದು, ಓದು ಅಷ್ಟೇ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದುವಂತಹವರು ಖಾಸಗಿ ಅನುದಾನಿತ ಶಾಲೆಗಳಲ್ಲಿ ಓದುವಂತಹವರು; ಖಾಸಗಿ ಶಾಲೆಗಳಲ್ಲಿ ಸಂಪೂರ್ಣವಾಗಿ ಸವಲತ್ತು ಇರುತ್ತದೆ. ಸವಲತ್ತನ್ನು ಗುರುತು ಮಾಡುತ್ತಾ, ಮಕ್ಕಳನ್ನು ಸೇರಿಸುವಂತಹ ಪದ್ಧತಿ ಇರುತ್ತದೆ. ಅಲ್ಲಿ ಏನು ಸವಲತ್ತು ಇದೆ, ಅಲ್ಲಿ ಟೀಚರ್ ಇದ್ದಾನೋ ಇಲ್ಲವೋ? ಸ್ಪೋರ್ಟ್ಸ್ ಇದೆಯೇ, ಗ್ರೌಂಡ್ ಇದೆಯೇ ಎಂದು ನೋಡುತ್ತಾನೆ. ಅದು ಒಂದು ರೀತಿಯ ಸಮುದಾಯ ಆಗಿರುತ್ತದೆ. ಅಂದರೆ ಸ್ವಲ್ಪ ಸ್ಥಿತಿವಂತರು, ಇದನ್ನು creamy layer ಎಂದರೆ ತಪ್ಪಾಗಲಾರದು. ಅದೇ ನಿಟ್ಟಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನಮ್ಮಂತಹವರು, ಓದಿದಂತಹ ಸಂದರ್ಭದಲ್ಲಿ ಅದರಲ್ಲೂ ಈಗ ಓದುತ್ತಿರುವಂತಹ ಸಂದರ್ಭದಲ್ಲಿ ಖಂಡಿತವಾಗಿಯೂ ಇವತ್ತು ಕ್ರೀಡೆಗೆ ಒತ್ತನ್ನು ಕೊಡಲೇಬೇಕು. ಇದರ ವಿಚಾರದಲ್ಲಿ ಸರ್ಕಾರವೂ ಸಹ ಒತ್ತು ಕೊಡುವ ನಿಟ್ಟಿನಲ್ಲಿ ಒಂದು ಸುತ್ತೋಲೆಯನ್ನು ಸಹ ಹೊರಡಿಸಿದೆ. ಆದರೆ, ನಾವೆಲ್ಲರೂ ಮಾತನಾಡುವಂತಹ ಸಂದರ್ಭದಲ್ಲಿ ಐಟಿಐ ವಿಚಾರವನ್ನೆಲ್ಲಾ ನಾವು ಏತಕ್ಕೆ ಮರೆತುಹೋಗಿದ್ದೇವೆ ಎನ್ನುವುದು ನಮ್ಮ ಮುಂದೆ ಇರುವಂತಹ ಪ್ರಶ್ನೆಯಾಗಿದೆ. ಐಟಿಐ ವಿಚಾರ ಇದರಲ್ಲಿ ಬರುವುದಿಲ್ಲವೇ? ನನಗೆ ಮನಸ್ಸಿನಲ್ಲಿ ಏನು ಪ್ರಶ್ನೆ ಉದ್ಭವವಾಗುತ್ತದೆ ಎಂದರೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ. ಇದರ ಮಧ್ಯೆ ಇರುವಂತಹ ಐಟಿಐ ಮಕ್ಕಳು ಯಾರು ಎನ್ನುವುದು ನಮ್ಮ ಮುಂದೆ ಉದ್ಭವವಾಗುವಂತಹ ಪ್ರಶ್ನೆಯಾಗಿದೆ. ಐಟಿಐ ಮಕ್ಕಳು ಯಾರು ಮುಂದೆ ಮಕ್ಕಳನ್ನು ಓದಿಸುವುದಕ್ಕೆ ಶಕ್ತಿ ಇಲ್ಲದೇ ಇರುವಂತಹ, ಮನೆಯಲ್ಲಿ ಆಧಾರಸ್ಥಂಭವಾಗಿ ದಿಢೀರೆಂದು ದುಡಿಯಬೇಕೆಂದು ಚಿಂತನೆ ಮಾಡುವಂತಹ ಪೋಷಕರು ಅವರು ಏನು ಆಯ್ಕೆ ಮಾಡಿಕೊಳ್ಳುತ್ತಾರೆಂದರೆ ಕಾರ್ಮಿಕ ಸ್ಥಾಯಿಯಿಂದ ಬಂದಂತಹವರು, ಕಾರ್ಮಿಕ ವೃತ್ತಿಯಲ್ಲಿ ಇರುವಂತಹವರು ಶೀಘ್ರವಾಗಿ ನನ್ನ ಮಗ

ಎಲ್ಲಿಯಾದರೂ ಕೆಲಸಕ್ಕೆ ಸೇರಿಕೊಂಡು ದುಡಿದು ನನ್ನ ಕುಟುಂಬವನ್ನು ಪಾಲನೆ ಮಾಡಬೇಕೆಂದು ಹೇಳಿ ಚಿಂತನೆಯಲ್ಲಿರುತ್ತಾರೆ. ಉದಾಹರಣೆಗೆ ನಮ್ಮಲ್ಲಿಯೂ ಸಹ ಐಟಿಐ ಇದೆ. ಹಾಗಾಗಿ, ಐಟಿಐ ಮಕ್ಕಳಿಗೆ ಈ ರೀತಿಯಾದ ಯಾವುದೇ ಕ್ರೀಡಾ ಚಟುವಟಿಕೆಗಳಿಗೆ ಅವರಿಗೆ ಅವಕಾಶ ಇರುವುದಿಲ್ಲ. ಪೂರ್ಣ ಪ್ರಮಾಣದಲ್ಲಿ ಅವರಿಗೆ ಇರುವಂತಹ skill ಅಥವಾ ಅವರು ಆಯ್ಕೆ ಮಾಡಿಕೊಂಡಿರುವಂತಹ trade ಈ ಎರಡರ ಮೇಲೆಯೇ ಅವರ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ಅಂತಹದ್ದರಲ್ಲಿ ಹಿಂದಿನ ಒಂದೆರಡು ವರ್ಷಗಳಲ್ಲಿ ಸರ್ಕಾರಿ ಐಟಿಐ ಮಕ್ಕಳಿಗೆ ಕಿಟ್ ವಿತರಣೆ ಮಾಡುವಂತಹ ನಿಟ್ಟಿನಲ್ಲಿ ಅವರುಗಳು ಏನು pass out ಆಗಿ ಮನೆಗೆ ಹೋದ ಮೇಲೆ ಆ ಕಿಟ್ ಕೊಟ್ಟರೆ ಅದರಿಂದ ಏನು ಪ್ರಯೋಜನವಾಗುತ್ತದೆ? ಈ ವಿಚಾರವನ್ನು ನಾವೆಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕು. ಒಂದು ಟ್ರೇಡ್‌ನಲ್ಲಿ ಸರ್ಕಾರದ ವತಿಯಿಂದ ಒಂದು ಸವಲತ್ತು ಕೊಡುತ್ತಿದೆ ಎಂದು ಹೇಳಿದರೆ, ಆ ಟ್ರೇಡ್ ಮುಗಿಯುವುದರೊಳಗಡೆ ಅ ಸವಲತ್ತನ್ನು ಒದಗಿಸಿ ಕೊಟ್ಟರೆ ಖಂಡಿತವಾಗಿಯೂ ಆ ಟ್ರೇಡ್‌ನಲ್ಲಿ ಕೌಶಲ್ಯವನ್ನು ವೃದ್ಧಿ ಮಾಡಿಕೊಂಡು ಅವರು ಎಲ್ಲಿಯೋ ಒಂದು ಕಡೆ settle ಆಗಿ, ಅವರ ಕುಟುಂಬವನ್ನು ಸಾಕುವಂತಹ ಪರಿಸ್ಥಿತಿ ಇರುತ್ತದೆ. ಆದರೆ, ಹಿಂದೆ ಆ ಒಂದು ಕಿಟ್ ಕೊಡುವಂತಹದ್ದು ಸಂಪೂರ್ಣವಾಗಿ ಈ ಕೋರ್ಸ್ ಮುಗಿದ ಮೇಲೆ ಕೊಟ್ಟಿರುವಂತಹದ್ದು ಇದೆ. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಈಗ ಬರುವಂತಹ ಬಜೆಟ್‌ನಲ್ಲಿ ಇಲ್ಲಿ ತಾವು ಕೇಳುವಂತಹ ಪ್ರಶ್ನೆಗೆ ಇಷ್ಟು ಬೇಗ ಉತ್ತರ ಬಂದಿರುವುದರಿಂದ ಶ್ರೀಯುತ ಭೋಜೇಗೌಡರು ಸೇರಿದಂತೆ ನಾವೆಲ್ಲರೂ ಖುಷಿ ಪಡಬೇಕು. ಮುಂದೆ ಏನಾದರೂ ಪ್ರಶ್ನೆಗಳನ್ನು ಕೇಳಬೇಕಾದರೆ ಶ್ರೀಯುತ ಭೋಜೇಗೌಡರವರ ಕಡೆಯಿಂದಲೇ ಕೇಳಿಸಬೇಕು. ಆದರೆ, ಕೊನೆಯಲ್ಲಿ ಅನುದಾನದ ಲಭ್ಯತೆಯ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎನ್ನುವುದನ್ನು ತೆಗೆಯಬೇಕು. ಇದು ನನ್ನ ನೇರ ಮಾತು ಆಗಿದೆ. ನಾನು ಈ ಕ್ಷೇತ್ರದಲ್ಲಿ ಪ್ರತಿನಿಧಿಯಾಗಿರುವುದರಿಂದ ಮತ್ತು ಆರ್ಥಿಕ ಇಲಾಖೆಯಲ್ಲೂ ಸಹ ಕೆಲಸ ಮಾಡಿರುವುದರಿಂದ ಸಹಜವಾಗಿ ಇದು ಒಂದು clause ಏನಿದೆ, ಇದು ಯಾವಾಗಲೂ ಲಭ್ಯತೆಯೇ ಇರುವುದಿಲ್ಲ. ಹೀಗಾಗಿ, ಇದನ್ನು ಸರ್ಕಾರ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ಇದನ್ನು ತೆಗೆಯಬೇಕೆಂದು ಕೇಳಿಕೊಳ್ಳುತ್ತಾ, ಐಟಿಐ ಮಕ್ಕಳಿಗೂ ಸಹ ಆ ಕಿಟ್ ವಿತರಣೆ ಜೊತೆಗೆ ಕ್ರೀಡೆಗೆ ಆದ್ಯತೆಯನ್ನು ಹೆಚ್ಚಿಸಿದಾಗ ಮಾತ್ರ ನಾವು overall ಶಿಕ್ಷಣ ಕ್ಷೇತ್ರದಲ್ಲಿ ಇರತಕ್ಕಂತಹ ಎಲ್ಲಾ ಸ್ಥರದ ಮಕ್ಕಳನ್ನು ಸಮಾನವಾಗಿ ಕಂಡು overall ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾ, ಅವಕಾಶವನ್ನು ಕಲ್ಪಿಸಿಕೊಟ್ಟ ಸನ್ಮಾನ್ಯ ಸಭಾಪತಿಯವರಿಗೆ ವಂದಿಸುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಎಲ್ಲಾ ಸದಸ್ಯರ ಕಾಳಜಿಯೂ ಸಹ ಒಂದೇ ಆಗಿರುತ್ತದೆ. ಮಕ್ಕಳಿಗೆ extra curricular activities, sports ಮತ್ತು ಯೋಗವನ್ನು ಕಡ್ಡಾಯವಾಗಿ ಮಾಡುವುದು ಬಹಳ ಸೂಕ್ತವಾಗಿದೆ. ಭಗವಂತನ ಸೃಷ್ಟಿಯಲ್ಲಿ ನಮಗೆ ಒಂದು ಅಂಗಕ್ಕೆ ಮತ್ತೊಂದು ಅಂಗವಾಗಿ spare ಕೊಟ್ಟಿದ್ದಾನೆ. ಎರಡು ಕೈ, ಎರಡು ಕಣ್ಣು, ಎರಡು ಕಿವಿ, ಎರಡು ಕಾಲು, ಎರಡು ಲಂಗ್ಸ್, ಎರಡು ಕಿಡ್ನಿ ಕೊಟ್ಟಿದ್ದಾನೆ. ಆ ರೀತಿಯಲ್ಲಿ ಕೊಡಬೇಕಾದರೆ ಬಲ ಮೆದುಳು ಎಡ ಮೆದುಳು ಎಂದು ಕೊಟ್ಟಿದ್ದಾನೆ. ಹೀಗಾಗಿ, ಬಲಗಡೆ ಕೈಯಲ್ಲಿ ಬರೆಯುವಂತಹ ಮಕ್ಕಳಿಗೆ ಎಡಗಡೆ ಬ್ರೈನ್ dominant brain ಆಗಿರುತ್ತದೆ. ಅಂದರೆ, all the stress, tension activity ಯನ್ನ ತೆಗೆದುಕೊಳ್ಳುತ್ತದೆ. ಹಾಗಿದ್ದರೆ, ಬಲಗಡೆ ಮೆದುಳಿಗೆ improvement ಆಗಬೇಕೆಂದರೆ extra curricular activities ರಿಂದ ಮಾತ್ರ ಸಾಧ್ಯ. ನಮಗೆ ಎರಡು ಮೆದುಳುಗಳು ಸಮವಾಗಿ ಕೆಲಸ ಮಾಡಿದಾಗ ಮಾತ್ರ ಮಕ್ಕಳ output ಚೆನ್ನಾಗಿ ಬರುತ್ತದೆ. ಇವತ್ತಿನ ದಿವಸಗಳಲ್ಲಿ right-handed person ಗಳಿಗೆ ಕೇವಲ ಎಡಗಡೆ ಮೆದುಳಿಗೆ ಒತ್ತಡ ಜಾಸ್ತಿ ಇರುತ್ತದೆ. ಅವರ ಬರಿ education field ನಲ್ಲಿಯೇ ಮುಂದುವರಿಯುತ್ತಿದ್ದಾರೆ ಹೊರತು ಬಲ ಮೆದುಳಿಗೆ ಕೆಲಸವನ್ನು ಕೊಡುತ್ತಿಲ್ಲ. ಎರಡು ಮೆದುಳುಗಳು ಚಟುವಟಿಕೆಯಲ್ಲಿದ್ದಾಗ; ನಾವು ಕೇಳಿದ್ದೇವೆ, ಓದು ಒಕ್ಕಾಲು, ಬುದ್ಧಿ ಮುಕ್ಕಾಲು. ಅಂದರೆ, ಓದು ಕೆಲಸ ಮಾಡಿತು, ಬುದ್ಧಿ ದೇಶ ಆಳಿತು ಎಂದು ಆಯಿತು. ಓದು ಒಕ್ಕಾಲು, ಜೀವನದಲ್ಲಿ ಓದು ಬರಿ 25% ಮಾತ್ರ ಬುದ್ಧಿ 75% ಆಗಿರುತ್ತದೆ. ಹಾಗಾಗಿ, ಓದು ಕೆಲಸ ಮಾಡಿತು, ಬುದ್ಧಿ ದೇಶ ಆಳಿತು ಎಂದಾಯಿತು. ಆ ನಿಟ್ಟಿನಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಾಗಬೇಕೆಂದರೆ ಈಗಿನ ಮಕ್ಕಳಲ್ಲಿ ಎಡಗಡೆ ಮೆದುಳಿಗೆ ಒತ್ತಡದ ಕೆಲಸಗಳು ಜಾಸ್ತಿಯಾಗಿ ಡಿಪ್ರೆಷನ್ ಜಾಸ್ತಿ, ಸೂಸೈಡ್ ಪ್ರಯತ್ನಗಳು ಜಾಸ್ತಿ, ಅಂತಹವರು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಇದನ್ನು ಕಡ್ಡಾಯವಾಗಿ ಮಾಡುವುದು ಬಹಳ ಸೂಕ್ತವೆಂದು ಈ ಸಮಯದಲ್ಲಿ ನಾನು ಒಬ್ಬ ವೈದ್ಯನಾಗಿ ನನ್ನ ಸಲಹೆಯಾಗಿದೆ.

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಈ ವಿಷಯದ ಬಗ್ಗೆ ಸನ್ಮಾನ್ಯ ಸದಸ್ಯರೆಲ್ಲರೂ ಬಹಳ ಉತ್ತಮವಾದ ವಿಷಯಗಳನ್ನು ವ್ಯಕ್ತ ಮಾಡಿದ್ದಾರೆ. ಇದನ್ನೆಲ್ಲಾ ಈಗಾಗಲೇ ಸರ್ಕಾರ ಸಹ ಏನು ಕ್ರೀಡೆಯನ್ನು promote ಮಾಡಲಿಕ್ಕೆ ಪ್ರಯತ್ನ ಮಾಡಿದೆ. ನಮ್ಮ ಸ್ನೇಹಿತರು ಈ ಬಗ್ಗೆ ಮಾತನಾಡುತ್ತಾ ಎಲ್ಲಿಯೂ ಹಾಸ್ಟೆಲ್‌ಗಳಿಲ್ಲ ಎಂದು ಹೇಳುತ್ತಿದ್ದರು. ಎಲ್ಲಾ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕ್ರೀಡಾ ಹಾಸ್ಟೆಲ್‌ಗಳಿವೆ. ಅದೇ ರೀತಿಯಾಗಿ ಸ್ಟೇಡಿಯಂಗಳನ್ನು ಮಾಡುವಂತಹ ಕೆಲಸ ಎಲ್ಲಾ ಕಡೆ

ನಡೆಯುತ್ತಿದೆ. ಈಗ ನೀವು ಹೇಳುವಂತಹದ್ದು ಈಗ ಶಾಲೆಗಳಲ್ಲಿ ಮತ್ತು ಕಾಲೇಜುಗಳಿಗೆ ಸಾಮಗ್ರಿಗಳನ್ನು ಕೊಡಿಸುವಂತಹ ಪ್ರಶ್ನೆ ಇದರಲ್ಲಿ ಬಂದಿದೆ. ಅದನ್ನು ಬರುವಂತಹ ದಿನಗಳಲ್ಲಿ ತಕ್ಷಣ ಅದನ್ನು ಏರ್ಪಾಡು ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:-** ಸಭಾನಾಯಕರೆ, ಒಂದು ನಿಮಿಷ. ಕ್ರೀಡೆಯನ್ನು ನಡೆಸಲಿಕ್ಕೆ ಕ್ರೀಡಾ ಶಿಕ್ಷಕರನ್ನು ಕೊಡಲಾಗಿದೆ. ಇಲಾಖೆಯವರು ಬಂದು, ಎಲ್ಲಾ ಕಡೆಯವರಿಂದ ಹಣವನ್ನು ಭಿಕ್ಷೆ ಬೇಡಿದಂತೆ ಬೇಡುತ್ತಾರೆ. 5-10 ಸಾವಿರ ರೂಪಾಯಿಗಳಿಗೆ ಕ್ರೀಡಾ ಚಟುವಟಿಕೆಗಳನ್ನು ಮಾಡಿ ಎಂದರೆ ಹೇಗೆ ಮಾಡುತ್ತಾರೆ? ನಾನು ಸಹ ಮೊನ್ನೆ 25,000 ರೂಪಾಯಿಗಳನ್ನು ಕೊಟ್ಟಿದ್ದೇನೆ. ಸರ್ಕಾರದ ಕಡೆಯಿಂದ ನೀವು ಇಷ್ಟೆಲ್ಲಾ ಮಾತನಾಡುತ್ತೀರಿ, ಮಕ್ಕಳ ಕಡೆ ಏತಕ್ಕೆ ಗಮನಹರಿಸುವುದಿಲ್ಲ? ನಾನು ಸಹ ಮಾಸ್ಟರ್ ಡಿಗ್ರಿ ಮುಗಿಸಿ ಬಂದಿದ್ದೇನೆ. ನಾನು ಸಹ ಕ್ರೀಡಾ ಕ್ಷೇತ್ರದಲ್ಲಿರುವ ವ್ಯಕ್ತಿಯಾಗಿದ್ದೇನೆ. ನಾನು ದಿನನಿತ್ಯ ನೋಡುತ್ತಿದ್ದೇನೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಮಕ್ಕಳ ಭವಿಷ್ಯದ ವಿಚಾರದಲ್ಲಿ ನೀವು ಚೆಲ್ಲಾಟವಾಡಬಾರದು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬರುವಂತಹ ದಿನಗಳಲ್ಲಿ ಇದನ್ನು ನಿಭಾಯಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಈಗ ಸದನಕ್ಕೆ ಬಂದಿದ್ದಾರೆ. ವಾಸ್ತವವಾಗಿ 5,000 ಸಾವಿರ ಮತ್ತು 10,000 ಸಾವಿರ ಎಂದು ನೀವು ಏನು ಹೇಳಿದಿರಿ, ಈ ವಿಷಯ ಮಧು ಬಂಗಾರಪ್ಪನವರ ವ್ಯಾಪ್ತಿಗೆ ಬರುತ್ತದೆ. ಅದು ಅಲ್ಲಿಗೆ ಏತಕ್ಕೆ ವರ್ಗಾವಣೆಯಾಯಿತು ಗೊತ್ತಾಗಲಿಲ್ಲ. ಈ ವಿಚಾರವನ್ನು ಮಧು ಬಂಗಾರಪ್ಪನವರ ಗಮನಕ್ಕೆ ತಂದರೆ ಒಳ್ಳೆಯದು.

**ಸಭಾಪತಿಯವರು:-** ಶ್ರೀಯುತ ಮಧು ಬಂಗಾರಪ್ಪನವರೆ, ಕ್ರೀಡೆಗಳಲ್ಲಿ ಮಕ್ಕಳಿಗೆ Primary, Secondary and Pre-university ಗಳಲ್ಲಿ ಉತ್ತಮವಾದಂತಹ ಗುಣಮಟ್ಟವನ್ನು ಅವರಿಗೆ ಮಾಡಬೇಕಾದರೆ ಸರ್ಕಾರದಿಂದ ಅನುಕೂಲತೆಗಳು ಬೇಕು. ಪೌಷ್ಟಿಕಾಂಶ ಬೇಕು, ಅದಕ್ಕೆ ಒಳ್ಳೆಯ ರೀತಿಯಿಂದ ದೈಹಿಕ ಶಿಕ್ಷಣವನ್ನು ತಂದರೆ ಮಕ್ಕಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಚೆನ್ನಾಗಿರುತ್ತಾರೆನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ.

**(ಮುಂದು)**

(039) 04.03.2025 04.20 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೆ, ಈಗ ದೈಹಿಕ ಶಿಕ್ಷಕರ ನೇಮಕಾತಿ ಇಲ್ಲ. ಪೌಷ್ಟಿಕತೆಯು ನನ್ನ ಕಂಟ್ರೋಲ್‌ನಲ್ಲಿತ್ತು. ಸಿಎಸ್‌ಆರ್ ಫಂಡ್‌ಗಳಿಂದ ನೇರವಾಗಿ ತೆಗೆದುಕೊಂಡು ಬಂದು ಎಲ್ಲಾ ವ್ಯವಸ್ಥೆಗಳನ್ನು ನಾನು ಮಾಡಿದ್ದೇನೆ. ಕ್ರೀಡಾ ಇಲಾಖೆಯು ಮಾನ್ಯ ಮುಖ್ಯಮಂತ್ರಿಯವರ ವ್ಯಾಪ್ತಿಗೆ ಬರುತ್ತದೆ. ಅದರ ಅವಶ್ಯಕತೆ ಹೆಚ್ಚು ಇದೆ. ಜೊತೆಗೆ ಕೇವಲ ಕ್ರೀಡಾ ಉಪಕರಣವನ್ನು ಕೊಡುವುದಲ್ಲದೆ ಜಾಗವನ್ನು ಕೂಡ ನಾವು ಸಿದ್ಧ ಪಡಿಸಬೇಕು. ಅದು ಕೂಡ ಸುಮಾರು ಕಡೆಗಳಲ್ಲಿ ಇಲ್ಲ. ಪೌಷ್ಟಿಕತೆಗೆ ನಾವು ಹೆಚ್ಚು ಒತ್ತನ್ನು ಕೊಡುತ್ತೇವೆ.

**ಸಭಾಪತಿಯವರು:-** ರಾಜ್ಯದ ಹಲವು ಶಾಲೆಗಳಲ್ಲಿ ಶೇ.40ರಷ್ಟು ಆಟದ ಮೈದಾನ ಇರುವುದಿಲ್ಲ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೆ, ತಮಗೂ ತಿಳಿದಿರುವಂತೆ ಎಷ್ಟೋ ಕಡೆಗಳಲ್ಲಿ ಆಟದ ಮೈದಾನಗಳನ್ನು ಮಾಡುವುದು ನಮಗೆ practically ಕಷ್ಟಕರವಾಗಿರುತ್ತದೆ. ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಶಾಲೆಗಳ ಮೈದಾನಗಳಲ್ಲಿ ಸುರಕ್ಷಿತವಾಗಿ ಆಟವಾಡುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಬಳಿ ನಾನು ಮಾತನಾಡುತ್ತೇನೆ.

**ಶ್ರೀ ಡಿ.ಎಸ್. ಅರುಣ್:-** ಕ್ರೀಡಾಕೂಟಕ್ಕೆ ರೂ.5000ಗಳನ್ನು ನೀಡುತ್ತಾರೆ. ನಿಮಗೂ ಈ ವಿಷಯ ತಿಳಿದಿದೆ.

**ಸಭಾಪತಿಯವರು:-** ನಾನು ಹೇಳಿದ್ದೇನೆ. ಕ್ರೀಡಾಕೂಟವನ್ನು ನಡೆಸುವುದಕ್ಕೆ ಒಂದು ತಾಲ್ಲೂಕಿಗೆ ರೂ.5000-10000 ಕೊಡುತ್ತಾರೆ. ಇಲಾಖೆಯವರು ಎಲ್ಲರ ಬಳಿ ಬಂದು ಭಿಕ್ಷೆ ಬೇಡುತ್ತಾರೆ.

**ಶ್ರೀ ಮಧು ಬಂಗಾರಪ್ಪ:-** ಇಲ್ಲಾ. Even cultural activities ಗೂ ಸಹ ಕಡಿಮೆ ಹಣ ಕೊಡಲಾಗುತ್ತದೆ.

**ಸಭಾಪತಿಯವರು:-** ನಾನು ಕ್ರೀಡೆಯ ಬಗ್ಗೆ ಹೇಳುತ್ತಿದ್ದೇನೆ.

**(ಆ) ವಿಷಯ:– ಉತ್ತರ ಕರ್ನಾಟಕದ ಹಿಂದುಳಿದ ಕಲ್ಯಾಣ ಕರ್ನಾಟಕದಲ್ಲಿ ಅಪೌಷ್ಟಿಕತೆ ಕಾರಣದಿಂದ ಹೆಣ್ಣು ಮಕ್ಕಳ ಬೆಳವಣಿಗೆ ಕುಂಠಿತವಾಗಿ ತಾಯಂದಿರ ಮರಣದ ಸಂಖ್ಯೆ ಹೆಚ್ಚುತ್ತಿರುವುದರಿಂದ ಪೌಷ್ಟಿಕ ಆಹಾರ ಪೂರೈಕೆ ಮಾಡಿ ಮಕ್ಕಳ ಮತ್ತು ತಾಯಂದಿರ ಮರಣ ಪ್ರಮಾಣವನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಕುರಿತು**

***

**ಡಾ: ತಳವಾರ ಸಾಬಣ್ಣ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಉತ್ತರ ಕರ್ನಾಟಕದ ಹಿಂದುಳಿದ ಕಲ್ಯಾಣ ಕರ್ನಾಟಕದಲ್ಲಿ ಅಪೌಷ್ಟಿಕತೆ ಕಾರಣದಿಂದ ಹೆಣ್ಣು ಮಕ್ಕಳ ಬೆಳವಣಿಗೆ ಕುಂಠಿತವಾಗಿ ತಾಯಂದಿರ ಮರಣದ ಸಂಖ್ಯೆ ಹೆಚ್ಚುತ್ತಿರುವುದರಿಂದ ಪೌಷ್ಟಿಕ ಆಹಾರ ಪೂರೈಕೆ ಮಾಡಿ ಮಕ್ಕಳ ಮತ್ತು ತಾಯಂದಿರ ಮರಣ ಪ್ರಮಾಣವನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಕುರಿತು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೆ...

ಪ್ರಸ್ತುತ ರಾಜ್ಯದಲ್ಲಿ 69921 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯಾದ್ಯಂತ 38,97,482 ಸಂಖ್ಯೆಯ 06 ತಿಂಗಳಿನಿಂದ 06 ವರ್ಷದ ಮಕ್ಕಳು 810845 ಗರ್ಭಿಣಿಯರು ಮತ್ತು ಬಾಣಂತಿಯರು ಮತ್ತು ಮಹತ್ವಾಕಾಂಕ್ಷಿ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಿಂದ 82980 ಪ್ರಾಯ ಪೂರ್ವ ಬಾಲಕಿಯರನ್ನು ಪೂರಕ ಪೌಷ್ಟಿಕ ಆಹಾರ ಸೇವೆಗಾಗಿ ಗುರುತಿಸಲಾಗಿರುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಂಟಿಯಾಗಿ ಈ ಕೆಳಗಿನ ಕ್ರಮಕೈಗೊಳ್ಳಲಾಗುತ್ತಿದೆ.

1) ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಿಲ್ಲೆಟ್ ಲಾಡು, ಅನ್ನ ಸಾಂಬಾರ್, ರವಾ ಉಪ್ಪಿಟ್ಟು, ರವಾ ಪಾಯಸ ಮತ್ತು ಮೊಟ್ಟೆಯನ್ನು ವಿತರಿಸಲಾಗುತ್ತಿದೆ ಹಾಗೂ ಅವರ ಆಯ್ಕೆ ಅನುಸಾರ ಅಂಗನವಾಡಿ ಕೇಂದ್ರದಲ್ಲಿ ಬಿಸಿಊಟ ಸ್ವೀಕರಿಸಲು ಅಥವಾ ಮನೆಗೆ ಆಹಾರ ಸಾಮಗ್ರಿ ಕೊಂಡೊಯ್ಯಲು ಅವಕಾಶ ನೀಡಲಾಗಿರುತ್ತದೆ.
2) ಮಾತೃಪೂರ್ಣ ಯೋಜನೆಯಡಿ ಸೇವೆ ಪಡೆಯುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಆರೋಗ್ಯ ಇಲಾಖೆ ವತಿಯಿಂದ ಕಬ್ಬಿಣದ ಅಂಶದ ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ಸಹ ಒದಗಿಸಲಾಗುತ್ತಿದೆ.
3) ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಪ್ರಾಯ ಪೂರ್ವ ಬಾಲಕಿಯರಿಗೆ ಅಪೌಷ್ಟಿಕತೆ ನಿವಾರಣೆಗಾಗಿ ಪೌಷ್ಟಿಕ ಆಹಾರ ಕಿಟ್ ಅನ್ನು ಒದಗಿಸಲಾಗುತ್ತಿದೆ.
4) ತೀವ್ರ ಅಪೌಷ್ಟಿಕ ಮಕ್ಕಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪೌಷ್ಟಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.
5) ಆರೋಗ್ಯ ಮತ್ತು ಪೌಷ್ಟಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಟಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಪೌಷ್ಟಿಕತೆಯುಳ್ಳ ಆಹಾರಗಳ ಸೇವನೆಯ ಕುರಿತು ತಿಳುವಳಿಕೆ ನೀಡಲಾಗುತ್ತಿದೆ.
6) ಪೋಷಣ್ ಅಭಿಯಾನ ಯೋಜನೆಯಡಿ ಆರೋಗ್ಯ ಇಲಾಖೆಯೊಂದಿಗೆ ಜಂಟಿಯಾಗಿ ಸಮುದಾಯ ಆಧಾರಿತ ಚಟುವಟಿಕೆಗಳು ಹಾಗೂ ಪೋಷಣ್ ಮಾಸಾಚರಣೆ ಮೂಲಕ ಕಿಶೋರಿಯರು ಮತ್ತು ಗರ್ಭಿಣಿ ಬಾಣಂತಿಯರಿಗೆ ಪೌಷ್ಟಿಕ ಆಹಾರದ ಕುರಿತು ಅರಿವು ಮೂಡಿಸಲಾಗುತ್ತಿದೆ.
7) ಆರೋಗ್ಯ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜಂಟಿಯಾಗಿ ಸಮುದಾಯ ಆಧಾರಿತ ಅಪೌಷ್ಟಿಕತೆ ನಿರ್ವಹಣೆಗೆ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ (NFHS) ಅನ್ವಯ ಕರ್ನಾಟಕ ರಾಜ್ಯದಲ್ಲಿ 18-49 ವಯಸ್ಸಿನ ಶೇ 47.8 ರಷ್ಟು ಹೆಣ್ಣು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿರುವುದು ಕಂಡುಬಂದಿರುತ್ತದೆ. ಆದರೆ ಈ ಹಿಂದಿನ NFHS-4 ರ ಸರ್ವೇಗೆ ಹೋಲಿಸಿದಲ್ಲಿ ಶೇ.3.8 ರ ಪ್ರಮಾಣದಲ್ಲಿ ಮಹಿಳೆಯರ ಅಪೌಷ್ಟಿಕತೆಯ ಪ್ರಮಾಣ ಇಳಿಕೆಯಾಗಿರುವುದು ಕಂಡುಬಂದಿರುತ್ತದೆ.

ಅಂಗನವಾಡಿ ಕೇಂದ್ರಗಳಲ್ಲಿನ 06 ತಿಂಗಳಿಂದ 03 ವರ್ಷದ ಮಕ್ಕಳಿಗೆ ಪುಷ್ಟಿ, ಪುಡಿ ಮತ್ತು ಬೆಲ್ಲವನ್ನು ಮನೆಗೆ ವಿತರಿಸಲಾಗುತ್ತಿದೆ. 03 ವರ್ಷದಿಂದ 06 ವರ್ಷದ ಮಕ್ಕಳಿಗೆ ಮಿಲ್ಲೆಟ್ ಲಾಡು, ಅನ್ನ, ಸಾಂಬಾರ್, ರವಾ ಉಪ್ಪಿಟ್ಟು, ರವಾ ಪಾಯಸ ವಿತರಿಸಲಾಗುತ್ತಿದೆ.

ಸೃಷ್ಟಿ ಯೋಜನೆಯಡಿ ಅಂಗನವಾಡಿ ಕೇಂದ್ರದಲ್ಲಿನ 03 ವರ್ಷದಿಂದ 06 ವರ್ಷದ ಎಲ್ಲಾ ಮಕ್ಕಳಿಗೆ 06 ತಿಂಗಳಿನಿಂದ 03 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ಕೋಳಿಮೊಟ್ಟೆಗಳನ್ನು ನೀಡಲಾಗುತ್ತಿದೆ. ಕ್ಷೀರ ಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ಕೆನೆಸಹಿತ ಹಾಲಿನ ಪುಡಿಯನ್ನು ಮನೆಗ ವಿತರಿಸಲಾಗುತ್ತಿದೆ.

ಈ ಮೇಲ್ಕಂಡಂತೆ ಮಹಿಳೆಯರಲ್ಲಿ ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕ್ರಮವಹಿಸಲಾಗುತ್ತಿದೆ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಒಟ್ಟಾರೆ ಈ ವಿಷಯದ ಬಗ್ಗೆ ಮಾಹಿತಿಯನ್ನು ಕೊಡಬೇಕಾದರೆ ಪ್ರಸ್ತುತ ರಾಜ್ಯದಲ್ಲಿ 69,921 ಅಂಗನವಾಡಿ ಕೇಂದ್ರಗಳಿವೆ. 6 ತಿಂಗಳನಿಂದ 6 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ 38,97,482 ಇವೆ. 8,10,845 ಮಂದಿ ಗರ್ಭಿಣಿಯರು ಮತ್ತು ಬಾಣಂತಿಯರಿದ್ದಾರೆ. Aspirational District ಆಗಿರತಕ್ಕಂತಹ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 82980 ಬಾಲಕಿಯರನ್ನು ಗುರುತಿಸಲಾಗಿದೆ.

ಮಾತೃಪೂರ್ಣ ಯೋಜನೆಯ ಮುಖಾಂತರ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಿಲ್ಲೆಟ್ ಲಡ್ಡುಗಳನ್ನು ಕೊಡಲಾಗುತ್ತಿದೆ. ಅನ್ನ, ಸಾಂಬಾರ್, ಪಾಯಸ, ಮೊಟ್ಟೆ, ಹಾಲು ಇಷ್ಟನ್ನು ಕೊಡಲಾಗುತ್ತಿದೆ. ಜೊತೆಯಲ್ಲಿ ಆರೋಗ್ಯ ಇಲಾಖೆಯಿಂದ ಕಬ್ಬಿಣಾಂಶ, ಫೋಲಿಕ್ ಆಸಿಡ್, ಕ್ಯಾಲ್ಷಿಯಂ ಮಾತ್ರೆಗಳನ್ನು ಕೊಡಲಾಗುತ್ತಿದೆ. ಆರು ತಿಂಗಳನಿಂದ ಮೂರು ವರ್ಷದ ಮಕ್ಕಳಿಗೆ ಅವರ ಮನೆಗೆ ತೆಗೆದುಕೊಂಡು ಹೋಗಿ ಕೊಡಲಾಗುತ್ತದೆ. ಅವರಿಗೆ ಪುಷ್ಟಿ ಪೌಡರ್ ಒಂದು ತಿಂಗಳಿಗೆ 2.5 ಕೆ.ಜಿ, ಬೆಲ್ಲ ಒಂದು ತಿಂಗಳಿಗೆ ಒಂದು ಕೆ.ಜಿ., ಹಾಲಿನ ಪುಡಿ ಈ ಮೂರನ್ನೂ ಅವರ ಮನೆಗೆ ಮುಟ್ಟಿಸಲಾಗುತ್ತಿದೆ. ಮೂರು ವರ್ಷದಿಂದ ಆರು ವರ್ಷದವರೆಗಿನ ಮಕ್ಕಳಿಗೆ ಮಿಲ್ಲೆಟ್ ಲಡ್ಡು, ಅನ್ನ ಸಾಂಬಾರ್, ರವಾ ಉಪ್ಪಿಟ್ಟು, ರವಾ ಪಾಯಸ, ಹಾಲು, ಮೊಟ್ಟೆ ಈ ರೀತಿಯಾಗಿ ಸರಬರಾಜು ಮಾಡಲಾಗುತ್ತಿದೆ.

ಅಪೌಷ್ಟಿಕ ಮಕ್ಕಳಲ್ಲಿ normal child ಗಳನ್ನು ಗುರುತಿಸಲಾಗಿದೆ. ಈ ರೀತಿಯಾಗಿ National Family Health Survey ಯಿಂದ ಮಾಹಿತಿ ಬಂದಿದೆ. ಅವರು ಕೊಡುವುದರಲ್ಲಿ 51.6% ಕರ್ನಾಟಕದಲ್ಲಿ ಇದ್ದು, ಈಗ 47.8% ಗೆ ಇಳಿದಿದೆ ಎನ್ನುವುದು ಇಲಾಖೆಯವರ ಬಳಿ ಇರುವ ಮಾಹಿತಿಯಾಗಿದೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ಇದು ತೀರಾ ಗಂಭೀರವಾಗಿರತಕ್ಕ ವಿಷಯ. ಅಪೌಷ್ಟಿಕತೆ ಎನ್ನುವುದು ಮುಂದಿನ ಪೀಳಿಗೆಗೆ ಮಾರಕವಾಗಿರುವ ವಿಷಯ. ಆದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಸರ್ಕಾರಿ ಯೋಜನೆಗಳೇನಿವೆ ಎನ್ನುವುದನ್ನು ಮಾತ್ರ ಕೊಟ್ಟಿದ್ದಾರೆ. ಅದರ ಪಟ್ಟಿ ಕೊಟ್ಟಿದ್ದಾರೆ. ಆದರೆ ಕಲ್ಯಾಣ ಕರ್ನಾಟಕದಲ್ಲಿ ಅಪೌಷ್ಟಿಕತೆಯ ಗಂಭೀರತೆ ಮತ್ತು ಅಲ್ಲಿನ ಹೆಣ್ಣು ಮಕ್ಕಳ ಮೇಲೆ, ಮಹಿಳೆಯರ ಮೇಲೆ ಆಗುವಂತಹ ಪರಿಣಾಮ ಇದು ಮರಣಗಳಿಗೆ ಯಾವ ರೀತಿ ಕಾರಣವಾಗುತ್ತಿದೆ, ಅದರಿಂದ ಇಡೀ ಜನರೇಷನ್‌ಗೆ ಯಾವ ರೀತಿಯಾಗಿ ಪರಿಣಾಮ ಬೀರುತ್ತಿದೆ ಎಂಬುದರ ಕುರಿತು ನಾನು ಸರ್ಕಾರದ ಗಮನ ಸೆಳೆದಿದ್ದೆನು. ದುರದೃಷ್ಟವಶಾತ್ ಗಂಭೀರವಾಗಿರುವ ಪ್ರಶ್ನೆಗೆ ಸರಿಯಾದ ಪ್ರತ್ಯುತ್ತರ ಸಿಕ್ಕಿರುವುದಿಲ್ಲ ಎಂಬುದು ಶೋಚನೀಯ. ಕಾರಣ ಇಷ್ಟೆ. ಒಂದು ಮಗು ಜನ್ಮ ತಾಳಿದ ನಂತರ ಪ್ರಾರಂಭದ ಒಂದು ಸಾವಿರ ದಿನಗಳು ಅಂದರೆ ಸುಮಾರು 3 ವರ್ಷಗಳನ್ನು 'golden period' ಎಂದು ಕರೆಯಲಾಗುತ್ತದೆ. ಆ ಕಾಲದಲ್ಲಿ ನಾವು ಮಕ್ಕಳಿಗೆ ಸರಿಯಾದ ಪೌಷ್ಟಿಕತೆಯನ್ನು ಕೊಟ್ಟರೆ ಅವರ ಬೆಳವಣಿಗೆ ಸರಿಯಾಗಿ ಆಗುತ್ತದೆ. In case ಆ ಪೌಷ್ಟಿಕತೆ ಕೊಡುವಲ್ಲಿ ಏನಾದರೂ ವಿಫಲತೆಯಾದರೆ ಮಕ್ಕಳ ಬೆಳವಣಿಗೆ ಕುಬ್ಜವಾಗುತ್ತದೆ. ಈ ರೀತಿಯ ಕುಂಠಿತ ಬೆಳವಣಿಗೆಗೆ stunted growth ಎಂದು ಕರೆಯುತ್ತೇವೆ. ಮಕ್ಕಳು ಯಾವ ವಯಸ್ಸಿನಲ್ಲಿ ಯಾವ ಪ್ರಮಾಣದಲ್ಲಿ ಬೆಳೆಯಬೇಕು ಎನ್ನುವ ಹಂತದಲ್ಲಿ ಅವರು ಬೆಳೆಯುವುದಿಲ್ಲ. ಅದರಿಂದಾಗಿ ಸಾಕಷ್ಟು ದುಷ್ಪರಿಣಾಮಗಳು ಬೀರುತ್ತವೆ.

ನಾನು ಕಲಬುರಗಿ ಹಾಗೂ ಯಾದಗಿರಿ ಭಾಗಗಳಲ್ಲಿ ಓಡಾಡುವಾಗ ಕಾಲೇಜು ವಿದ್ಯಾರ್ಥಿನಿಯರ ದೈಹಿಕ ಸ್ಥಿತಿಯನ್ನು ನೋಡಿದರೆ ನಮಗೆ ಬಹಳ ಗಂಭೀರವೆನಿಸುತ್ತದೆ. ಬಹಳ ಕುಳ್ಳಗಿರುವ ಹೆಣ್ಣುಮಕ್ಕಳು ಕಾಲೇಜಿನಲ್ಲಿ ಓದುತ್ತಿರುತ್ತಾರೆ. ಇವರಿಗೆ ಮದುವೆಯಾದ ನಂತರ ಹುಟ್ಟುವ ಮಕ್ಕಳು ಎಷ್ಟು ರೋಗಗಳಿಗೆ ತುತ್ತಾಗಬಹುದು ಎನ್ನುವ ವಿಷಯ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಏಕೆಂದರೆ ಬೆಳೆಯುವ ಮಕ್ಕಳಿಗೆ ಪೌಷ್ಟಿಕತೆ ಇಲ್ಲದೆ ಹೋದರೆ ಮುಂದಿನ ದಿನಗಳಲ್ಲಿ ಅವರಿಗೆ ನಾವೇ ಉದಾಹರಣೆಯಾಗುತ್ತೇವೆ. ನಮಗೆ ಯಾವ ಕಾಲದಲ್ಲಿ ತಿನ್ನುವುದಕ್ಕೆ ಸಿಗಬೇಕಾಗಿತ್ತೋ ಆಗ ತಿನ್ನಲಿಕ್ಕೆ ಏನೂ ಸಿಗಲಿಲ್ಲ. ತಿನ್ನುವುದಕ್ಕೆ ಎಲ್ಲಾ ಸಿಗುವಾಗ ತಿನ್ನುವ ಅವಕಾಶವಿರುವುದಿಲ್ಲ. ಈಗಾಗಲೇ ಮಾನ್ಯ ಶರವಣ ಅವರು ಅದನ್ನು ಹೇಳಿದರು. ನಮ್ಮ ಕರ್ನಾಟಕದಲ್ಲಿ 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಶೇ.35 ರಷ್ಟು ಬೆಳವಣಿಗೆ ಕುಂಠಿತಗೊಂಡಿರುವುದನ್ನು ನಾವು ಕಾಣಬಹುದು. Almost ಶೇ.40 ರಷ್ಟು ಕುಂಠಿತ

ಬೆಳವಣಿಗೆಯನ್ನು ನಾವು ಕಾಣುತ್ತೇವೆ. ಈ ಪರಿಸ್ಥಿತಿಯನ್ನು ಉತ್ತರ ಕರ್ನಾಟಕ ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಾವು ಕಾಣುತ್ತೇವೆ. ಏಕೆಂದರೆ ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಜೇವರ್ಗಿ, ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕು, ಯಾದಗಿರಿ ಜಿಲ್ಲೆಯ ಯಾದಗಿರಿ ಮತ್ತು ಗುರುಮಿಠ್ಕಲ್ ತಾಲ್ಲೂಕುಗಳಲ್ಲಿ ನಾವು ಗರಿಷ್ಠ ಮಟ್ಟದ ಅಪೌಷ್ಟಿಕತೆಯನ್ನು ಕಾಣುತ್ತೇವೆ. ಗರಿಷ್ಠ ಮಟ್ಟದ ಅಪೌಷ್ಟಿಕತೆ ಇರುವ ಕಾರಣದಿಂದಾಗಿ ಕುಬ್ಜ ಬೆಳವಣಿಗೆಯನ್ನು ನಾವು ಇಲ್ಲಿ ಕಾಣುತ್ತೇವೆ. ಏಕೆಂದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಡತನ ಹೆಚ್ಚಿದೆ, ವೇತನ ಪ್ರಮಾಣ ಕಡಿಮೆಯಿದೆ. ಶಿಕ್ಷಣದ ಕೊರತೆಯಿದೆ. Standard of living ಕೂಡ ಕಡಿಮೆಯಿದೆ. ಅವರಿಗೆ ಬೇಕಾದಂತಹ ಆರೋಗ್ಯದ ಸವಲತ್ತುಗಳು ಕೂಡ ಸರಿಯಾಗಿ ಇಲ್ಲ. ಅದರೊಂದಿಗೆ ಆ ಭಾಗದಲ್ಲಿ ಇವತ್ತಿನವರೆಗೆ ಮೌಢ್ಯತೆ ಬಹಳ ಹೆಚ್ಚಿನ ಪ್ರಮಾಣದಲ್ಲಿದೆ. ಹೆಣ್ಣು ಮಗುವಿಗೆ ಅನಾರೋಗ್ಯವಾದರೆ ತಂದೆ-ತಾಯಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಿಲ್ಲ. ಒಲೆಯಲ್ಲಿರುವ ಬೂದಿಯನ್ನು ತೆಗೆದುಕೊಂಡು ಹಣೆಗೆ ಹಚ್ಚುತ್ತಾರೆ ಅಥವಾ ತಲೆಗೆ ಹಚ್ಚುತ್ತಾರೆ. ಮಗು ಆರಾಮಾಗುತ್ತದೆ ಎಂದು ಅವರ ಭಾವನೆ. ರೋಗದ ಗಂಭೀರತೆ ಹೆಚ್ಚಾಗಿ ಆ ಮಗು ಸಾಯುವ ಪರಿಸ್ಥಿತಿ ತಲುಪುತ್ತದೆ. ಈ ರೀತಿಯಾದ ಉದಾಹರಣೆಗಳನ್ನು ನಾವು ಬಹಳಷ್ಟು ಇಲ್ಲಿ ಕಾಣುತ್ತೇವೆ. ಈ ಅಪೌಷ್ಟಿಕತೆ ಹೆಚ್ಚಿರುವುದರ ಪರಿಣಾಮ ಏನಾಗುತ್ತದೆ? ಮಾನ್ಯ ಧನಂಜಯ ಸರ್ಜಿಯವರು ಹೇಳಿದರು. ಅವರ ಮೆದುಳಿನ ಮೇಲೆ ಪರಿಣಾಮ ಬೀರುತ್ತದೆ. ಅಪೌಷ್ಟಿಕತೆಯ ಕಾರಣದಿಂದ ಮೆದುಳು ಯಾವ ಹಂತದಲ್ಲಿ ಬೆಳೆಯಬೇಕೋ ಮತ್ತು ಯಾವ ಹಂತದಲ್ಲಿ ಚುರುಕುತನ ಬರಬೇಕೊ ಅದು ಬರುವುದಿಲ್ಲ. ಇದರಿಂದಾಗಿ ಮಕ್ಕಳಲ್ಲಿ ಮಂದ ಬುದ್ಧಿತನ ಹೆಚ್ಚಾಗುತ್ತದೆ. ಮಂದ ಬುದ್ಧಿ ಎಂದರೆ ಅವರಲ್ಲಿ ಅಷ್ಟು ಚುರುಕುತನ ಬರುವುದಿಲ್ಲ.

**ಸಭಾಪತಿಯವರು:-** ಸರ್ಕಾರ ಏನು ಮಾಡಬೇಕೆಂಬುದನ್ನು ಹೇಳಿ.

**ಡಾ:ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಎರಡು ನಿಮಿಷ ಅವಕಾಶ ಮಾಡಿಕೊಡಬೇಕು. . ಕೊನೆಯದಾಗಿ ನಾನು ಹೇಳುವುದೇನೆಂದರೆ,

ಇದರಿಂದಾಗಿ ಮಕ್ಕಳ ಮೆದುಳಿನ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.

**(ಮುಂದು)**

(040) 04-03-2025/4.30/ಎಂವಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-**

ಅದು ಅಲ್ಲದೆ, ತಾಯಂದಿರ ಮರಣ ಸಂಖ್ಯೆ ಹೆಚ್ಚಾಗುತ್ತದೆ. ಮತ್ತೆ ಮಕ್ಕಳ ಮರಣ ಸಂಖ್ಯೆ ಹೆಚ್ಚಾಗುತ್ತದೆ. ಏಕೆಂದರೆ, 2001 ಮತ್ತು 2003 ರಲ್ಲಿ 1000 ತಾಯಂದಿರಿಗೆ 301 ತಾಯಂದಿರು ಮರಣ ಹೊಂದಿರುತ್ತಾರೆ. ಅದು 2018 ಮತ್ತು 2020ರಲ್ಲಿ 1000ಕ್ಕೆ 97 ತಾಯಂದಿರು ಸಾಯುವಂತಹ ಸ್ಥಿತಿ ಇವತ್ತಿನವರೆಗೆ ಇದೆ. ಒಬ್ಬ ತಾಯಿ ಸತ್ತರೂ ಸಹ ತಾಯಿಯ ಜೀವಕ್ಕೆ ಮೌಲ್ಯವಿದೆ. ಈಗ 97 ತಾಯಂದಿರು ಸಾಯುತ್ತಾರೆಂದರೆ, ಅವರಿಗೆ ಗೌರವ ಮತ್ತು ಬೆಲೆ ಇಲ್ಲವೇ? ನಾನು ಇದನ್ನೇ ಗಂಭೀರತೆ ಎಂದು ಹೇಳುತ್ತಿರುವುದು. ತಾವು ನನಗೆ ಮಾತನಾಡಲು ಅವಕಾಶ ನೀಡಿರುವುದರಿಂದ ಈ ವಿಷಯವನ್ನು ಮಂಡನೆ ಮಾಡುತ್ತಿದ್ದೇನೆ. ಇನ್ನು ಶಿಶು ಮರಣ 2021ರಲ್ಲಿ 1000 ಮಕ್ಕಳು ಹುಟ್ಟಿದರೆ, ಸುಮಾರು 27 ಮಕ್ಕಳು ಸಾಯುತ್ತಾರೆ. ಅಂದರೆ, 27 ಜನ ಮಕ್ಕಳ ಭವಿಷ್ಯ ಅಪೌಷ್ಟಿಕತೆಯ ಕಾರಣದಿಂದಲೇ ನಾವು ಹಿಚುಕ್ಕುತ್ತಿದ್ದೇವೆ ಎಂದು ಒಂದು ಸಂದೇಶವಿದು. ಈ ಕಾರಣಕ್ಕಾಗಿ ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ ಮತ್ತು ಗದಗ ಜಿಲ್ಲೆಗಳಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇರುವುದರಿಂದ ಸರ್ಕಾರವು ಇದಕ್ಕೆ ಬೇಕಾಗಿರುವಂತಹ ಸಕಲ ಸವಲತ್ತುಗಳನ್ನು ಕೊಡುವುದಲ್ಲದೆ ಅದನ್ನು ಯಾವ ರೀತಿಯಲ್ಲಿ ಅನುಷ್ಠಾನ ಮಾಡಬೇಕು. ಅವರು ಇದನ್ನು ಕೊಟ್ಟಿದ್ದಾರೆ. ಅದು ಎಷ್ಟು ಅವರಿಗೆ ಮುಟ್ಟುತ್ತಿದೆ, ಅದು ಮುಟ್ಟಿದರೆ ಅದನ್ನು ಎಷ್ಟು ಜನರು ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಆಗಿರುವಂತಹ ಪರಿಣಾಮ ಏನು? ಅದರ impact ಏನಿದೆ? ಇಲಾಖೆಯವರು ಏನಾದರೂ ಅಧ್ಯಯನ ಮಾಡಿದ್ದಾರೆಯೇ? ಅಧ್ಯಯನ ಮಾಡಿರುವುದಕ್ಕೆ ಏನಾದರೂ ಪರಿಹಾರ ಕಂಡುಕೊಂಡಿದ್ದಾರೆಯೆ? ಇದು ಯಾವುದೂ ಇಲ್ಲ. ನಾವು ಸಹ statistics ಅನ್ನು ಕೊಡುತ್ತೇವೆ. ನಿನ್ನೆ Governor ಹೆಸರಿನಲ್ಲಿ ಸಹ statistics ಅನ್ನು ಕೊಟ್ಟಿದ್ದೇವೆ. ಇಲ್ಲಿಯೂ ಸಹ ಅದೇ ರೀತಿಯಾಗಿರುವಂತಹ statistics. ಇದು ಕೇವಲ programme ಗಳು. ಅಲ್ಲಿರುವಂತಹ ಕಾರ್ಯಕರ್ತರು ಎಷ್ಟು ಕೆಲಸ ಮಾಡುತ್ತಿದ್ದಾರೆ. ಅಂಗನವಾಡಿ ಶಿಕ್ಷಕಿಯರು ಮತ್ತು ಆಶಾ ಕಾರ್ಯಕರ್ತೆಯರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ. ಜನರು ಅದನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ? ಈಗ ಬೆಲ್ಲ ಮತ್ತು ಕೊಬ್ಬರಿ ಕೊಡುತ್ತಾರೆ. ಅವರು ಅದನ್ನು ತೆಗೆದುಕೊಳ್ಳುತ್ತಾರೆ. ಆದರೆ, ಅದನ್ನು ಹೆಣ್ಣುಮಕ್ಕಳು ತಿನ್ನುವುದೇ ಇಲ್ಲ. ಅದನ್ನು ಗಂಡು ಮಕ್ಕಳೇ ತಿನ್ನುತ್ತಾರೆ. ಅಂದರೆ, ಅಲ್ಲಿ ಆ ರೀತಿಯಾದಂತಹ ಸ್ಥಿತಿ ಇದೆ. ಏಕೆಂದರೆ, ಎಲ್ಲವನ್ನು ಸಹ ಗಂಡು ಮಕ್ಕಳಿಗೆ ಕೊಡಬೇಕು. ನನ್ನ ತಾಯಿ ಮನೆಯಲ್ಲಿ ಆರಾಮವಿಲ್ಲವೆಂದು ಆಸ್ಪತ್ರೆಗೆ ಹೋಗೋಣವೆಂದರೆ, ಅದಕ್ಕೆ ಅವರು ಮನೆಯಲ್ಲಿನ ಬೂದಿ ಹಚ್ಚಿಕೊಂಡಿದ್ದೇನೆ ಸಾಕು ಆರಾಮಾಗುತ್ತೇನೆಂದು ಹೇಳುತ್ತಾರೆ. ಅಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ಅಲ್ಲಿ ಬಹಳ ಮೌಢ್ಯತೆ ಇದೆ. ಮಾನ್ಯ ಸಭಾನಾಯಕರು ಸಹ ಅದೇ ಭಾಗದವರು. ಹೀಗಾಗಿ ಇಲ್ಲಿ ಈ ರೀತಿಯ ಎಲ್ಲಾ ಪರಿಣಾಮಗಳು ಇರುವುದರಿಂದ ವಿಶೇಷವಾಗಿ ಅಪೌಷ್ಟಿಕತೆ ಹೆಣ್ಣು ಮಕ್ಕಳ ಮೇಲೆ ಆಗುವಂತಹ ಪರಿಣಾಮ. ಅಲ್ಲಿ ಕುಬ್ಜ ಬೆಳವಣಿಗೆ ಇದೆ. ಅಲ್ಲಿ 5 feet ಗಿಂತ ಹೆಚ್ಚು ಬೆಳವಣಿಗೆ ಆಗುವುದೇ ಇಲ್ಲ. ನಮ್ಮ ಮತ್ತು ನಮ್ಮ ಮಕ್ಕಳ ಬೆಳವಣಿಗೆಯಲ್ಲಿ ಬಹಳ ವ್ಯತ್ಯಾಸ ಕಾಣುತ್ತೇವೆ. ಏಕೆಂದರೆ, ಅಲ್ಲಿನ ಪರಿಸ್ಥಿತಿ ಆ ರೀತಿ ಇದೆ. ಈ ರೀತಿಯಾದರೆ,

ಅವರ ಭವಿಷ್ಯವನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ. ಅಸಮಾನತೆ ಹೋಗುವುದಿಲ್ಲ. ನಾವು ಏನು ಮಾತನಾಡಿದರೂ ಸಹ ಅದಕ್ಕೆ ಬೆಲೆಯೇ ಇರುವುದಿಲ್ಲ. ಆ ಕಾರಣಕ್ಕಾಗಿ, ಕೊನೆಯದಾಗಿ ವರ್ಷಕ್ಕೊಮ್ಮೆಯಾದರೂ ತಾಯಿ ಮಗುವಿನ ತಪಾಸಣೆ ಕಡ್ಡಾಯವಾಗಿ ಆಗಬೇಕು. ಇದು ಬಹಳ ಮುಖ್ಯವಾದುದು. ಅಂದರೆ, ತಾವು ಕೊಟ್ಟಂತಹ ಈ ಎಲ್ಲಾ ಸವಲತ್ತುಗಳು ಪರಿಣಾಮ ಬೀರಿದ್ದಾವೋ ಇಲ್ಲವೋ ಎನ್ನುವುದನ್ನು ನೋಡಬೇಕು. ಅಂಗನವಾಡಿಗಳ ಮುಖಾಂತರ ಕೊಡುವಂತಹ ಎಲ್ಲಾ ಸವಲತ್ತುಗಳು ಪರಿಣಾಮಕಾರಿಯಾಗಿ ಇದ್ದಾವೋ ಇಲ್ಲವೋ ಎಂದು ಪೌಷ್ಟಿಕ ಆಹಾರದ ಕುರಿತು ಒಂದು ಮಾನಿಟರಿಂಗ್ ಮತ್ತು ಸೂಪರ್‌ವಿಷನ್ ಇರಬೇಕು. ಆರೋಗ್ಯ ವಲಯಕ್ಕೆ ಬೇಕಾಗಿರುವಂತಹ ಬಜೆಟ್ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕಕ್ಕೆ ಹೆಚ್ಚಿನ ಅನುದಾನ ಕೊಡಬೇಕು. ಶೇಕಡಾ ೮ರಷ್ಟು ಅನುದಾನವನ್ನು ಆರೋಗ್ಯ ಇಲಾಖೆಗೆ ಕೊಡಬೇಕು. ಅದು ಸಾಮಾನ್ಯವಾದ ಬೇಡಿಕೆ ಇದೆ. ಆದರೆ, ಅದಕ್ಕೆ ಎಷ್ಟು ಕೊಡುತ್ತೇವೆಂದು ತಮ್ಮೆಲ್ಲರಿಗೂ ಸಹ ಗೊತ್ತಿದೆ. ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ವಿಶೇಷವಾಗಿ ಜಾಗೃತಿ ಮೂಡಿಸಬೇಕು. ತಮಗೆ ಗೊತ್ತಿರುವಂತೆ ಲಂಬಾಣಿ ತಾಂಡಾಗಳಲ್ಲಿ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ. ಈಗ ಸ್ಲಮ್ ಏರಿಯಾಗಳಲ್ಲಿ ಹಿಂದುಳಿದ ವರ್ಗದವರು, ಎಸ್.ಸಿ/ಎಸ್.ಟಿ. ಜನಾಂಗದವರು ಪೌಷ್ಟಿಕ ಆಹಾರವನ್ನು ಕೊಡುವುದಕ್ಕೆ ಆಗುವುದಿಲ್ಲ ಮತ್ತು ಸಾಕುವುದಕ್ಕೆ ಆಗುವುದಿಲ್ಲ ತಮ್ಮ ಮಕ್ಕಳನ್ನು ಮಾರಾಟ ಮಾಡುತ್ತಾರೆ. ಮತ್ತೆ ಹೆಣ್ಣು ಮಕ್ಕಳನ್ನು ಮಾರಾಟ ಮಾಡುತ್ತಾರೆ. ಕೊನೆಯದಾಗಿ ಮೂಢನಂಬಿಕೆ ಕುರಿತು ಆಶಾ ಕಾರ್ಯಕರ್ತೆಯರು ಜಾಗೃತಿ ಮೂಡಿಸಬೇಕು. ಆಶಾ ಕಾರ್ಯಕರ್ತೆಯರ ಸೇವೆಯನ್ನು ಸಂಪೂರ್ಣವಾಗಿ ಪರಿಣಾಮಕಾರಿಯಾಗಿ ಬಳಸಿಕೊಂಡು, ಅಪೌಷ್ಟಿಕತೆಯ ಕಾರ್ಯಯೋಜನೆಯನ್ನು ಜಾರಿಗೆ ತರಬೇಕು. ಕೊನೆಯದಾಗಿ ಪೌಷ್ಟಿಕತೆ, ಆಹಾರದ ಉಪಯೋಗದ ಬಗ್ಗೆ ಇದನ್ನು ಪಠ್ಯಕ್ರಮದಲ್ಲಿ ತರಬೇಕು. ಇದನ್ನು ಪಠ್ಯಕ್ರಮದಲ್ಲಿ ತಂದಾಗ, ಅದರ ಮಹತ್ವ ಗೊತ್ತಾಗುತ್ತದೆ. ನಾವು ಏನು ತಿಂದರೆ ಯಾವುದು ನಮಗೆ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಮತ್ತು ಹೇಗೆ ಪರಿಣಾಮಕಾರಿ ಬೀರುತ್ತದೆಂದು ಹೇಳುತ್ತಾ, ತಾವು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮುಖ್ಯವಾಗಿ ಕಲ್ಯಾಣ ಕರ್ನಾಟಕ ಮತ್ತು aspirational districts ಆದಂತಹ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಬಗ್ಗೆ ಕೇಳಿದ್ದಾರೆ. ಅಲ್ಲಿ ಅನೇಕ ಬಾರಿ ಕೆ.ಡಿ.ಪಿ. ಸಭೆಗಳು ನಡೆದು, ಬಹಳಷ್ಟು ವರ್ಷಗಳಿಂದ ಆ ಭಾಗಗಳಲ್ಲಿ ಅನೇಕ ರೀತಿಯಾದಂತಹ ಐ.ಎಂ.ಆರ್. ಕುರಿತು ಆರೋಗ್ಯ ಇಲಾಖೆಯವರು ಚರ್ಚೆ ಮಾಡಿದ್ದಾರೆ. ಕಳೆದ ಬಾರಿ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಬಂದಾಗ ಅವರು ಎರಡೂ ಜಿಲ್ಲೆಗಳ ಆಶಾ ಕಾರ್ಯಕರ್ತೆಯರನ್ನು ಕರೆದು, ಮತ್ತೆ ಅಲ್ಲಿ ಬಂದಿರುವಂತಹ ವರದಿಗಳನ್ನು ನೋಡಿ, ಅವರಿಗೆ ಯಾವ ರೀತಿಯಾದಂತಹ ಸೂಚನೆಯನ್ನು ಕೊಡಬೇಕು ಎಂದು ಕಳೆದ ಒಂದು ತಿಂಗಳಿನಲ್ಲಿ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಿಗೆ ಬಂದು ಮಾತನಾಡಿದ್ದಾರೆ. ಅದರ ಜೊತೆಗೆ ಬಾಣಂತಿಯರ ರೆಕಾರ್ಡ್ ಬೇಕಾದರೆ,

ಆರೋಗ್ಯ ಇಲಾಖೆಯ ವತಿಯಿಂದ ಮಾಹಿತಿ ಸಿಗುತ್ತದೆ. ಈಗ ICMR (Indian Council of Medical Research) ನವರು ಏನು recommendations ಮಾಡಿದ್ದಾರೆ, ಆ recommendations ಪ್ರಕಾರ ಪೌಷ್ಟಿಕ ಆಹಾರವನ್ನು ಕೊಡುತ್ತಿದ್ದಾರೆ. ಅದರಲ್ಲಿ aspirational districts ಇರತಕ್ಕಂತಹ ಪ್ರದೇಶದ ಬಗ್ಗೆ ಏನು ಮಾತನಾಡಿದ್ದಾರೆ, ಆ ಪ್ರದೇಶದಲ್ಲಿ ಈಗಾಗಲೇ 2024-25ನೇ ಸಾಲಿನಲ್ಲಿ ಸುಮಾರು 14,591 ಮಕ್ಕಳು ಅಪೌಷ್ಟಿಕತೆಯಿಂದ ಇದ್ದಾರೆಂದು ಗುರುತಿಸಿದ್ದಾರೆ. ಅವರಿಗೆ ಏನು ಮಾಡುತ್ತಾರೆಂದರೆ, ಆರು ವರ್ಷದ ಒಳಗೆ ಇರುವಂತಹ ಮಕ್ಕಳಿಗೆ, normal ಆಗಿ ಇರುವ ಮಕ್ಕಳಿಗೆ ಕೊಡುವಂತಹ ಆಹಾರದ one and half times ಜಾಸ್ತಿ ಇವರಿಗೆ ಕೊಡುತ್ತಿದ್ದಾರೆ. ಹಾಗಾಗಿ, ಆ ಎರಡೂ ಜಿಲ್ಲೆಗಳ ಬಗ್ಗೆ ಏನು ಮಾತನಾಡಿದ್ದಾರೆ, ಆ ಎರಡೂ ಜಿಲ್ಲೆಗಳಲ್ಲಿ ವಿಶೇಷವಾದ attention ಅನ್ನು ಸರ್ಕಾರ ಕೊಡುತ್ತಿದೆ. ಅದನ್ನು ಆರೋಗ್ಯ ಇಲಾಖೆಯವರು ಸಹ ನೋಡುತ್ತಿದ್ದಾರೆ. ಮತ್ತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಸಹ ನೋಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿರುವಂತಹ ವಿಷಯಗಳನ್ನು ಗಮನಿಸಿ ಮುಂದೆ ಅವರಿಗೆ awareness ತರುವ ಕಾರ್ಯಕ್ರಮಗಳು ಆಶಾ ಕಾರ್ಯಕರ್ತೆಯರ ಮುಖಾಂತರ ನಡೆಯುತ್ತಿವೆ. ಅದರ ಜೊತೆಗೆ ಬಜೆಟ್ ಒದಗಿಸಬೇಕೆಂದು ತಿಳಿಸಿದ್ದಾರೆ. ಸಹಜವಾಗಿ ಅದಕ್ಕೆ ಏನು ಬೇಕಾಗುತ್ತದೆ ಅದನ್ನೆಲ್ಲಾ ಬಜೆಟ್‌ನಲ್ಲಿ ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

**ಇ) ವಿಷಯ:- ರಾಜ್ಯದಲ್ಲಿ ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದಿಸಲು ಪ್ರೋತ್ಸಾಹ ಮತ್ತು ಕೆಲವು ನಿರ್ಬಂಧಗಳನ್ನು ಸಡಿಲಗೊಳಸಲು ಯೋಜನೆಗಳನ್ನು ರೂಪಿಸುವ ಕುರಿತು.**

---

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದಿಸಲು ಪ್ರೋತ್ಸಾಹ ಮತ್ತು ಕೆಲವು ನಿರ್ಬಂಧಗಳನ್ನು ಸಡಿಲಗೊಳಸಲು ಯೋಜನೆಗಳನ್ನು ರೂಪಿಸುವ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ,..

**ಉತ್ತರ**:- ರಾಜ್ಯ ಸರ್ಕಾರವು ನವೀಕರಿಸಬಹುದಾದ ಇಂಧನ ನೀತಿ 2022-27ರ ನೀತಿಯ ಅವಧಿಯಲ್ಲಿ 1GW ಸೋಲಾರ್ ರೂಫ್ ಟಾಪ್ ಯೋಜನೆಯನ್ನೊಳಗೊಂಡಂತೆ 10GW ಸಾಮರ್ಥ್ಯದ ಸೋಲಾರ್ ಯೋಜನೆಗಳನ್ನು ಮತ್ತು ಇತರೆ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿದೆ.

ಇದಲ್ಲದೇ, ಕೇಂದ್ರ ಸರ್ಕಾರವು ದಿನಾಂಕ: 03.07.2024 ರಂದು ಸರ್ಕಾರಿ ಕಛೇರಿಗಳ ಮೇಲೆ ಸೋಲಾರ್ ರೂಫ್ ಟಾಪ್ ಘಟಕಗಳನ್ನು ಅಳವಡಿಸುವ ಕುರಿತಂತೆ ಮಾರ್ಗಸೂಚಿಯನ್ನು ಜಾರಿಗೆ ತಂದಿರುತ್ತದೆ (Operation Guidelines for saturation of Government building with rooftop solar under PM Surya Ghar Muft Bijili Yojana).

ಇದಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ, ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ಸೌರ ಘಟಕಗಳನ್ನು ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ನಿರ್ದೇಶಿಸಲಾಗಿದೆ.

ಅದರಂತೆ, ರಾಜ್ಯ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ಸೌರ ಘಟಕಗಳನ್ನು ಅಳವಡಿಸಲು ಕಟ್ಟಡಗಳನ್ನು ಗುರುತಿಸಿ, ಅಗತ್ಯ ವಿವರಗಳನ್ನು ನೀಡಲು ಅನುವಾಗುವಂತೆ Nodal Department ಆಗಿ ಲೋಕೋಪಯೋಗಿ ಇಲಾಖೆಯನ್ನು ನೇಮಿಸಲಾಗಿದೆ. ಕ್ರೆಡಲ್ ಸಂಸ್ಥೆಯನ್ನು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ Nodal Agency ಆಗಿ ನೇಮಿಸಲಾಗಿದೆ.

ಲೋಕೋಪಯೋಗಿ ಇಲಾಖೆ ಯಿಂದ ಸರ್ಕಾರಿ ಕಟ್ಟಡಗಳ ಜಾಗಗಳ ವಿವರಗಳನ್ನು ಪಡೆದು ಯೋಜನಾ ಸಾಮರ್ಥ್ಯವನ್ನು ನಿಗಧಿಪಡಿಸಿ ಯೋಜನಾ ಅನುಷ್ಠಾನಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮುಂದುವರೆದು, ಸೌರ ಮೇಲ್ಛಾವಣಿ ಘಟಕಗಳ ಸ್ಥಾಪನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಭಾರತ ಸರ್ಕಾರವು **PM ಸೂರ್ಯ ಘರ್ ಯೋಜನೆಯನ್ನು** ದಿನಾಂಕ 22.01.2024 ರಂದು ಜಾರಿಗೆ ತಂದಿದ್ದು, ಈ ಯೋಜನೆಯಡಿ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸುವ ಗೃಹ ಬಳಕೆ ಗ್ರಾಹಕರಿಗೆ ಕೇಂದ್ರ ಸರ್ಕಾರದಿಂದ ಈ ಕೆಳಕಂಡಂತೆ ಸಹಾಯಧನವನ್ನು ಒದಗಿಸಲಾಗುತ್ತದೆ.

| Sl No | Type of Residential Segment | Present CFA applicable |
|---|---|---|
| 1. | Residential sector (first 2kW of RTS capacity or part thereof) | Rs. 30,000 per kW or part thereof |
| 2. | Residential sector (with additional RTS capacity of 1 kW or part thereof) | Rs. 18,000 for additional kW or part thereof |
| 3. | Residential sector (additional RTS capacity beyond 3 kW) | No additional CFA |
| 4. | Group Housing Societies/Residential Welfare Associations (GHS/RWA) etc., for common facilities, including EV Charging, up to 500kW (@3 kW per house), with the upper limit being inclusive of individual rooftop plants installed by individual residents in the GHS/RWA) | Rs. 18,000 per kW |

(Solar roof top ಪ್ರೋತ್ಸಾಹಿಸುವ / ಅನುಷ್ಠಾನಗೊಳಿಸುವ ಸಲುವಾಗಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಎಲ್ಲಾ ವಿಸಕಂಗಳಿಗೆ ನಿರ್ದೇಶನಗಳನ್ನು ನೀಡಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಇದಲ್ಲದೆ, ಗ್ರಾಹಕರ/ ಅಧಿಕಾರಿಗಳ ಕೈಪಿಡಿ, ಸರ್ಕಾರದ ಅಧಿಕೃತ ಜ್ಞಾಪನಾ ಪತ್ರಗಳು ಹಾಗೂ ಸುತ್ತೋಲೆಗಳನ್ನು ಅಂತರ್ಜಾಲದಲ್ಲಿ ಹಾಗೂ ಆನ್‌ಲೈನ್ ಮೂಲಕವೇ ಅರ್ಜಿಗಳು ಹಾಗೂ ನೋಂದಣಿ ಶುಲ್ಕ ಪಾವತಿಸಲು ಸಾಫ್ಟ್‌ವೇರ್ ಸಿದ್ಧಪಡಿಸಲಾಗಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ 418 ವೆಂಡರ್‌ಗಳನ್ನು ಎಂಪೆನಲ್ ಮಾಡಲಾಗಿರುತ್ತದೆ.

**PM ಸೂರ್ಯ ಘರ್ ಯೋಜನೆಯಡಿ ರಾಜ್ಯದಲ್ಲಿ ಈವರೆಗೆ 5713 ಸಂಖ್ಯೆಯ (21.68MW) ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ. ಇದಲ್ಲದೆ, ಜನವರಿ-2025ರ ಅಂತ್ಯಕ್ಕೆ ಒಟ್ಟಾರೆಯಾಗಿ 700 MW Solar roof top ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.**

ರಾಜ್ಯವು ಪ್ರಸ್ತುತ ದೇಶದಲ್ಲಿಯೇ ಸೌರ ಯೋಜನೆಗಳ ಸ್ಥಾಪಿತ ಸಾಮರ್ಥ್ಯದಲ್ಲಿ 4ನೇ ಸ್ಥಾನದಲ್ಲಿದ್ದು, ವಿವಿಧ ಮಾದರಿಯ ಸೌರಶಕ್ತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾದ ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಸಿ ಸರ್ಕಾರಿ ಕಟ್ಟಡ ಮತ್ತು ಕಛೇರಿಗಳ ಮೇಲೆ ಸೋಲಾರ್ ಅನ್ನು ಅಳವಡಿಸುವುದಕ್ಕೆ ನಿರ್ದೇಶನವನ್ನು ಕೊಡಲಾಗಿದೆ. ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ಒಂದು ಗಿಗಾವಾಟ್ ಅಂದರೆ ಒಂದು ಸಾವಿರ ಮೆಗಾವಾಟ್ ರೂಫ್ ಟಾಪ್ ಸೋಲಾರ್ ಅನ್ನು ಉತ್ಪಾದಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದಿಂದ ಪಿ.ಎಂ. ಸೂರ್ಯ ಘರ್ ಯೋಜನೆಯಲ್ಲಿ ಸಬ್ಸಿಡಿ ಕೊಡುತ್ತಿದ್ದಾರೆ. ಎರಡು ಕಿಲೋ ವಾಟ್‌ಗೆ ರೂ.30,000/- ಹೆಚ್ಚುವರಿ ಕಿಲೋವಾಟ್‌ಗೆ ರೂ.18,000/-. ಒಟ್ಟು ಗರಿಷ್ಟ ರೂ.78,000/- ಗಳಷ್ಟು ಸಬ್ಸಿಡಿ ಕೊಡುತ್ತಿದ್ದಾರೆ. ಬಹುಶಃ ಇದು ಒಂದು ಒಳ್ಳೆಯ ಕಾರ್ಯಕ್ರಮ. ಇದನ್ನು ಅಳವಡಿಸುವುದಕ್ಕೆ ನಮ್ಮ ರಾಜ್ಯ ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಮತ್ತು ಇಲಾಖೆಯ ಗಮನಕ್ಕೆ ತರುವುದಕ್ಕೆ ಪ್ರಮುಖ ಕಾರಣ ಏನೆಂದರೆ, ಈ ಹಿಂದೆ ಅಂದರೆ 2013-14ರಲ್ಲಿ ನಾನು ಪ್ರಥಮವಾಗಿ ಶಾಸಕನಾಗಿ ಬಂದಾಗ ಆ ಸಂದರ್ಭದಲ್ಲೂ ಕೂಡ ನಾವು ರೂಫ್ ಟಾಪ್ ಸೋಲಾರ್ ಎಲೆಕ್ಟ್ರಿಸಿಟಿಯನ್ನು ಉತ್ಪಾದನೆ ಮಾಡುವುದಕ್ಕೆ ಹೆಚ್ಚು ಉತ್ತೇಜನವನ್ನು ನೀಡಬೇಕೆಂದು ಸರ್ಕಾರ ತೀರ್ಮಾನ ಮಾಡಿತ್ತು. ನಾನು 10 ಕಿಲೋವಾಟ್ ವಿದ್ಯುತ್ ಅನ್ನು ತೆಗೆದುಕೊಂಡಿದ್ದರೆ, ನಾನು ರೂಫ್ ಟಾಪ್ ಮೇಲೆ 15 ಕಿಲೋವಾಟ್ ಹಾಕಿದ್ದರೂ ಇಲಾಖೆಯಿಂದ ಅನುಮತಿ ಇತ್ತು. ನಾನು ಬೇಕಾದಷ್ಟು ವಿದ್ಯುತ್ ಅನ್ನು ಬಳಕೆ ಮಾಡಿ, ಉಳಿದ ವಿದ್ಯುತ್ ಅನ್ನು ಸರ್ಕಾರಕ್ಕೆ ಕೊಡುವುದಕ್ಕೆ ನಮಗೆ ಅನುಮತಿ ಇತ್ತು. ಅವರು ಅದನ್ನು ತೆಗೆದುಕೊಳ್ಳುತ್ತಿದ್ದರು. ಅದರ ದರ ಕೂಡ ಸುಮಾರು ರೂ.9/- ಗಳನ್ನು ಒಂದು ಯೂನಿಟ್‌ಗೆ ತೆಗೆದುಕೊಳ್ಳುತ್ತಿದ್ದರು. ತದನಂತರ ಕಾನೂನಿನಲ್ಲಿ ಬದಲಾವಣೆ ಮಾಡಿದರು. ನಮ್ಮ ಮನೆಗೆ 5 ಕಿಲೋವಾಟ್ sanctioned power ಇದ್ದರೆ ಮಾತ್ರ ಮಾಡಬೇಕೆಂದು ತಂದರು. ಆಗ ಅದರ ದರವನ್ನು 2 ರಿಂದ 3 ರೂಪಾಯಿಗಳಿಗೆ ಕಡಿಮೆ ಮಾಡಿದರು. ತದನಂತರ ಎಲ್ಲಾ ಶಾಲೆಗಳ ಮೇಲೆ ಮತ್ತೆ ಸರ್ಕಾರಿ ಕಛೇರಿಗಳ ಮೇಲೆ ರೂಫ್ ಟಾಪ್ ಸೋಲಾರ್ ಎಲೆಕ್ಟ್ರಿಸಿಟಿಯನ್ನು ಉತ್ಪಾದಿಸಲು ಅಳವಡಿಸಬೇಕೆಂದು ನಾವು ಹೇಳಿದ್ದು. ಅದನ್ನು ಒಮ್ಮೆ ಜಾರಿಗೆ ತಂದರು. ತದನಂತರ ಅದನ್ನು ಬಿಟ್ಟುಬಿಟ್ಟರು. ತದನಂತರ ಅದರ ಗೋಜಿಗೆ ಹೋಗಲೇ ಇಲ್ಲ. ಈಗ ನನ್ನ ಸಲಹೆ ಏನೆಂದರೆ, ಈಗ ಗೃಹಜ್ಯೋತಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈಗ 200 ಯೂನಿಟ್‌ಗಳವರಗೆ ವಿದ್ಯುಚ್ಛಕ್ತಿ ಉಚಿತವಾಗಿದೆ. ಹಾಗಾಗಿ, ರೂಫ್ ಟಾಪ್ ಎಲೆಕ್ಟ್ರಿಸಿಟಿಗೆ ಏನೂ concession ಕೊಡದೇ ಇರುವ ಕಾರಣಕ್ಕಾಗಿ ಯಾರು ಸಹ ರೂಫ್ ಟಾಪ್ ಅನ್ನು ಅಳವಡಿಸುವುದಕ್ಕೆ ಬಯಸುವುದಿಲ್ಲ. ಈ ಹಿಂದೆ ಹಾಕಿದಂತಹವರು ಸಹ ಅದನ್ನು ಬಳಕೆ ಮಾಡುವುದಕ್ಕೆ ಇಲ್ಲ. ಅವರು ಕನಿಷ್ಟ ದರವನ್ನು ಕಟ್ಟಬೇಕು. ಅವರು ಹೂಡಿಕೆ ಮಾಡಿದಂತಹ ಹಣ ವ್ಯರ್ಥವಾಗುತ್ತಿದೆ. ಈ ರೀತಿ ಇರುವುದರಿಂದ ನೀವು ಯಾರಿಗೆ ಗೃಹಜ್ಯೋತಿ ಯೋಜನೆಯನ್ನು ಕೊಡುತ್ತೀರೋ ಅವರಿಗೆ ಇದರ benefit

ಸಿಗುವುದಕ್ಕೆ ಏನು ಮಾಡುತ್ತಾರೆ ಎಂಬುದರ ಬಗ್ಗೆ ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಬೇಕು.

(ಮುಂದು)

(041) 04.03.2025 04.40 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ ಸೋಜಾ(ಮುಂದು):-**

ಮಾನ್ಯ ಪ್ರಧಾನ ಮಂತ್ರಿ ಸೂರ್ಯ ಘರ್ ಮಫ್ತಿ ಬಿಜಿಲಿ ಯೋಜನೆಯನ್ವಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಭೆಗಳು ನಡೆಯುತ್ತಿದ್ದು, ಕೆಲಸಗಳು ಆಗುತ್ತಿವೆ ಎಂದು ಮಾನ್ಯ ಸಚಿವರು ಹೇಳಿರುತ್ತಾರೆ. ಅವರ ಯೂನಿಟ್‌ಗಳನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ಬಗ್ಗೆ ಸರ್ಕಾರ ಹೊರಡಿಸಿದಂತಹ ಒಂದು ಪ್ರಕಟಣೆ ಇದೆ. ಅದು ಏನೆಂದರೆ, ಒಂದು ಕಿಲೋವ್ಯಾಟ್‌ಗೆ ಪ್ರಧಾನ ಮಂತ್ರಿ ಸೂರ್ಯ ಘರ್ ಯೋಜನೆ ದರ ಏನಿದೆ ಎಂದರೆ, 60,000 ದಿಂದ 80,000 ರೂಪಾಯಿಗಳು ಒಂದು ಕಿಲೋವ್ಯಾಟ್‌ಗೆ ಇರುತ್ತದೆ. ಆದರೆ, ಪ್ರೈವೇಟ್‌ನಲ್ಲಿ ಅದೇ ಒಂದು ಕಿಲೋವ್ಯಾಟ್‌ಗೆ 30,000 ದಿಂದ 35,000 ರೂಪಾಯಿಗಳಿಗೆ ಸಿಗುತ್ತದೆ. ಅದರಂತೆ, ಇದರಲ್ಲಿ ದರವನ್ನು ಸಹ ಜಾಸ್ತಿ ಮಾಡಿದ್ದಾರೆ ಮತ್ತು ಸಬ್ಸಿಡಿ ಕೊಟ್ಟು ಈ ದರ ನಿಗದಿ ಮಾಡಿದರೆ ಹೇಗೆ? 30,000 ರೂಪಾಯಿಗಳ ಸಬ್ಸಿಡಿ ಎಂದು ಹೇಳುತ್ತಾರೆ. ಅದರಂತೆ, ಸಬ್ಸಿಡಿ ದರ ತೆಗೆದುಕೊಂಡರೆ, ಅವರು ಉತ್ಪಾದನೆ ಮಾಡಿ ಹೆಚ್ಚು ವಿದ್ಯುತ್ ಅನ್ನು ಇಲಾಖೆಗೆ ಕೊಟ್ಟರೆ ಅದರಲ್ಲಿಯೂ ಕೂಡ ಪ್ರತಿ ಯೂನಿಟ್‌ನ ದರದಲ್ಲಿ ಒಂದು ರೂಪಾಯಿ ಕಡಿತ ಮಾಡುತ್ತಾರೆ. ಹಾಗಾಗಿ, ಸರ್ಕಾರದ ಉದ್ದೇಶ ಈಡೇರಿಸುವುದಕ್ಕೆ ಆಗುವುದಿಲ್ಲ ಮತ್ತು ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ನಾನು ಈ ಹಿಂದೆ ಒಂದು ಸಲಹೆಯನ್ನು ಕೊಟ್ಟಿದ್ದೆನು. ಅದೇನೆಂದರೆ, ಇಪ್ಪತ್ತು ಲಕ್ಷಕ್ಕಿಂತಲೂ ಹೆಚ್ಚು ಅಥವಾ ಸುಮಾರು ಎರಡು ಸಾವಿರ ಚದರಡಿಗಿಂತಲೂ ಹೆಚ್ಚು ಜಾಗದಲ್ಲಿ ಮನೆ ಕಟ್ಟುವವರು ಕಡ್ಡಾಯವಾಗಿ ಸೋಲಾರ್ ರೂಫ್‌ಟಾಪ್ ಅನ್ನು ಅಳವಡಿಕೆ ಮಾಡಬೇಕೆಂದು ಕಾನೂನು ತರಬೇಕು. ಅದರಂತೆ, ಎರಡು ಸಾವಿರ ಚದರಡಿಗಿಂತಲೂ ಹೆಚ್ಚು ಜಾಗದಲ್ಲಿ ಮನೆ ಕಟ್ಟುವವರಿಗೆ ಕಡ್ಡಾಯವಾಗಿ ಸೋಲಾರ್ ರೂಫ್‌ಟಾಪ್ ಅನ್ನು ಅಳವಡಿಸಬೇಕೆಂದು ಲೈಸೆನ್ಸ್ ಕೊಡುವಾಗಲೇ ಒಂದು ಷರತ್ತನ್ನು ವಿಧಿಸಿದರೆ, ಅವರ ಮನೆಗೆ ಬೇಕಾದಷ್ಟು ವಿದ್ಯುತ್ ಅನ್ನು ಉತ್ಪಾದನೆ ಮಾಡಿ, ಉಳಿದ ವಿದ್ಯುತ್ ಅನ್ನು ಇಲಾಖೆಗೆ ಬಳಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತಿನ ದಿವಸ, ಇಂಧನ ಇಲಾಖೆಯಲ್ಲಿ ಏನು ಸಮಸ್ಯೆ ಏನೆಂದರೆ, ಒಂದು ವೇಳೆ ಕರೆಂಟ್ ಹೋದರೆ ನಮ್ಮ ಯೂನಿಟ್‌ನಲ್ಲಿ ವಿದ್ಯುತ್ ಉತ್ಪಾದನೆಯಾಗಿದ್ದರೆ ಅದು ಶೂನ್ಯವಾಗುತ್ತದೆ. ಆ ವಿದ್ಯುತ್ ಲೆಕ್ಕಕ್ಕೆ ಇರುವುದಿಲ್ಲ. ಸುಮಾರು 6 ಗಂಟೆ ಕರೆಂಟ್ ಇಲ್ಲವೆಂದರೆ ನಾವು ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಹೇಗೆಂದರೆ, ವಿದ್ಯುತ್ ಕಂಬದಲ್ಲಿ ಒಂದು ಲೈನ್ ಹೋಗುವಾಗ, ಇನ್ನೊಂದು ಲೈನ್ ಬರುವಂತಹ ವ್ಯವಸ್ಥೆಗಳು ಇರುವುದಿಲ್ಲ. ಈ ರೀತಿ ಪೂರಕವಾದಂತಹ ವ್ಯವಸ್ಥೆಯನ್ನು ಒದಗಿಸಿಕೊಡಬೇಕು. ಆ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಬಹುಶಃ ಈ ರಾಜ್ಯದಲ್ಲಿ ಸೋಲಾರ್ ರೂಫ್‌ಟಾಪ್ ಅಳವಡಿಸಬಹುದಾಗಿರುತ್ತದೆ.

ಆಗಲೇ ಮಾನ್ಯ ಸಚಿವರು ಹೇಳಿದ ಹಾಗೆ ಇಡೀ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಇದೆ. ಮುಂದಿನ ದಿನಗಳಲ್ಲಿ ನಮ್ಮ ಮನೆಗಳಿಗೆ ನಾವೇ ವಿದ್ಯುತ್ ಅನ್ನು ಉತ್ಪಾದನೆ ಮಾಡಿ, ಸ್ವಶಕ್ತರಾಗುವ ರೀತಿಯಲ್ಲಿ ಒಂದು ನೀತಿಯನ್ನು ತರಬೇಕೆಂದು ಹೇಳುತ್ತೇನೆ. ಜೊತೆಗೆ, ಇದಕ್ಕೆ ಅನುಮತಿ ನೀಡುವುದಕ್ಕಾಗಿ ಇಲಾಖೆಯಲ್ಲಿ ಸಿಂಗಲ್ ವಿಂಡೋ ಏಜೆನ್ಸಿಯನ್ನು ಜಾರಿಗೆ ತರಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇಲ್ಲದೇ ಹೋದರೆ, ಇಲಾಖೆಯಲ್ಲಿ ಅಧಿಕಾರಿಗಳು ಬಹಳಷ್ಟು ತೊಂದರೆ ಕೊಡುತ್ತಾರೆ. ಹೇಗೆ ಎಂದರೆ, ಅವರು ಅನುಮತಿ ಕೊಡುವುದಕ್ಕೆ ಬರುವುದಿಲ್ಲ, ತಪಾಸಣೆಗೆ ಬರುವುದಿಲ್ಲ. ಒಂದು ವೇಳೆ ತಪಾಸಣೆಗೆ ಬರಬೇಕಾದರೆ ಬೇರೆ ಬೇರೆ ಷರತ್ತುಗಳನ್ನು ಹಾಕುತ್ತಾರೆ. ಇದರಿಂದಾಗಿ, ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಈ ಎಲ್ಲಾ ಕಾರಣಕ್ಕಾಗಿ ಸಿಂಗಲ್ ವಿಂಡೋ ಏಜೆನ್ಸಿಯನ್ನು ಏತಕ್ಕೆ ಜಾರಿಗೆ ತರಬಾರದು ಮತ್ತು ಇದಕ್ಕಾಗಿ ಪ್ರತ್ಯೇಕ ನೀತಿಯನ್ನು ಏತಕ್ಕೆ ತರಬಾರದು ಎಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆಗಲೇ ತಾವು ಪೀಠದಲ್ಲಿ ಇರಲಿಲ್ಲ. ಆಗ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಾ, ಸರ್ಕಾರವನ್ನು ಸಾಕಷ್ಟು ಹಾಡಿ ಹೊಗಳಿದರು. ಆದರೆ, ಈಗ ನೋಡಿದರೆ ಈ ರೀತಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಜೆ. ಜಾರ್ಜ್ (ಇಂಧನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು 10 ರೂಪಾಯಿ ವಿಚಾರ ಹೇಳುತ್ತಿರುವುದು ಹಳೆಯ ವಿಚಾರವಾಗಿದೆ. ಆದರೆ, ಇದು 2025ನೇ ಇಸವಿಯಾಗಿದೆ. ಇವೊತ್ತಿನ ದಿವಸ ನಮ್ಮಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗಾಗಿ PM-KUSUM-C Scheme ನಲ್ಲಿ ಟೆಂಡರ್ ಕರೆದರೆ, ನಮಗೆ ಎಷ್ಟು ಹಣ ಬರುತ್ತದೆಯೆಂದರೆ, ರೂ.3.17 ಪೈಸೆ ಅಥವಾ ರೂ.2.80 ಪೈಸೆ ಬರುತ್ತಿದೆ. ಇವೊತ್ತಿನ ದಿವಸ ನಾವು ರೈತರ ಐಪಿ ಸೆಟ್‌ಗಳಿಗೆ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. 10 ಹೆಚ್‌ಪಿ ವರೆಗೆ ಸುಮಾರು ಹದಿನೆಂಟು ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರದಿಂದ ಕೊಡುತ್ತಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ, ಗೃಹಜ್ಯೋತಿ ಯೋಜನೆಯಡಿಯಲ್ಲಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ನಾವು 1.62 ಕೋಟಿ ಮನೆಗಳಿಗೆ ನಾವು ಉಚಿತ ವಿದ್ಯುತ್ ಅನ್ನು ಕೊಡುತ್ತಿದ್ದೇವೆ. ಈ ರೀತಿ ಉಚಿತ ವಿದ್ಯುತ್ ಸಿಗುವಾಗ ಯಾರು ಸೋಲಾರ್ ಹಾಕಿಸುತ್ತಾರೆ? ಈ ರೀತಿ ಜನರು ತಮ್ಮ ಮನೆಗಳ ಮೇಲೆ ಸೋಲಾರ್ ರೂಫ್‌ಟಾಪ್ ಹಾಕಿಸಿ, ಅವರಿಂದ ನಾವು ವಿದ್ಯುತ್ ಖರೀದಿ ಮಾಡಬೇಕಾದರೆ, ಅವರು ನಮಗೆ ಕಡಿಮೆ ಹಣದಲ್ಲಿ ವಿದ್ಯುತ್ ನೀಡುವುದಾದರೆ ನಾವು ಅದನ್ನು ಖರೀದಿ ಮಾಡುತ್ತೇವೆ. ಅದಕ್ಕೋಸ್ಕರ ಅದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ನಮ್ಮ ರಾಜ್ಯ ಸರ್ಕಾರ ಈಗಾಗಲೇ ಆದೇಶ ಮಾಡಿರುತ್ತದೆ... ಮಾನ್ಯ ಸದಸ್ಯರು ಬಹಳ ಮುಖ್ಯವಾಗಿ ಕೇಳಿರುವುದೇನೆಂದರೆ, ಸರ್ಕಾರಿ ಕಛೇರಿಗಳ ವಿಚಾರದ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡಿರುತ್ತಾರೆ. ಅದಕ್ಕಾಗಿ, ಈಗಾಗಲೇ ನಾವು ಲೋಕೋಪಯೋಗಿ ಇಲಾಖೆಯನ್ನು ನೋಡಲ್ ಡಿಪಾರ್ಟ್‌ಮೆಂಟ್ ಆಗಿ ನೇಮಿಸಲಾಗಿದೆ. ಅದೇ ರೀತಿ, KREDL (Karnataka Renewable Energy

Development Ltd.) ಸಂಸ್ಥೆಯನ್ನು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಇಲಾಖೆಯಾಗಿ ನೇಮಿಸಲಾಗಿರುತ್ತದೆ. ಅದರಂತೆ, ನಮ್ಮ ರಾಜ್ಯದಲ್ಲಿ ಯಾವ್ಯಾವ ಸರ್ಕಾರಿ ಕಟ್ಟಡಗಳು ಇವೆ, ಲೋಕೋಪಯೋಗಿ ಇಲಾಖೆಯವರು ಅವುಗಳನ್ನು ಸರ್ವೆ ಮಾಡಿ ಕೊಡುತ್ತಾರೆ, ನಂತರ ಅದನ್ನು ಅನುಷ್ಠಾನ ಮಾಡುವಂತಹ ಕೆಲಸವನ್ನು ನಾವು ಈಗಾಗಲೇ ಪ್ರಾರಂಭ ಮಾಡಿರುತ್ತೇವೆ.

ಬಹುಶಃ ತಮಗೆಲ್ಲಾ ಗೊತ್ತಿರುವಂತೆ, ಪಾವಗಡದಲ್ಲಿ 2013-18ರಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸುಮಾರು ಎರಡು ಸಾವಿರ ಮೆಗಾವ್ಯಾಟ್ at that time, Asia's largest solar power plant ಆಗಿತ್ತು. ಅದನ್ನು ನಿರ್ಮಾಣ ಮಾಡಲಾಗಿರುತ್ತದೆ. ಆ ಸಂದರ್ಭದಲ್ಲಿ ಸುಮಾರು 4 ವರ್ಷಗಳಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲಿಲ್ಲ. ಏಕೆಂದರೆ, ಆಗ ಕೋವಿಡ್-19 ಸಾಂಕ್ರಾಮಿಕ ರೋಗ ಬಂದು ಬೇಡಿಕೆ ಇರಲಿಲ್ಲ. ಇದನ್ನು ನಮ್ಮ ಅದೃಷ್ಟ ಅಥವಾ ದುರಾದೃಷ್ಟ ಎಂದು ಹೇಳಬಹುದು. ಆದರೆ, ನಾನು ಯಾವಾಗಲೂ ಅದೃಷ್ಟ ಎಂದು ತಿಳಿದುಕೊಳ್ಳುತ್ತೇನೆ. ಏಕೆಂದರೆ, ಈಗ ನಮಗೆ ವಿದ್ಯುತ್‌ಗಾಗಿ ಸಾಕಷ್ಟು ಬೇಡಿಕೆ ಬಂದಿರುತ್ತದೆ. ಅದರಂತೆ, ಇವೊತ್ತಿನ ದಿನ ಒಂದು ದಿವಸಕ್ಕೆ ಸುಮಾರು 18,500 ಮೆಗಾವ್ಯಾಟ್ ವಿದ್ಯುತ್‌ಗಾಗಿ ಬೇಡಿಕೆ ಇದೆ. ಆದರೆ, ಆ ಕಾಲದಲ್ಲಿ ಕೇವಲ 9,000 ಮೆಗಾವ್ಯಾಟ್ ವಿದ್ಯುತ್‌ಗಾಗಿ ಬೇಡಿಕೆ ಇತ್ತು. ಕಳೆದ ವರ್ಷ 16,500 ಮೆಗಾವ್ಯಾಟ್ ವಿದ್ಯುತ್‌ಗಾಗಿ ಬೇಡಿಕೆ ಇತ್ತು. ನಮಗೆ ಬೇಡಿಕೆ ಜಾಸ್ತಿಯಾದಷ್ಟು ನಮ್ಮ ರಾಜ್ಯ ಪ್ರಗತಿಪರವಾಗಿದೆ, ಆರ್ಥಿಕವಾಗಿ ನಾವು ಅಭಿವೃದ್ಧಿ ಹೊಂದುವುದಕ್ಕೆ ಅದೊಂದು ಮಾರ್ಗಸೂಚಿ ಎಂದು ಹೇಳಬಹುದಾಗಿದೆ. ಈ ಹಿಂದೆ ಶ್ರೀ ಡಿ.ಕೆ. ಶಿವಕುಮಾರ್‌ರವರು ಇಂಧನ ಮಂತ್ರಿಯಾಗಿದ್ದಾಗ ಪಾವಗಡದಲ್ಲಿ ಸುಮಾರು ಎರಡು ಸಾವಿರ ಮೆಗಾವ್ಯಾಟ್ ಸೋಲಾರ್ ಘಟಕವನ್ನು ರೈತರು ಮತ್ತು ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಿದರು. ಆ ಸಂದರ್ಭದಲ್ಲಿ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದರು. ಈಗ ಒಂದು ಒಳ್ಳೆಯ ಸುದ್ದಿ ಏನು ಎಂದು ಹೇಳುವುದಾದರೆ, ನಾನು ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರು ಇತ್ತೀಚೆಗೆ ಪಾವಗಡ ಸೋಲಾರ್ ಘಟಕಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ರೈತರು ಏನು ಹೇಳುತ್ತಾರೆಂದರೆ, ನಮ್ಮ ಜಮೀನನ್ನು ಸಹ ಸೋಲಾರ್ ಘಟಕಕ್ಕೆ ಬಳಕೆ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಈಗಾಗಲೇ ನಾವು ಅಲ್ಲಿ ಸುಮಾರು ಎರಡು ಸಾವಿರ ಮೆಗಾವ್ಯಾಟ್ ಸೋಲಾರ್ ಘಟಕವನ್ನು ರೈತರು ಮತ್ತು ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡಿದ್ದು, ಅದನ್ನು ಆದಷ್ಟು ಬೇಗ ನಿರ್ಮಾಣ ಮಾಡುತ್ತೇವೆ. ಇಷ್ಟೆ ಅಲ್ಲದೇ, ರಾಯಚೂರು, ಗದಗ, ಬಿಜಾಪುರ ಹಾಗೂ ಇತರೆ ಕಡೆಗಳಲ್ಲಿ ಸೌರಶಕ್ತಿಗೆ ಯೋಜನೆ ಮಾಡುತ್ತಿದ್ದೇವೆ. ಆದರೆ, ಒಂದು ಸಮಸ್ಯೆ ಏನಾಗುತ್ತದೆಯೆಂದರೆ, ಉತ್ಪಾದನೆಯಾದಂತಹ ವಿದ್ಯುತ್ ಅನ್ನು ಸಂಗ್ರಹ ಮಾಡಿಟ್ಟುಕೊಳ್ಳುವುದಕ್ಕೆ ನಮ್ಮಲ್ಲಿ ಸಮಸ್ಯೆ ಇದೆ. ಅದರಂತೆ, ಹಗಲು ಹೊತ್ತಿನಲ್ಲಿ ನಮಗೆ ಸೌರ ಶಕ್ತಿಯಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ. ಆದರೆ, ರಾತ್ರಿ ವೇಳೆಯಲ್ಲಿ ಮತ್ತು ಬೆಳಗಿನ ಸಮಯದಲ್ಲಿ ನಮಗೆ ಹೆಚ್ಚಿನ ವಿದ್ಯುತ್ ಬೇಡಿಕೆ ಇರುವಂತಹ peak hours ಆಗಿರುತ್ತದೆ. ಹಾಗಾಗಿ, ಸೌರಶಕ್ತಿಯಿಂದ ಉತ್ಪಾದನೆಯಾದಂತಹ ವಿದ್ಯುತ್ ಅನ್ನು ಬ್ಯಾಟರಿಗಳ ಮುಖಾಂತರ ಸಂಗ್ರಹ ಮಾಡಿಟ್ಟುಕೊಳ್ಳುವುದಕ್ಕೆ ನಾವು ಕ್ರಮ

ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೋಸ್ಕರವಾಗಿ ಪಂಪ್ ಸ್ಟೋರೇಜ್ ಅನ್ನು ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಏಕೆಂದರೆ, ಅಷ್ಟು ದೊಡ್ಡದಾದಂತಹ ಶರಾವತಿ ನದಿಗೆ ಅಣೆಕಟ್ಟನ್ನು ಕಟ್ಟಲಾಗಿರುತ್ತದೆ. ಬಹುಶಃ ಈಗ ನಾವು ಅಲ್ಲಿ ಕೇವಲ ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. ಅಲ್ಲಿ ಪಂಪ್ ಸ್ಟೋರೇಜ್ ಆದರೆ ಇನ್ನು ಎರಡು ಸಾವಿರ ಮೆಗಾವ್ಯಾಟ್ ಸೇರಿ ಒಟ್ಟಾರೆಯಾಗಿ ಮೂರು ಸಾವಿರ ಮೆಗಾವ್ಯಾಟ್ ವಿದ್ಯುತ್ ಅನ್ನು ಅಲ್ಲಿರುವಂತಹ infrastructure ಅನ್ನು ಬಳಕೆ ಮಾಡಿಕೊಂಡು ಉತ್ಪಾದನೆ ಮಾಡಬಹುದಾಗಿರುತ್ತದೆ. ಅದಕ್ಕಾಗಿ, ಕೇವಲ 55 ಹೆಕ್ಟೇರ್ ಮಾತ್ರ ಅರಣ್ಯ ಭೂಮಿ ಬೇಕಾಗುತ್ತದೆ. ಬಹುಶಃ ಆ 55 ಹೆಕ್ಟೇರ್ ಭೂಮಿಯಲ್ಲಿ ನಾವು ಕೆಳಭಾಗದಿಂದ ನೀರನ್ನು ರೀ-ಪಂಪ್ ಮಾಡಿ, ಮೇಲೆ ತರುವುದಕ್ಕೆ ಅವಶ್ಯಕತೆ ಇರುತ್ತದೆ.

**ಶ್ರೀಮತಿ ಭಾರತಿಶೆಟ್ಟಿ(ನಾಮನಿರ್ದೇಶಿತರು):-** ಮಾನ್ಯ ಸಚಿವರೇ, ಅಲ್ಲಿ ಪೈಪ್ ಇದೆ.

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಕೆಳಗಡೆ balancing reservoir ನಿಂದ ನಾವು ವಿದ್ಯುತ್ ಉತ್ಪಾದನೆ ಮಾಡಿ ಬಿಟ್ಟಂತಹ ನೀರನ್ನು ಪುನಃ ಮೇಲೆ ತರಬೇಕು. ಅಂದರೆ, ರೀ-ಪಂಪ್ ಮಾಡುವುದಕ್ಕೆ 55 ಹೆಕ್ಟೇರ್ ಅರಣ್ಯ ಭೂಮಿ ಅವಶ್ಯಕತೆ ಇರುತ್ತದೆ. ಒಂದು ಬಾರಿ ಪೈಪ್‌ಲೈನ್ ಒಳಗಡೆ ಹೋದರೆ, ಪುನಃ ನಾವು ಅಲ್ಲಿ ಅರಣ್ಯ ಮಾಡುತ್ತೇವೆ. ಅದೇ ರೀತಿಯಲ್ಲಿ ವರಾಹಿ ಯೋಜನೆ ಕೂಡ ಬಹಳ ದೊಡ್ಡ ಯೋಜನೆಯಾಗಿರುತ್ತದೆ. ಅಲ್ಲಿ ಕೂಡ ಹೆಚ್ಚಿಗೆ ನಾವು ಪಂಪ್ ಸ್ಟೋರೇಜ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಏಕೆಂದರೆ, ಹಗಲು ವೇಳೆಯಲ್ಲಿ ಸೋಲಾರ್ ವಿದ್ಯುತ್ ಕಡಿಮೆ ದರದಲ್ಲಿ ಅಂದರೆ, ಎರಡು ರೂಪಾಯಿಗೆ ಸಿಗುತ್ತದೆ. ಅದನ್ನು ಉಪಯೋಗಿಸಿ ಆ ನೀರನ್ನು ಪಂಪ್ ಮಾಡುವುದಕ್ಕೆ ಈಗಾಗಲೇ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅರಣ್ಯ ಭೂಮಿಗಾಗಿ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಾಗಿರುತ್ತದೆ.

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಈಗಾಗಲೇ ಡಿಪಿಆರ್ ತಯಾರಾಗಿದ್ದು, ಅರಣ್ಯ ಇಲಾಖೆಯಿಂದ... ಹಾಗೂ ಕೇಂದ್ರ ಸರ್ಕಾರದಿಂದಲೂ ಕೂಡ ಸರ್ವೆ ಮಾಡುವುದಕ್ಕೆ ಅನುಮತಿ ನೀಡುತ್ತಿದ್ದಾರೆ. ಅದರಲ್ಲಿ ಯಾವುದೇ ತೊಂದರೆ ಇಲ್ಲ. ಅಲ್ಲದೇ, ಇದೆಲ್ಲವೂ ಕಾನೂನು ಪ್ರಕಾರವಾಗಿ ಮಾಡುತ್ತಿದ್ದೇವೆ. ಬಹುಶಃ ಎಲ್ಲದಕ್ಕಿಂತಲೂ ಮುಖ್ಯವಾಗಿ ಗ್ರೀನ್ ಹೈಡ್ರೋಜೆನ್ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಗ್ರೀನ್ ಹೈಡ್ರೋಜೆನ್ ನಮ್ಮ ಮುಂದಿನ ದೊಡ್ಡ ಭವಿಷ್ಯವಾಗಿದೆ. ಅದು ನಮ್ಮ ರಾಜ್ಯದ ಎರಡು ಭಾಗಗಳಲ್ಲಿ ಮಾಡಬಹುದಾಗಿರುತ್ತದೆ. ಅದಕ್ಕಾಗಿ, ಸೋಲಾರ್ ಘಟಕ ಇರಬೇಕು ಮತ್ತು ಪಕ್ಕದಲ್ಲಿ ಸಮುದ್ರ ಇರಬೇಕಾಗುತ್ತದೆ. ಮಂಗಳೂರು ಮತ್ತು ಕಾರವಾರದಲ್ಲಿ ಸಮುದ್ರದಲ್ಲಿ ನೀರು ತೆಗೆದು ಅದರಿಂದ ಹೈಡ್ರೋಜೆನ್ ವಿಂಗಡನೆ ಮಾಡಿ, ಅಲ್ಲಿಂದ ನಾವು ಗ್ರೀನ್ ಹೈಡ್ರೋಜೆನ್ ತೆಗೆದರೆ, ಅದನ್ನು ಚೀಲದಲ್ಲಿ ಪ್ಯಾಕ್ ಮಾಡಬಹುದಾಗಿರುತ್ತದೆ. That is the new technology. ಅದಕ್ಕೆ ಇನ್ನು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಅದನ್ನು ಹಡಗು ಮೂಲಕ ಬೇರೆ ರಾಜ್ಯಗಳಿಗೆ ಕಳುಹಿಸಬಹುದಾಗಿರುತ್ತದೆ. ಅದಕ್ಕಾಗಿ, ಟ್ರಾನ್ಸ್‌ಮಿಷನ್ ಲೈನ್ ಬೇಕಾಗಿರುವುದಿಲ್ಲ. ಅದಕ್ಕಾಗಿ, ಪೈಲೆಟ್

ಪ್ರಾಜೆಕ್ಟ್‌ಗಳನ್ನು ರಚನೆ ಮಾಡುತ್ತಿದ್ದೇವೆ. ಅಲ್ಲದೇ, ಆಸ್ಟ್ರೇಲಿಯಾ ದೇಶದವರ ಜೊತೆಗೆ tie-up ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿ ಎಲ್ಲಾ ಯೋಚನೆಗಳನ್ನು ನಾವು ಮಾಡುತ್ತಿದ್ದೇವೆ. ನಾನು ಇಂಧನ ಸಚಿವನಾಗಿ ಸುಮಾರು ಒಂದೂವರೆ ವರ್ಷವಾಗಿದೆ. ಈಗ ನನಗೆ ಗೊತ್ತಾಗಿರುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ energy revolution ಮಾಡಬಹುದು. ಅದಕ್ಕೋಸ್ಕರ ನಾವು ಚಿಂತನೆ ಮಾಡುತ್ತಿದ್ದೇವೆ. ಇದಲ್ಲದೇ, wind energy ಯೋಜನೆ ಸಹ ನಾವು ಮಾಡುತ್ತಿದ್ದೇವೆ.

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೇ, ಆಗ ತಾವು ಫುಲ್ ಪವರ್ ಆಗುತ್ತೀರಿ. ಆಗ ನಿಮ್ಮನ್ನು ಯಾರೂ ಕೂಡ ಮುಟ್ಟುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಜೆ. ಜಾರ್ಜ್:-** ಮಾನ್ಯ ಶರವಣರವರೇ, ಆಗ ನಾವು ಪವರ್ ಅನ್ನು ನಿಮಗೆ ಕೊಡುತ್ತೇವೆ. ನಿಮಗೆ ಚಿನ್ನ ಕರಗಿಸುವುದಕ್ಕೆ ಬೇಕಾಗುವಂತಹ ಪವರ್ ಅನ್ನು ನಾವು ಕೊಡುತ್ತೇವೆ. ಅದಕ್ಕಾಗಿ ತಾವು ಚಿಂತೆ ಮಾಡಬೇಡಿ.

(ಮುಂದು)

(042) 04.03.2025 4.50 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಗಳು ಮತ್ತು ಸರ್ಕಾರಿ ಶಾಲೆಗಳಿಗೆ ವಿದ್ಯುತ್‌ನ್ನು ಉಚಿತವಾಗಿ ನೀಡುತ್ತೇನೆ ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಘೋಷಣೆ ಮಾಡಿದ್ದಾರೆ. ಹಾಗಾಗಿ, ನನ್ನ ಒಂದು ಸಲಹೆ ಏನೆಂದರೆ, ಎಲ್ಲಾ ಶಾಲೆಗಳಿಗೂ 3 ಕಿಲೋ ವ್ಯಾಟ್ ಯೂನಿಟ್ ವಿದ್ಯುತ್‌ನ್ನು ಉಚಿತವಾಗಿ ನೀಡಿದರೆ ಅವರಿಗೆ ಬೇಕಾದ ರೀತಿ sustainability ಮಾಡಲು ಅನುಕೂಲವಾಗುತ್ತದೆ. ನಾನು ಸಹ ವಿಧಾನ ಪರಿಷತ್ತಿನ ಶಾಸಕರ ನಿಧಿಯಿಂದ 40 ಶಾಲೆಗಳಿಗೆ 3 ಕಿಲೋ ವ್ಯಾಟ್ ಸಾಮರ್ಥ್ಯದ ಸೋಲಾರ್ ರೂಫ್ ಟಾಪ್‌ನ್ನು ನೀಡಿದ್ದೆನು. ಅವರೇ ವಿದ್ಯುತ್ ಉತ್ಪಾದನೆ ಮಾಡಿ, ಅವರ ಖರ್ಚು ಸಹ ಕಳೆದು, ತಿಂಗಳಿಗೆ ಸುಮಾರು ಒಂದೂವರೆ ಸಾವಿರದಿಂದ ಎರಡೂವರೆ ಸಾವಿರ ರೂಪಾಯಿ ಉಳಿಯುವಂಥ ಯೋಜನೆ ಇದಾಗಿದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಗ್ರಾಮ ಪಂಚಾಯಿತಿಯವರು street lights ಹಾಗೂ ಇತರ ವಿದ್ಯುತ್ ಬಿಲ್ ಕಟ್ಟುವುದಿಲ್ಲ. ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕೆಂದು ಸಲಹೆ ನೀಡಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಈಗ ಸಲಹೆ ನೀಡುತ್ತಿದ್ದಾರೆ. ಪಂಚಾಯಿತಿ ವತಿಯಿಂದ ಸುಮಾರು ರೂ.6,000 ಕೋಟಿ ಬರಬೇಕಾಗಿದೆ.

ಈಗಾಗಲೇ ನಾನು Minister for Rural Development and Panchayat Raj ಯವರಿಗೆ ಸಲಹೆ ನೀಡಿದ್ದು, ಈ ಸಂಬಂಧ ಅವರು Hon'ble Chief Minister ಜೊತೆ ಚರ್ಚಿಸಿ, ಸುಮಾರು ರೂ.10,000 ಕೋಟಿಗಳಿಗೆ ಎಲ್ಲಾ ಪಂಚಾಯಿತಿಗಳಲ್ಲಿಯೂ ಸೋಲಾರ್ ವ್ಯವಸ್ಥೆ ಕಲ್ಪಿಸುವಂಥ ವ್ಯವಸ್ಥೆ ಮಾಡಲಾಗುತ್ತಿದೆ. ಅದೇ ರೀತಿ ಮಾನ್ಯ ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಸಹಿತ Bangalore Water Supply and Sewerage Board (BWSSB) ಗಾಗಿ lift irrigation ಅಥವಾ ಸೋಲಾರ್ ವ್ಯವಸ್ಥೆ ಮಾಡಬೇಕೆಂದು ಇದ್ದಾರೆ. ಮೋಡ ಇದ್ದರೆ ಸೋಲಾರ್‌ನಿಂದ ಪವರ್ ಜನರೇಟ್ ಆಗುವುದಿಲ್ಲ. ಅದಕ್ಕಾಗಿ hybrid solar-wind energy system, battery or pump storage ಇದೆಲ್ಲಾ ವ್ಯವಸ್ಥೆಯನ್ನು ತಂದರೆ ಅದು ಸರಿದೂಗುತ್ತದೆ. ಅದರನ್ವಯ ಮಾನ್ಯ ಐವನ್ ಡಿ'ಸೋಜಾರವರು ಸಲಹೆ ನೀಡುವ ಮೊದಲೇ ತೀರ್ಮಾನ ಕೈಗೊಳ್ಳುವ ಕುರಿತು ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡುತ್ತಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇವೆಲ್ಲವೂ ಸಹಿತ ಅವರ ಕಾಲದಲ್ಲಿಯೇ ಆಗಲಿ ಎಂದು ಆಸೆಪಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 2013-14ನೇ ಸಾಲಿನಲ್ಲಿ ಸೌರಶಕ್ತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಳ್ಳುವಾಗ ಪ್ರತಿ ಯೂನಿಟ್‌ಗೆ 9 ರೂಪಾಯಿ 50 ಪೈಸೆ ನಿಗದಿ ಮಾಡಲಾಗಿದೆ.

**ಸಭಾಪತಿಯವರು:-** ಈಗ ಅದರ ಮೊತ್ತ ಕಡಿಮೆಯಾಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ 3 ರೂಪಾಯಿ 50 ಪೈಸೆಗೆ ಸಿಗುತ್ತದೆ ಎಂದು ತಾವೇ ಹೇಳಿದ್ದೀರಿ. ಹಾಗಾದರೆ, ಆಗಿನ ಒಪ್ಪಂದವೇನಿದೆ, ಅದು ಕಡ್ಡಾಯವೇ? ಏಕೆಂದರೆ, ಇವತ್ತು ಬಳಕೆ ಮಾಡುವಂಥ ಸೌರಶಕ್ತಿಗೆ ಪ್ರತಿ ಯೂನಿಟ್‌ಗೆ 9 ರೂಪಾಯಿ 50 ಪೈಸೆ ಕೊಡಬೇಕು. ಆದರೆ, ಮಾರುಕಟ್ಟೆಯಲ್ಲಿ ಬಹಳ ಕಡಿಮೆ ಬೆಲೆಗೆ ಸಿಗುತ್ತದೆ. ಆದರೆ, ಇದು ಕಡ್ಡಾಯ ಒಪ್ಪಂದ ಎಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ಅದು ಕಡ್ಡಾಯವೇ ಅಥವಾ ಏತಕ್ಕೆ? ಯಾವುದೇ ಸರ್ಕಾರ ಒಪ್ಪಂದ ಮಾಡಿಕೊಳ್ಳುವಾಗ ಆಯಾಯ ವರ್ಷಕ್ಕೆ ಸೀಮಿತವಾಗಿ ಮಾಡುತ್ತದೆ. ಜನರು ಭರಿಸುವ ತೆರಿಗೆ ಮೊತ್ತವನ್ನು ಸೌರಶಕ್ತಿಗೆ ಭರಿಸಬೇಕಲ್ಲವೇ? ಇದರ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಅಂದಿನ ದಿವಸ ನಮಗೆ ಪವರ್ shortage ಇತ್ತು. ಹಾಗಾಗಿ, solar panels ತುಂಬಾ ದುಬಾರಿಯಾಗಿತ್ತು. Technology advancement ಆಗಿರುವ ಸಲುವಾಗಿ ಕಡಿಮೆಯಾಗಿದೆ. ನಾವು ಬೇರೆ ರಾಜ್ಯದ ಜೊತೆ sovereign agreement ಮಾಡಿಕೊಂಡರೆ, ಅದನ್ನು ಗೌರವಿಸುವುದು ನಮ್ಮ ಕರ್ತವ್ಯ. ಅಂದಿನ ಒಪ್ಪಂದ ಏನಿದೆ, ಅದು ಆವೊತ್ತಿನ ದಿವಸ ಬೇಕಾಗಿತ್ತು. ಆದರೆ, ಈಗ ಅದರ ಬೆಲೆ ಬಹಳ ಕಡಿಮೆಯಾಗಿದೆ. ಈಗಿನ ಡಿಮ್ಯಾಂಡ್ ನೋಡಿದರೆ ತುಂಬಾ ಬೇಕಾಗುತ್ತದೆ. ಇವತ್ತಿನ ದಿವಸ PM-KUSUM (Pradhan Mantri Kisan Urja Suraksha Evam Utthan Mahabhiyan) Component-C ಯೋಜನೆ ಅಡಿ ರೈತರ ಸಬ್ ಸ್ಟೇಷನ್ ಎಲ್ಲಿದೆ ಅಲ್ಲಿಗೆ ಸುಮಾರು 3,000 ಮೆಗಾವ್ಯಾಟ್‌ಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಅಲ್ಲಿ ಸಹಿತ ಆ substation capacity ಗೆ ಸಬ್ ಸ್ಟೇಷನ್ ಕ್ಯಾಪಸಿಟಿ ಇದೆ. 4 ಎಕರೆಗೆ ಒಂದು ಮೆಗಾವ್ಯಾಟ್ ತೆಗೆಯಬೇಕಾಗುತ್ತದೆ. ಅದಕ್ಕೂ ಈಗಾಗಲೇ ಭೂಮಿಯನ್ನು ಗುರುತಿಸಿದ್ದು, ಅದು ಸರ್ಕಾರಿ ಭೂಮಿಯಾಗಿದ್ದ ಪಕ್ಷದಲ್ಲಿ ಉಚಿತವಾಗಿ ಕೊಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ರೈತರ ಭೂಮಿಯೇ ಇದ್ದರೆ ತಿಂಗಳಿಗೆ ರೂ. 25,000 ಕೊಡುವಂಥ ಕೆಲಸ ಮಾಡಿದ್ದೇವೆ. ಬಹುಶಃ ಸರ್ಕಾರಿ ಜಾಗವಾಗಿದ್ದರೆ ಬರುವಂಥ ಹಣ ಏನಿದೆ, ಅದನ್ನು ಆ ಪಂಚಾಯಿತಿಗೆ ಮತ್ತೆ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ನಾವು ಆ ಪಂಚಾಯಿತಿ ವ್ಯಾಪ್ತಿಯಲ್ಲಿನ ಶಾಲೆ, ಅಂಗನವಾಡಿಗೆ ಕೊಡಲು ಜಿಲ್ಲಾಧಿಕಾರಿಯವರ ಬಳಿ deposit ಮಾಡಿಟ್ಟು, ಈ ರೀತಿಯ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಯಾವುದೇ ಕಾರ್ಯಕ್ರಮವಾದರೂ ಒಂದೇ ಸಲ ಆಗುವುದಿಲ್ಲ. ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಅದಕ್ಕೆಲ್ಲಾ ಶಾಸಕ ಮಿತ್ರರು ಹಾಗೂ ನಮ್ಮ ಎಂ.ಎಲ್.ಸಿ. ಗಳೆಲ್ಲರೂ ಸಹಾಯ ಮಾಡಿದರೆ, KUSUM Component-C and Component-B ಯೋಜನೆಯನ್ನು ಒದಗಿಸಬಹುದು. ಅಂದರೆ ಬೋರ್‌ವೆಲ್ ಇದ್ದರೆ ಸಾಕು, ಪ್ಯಾನಲ್ ಮಾಡಿದ್ದು, ಶೇಕಡ 80 ರಷ್ಟು ಸಬ್ಸಿಡಿ ಕೊಡಲು ಕ್ರಮಕೈಗೊಳ್ಳಲಾಗುತ್ತಿದ್ದು, ಶೇಕಡ 20 ರಷ್ಟು ಸಬ್ಸಿಡಿಯನ್ನು ರೈತರು ಭರಿಸಿದರೆ ನಾವೇ ಪಂಪ್, ಮೀಟರ್ ಪ್ಯಾನಲ್ ಬೋರ್ಡ್ ಇವೆಲ್ಲವನ್ನೂ ಹಾಕಿಕೊಡುತ್ತೇವೆ. ಅದಕ್ಕೂ ಸಹಿತ Panel of Contractors ಅನ್ನು ಮಾಡಲಾಗಿದೆ. ಇವೆಲ್ಲವೂ ಆನ್‌ಲೈನ್ ಮೂಲಕವೇ ಆಗುವಂತೆ ಕ್ರಮಕೈಗೊಳ್ಳಲಾಗುತ್ತಿದೆ.

**12 ಪ್ರಕಟಣೆ**

**ಮಾನ್ಯ ಸಭಾಪತಿಯವರು:-**

- ಘನತೆವೆತ್ತ ರಾಜ್ಯಪಾಲರು ದಿನಾಂಕ: 03.03.2025 ರಂದು ಜಂಟಿ ಸದನವನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ದಿನಾಂಕ: 10.03.2025 ರವರೆಗೆ ಚರ್ಚೆ ನಡೆಸುವುದು ಹಾಗೂ ದಿನಾಂಕ: 11.03.2025 ರಂದು ಸರ್ಕಾರ ಉತ್ತರ ನೀಡುವುದು.
- ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 07.03.2025 ರಂದು ಮಂಡಿಸಲಿರುವ 2025-26ನೇ ಸಾಲಿನ ರಾಜ್ಯದ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ ನಡೆಸುವುದು ಹಾಗೂ ದಿನಾಂಕ: 20.03.2025 ರಂದು ಸರ್ಕಾರ ಉತ್ತರ ನೀಡುವುದು.
- ಹದಿಹರೆಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು, ಪ್ರತಿಸ್ಪಂದನೆಗಳು ಮತ್ತು ಪರಿಹಾರೋಪಾಯಗಳ ಕುರಿತು ಚರ್ಚಿಸಲು ಹಾಗೂ ಮಾದಕ ವಸ್ತುಗಳ ಬಳಕೆಗೆ ಯುವ ಪೀಳಿಗೆಯು ಪ್ರೇರಿತರಾಗುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಅಪ್ರಾಪ್ತ ವಯಸ್ಸಿನ ಮಕ್ಕಳು ಮತ್ತು ಯುವ ಪೀಳಿಗೆಯವರುಗಳು ಮಾದಕ ದ್ರವ್ಯಗಳ ವ್ಯವನಿಗಳಾಗುತ್ತಿರುವುದನ್ನು ತಡೆಗಟ್ಟುವ ವಿಷಯದ ಕುರಿತು ಚರ್ಚಿಸಲು ಅವಕಾಶ ಕಲ್ಪಿಸುವುದು.
- ಧನವಿನಿಯೋಗ ವಿಧೇಯಕ, ಹಣಕಾಸು ವಿಧೇಯಕಗಳು ಹಾಗೂ ಸರ್ಕಾರದಿಂದ ಸ್ವೀಕೃತವಾಗಲಿರುವ ವಿಧೇಯಕಗಳ ಮಂಡನೆ, ಚರ್ಚೆ ಹಾಗೂ ಅಂಗೀಕಾರ.
- ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ಮೇರೆಗೆ ಚರ್ಚೆಗಳನ್ನು ತೆಗೆದುಕೊಳ್ಳುವುದು.

ಕಾರ್ಯಕಲಾಪಗಳ ಸಲಹಾ ಸಮಿತಿಗಳ ಜಂಟಿ ಸಭೆಯ ಈ ವರದಿಗೆ ಸದನವು ಅನುಮೋದಿಸುವುದೆಂದು ಭಾವಿಸುತ್ತೇನೆ.

**13. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 03 ಮಾರ್ಚ್ 2025 ಸೋಮವಾರದಂದು ಜಂಟಿ ಸದನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅದರ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಸದನದಲ್ಲಿ ಚರ್ಚೆಗೆ ಮಂಡಿಸಿದ್ದು, ಮಾನ್ಯ ಸದಸ್ಯರಾದ ಡಾ॥ ಎಸ್.ಯತೀಂದ್ರರವರು ಅದನ್ನು ಅನುಮೋದನೆ ಮಾಡಿದ್ದಾರೆ. ಈ ವಿಚಾರದ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಈ ಪುಸ್ತಕ ಭಂಡಾರದಲ್ಲಿ 117 ಪ್ಯಾರಾಗಳಿವೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಮಂಜುನಾಥ ಭಂಡಾರಿರವರು ಸಭಾ ಪೀಠವನ್ನು ಅಲಂಕರಿಸಿದರು)**

ನಾನು ಈ ಪುಸ್ತಕದಲ್ಲಿ ಕಂಡಿದ್ದು ಜಿ.ಎಸ್.ಟಿ. ಆದಾಯ ರಾಜ್ಯದಲ್ಲಿ ಹೆಚ್ಚಿದೆ ಎಂಬುದನ್ನು ಬಿಟ್ಟರೆ ಉಳಿದ ವಿಚಾರಗಳೆಲ್ಲವೂ ಕೂಡಾ ಸತ್ಯಕ್ಕೆ ದೂರವಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ. ಸಾಹಿತಿಯಾದ ಡಾ॥ ಜಿ.ಎಸ್. ಶಿವರುದ್ರಪ್ಪನವರು ಒಂದು ಕಾವ್ಯವನ್ನು ಬರೆದಿದ್ದು, ಅದೊಂದು ಭಾವ ಗೀತೆಯಾಗಿದೆ. ಮಾನ್ಯ ಎಸ್. ಎಲ್.ಭೋಜೇಗೌಡರವರಿಗೆ ಕಾವ್ಯ ಹಾಡಲು ಬರುತ್ತದೆ, ಆದರೆ, ನನಗೆ ಕಾವ್ಯ ಹಾಡಲು ಬರುವುದಿಲ್ಲ, ನಾನು ಓದಬೇಕು ಅಷ್ಟೆ. 'ಎದೆ ತುಂಬಿ ಹಾಡಿದೆನು ಅಂದು ನಾನು; ಮನವಿಟ್ಟು ಕೇಳಿದ್ದೀರಿ ಇಲ್ಲಿ ನೀವು' ಎಂಬಂತೆ ನನಗೆ ಅನಿಸಿದ ಹಾಗೆ ರಾಜ್ಯಪಾಲರು 'ಎದೆ ತುಂಬಿ ಹಾಡಲಿಲ್ಲ; ಅಲ್ಲಿ ಕುಳಿತಿದ್ದ ನಾವು ಮನವಿಟ್ಟು ಕೇಳಲಿಲ್ಲ. ಹಾಗೆಯೇ ಎಲ್ಲಾ ಕೇಳಲಿ ಎಂದು ನಾನು ಹಾಡುವುದಿಲ್ಲ; ಹಾಡುವುದು ಅನಿವಾರ್ಯ; ಕೇಳುವುದು ನನ್ನ ಕರ್ಮ ಎನ್ನುವಂತಾಗಿದೆ. ಇದು ಸಹ ಬಹಳ ಚೆನ್ನಾಗಿತ್ತು. ಮಾನ್ಯ ಸದಸ್ಯರುಗಳು ಮಾತನಾಡುವಾಗ ಸರ್ಕಾರವೇ ಡ್ರಾಫ್ಟ್ ಕೊಟ್ಟಿದ್ದು ಎಂದು ಹೇಳಿದರು. ನಾನು ಆ ಮಾತನ್ನು ಹೇಳಬೇಕಾಗಿತ್ತು. ಆದರೆ, ಅವರೇ ಹೇಳಿದರು. ಅದನ್ನು ಓದುವುದು ರಾಜ್ಯಪಾಲರಿಗೆ ಅನಿವಾರ್ಯ. ಜಂಟಿ ಸದನವನ್ನು ಕರೆಯುವುದು ಸಹಜ. ಆದ್ದರಿಂದ ನಾವು ಅಲ್ಲಿ ಕುಳಿತು ಕೇಳುವುದು ಅನಿವಾರ್ಯ. ಈ ಪರಿಸ್ಥಿತಿಯನ್ನು ಅಲ್ಲಿ ನೋಡಿದ್ದೇವು. ಆದರೆ, ಎಲ್ಲಾ ಕಡೆ ಬೆಳವಣಿಗೆ ಉತ್ತಮವಾಗಿದೆ. ಎಲ್ಲರೂ ಸಂತುಷ್ಟರಾಗಿದ್ದಾರೆ ಎನ್ನುವಂಥ ವಿಚಾರಗಳೆಲ್ಲವೂ ಬಂದಿದೆ. ಬಹಳ ಸಂತುಷ್ಟವಾಗಿದ್ದರೆ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಈ ನೌಕರರು ದಯಾ ಮರಣವನ್ನು ಏತಕ್ಕೆ ಕೇಳುತ್ತಾರೆ? 16 ನೌಕರರು ದಯಾ ಮರಣವನ್ನು ಕೊಡಿ ಎಂದು ಕೇಳಿದ್ದಾರೆ.

(ಮುಂದು)

(43) 04.03.2025/5.00/ಎಸ್‌ಕೆ-ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ನಿನ್ನೆ ತಾನೇ ಗುತ್ತಿಗೆದಾರರ ಸಂಘದವರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದಾರೆ. ಸ್ವಾಮಿ, 40 ಪರ್ಸೆಂಟ್ ಕಮಿಷನ್ ಅಲ್ಲ, 60 ಪರ್ಸೆಂಟ್ ಕಮಿಷನ್ ಆಗಿದೆ. ನಾವು ಏನು ಮಾಡಬೇಕು? ನಮಗೆ ಇನ್ನೂ ಕೋಟಿಗಟ್ಟಲೆ ಬಿಲ್ ಬಾಕಿ ಇದೆ. ಸುಮಾರು 60,000 ಕೋಟಿ ರೂಪಾಯಿಗಳಷ್ಟು ಏನು ಹೇಳಿದ್ದಾರೆ. ಆ ಹಣ ಕೂಡ ಗುತ್ತಿಗೆದಾರರಿಗೆ ಹಣ ಬಂದಿಲ್ಲ. ಗುತ್ತಿಗೆದಾರರಲ್ಲಿ ಕೆಲವರು ನಮಗೆ ವಿಷ ಕೊಟ್ಟುಬಿಡಿ. ದಯಾಮರಣ ಕೊಟ್ಟುಬಿಡಿ ಎಂದು ಕೇಳಿದ್ದಾರೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷವಿರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಆಮೇಲೆ ನಾವು ಮಾತಾಡೋಣ. ಈಗ ತಾವೆಲ್ಲಾ ಮಾತನಾಡುವಾಗ ಏನು ಮಾಡುತ್ತೀರಿ?

**ಶ್ರೀ ಸಲೀಂ ಅಹಮದ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, 60 ಪರ್ಸೆಂಟ್ ಕಮಿಷನ್ ಎಂದು ಹೇಳಿದ್ದೀರಿ. ಆದರೆ ನಿಮ್ಮ ಸರ್ಕಾರ ಇರುವಾಗ ಟೆಂಡರ್ ಕರೆದಿದ್ದು, ಅದು ಇನ್ನೂ ಕೂಡ ಬಿಲ್ ಬಾಕಿಯಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸದಸ್ಯರೇ, ತಾವು ಪಟ್ಟಿ ಮಾಡಿಕೊಳ್ಳಿ. ತಾವು ಮಾತನಾಡುವಾಗ, ಆನಂತರ ಕೇಳಿ.

**ಶ್ರೀ ಸಲೀಂ ಅಹಮದ್:-** ತಮ್ಮ ಸರ್ಕಾರವಿದ್ದಾಗ, ಟೆಂಡರ್ ಕರೆದಿದ್ದರಲ್ಲ, ಆ ಬಿಲ್ ಬಾಕಿ ಕೂಡ ಇದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ತಾವು ಮಾತನಾಡುವಾಗ, ಒಂದು ಮಾತನ್ನು ಕೂಡ ನಾವು ಮಾತನಾಡಲಲ್ಲ. ನೀವು ಸ್ವಾತಂತ್ರರು. ನೀವು ಏನಬೇಕಾದರೂ ಕೇಳಿ.

**ಶ್ರೀ ಸಲೀಂ ಅಹಮದ್:-** ಇದರಲ್ಲಿ ಹಳೆ ಬಿಲ್ ಕೂಡ ಸೇರಿಕೊಂಡಿದೆ. ತಮ್ಮ ಸರ್ಕಾರವಿದ್ದಾಗ, ಆ ಬಿಲ್ ಕೂಡ ಇದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ತಾವು ಒಂದು ಪಟ್ಟಿ ಮಾಡಿಕೊಳ್ಳಿ. ನಾನು ಸದನಕ್ಕೆ ತಪ್ಪು ಮಾಹಿತಿ ನೀಡಿದ್ದರೆ, ಪೀಠ ಏನು ಹೇಳುತ್ತದೆಯೋ, ಅದನ್ನು ಕೇಳುವುದಕ್ಕೆ ನಾನು ಸಿದ್ಧನಿದ್ದೇನೆ. ತಪ್ಪು ಮಾಹಿತಿ ಹೋಗಬಾರದು. ನಾನು ತಪ್ಪು ಮಾಹಿತಿ ಕೊಡುವುದಿಲ್ಲ. ನನ್ನ ಬಳಿ ಸರಿಯಾದ ಮಾಹಿತಿ ಇರುವುದರಿಂದ ನಾನು ಹೇಳುತ್ತಿದ್ದೇನೆ ಎಂದು ತಿಳಿದುಕೊಳ್ಳಿ. ಸರಿಯಾದ ಮಾಹಿತಿ ಇಲ್ಲದಿದ್ದರೆ, ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನ ಬಳಿ ಸರಿಯಾದ ಮಾಹಿತಿ ಇರುವುದರಿಂದ ನಾನು ಮಾತನಾಡುತ್ತಿದ್ದೇನೆ.

ರಾಜ್ಯಪಾಲರ ಭಾಷಣದಲ್ಲಿ ಹಣಕಾಸು ವ್ಯವಸ್ಥೆ ಇನ್ನಷ್ಟು ಸದೃಢಗೊಳಿಸುವಲ್ಲಿ ಯಶಸ್ವಿಯಾಗಿದೆ ಎಂಬುದು ಸತ್ಯ ಎಂದು ಹೇಳಿದ್ದಾರೆ. ಆದರೆ ನನಗೆ ಅನಿಸುವುದೇನೆಂದರೆ, ಇದು ಅಸತ್ಯ. ಮಹಾತ್ಮ ಗಾಂಧೀಜಿಯವರ

ವಿಚಾರವನ್ನು ಒಂದು ಮಾತಿನಲ್ಲಿ ಹೇಳಿದ್ದಾರೆ. ಆಡಳಿತವನ್ನು ಅಂತಿಮ ವ್ಯಕ್ತಿಯ ಕಣ್ಣೀರು ಒರೆಸುವ ಅವಕಾಶವೆಂಬಂತೆ ಬಳಸಿಕೊಳ್ಳಬೇಕು. ಆದರೆ ಇಲ್ಲಿ ಆಗಿರುವ ದುರ್ದೈವ ಏನೆಂದರೆ, ಪ್ರತಿಯೊಬ್ಬ ಸಾಮಾನ್ಯನ ಕಣ್ಣಿನಲ್ಲಿ ನೀರು ತರಿಸುವ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಇದೆ. ನಾನೇನೂ ಇದರ ಬಗ್ಗೆ ಹೇಳಬೇಕಾಗಿಲ್ಲ. ಯಾವಾಗಾದರೂ ಬಿಡುವು ಸಿಕ್ಕಾಗ ಟಿ.ವಿ.ಯನ್ನು 'on' ಮಾಡಿದರೆ ಸಾಕು. ಅದೇ ವಿಷಯ ಬರುತ್ತಿರುತ್ತದೆ. ಬೆಳಗ್ಗೆ ಎದ್ದು ತಕ್ಷಣವೇ ದಿನಪತ್ರಿಕೆಗಳನ್ನು ನೋಡಿದರೆ, ಬೇಕಾದಷ್ಟು ವಿಷಯಗಳು ಇರುತ್ತದೆ ಮತ್ತು ಸಂಗ್ರಹವಾಗಿ ಇರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಐದು ಕಲ್ಯಾಣ ಯೋಜನೆಗಳನ್ನು ಕೊಟ್ಟಿದ್ದೀರಿ. ಅದು ಬಹಳ ಸಂತೋಷ. ಇದರ ಹೆಸರಿನಲ್ಲಿ ಐದು ವರ್ಷ ಕಳೆದು ಬಿಡಬಹುದೇ ಅಥವಾ ಬೇರೆ ಏನಾದರೂ ಮಾಡುವುದಕ್ಕೆ ಅವಕಾಶವಿದೆಯೇ? ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಎನ್ನುವುದು ಮರೀಚಿಕೆ ಆಗಿಲ್ಲವೇ? ಹಾಗಾದರೆ, ಎಲ್ಲವೂ ಸರಿಯಿದ್ದರೆ, ಅಭಿವೃದ್ಧಿ ಏಕೆ ಇಲ್ಲ. ಇದರಲ್ಲಿ ಅನೇಕ ಪ್ರಶ್ನೆಗಳು ಹುಟ್ಟುತ್ತವೆ. ನನಗೆ ಅನಿಸುವುದೇನೆಂದರೆ, 117 ಪ್ಯಾರಾ ಇದೆ. ಅದರಲ್ಲಿ 116 ಪ್ಯಾರಾ ಸತ್ಯಕ್ಕೆ ದೂರವಾಗಿದೆ ಎಂದು ನಾನು ಹೇಳಿದೆ. ಹಾಗಾದರೆ ಯಾವುದು ಒಂದೇ ಒಂದು ಸತ್ಯ ಎನ್ನುವುದನ್ನು ತಾವು ಕೇಳಬೇಕಲ್ಲ. ಆ ಸತ್ಯ ಇಷ್ಟೆ. ರಾಜ್ಯದ ಆದಾಯ ಹೆಚ್ಚುತ್ತಿದೆ ಎಂದು ಹೇಳಿದ್ದೀರಿ. ಅದು ಜಿ.ಎಸ್.ಟಿ. ಕಲೆಕ್ಷನ್ ಆದಾಗ ಗೊತ್ತಾಗುತ್ತದೆ. ಅದು ಆಗಿದೆ ಹೌದು. ಆದರೆ ಜನರ ಆದಾಯ ಕುಸಿಯುತ್ತಿದೆ. ಇದೊಂದೇ ಸತ್ಯ. ಇದು ಏಕೆ ಕುಸಿಯುತ್ತಿದೆ? ಅಭಿವೃದ್ಧಿ ಇಲ್ಲ. ಅಭಿವೃದ್ಧಿ ಶೂನ್ಯವಾಗಿದೆ. ಅಭಿವೃದ್ಧಿ ಇಲ್ಲದ ಕಾರಣ ಜನರಿಗೆ ಕೆಲಸ ಸಿಗುವುದಿಲ್ಲ. ರೈತರ ಪರಿಸ್ಥಿತಿ ಏನಾಗಿದೆ? ಕೂಲಿ ಕಾರ್ಮಿಕರ ಪರಿಸ್ಥಿತಿ ಏನಾಗಿದೆ? ಇವೆಲ್ಲವನ್ನೂ ಕೂಡ ನಾವು ಯೋಚನೆ ಮಾಡಬೇಕು. ಯಾರೋ ಕೆಲವರಿಗೆ ಗ್ಯಾರಂಟಿಗಳ ಅವಶ್ಯಕತೆ ಇದೆ.

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ಅಭಿವೃದ್ಧಿ ಕಡಿಮೆಯಾಯಿತು. ಜಿ.ಎಸ್.ಟಿ. ಜಾಸ್ತಿಯಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಂತರಾಷ್ಟ್ರೀಯ ಮಟ್ಟದಲ್ಲಿ ಒಂದು ಶ್ಲಾಘನೆ ಸಿಕ್ಕಿದೆ ಎಂದು ಹೇಳಿದ್ದೀರಿ. ಮಾನ್ಯ ರಾಜ್ಯಪಾಲರು ಕೂಡ ನೀವು ಕೊಟ್ಟಿದ್ದನ್ನು ಓದಿದ್ದು ಬಿಟ್ಟರೆ, ಒಂದು ಅಕ್ಷರ ಏನಾದರೂ ಸೇರಿಸಿದ್ದಾರೆಯೇ? ಅದು ಅನಿವಾರ್ಯ. ಅದಕ್ಕೆ ನಾನು ಹೇಳಿದ್ದು. ಹೊರದೇಶದವರು ಯಾರೋ ಬಂದು ಶ್ಲಾಘನೆ ಮಾಡಿದ್ದಾರೆ. ನಮಗೆ ಅವರಿಂದ ಶಭಾಷ್‌ಗಿರಿ ಸಿಕ್ಕಿದೆ ಎಂದರೆ, did they make any survey in the State? No, whatever the draft or points you have given to them, ಅದರ ಮೇಲೆ ಅವರು ಚೆನ್ನಾಗಿ ಮಾಡಿದ್ದೀರಿ ಎಂದು ಹೇಳಬಹುದು. ರಾಜ್ಯದ ಪರಿಸ್ಥಿತಿಯನ್ನು ಒಂದೇ ದಿನದಲ್ಲಿ ಅರ್ಥ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಒಂದು ಸಭೆಯನ್ನು ಕರೆಬಹುದು. ಒಂದು ಸಭೆಯಲ್ಲಿ ನಾವು ಅವರ ಮುಂದೆ ಏನು present ಮಾಡುತ್ತೇವೆಯೋ, ಅದನ್ನು ಗಮನಿಸಿ, ಓಕೆ ಚೆನ್ನಾಗಿ ಮಾಡಿದ್ದೀರಿ ಎಂದು ಹೇಳಬಹುದು. ಅದರ ಮೇಲೆ ರಾಜ್ಯದ ಪರಿಸ್ಥಿತಿಯನ್ನು ಅಳೆಯುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಸಲೀಂ ಅಹಮದ್:-** ಭಾರತದ ರಕ್ಷಣಾ ಸಚಿವರಾದ ಮಾನ್ಯ ರಾಜನಾಥ್ ಸಿಂಗ್‌ರವರು ಶ್ಲಾಘನೆ ಮಾಡಿ ಹೋಗಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸಮಾರಂಭಗಳಲ್ಲಿ ಶ್ಲಾಘನೆ ಮಾಡುವುದು ಏತಕ್ಕೆ ಎಂಬುದು ನಮಗೂ ಗೊತ್ತು ಮತ್ತು ನಿಮಗೂ ಗೊತ್ತು. ನೀವು ಕರೆದ ಸಭೆಯಲ್ಲಿ ನಿಂತು, ನಿಮ್ಮನ್ನು ಕೆಟ್ಟದಾಗಿ ಯಾರು ಮಾತನಾಡಿ ಹೋಗುವುದಿಲ್ಲ. ಆ ಸಮಯದಲ್ಲಿ ನಾನು ಸಭೆಯಲ್ಲಿದಿದ್ದರೆ, ಹೋಗಲಿ ಎಂದು ಶಭಾಷ್‌ಗಿರಿ ಕೊಡಬೇಕು ಎನ್ನುವಂತಹದ್ದು ಇರುತ್ತದೆ. ಅದರಿಂದಾಗಿ ಇವತ್ತು ಕಲ್ಯಾಣ ಕಾರ್ಯಕರ್ಮಗಳ ಸಮರ್ಪಕ ಅನುಷ್ಠಾನದಿಂದಾಗಿ ಅಸಮಾನತೆಯ ತೀವ್ರತೆ ಕಡಿಮೆಯಾಗುತ್ತಿದೆ ಎಂದು ಹೇಳಿದ್ದೀರಿ. ಅಸಮಾನತೆ ತೀವ್ರತೆ ಕಡಿಮೆಯಾಗಿಲ್ಲ, ಹೆಚ್ಚಾಗಿದೆ. ಘೋಷಣೆಗಳ ಬಗ್ಗೆ ಮಾತನಾಡಿದರು. 344 ಘೋಷಣೆಗಳ ಪೈಕಿ 331 ಘೋಷಣೆಗಳಿಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಇನ್ನೊಂದು 13 ಘೋಷಣೆಗಳು ಮಾತ್ರ ಬಾಕಿಯಿದೆ ಎನ್ನುವುದು ಲೆಕ್ಕ. ಇದು ಸರಿಯಾದ ಕ್ರಮವಲ್ಲ. ಇದು ಅಸಮರ್ಪಕ. ಘೋಷಣೆಗಳು ಆಗಿದ್ದೆಲ್ಲವೂ ಕೂಡ ಅನುಷ್ಠಾನವಾಗಿದಿದ್ದರೆ, ಅದೇ ಅಭಿವೃದ್ಧಿ. ಇಲ್ಲಿ ಅಭಿವೃದ್ಧಿ ಇಲ್ಲವೆಂದು ಏತಕ್ಕೆ ಮತ್ತೆ ಬರುತ್ತದೆ? ಅದೇ ಕಾರಣದಿಂದ ಪ್ರತಿ ದಿನ ಜನರು ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಎಲ್ಲಕ್ಕಿಂತ ಮೀಗಿಲಾಗಿ ಇಡೀ ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಾದಾಗಲೂ ಕೂಡ ನಾನು ಪ್ರವಾಸ ಮಾಡಿದ್ದೇನೆ. ಈ ರಾಜ್ಯಪಾಲರ ಭಾಷಣದಲ್ಲಿ ಅತಿವೃಷ್ಟಿ ಇಲ್ಲ ಎನ್ನುವಂತಹದ್ದು ಇದೆ. ಅನಾವೃಷ್ಟಿ ಇಲ್ಲ ಎನ್ನುವಂತಹದ್ದು ಇದೆ. ಹಾಗಾದರೆ ಎಲ್ಲವೂ ಸಮರ್ಪಕವಾಗಿದಿದ್ದರೆ ಜನರಿಗೆ ಹಾಹಾಕಾರ ಏಕೆ? ಇದು ಸಹಜ ಪ್ರಶ್ನೆಯಾಗಿದೆ. ಕಲಬುರಗಿ ಭಾಗದಲ್ಲಿ ತೊಗರಿ ಬೆಳೆಯುವಂತಹ ರೈತರು ಇವತ್ತು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಆ ಬೆಳೆಗೆ ನೆಟೆ ರೋಗ ಬಂದಿದೆ. ರೈತರ ಸಂಕಷ್ಟವನ್ನು ಕೇಳುವವರಿಲ್ಲ.

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ರಾಜ್ಯದ ಜನರಿಗೆ ತಪ್ಪು ಮಾಹಿತಿ ಹೋಗಬಾರದು. ಬೆಳೆಯನ್ನು ಖರೀದಿ ಮಾಡುತ್ತಿದ್ದಾರೆ. ಈಗ support price ಕೊಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಈಗ ಖರೀದಿಯ ಬಗ್ಗೆ ನನ್ನ ಪ್ರಶ್ನೆ ಇಲ್ಲ. ರೋಗದ ಬಗ್ಗೆ ನನ್ನ ಪ್ರಶ್ನೆ ಇದೆ. ಆ ಬೆಳೆಗೆ ರೋಗ ಬಂದಿರುವುದಕ್ಕೆ ರೈತರ ನಷ್ಟವನ್ನು ತುಂಬಿಕೊಡುವುದರ ಬಗ್ಗೆ ನನ್ನ ಪ್ರಶ್ನೆ ಇದೆ. ಯಾವ ಬೆಳೆ ಚೆನ್ನಾಗಿ ಇರುತ್ತದೆಯೋ, ಅದನ್ನು ಖರೀದಿ ಮಾಡುತ್ತೀರಿ. ಅದರ ಬಗ್ಗೆ ನನ್ನ ಪ್ರಶ್ನೆಯಿಲ್ಲ. ರಾಜ್ಯ ಸರ್ಕಾರ ಅದನ್ನು ಖರೀದಿ ಮಾಡಲಿ. ಅದಕ್ಕೆ ಏನು ಬೆಲೆ ಕೊಡಬೇಕೋ, ಅದಕ್ಕೆ MRP (Maximum Retail Price) ಕೊಡುತ್ತೀರೋ, ಕೊಡಿ. ಇದರ ಬಗ್ಗೆ ಸರ್ಕಾರ ಗಮನಿಸಿಕೊಂಡು ಅದನ್ನು ಮಾಡಬೇಕಾಗಿತ್ತು. ಹಾಲು ಉತ್ಪಾದನೆ ಜಾಸ್ತಿ ಇರುವುದು ಬಹಳ ಸಂತೋಷ. ನಮ್ಮ ಕಾಲದಲ್ಲಿತ್ತು. ಅದು ನಿಮ್ಮ ಕಾಲದಲ್ಲಿಯೂ ಇದೆ. ನಮ್ಮ ಕಾಲದಲ್ಲಿ ಹಾಲಿನ ಉತ್ಪಾದನೆ ಜಾಸ್ತಿ ಇದ್ದುದರಿಂದ, ಅದನ್ನು ಶಾಲೆಯ ಮಕ್ಕಳಿಗೂ ಕೊಡೋಣವೆಂದು ಮಾಡಿದೆವು. ಆದರೂ ಕೂಡ ಅದು ಹೆಚ್ಚಾಗಿತ್ತು. ಅದ್ದರಿಂದ ಹಾಲನ್ನು ಪೌಡರ್ ಆಗಿ ಪರಿವರ್ತನೆಯಾಗಿ ಮಾಡಿದಿವಿ. ಅದು

ಈಗಲೂ ಕೂಡ ಮುಂದುವರೆದಿದೆ. ಹಾಲಿನ ಉತ್ಪಾದನೆ ಹೆಚ್ಚಾಗಿರುವುದು ಸಂತೋಷದ ಸಂಗತಿಯಾಗಿದೆ. ಇದರಿಂದ ರೈತರಿಗೆ ಅನ್ಯಾಯವಾಗಬಾರದು ಎಂದು ಸರಿ ಮಾಡಿಕೊಟ್ಟರು. Congress manifesto ದಲ್ಲಿ ನಮ್ಮ ಸರ್ಕಾರ ಬಂದ ತಕ್ಷಣ ರೂ. 700/- ಗಳನ್ನು ಹೆಚ್ಚಿಗೆ ಕೊಡುತ್ತೇವೆಂದು ಹೇಳಿದರು. ಅದನ್ನು ಕೊಟ್ಟಿದ್ದಾರೆಯೇ? ಅದು ಇಲ್ಲ. ಈಗಲೂ ಕೂಡ ಪೆಂಡಿಂಗ್ ಇದೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ, 1500 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದೇವೆ. I will prove that Rs. 700 crore is still pending.

(ಮುಂದು)

(44) 04.03.2025/5.10/ಟಿಸಿಹೆಚ್-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು)**

ರೂ.700 ಕೋಟಿ ರೂಪಾಯಿಗಳು ಈಗಲೂ ಕೂಡ ಬಾಕಿ ಇದೆಯೆಂದು ದಿನಾಲೂ ಪತ್ರಿಕೆಗಳಲ್ಲಿ ಬರುತ್ತಿದೆ. ರೂ.700 ಕೋಟಿ ರೂಪಾಯಿಗಳು ಬಾಕಿ ಇರುವಾಗ ಸರ್ಕಾರ ಇದನ್ನು ಏಕೆ ಮರೀಚಿಕೆ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದ ರಾಸುಗಳು, ಕುರಿಗಳು ಮತ್ತು ಮೇಕೆಗಳಿಗೆ ಪರಿಹಾರಧನ ಶೇ.50 ಕೊಡುವುದಕ್ಕೂ ಕೂಡ ಬಾಕಿ ಇದೆ. ಇವೆಲ್ಲಾ ಬಾಕಿ ಇದ್ದರೂ ಕೂಡ ನಾವು ಸಂಪೂರ್ಣವಾಗಿ ಪರಿಹಾರ ಕೊಟ್ಟಿದ್ದೇವೆ ಎನ್ನುವ ಮಾತುಗಳಿವೆ. ಅದಕ್ಕೆ ನಾನು ಸತ್ಯಕ್ಕೆ ದೂರವಾದದು ಎಂದು ಹೇಳುತ್ತಿದ್ದೇನೆ. ಏಕೆಂದರೆ ಸದನದಲ್ಲಿ 'ಸುಳ್ಳು' ಎಂದು ಹೇಳುವುದಕ್ಕೆ ಬರುವುದಿಲ್ಲ. ಬೇಕಾದರೆ ನಾವು ಹೊರಗಡೆ ಹೇಳಬಹುದು. ನೀವು ಹೇಳಿ ಎಂದು ಹೇಳಿದರೂ ಕೂಡ ನಾನು ಹೇಳುವುದಿಲ್ಲ. ಏಕೆಂದರೆ ಹೇಳಿದರೆ ತಪ್ಪಾಗುತ್ತದೆ. ಬೇಕಾದರೆ ನೀವು accept ಮಾಡಬಹುದು. ಆದರೆ ಮಾನ್ಯ ಸಭಾಪತಿಯವರು accept ಮಾಡಬೇಕಲ್ಲವೇ? ನಾವು ಹೇಳಬಾರದು. ಅದು ಹೇಳಬೇಕಂತೆ ನಾನು ಹೇಳುತ್ತೇನೆ. ಅದನ್ನು ತೆಗೆದುಹಾಕಿರಿ. ಇದೆಲ್ಲಾ ಆಯಿತು. ಸರ್ಕಾರ ಗ್ಯಾರಂಟಿಗಳ ಬಗ್ಗೆ ಮಾತನಾಡಿದ್ದಾರೆ. ನಾವ್ಯಾರಾದರೂ ಗ್ಯಾರಂಟಿಗಳನ್ನು ವಿರೋಧ ಮಾಡಿದ್ದೇವೆಯೇ? ನಾವು ಯಾವ ಹಂತದಲ್ಲೂ ಗ್ಯಾರಂಟಿಗಳನ್ನು ವಿರೋಧ ಮಾಡಿಲ್ಲ.

**ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಮತ್ತು ಕೃಷಿ ಮಾರುಕಟ್ಟೆ ಸಚಿವರು):-** ಪರವಾಗಿಯೂ ಇಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊಡಬೇಕು ಎಂದು ಹೇಳಿದರೆ ಅದು ಪರನೋ, ವಿರೋಧವೋ? ನಾವು ಅದರ ಪರವಾಗಿಲ್ಲವೆಂದು ನೀವು ಹೇಳುವುದಕ್ಕೆ ಆಗುವುದಿಲ್ಲ. ಪರ ಮತ್ತು ವಿರೋಧವನ್ನು ನಾವು ಹೇಳಬೇಕು. ಆದರೆ ನಾವು ಹೇಳಲಿಲ್ಲ. ಇನ್ನೊಂದು ವಿಷಯ ಏನೆಂದರೆ Social Darwinism ಕಡೆಗೆ ಹೋಗಬಾರದು ಹಾಗೂ ಡಾ.ಬಿ.ಆರ್. ಅಂಬೇಡ್ಕರ್‌ರವರ ಮಾನವೀಯ ಸಂವಿಧಾನವು ಅಸಮಾನತೆಯನ್ನು ತಗ್ಗಿಸಿ ಆದಾಯದಲ್ಲಿ ನ್ಯಾಯಯುತ ಪಾಲನ್ನು ಜನರಿಗೆ ನೀಡಬೇಕೆಂಬುದು ತಿಳಿಸುತ್ತದೆ. ಆದರೆ ಸರ್ಕಾರದ ಗ್ಯಾರಂಟಿ ಯೋಜನೆಗಳು 'ಓಟ್ ಬ್ಯಾಂಕ್‌ಗಾಗಿ ಮಾಡಿದ ತಂತ್ರಗಳು' ಎಂದು ನಾವು beginning ನಿಂದ ಹೇಳಿಕೊಂಡು ಬಂದಿದ್ದೇವೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. Democratic system ನಲ್ಲಿ ತಾವು yield ಆಗಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಗ್ಯಾರಂಟಿಗಳ ಅನುಷ್ಠಾನ **(ಗೊಂದಲ)** ನಾವು ಆಮೇಲೆ ಮಾತನಾಡುತ್ತೇವೆ. ಗ್ಯಾರಂಟಿಗಳನ್ನು ಕೊಡುವುದಕ್ಕೆ ಸರ್ಕಾರ ಇರುವಾಗ, ಆ ಗ್ಯಾರಂಟಿ ಯೋಜನೆಗಳು ತಲುಪಿದೆಯೇ ಇಲ್ಲವೇ ಎಂದು ನೋಡಬೇಕಾಗಿರುವುದು ಯಾರ ಕೆಲಸ? ಅದು ಅಧಿಕಾರಿಗಳ ಕೆಲಸ. ಹಾಗಿದ್ದರೂ ಕೂಡ ಇನ್ನೂ ಕಳೆದ 6 ತಿಂಗಳನಿಂದ ಅಕ್ಕಿ ಬಂದಿಲ್ಲ ಮತ್ತು ಮಹಿಳೆಯರಿಗೆ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ಮಹಿಳೆಯರು ನಾವು ರೂ.2,000 ಗಳನ್ನು ನೋಡಿ ಸುಮಾರು 6 ತಿಂಗಳು ಆಯಿತು ಎಂದು ಹೇಳುತ್ತಾರೆ. ಅಧಿಕಾರಿಗಳು ಇದನ್ನು ನೋಡಬೇಕು. ಸರ್ಕಾರ 'ಅನುಷ್ಠಾನ ಸಮಿತಿ' ಎಂದು ಮಾಡಿ ಖರ್ಚು ಮಾಡಲಾಗಿದೆ. ಯಾರು ಅವರು? ಅವರೇನು ಅಧಿಕಾರಿಗಳೇ? ನೀವು ಒಂದು ಪಕ್ಷದ ಕಾರ್ಯಕರ್ತನ್ನು, ಜನರ tax ಹಣವನ್ನು ಕೊಟ್ಟು ಅನುಷ್ಠಾನ ಸಮಿತಿಗಳನ್ನು ಮಾಡಿದ್ದೀರಲ್ಲ. ಅದು ಮಾಡಲು ಕಾನೂನಿನಲ್ಲಿ ಅವಕಾಶ ಎಲ್ಲಿದೆ? ಅವರಿಗೆ ಮಾತ್ರ ದಿನಾ ಪಗಾರ ಹೋಗಬೇಕು, ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಬಾರದೇ? ಅವರಿಗೆ 6 ತಿಂಗಳಾದರೂ ಕೊಟ್ಟಿಲ್ಲ. ಆದರೆ ಇದಕ್ಕೆ ಲೆಕ್ಕ ಎಲ್ಲಿದೆ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ರೂ.52,000 ಕೋಟಿಗಳನ್ನು ಬಜೆಟ್‌ನಲ್ಲಿ ಮೀಸಲಿಟ್ಟಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಬೇಕಾಗಿರುವುದು ರೂ.52,000 ಕೋಟಿಗಳು. ಆದರೂ ಕೂಡ ಮಾನ್ಯ ಸದಸ್ಯರು ಮಾತನಾಡುವಾಗ ರೂ.60,000 ದಿಂದ 70,000 ಕೋಟಿ ಹಣವನ್ನು ಖರ್ಚು ಮಾಡಿದ್ದೇವೆಂದು mention ಮಾಡಿದರು. ಆದರೆ ನಾವು ಅದಕ್ಕೆ ತಗಾದೆ ತೆಗೆಯಲಿಲ್ಲ. ಬಜೆಟ್‌ನಲ್ಲಿ ಇರುವುದು ಮಾತ್ರವೇ ಸತ್ಯ. ರೂ.52,000 ಕೋಟಿಗಳು ಎಂದು ಹೇಳಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಹೋಗಲಿ, ಇದರಲ್ಲಿ ಯಾರ್ಯಾರಿಗೆ ಪಾಲಿದೆ? ರೂ.52,000 ಕೋಟಿಯಲ್ಲಿ ದಲಿತರ ಪಾಲು ಎಷ್ಟು ಹೇಳಿ ನೋಡೋಣ. ರೂ.52,000 ಕೋಟಿಯಲ್ಲಿ ದಲಿತರಿಗೆ ನೀವು ಏಕೆ ಗ್ಯಾರಂಟಿಯನ್ನು ಕೊಟ್ಟಿಲ್ಲ. ಅವರು ಬಾಧ್ಯರಲ್ಲವೇ?

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಕೊಟ್ಟಿದ್ದೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊಟ್ಟಿಲ್ಲ. ನೀವು ಇಲ್ಲಿ ಕೇಳಿ. ನೀವು SCSP/TSP (Scheduled Castes Sub-Allocation & Tribal-Sub Allocation) ಹಣವನ್ನು ಅವರಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಹಳ್ಳಿಗಳಲ್ಲಿ ಸಣ್ಣಸಣ್ಣ ಹೋಟೆಲ್‌ಗಳಿವೆ. ಯಾವ ಎಸ್‌ಸಿ. ಎಸ್.ಟಿ, ದಲಿತರು ಇದ್ದಾರೋ ಅವರಿಗೆ ಪ್ರತ್ಯೇಕವಾಗಿ ಒಂದು ಲೋಟವನ್ನು ಇಟ್ಟಿರುತ್ತಾರೆ. ಬೇರೆ ಎಲ್ಲರನ್ನು ಒಳಗಡೆಗೆ ಬಿಟ್ಟುಕೊಂಡು

ಟೀ ಮತ್ತು ತಿಂಡಿಯನ್ನು ಕೊಡುತ್ತಾರೆ. ಆದರೆ ಎಸ್.ಸಿ.ಎಸ್‌ಟಿಯವರು ಮಾತ್ರ ಅವರೇ ಹೋಗಿ ಆ ಲೋಟವನ್ನು ತೊಳೆದುಕೊಳ್ಳಬೇಕು, ಅವರೇ ಟೀ ಹಾಕಿಸಿಕೊಳ್ಳಬೇಕು. ಕುಡಿದುಬಿಟ್ಟು ಮತ್ತೆ ಅಲ್ಲೇ ಇಡಬೇಕು.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಿದೆ ಹೇಳಿ ನೋಡೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೋಡಿ, ಅದನ್ನು ಅನುಭವಿಸಿದವರಿಗೇ ಮಾತ್ರ ಗೊತ್ತು. ಅದನ್ನು ಅನುಭವಿಸದವರಿಗೆ ಏನು ಗೊತ್ತು? ಹಳ್ಳಿಗಳಲ್ಲಿ ನೀವೆಲ್ಲರೂ ಒಳಗಡೆ ಕುಳಿತುಕೊಳ್ಳುತ್ತೀರಿ. ಆದರೆ ಅವರು ಹೊರಗಡೆ ಕುಳಿತುಕೊಳ್ಳುತ್ತಿದ್ದಾರೆ. ಇನ್ನುಮೇಲೆ ನೀವು ಕೂಡ ಒಂದು ಕೆಲಸ ಮಾಡಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವರು ಕೂಡ ಒಂದು ಕೆಲಸ ಮಾಡಲಿ ಸ್ವಾಮಿ. ನನ್ನದೇನೂ ಅಭ್ಯಂತರವಿಲ್ಲ. ಇವರು ಕೂಡ ಅಲ್ಲಿಂದಲೇ ಬಂದಿರುವುದು. ನಾವು ಕೂಡ ಅಲ್ಲಿಂದಲೇ ಬಂದಿರುವುದು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡುವುದು ತಪ್ಪು. ಆ ರೀತಿ ಎಲ್ಲಿದೆ ಹೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರವಿಯವರೇ, ನೀವು ಒಂದು ಕೆಲಸ ಮಾಡಿ. ನೀವು ಒಳಗಡೆ ಕುಳಿತುಕೊಂಡಾಗ ಅವರನ್ನೂ ಕೂಡ ಕರೆದುಕೊಂಡು ಹೋಗಿ ಕುಳಿತುಕೊಳ್ಳಿ ಸಾಕು.

**ಶ್ರೀ ಎಸ್.ರವಿ:–** ಅದು ತಪ್ಪು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಎಸ್.ರವಿಯವರೇ, ನಾನು ಕಂಡಿದ್ದನ್ನು ಹೇಳುತ್ತಿದ್ದೇನೆ. ದಯವಿಟ್ಟು ಸ್ವಲ್ಪ ಕೇಳಿಸಿಕೊಳ್ಳಿ. ಇದು ನೂರಕ್ಕೆ ನೂರು percent ಇದೆಯೆಂದು ನಾನು ಹೇಳುವುದಿಲ್ಲ, ಕಡಿಮೆಯಾಗಿದೆ. ಆದರೆ ಇನ್ನೂ ಇದೆ. ಪಾಪ, ಅದನ್ನು ಅನುಭವಿಸುವರಿಗೆ ಗೊತ್ತಾಗುತ್ತದೆ. ಅವರೇ ಆ ಲೋಟವನ್ನು ತೊಳೆದು ಅಲ್ಲಿ ಇಟ್ಟು ಹೋಗುತ್ತಾರೆ. ಮತ್ತೆ ಇನ್ನೊಬ್ಬರು ಬಂದಾಗಲೂ ಕೂಡ ಅದೇ ರೀತಿ ಇದೆ. ಇದು ಅಲ್ಲಿ ಇರುವ ಪದ್ಧತಿ. ಆದರೆ ಈಗ ಸರ್ಕಾರದಲ್ಲಿ ಏನಿದೆ? ನಿಮಗೆ ಮಾತ್ರ ಅದೇ ಲೋಟದಲ್ಲಿ ಕೊಟ್ಟಹಾಗೆ, SCSP/TSP ಗೆ ಮೀಸಲಿಟ್ಟ ಹಣ ನಿಮಗೆ. ರೂ.52,000 ಕೋಟಿ ಗ್ಯಾರಂಟಿ ಯೋಜನೆಗೆ ಇಟ್ಟಿದ್ದು ಅದು ಬೇರೆಯವರಿಗೆ. ಸರ್ಕಾರದ ಈ ನೀತಿ ಸರಿಯೇ? ಇದನ್ನು ಏಕೆ ನೀವು ಗೌರವಾನ್ವಿತ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಲಿಲ್ಲ. ಇದು ಸರಿಯೇ? ಇದು ದಲಿತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಾಡಿದ ಅನ್ಯಾಯ ಅಲ್ಲವೇ? ಅವರಿಗೆ ಮಾತ್ರ ಪಾಲು ಇಲ್ಲ, ಬೇರೆಯವರಿಗೆ ಪಾಲು ಇದೆಯೇ?

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಶಿವರಾಜ ಎಸ್.ತಂಗಡಗಿಯವರೇ, ನಾವು ಏನು ಮಾತನಾಡಬೇಕು ಅಂದುಕೊಂಡಿದ್ದೇವೋ ಅದನ್ನು ದಯವಿಟ್ಟು divert ಮಾಡಬೇಡಿ. ಕ್ಷಮೆ ಇರಲಿ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ನೀವು ಮಾತನಾಡುವಾಗ ಏನು ಬೇಕಾದರೂ ಮಾತನಾಡಿ. ನಾನು ಅದಕ್ಕೆ ಅಡ್ಡ ಬರುವುದಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಶಿವರಾಜ ಎಸ್.ತಂಗಡಗಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು yield ಆದಲ್ಲಿ ಮಾತ್ರ ಮಾತನಾಡಿ, ಇಲ್ಲದಿದ್ದರೆ ಮಾತನಾಡುವುದು ಬೇಡ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕಾರ್ಯಕ್ರಮಗಳಿಗೆ ಸುಮಾರು ರೂ.೯೦,೦೦೦ ಕೋಟಿಗಳು ನೇರವಾಗಿ ಫಲಾನುಭವಿಗಳಿಗೆ ತಲುಪಿದೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಷಯ. ಏಕೆಂದರೆ, ಕಳೆದ 6 ತಿಂಗಳಿನಿಂದ DBT (Direct Benefit Transfer) ಮೂಲಕವೇ ಪಾವತಿ ಮಾಡುತ್ತಿರುವುದು. ಈಗ ಏಜೆಂಟ್‌ಗಳನ್ನು ಇಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಸರ್ಕಾರ ಅನುಷ್ಠಾನ ಸಮಿತಿಗಳನ್ನು ಮಾಡಿರುವುದೇ ತಪ್ಪು. ಅದು ಕಾನೂನು ಬಾಹಿರ, ಇರಲಿ. ಆದರೂ ಕೂಡ ಇವೆಲ್ಲವೂ ಸತ್ಯಕ್ಕೆ ದೂರವಾದ ವಿಚಾರಗಳು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದಾದ ನಂತರ . . .

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರು yield ಆದರೆ ಮಾತ್ರ ಮಾತನಾಡಬಹುದು.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವರು ಅನುಷ್ಠಾನ ಸಮಿತಿಗಳ ಮುಖಾಂತರ ಕೊಡುತ್ತಿದ್ದಾರೆಂದು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲ, ನಾನು ಹೇಳಿಲ್ಲ. ಅದರ ಮೂಲಕ ಅಲ್ಲ. ನೀವು ಅನುಷ್ಠಾನ ಸಮಿತಿಗಳನ್ನು ನೇಮಕ ಮಾಡಿರುವುದು ಕಾನೂನು ಬಾಹಿರ. ನೀವು ಖಜಾನೆ ಹಣವನ್ನು ಅವರಿಗೆ ಕೊಡುತ್ತಿದ್ದೀರಿ. ಈಗ ಆ ಛೇರ್ಮನ್‌ಗೆ ಕೊಡಬೇಕು ಕೊಡಿ. ಸದಸ್ಯರಿಗೆ ಕೊಡಬೇಕು ಅವರಿಗೂ ಕೊಡಿ. ನೀವು ಇದನ್ನು ಮಾಡಿರುವುದು, it is an extra burden on the Government. ಇದನ್ನು ನೀವೇ create ಮಾಡಿರುವುದು. ನಾನು ಇದನ್ನು ಹೇಳಿದ್ದೇನೆ, ಅವರ ಮೂಲಕ ಕೊಡುತ್ತೀರಿ ಎಂದು ಹೇಳಿಲ್ಲ. ಆದರೆ ಅಧಿಕಾರಿಗಳು ಇದ್ದಾರಲ್ಲ, ಗ್ಯಾರಂಟಿಗಳ ವಿಚಾರದಲ್ಲಿ ಅವರದ್ದು ಏನು ಕೆಲಸ? ಗ್ಯಾರಂಟಿ ವಿಚಾರದಲ್ಲಿ ಇಷ್ಟು ಹಣ ಕೊಡಬೇಕೆಂದು ಇರುತ್ತದೆ. ಅದಕ್ಕೆ planning ಬೇಕಾಗಿರುತ್ತದೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಎಲ್ಲಾ ಸಮಿತಿಗಳನ್ನು ಮಾಡುತ್ತೇವೆ, ಅಲ್ಲಿ ಅದಕ್ಕೆ ಅಧಿಕಾರಿಗಳು ಇಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆಲ್ಲಾ ಕಾನೂನಿನಲ್ಲಿ ಅವಕಾಶ ಇದೆ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ಆ ಕಾನೂನು ಮಾಡಿಕೊಂಡಿರುವುದು ನಾವೇ ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ ಇದಕ್ಕೆ ಕಾನೂನು ಇಲ್ಲ, rule ಕೂಡ ಇಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, Rules and regulations ಮಾಡಿಕೊಳ್ಳುವುದು ನಾವೇ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಕಾನೂನು ಇಲ್ಲ, rule ಕೂಡ ಇಲ್ಲ. ಎಲ್ಲಿ ಮಾಡಿದ್ದಾರೆ, ಮಾಡಿಲ್ಲ. ಇದು ನಿಮ್ಮ ತೀರ್ಮಾನ. ನಿಮ್ಮ ಪಾಡಿಗೆ ನೀವು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಪ್ರಜಾಪ್ರಭುತ್ವ ಇದೆ, ಕಾನೂನು ಇದೆ. ಭಾರತದ ಸಂವಿಧಾನ ಇದೆ. ಮತ್ತೆ ಏಕೆ ಎಲ್ಲಾ ಬಿಲ್‌ಗಳನ್ನು ಇಲ್ಲಿಗೆ ತಂದು ಪಾಸ್ ಮಾಡುತ್ತಾರೆ. ಆದರೆ ಅದು ಏಕೆ ಇಲ್ಲ? ಆದ್ದರಿಂದ ಇದನ್ನು ಅರ್ಥ ಮಾಡಿಕೊಳ್ಳಬೇಕು. ಗೌರವಾನ್ವಿತ ರಾಜ್ಯಪಾಲರ ಭಾಷಣದ ಪುಸ್ತಕದ ಕ್ರಮ ಸಂಖ್ಯೆ.7ರಲ್ಲಿ ಏನು ಹೇಳಿದ್ದಾರೆಂದರೆ, ಕರ್ನಾಟಕ ಮಾದರಿ ಅಭಿವೃದ್ಧಿಯೆಂದರೆ ಜನಕೇಂದ್ರಿತ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಡಳಿತವನ್ನು ರೂಪಿಸುವುದು ಎಂದರ್ಥ. ಇಲ್ಲಿ "shining a light in the darkness" ಎಂದು ಇನ್ನೊಂದು word ಕೂಡ ಹಾಕಿದ್ದೀರಿ. May be ಇದೇ ಕಲ್ಯಾಣ ಕಾರ್ಯಗಳಿಗೆ ಹೇಳುತ್ತಿರತಕ್ಕಂಥದ್ದು. a blueprint for the world.

**(ಮುಂದು)**

(45)4.3.2025/5.20/ಎಂ.ಎಂ-ಎಂ.ಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಶಿವಾನಂದ ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಕೃಷಿ ಮಾರುಕಟ್ಟೆ ಸಚಿವರು):-** ಇಂಡಿಯಾ ಈಸ್ ಶೈನಿಂಗ್ ಅದನ್ನು ಮರೆತಿರಾ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಅದಾಯಿತು, It is shining now. Many countries are looking at India. That is the shining, India is shining now. ನಿಮ್ಮ ತಲೆ ಹೇಗೆ ಹೊಳೆಯುತ್ತಿದೆ ಹಾಗೆ ನಮ್ಮ ದೇಶ ಈಗ ಹೊಳೆಯುತ್ತಿದೆ. ಆದರೆ;

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇವೆರಡೂ ಕೂಡ shining ಇಲ್ಲ.

**ಶ್ರೀ ಶಿವರಾಜ ಎಸ್. ತಂಗಡಗಿ:-** ಮಾನ್ಯ ವಿರೋಧಪಕ್ಷದ ನಾಯಕರೇ, ನಮಗೂ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ . . .

**(ಗೊಂದಲ)**

**ಶ್ರೀ ಎನ್.ಎಸ್. ಬೋಸ್‌ರಾಜು (ಸಭಾನಾಯಕರು**):- ಈಗ dress shining ಆಗುತ್ತಿದೆ ಅಷ್ಟೇ

(**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಿಮಗೆ ಅವಕಾಶ ಕೊಡುತ್ತಾರೆ. ಆಗ ಹೇಳಿ.

**ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರು**):- ನಿಮ್ಮ ಅದಾನಿ, ಅಂಬಾನಿಯಂತಹ ಶ್ರೀಮಂತ ಕೈಗಾರಿಕೋದ್ಯಮಿಗಳು shining ಇದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರ ಬಹಳ ಮುಖ್ಯವಾದುದು.

**ಶ್ರೀ ಮಧು ಬಂಗಾರಪ್ಪ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಗ್ಯಾರಂಟಿಗಳನ್ನೂ ಕಾಪಿ ಹೊಡೆಯುತ್ತಿರುವುದು ಅವರು. So, Karnataka is shining.

**ಶ್ರೀಮತಿ ಭಾರತಿ ಶೆಟ್ಟಿ:-** ಆರ್ಥಿಕವಾಗಿ ಭಾರತ ಐದನೇ ಸ್ಥಾನದಲ್ಲಿದೆ. It is shining.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಾನು ಮಾತನಾಡಿದ ನಂತರ ನೀವು ಎಷ್ಟು ದಿವಸ ಮಾತನಾಡುತ್ತೀರೋ ಮಾತನಾಡಿ, ನಾನು ಕೇಳಿಸಿಕೊಳ್ಳುತ್ತೇನೆ. ದಯವಿಟ್ಟು disturb ಮಾಡಬೇಡಿ. ಆಗಾಗ yield ಆಗೋಣ. Yield ಆಗುವ ಕಾಲ ಬಂದಾಗ yield ಆಗಬೇಕಾಗುತ್ತದೆ. ನಾವೂ ಆಗಬೇಕು, ನೀವೂ ಆಗಬೇಕು, ಆಗೋಣ. ನಾನು ಈಗತಾನೇ ಪ್ರಾರಂಭ ಮಾಡಿದ್ದೇನೆ. ಈಗಲೇ yield ಆಗು ಎಂದರೆ ಹೇಗಾಗುತ್ತದೆ? ಶಿಕ್ಷಣ ಕ್ಷೇತ್ರ ಮುಖ್ಯವಾದುದು. ಪ್ರತಿಯೊಬ್ಬರಿಗೂ ಆಸ್ತಿ ಎಂದರೆ ಶಿಕ್ಷಣವೇ. ಶಿಕ್ಷಣಕ್ಕೆ ಎಲ್ಲಾ ರೀತಿಯ ಪ್ರಾಮುಖ್ಯತೆ ಕೊಟ್ಟಿದ್ದರೆ, ಬಹಳ ಸಮರ್ಪಕವಾಗಿ ಎಲ್ಲವೂ ನಡೆದಿದ್ದರೆ ಸಂಪನ್ಮೂಲಗಳೆಲ್ಲವೂ ಅವರಿಗೆ ಸಿಕ್ಕಿದ್ದರೆ 1,41,000 ಶಿಕ್ಷಕರ ಕೊರತೆ ಏತಕ್ಕೆ ಇರುತ್ತಿತ್ತು? ನಾನು ಪ್ರತಿ ದಿವಸ ಫ್ರೀಡಂ ಪಾರ್ಕ್‌ನಲ್ಲಿ ನೋಡುತ್ತಿರುತ್ತೇನೆ. ಯಾರೇ ಹೋರಾಟ ಮಾಡಬೇಕಾದರೂ ಅಲ್ಲಿಯೇ ಮಾಡಬೇಕೆಂದು ಸರ್ಕಾರ ಹೇಳಿರುತ್ತದೆ. ಬೆಂಗಳೂರಿನಲ್ಲಿ ಒಂದು ದಿನಕ್ಕೆ 5-6 ಹೋರಾಟಗಳು ನಡೆಯುತ್ತಿರುತ್ತವೆ. ಆಶಾ ಕಾರ್ಯಕರ್ತೆಯರು ಹೆಣ್ಣುಮಕ್ಕಳೇ ಆಗಿದ್ದಾರೆ. ಸಾವಿರಾರು ಹೆಣ್ಣುಮಕ್ಕಳು ಬಂದು ಚಳಿಯಲ್ಲಿ ವಾರಗಟ್ಟಲೆ ಅಲ್ಲಿರುತ್ತಾರೆ. ಅವರಿಗೆ ಅಲ್ಲಿ ರಕ್ಷಣೆ ಇಲ್ಲ, ಊಟ ತಿಂಡಿ ಯಾರೂ ಕೊಡುವುದಿಲ್ಲ ಅವರೇ ಕಷ್ಟಪಟ್ಟುಕೊಂಡು ಮಾಡಿಕೊಳ್ಳಬೇಕು. ಅವರಿಗೆ ಶೌಚಾಲಯದ ವ್ಯವಸ್ಥೆ ಇರುವುದಿಲ್ಲ, ಸ್ನಾನ ಮಾಡುವುದಕ್ಕಾಗುವುದಿಲ್ಲ. ಅದೊಂದು ಬಟಾಬಯಲು, ಅಲ್ಲಿ ಹೆಣ್ಣುಮಕ್ಕಳು ಎಷ್ಟೊಂದು ಕಷ್ಟಪಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ manifesto ನಲ್ಲಿ ಮೊದಲು ಅಧಿಕಾರಕ್ಕೆ ಬಂದ ತಕ್ಷಣ ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಇತ್ತು. ಅದು ಆಗಿಲ್ಲ. ನರ್ಸ್‌ಗಳು ಮೊನ್ನೆಯವರೆಗೂ

ಹೋರಾಟ ಮಾಡಿದರು. ಪೋಲೀಸರು ಅವರ ಟೆಂಟುಗಳನ್ನು ಕಿತ್ತು ಬಿಸಾಕುತ್ತಾರೆ. ಅವರ ಪರಿಸ್ಥಿತಿ ಏನೆಂದು ನೋಡಿದವರಿಗೆ ಮಾತ್ರ ಗೊತ್ತಾಗುತ್ತದೆ. ಅವರು 'ಮೇಲೆ ಬಿಳಿ ಬಟ್ಟೆ, ಒಳಗೆ ಅರೆಹೊಟ್ಟೆ' ಎಂದು slogan ಕೂಗುತ್ತಿದ್ದರು ನನಗೆ ಅದನ್ನು ಕೇಳಿ ಎಷ್ಟು ಹೊಟ್ಟೆ ಉರಿಯಿತು ಎಂದರೆ; ಅಂದರೆ ಅವರ ಪರಿಸ್ಥಿತಿ ಹಾಗಿದೆ. ಅವರಿಗೆ ಸರಿಯಾಗಿ ಸಂಬಳವನ್ನೂ ಕೊಡುತ್ತಿಲ್ಲ, ಅವರನ್ನು ಖಾಯಂಗೊಳಿಸುವುದಕ್ಕೂ ಆಗುತ್ತಿಲ್ಲ. ಕೆಲವು ಸಲ ಖಾಯಂಗೊಳಿಸುವುದಕ್ಕೆ ಆಗುವುದಿಲ್ಲ ನೀವು ಆ ರೀತಿ ತೆಗೆದುಕೊಂಡಿರುತ್ತೀರಿ. ಅವರ ಕೆಲಸಕ್ಕೆ ಸರಿಯಾದ ಪಗಾರವನ್ನು ಕೊಡಬೇಕಲ್ಲವೇ? ಈ ರೀತಿ ಬೇಕಾದಷ್ಟು ಇದೆ. ಅಂಗನವಾಡಿ ಕಾರ್ಯಕರ್ತರು ಕೂಡ ಅದೇ ಮಾಡುತ್ತಾರೆ. ಈಗ ಸಮಸ್ಯೆಗಳಲ್ಲವೆಂದರೆ ಅವರೇತಕ್ಕೆ ಅಲ್ಲಿಗೆ ಬರುತ್ತಾರೆ? ಸರ್ಕಾರದ ಆದ್ಯಕರ್ತವ್ಯಗಳವೆ, ಇದನ್ನೆಲ್ಲವನ್ನೂ ಮಾಡಬೇಕಾಗಿದೆ. 6,400 ಸರ್ಕಾರಿ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ, ಏತಕ್ಕೆ? ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಈಗ ಹೊಡೆತ ಬೀಳುತ್ತಿದೆ. AG report ನಲ್ಲಿ ಕೂಡ ಕಳವಳಕಾರಿ ಅಂಶಗಳು ಉಲ್ಲೇಖ ಆಗಿದೆ. ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಏಕೆ? ಎಲ್ಲಾ ಸವಲತ್ತುಗಳು ಸಿಕ್ಕಿದರೆ ಅಲ್ಲಿಗೇ ಹೋಗುತ್ತಾರೆ. ಸಿಗದೇ ಇದ್ದಾಗ, ಶಿಕ್ಷಕರಿಲ್ಲದೇ ಇದ್ದಾಗ, ತನ್ನ ಕೈನಲ್ಲಿ ಆಗದಿದ್ದರೂ ಕೂಡ ಮಕ್ಕಳನ್ನು ಓದಿಸಬೇಕು, ಫೀಸ್ ಜಾಸ್ತಿಯಾದರೂ ಪರವಾಗಿಲ್ಲ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೋಗಬೇಕಾಗುತ್ತದೆ. ನಾವು ಅವರಿಗೆ ಸವಲತ್ತುಗಳನ್ನು ಕೊಡುವುದರ ಬದಲು ಬೇರೆ ಶಾಲೆಗಳಿಗೆ ಹೋಗುವುದಕ್ಕೆ ಅವರಿಗೆ ಪ್ರೇರೇಪಣೆ ಮಾಡುತ್ತಿದ್ದೇವೆಯೋ ಎಂದು ಅನಿಸುತ್ತದೆ.

ವಸತಿ ಶಿಕ್ಷಣಗಳ ಬಗ್ಗೆ ಭಾಷಣ ಮಾಡಿದ್ದೇ ಮಾಡಿದರು, ಹೇಳಿದ್ದನ್ನೇ ಹೇಳಿದರು. ಇವತ್ತಿಗೂ ಕೂಡ ಎಷ್ಟು ಶಾಲೆಗಳು ಬಾಡಿಗೆ ಕಟ್ಟಡದಲ್ಲಿವೆ? ಗ್ರಾಮೀಣ ಭಾಗದವರಿಗೆ, ಶಿಕ್ಷಕರ ಕ್ಷೇತ್ರದಿಂದ ಗೆದ್ದು ಬಂದಿರುವವರಿಗೆ ಅದೆಲ್ಲವೂ ಗೊತ್ತಾಗುತ್ತದೆ. ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆ ಜೊತೆ ಸಭೆ ಕರೆದಿದ್ದರು.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯಸಚೇತಕರು)**:- ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಎರಡು ವರ್ಷಗಳಿಂದ ಇದೆಯೇ ಅಥವಾ ಮುಂಚೆಯಿಂದಲೂ ಇದೆಯೇ?

**ಶ್ರೀ ಎನ್.ಎಸ್. ಬೋಸ್‌ರಾಜು:-** ಈಗ ಯಾರ ಸರ್ಕಾರ ಇದೆ?

**ಶ್ರೀ ಸಲೀಂ ಅಹಮದ್:-** ನಮ್ಮ ಸರ್ಕಾರ ಬಂದು ಎಷ್ಟು ಸಮಯವಾಯಿತು? ನಿಮಗೆ ಆಗಿನಿಂದ ಗೊತ್ತಾಗಲಿಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನೀವು ನಿನ್ನೆ ಬಂದಿರಬಹುದು. ಮೊನ್ನೆ ಯಾರಿದ್ದರು ಅದು ಪ್ರಶ್ನೆಯಲ್ಲ, ಇವತ್ತು ನೀವಿದ್ದೀರಿ, ಉತ್ತರ ಕೊಡಬೇಕು.

**ಶ್ರೀ ಸಲೀಂ ಅಹಮದ್:-** ಇಲ್ಲಿ ಎಲ್ಲರ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇದೆ. ಬರೀ ನಮ್ಮ ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಹಾಗಿದ್ದರೆ ಇದರಲ್ಲಿ ನೀವು ಹೇಳಬೇಕಾಗಿತ್ತಲ್ಲವೇ? ಎಲ್ಲಾ ಜವಾಬ್ದಾರಿ ನಮ್ಮದಲ್ಲ, ಹಿಂದಿನ ಸರ್ಕಾರದ್ದೂ ಜವಾಬ್ದಾರಿ ಇದೆ. ನಮ್ಮ failure ಗೆ ಹಿಂದಿನ ಸರ್ಕಾರ ಕಾರಣ ಎಂದು ಹೇಳ ನನ್ನದೇನೂ ಅಭ್ಯಂತರವಿಲ್ಲ. 40% ಸರ್ಕಾರ ಎಂದು ಹೇಳಿಸಿದಿರಿ. ಯಾರ ಕೈನಲ್ಲಿ ಹೇಳಿಸಿದ್ದಿರೋ ಅವರು ಈಗ ನಿಮ್ಮದು 60% ಎನ್ನುತ್ತಾರೆ ಒಪ್ಪಿಕೊಳ್ಳುತ್ತೀರಾ? ಇದನ್ನು ನಮ್ಮ ಹತ್ತಿರ ಹೇಳಿಲ್ಲ. ಗೌರವಾನ್ವಿತ ಮುಖ್ಯಮಂತ್ರಿಗಳನ್ನು ನಿನ್ನೆ ದಿವಸ ಭೇಟಿ ಮಾಡಿ ಹೇಳಿದ್ದಾರೆ. ಅದರ ಪ್ರತಿ ನಮ್ಮಲ್ಲಿದೆ. ನಮ್ಮ ಪರಿಸ್ಥಿತಿ ಹೀಗಿದೆ ಅದಕ್ಕೆ ಪರಿಹಾರ ಕೊಡಿ ಎಂದು ಕೇಳಿದ್ದಾರೆ. ಚುನಾವಣೆಗಾಗಿ ಜನರನ್ನು ಒಪ್ಪಿಸುವುದಕ್ಕೆ ಕೆಲವು ಘೋಷಣೆಗಳನ್ನು ಮಾಡಬೇಕಾಗುತ್ತದೆ. ಆ ವಿಚಾರ ಲೋಕಾಯುಕ್ತಕ್ಕೂ ಹೋಯಿತು. ಲೋಕಾಯುಕ್ತ ಇಲಾಖೆಯು ಇದಕ್ಕೆ ಯಾವುದೇ ಪುರಾವೆ ಇಲ್ಲ ಎಂದು ಆಗಲೇ ಕೊಟ್ಟಾಯಿತು. ಅದನ್ನು ಒಪ್ಪುವುದಕ್ಕೆ ಆಗಲಿಲ್ಲವೇ? ಈಗ 60% ಎನ್ನುತ್ತಾರೆ ನಿಮಗೆ ಅದಕ್ಕಿಂತ ಪುರಾವೆ ಯಾವುದು ಬೇಕು? ನಿಮಗೇ ಹೇಳುತ್ತಿದ್ದಾರೆ. ಅದರಿಂದಾಗಿ ನಮ್ಮ failure ಗೆ ಹಿಂದಿನ ಸರ್ಕಾರ ಕಾರಣ ಎಂದು ಹೇಳುವುದಕ್ಕಾಗುತ್ತದೆಯೇ? ಇವತ್ತು ಇರುವಂತಹ ಸರ್ಕಾರ ಸಾಂದರ್ಭಿಕವಾದ ಉತ್ತರವನ್ನು ಕೊಡಬೇಕು. ಏಕೆಂದರೆ ಇದು ನಿನ್ನೆಯಷ್ಟೇ ನಡೆದಿರುವಂತಹ ಭಾಷಣದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆಯ ಜೊತೆ 15 ದಿವಸಗಳ ಹಿಂದೆ ಒಂದು ಸಭೆ ಕರೆದಿದ್ದರು. ನಾನು ಅಲ್ಲಿ ಕೂಡ ಪ್ರಶ್ನೆ ಮಾಡಿದೆ. ವಸತಿ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳಿಗೆ ಸಮವಸ್ತ್ರ ಕೊಡುತ್ತಾರೆ, ಶೂ, ಸಾಕ್ಸ್, ಸೋಪ್ ಇತ್ಯಾದಿ ವಸ್ತುಗಳನ್ನೊಳಗೊಂಡ ಒಂದು ಕಿಟ್ ಸಹ ಕೊಡುತ್ತಾರೆ. ನಾನು ಜುಲೈ ತಿಂಗಳಿನಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಇನ್ನೆರಡು ತಿಂಗಳಿನಲ್ಲಿ ಎಲ್ಲವನ್ನೂ ಕೊಡಲಾಗುವುದೆಂದು ತಿಳಿಸಿದ್ದರು. ಆದರೆ ಮೊನ್ನೆ ದಿವಸ ಸಭೆ ನಡೆದಾಗಲೂ ಕೂಡ ಕೊಟ್ಟಿರಲಿಲ್ಲ. ಮಾರ್ಚ್ ತಿಂಗಳಿನಲ್ಲಿಯೇ academic year ಮುಗಿದು ಹೋಗುತ್ತಿದೆ. ಅವುಗಳನ್ನು ನೀವು ಯಾವಾಗ ಕೊಡುತ್ತೀರಿ? ಅವರ ಮನೆಗಳಿಗೆ ಕಳುಹಿಸುತ್ತೀರಾ? ಮುಂದಿನ ವರ್ಷಕ್ಕೆ ಎಂದು ಅವರ ವಿಳಾಸಕ್ಕೆ ಕಳುಹಿಸುತ್ತೀರಾ? ಇನ್ನೂ ಈ ರೀತಿಯ ಎಷ್ಟು ವಿಚಾರಗಳಿವೆ ಇವೆಲ್ಲಾ ಪ್ರಶ್ನೆಗಳಲ್ಲವೇ? ವಿಶ್ವವಿದ್ಯಾಲಯಗಳಲ್ಲಿ ಸಾವಿರಾರು ಸಂಖ್ಯೆ ಅರೆಕಾಲಿಕ ಉಪನ್ಯಾಸಕರು ದಶಕಗಳಿಂದ ಅತ್ಯಂತ ಕಡಿಮೆ ವೇತನ ಹಾಗೂ ಸೇವಾ ಭದ್ರತೆ ಇಲ್ಲದೇ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಇದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮೆದುರಿನ ಗಡಿಯಾರ 4 ಗಂಟೆ 35 ಸಮಯವನ್ನು ತೋರಿಸುತ್ತಿದೆಯಲ್ಲಾ!

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಾನು ಈಗತಾನೇ ಮಾತನಾಡುವುದಕ್ಕೆ ಪ್ರಾರಂಭಿಸಿದ್ದೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಇವರು ಅದನ್ನು ನೋಡಿ ಮಾತನಾಡಿದರೆ ನಾಳೆಯವರೆಗೂ ಮಾತನಾಡುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅದನ್ನು ಸರಿ ಮಾಡಿಸುವುದು ಅವರ ಕೆಲಸ.

**ವೈಸ್ ಛೇರ್ಮನ್:-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಭೋಜೇಗೌಡರು ನಿಮಗೆ hint ಕೊಡುತ್ತಿದ್ದಾರೆ.

(ಮುಂದು)

(46) 04.03.2025 (5.30) ಹೆಚ್‌ವಿ.ಎಕೆ (ವೈಸ್‌ಛೇರ್ಮನ್‌ರವರ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಬೇರೆಬೇರೆಯವರನ್ನು ನಂಬುವುದಕ್ಕಿಂತ ನನ್ನನ್ನು ನಾನು ಮೊದಲು ನಂಬಬೇಕಾಗುತ್ತದೆ. ಅದಕ್ಕಾಗಿ ನಾನು ನನ್ನ ಎದುರಿಗಿರುವ ಗಡಿಯಾರವನ್ನು ನೋಡಿಕೊಳ್ಳುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:-** ನಮ್ಮ ಸಭಾಪತಿಯವರ ಗಡಿಯಾರ ಸರಿಯಾಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ನಮ್ಮ "ಟೈಂ" ಸರಿಯಿದೆ ನಿಮ್ಮ "ಟೈಂ" ಸರಿಯಿಲ್ಲವೆಂದು ಅವರು ಹೇಳುತ್ತಿದ್ದಾರೆ. ಯಾರೂ ಏನೇ ಹೇಳದರೂ "ಹಣೆಬರಹ" "ತಲೆಬರಹ" ಸರಿ ಇರಬೇಕಾಗುತ್ತದೆ. ಅದು ನಿಮ್ಮ ಹಣೆಯ ಮೇಲಿದೆ.

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನಮ್ಮ "ವಾಚ್" ಸರಿಯಿದೆ. ಅವರ "ವಾಚ್" ನಿಂತಿದೆ. ಏತಕ್ಕೋಸ್ಕರ ಎಂದರೇ, ಶೆಲ್ ಹಾಕಿಸುವುದಕ್ಕೆ ಅವರ ಬಳಿ ಹಣವಿಲ್ಲ.

**ಶ್ರೀ ಎ.ವಸಂತಕುಮಾರ್:-** ನಮಗೆ ಕಾನೂನು ಸರಿಯಿದೆ; ಅವರಿಗೆ ಕಾನೂನು ಸರಿಯಿಲ್ಲ. ಅದನ್ನು ಸರಿಪಡಿಸಿಕೊಳ್ಳಿ

**ಶ್ರೀ ಆರ್.ಬಿ.ತಿಮ್ಮಾಪುರ(ಅಬಕಾರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಎಲ್ಲ "ಟೈಂ" ನಲ್ಲಿ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರ "ಟೈಂ" ಸರಿಯಿದೆ.

**ವೈಸ್ ಛೇರ್ಮನ್:-** ನಾನು ನೋಡುತ್ತಿರುವ "ಟೈಂ" ಸರಿಯಾಗಿದೆ. ಆದ್ದರಿಂದ ಏನೂ ತೊಂದರೆ ಇಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಸುಮಾರು 9 ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ತೀರ್ಮಾನವನ್ನು ತೆಗೆದುಕೊಂಡಿದೆ. ಇದರಿಂದ ಅವರ ಮೇಲೆ ಅಪಕೀರ್ತಿ ಬರುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ನಾವು ಉತ್ತೇಜನವನ್ನು ನೀಡಬೇಕೇ ಹೊರತು ಹಣವಿಲ್ಲವೆಂದು ವಿಶ್ವವಿದ್ಯಾಲಯಗಳನ್ನು ಮುಚ್ಚುವುದು ಸರಿಯಾದ ಕ್ರಮವಲ್ಲ. ವಿದ್ಯಾ ಸಂಸ್ಥೆಗಳು ವ್ಯಾಪಾರ ಕೇಂದ್ರಗಳಲ್ಲ; ಅವು ದೇಶದ ಭವಿಷ್ಯವನ್ನು ಸೃಷ್ಟಿ ಮಾಡುವಂತಹ ಸಂಸ್ಥೆಗಳಾಗಿವೆ. ಆದ್ದರಿಂದ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಸರ್ಕಾರದ ಕ್ರಮ ಸರಿಯಾದುದ್ದಲ್ಲ. ರಾಜ್ಯದ ಹಳೆಯ ವಿಶ್ವವಿದ್ಯಾಲಯಗಳಲ್ಲಿ ಪಿಂಚಣಿಗೂ ಹಣವಿಲ್ಲದಂತಾಗಿದೆ. ಕುಲಪತಿಗಳ ನೇಮಕಾತಿಯಲ್ಲಿ ವಿಳಂಬವಾಗುತ್ತಿದೆ. ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಶಿಥಿಲ ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡಲು ಅನುದಾನ ಬಿಡುಗಡೆಯಾಗುತ್ತಿಲ್ಲ. ಇದಕ್ಕೆ ಹಣದ ಕೊರತೆಯೇ ಕಾರಣವಾಗಿದೆ. ಆದರೇ, ಒಂದು ಕಡೆ ಸರ್ಕಾರ,

ರಾಜ್ಯದ ಹಣಕಾಸಿನ ಸ್ಥಿತಿ ಸುಸ್ಥಿತಿಯಲ್ಲಿದೆ ಎಂದು ಹೇಳುತ್ತದೆ. ಇದು ಯಾವ ರೀತಿಯ ಆರ್ಥಿಕ ಸುಸ್ಥಿತಿ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪದೇಪದೇ ನನ್ನ ಕಡೆಯೇ ನೋಡಿಕೊಂಡು ಮಾತನಾಡುತ್ತಿದ್ದಾರೆ. ಪೀಠವನ್ನು ನೋಡಿಕೊಂಡು ಮಾತನಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಪೀಠವನ್ನೇ ನೋಡಿಕೊಂಡು ಮಾತನಾಡುತ್ತಿದ್ದೇನೆ. ನನ್ನ ವಯೋಮಾನಕ್ಕೆ ಒಂದೇ ಕಡೆ ನೋಡುತ್ತಿದ್ದರೇ ಕತ್ತು ನೋವು ಬರುತ್ತದೆ. ನಾನು ಸ್ವಲ್ಪ ಈ ಕಡೆಗೆ ತಿರುಗಿಕೊಂಡರೇ ಮಾನ್ಯ ಸಲೀಂ ಅಹಮದ್‌ರವರೇ ಕಾಣುತ್ತಾರೆ. ನಾನು ಅವರನ್ನೇ ನೋಡುತ್ತಿದ್ದೇನೆಂದು ದಯವಿಟ್ಟು ಅವರು ತಿಳಿದುಕೊಳ್ಳಬಾರದು. ನಾನು ಅವರನ್ನು ನೋಡುತ್ತಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಸಲೀಂ ಅಹಮದ್ ಅವರೊಂದಿಗೆ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರಿಗೆ ಹಳೆಯ ಸಂಬಂಧವಿದೆ. ಈ ಹಿನ್ನೆಲೆಯಲ್ಲಿ ಅವರನ್ನೇ ನೋಡುತ್ತಿರಬಹುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಕಣ್ಣಿಗೆ ಕಾಣುವ ರೀತಿಯಲ್ಲಿ ಪ್ರಾದೇಶಿಕ ಅಸಮಾನತೆ ಎನ್ನುವುದು ಇದೆ. ಅದನ್ನು ಅಧ್ಯಯನ ಮಾಡಲು ಆರ್ಥಿಕ ತಜ್ಞರ ಸಮಿತಿಗಳನ್ನು ರಚಿಸುವುದು ಅವಶ್ಯಕವಾಗಿದೆ. ಕಲ್ಯಾಣ ಕರ್ನಾಟಕ ಮತ್ತು ಅಂತರ್‌ರಾಜ್ಯ ಗಡಿ ಭಾಗದ ಜಿಲ್ಲೆಗಳಲ್ಲಿ ಕಂಡು ಬರುವ ತೀವ್ರ ಪ್ರಾದೇಶಿಕ ಅಸಮತೋಲನವು ಸರ್ಕಾರದ ಕಣ್ಣಿಗೆ ಬೀಳುತ್ತಿಲ್ಲವೇ? 10 ದಿನಗಳ ಕಾಲ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನವನ್ನು ನಡೆಸಲಾಗುತ್ತದೆ. ಆ 10 ದಿನಗಳ ಕಾಲ ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಪರಿಹಾರವನ್ನು ಕಂಡುಹಿಡಿಯೋಣ ಎನ್ನುವ ಮಾತನ್ನು ಹೇಳುತ್ತೇವೆಯೇ ಹೊರತು ಅಲ್ಲಿನ ಸಮಸ್ಯೆಗಳ ಬಗ್ಗೆ ಮಾತನಾಡದೇ ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಮಾತನಾಡಿ ಎದ್ದು ಬರುತ್ತೇವೆ. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದ ಜನರು ನಮ್ಮನ್ನು ಕಡೆಗಣಿಸಲಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿರುತ್ತಾರೆ. ಆದರೂ ಕೂಡ ಬೆಳಗಾವಿ ಅಧಿವೇಶನದಲ್ಲಿ ಅಲ್ಲಿನ ಸಮಸ್ಯೆಗಳ ಬಗ್ಗೆ ಸರಿಯಾಗಿ ಚರ್ಚೆ ಮಾಡುವುದಿಲ್ಲ. ಬೆಳಗಾವಿ ಅಧಿವೇಶನದಲ್ಲಿ ನಮ್ಮ ಸದನದಲ್ಲಿ ಎರಡು ಗಂಟೆಗಳ ಕಾಲ ಮಾತ್ರ ಆ ಬಗ್ಗೆ ಚರ್ಚೆಯಾಗಿದೆ. ಪ್ರಾದೇಶಿಕ ಅಸಮತೋಲನದ ಬಗ್ಗೆ ಚರ್ಚೆಗಳನ್ನು ಮಾಡುವುದರ ಮೂಲಕ ಸರ್ಕಾರ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವಂತಹ ಕೆಲಸವನ್ನು ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳದೇ ಇದ್ದರೇ ಉದ್ಯೋಗ ಸೃಷ್ಟಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ "Beyond Bengaluru" ಪರಿಕಲ್ಪನೆ ಕಾರ್ಯರೂಪಕ್ಕೆ ಬರಬೇಕಾಗಿತ್ತು. ಉದ್ಯೋಗ ಸೃಷ್ಟಿಸುವುದರ ಬಗ್ಗೆ ಸರ್ಕಾರದಲ್ಲಿ ಅಂಕಿಅಂಶಗಳು ಇಲ್ಲವೆನ್ನುವುದು ಸಾಬೀತಾಗಿದೆ. ಕಳೆದ ವಾರ ಮಾನ್ಯ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರು ನಮ್ಮ ರಾಜ್ಯದಲ್ಲಿ ಹೂಡಿಕೆದಾರರ ಸಮ್ಮೇಳನವನ್ನು ನಡೆಸಿ

ಹೊರದೇಶದಿಂದ ಸುಮಾರು 10 ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಬಂಡವಾಳ ಹೂಡಿಕೆಯನ್ನು ಮಾಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಅಂಕಿಅಂಶಗಳನ್ನು ಇದೇ ರೀತಿಯಲ್ಲಿ ಕೊಡುತ್ತದೆ. ಇದು ಆಗಿರುವುದೆಲ್ಲವೂ ಸತ್ಯವೆಂದು ನಾನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಕ್ರಮೇಣ ಕೆಲವೊಂದು ಕಾರಣಗಳಿಂದಾಗಿ ಬಿಟ್ಟು ಹೋಗುತ್ತವೆ.

ಸನ್ಮಾನ್ಯ ಸಭಾಪತಿಯವರೇ, ಇಷ್ಟೊಂದು ದೊಡ್ಡ ಮೊತ್ತದಲ್ಲಿ ಬಂಡವಾಳ ಹೂಡಿಕೆಯ ಮೂಲಕ ಉದ್ಯೋಗ ಸೃಷ್ಟಿಯಾದರೇ, ನಮ್ಮ ಕನ್ನಡಿಗರಿಗೆ ಅಲ್ಲಿ ಉದ್ಯೋಗ ಸಿಗುತ್ತದೆ ಎನ್ನುವುದು ನಮ್ಮ ನಿರೀಕ್ಷೆಯಾಗಿರುತ್ತದೆ. ಕಲ್ಯಾಣ ಕರ್ನಾಟಕ ಅಥವಾ ಕಿತ್ತೂರು ಕರ್ನಾಟಕ ಭಾಗದಲ್ಲಿ ಉದ್ದಿಮೆಗಳನ್ನು ಪ್ರಾರಂಭ ಮಾಡಿದರೆ, ಆ ಜನರಿಗೂ ಸಹ ಒಳ್ಳೆಯದಾಗುತ್ತದೆ. ಆದರೆ, ಹೆಸರಿಗೆ ಮಾತ್ರ ಕಲ್ಯಾಣ ಕರ್ನಾಟಕ; ಕಲ್ಯಾಣ ಮಾತ್ರವಾಗಿಲ್ಲ. ಇಂತಹ ಬಹಳಷ್ಟು ವಿಚಾರಗಳು ಪ್ರಸ್ತಾಪ ಮಾತ್ರವಾಗಿವೆ, ಎಲ್ಲವೂ ಆಗಿ ಹೋದಂತೆ; ಕಲ್ಯಾಣ ಮಾಡುವುದಕ್ಕೆ ಏನು ಉಳಿದಿಲ್ಲ ಎನ್ನುವ ರೀತಿಯಲ್ಲಿ ಭಾಷಣಗಳನ್ನು ಮಾಡುತ್ತಾರೆ. ಆದರೇ, ಪರಿಸ್ಥಿತಿ ಆ ರೀತಿ ಇರುವುದಿಲ್ಲ. ಕರ್ನಾಟಕದ ಆರ್ಥಿಕತೆಯನ್ನು ಒಂದು ಟ್ರಿಲಿಯನ್ ಡಾಲರ್‌ಗೆ ಏರಿಸಲು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಬರೆದಿರುವ ಕವಿತೆಯು ವಾಚಕರಿಗೆ ಮುದ ತಂದಿರಬಹುದು. ಸರ್ಕಾರವೂ ಸಹ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಾವು ಹಾಡು ಹೇಳಿ; ಹೊಗಳಿದರೆ ಉದ್ಧಾರವಾದಂತೆ ಅಲ್ಲ. ಸಾಂದರ್ಭಿಕವಾಗಿ ಕೆಲವೊಂದು ಉಲ್ಲೇಖಗಳನ್ನು ಮಾಡಲಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ರೈತರ ಆತ್ಮಹತ್ಯೆ ಘಟನೆಗಳು ನಡೆದೇ ಇಲ್ಲವೆನ್ನುವ ರೀತಿಯಲ್ಲಿ ಇವರುಗಳು ಮಾತನಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಇದು ಮಾತ್ರವಲ್ಲ, ಮೈಕ್ರೋ ಫೈನಾನ್ಸ್ ಹಣಕಾಸು ಸಂಸ್ಥೆಗಳ ಕಿರುಕುಳಕ್ಕೆ ಎಷ್ಟೊಂದು ಆತ್ಮಹತ್ಯೆ ಪ್ರಕರಣಗಳು ನಡೆದಿವೆ. ಜನರ ಕಣ್ಣಿಗೆ ಕಾಣದೇ ಇರುವಂತಹ ರೀತಿಯ ಘಟನೆಗಳು ನಡೆಯುತ್ತವೆ.

ಸನ್ಮಾನ್ಯ ಸಭಾಪತಿಯವರೇ, ಈಗ ಆನ್‌ಲೈನ್ ಗೇಮ್ಸ್ ನಡೆಯುತ್ತಿವೆ. ಮೊಬೈಲ್ ತೆಗೆದುಕೊಂಡು ವ್ಯಾಟ್ಸ್‌ಅಪ್‌ನಲ್ಲಿ ಏನಾದರು ವಿಷಯವನ್ನು ನೋಡಬೇಕೆಂದು ಹೋದರೆ ಮೊದಲಿಗೆ ಕ್ರಿಕೆಟ್ ಆಡಿ; ರಮ್ಮಿ ಆಡಿ ಎನ್ನುವ ಜಾಹಿರಾತು ಬರುತ್ತದೆ. ನಾವು ಏನಾದರು ನೋಡುವುದಕ್ಕೂ ಮೊದಲು ರಮ್ಮಿ ಆಡಬೇಕಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ರಮ್ಮಿ ಒಳ್ಳೆಯ ಆಟ. ಮೈಂಡ್ ಫ್ರೆಶ್ ಆಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ರಮ್ಮಿ ಆಡಿ ಗೆದ್ದವರಿಗೆ ಒಳ್ಳೆಯ ಆಟ. ಗೆದ್ದವರು ಖುಷಿಯಾಗುತ್ತಾರೆ, ಫ್ರೆಶ್ ಆಗುತ್ತಾರೆ. ಆದರೇ, ಸೋತವರು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಎಷ್ಟೊಂದು ಜನರು ಕ್ರಿಕೆಟ್ ಬೆಟ್ಟಿಂಗ್ ಕಟ್ಟಿ ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ಇದಕ್ಕಾಗಿ ಎಷ್ಟೋ ಜನರು ಕಳ್ಳತನ ಮಾಡುತ್ತಾರೆ; ಸರಗಳ್ಳತನ ಮಾಡುತ್ತಾರೆ. ಉನ್ನತ ಹುದ್ದೆಯಲ್ಲಿರುವ ಇಂಜಿನಿಯರ್ಸ್ ಮತ್ತು ಡಾಕ್ಟರ್ಸ್ ಆಗಿರುವಂತಹ ಯುವಕರು ಈ ಚಟಕ್ಕೆ ಬಿದ್ದು; ಕೆಲಸಕ್ಕೆ ಹೋಗುವುದನ್ನು ಬಿಟ್ಟು ಮನೆಯಲ್ಲಿ ಕುಳಿತುಕೊಂಡು,

ಆನ್‌ಲೈನ್ ಆಟಗಳನ್ನು ಆಡಿ, ಸಾಲ ಮಾಡಿಕೊಂಡು ಅದನ್ನು ತೀರಿಸುವುದಕ್ಕೆ ಸಾಧ್ಯವಾಗದೇ ಪ್ರಾಣತ್ಯಾಗ ಮಾಡಿರುವಂತಹ ಉದಾಹರಣೆಗಳನ್ನು ನಾನು ನೋಡಿದ್ದೇನೆ. ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸುತ್ತಿಲ್ಲ. ಸುಮಾರು ಆರು ತಿಂಗಳುಗಳಿಂದ ನಾನು ಈ ವಿಚಾರವನ್ನು ಒತ್ತಿಒತ್ತಿ ಹೇಳುತ್ತಿದ್ದೇನೆ. ಇವರುಗಳ ಪ್ರಾಣ ಉಳಿಸುವುದು ಕಲ್ಯಾಣ ಕಾರ್ಯಕ್ರಮವಾಗಿದೆಯೇ ಹೊರತು; ಪ್ರಾಣ ತೆಗೆಯುವುದು ಕಲ್ಯಾಣ ಕಾರ್ಯವಲ್ಲ. ಮೈಕ್ರೋ ಫೈನಾನ್ಸ್ ಬಗ್ಗೆ ಸರ್ಕಾರ ನಿಧಾನವಾದರೂ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಮೈಕ್ರೋ ಫೈನಾನ್ಸ್ ಎನ್ನುವುದು ಕನಿಷ್ಠ 2,000 ರೂಪಾಯಿಗಳಿಂದ ಪ್ರಾರಂಭವಾಗುತ್ತದೆ. ಬಡವರು ತಮ್ಮ ಶಕ್ತ್ಯಾನುಸಾರ 2,000 ರೂಪಾಯಿಗಳು, 5,000 ರೂಪಾಯಿಗಳು ಮತ್ತು 10,000 ರೂಪಾಯಿಗಳನ್ನು ತೆಗೆದುಕೊಂಡಿರುತ್ತಾರೆ. ಗ್ಯಾರಂಟಿಗಳಿಂದ ಜನರ ಕಲ್ಯಾಣ ಆಗಿಹೋಗಿದೆ ಎನ್ನುವುದಾದರೇ, ಈ ಪ್ರಾಣ ತ್ಯಾಗಗಳು ಏತಕ್ಕೋಸ್ಕರ ಆಗಬೇಕಾಗಿತ್ತು? ಜನರ ಅವಶ್ಯಕತೆಗಳು ಬಹಳಷ್ಟಿವೆ. ಕೆಲವು ಆಟಗಳಲ್ಲಿ ಆಮಿಷಗಳು ಬರುತ್ತವೆ. ಈ ಆಮಿಷಗಳಿಗೆ ಜನರು ಜೋತು ಬಿದ್ದು, ಈ ರೀತಿಯಾಗಿರುವ ಕೆಟ್ಟ ಪರಿಸ್ಥಿತಿಗಳನ್ನು ನೋಡುವಂತಹ ದಿನಗಳು ಬರುತ್ತವೆ.

(ಮುಂದುವರಿದಿದೆ)

(047) 04.03.2025 / 5.40 ಪಿಕೆ-ಎಕೆ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ಮುಂದು)**

ಇವತ್ತು ಪರಿಶಿಷ್ಟ ಜಾತಿ-ವರ್ಗಗಳಿಗೆ, ರೈತಾಪಿ ವರ್ಗಗಳಿಗೆ, ಕಾರ್ಮಿಕರಿಗೆ ಕೆಲವು high-tech harvest hub ಗಳನ್ನು ಮಾಡುವಂಥದ್ದೂ ಕೂಡ ಇದೆ. ಇದು ಎಲ್ಲೂ ಸರಿಯಾಗಿ ಕೆಲಸ ಮಾಡಿದ್ದನ್ನು ನಾವು ಗಮನಿಸಿಯೇ ಇಲ್ಲ. ಇದೆಲ್ಲಕ್ಕಿಂತ ಮಿಗಿಲಾಗಿ ಇತ್ತೀಚಿಗೆ ತೋಟಗಾರಿಕೆಗೆ ಸಂಬಂಧಪಟ್ಟಂತೆ ಕಿಸಾನ್ ಮಾಲ್‌ಗಳು ಪ್ರಚಲಿತವಾಗುತ್ತಿವೆ. ಇವು ನಿಜವಾಗಲೂ ಕಾರ್ಯನಿರ್ವಹಿಸುತ್ತಿದ್ದಲ್ಲಿ ತೋಟಗಾರಿಕೆ ಉತ್ಪನ್ನಗಳು ಹಾದಿ-ಬೀದಿಗಳಲ್ಲಿ ಎಷ್ಟಕ್ಕೆಂದರೆ ಅಷ್ಟಕ್ಕೆ ಮಾರಾಟ ಆಗುತ್ತಿರಲಿಲ್ಲ. ಅದಕ್ಕೆ ಉತ್ತಮ ಬೆಲೆ ಸಿಗಬೇಕಾಗಿತ್ತು. ಟೊಮ್ಯಾಟೋ, ಮೆಣಸಿಕಾಯಿ ಇತ್ಯಾದಿಗಳನ್ನು ಒಂದು ಸಲ ಮಾರುಕಟ್ಟೆಗೆ ತಂದ ಮೇಲೆ ಅದನ್ನು ವಾಪಸ್ಸು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆತ ಮಾರಾಟ ಮಾಡಿಯೇ ಹೋಗಬೇಕಾಗುತ್ತದೆ. ಇಂಥದ್ದನ್ನೇ ಏಜೆಂಟರು ಕಾಯುತ್ತಿರುತ್ತಾರೆ. ಹಸಿ ಮೆಣಸಿನಕಾಯಿ ಎರಡನೆ ದಿನಕ್ಕೆ ಕೆಲಸಕ್ಕೆ ಬರುವುದಿಲ್ಲ. ಅದನ್ನು ಅಲ್ಲಿಯೇ ಬಿಟ್ಟು ಹೋಗಬೇಕು ಅಥವಾ ಕೇಳಿದ್ದಷ್ಟಕ್ಕೆ ಕೊಟ್ಟು ಹೋಗಬೇಕಾಗುತ್ತದೆ. ಮಾನ್ಯ ಸಭಾಪತಿಗಳೆ, ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆ ಜಿಲ್ಲೆಯಲ್ಲಿದೆ. ಅದನ್ನು ವಿಭಜಿಸಿ, ಅತಂತ್ರಗೊಳಿಸಿ, ಅಲ್ಲಿ ಪರಿಸ್ಥಿತಿ ಸರಿಯಿಲ್ಲದ ಕಾರಣ ಅದನ್ನು ಮುಚ್ಚಿ, ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕಂತೆ. ಅದನ್ನು ಮುಚ್ಚುವುದೇಕೆ?

**ಶ್ರೀ ಶಿವಾನಂದ ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಕೃಷಿ ಮಾರುಕಟ್ಟೆ ಸಚಿವರು):-** ಅದನ್ನು ಮುಚ್ಚಬೇಕೆಂದು ಯಾರೂ ಹೇಳುತ್ತಿಲ್ಲ. ರಾಜ್ಯದಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ ಇರುವುದು ಅಲ್ಲಿ ಮಾತ್ರ.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ವಿಶ್ವವಿದ್ಯಾಲಯಗಳನ್ನು ನಡೆಸಲು ದುಡ್ಡಿಲ್ಲ ಎಂದು ಹೇಳುತ್ತಾರೆ. ಒಂದು ಕಡೆ ಬಂಡವಾಳ ಹಾಕದೇ ಇರುವಂತಹ ಪರಿಸ್ಥಿತಿ ಇದ್ದಾಗ ಇನ್ನೊಂದು ಕಡೆ ಪ್ರಾರಂಭ ಮಾಡಲು ಹೇಗೆ ಸಾಧ್ಯವಾಗುತ್ತದೆ? ಎಲ್ಲವನ್ನೂ ಸಮತೋಲನ ಮಾಡಬೇಕಾಗುತ್ತದೆ. ಎಲ್ಲಾ ಕಾರ್ಖಾನೆಗಳು ಅಥವಾ ಹಬ್‌ಗಳನ್ನು ಹೊಸದಾಗಿ ಮಾಡುತ್ತಾರೋ ಅವು ಕೇವಲ ಬೆಂಗಳೂರು, ಮಂಡ್ಯ, ಮೈಸೂರು ಅಥವಾ ತುಮಕೂರು ಈ ಪ್ರದೇಶಗಳಲ್ಲಿ ಮಾತ್ರ ಮಾಡಬೇಕೇ? ಹೀಗೆ ಮಾಡುವುದರಿಂದ ಕಲ್ಯಾಣ ಕರ್ನಾಟಕದವರು ಬೊಬ್ಬೆ ಹೊಡೆಯುವುದರಲ್ಲಿ ತಪ್ಪೇನಿದೆ? ಬೆಳಗಾವಿ, ಬೀದರ್‌ಗಳಲ್ಲಿ ಇವುಗಳನ್ನು ತನ್ನಿ, ಜನ ಅಲ್ಲಿಗೆ ಹೋಗಲಿ. ಅಲ್ಲಿ ಕೈಗಾರಿಕೆಗಳ ಸ್ಥಾಪನೆಯಾದರೆ ಸ್ಥಳೀಯ ಜನರಿಗೆ ಕೆಲಸ ಸಿಗುತ್ತದೆ. ಈಗ ಬೆಂಗಳೂರು horizontal ಆಗಿ ಬೆಳೆಯುವುದಕ್ಕೆ ಆಗದೇ ಇರುವಂತಹ ಸ್ಥಿತಿಯಲ್ಲಿದ್ದು, vertical ಆಗಿ ಬೆಳೆಸುವುದಕ್ಕೆ ನೋಡುತ್ತಿದ್ದೇವೆ. ಜನಸಾಂದ್ರತೆ ಮುಂದೆ ಏನಾಗಬಹುದು? ಇಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿದೆ. ರೇಷ್ಮೆ ಬೆಳೆಗಾರರಿಗೆ ಉತ್ತೇಜನ ಕೊಡಬೇಕು. ಕಡಲ ತೀರದ ಮೀನುಗಾರರಿಗೆ ಜೀವವಿಮೆ, ಅವರ ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಬೇಕು. ಅದನ್ನು ಕೇವಲ ಹೇಳಿದರೆ ಆಗುವುದಿಲ್ಲ. ಬಡವರ ಮಕ್ಕಳು ಶಾಲೆಗೆ ಹೋಗುವಂಥದ್ದು ಸುಲಭವಾಗಿರಲಿಲ್ಲ. ಮಾನ್ಯ ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಡವರಿಗೆ ಒಂದು ಯೋಜನೆಯನ್ನು ಕೊಟ್ಟರು. ಬಡವರು ತಮ್ಮ ಮಕ್ಕಳನ್ನು ಶಾಲೆಗೆ ತಂದು ಬಿಟ್ಟರೆ ಒಂದು ರೂಪಾಯಿ ಕೊಡುತ್ತಿದ್ದರು. 1991-92ರಲ್ಲಿ ಒಂದು ರೂಪಾಯಿಗೆ ಬೆಲೆ ಇತ್ತು. ಆಸೆ ಹುಟ್ಟಿಸಿಯಾದರೂ ಆ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಆ ಮೂಲಕ ಅವರಿಗೆ ವಿದ್ಯೆ ಕೊಡುವಂಥದ್ದು ಇದರ ಉದ್ದೇಶವಾಗಿತ್ತು. ಆದರೆ ಇವತ್ತು ನಾವು, ಮಕ್ಕಳು ಬರುವಂತಹ ಶಾಲೆಗಳನ್ನೇ ಮುಚ್ಚುತ್ತಿದ್ದೇವೆ. ಹೀಗಾದರೆ ಹೇಗೆ? ಕರ್ನಾಟಕದಲ್ಲಿ ಕೈಗಾರಿಕಾ ಕ್ಷೇತ್ರದಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಕಡೆಗಣಿಸಲಾಗುತ್ತಿದೆ ಎಂದು ಕೆಲವು ಸಂದರ್ಭದಲ್ಲಿ ನಾನೇ ಹೇಳಿದ್ದೇನೆ. ಹಿಂದೆ ಸರ್ಕಾರಗಳು, ಕಾರ್ಖಾನೆಗಳನ್ನು ತೆರೆಯಲು ನಿವೇಶನ ಕೊಡುವಾಗ 75% ರಿಬೇಟ್ ಕೊಡುತ್ತಿದ್ದವು. ಅದು ಈಗಲೂ ಮುಂದುವರೆದಿದೆ. ಪರಿಶಿಷ್ಟ ಜಾತಿಯವರಿಗೆ ಎರಡು ಎಕರೆ ಜಾಗ ಕೊಡಬೇಕು ಎಂದರೆ, ಅವರು ಏನೂ ಮಾಡುವುದಿಲ್ಲ; ಅವರ ಹತ್ತಿರ ದುಡ್ಡು ಇರುವುದಿಲ್ಲ ಎಂದು ಹೇಳುತ್ತಿದ್ದರು. ಅವರ ಹತ್ತಿರ ದುಡ್ಡು ಇರುವುದಿಲ್ಲವೆಂದೇ ಅವರಿಗೆ 75% ರಿಬೇಟ್ ಕೊಡಲಾಗುತ್ತದೆ. ಅವರಿಗೆ ಅರ್ಧ ಎಕರೆ, ಕಾಲು ಎಕರೆ ಜಾಗವನ್ನು ಕೊಡುತ್ತಾರೆ. ಇಷ್ಟರಿಂದ ಅವರು ಏನು ಮಾಡುವುದಕ್ಕಾಗುತ್ತದೆ? ಇಲ್ಲಿ ಇನ್ನೊಂದು ದೊಡ್ಡ ತಪ್ಪನ್ನು ಮಾಡುತ್ತಾರೆ. ಹಳ್ಳಿಗಳಲ್ಲಿ ಕಾಲೋನಿಗಳಿರುತ್ತವೆ. ಪಟ್ಟಣಗಳಲ್ಲೂ ಕಾಲೋನಿಗಳಿರುತ್ತವೆ. ಈಗ ಕೈಗಾರಿಕಾ ಕ್ಷೇತ್ರದಲ್ಲೂ ಕಾಲೋನಿಗಳು ಪ್ರಾರಂಭವಾಗುತ್ತಿವೆ. ಎಲ್ಲರಿಗೂ ಕೊಡುವ ಜಾಗದಲ್ಲಿ ಎಲ್ಲರಿಗೂ ಕೊಡಬೇಕು ಅಲ್ಲವೇ? ಇಲ್ಲಿ ಏನು ಮಾಡುತ್ತಾರೆ ಎಂದರೆ, ಪರಿಶಿಷ್ಟ ಜಾತಿ-ವರ್ಗದವರಿಗೆ ಮಾತ್ರ ಪ್ರತ್ಯೇಕವಾದ ಒಂದು ಕಾಲೋನಿ ಕೊಡುತ್ತಾರೆ. ಅದು ಪರಿಶಿಷ್ಟ ಜಾತಿ-ವರ್ಗಗಳ Industrial Colony ಎಂದು ಎಲ್ಲರಿಗೂ ಗೊತ್ತಾಗಬೇಕು. ಸರ್ಕಾರ ಏಕೆ ಈ ರೀತಿ ಮಾಡುತ್ತದೆ? ಹಾಗಾದರೆ ನಾವು ಯಾವುದಕ್ಕೆ ಉತ್ತೇಜನ ಕೊಡುತ್ತಿದ್ದೇವೆ? ನಾವು, ಎಲ್ಲರೂ ಬೆರೆಯುವ ನಿಟ್ಟಿನಲ್ಲಿ

ಕೆಲಸ ಮಾಡಬೇಕು. ಇಲ್ಲಿ ಎಲ್ಲಾ ಜಾತಿ-ಧರ್ಮಗಳವರಿದ್ದೇವೆ. ಆದರೆ ಕಾಲೋನಿಗಳನ್ನು ಸೃಷ್ಟಿ ಮಾಡಬಾರದು. ಅವರಿಗೆ ಉತ್ತೇಜನ ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. Knowledge, Wellbeing and Innovation (KWIN) City, ಇದಕ್ಕೆ ಅನುದಾನ ಎಲ್ಲಿಂದ ಬರುತ್ತದೆ? ಸರ್ಕಾರದಲ್ಲಿ ಅನುದಾನ ಇದೆಯೇ? ಭಾಷಣಕ್ಕೆ ಮಾತ್ರ ಇದನ್ನು ಸೀಮಿತಗೊಳಿಸಿದರೆ ಸಾಕೇ? ನೀವು ನೂರಾರು ಯೋಜನೆಗಳನ್ನು ಘೋಷಣೆ ಮಾಡಿ; ಅದನ್ನು ನಾವು ಕೇಳುವುದಿಲ್ಲ. ಅದು ನಿಮ್ಮಿಷ್ಟ. ಘೋಷಣೆ ಮಾಡಿದ ಮೇಲೆ ಅವುಗಳನ್ನು ಸರಿದೂಗಿಸುವಂತಹ ಕೆಲಸ ಮಾಡಬೇಕು, ಹಣ ಕೊಡುವಂಥದ್ದು ಆಗಬೇಕು. ಇವತ್ತು ಅನೇಕ M.S.M.E. (Micro, Small and Medium Enterprises) ಗಳು ಮುಚ್ಚಿ ಹೋಗುತ್ತಿದೆ. ಅವರಿಗೆ ಪ್ರೋತ್ಸಾಹ ಸಿಗುತ್ತಿಲ್ಲ. ಪ್ರಾರಂಭದಲ್ಲಿ ಇರುವಂತಹ ಉತ್ಸಾಹಕ್ಕೆ ನೀವು ಉತ್ತೇಜನ ಕೊಡಲಿಲ್ಲ ಎಂದರೆ ಅವರಿಗೂ ಕೂಡ ಅದರ ಮೇಲಿನ ಆಸಕ್ತಿ ಕಡಿಮೆ ಆಗುತ್ತದೆ. ಆ ಹಿನ್ನೆಲೆಯಲ್ಲಿ ಎಂ.ಎಸ್.ಎಂ.ಇ.ಗಳು ವಿಫಲವಾಗುತ್ತಿವೆ. ಅವರಿಗೆ ನಾವು ಏನು ವಾಗ್ದಾನ ಮಾಡುತ್ತೇವೆಯೋ ಅದು ಈಡೇರದೇ ಹೋದರೆ, ಸವಲತ್ತುಗಳು ಸಿಗದೇ ಹೋದರೆ ಅದನ್ನು ಮುಚ್ಚುತ್ತಾರೆ. ಅವರು ಬೇರೆ ಕಡೆಯಿಂದ ಹಣವನ್ನು ಬಡ್ಡಿಗೆ ತಂದು ಬಂಡವಾಳವನ್ನು ಹಾಕಿರುತ್ತಾರೆ. ನಾವು ಸಹಕಾರ ಕೊಡದೇ ಹೋದರೆ ಇದು ವಿಫಲವಾಗುತ್ತದೆ. ಯಾದಗಿರಿಯಲ್ಲಿ ಜವಳಿ ಪಾರ್ಕ್ ಮಾಡುತ್ತೇವೆ ಎಂದು ಅನೇಕ ವರ್ಷದಿಂದ ಹೇಳುತ್ತಿದ್ದರೂ ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಣುತ್ತಿಲ್ಲ. ಈಗ ಗುಲ್ಬರ್ಗಾದಲ್ಲೂ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಒಂದಾದ ನಂತರ ಇನ್ನೊಂದನ್ನು ಮಾಡುತ್ತಾ ಹೋದರೆ ಎಲ್ಲರಿಗೂ ಅದರ ಅನುಕೂಲ ಸಿಗುತ್ತದೆ. ಇಲ್ಲದೇ ಇದ್ದರೆ ನಾವೂ ಕೂಡ, ಗೌರವಾನ್ವಿತ ರಾಜ್ಯಪಾಲರನ್ನು ಕರೆಸಿ ಭಾಷಣ ಮಾಡಿಸಿ ಕಳುಹಿಸಿದರೆ ಏನೂ ಪ್ರಯೋಜನ ಆಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

ರಾಜ್ಯದಲ್ಲಿ ಅನೇಕ ರೈಲ್ವೆ ಯೋಜನೆಗಳು ಆಗಬೇಕಿದೆ. ಕೆಲವು ಬಾರಿ 25-30 ವರ್ಷಗಳ ಕಾಲ ಇಂತಹ ಯೋಜನೆಗಳು ಬಾಕಿ ಇದ್ದ ಉದಾಹರಣೆಗಳು ಇವೆ. ಅದಕ್ಕೆ ಸರ್ಕಾರ ತನ್ನ ಪಾಲನ್ನು ಕೊಡುವಂಥದ್ದು, ಅದಕ್ಕೆ ಬೇಕಾದ ಭೂಮಿಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕು. ತಡ ಮಾಡಿದರೆ ಏನಾಗುತ್ತದೆ? ಬೆಂಗಳೂರಿನ ಸುತ್ತ Peripheral Ring Road ಬರಬೇಕಾಗಿತ್ತು. ರಿಂಗ್ ರೋಡ್ ಆದರೂ ಅದರ ಪರಿಸ್ಥಿತಿ ಏನು ಎಂಬುದನ್ನು ನೋಡಬೇಕು. ಮೊದಲು ಸುಮ್ಮನೆ ಉದ್ದಕ್ಕೆ ಒಂದು ರಸ್ತೆಯನ್ನು ಮಾಡಿಬಿಟ್ಟರು. ಅದರ ಪರಿಸ್ಥಿತಿ ಕೆಟ್ಟ ಮೇಲೆ ಈಗ ಸೇತುವೆಗಳನ್ನು ಮಾಡುತ್ತಿದ್ದಾರೆ. ಆವತ್ತಿನ ಖರ್ಚು ಎಷ್ಟಾಗುತ್ತಿತ್ತು; ಇವತ್ತು ಎಷ್ಟು ಖರ್ಚಾಗುತ್ತಿದೆ? ನಾವು ದಿನಾಗಲೂ ಹೆಬ್ಬಾಳದ ಸೇತುವೆ ಮೇಲೆ ಬರಬೇಕು. ಬಿ.ಡಿ.ಎ. ಎಷ್ಟು ಕೆಟ್ಟಿದೆಯೋ, ಅವರು ಮಾಡುತ್ತಿರುವ ಕೆಲಸವೂ ಅಷ್ಟೇ ಕೆಟ್ಟು ಕೂತಿದೆ. ಸೇತುವೆಯ ಕೆಳಗೆ ಚಲಿಸುವವರು ಸೇತುವೆಯ ಮೇಲೆ ಬರಬೇಕಾದರೆ ಅರ್ಧ ಗಂಟೆ ಬೇಕಾಗುತ್ತದೆ. ಬೆಳಗ್ಗೆ 8-9 ಗಂಟೆಯಾದರೆ ಏರ್‌ಪೋರ್ಟ್ ರಸ್ತೆಯಲ್ಲಿ 4-5 ಕಿಲೋ ಮೀಟರ್ ಅಂದರೆ, ಯಲಹಂಕದವರೆಗೆ queue ಇರುತ್ತದೆ. (ಮುಂದು)

(48) 04-03-2025/5.50/ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮುಂದು):-**

ಬರುವವರ ಗತಿ ಏನಾಗಬೇಕು? ವಿಮಾನ ನಿಲ್ದಾಣಕ್ಕೆ ಹೋಗಬೇಕೆಂದರೆ, ಅವರೇನಾದರೂ ನಾನು ಸರಿಯಾದ ಸಮಯಕ್ಕೆ ಹೋಗುತ್ತೇನೆ ಅಂದುಕೊಂಡು ಹೋದರೆ ಹೋಗುವುದಕ್ಕಾಗುವುದಿಲ್ಲ. ವಿಮಾನ ನಿಲ್ದಾಣಕ್ಕೆ ಹೋಗುವವರ ಗತಿ ಏನಾಗಬೇಕು? ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ವಿಶೇಷ ಯೋಜನೆಗಳು ಬೇಕಲ್ಲವೇ? ಹೆಬ್ಬಾಳದ ಹತ್ತಿರ ರಿಂಗ್ ರೋಡ್‌ನಿಂದ ಬೆಂಗಳೂರಿಗೆ ಬರಬೇಕಾದರೆ, ಅದನ್ನು ಆರು ತಿಂಗಳೊಳಗೆ ಮಾಡುತ್ತೇವೆಂದು ಬೋರ್ಡ್ ಹಾಕಿದ್ದರು. ಈಗ ಒಂದೂವರೆ ವರ್ಷವಾಗುತ್ತಿದೆ. ಇದುವರೆವಿಗೂ ಆಗುತ್ತಿಲ್ಲ. ಒಂದೊಂದು ದಿನ ಅಲ್ಲಿ ಕೆಲಸವೇ ನಡೆಯುತ್ತಿರುವುದಿಲ್ಲ. ಕೆಲಸ ನಿಧಾನಗತಿಯಲ್ಲಿ ನಡೆಯುತ್ತಿದೆ. ಅಂದರೆ, ಒಂದು ಯೋಜನೆಗೆ ನಿಗದಿತ ಸಮಯವೂ ಇಲ್ಲ, ಇಂತಹ ಜಂಕ್ಷನ್‌ನಲ್ಲಿ ಇವೆಲ್ಲಾ bottleneck. ಇಂತಹ bottlenecks ಬೆಂಗಳೂರಿನಲ್ಲಿ ಬೇಕಾದಷ್ಟು ಇವೆ. ತುಮಕೂರು ಕಡೆಯಿಂದ ನೆಲಮಂಗಲದ ಕಡೆಗೆ ಬಂದರೆ ಎಂತಹ ಪರಿಸ್ಥಿತಿ ಇದೆ ಎಂದರೆ ಅರ್ಧ ಗಂಟೆಯಾದರೂ ಟ್ರಾಫಿಕ್ ಕ್ಲಿಯರ್ ಆಗುವುದಿಲ್ಲ. ಇಂಥದ್ದಕ್ಕೆ ಏನಾದರೂ ತುರ್ತು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವುದಿಲ್ಲ. ಒಂದು ಸಲ ಯಾರು ಸರ್ಕಾರ ನಡೆಸುತ್ತಾರಲ್ಲಾ ಅವರು ಆ ಟ್ರಾಫಿಕ್‌ನಲ್ಲಿ ಸಿಕ್ಕಿ ಹಾಕಿಕೊಳ್ಳಬೇಕು, ಆಗ ಅವರಿಗೆ ಗೊತ್ತಾಗುತ್ತದೆ. ಪೋಲೀಸ್‌ನವರು ನಮ್ಮ ಹತ್ತಿರ ಮನವಿ ಮಾಡಿಕೊಳ್ಳುತ್ತಾರೆ. ಸರ್, ಏನು ಮಾಡೋಣ, ನೀವೇ ಮಂತ್ರಿಗಳಿಗೆ ಹೇಳಿ ಸರ್, ಮುಖ್ಯಮಂತ್ರಿಯವರಿಗೆ ಪತ್ರ ಬರೆಯಿರಿ ಎಂದು ಹೇಳುತ್ತಾರೆ. ಪತ್ರ ಬರೆದಾಗ ಅವರು ನೋಡಿ ಪಕ್ಕಕ್ಕೆ ಇಟ್ಟುಕೊಳ್ಳುತ್ತಾರೆ. ಅಲ್ಲಿ ಇಂತಹ ಪರಿಸ್ಥಿತಿ ಇದೆ. ಮೆಜೆಸ್ಟಿಕ್‌ನಲ್ಲೂ ಅದೇ ಪರಿಸ್ಥಿತಿ ಇದೆ. ಕೆ.ಆರ್.ಮಾರ್ಕೆಟ್‌ನಲ್ಲೂ ಅದೇ ಪರಿಸ್ಥಿತಿ ಇದೆ. ಈಗ ಗ್ರೇಟರ್ ಬೆಂಗಳೂರು ಮಾಡುವುದಕ್ಕೆ ಹೊರಟಿದ್ದಾರೆ. ಮೊದಲು ಬ್ರಾಂಡ್ ಬೆಂಗಳೂರು ಎಂದು ಇತ್ತು. ಬ್ರಾಂಡ್ ಬೆಂಗಳೂರು ಏಕೆ ಆಗಿಲ್ಲ ಎನ್ನುವುದು ನನಗೂ ಗೊತ್ತಿಲ್ಲ. ಗ್ರೇಟರ್ ಬೆಂಗಳೂರು ಆಗದಿದ್ದರೆ ಗ್ರೇಟ್ ಬೆಂಗಳೂರು ಆದರೂ ಮಾಡಿ. ಮೊದಲು ಹಳ್ಳಗಳನ್ನು ಮುಚ್ಚಲಿ, ಎಲ್ಲಾ ಕಡೆ ಜನರು ಬೊಬ್ಬೆ ಹೊಡೆಯುತ್ತಿದ್ದಾರೆ. ಮಳೆ ಬಂದಾಗ ಮನೆಗಳ ಪರಿಸ್ಥಿತಿ ಏನಾಗುತ್ತದೆ ಎಂಬುದು ಆ ಮನೆಯವರಿಗೆ ಮಾತ್ರ ಗೊತ್ತು. ಈ ಟ್ರಾಫಿಕ್ ಜಾಮ್‌ನ್ನು ಮೊದಲು ಕಡಿಮೆ ಮಾಡುವಂತಹ ಕೆಲಸ ಮಾಡಬೇಕು. ಎಲ್ಲಾ ರಸ್ತೆಗಳು one-way ಆಗಿಬಿಟ್ಟಿವೆ. ಅದು ಏಕೆ ಆಯಿತು ಎಂಬುದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಟ್ರಾಫಿಕ್ ಜಾಮ್ ಆಗದ ರೀತಿಯಲ್ಲಿ ಸರಾಗವಾಗಿ ಜನರು ಅವರವರ ಕೆಲಸಗಳಿಗೆ, ಕಚೇರಿಗಳಿಗೆ ಹೋಗುವಂಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಈ ಸರ್ಕಾರ ಇದರ ಬಗ್ಗೆ ಕಾರ್ಯೋನ್ಮುಖವಾಗಬೇಕೆಂದು ನಾನು ಮನವಿ ಮಾಡುತ್ತೇನೆ. ಮಹಿಳೆಯರನ್ನು ಅಭಿವೃದ್ಧಿ ಪಥದಲ್ಲಿ ಸಮಾನ ಪಾಲುದಾರರನ್ನಾಗಿ ಮಾಡಲು ಸರ್ಕಾರ ವಿಫಲವಾಗಿರುವುದನ್ನು ಒಪ್ಪಿಕೊಳ್ಳುವುದೇ? ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸದಸ್ಯರು ಮಾತನಾಡುತ್ತಾ ಮೊದಲು ಶೇಕಡ 24-25 ರಷ್ಟು ಮಾತ್ರ ಕೆಲಸಕ್ಕೆ ಹೋಗುತ್ತಿದ್ದರು. ಈಗ ಶೇಕಡ 30 ರಷ್ಟು ಹೋಗುತ್ತಿದ್ದಾರೆಂದು ಹೇಳಿದರು. ಶೇಕಡ 30 ರಷ್ಟು ಜನರು ಅವರ

ಹೊಟ್ಟೆಪಾಡಿಗೋಸ್ಕರ ಕೆಲಸಕ್ಕೆ ಹೋಗುತ್ತಿದ್ದಾರೆ. ಅಂದರೆ ಹೊಟ್ಟೆ ಹಸಿವು ಹೆಚ್ಚಾಗಿದೆ ಎಂದರ್ಥ. ಮನೆಯಲ್ಲಿ ಕುಳಿತಿದ್ದರೆ ನಮ್ಮದೇನು ನಡೆಯುವುದಿಲ್ಲ, ಕೆಲಸಕ್ಕಾದರೂ ಹೋಗಿ ಹಣ ಸಂಪಾದನೆ ಮಾಡೋಣ ಎನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಸ್ವಾವಲಂಬಿಗಳಾಗಿ ಬದುಕಬೇಕೆಂದರೆ ಅವರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಬೇಕು. ಗೃಹಜ್ಯೋತಿ ಹೆಸರಿನಲ್ಲಿ ಸಾಮಾನ್ಯ ಜನರ ಮನೆಗಳಿಗೆ ವಿದ್ಯುತ್ ಬಿಲ್‌ನ್ನು ಕಟ್ಟಿ ಎಂದು ಜಾರಿ ಮಾಡುತ್ತಿರುವುದು ಏಕೆ? ಇದನ್ನು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. 200 ಯೂನಿಟ್ ವಿದ್ಯುತ್‌ನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿದ್ದರು. ಅದಾದ ಮೇಲೆ ಏನೋ ಬೇರೆ ಬೇರೆ ವ್ಯತ್ಯಾಸಗಳಾಯಿತು. ಅದರ ಬಗ್ಗೆ ನಮ್ಮ ಪ್ರಶ್ನೆ ಇಲ್ಲ ಬಿಲ್ ಕಟ್ಟುವುದಕ್ಕೆ ತಡವಾಗಿದ್ದಕ್ಕೆ ನಾವು ಜನರಿಂದಲೇ ವಸೂಲಿ ಮಾಡುತ್ತೇವೆಂದು ಕಂಪನಿಗಳು ಹೇಳುವುದಕ್ಕೆ ಪ್ರಾರಂಭ ಮಾಡಿದರು. ಈ ರೀತಿ ಏಕಾಯಿತು? ಹಾಗಾದರೆ ಸರ್ಕಾರದಲ್ಲಿ ಹಣದ ಕೊರತೆ ಎದ್ದು ಕಾಣುತ್ತಿಲ್ಲವೇ? ಅದಾದ ನಂತರ ನಾವೇ ಕಟ್ಟುತ್ತೇವೆಂದು ಮಾನ್ಯ ಸಚಿವರು ಹೇಳಿದರು. ಅಂದರೆ ಜನರಿಗೆ ಎಚ್ಚರಿಕೆ ಬರುವುದಕ್ಕೆ ಕಾರಣವೇನು? ಎಲ್ಲವೂ ಸರಿಯಿದ್ದರೆ ಕಾರಣವಿಲ್ಲ. ಪರಿಶಿಷ್ಟ ಜಾತಿ ವರ್ಗಗಳಿಗೆ ಗೃಹ ಜ್ಯೋತಿ ಯೋಜನೆ ಎಂದು ಹೇಳಿದ್ದಾರೆ. ಮೊದಲೇ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಉಚಿತವಾಗಿತ್ತು. ಅದಾದ ಮೇಲೆ ಮಾನ್ಯ ಬಸವರಾಜ ಬೊಮ್ಮಾಯಿಯವರ ಕಾಲದಲ್ಲಿ ಪರಿಶಿಷ್ಟ ಜಾತಿ ವರ್ಗಗಳಿಗೆ 75 ಯೂನಿಟ್ ವಿದ್ಯುತ್‌ನ್ನು ಉಚಿತವಾಗಿ ಕೊಟ್ಟಿದ್ದರು, ಈಗ ಅವರೇನು ಮಾಡಿದ್ದಾರೆ? ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಪಿ/ಟಿಎಸ್‌ಪಿ ಹಣವನ್ನು ಹಾಗೆಯೇ ಎತ್ತಿಕೊಂಡು ಹಾಕಿಕೊಳ್ಳುತ್ತಿದ್ದಾರೆ. ಮೊದಲೇ ಉಚಿತವಾಗಿ ಕೊಟ್ಟಿದ್ದಾರೆ, ಅವರೇನು ಉಚಿತವಾಗಿ ಕೊಟ್ಟಿದ್ದಾರೆ? ಅದು ಮೊದಲೇ ಇತ್ತು. ಹೀಗಾಗಿ ಒಂದು ಕಡೆ ಹೇಳುತ್ತಾರೆ ಎಲ್ಲವೂ ಸರಿಯಾಗಿದೆ ಎಂದು, ಮತ್ತೊಂದು ಕಡೆ ಜನರ ಕಷ್ಟಗಳನ್ನು ಕೇಳುತ್ತಿಲ್ಲ. ಎಲ್ಲಾ ಜನರ ಸಮಸ್ಯೆ ಅವರ ತನಕ ಬರುವುದಿಲ್ಲ. ಕ್ಷೇತ್ರಗಳಲ್ಲಿ ಆಯಾಯ ಶಾಸಕರಿಗಳಿಗೋ ಅಥವಾ ಬೇರೆ ಅಧಿಕಾರಿಗಳಿಗೋ ಹೋಗಿ ಮನವಿ ಕೊಡಬಹುದು ಅಷ್ಟೆ. ಆದರೆ, ಇಲ್ಲಿ ಈ ರೀತಿ ಮಾಡತಕ್ಕಂಥದ್ದು ಸರಿಯಲ್ಲ. ಪರಿಶಿಷ್ಟ ಜಾತಿಯ ಎಸ್‌ಸಿಪಿ/ಟಿಎಸ್‌ಪಿ ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಸಭಾಪತಿಗಳೇ, ತಾವು ಇರಲಿಲ್ಲ.

**ಸಭಾಪತಿಯವರು:-** ಇಲ್ಲಿ ಇಲ್ಲದಿದ್ದರೂ ನಾನು ನನ್ನ ಕೊಠಡಿಯಲ್ಲಿ ನೋಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನೋಡಿದ್ದೀರಾ, ಬಹಳ ಸಂತೋಷ. ನಾನು ಕೇಳುವುದೇನೆಂದರೆ, 52,000 ಕೋಟಿ ರೂಪಾಯಿಗಳನ್ನು ಗ್ಯಾರಂಟಿಗಳಿಗಾಗಿ ಇಟ್ಟಿದ್ದಾರೆ. ಅದರಲ್ಲಿ ಎಸ್‌ಸಿ/ಎಸ್‌ಟಿ ಜನರನ್ನು ಏಕೆ ದೂರ ಇಟ್ಟಿದ್ದಾರೆ ಎಂಬುದು ನನ್ನ ಪ್ರಶ್ನೆ. 52,000 ಕೋಟಿ ರೂಪಾಯಿಗಳಲ್ಲಿ ಅವರಿಗೂ ಪಾಲು ಇಲ್ಲವೇ? ಏಕೆಂದರೆ, ಎಲ್ಲರಿಗೂ ಉಚಿತವಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಕಾಕ ಪಾಟೀಲ್‌ರವರಿಗೂ ಉಚಿತ, ಮಹದೇವಪ್ಪನವರಿಗೂ ಉಚಿತ, ನನಗೂ ಉಚಿತ, ನನ್ನ ಹೆಂಡತಿಗೂ ಉಚಿತ ಎಂದು ಹೇಳಿದ್ದಾರೆ. ಹೆಸರು ಹೇಳಿದವರನ್ನು ನಾನು ಹೇಳಿದ್ದೇನೆ. ಆಗ ಅವರು ನನ್ನ ಹೆಸರನ್ನು ಹೇಳಿರಲಿಲ್ಲ. ಈಗ ನನ್ನ ಹೆಸರು ಹೇಳುವುದನ್ನು ನಾನು ಬಿಟ್ಟಿದ್ದೇನೆ. ನನ್ನ ಹೆಸರನ್ನು ನಾನು ಆಮೇಲೆ ಹೇಳಿಕೊಳ್ಳುತ್ತೇನೆ. ಶ್ರೀ ಕಾಕ ಸಾಹೇಬ

ಪಾಟೀಲ್‌ರವರಿಗೆ ಉಚಿತ. ಸಚಿವರಾದ ಡಾ॥ ಹೆಚ್.ಸಿ. ಮಹದೇವಪ್ಪನವರು ಪರಿಶಿಷ್ಟ ಜಾತಿಯವರು ಅಲ್ಲವೇ? ಅವರಿಗೆ ಉಚಿತ ಎಂದು ಹೇಳದ ಮೇಲೆ ಅವರಿಗೆ ಮಾತ್ರ ಎಸ್‌ಸಿಪಿ-ಟಿಎಸ್‌ಪಿ ಹಣ ಏಕೆ? ಅದಕ್ಕೆ ನಾನು ಕೇಳುತ್ತಿದ್ದೇನೆ, ಎಲ್ಲರಿಗೂ ಒಂದು ಮಾಡಿ, ಪರಿಶಿಷ್ಟ ಜಾತಿ ವರ್ಗಗಳಿಗೆ ಬೇರೊಂದು ಮಾಡುತ್ತಿದ್ದಾರೆ. ಇದು ಒಂದು ರೀತಿ ಅಸ್ಪೃಶ್ಯತೆಯ ಆಚರಣೆಯಾಗಿದೆ. ಈ ರೀತಿ ಸರ್ಕಾರ ಮಾಡಬಾರದು. ಎಸ್‌ಸಿಪಿ/ಟಿಎಸ್‌ಪಿ ಆಕ್ಟ್ ಮೂರು ರಾಜ್ಯಗಳಲ್ಲಿ ಮಾತ್ರ ಇರುವಂಥದ್ದು. ಅದರಿಂದ ಈ ಸರ್ಕಾರಕ್ಕೆ ಗೌರವದ ಮಾತುಗಳನ್ನು ಅವರೇ ಹೇಳಕೊಳ್ಳುತ್ತಾರೆ. ಅದೇನೆಂದರೆ ತೆಲಂಗಾಣ, ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಎಸ್‌ಸಿಪಿ/ಟಿಎಸ್‌ಪಿ ಆಕ್ಟ್‌ನ್ನು ತಂದಿದ್ದೇವೆಂದು ಹೇಳದ್ದಾರೆ, ನಾನು ಇಲ್ಲ ಎಂದು ಹೇಳುತ್ತಿಲ್ಲ ಅದನ್ನು ತಂದಿದ್ದಾರೆ. ಈ Special Component Scheme ಅನ್ನು ಈ ಮೂರು ರಾಜ್ಯಗಳು ಮಾತ್ರ ಕೊಡುತ್ತಿವೆಯೇ? ಎಲ್ಲಾ ರಾಜ್ಯಗಳು ಕೊಡುತ್ತಿವೆ. ಆದರೆ ಅಲ್ಲಿ ಆಕ್ಟ್ ಇಲ್ಲ. ಆದರೆ ಜನಸಂಖ್ಯೆಗೆ ಅನುಗುಣವಾಗಿ ಕೊಡಬೇಕು, ಈ ಹಣ ಪೋಲಾಗಬಾರದು, ಯಾವುದೇ ಬೇರೆ ಕಾರಣಗಳಿಗೆ ಉಪಯೋಗಿಸಬಾರದು ಎನ್ನುವ ಕಾರಣಕ್ಕಾಗಿ ತಂದಿದ್ದಾರೆ, ಸಂತೋಷ. ಆದರೆ ಆಕ್ಟ್ ಅನ್ನು ತಂದು ಆಕ್ಟ್ ಅನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ಅದರ ಉಪಯೋಗ ಏನಾಯಿತು? It is a violation of their own Act. ಆದ್ದರಿಂದ ಇದು ಆ ಸಮುದಾಯಗಳಿಗೆ ವಂಚನೆಯಾಗುತ್ತಿದೆ. ನನಗೆ ತಿಳಿದ ಮಟ್ಟಿಗೆ ಈ ಸರ್ಕಾರದಲ್ಲಿ ಪರಿಶಿಷ್ಟ ಜಾತಿ ವರ್ಗಗಳಿಗೆ ಆಗಿರುವಷ್ಟು ಅನ್ಯಾಯ ಬೇರೆ ಯಾವುದೇ ಸರ್ಕಾರದಿಂದಲೂ ಆಗಿಲ್ಲ. ಇಷ್ಟು ಇದ್ದರೂ ಕೂಡ ಅವರಿಗೂ ಗೊತ್ತು, ಆದರೂ ಕೂಡ ಕೆಲವರು defend ಮಾಡಿಕೊಳ್ಳುವುದರಲ್ಲಿ ಬಹಳ ಉತ್ಸುಕರಾಗಿದ್ದಾರೆ. Defend ಮಾಡಲಿ, ಆದರೆ ಸತ್ಯ ಸತ್ಯವಾಗಿಯೇ ಇರುತ್ತದೆ, ಮಿಥ್ಯ ಯಾವಾಗಲೂ ಮಿಥ್ಯವಾಗಿರುತ್ತದೆ. ಈ ಸತ್ಯ ಸ್ವಲ್ಪ ಶಕ್ತಿ ಪಡೆದಾಗ ಅವರ ಮಿಥ್ಯ ಸೋಲುತ್ತದೆ. ಸಮಾಜ ಕಲ್ಯಾಣ ಇಲಾಖೆಗೆ ಇವತ್ತು ಎಷ್ಟು ಹಣ ಬರುತ್ತದೆ? ಆ ಹಣವನ್ನು ಯಾವ್ಯಾವುದಕ್ಕೆ ಉಪಯೋಗಿಸುತ್ತಾರೆ? (ಮುಂದು)

(49) 04/03/2025 6:00 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ಮುಂದು):-**

ವಿದೇಶ ವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಕೊಡಿಸುವ ಉದ್ದೇಶದಿಂದ 45 ಕೋಟಿ ರೂಪಾಯಿಗಳನ್ನು ಭರಿಸಲಾಗಿದೆ ಎಂದು ಹೇಳದ್ದಾರೆ. ಪ್ರಸಕ್ತ ವರ್ಷದಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಈ ರೀತಿಯ ಧನ ಸಹಾಯ ಮಾಡಲಾಗಿದೆ ಹಾಗೂ ಎಷ್ಟು ವಿದ್ಯಾರ್ಥಿಗಳ ಶುಲ್ಕ ಪಾವತಿಸಲಾಗಿದೆ ಎಂಬ ಅಂಶವನ್ನು ನಮಗೆ ತಿಳಿಸಬೇಕು. ಸರ್ಕಾರವು ವಿದ್ಯಾರ್ಥಿಗಳ ಶುಲ್ಕವನ್ನು ಇನ್ನೂ ಸಹ ಪಾವತಿಸಿಲ್ಲ. ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇನ್ನೂ ಶುಲ್ಕ ಪಾವತಿಸುವುದಕ್ಕಾಗಿಲ್ಲ. ಇದನ್ನು ನಾನು ಹೇಳುತ್ತಿಲ್ಲ. ಈಗ ಸಚಿವರಾಗಿರುವ ಶ್ರೀ ಕೆ.ಎನ್.ರಾಜಣ್ಣ ರವರು ಹೇಳದ್ದಾರೆ. ಈಗ್ಗೆ ಒಂದು ತಿಂಗಳ ಹಿಂದೆ, "ನಮ್ಮ ಸರ್ಕಾರದಿಂದ ಮಕ್ಕಳಿಗೆ ಶುಲ್ಕ ನೀಡಲಾಗುತ್ತಿಲ್ಲ;

ಇಂತಹ ವಿಷಯಗಳ ಬಗ್ಗೆ ನಾವುಗಳು ಕುಳಿತು ಚರ್ಚೆ ಮಾಡಬೇಕಾಗಿದೆ; ಇದಕ್ಕಾಗಿ ಸಮಾವೇಶವನ್ನು ಮಾಡಬೇಕಾಗಿದೆ" ಎಂಬುದಾಗಿ ಅವರೇ ಹೇಳಿದ್ದಾರೆ. ಹೀಗೆ ಹೇಳಿದ ಮೇಲೆ, ಸರ್ಕಾರದ ವೈಫಲ್ಯವನ್ನು ಅವರೇ ಒಪ್ಪಿಕೊಂಡಿದ್ದಾರೆ. ಇವುಗಳನ್ನೆಲ್ಲಾ ಸರಿಪಡಿಸದೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣವನ್ನು ಮಾಡಿದ್ದೇವೆ ಎಂದು ಸರ್ಕಾರವು ಹೇಗೆ ಹೇಳಿಕೊಳ್ಳುತ್ತದೆ? ನನಗೆ ಅನ್ನಿಸಿದಂತೆ, ಎಸ್.ಸಿ.ಪಿ/ಟಿ.ಎಸ್.ಪಿ ಹಣವನ್ನು ಒಂದು ಕಡೆಯಿಂದ ದುರ್ಬಳಕೆ ಮಾಡಿ, ಅಲ್ಲಿ ಒಂದು ರೀತಿಯ ಆಸ್ತಿ ರಚನೆಯಾಗಬೇಕಾಗಿತ್ತು ಹಾಗೂ ಅವರುಗಳಿಗೆ ಆಸ್ತಿ ಬರಬೇಕಾಗಿತ್ತು. ನಮ್ಮ ಕಾಲದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಅನುದಾನವನ್ನು ನೀಡಲಾಗುತ್ತಿತ್ತು. ಆದರೆ, ಇವತ್ತಿನ ದಿವಸ ಗಂಗಾ ಕಲ್ಯಾಣ ಯೋಜನೆಯು ಸ್ಥಗಿತಗೊಂಡಿದೆ. ಇದಕ್ಕೆ ಸಂಬಂಧಿತ ಅಂಕಿ-ಅಂಶಗಳನ್ನು ಸರ್ಕಾರವು ಬಿಡುಗಡೆ ಮಾಡಲಿ. ಈ ಬಾರಿ ಎಷ್ಟು ಗಂಗಾ ಕಲ್ಯಾಣ ಯೋಜನೆಯಡಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ, ಎಷ್ಟು ಭೂಹೀನ ಜನರಿಗೆ ಭೂಮಿಯನ್ನು ಖರೀದಿ ಮಾಡಿಕೊಡಲಾಗಿದೆ ಎಂಬುದರ ಮಾಹಿತಿಯನ್ನು ನೀಡಲಿ. ಅದೇ ರೀತಿಯಾಗಿ ಎಷ್ಟು ವಿದ್ಯಾವಂತ ಯುವಕರಿಗೆ ಸಹಾಯ ಮಾಡಲಾಗಿದೆ? ಬಹಳಷ್ಟು ವಿದ್ಯಾವಂತ ಯುವಕರಿಗೆ ವಾಹನ ಚಾಲನೆಯು ಗೊತ್ತಿದ್ದು, ಅಂತಹವರುಗಳಿಗೆ ಕಾರ್‌ವೊಂದನ್ನು ಖರೀದಿ ಮಾಡಿಕೊಟ್ಟು ಅವರುಗಳು ಸ್ವಯಂ ಉದ್ಯೋಗ ಮಾಡುವ ಅವಕಾಶಗಳಿತ್ತು. ಇಂತಹ ಎಷ್ಟು ಜನರಿಗೆ ಎಷ್ಟು ಕಾರುಗಳನ್ನು ಕೊಡಲಾಗಿದೆ? ಈ ಬಗೆಗಿನ ಮಾಹಿತಿಯನ್ನು ಸರ್ಕಾರವು ನೀಡಲಿ. ಈ ಹಿಂದೆ ಎಲ್ಲಾ ಅಭಿವೃದ್ಧಿ ನಿಗಮಗಳಲ್ಲಿ ಮೊದಲು ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನೀಡಲಾಗುತ್ತಿತ್ತು. ಇತ್ತೀಚೆಗೆ ನಾನು ಎಲ್ಲಾ ಅಭಿವೃದ್ಧಿ ನಿಗಮಗಳ ಲೆಕ್ಕವನ್ನು ಮಾಡಿದ್ದೇನೆ. ಸರ್ಕಾರವು ಒಟ್ಟಾರೆಯಾಗಿ 510 ಕೋಟಿ ರೂಪಾಯಿಗಳನ್ನು ಒಟ್ಟು ಏಳು ಅಭಿವೃದ್ಧಿ ನಿಗಮಗಳಿಗೆ ಕೊಟ್ಟಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಡಿ ಅನುದಾನವನ್ನು ನೀಡಬೇಕೆಂದರೆ, ಬೆಳಗಾವಿಯಲ್ಲಿ ಒಟ್ಟು 18 ವಿಧಾನಸಭಾ ಕ್ಷೇತ್ರಗಳಿವೆ. ಒಟ್ಟು 18 ಕ್ಷೇತ್ರಗಳಿಗೆ 16 ಗಂಗಾ ಕಲ್ಯಾಣ ಯೋಜನೆಗಳನ್ನು ನೀಡಿದ್ದಾರೆ. ಅಲ್ಲಿ ಒಟ್ಟು 18 ಕ್ಷೇತ್ರಗಳಿದ್ದು, ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆಗಳಡಿ ಕೇವಲ 16 ಫಲಾನುಭವಿಗಳಿಗೆ ಮಾತ್ರವೇ ನೀಡಿದ್ದಾರೆ. ಅಂದರೆ ಅಲ್ಲಿಗೆ ಯಾರೋ ಇಬ್ಬರು ನತದೃಷ್ಟ ಎಂ.ಎಲ್.ಎ.ಗಳು ಅಲ್ಲಿದ್ದಾರೆ ಎಂದರ್ಥ. ಅವರುಗಳಿಗೆ ಈ ಯೋಜನೆಯ ಸೌಲಭ್ಯಗಳು ದೊರೆಯುವುದಿಲ್ಲ. ಒಂದೊಂದು ಕ್ಷೇತ್ರಕ್ಕೆ ಒಂದೊಂದು ಬೋರ್‌ವೆಲ್‌ಗಳನ್ನು ನೀಡಿದರೂ ಸಹ, ಇನ್ನಿಬ್ಬರಿಗೆ ಈ ಸೌಲಭ್ಯಗಳು ದೊರೆಯುವುದಿಲ್ಲ. ಈ ರೀತಿಯ ಪರಿಸ್ಥಿತಿಯಾದರೆ, ಪರಿಶಿಷ್ಟ ಜಾತಿ ಮತ್ತು ವರ್ಗಗಳು ಮೇಲೆ ಹೇಗೆ ಬರುವುದಕ್ಕಾಗುತ್ತದೆ ಮತ್ತು ಅವರ ಕಲ್ಯಾಣ ಹೇಗೆ ಆಗುತ್ತದೆ? ಈ ವಿಚಾರವನ್ನು ನಾನು ಕೇಳಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಈಶ್ವರ್ ಖಂಡ್ರೆ:-** ಮಾನ್ಯ ಸಭಾಪತಿಯವರೆ, ಒಟ್ಟು 5,000 ...

**(ಗೊಂದಲ)**

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಒಟ್ಟು ಕೊರೆಸಿರುವ ಕೊಳವೆ ಬಾವಿಗಳ ಮಾಹಿತಿಯನ್ನು ಸರ್ಕಾರ ನೀಡಲಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಒಟ್ಟು 4,000 ಕೊಳವೆ ಬಾವಿಗಳನ್ನು ಕೊರೆಸಲಾಗಿದ್ದು, ಅದರ ಮಾಹಿತಿಯನ್ನು ಈಗ ನೀಡಲಾಗುತ್ತಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅದರ ಮಾಹಿತಿಯನ್ನು ಸರ್ಕಾರವು ಈಗ ನೀಡುತ್ತಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಮಾರ್ಚ್ ತಿಂಗಳ ಅಂತ್ಯದೊಳಗೆ ಎಲ್ಲವನ್ನೂ ಪೂರ್ಣಗೊಳಿಸಲಾಗುತ್ತಿದೆ. ವಿರೋಧ ಪಕ್ಷದವರು ಸುಖಾ ಸುಮ್ಮನೆ ಯಾವುದೋ ಏನೋ ಒಂದು ಹೇಳುವುದಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ವಸ್ತುಸ್ಥಿತಿ ಹಾಗಿದ್ದರೆ, ರಾಜ್ಯಪಾಲರ ಭಾಷಣದಲ್ಲಿ ಏನಿದೆ ಎಂದು ನಾನು ಕೇಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಕೇವಲ ಒಂದು ಕೊಳವೆ ಬಾವಿಯನ್ನು ಕೊರೆಯಲಾಗುತ್ತಿದೆ ಎಂದು ಹೇಳಿದರೆ, ಅದು ತಪ್ಪಾಗುತ್ತದೆ. ಒಟ್ಟು 4,000 ...

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಹೇಳುವುದನ್ನು ಕೇಳಿ. ನೀವು ಕೊಡುತ್ತೀರೆಂದು ಹೇಳುತ್ತಿದ್ದೀರಿ. ಆದರೆ, ಈ ವರ್ಷದಲ್ಲಿ ನೀವು ಕೊಟ್ಟಿರುವ..,

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಯಾವ ಯಾವ ಸದಸ್ಯರು ಬಂದು ಕೇಳಿದ್ದಾರೆ, ಅವರುಗಳಿಗೆಲ್ಲಾ ನೀಡಲಾಗಿದೆ. ಇದರಲ್ಲಿ ಯಾವುದೇ ಪಕ್ಷ ಬೇಧ ಮಾಡಿರುವುದಿಲ್ಲ. ಅವಶ್ಯವಿದ್ದಲ್ಲಿ, ನಿಮ್ಮ ಪಕ್ಷದ ಸದಸ್ಯರ ಪಟ್ಟಿಯನ್ನೂ ಸಹ ನೀಡುವೆ. ವಿರೋಧ ಪಕ್ಷದ ನಾಯಕರು ಸರಿಯಾಗಿ ತಿಳಿದುಕೊಳ್ಳಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ಮಾಹಿತಿಯನ್ನು ಕೇಳುತ್ತೇವೆ.

**ಸಭಾಪತಿಯವರು:-** ಸಭಾನಾಯಕರೇ, ನೀವು ಉತ್ತರ ನೀಡುವ ಸಂದರ್ಭದಲ್ಲಿ ಇವುಗಳ ಬಗ್ಗೆ ಹೇಳಿ. ಈಗ ಅವರು ಹೇಳಿದ್ದನ್ನು ನೀವು ನೋಟ್ ಮಾಡಿಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಸರ್ಕಾರವು ಮಾಹಿತಿಯನ್ನು ನೀಡಲಿ. ಆದರೆ, ಎಸ್.ಸಿ. ಮತ್ತು ಎಸ್.ಟಿ. ವರ್ಗದ ವಿದ್ಯಾರ್ಥಿಗಳಿಗೂ ಸಹ ಬಹಳವಾಗಿ ಅನ್ಯಾಯವಾಗುತ್ತಿದೆ. ಅವರ ವ್ಯಾಸಂಗಕ್ಕೆ ಪೆಟ್ಟಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯು ವರ್ಷವಾದರೂ ಸಹ ಅವರುಗಳಿಗೆ ಸಮವಸ್ತ್ರ, ಷೂಗಳು ಯಾವುದನ್ನೂ ಸಹ ನೀಡಿರುವುದಿಲ್ಲ. ಭಾರತದ ಸಂವಿಧಾನವು ಕೇವಲ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ

ಮಾತ್ರವೇ ಸೀಮಿತವಾಗಿದೆಯೇ? ಇದು ಬೇರೆ ಯಾರಿಗೂ ಸಂಬಂಧಿಸಿಲ್ಲವೇ? ಇದು ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಾತ್ರನಾ? ರಾಜ್ಯದ ಬೀದರ್ ಜಿಲ್ಲೆಯಿಂದ ಹಿಡಿದು ಚಾಮರಾಜನಗರ ಜಿಲ್ಲೆಯವರೆಗೆ ಮಾನವ ಸರಪಳಿಯನ್ನು ನಿರ್ಮಿಸಿ, ಪ್ರಜಾಪ್ರಭುತ್ವತೆಯನ್ನು ಕೊಂಡಾಡಿರುವುದನ್ನು ನಾನು ನೋಡಿದ್ದೇನೆ. ಇದಕ್ಕಾಗಿ ಎಲ್ಲಿಂದ ಹಣ ನೀಡಿದರು? ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗಿದೆ. ಇದು ಹೀಗೆ ಏಕೆ? ಸಮಾಜ ಕಲ್ಯಾಣ ಇಲಾಖೆಯಲ್ಲಿನ ಹಣವು ಇಂತಹವುಗಳಿಗೆಲ್ಲಾ ಖರ್ಚಾಗುತ್ತಿದೆ. ಆದರೆ, ಆ ಬಡ ಮಕ್ಕಳ ಶುಲ್ಕವನ್ನು ಪಾವತಿಸಿ, ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕಾಗಿ, ಪುಸ್ತಕವನ್ನು ಕೊಡಿಸುವುದಕ್ಕಾಗಿ, ಶಾಲೆ, ಹಾಸ್ಟೆಲ್‌ಗಳನ್ನು ತೆರೆಯುವುದಕ್ಕಾಗಿ, ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ನೀಡುವುದಕ್ಕಾಗಿ ಈ ರೀತಿಯ ಕೆಲಸಗಳಿಗಾಗಿ ಆ ಹಣವನ್ನು ಖರ್ಚು ಮಾಡಬೇಕು. ಆದರೆ, ಅನ್ಯ ಕೆಲಸಗಳಿಗೆ ಮೀಸಲಿಟ್ಟ ಹಣವನ್ನು ಖರ್ಚು ಮಾಡಿದಾಗ ಅವರ ಉದ್ಧಾರವಾಗುವುದಿಲ್ಲ. ಯುವ ನಿಧಿ ಯೋಜನೆ ಎಂಬುದಾಗಿ ಸರ್ಕಾರವು ಹೇಳಿದೆ. ನಾನು ನೋಡಿದಂತೆ, ಈ ಯೋಜನೆಯಡಿ ಈ ವರ್ಷದಲ್ಲಿ ಯಾರು ಯಾರು ಅರ್ಜಿಗಳನ್ನು ಸಲ್ಲಿಸಿದ್ದರೋ, ಸುಮಾರು ಅರ್ಜಿಗಳು ತಿರಸ್ಕೃತಗೊಂಡಿವೆ. ನಾನು ನೋಡಿದಂತೆ ಇಲ್ಲಿ ಒಟ್ಟು 43 ಕೋಟಿ ರೂಪಾಯಿಗಳಷ್ಟೇ ಆಗಿದೆ. ಸಂವಿಧಾನವು ಎಲ್ಲರ ಆಸ್ತಿ ಮತ್ತು ಹಕ್ಕು ಆಗಿದೆ. ಸಂವಿಧಾನದ ಹಬ್ಬವನ್ನು ಮಾಡಲಿ; ಅದನ್ನು ನಾವೂ ಸಹ ಪ್ರೋತ್ಸಾಹಿಸುತ್ತೇವೆ. ಇದು ನಮ್ಮೆಲ್ಲರ ಹಕ್ಕು ಆಗಿದೆ. ಆದರೆ ಮಾನವ ಸರಪಳಿಯಂತಹ ಕಾರ್ಯಕ್ರಮವನ್ನು ಮಾಡಿ, ಸಮಾಜ ಕಲ್ಯಾಣ ಇಲಾಖೆಯಿಂದ ಹಣವನ್ನು ನೀಡಿದರೆ..., 39,000 ಕೋಟಿ ರೂಪಾಯಿಗಳಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಿಡಲಾಗಿದೆ ಎಂದು ಸರ್ಕಾರವು ಹೇಳಿದೆ. ಈ ಹಣವು ಸರಿಯಾಗಿ ಆ ಜನಾಂದವರಿಗಾಗಿಯೇ ಖರ್ಚಾದರೆ, ಆಸ್ತಿ ಸೃಷ್ಟಿಯಾದರೆ, ಖಂಡಿತವಾಗಿಯೂ ಸಹ ಅವರುಗಳು ಬದುಕುತ್ತಾರೆ. ಆದರೆ ಇಂತಹ ಕಾರ್ಯಕ್ರಮಗಳಿಗಾಗಿ ಆ ಹಣ ಹೋಗಿ, ಅದರಲ್ಲೂ ಗ್ಯಾರಂಟಿ ಯೋಜನೆಗಳಿಗಾಗಿ ಆ ಹಣವನ್ನು ತೆಗೆದು ಬಿಟ್ಟಿರುವುದು ಬಹಳ ಅನ್ಯಾಯವಾಗುತ್ತಿದೆ. ಈ ರೀತಿಯ ಅನ್ಯಾಯವಾಗುವುದಕ್ಕೆ ಯಾರೂ ಸಹ ಬಿಡಬಾರದು. ಸರ್ಕಾರ 52,000 ಸಾವಿರ ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡುವುದನ್ನು ಬಿಟ್ಟು..., ಕಾರಣಾಂತರದಿಂದಲೋ ಅಥವಾ ಚುನಾವಣೆಗೋಸ್ಕರನೋ ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿತು. ಬದ್ಧತೆಯನ್ನು ನೀಡಬೇಕು ನಿಜ ಆದರೆ, ಈ ರೀತಿಯಾಗಿ ಮೀಸಲಿಟ್ಟ ಹಣವನ್ನು ಅದಕ್ಕೆ ಬಳಕೆ ಮಾಡಿಬಿಟ್ಟರೆ..., ಸಹಜವಾಗಿಯೇ ಅಭಿವೃದ್ಧಿಯು ಕುಂಠಿತವಾಗಿದೆ. ಅದನ್ನು ನಾವು, ನೀವುಗಳೆಲ್ಲರೂ ಒಪ್ಪಿಕೊಳ್ಳಬೇಕು. ಎಲ್ಲಿಂದಲೋ ಯಾರದ್ದೋ ಹಣವನ್ನು ತಂದು ಹಾಕುವುದಲ್ಲ. ಇದನ್ನು ಯಾರೂ ಸಹ ಪ್ಯಾಕೆಟ್‌ನಿಂದ ತಂದು ಹಾಕುವುದಿಲ್ಲ. ಅಲ್ಲಿ ಬಂದ ಹಣವನ್ನು ಅಲ್ಲಿಯೇ ಹಾಕಬೇಕು. ಕೆರೆಯ ನೀರನ್ನು ಕೆರೆಗೆ ತಾನೇ ಚೆಲ್ಲುವುದು. ಆದರೆ, ನಮಗೆ ಆಗುವ ಅನ್ಯಾಯ ಸರಿಪಡಿಸುವವರು ಯಾರು? ಈ ಕಾರಣದಿಂದಾಗಿ ಇದರಿಂದ ಹಣವನ್ನು ತೆಗೆಯಬಾರದು. ಪತ್ರಕರ್ತರೊಬ್ಬರು ಮುಖ್ಯಮಂತ್ರಿಗಳಿಗೆ "ನೀವು ಎಲ್ಲಿಂದ ಹಣ ತರುತ್ತೀರಿ" ಎಂದು ಕೇಳಿದ್ದ ಪ್ರಶ್ನೆಗೆ "ಈ ಯೋಜನೆಗಳಿಗಾಗಿ ಅಂದಾಜು

55,000 ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು" ಎಂದು ಆ ಕಾಲದಲ್ಲಿ ನೀಡಿದ ಉತ್ತರವನ್ನು ನಾನು ಕೇಳಿಸಿಕೊಂಡಿದ್ದೇನೆ. "ನೀವು ಎಲ್ಲಿಂದ ಹಣ ತರುತ್ತೀರಿ, ರಾಜ್ಯದ ಅಭಿವೃದ್ಧಿ ಕುಂಠಿತವಾಗುವುದಿಲ್ಲವೇ" ಎಂದು ಅವರು ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ಪ್ರತ್ಯುತ್ತರ ನೀಡಿದ ಮುಖ್ಯಮಂತ್ರಿಗಳು "ಏನಿಲ್ಲರೀ! ಸೋರಿಕೆ ತಡೆಗಟ್ಟುಬಿಟ್ಟರೆ ಸಾಕು" ಎಂಬುದಾಗಿ ಉತ್ತರಿಸಿದ್ದರು. ಎಲ್ಲಿ ಸೋರಿಕೆಯಾಗುತ್ತಿದೆ ಎಂದು ನಾನು ಪ್ರಶ್ನಿಸುತ್ತೇನೆ. "ಬಿ.ಜೆ.ಪಿ. ಸರ್ಕಾರ 40% ಸರ್ಕಾರವಾಗಿದ್ದು, ಅದು ದುಡ್ಡು ಹೊಡಿಯುತ್ತಿದೆ; ಅದನ್ನು ನಿಲ್ಲಿಸಿಬಿಟ್ಟರೆ, ಇದು ಎಲ್ಲವೂ ಆಗುತ್ತದೆ" ಎಂಬುದಾಗಿ ಹೇಳಿದರು. ಇದನ್ನು ಎಲ್ಲಿ ನಿಲ್ಲಿಸಿದ್ದೀರಿ, ಎಲ್ಲಿ ಫುಲ್‌ಸ್ಟಾಪ್ ಹಾಕಿದ್ದೀರಿ? ಇದು ಎಲ್ಲಿ ಸೋರಿಕೆಯಾಗುತ್ತಿತ್ತು? ಎಂದು ನಾನು ಪ್ರಶ್ನಿಸುತ್ತೇನೆ. ಒಂದು ವೇಳೆ ಇದನ್ನು ನಿಲ್ಲಿಸಿದ್ದರೆ, ಅಲ್ಲಿ ಇದು ಕಾಣಬೇಕಾಗಿತ್ತು. ಅಂದರೆ ಅಲ್ಲಿ ಸೋರಿಕೆ ಇದ್ದಿದ್ದರೆ, ಅದನ್ನು ಸರ್ಕಾರವು ನಿಲ್ಲಿಸುತ್ತಿತ್ತು. ಸೋರಿಕೆಯನ್ನು ನಿಲ್ಲಿಸುವುದಕ್ಕಾಗಲಿಲ್ಲವೆಂದರೆ, ಅಲ್ಲಿ ಸೋರಿಕೆ ಇಲ್ಲವೆಂದು ನೀವೇ ಖಾತ್ರಿ ಪಡಿಸಿದ್ದೀರಿ. ಇದರ ವಿಚಾರಣೆಯನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ವಹಿಸಲಾಗಿತ್ತು. ಸದರಿ ಸಂಸ್ಥೆಯು ಅದು ಎಲ್ಲಾ ಸುಳ್ಳು ಎಂಬುದಾಗಿ ತಿಳಿಸಿತು. ಅಲ್ಲಿಗೆ ಎಲ್ಲವೂ ಮುಗಿದುಹೋಯಿತು. ಈಗ ಯಾರು ನಿಮಗೆ 40% ಎಂದು ಹೇಳಿಕೊಟ್ಟರೋ, ಅವರೇ ಬಂದು "ಸ್ವಾಮಿ, ಈಗ 60% ಸರ್ಕಾರ ನಡೆಯುತ್ತಿದೆ" ಎಂಬುದಾಗಿ ಹೇಳಿದರು. (ಮುಂದು)

(50)04-03-2025 (6-10) bkp-vk ಸಭಾಪತಿಯವರ ಉಪಸ್ಥಿತಿ

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ಮುಂದು)**

ಹೀಗೆ ನಮ್ಮ ಹಣದ ಬಗ್ಗೆ ನಾನು ಈಗ ಹೇಳುತ್ತೇನೆ. ಆಗ ಸೋರಿಕೆ ಆಗುತ್ತಿತ್ತೋ ಇಲ್ಲವೋ ಬೇರೆ ವಿಷಯ. ಈಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಹಣ ಸೋರಿಕೆಯಾಗುತ್ತಿದೆ. ಬೇರೆ ಬೇರೆಯದಕ್ಕೆ ಈ ಹಣ ಖರ್ಚಾಗುತ್ತಿದೆ. ಅದು ಯಾವ ಉದ್ದೇಶಗಳಿಗೆ ಬಳಕೆಯಾಗಬೇಕಾಗಿತ್ತೋ ಅದೆಲ್ಲವೂ ಕೂಡ ಬೇರೆಯಾಗಿರುತ್ತದೆ. ಸರ್ಕಾರ ಅಭಿವೃದ್ಧಿ ಮಾಡುತ್ತಿಲ್ಲ. ನಾನು ನಿನ್ನೆ ಮೊನ್ನೆ ಪತ್ರಿಕೆ ಓದಿ ತಿಳಿದುಕೊಂಡಿರುವ ಪ್ರಕಾರ ಶಾಸಕರ ಭವನಕ್ಕೆ(ಎಲ್.ಹೆಚ್) ಲಾಕ್‌ಗಳನ್ನು ಹಾಕಲಿಕ್ಕೆ 5 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದಾರೆ. ಅಂದರೆ, ಶಾಸಕರುಗಳಿಗೆ ಒಂದು ಲಾಕ್‌ಗಳನ್ನು ತೆಗೆದುಕೊಂಡು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲವೇ? ನಮ್ಮ ರೂಮ್‌ಗಳಿಗೆ ನಮ್ಮ ಲಾಕ್‌ಗಳನ್ನು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲವೇ? ಶಾಸಕರುಗಳ ರೂಮ್‌ಗಳಿಗೆ ಲಾಕ್‌ಗಳನ್ನು ಹಾಕುತ್ತಾರಂತೆ, ಅದಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರಂತೆ. ಆ ರೀತಿಯಲ್ಲಿ ಏತಕ್ಕೆ ಖರ್ಚು ಮಾಡಬೇಕು? ಆ ದುಡ್ಡನ್ನು ಬೇರೆ ಕೆಲಸಗಳಿಗೆ ವಿನಿಯೋಗ ಮಾಡಿ. ಈ ರೀತಿಯಲ್ಲಿ ಕ್ಷುಲ್ಲಕವಾಗಿ ವೆಚ್ಚ ಮಾಡುವುದನ್ನು ಕಡಿಮೆ ಮಾಡಿದರೆ ಅಭಿವೃದ್ಧಿಗಳು ಕಾಣುತ್ತವೆ.

**ಸಭಾಪತಿಯವರು:-** ಶಾಸಕರ ಭವನ-1 ಅನ್ನು ಹೊರತುಪಡಿಸಿ ಮಾಡಲಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಆ ಕಾರಣದಿಂದ ನಾವು ಇವತ್ತಿನ ದಿವಸ ಬಡವರಿಗೆ ಬೇಕಾಗಿರುವಂತಹದ್ದು ಬಹು ಮುಖ್ಯವಾಗಿ ಆರೋಗ್ಯ, ಮೊದಲನೆಯದಾಗಿ, ವಿದ್ಯಾಭ್ಯಾಸವನ್ನು ಕೊಡಬೇಕು. ಎರಡನೆಯದ್ದು ಆರೋಗ್ಯವನ್ನು ಕೊಡಬೇಕು. ಈ ಎರಡರಲ್ಲಿ ಮಾತ್ರ ಸರ್ಕಾರ ಹೊಂದಾಣಿಕೆ ಮಾಡಿಕೊಳ್ಳಬಾರದು. ಯಾರಿಗೆ ಶ್ರೀಮಂತಿಕೆ ಇದೆ, ಮಧ್ಯಮ ವರ್ಗದವರು ಇದ್ದಾರೆ, ಅವರು ಹೇಗಾದರೂ ಮಾಡಿ ತಮ್ಮ ಮಕ್ಕಳನ್ನು ಓದಿಸುವುದು, ಅವರ ಯೋಗಕ್ಷೇಮವನ್ನು ನೋಡುವುದೋ ಏನೋ ಮಾಡುತ್ತಾರೆ. ಆದು ಬಡವರಿಗೆ ಆಗುವುದಿಲ್ಲ. ಬಡವರಿಗೆ ಏನಾದರೂ ಆರೋಗ್ಯ ಕೆಟ್ಟರೆ ಸರ್ಕಾರಿ ಆಸ್ಪತ್ರೆ ಬಿಟ್ಟರೆ ಅವನಿಗೆ ಬೇರೆ ಏನೂ ಇರುವುದಿಲ್ಲ. ಕೆಲವು ಬಾರಿ ಅವನಿಗೆ ಬೇಕಾದ ಔಷಧಿಯು ಸಿಗುವುದಿಲ್ಲ. ಬೇರೆ ಕಡೆ ಹೋಗಿ ಅದನ್ನು ಸಾಲ ಮಾಡಿ ಕೊಟ್ಟು ಔಷಧಿ ತರುತ್ತಾನೆ. ನೀವು ಅಂತಹವರನ್ನು ಶ್ರೀಮಂತ ಮಾಡಿ. ಆ ಬಡವರಿಗೆ ಔಷಧಿಗಳು ಸಿಗುವಂತೆ ಮಾಡಿ. ಅವರ ಆರೋಗ್ಯವನ್ನು ಕಾಪಾಡಿ. ನೀವು ಅವರಿಗೆ ವಿದ್ಯೆಯನ್ನು ಕೊಡಿ. ಸರ್ಕಾರಿ ಶಾಲೆಗಳೆಲ್ಲವೂ ಕೂಡ ಬಡವರು ಹೋಗುವಂತಹ ಶಾಲೆಗಳಾಗಿರುತ್ತವೆ. ಅವುಗಳನ್ನು ಮುಚ್ಚುವಂತಹ ಕೆಲಸವನ್ನು ದಯಮಾಡಿ ಮಾಡಬೇಡಿ. ಸರ್ಕಾರದಿಂದ ಮಾಡಿರುವಂತಹ ವಿಶ್ವವಿದ್ಯಾನಿಲಯಗಳು ಇರಬಹುದು, ಅಲ್ಲಿಗೆ ಬಡವರೇ ಹೋಗುತ್ತಾರೆ. ಏಕೆಂದರೆ, ಅವರುಗಳು ಬೇರೆ ಕಡೆ ಶುಲ್ಕವನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಇವತ್ತು ನಾವು ನೋಡಿರುವಂತೆ 8 ಲಕ್ಷ, 10 ಲಕ್ಷ, 20 ಲಕ್ಷ ಶುಲ್ಕವನ್ನು ಇವತ್ತು ಬಡವರು ಯಾರು ಕಟ್ಟಲಿಕ್ಕೆ ಸಾಧ್ಯವಿದೆ? ಉನ್ನತ ಮಟ್ಟದಲ್ಲಿರುವಂತಹ ವಿದ್ಯಾ ಕೇಂದ್ರಗಳು, ಅದರಲ್ಲೂ ಖಾಸಗಿ ವಿದ್ಯಾ ಕೇಂದ್ರಗಳು ಶ್ರೀಮಂತಿಕೆಯಿಂದ ವಿದ್ಯಾ ಕೇಂದ್ರಗಳನ್ನು ನಡೆಸುತ್ತಾರೆ. ಕೆಲವರಿಗೆ false prestige ಇದೆ. ಏ, ನನ್ನ ಮಗ ಅಲ್ಲಿಯೇ ಓದಬೇಕೆಂದು ಹಂಬಲಿಸುತ್ತಾರೆ. ಪಾಪ, ಅವನಿಗೆ ತಿನ್ನಲಿಕ್ಕೆ ಇರುವುದಿಲ್ಲ. ಅವರು ಎಷ್ಟು ಕಷ್ಟಪಡುತ್ತಾರೆನ್ನುವುದನ್ನು ಗಮನಿಸಬೇಕು. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯ ಹಣವನ್ನು ಈ ರೀತಿಯಲ್ಲಿ ದಯಮಾಡಿ ಸರ್ಕಾರ ಪೋಲು ಮಾಡಬಾರದು. ನಾನು ಅವರಲ್ಲಿ ಈ ಬಗ್ಗೆ ಮನವಿ ಮಾಡುತ್ತೇನೆ. ಇಷ್ಟೆಲ್ಲದಕ್ಕಿಂತ ಡಯಾಲಿಸಿಸ್ ವಿಚಾರವಾಗಿ ಹೇಳುವುದಾದರೆ ಶ್ರೀಮಂತರಿಗೆ ಅದೇಕೋ ಕಾಯಿಲೆಗಳು ಸಹ ಕಡಿಮೆಯೇ ಬರುತ್ತವೆ. ಏಕೆಂದರೆ, ಅವರು ಶುಚಿ ಮತ್ತು ರುಚಿಯನ್ನು ಎರಡನ್ನೂ ಸಹ ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಬಡವರಿಗೆ ಯಾವ ಶುಚಿ ಮತ್ತು ಯಾವ ರುಚಿ ಇರುತ್ತದೆ? ಎರಡೂ ಸಹ ಅವರಿಗೆ ಇರುವುದಿಲ್ಲ. ಹೊಟ್ಟೆಪಾಡಿನ ಆ ಸಂದರ್ಭವನ್ನು ಗೆದ್ದುಕೊಳ್ಳಬೇಕಷ್ಟೆ. ಅವನಿಗೆ ಏನು ಸಿಕ್ಕಿದರೂ ಸರಿ. ಶುಚಿತ್ವವೂ ಇರುವುದಿಲ್ಲ, ರುಚಿತ್ವವೂ ಇರುವುದಿಲ್ಲ. ಈ ಕಾರಣಗಳಿಂದ ಅವರಲ್ಲಿ ಈ ರೋಗಗಳು ಕೂಡ ಹೆಚ್ಚಾಗಿ ಬರುತ್ತವೆ. ಆ ಕಾರಣದಿಂದ ನಮ್ಮ ಈ ಡಯಾಲಿಸಿಸ್ ಕೇಂದ್ರಗಳೆಲ್ಲವನ್ನೂ ಕೂಡ ಸ್ವಲ್ಪ ಮಟ್ಟಿಗೆ ಉನ್ನತ ಮಟ್ಟಕ್ಕೆ ಏರಿಸಿ, ಎಲ್ಲಾ ಕಡೆಯೂ ಸಿಗುವ ಹಾಗೆ ಮಾಡಬೇಕು. ಈಗ ಕೇಂದ್ರ ಸರ್ಕಾರ ಮೊನ್ನೆ ಎಲ್ಲಾ ಜಿಲ್ಲೆಗಳಿಗೂ ಒಂದೊಂದು ಕ್ಯಾನ್ಸರ್ ಕೇಂದ್ರಗಳನ್ನು ತೆರೆಯುವಂತಹ ಕೆಲಸಗಳನ್ನು ಮಾಡಿದೆ. ಇದು

ಉಪಯುಕ್ತವಾದ ಕೆಲಸವಾಗಿದೆ. ಇಂತಹ ವಿಚಾರಗಳಲ್ಲಿ ರಾಜ್ಯ ಸರ್ಕಾರವೂ ಕೂಡ ಇನ್ನಷ್ಟು ಉತ್ತಮವಾದ ಕೆಲಸವನ್ನು ಮಾಡಬೇಕಾಗಿದೆ. ಎಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಸಿಗುವಂತೆ ಮಾಡಿದರೆ ಸರ್ಕಾರವನ್ನು ಜನ ಯಾರೇ ಆದರೂ ಮೆಚ್ಚುತ್ತಾರೆ. ಬಡವರಂತೂ ಮೆಚ್ಚಿಯೇ ಮೆಚ್ಚುತ್ತಾರೆ. ಇನ್ನು ಇತ್ತೀಚೆಗೆ ನಮಗೆ ಕರುಳು ಕಿತ್ತು ಬರುವಂತಹ ವಿಷಯ ಏನೆಂದರೆ, ಬಾಣಂತಿಯರು ಆಸ್ಪತ್ರೆಗಳಲ್ಲಿ ಅಸುನೀಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮ ಜರುಗಿಸಬೇಕು. ಅದನ್ನು ತೀಕ್ಷಣವಾಗಿ ಪರಿಗಣಿಸಬೇಕು. ಏಕೆಂದರೆ, ಆ ಹೆಣ್ಣುಮಕ್ಕಳು ಅಪೌಷ್ಟಿಕತೆಯಿಂದಲೂ ತೊಂದರೆ ಪಡುತ್ತಿರುತ್ತಾರೆ, ಮತ್ತೆ ಈ ಔಷಧಿಗಳ ಕಾರಣವೂ ಸಹ ಇರುತ್ತದೆ. ಕೆಲವು ಕಡೆ ಕೆಲವು ಔಷಧಿಗಳನ್ನು ಬಳಸಬಾರದು ಎಂದು ಇದ್ದರೂ ಸಹ ಬಳಕೆಯಾಗಿರುವಂತಹದ್ದು ಇದೆ. ಇಕೆಲವು ಬಾರಿ ಇದು ಅಜಾಗರೂಕತೆಯಿಂದ ಆಗಿರುವಂತಹದ್ದೂ ಇದೆ. ಇಂತಹವುಗಳು ಘಟನೆಗಳಾಗಿರುತ್ತವೆ. ಮತ್ತೆ ಸಣ್ಣ ಕಂದಮ್ಮಗಳು ಹುಟ್ಟಿದ ತಕ್ಷಣ ಪ್ರಾಣ ಕಳೆದುಕೊಳ್ಳುವಂತಹದ್ದು ಏನಿದೆ, ಅದರ ಬಗ್ಗೆಯೂ ಕೂಡ ಅಷ್ಟೇ ಜಾಗ್ರತೆಯನ್ನು ತೆಗೆದುಕೊಳ್ಳಬೇಕು. ಇವುಗಳಿಗೆಲ್ಲಾ ಅಂದರೆ, ವಿದ್ಯಾಭ್ಯಾಸಕ್ಕೆ ಮತ್ತು ಆಸ್ಪತ್ರೆಗೆ ತಮ್ಮ ಬಜೆಟ್‌ನಲ್ಲಿಯೇ ಹೆಚ್ಚು ಹಣವನ್ನು ಕೊಟ್ಟರೂ ಸಹ ಯಾರು ಸಹ ನಿಮ್ಮನ್ನು ಏನೂ ಕೇಳುವುದಿಲ್ಲ. ತಾವು ಏನು ಡಿಫೆನ್ಸ್‌ಗೆ ಹಣವನ್ನು ಕೊಡುವುದಿಲ್ಲ. ಡಿಫೆನ್ಸ್ ನಮ್ಮ ಕೈಯಲ್ಲಿ ಇರುವುದಿಲ್ಲ. ಬಾರ್ಡರ್ ಅನ್ನು ನಾವು ಕಾಯಬೇಕಾಗಿಲ್ಲ. ಅದೆಲ್ಲವನ್ನು ಕೇಂದ್ರ ಸರ್ಕಾರ ನೋಡಿಕೊಳ್ಳುತ್ತದೆ. ಕೇಂದ್ರ ಸರ್ಕಾರ ಅದೆಲ್ಲವನ್ನು ಮಾಡುವುದರಿಂದ ಆ ಸಮಸ್ಯೆಗಳು ನಮ್ಮಲ್ಲಿ ಇರುವುದಿಲ್ಲ. ನಮ್ಮಲ್ಲಿನ ಸಮಸ್ಯೆಗಳ ಬಗ್ಗೆ, ಆದ್ಯತೆ ಮೇರೆಗೆ ಕೆಲವು ಕೆಲಸಗಳನ್ನು ನಾವು ಮಾಡಿಕೊಂಡರೆ ನಮಗೆ ಬಹಳ ಒಳ್ಳೆಯದಾಗುತ್ತದೆ. ಅಂಗಾಂಗ ಕಸಿ ಕೇಂದ್ರಗಳು ಕೂಡ ಕೆಲವು ಕಡೆ ಆಗುವುದೇ ಇಲ್ಲ. ನಮ್ಮಲ್ಲಿ ಆ ವ್ಯವಸ್ಥೆಗಳೇ ಇರುವುದಿಲ್ಲ. ಅಂತಹವುಗಳನ್ನು ನಮ್ಮ ಆಸ್ಪತ್ರೆಗಳಲ್ಲಿಯೇ ಮಾಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಯಾವುದೇ ಕಾರಣಕ್ಕೆ ಸರ್ಕಾರ ಈ 9 ವಿಶ್ವವಿದ್ಯಾನಿಲಯಗಳನ್ನು ಮುಚ್ಚುವುದನ್ನು ಕೈಬಿಡಬೇಕು. ಒಂದು ಸಮಯದಲ್ಲಿ ಅಲ್ಲಿ ನಷ್ಟ ಇರಬಹುದು. ಅಲ್ಲಿ ಹಣ ಇಲ್ಲದೇ ಇರಬಹುದು. ಅಲ್ಲಿ ಉತ್ಪತ್ತಿ ಇಲ್ಲದೇ ಇರಬಹುದು. ಅಂತಹವುಗಳನ್ನು ಎಲ್ಲಿ ಉತ್ಪತ್ತಿ ಇದೆಯೋ ಅಲ್ಲಿಗೆ ಕೊಡುವಂತಹ ಕೆಲಸ ಮಾಡಬೇಕು. ಇಲ್ಲದೇ ಇದ್ದರೆ ಮಾಡಲಿಕ್ಕೆ ಆಗುವುದೇ ಇಲ್ಲ. ಅದನ್ನು ಮಾಡಬಾರದು. ಇದರ ಜೊತೆಗೆ ವೈದ್ಯಕೀಯ ವಿಶ್ವವಿದ್ಯಾನಿಲಯಗಳಿಗೂ ಉತ್ತೇಜನ ಕೊಡಬೇಕು. ಇನ್ನು ಕೆ.ಕೆ.ಆರ್.ಡಿ.ಬಿ. ವಿಷಯ ಪ್ರಸ್ತಾಪ ಆಗಿದೆ. ಪ್ರತಿ ವರ್ಷ 5,000 ಕೋಟಿ ರೂಪಾಯಿಗಳನ್ನು ಕೊಡುವಂತಹದ್ದು ಇದೆ. ಕಳೆದ ವರ್ಷದಲ್ಲಿ ಕೇವಲ 2,500 ಕೋಟಿ ರೂಪಾಯಿಗಳು ಕೊಡಲಾಗಿದೆ ಎನ್ನುವ ವರದಿ ಇದೆ. ಆದರೆ, ರಾಜ್ಯಪಾಲರ ಭಾಷಣದಲ್ಲಿ 5,000 ಕೋಟಿ ರೂಪಾಯಿಗಳು ಎಂದು ಇದೆ. ಅದನ್ನು ಇನ್ನೂ ಕೊಟ್ಟಿರುವುದಿಲ್ಲ. ಅದು ಪರಿಪೂರ್ಣವಾಗಿಲ್ಲ. ಆದ್ದರಿಂದ, ಈ ತಪ್ಪು ಅಂಕಿ-ಅಂಶಗಳನ್ನು ಕೊಡಬಾರದು. ನೀವು ಅದನ್ನು ಕೊಟ್ಟುಬಿಡಿ. ಅದನ್ನು ಕ್ಲಿಯರ್ ಮಾಡಿಬಿಟ್ಟು ನೀವು ಹೇಳಿ. ಅನಂತರ ಆ ಹಣ ಎಲ್ಲಿಗೆ ಹೋಗುತ್ತದೆ ಎಂದು ಗೊತ್ತಾಗುವುದಿಲ್ಲ.

ಅದು ಸಣ್ಣ ಪುಟ್ಟದಾಗಿಯೇ ಹೋಗುತ್ತದೆ. ಆ ರಸ್ತೆಯ ಗುಂಡಿ ಹಾಗೆಯೇ ಇರುತ್ತದೆ. ಕೆಲಸ ಮಾತ್ರ ಆಗಿದೆ ಎಂದು ಹೇಳುತ್ತಾರೆ. ಅಲ್ಲಿನ ಪಿಡಿಓಗಳು ಏನು ಕೆಲಸ ಮಾಡುತ್ತಾರೋ ಗೊತ್ತಾಗುವುದಿಲ್ಲ. ನಾನೂ ಸಹ ಯಾದಗಿರಿ ಜಿಲ್ಲೆಯನ್ನು ತೆಗೆದುಕೊಂಡಿದ್ದೇನೆ. ಅದು ತುಂಬಾ ಹಿಂದುಳಿದ ಜಿಲ್ಲೆಯಾಗಿರುತ್ತದೆ. ಅಲ್ಲಿ ಏನಾದರೊಂದು ಕೆಲಸ ಮಾಡಿದರೆ ನಮಗೂ ಸ್ವಲ್ಪ ಹೆಸರು ಬರುತ್ತದೆ. ದೂರದ ಪ್ರದೇಶವಾದ ಆ ಜಿಲ್ಲೆ ತುಂಬಾ ಹಿಂದುಳಿದ ಜಿಲ್ಲೆಯಾಗಿರುತ್ತದೆ. ನನಗೆ ಬರತಕ್ಕಂತಹ ಅನುದಾನವನ್ನು ಅಲ್ಲಿಗೆಂದೇ ಕೊಡುತ್ತೇನೆ. ಏಕೆಂದರೆ, ನಾನು ಈ ಅನುದಾನವನ್ನು ಬೆಂಗಳೂರಿನಲ್ಲಿ ಏನಾದರೂ ಖರ್ಚು ಮಾಡಿದರೆ ಸಮುದ್ರಕ್ಕೆ ಸಕ್ಕರೆ ಹಾಕಿದಂತಾಗುತ್ತದೆ. ನಾವು ಎಷ್ಟು ಸಕ್ಕರೆ ಹಾಕಿದರೂ ಸಹ ಸಮುದ್ರದ ನೀರು ಉಪ್ಪಾಗಿಯೇ ಇರುತ್ತದೆ. ಅದಕ್ಕೋಸ್ಕರ ಅಲ್ಲಿಗೆ ಹೋಗಿ ಒಂದಿಷ್ಟು ಏನಾದರೂ ಮಾಡಿದರೆ ಅಲ್ಲಿನ ಜನರಿಗಾದರೂ ಒಳ್ಳೆಯದಾಗುತ್ತದೆ. ನಾವು ಅಲ್ಲಿಗೆ ಹೋಗುತ್ತೇವೆ, ಇಷ್ಟೊಂದು ಹಣ ಅಲ್ಲಿಗೆ ಹೋಗುತ್ತದೆ, ಅದನ್ನು ಯಾವ ಸಮುದ್ರಕ್ಕೆ ಹಾಕುತ್ತಾರೆಂದು ನನಗೆ ಇದುವರೆವಿಗೂ ಗೊತ್ತಾಗಿಲ್ಲ. ಇಲ್ಲಿಂದ ಕೊಡತಕ್ಕಂತಹ ಹಣ ಸರಿಯಾಗಿ ವಿನಿಯೋಗ ಆಗುವುದೇ ಆದಲ್ಲಿ ಆ ಜನ ನಮ್ಮನ್ನು ಕೋಪದ ಕಣ್ಣುಗಳಿಂದ ನಮ್ಮನ್ನು ನೋಡುವಂತಹ ಅವಶ್ಯಕತೆ ಬರುವುದಿಲ್ಲ. ಇವತ್ತು ಈ ಪ್ರಾಂತೀಯವಾಗಿ ಅವರೇ ಬೇರೆ, ನಾವೇ ಬೇರೆಯಾಗಿರುತ್ತೇವೆ. ಆದ್ದರಿಂದ ಇಲ್ಲಿ ಕೊಡತಕ್ಕಂತಹ ಹಣ ಸದ್ವಿನಿಯೋಗ ಆಗುವ ರೀತಿಯಲ್ಲಿ ಮಾಡಬೇಕು. ಮತ್ತೆ ಕೌಶಲ್ಯಾಭಿವೃದ್ಧಿ ಬಗ್ಗೆ ಭಾಷಣದಲ್ಲಿ ಹೇಳಿದ್ದಾರೆ. ಇವತ್ತು ಕೌಶಲ್ಯಾಭಿವೃದ್ಧಿಗೆ ನಾವು ಏನಾದರೂ ಉತ್ತೇಜನ ಕೊಟ್ಟಿದ್ದೇ ಆದರೆ ಕನಿಷ್ಟ ಪಕ್ಷ ಅವರು ವ್ಯಾಪಾರ ಮತ್ತೊಂದನ್ನು ಮಾಡಿ ಬದುಕುತ್ತಾರೆ. ಬಹುಶಃ ಅದು ತಮಗೆ ಬರುತ್ತದೆ ಎಂದು ಕಾಣುತ್ತದೆ. (ಮುಂದು)

(051) 04.03.2025 06.20 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-**

ಕೊಳಚೆ ನಿರ್ಮೂಲನಾ ಮಂಡಳಿಯಿಂದಿರಬಹುದು, ವಸತಿ ಯೋಜನೆಗಳಿಂದಿರಬಹುದು. ಹಿಂದೆ ಪ್ರಾರಂಭವಾಗಿದ್ದ ಕೆಲಸ ಪೂರ್ಣಗೊಂಡಿರುವುದನ್ನು ಬಿಟ್ಟರೆ ಈ ಬಾರಿ ಹೊಸದಾಗಿ ಮನೆಗಳಾಗಿಲ್ಲ ಎಂದು ನನಗೆ ಅನುಮಾನವಿದೆ. ಮಾಡಬೇಕು ಎನ್ನುವ plan ಇದೆ. ಈ ವರ್ಷದಲ್ಲಿ ಆಗಿಲ್ಲ. ಆದರೆ ಆಗಿದೆ ಎನ್ನುವ ರೀತಿಯಲ್ಲಿ ವರದಿ ಇದೆ. ನಮ್ಮಲ್ಲಿ ಬರುವ ಅನೇಕ ಬಡವರು ಮೊದಲು ಬಂದು ಕೇಳುವುದು ವಸತಿ, ಮನೆ. ಸೂರು ಬೇಕಣ್ಣಾ ನಮಗೆ, ಸೂರಿಲ್ಲ ಎಂದು ಕೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಕೂಡ ಸರ್ಕಾರ ತೀಕ್ಷ್ಣವಾದ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಕೊಡಿಸುವುದು ಈ ಬಾರಿ ವಿಳಂಬವಾಗಿದೆ. ಇಲ್ಲಿಂದ ಅವರಿಗೆ ವೀಸಾ ಆಗಿಬಿಟ್ಟಿರುತ್ತದೆ. ಅಲ್ಲಿ ಅಡ್ಮಿಷನ್‌ಗೆ ಅವರು ಕರೆಯುತ್ತಿರುತ್ತಾರೆ. ಇವರು

ಇಲ್ಲಿಂದ ಹೋಗುವುದಕ್ಕಾಗುವುದಿಲ್ಲ. ಏಕೆಂದರೆ ಫೀಸ್ ಕಟ್ಟಿರುವುದಿಲ್ಲ. ಇಲ್ಲಿ ಹಣ sanction ಆಗಿರುವುದಿಲ್ಲ. ಇದು ಸಮಾಜ ಕಲ್ಯಾಣ ಇಲಾಖೆಗೆ ಬರುವುದರಿಂದ ಸುಮಾರು ಜನ ನಮ್ಮ ಹತ್ತಿರ ಬರುತ್ತಾರೆ. ನಾವು ಆಯುಕ್ತರಿಗೆ ಮಾತನಾಡುತ್ತೇವೆ ಅಥವಾ ವ್ಯವಸ್ಥಾಪಕ ನಿರ್ದೇಶಕರಿಗೆ ಮಾತನಾಡುತ್ತಿರುತ್ತೇವೆ. ಹಣದ ಕೊರತೆ ಇದೆ ಎಂದು ಹೇಳುತ್ತಾರೆ. ಈ ವರ್ಷದಲ್ಲಿ ನಾನು ಸುಮಾರು ಜನ ಹಾಸ್ಟೆಲ್ ಮ್ಯಾನೇಜರ್‌ಗಳಿಗೆ ಫೋನ್ ಮಾಡಿದ್ದೇನೆ. ಅವರು ಏನೋ ಒಂದು ಮಾನದಂಡ ಇಟ್ಟುಕೊಂಡಿರುತ್ತಾರೆ. ಅಷ್ಟು ಮುಗಿದ ಮೇಲೆ ನಮ್ಮಲ್ಲಿ ಸೀಟ್ ಇಲ್ಲ, ಬೇರೆ ಕಡೆ ಹೋಗಿ ಎಂದು ಹೇಳುತ್ತಾರೆ. ಏಕೆಂದರೆ ಅಷ್ಟು ಬಿಟ್ಟರೆ ಅವರಿಗೆ ಬೇರೆ ಹಣ ಬರುವುದಿಲ್ಲ. ವರ್ಷ ಆದರೂ ಅವರಿಗೆ ಹಣ ತಲುಪುವುದಿಲ್ಲ. ಈ ರೀತಿಯ ನ್ಯೂನತೆಗಳು ಸಾಕಷ್ಟಿವೆ. ಬಜೆಟ್‌ನಲ್ಲಿ ಎಲ್ಲಾ ಸರಿ ಇವೆ.

ಹಿಂದುಳಿದ ವರ್ಗಗಳ ಯುವಜನರಿಗೆ ನಾಗರಿಕ ಸೇವಾ ಪರೀಕ್ಷೆಗಳ ತರಬೇತಿ ನೀಡಿ ಸ್ಪರ್ಧಾತ್ಮಕತೆಯನ್ನು ಕಾಪಾಡುವಲ್ಲಿ ಆಡಳಿತ ಇಲಾಖೆ ವಿಫಲವಾಗಿದೆ. ಏಕೆಂದರೆ ರಾಜ್ಯದಿಂದ ವರ್ಷಾವಾರು ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಳಿಗೆ ಹಾಸ್ಟೆಲ್‌ಗಳಲ್ಲಿ ಓದಬೇಕು, ಅಲ್ಲಿಯೇ train up ಆಗಿ ಪರೀಕ್ಷೆ ಬರೆಯಬೇಕು. ಯುಪಿಎಸ್‌ಸಿ ಪರೀಕ್ಷೆ ಬರೆಯುವವರು ದೆಹಲಿಗೆ ಹೋಗಬೇಕು. ಇಲ್ಲಿ ಅಷ್ಟೊಂದು ಇಲ್ಲ. ಅಲ್ಲಿ ಹೋಗಿ ಅವರಿಗೆ ಮಾಡುವುದಕ್ಕಾಗುವುದಿಲ್ಲ. ಮೊದಲು ಸರ್ಕಾರ ಅವರಿಗೆ ಸೀಟ್ ಸಿಕ್ಕಿದೆ ಎಂದ ತಕ್ಷಣ ವಿದ್ಯಾರ್ಥಿ ವೇತನ ಕೊಡುತ್ತಿತ್ತು. ಈಗ ಬಹಳ ಜನರು ಈ ಸಮಸ್ಯೆಯಿಂದಾಗಿ ನಾವು ಓದುವುದಕ್ಕಾಗುತ್ತಿಲ್ಲ ಎಂದು ಹೇಳಿದ್ದಾರೆ. ಈ ರೀತಿ ಅನೇಕ ವಿಚಾರಗಳಿವೆ.

**ಸಭಾಪತಿಯವರು:-** ನಿಮಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ? ನೀವು ಸಾ:೦5.5೦ಕ್ಕೆ ಪ್ರಾರಂಭ ಮಾಡಿದ್ದೀರಿ. ಈಗ ಒಂದೂವರೆ ಗಂಟೆಯಾಯಿತು. ಇನ್ನೂ ಎಷ್ಟು ಸಮಯ ಸಾಕಾಗುತ್ತದೆ? ನಾನು ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅಡ್ಡಿ ಮಾಡುವಂತಿಲ್ಲ. ಹಾಗಾಗಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. I have no objection. ಅದಕ್ಕನುಗುಣವಾಗಿ ನಾನು adjust ಮಾಡಿಕೊಳ್ಳಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಸಮಯವನ್ನು ವ್ಯರ್ಥ ಮಾಡಲು ನನಗೂ ಇಷ್ಟ ಇಲ್ಲ. ಇರುವ ಕೆಲವು ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಮಾತನಾಡುತ್ತಿದ್ದೇನೆ. ಇನ್ನೊಂದು 2೦ ನಿಮಿಷಗಳು ಮಾತನಾಡುತ್ತೇನೆ. ನಮ್ಮಲ್ಲಿಯೂ ಅನೇಕರು ಮಾತನಾಡುವವರಿದ್ದಾರೆ. ಮಾತನಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ತಾವು ಆಗಲೇ ಎದ್ದು ಹೋಗಿದ್ದಿರಿ. ತಮಗೆ ಮನೆಯಲ್ಲಿ ಏನಾದರೂ ಸಮಸ್ಯೆಯಿದ್ದರೆ ಹೇಳಿ. ನಾವೆಲ್ಲರೂ ಬಂದು ಗೌರವಯುತವಾಗಿ ಮಾತನಾಡಿ ಬರುತ್ತೇವೆ. ನೀವು ರಾತ್ರಿ 8 ಗಂಟೆಯವರೆಗೆ ಕುಳಿತುಕೊಳ್ಳಿ ಎಂದರೆ ನಮಗೆ ಕಷ್ಟವಾಗುತ್ತದೆ.

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಭೋಜೇಗೌಡರೆ, ನೀವು ಆಗಿನಿಂದಲೂ ಇದನ್ನೇ ಹೇಳುತ್ತಿದ್ದೀರಿ. ನಿಮಗೆ ಏನಾದರೂ ತೊಂದರೆ ಇದೆಯೇ?

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ, ನಾನು ಆಗಲೇ ಊಟ ತರಿಸಲಿಕ್ಕೆ ಹೋಗಿದ್ದೆನು. ಮೊದಲೇ ತಿಳಿದಿದ್ದರೆ ನಿಮ್ಮ ಕೈಯಲ್ಲಿಯೇ ತರಿಸುತ್ತಿದ್ದೆನು.

ನೋಡಿ ಮಾನ್ಯ ವಿರೋಧ ಪಕ್ಷದ ನಾಯಕರೆ, 14 ಮಂದಿ ಬಿಜೆಪಿಯಿಂದ ಹೆಸರನ್ನು ಕೊಟ್ಟಿದ್ದಾರೆ. ಜೆಡಿಎಸ್‌ನಿಂದ 4 ಜನರು ಕೊಟ್ಟಿದ್ದಾರೆ. ಮಾನ್ಯ ಸಿ.ಟಿ.ರವಿ, ಮಾನ್ಯ ಶಶೀಲ್ ಜಿ.ನಮೋಶಿ, ಮಾನ್ಯ ಶರವಣ ಅವರು absent ಇದ್ದಾರೆ. ಹಾಗಾಗಿ ನೀವು ಇವತ್ತಿಗೆ ಮುಗಿಸಿದರೆ ಅವರಿಗೆ ನಾಳೆ ಅವಕಾಶ ಕೊಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಆಯಿತು ಮಾನ್ಯ ಸಭಾಪತಿಯವರೆ, ನಾನು ಇವತ್ತಿಗೆ ಮುಗಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಬೆಂಗಳೂರಿನ ವಾಹನ ದಟ್ಟಣೆಯ ಬಗ್ಗೆ ಹೇಳಿದೆ. ಹೆಬ್ಬಾಳದ ವಿಷಯ ಅಷ್ಟೇ ಹೇಳಿದೆನು. ಈ ಮೆಟ್ರೊ, ಮೆಟ್ರೊ ಫೀಡರ್ ಬಸ್‌ಗಳಿದ್ದರೂ ಸಹಿತ ಜನರು ಓಡಾಡುವುದು ಕಷ್ಟವಾಗಿದೆ. ಇದನ್ನು ಕೂಡ ಸರ್ಕಾರ ಗಮನಿಸಬೇಕಾಗಿದೆ. ಆದರೆ ನಾವು ಇಲ್ಲಿ ಎಲ್ಲವೂ ಸರಿಯಿದೆ ಎನ್ನುವ ರೀತಿ ತೋರಿಸಿದರೆ ಜನರು ಸಂಕಷ್ಟದಿಂದ ಪಾರಾಗಲಿಕ್ಕೆ ಸಾಧ್ಯವಿಲ್ಲ. ರಾಜ್ಯಾದ್ಯಂತ ಕೆಲವು ಶಾಲಾ ವಾಹನಗಳಲ್ಲಿ ಪ್ರಾಣಿಗಳಂತೆ ಮಕ್ಕಳನ್ನು ತುಂಬುವ ಪದ್ಧತಿ ಇದೆ. ಬೆಂಗಳೂರಿನಲ್ಲಿ ಸ್ವಲ್ಪ ಮಟ್ಟಿಗೆ ಕಂಟ್ರೋಲ್ ಮಾಡುವುದನ್ನು ನೋಡುತ್ತಿರುತ್ತೇವೆ. ಆದರೂ ಕೂಡ ತುಂಬಿರುತ್ತವೆ. ಏನಾದರೂ ಪರಿಸ್ಥಿತಿ ಬಿಗಡಾಯಿಸಿತೆಂದರೆ ಮಕ್ಕಳನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಅದರಿಂದಾಗಿ ಇವುಗಳನ್ನು ಸರಿಪಡಿಸುವ ಕೆಲಸವನ್ನು ಮಾಡಬೇಕು.

ಈಗಾಗಲೇ ಬಿಡಿಎ ವತಿಯಿಂದ ನಿರ್ಮಿಸಲಾಗಿರುವ ವಸತಿ ಸಮುಚ್ಚಯಗಳಲ್ಲಿ ಹಲವಾರು ನ್ಯೂನತೆಗಳಿರುವ ಕಾರಣ ಕೊಳ್ಳುವವರೇ ಇಲ್ಲದಂತಾಗಿದೆ. ಇದು ಸೈಟ್‌ಗಳಲ್ಲ. ಈ multi storage buildings ಗಳಲ್ಲಿ ಸುಮಾರು ಖಾಲಿಯಿವೆ. ಏಕೆಂದರೆ ಅವು ಕಳಪೆಯಿರಬಹುದು. ವ್ಯವಸ್ಥೆಯಿಲ್ಲದೆ ಇರಬಹುದು. ಲೇಔಟ್‌ಗಳನ್ನೂ ಮಾಡಿದ್ದಾರೆ. ಅದು ಯಾವಾಗ ಸೈಟ್ ಕೊಡುತ್ತಾರೋ ನಮಗಂತೂ ಗೊತ್ತಿಲ್ಲ. ನಮಗೂ ಸೈಟ್ ಇಲ್ಲ, ಕಾಯುತ್ತಿದ್ದೇವೆ. ಬಿಡಿಎ ಹಗರಣಗಳ ಆಗರವಾಗಿದೆ. ಒಂದು ಸೈಟ್ ಅನ್ನು ಮೂರು ಜನರಿಗೆ ಅಗ್ರಿಮೆಂಟ್. ಅದು ಬೇರೆಯವರು ಯಾರೋ ಮಾಡುವುದಲ್ಲ, ಬಿಡಿಎನವರೇ ಮಾಡುವುದು. ಇಬ್ಬರಿಗೆ ರಿಜಿಸ್ಟರ್. ಇಂತಹದ್ದನ್ನು ಮಾಡುವುದಿದೆ. ಅವರು ಮಾಡುವಂತಹ ಕಾಮಗಾರಿಗಳು ಕೂಡ ಆ standard ಅನ್ನು ಹೊಂದಿಲ್ಲ. ಬೆಂಗಳೂರಿನ ವ್ಯಾಪ್ತಿ ಪ್ರತಿನಿತ್ಯ ವಿಸ್ತಾರವಾಗುತ್ತಿರುವುದರಿಂದ ಕುಡಿಯುವ ನೀರಿನ ಪರಿಸ್ಥಿತಿ ತೀವ್ರ ತೊಂದರೆಗೆ ಒಳಗಾಗುತ್ತಿದೆ. ನಾವೆಲ್ಲಾ ನಂಬಿರುವುದು ಯಾವುದನ್ನು? ಬೆಂಗಳೂರಿಗೆ ಸಂಬಂಧವಿಲ್ಲದ ಮೈಸೂರಿನ KRS ನಿಂದ ನೀರನ್ನು ತಂದು ಬೆಂಗಳೂರಿನವರಿಗೆ ಕುಡಿಸುತ್ತಿದ್ದಾರೆ. ಅದರ ಪರಿಸ್ಥಿತಿ ಸರಿ ಹೋಗಿಲ್ಲ ಎಂದರೆ ಬೆಂಗಳೂರಿಗೆ alternative ಏನಿದೆ? ಇದಕ್ಕಾಗಿ ತರುತ್ತಿರುವ ಎತ್ತಿನಹೊಳೆ ಯೋಜನೆ ಇನ್ನೂ ಕನಸಾಗಿಯೇ ಇದೆ. ಅದು ಎಲ್ಲಿಗೆ ತಲುಪಬೇಕಾಗಿತ್ತೋ

ಅಲ್ಲಿಗೆ ತಲುಪಿಲ್ಲ. ಬೆಂಗಳೂರಿಗೆ alternative ಏನು? ಮುಂದಾಲೋಚನೆಯಿಟ್ಟುಕೊಂಡು ಜಾಗ್ರತೆಯಿಂದ ಇದೆಲ್ಲವನ್ನೂ ಮಾಡಬೇಕು.

ಮಳೆನೀರು ಕೊಯ್ಲು ವಿಚಾರಕ್ಕೆ ಬಂದರೆ ನಮ್ಮಲ್ಲಿ ಇದ್ದ ಎಲ್ಲಾ ಕೆರೆಗಳನ್ನು ಮುಚ್ಚಿ ಮನೆಗಳನ್ನು ಕಟ್ಟಿಯಾಗಿದೆ. ಈಗ ಎಲ್ಲಿಯಾದರೂ ಮಳೆ ನೀರು ಹರಿದು ಹೋಗಬೇಕೆಂದರೆ ಮನೆಗಳ ಮೇಲೆಯೇ ಹರಿದು ಹೋಗಬೇಕು. ರಾಜಕಾಲುವೆಗಳನ್ನು ಇವತ್ತು ತೆಗೆಯುತ್ತೇವೆ, ನಾಳೆ ತೆಗೆಯುತ್ತೇವೆ, ನಾಳಿದ್ದು ತೆಗೆಯುತ್ತೇವೆ ಎಂದು ಪ್ರತಿ ದಿನ ಹೇಳುತ್ತೇವೆ. ನಾವು ಹೇಳುತ್ತೇವೆ, ಪತ್ರಿಕೆಯವರೆಲ್ಲಾ ಬರೆದುಕೊಳ್ಳುತ್ತಾರೆ. ಇಷ್ಟಾದ ಮೇಲೆ ಅದಕ್ಕೆ ಏನೂ ಕ್ರಮ ಇಲ್ಲ. ಈ ರೀತಿ ಬೆಂಗಳೂರು ನಗರ ಹಾಗೂ ಉಪ ನಗರಗಳಲ್ಲಿ ಗುಣಮಟ್ಟವಿಲ್ಲದೆ ಸೊರಗುವ ಪರಿಸ್ಥಿತಿ ಇದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಬೆಂಗಳೂರು ನಗರ planned city ನೇ ಅಲ್ಲ.

(ಮುಂದು)

(052) 04-03-2025/6.30/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):-**

ಇದು ಹಲವಾರು ಹಳ್ಳಿಗಳನ್ನು ಕೂಡಿಸಿದ ಸಿಟಿ. ಮಾನ್ಯ ಕೆಂಪೇಗೌಡರು ಒಂದು ಕಾಲದಲ್ಲಿ ಇದ್ದಂತಹ ಎಲ್ಲಾ ಹಳ್ಳಿಗಳನ್ನೆಲ್ಲಾ ಸೇರಿಸಿ ಏನೋ ಒಂದು ಪ್ಲಾನ್ ಮಾಡಿದರು, ಅದು ಆಯಿತು. ಅದಕ್ಕೆ ಇವತ್ತು ಏನಾಗಿದೆ ಎಂದರೆ, ಡಬಲ್ ರೋಡ್ ಇರುವಂತಹ ರಸ್ತೆಗಳು ಬಹಳ ವಿರಳ. ಈಗ ಇಲ್ಲಿ ಕಬ್ಬನ್ ರೋಡ್ ಒಂದೇ ಕಾಣುತ್ತಿರುವುದು. ಇನ್ನು ಎಲ್ಲವೂ ಕೂಡ one way ಗಳೇ ಇದೆ. ಈ ಮೊದಲೆಲ್ಲಾ ಅವುಗಳು ಡಬಲ್ ರೋಡ್ ಗಳಾಗಿದ್ದವು. ಆದರೆ ಇವತ್ತಿನ ಪರಿಸ್ಥಿತಿ ಬದಲಾಗಿದೆ. ಈಗ ಐದು ವರ್ಷವಾದ ಮೇಲೆ ನಾವು ಏನು ಮಾಡಬೇಕು? ಈಗ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿಯ ಹತ್ತಿರ ಇದೆ. ಅಲ್ಲೆಲ್ಲಾ ಇನ್ನೂ ಜಮೀನುಗಳು ಖಾಲಿಯಿವೆ. ಅಲ್ಲಿ ಕೆ.ಐ.ಎ.ಡಿ.ಬಿ.ಯವರು ಕೈಗಾರಿಕೆ ಮಾಡಿದ್ದಾರೆ. ಅಲ್ಲಿ ಇನ್ನು ಬೇಕಾದಷ್ಟು ಜಮೀನುಗಳಿವೆ. ಅಲ್ಲಿ ಇನ್ನೂ ಕೈಗಾರಿಕೆಗಳನ್ನು ಮಾಡುತ್ತೇವೆಂದು ಹೋಗುತ್ತಿದ್ದಾರೆ. ಇನ್ನೂ ರೈತರ ಜಮೀನುಗಳನ್ನು ತೆಗೆದುಕೊಳ್ಳಬೇಕು, ಕೈಗಾರಿಕೆಗಳನ್ನು ಮಾಡಬೇಕು ಎಂಬುದೇ ಇದೆ. ಈಗ ಬೆಂಗಳೂರಿನ ಬಳಿ ಮಾಡುವುದಕ್ಕಿಂತ ಬಾಗೇಪಲ್ಲಿಗೆ ಹೋಗಲಿ. ಅಲ್ಲಿರುವಂತಹ ಭೂಮಿ ಬೆಳೆ ಬೆಳೆಯುವಂತಹ ಭೂಮಿ ಅಲ್ಲ. ಆದುದರಿಂದ ಅಲ್ಲಿ ಕೈಗಾರಿಕೆ ಮಾಡಬಹುದು. ಅದಕ್ಕೆ ಏನು ಕಷ್ಟವಿದೆ? ಈಗ ಪಕ್ಕದಲ್ಲಿಯೇ airport ಬೇಕು. ಏಕೆಂದರೆ, ಅಲ್ಲಿನ value ಬಹಳ ಇರುತ್ತದೆ. ಇದನ್ನೆಲ್ಲಾ ಬಿಟ್ಟು, ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಮಾಡಲಿ. ಜನರಿಗೆ ಸವಲತ್ತುಗಳನ್ನು ನೀಡಿದರೆ ಅವರು ಎಲ್ಲಿಗಾದರೂ ಬಂದು ಮಾಡುತ್ತಾರೆ. ಇದನ್ನು ಮಾಡಬೇಕು. ಇವತ್ತು ಬೆಂಗಳೂರಿನ ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ದೇವನಹಳ್ಳಿಯನ್ನು ಕೇಂದ್ರ ಮಾಡಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಯಲಹಂಕದವರೆಗೆ ಈಗ New Delhi and Old Delhi ಹೇಗೆ ಇದೆಯೋ ಅದೇ ರೀತಿಯಲ್ಲಿ

at least, ಒಂದು planned city ಯನ್ನಾದರೂ ಮಾಡಬೇಕಲ್ಲವೇ? ಈಗ Old Delhi ಒಳಗೆ ಇದುವರೆಗೆ ಹೋಗುವುದಕ್ಕೆ ಕೆಲವರಿಗೆ ಆಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ New Delhi ಯನ್ನು ನೋಡಿ ಖುಷಿಪಟ್ಟುಕೊಂಡು ನಾವು ಬಂದುಬಿಡುತ್ತೇವೆ. ಇನ್ನು ಐದು ವರ್ಷಗಳಾದ ಮೇಲೆ ಬೆಂಗಳೂರಿನ ಪರಿಸ್ಥಿತಿಯೂ ಸಹ ಅದೇ ಪರಿಸ್ಥಿತಿಯಂತೆ ಆಗುತ್ತದೆ. ಅದಕ್ಕೆ ಒಂದು planned city ಯನ್ನು ಅಲ್ಲಿ ಎಲ್ಲಾದರೂ ಮಾಡಬೇಕು. ಅದು ಬಿಟ್ಟು ಇನ್ನೊಂದು airport. ಈಗಾಗಲೇ ಇಲ್ಲೊಂದು airport ಇದೆ. ಅದನ್ನು domestic airport ಮಾಡಲಿ. ಬಹಳ ಕಷ್ಟದ ದಿನಗಳಲ್ಲಿ ಆ airport ಅನ್ನು ಮಾಡಿರುವುದು. ಇವತ್ತಿನ ದಿವಸ ಅಲ್ಲಿನ ಜಾಗಕ್ಕೆ ಚಿನ್ನದ ಬೆಲೆ ಇದೆ. ಅದನ್ನು ಸುಮ್ಮನೆ ಏಕೆ ಬಿಡಬೇಕು? ಅದನ್ನು ಬಿಟ್ಟು ಇನ್ಯಾರದೋ ರೈತರ ಭೂಮಿಯನ್ನು ಕಸಿದುಕೊಂಡು, ಇನ್ನೊಂದು airport ಮಾಡಿ, ರಿಯಲ್ ಎಸ್ಟೇಟ್‌ಗಳಿಗೆ ಉತ್ತೇಜನ ಕೊಡುವುದರ ಬದಲು, ಇರುವಂತಹ airport ಅನ್ನು ಏಕೆ ಉಪಯೋಗ ಮಾಡಬಾರದು? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಪ್ರತಿದಿನ ಪತ್ರಿಕೆಗಳಲ್ಲಿ ಅಲ್ಲೊಂದು airport ಗೆ ಯೋಜನೆ ಮಾಡುತ್ತಿದ್ದೇವೆ. ಮತ್ತೊಂದು ಯೋಜನೆ ಮಾಡುತ್ತಿದ್ದೇವೆ. ಇದನ್ನು ಮಾಡುವುದಕ್ಕಿಂತ ನನಗೆ ಅನಿಸುವಂಥದ್ದು, ಈಗ HAL Airport ಏನಿದೆ, ಅದು ಸೂಕ್ತ ಇದೆ. ಈಗಲೂ ಕೂಡ private Jet ಗಳೆಲ್ಲಾ ಅಲ್ಲಿಂದಲೇ ಹೋಗುತ್ತವೆ. ಮಾನ್ಯ ಪ್ರಧಾನ ಮಂತ್ರಿಗಳು ಬಂದರೆ, ಅಲ್ಲಿಂದಲೇ ಬರುತ್ತಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೋಗುವುದು ಮತ್ತು ಬರುವುದು ಇದ್ದರೆ, ಅದನ್ನೇ ಬಳಕೆ ಮಾಡಿಕೊಳ್ಳುತ್ತಾರೆ. ಅದು ಸರಿಯಿದೆಯಲ್ಲ, ನಾವು ಅದನ್ನು ಏಕೆ ಬಳಕೆ ಮಾಡಬಾರದು? ಇನ್ನೊಂದನ್ನು ಮಾಡುವುದಕ್ಕಿಂತ ಇದನ್ನು ಬಳಕೆ ಮಾಡುವುದರಿಂದ ನಮಗೆ ಒಳ್ಳೆಯದಾಗುತ್ತದೆ. ಹಣ ಮತ್ತು ರೈತರ ಜಮೀನು ಸಹ ಉಳಿಯುತ್ತದೆ. ರಿಯಲ್ ಎಸ್ಟೇಟ್‌ಗಳಿಗೆ ಉತ್ತೇಜನ ಕೊಡುವುದಕ್ಕೆ ಇಂತಹ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ಸರ್ಕಾರಕ್ಕೆ ಮನವಿಯನ್ನು ಮನವಿ ಮಾಡುವುದಕ್ಕೆ ಇಚ್ಛಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ. ನಾರಾಯನಸ್ವಾಮಿಯವರೆ, ತಾವು ಹೇಳಿದಂತೆ ತಾವು ಮಾತನಾಡಲು ಇನ್ನು ಕೇವಲ ಏಳು ನಿಮಿಷ ಮಾತ್ರ ಬಾಕಿ ಇದೆ.

**ಶ್ರೀ ಛಲವಾದಿ ಟಿ ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು commit ಆಗಿಬಿಟ್ಟಿದ್ದೇನೆ. ಆದರೂ ಸಹ ಅಷ್ಟಕ್ಕೆ ಮುಗಿಸುತ್ತೇನೆ. ಆದುದರಿಂದ ನಾನು ಹೇಳುವಂಥದ್ದು ಬೆಂಗಳೂರಿನ ಕನ್ನಡ ಭಾಷೆ ಮತ್ತು ಸಂಸ್ಕೃತಿ ಬಲವರ್ಧನೆಗಾಗಿ ನಾವು ಸಹಕಾರ ನೀಡಬೇಕು. ಈಗ ಸಂಸ್ಕೃತಿ ಎಂದ ತಕ್ಷಣ ಸಿನಿಮಾದಿಂದ ಹಿಡಿದು ಎಲ್ಲವೂ ಸಹ ಬರುತ್ತದೆ. ಕನ್ನಡಕ್ಕೆ ಆದ್ಯತೆ ಕೊಡಬೇಕು. ಸಂಘಟನೆಗಳು ಹೋರಾಟ ಮಾಡುತ್ತವೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಏನಾಗುತ್ತಿದೆ ಎಂದರೆ, ನಮ್ಮ ಮೇಲೆ ಬೇರೆ ಬೇರೆ ರಾಜ್ಯಗಳ ಭಾಗಗಳಲ್ಲಿ ದರ್ಪ ನಡೆಯುತ್ತಿದೆ. ನಾವು ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದಿರುವುದನ್ನು ನೋಡಿದ್ದೇವೆ. ಈಗ ಕನ್ನಡ ಮಾತನಾಡು ಎಂದಿದ್ದಕ್ಕೆ ಬಸ್ ಕಂಡಕ್ಟರ್ ಅನ್ನು ಹಿಡಿದುಕೊಂಡು ಹೊಡೆಯುತ್ತಾರೆ. ಅವನಿಗೆ ಬರಲಿಲ್ಲವೆಂದರೆ ಪಾಪ ಅವರು ಏನು ಮಾತನಾಡುತ್ತಾನೆ? ಒಬ್ಬ ಸರ್ಕಾರಿ ನೌಕರರನ್ನು ಹೊಡೆದಿದ್ದೇವೆ ಎಂದು ಅದಕ್ಕೆ ಏನಾದರೂ

ಬರುತ್ತದೆಂದು ಇದಕ್ಕೆ ಬೇರೆ ವಿಷಯವನ್ನು ಸೇರಿಸಿಬಿಟ್ಟರು. ಎಲ್ಲಾ ಭಾಗಗಳಲ್ಲೂ ಈ ರೀತಿಯಾಗುತ್ತಿದ್ದರೆ, ನಮ್ಮ ಗತಿ ಏನಾಗಬೇಕು? ನಾವೂ ಕೂಡ ಆಗಲಿ ಯಾವುದೇ ಭಾಷೆ ಬಾರದೇ ಇರುವಂತಹವರನ್ನು ಕನ್ನಡ ಮಾತನಾಡು ಎಂದು ಮಾಡುವುದಲ್ಲ. ನಾವು ಕನ್ನಡ ಕಲಿಸುವಂತಹ ಕೆಲಸ ಮಾಡಬೇಕು. ನಾವು ಅವನನ್ನು ಪರಿವರ್ತನೆ ಮಾಡಬೇಕು. ಅದನ್ನು ಬಿಟ್ಟಿರುವುದಕ್ಕೆ ಇವತ್ತು ಈ ರೀತಿ ಆಗುತ್ತಿದೆ. ಆಮೇಲೆ ಸಂಘಟನೆಗಳನ್ನಾಗಲಿ, ಸಿನಿಮಾ ರಂಗವನ್ನಾಗಲಿ, ಬೇರೆ ಯಾವುದೇ ರಂಗವನ್ನಾಗಲಿ ನಾವು ಅವರು ನಮ್ಮ ಪಕ್ಷದ ಕಾರ್ಯಕರ್ತರು ಎಂದು ತಿಳಿದುಕೊಳ್ಳಬಾರದು. ನಾವು ಇವತ್ತು ನೋಡುತ್ತಿದ್ದೇವೆ. ನಮಗೆ ಸಹಕಾರ ಕೊಡಲಿಲ್ಲ, ಅದಕ್ಕೆ ನಿಮ್ಮ ನಟ್ಟು, ಬೋಲ್ಟ್ ಅನ್ನು ಸರಿಪಡಿಸುತ್ತೇವೆಂದು ಹೇಳುತ್ತಾರೆ. ಈ ನಟ್ಟು ಬೋಲ್ಟ್ ನಮಗೂ ಇದೆ ಅಲ್ಲವೇ? ಈಗ ಜನರು ಮನಸ್ಸು ಮಾಡಿದರೆ ನಮ್ಮ ನಟ್ಟು, ಬೋಲ್ಟ್ ಅನ್ನು ಹೇಗೆ ತಿರುಗಿಸುತ್ತಾರೆಂದು ನಾವು ನೋಡಿದ್ದೇವೆ. ಈಗ ಯಾರೂ ಸಹ ಉದ್ಧಟತನದಿಂದ ನಡೆದುಕೊಳ್ಳಬಾರದು. ನಾವು ಶಾಸಕರಿರಬಹುದು, ಮಂತ್ರಿಗಳಿರಬಹುದು, ಮುಖ್ಯಮಂತ್ರಿಗಳಿರಬಹುದು. ಪ್ರಜಾಪ್ರಭುತ್ವದಲ್ಲಿ ನಾವೆಲ್ಲರೂ ಕೂಡ ಜನರ ಸೇವಕರೆ ಹೊರತು, ನಾವು ಏನು ಅವರ ರಾಜರು ಅಲ್ಲ. ಪ್ರಜಾಪ್ರಭುತ್ವ ಏಕೆ ಬಂದಿದೆ ಎಂದರೆ, ರಾಜಪ್ರಭುತ್ವವನ್ನು ಬದಿಗಿರಿಸಿ, ಪ್ರಜಾಪ್ರಭುತ್ವವನ್ನು ಈ ದೇಶಕ್ಕೆ ಕೊಟ್ಟಿರತಕ್ಕಂಥದ್ದು. ಈ ರಾಜಪ್ರಭುತ್ವವನ್ನು ಕಡೆಗಣಿಸಿದರೆ, ಪ್ರಜಾಪ್ರಭುತ್ವಕ್ಕೆ ಬೆಲೆ ಬರುತ್ತದೆ. ಈ ಬೆಲೆ ಬರಬೇಕಾದರೆ, ಇಲ್ಲಿ ಕುಳಿತುಕೊಂಡು....

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಮಾನ್ಯ ಸದಸ್ಯರು ಆ ಕಾರ್ಯಕ್ರಮದಲ್ಲಿ ಇರಲಿಲ್ಲ. ಆದರೆ, ನಾವು ಭಾಗವಹಿಸಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಯಾವ context ನಲ್ಲಿ ಹೇಳಿದರು ಎಂದರೆ, ರಾಜ್ಯದ ಪರವಾಗಿ ಹೋರಾಟ ಮಾಡುವಾಗ, ಪಕ್ಷಾತೀತವಾಗಿ ಅವರು ಭಾಗವಹಿಸಬೇಕೆಂದು ಹೇಳಿದರು. ಅವರು ಆ intention ನಲ್ಲಿ ಹೇಳಿದ್ದಾರೆಯೇ ಹೊರತು, ಬೇರೆ ಏನೂ ಇಲ್ಲ.

**ಶ್ರೀ ಛಲವಾದಿ ಟಿ ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಗಲಿ ಬಿಡಿ. ನಾನು ಯಾರ ಹೆಸರನ್ನು ಸಹ ಹೇಳಿಲ್ಲ ಮತ್ತು ತೆಗೆದುಕೊಂಡಿಲ್ಲ. ನಾನು ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದೇನೆ. ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ತರಬೇಕೆಂದು, ಹಲವಾರು ತ್ಯಾಗಗಳಾಗಿವೆ. ಅದಕ್ಕೆ ನಾವು ಅವರುಗಳನ್ನು ನೆನಪಿಸಿಕೊಳ್ಳಬೇಕು. ಸುಮಾರು 558 ರಾಜಮನೆತನಗಳು ಈ ದೇಶವನ್ನು ಆಳುತ್ತಿದ್ದರು. ಆಗಲೂ ಸಹ ಜನರು ಸರಿಯಾಗಿಯೇ ಇದ್ದರು. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಏಕೆ ತರಬೇಕಾಗಿತ್ತು? ನಾವೆಲ್ಲರೂ ಒಂದೇ ಎಂಬುದನ್ನು ನೆನಪಿಸಿಕೊಳ್ಳಬೇಕಾಗಿತ್ತು. ಈ ಕಾರಣದಿಂದ ಪ್ರಜಾಪ್ರಭುತ್ವ ಬಂದ ಮೇಲೆ ಅಧಿಕಾರ ಹಿಡಿದು ಕುಳಿತುಕೊಂಡಂತಹವರು ಮತ್ತೆ ರಾಜಪ್ರಭುತ್ವವನ್ನು ಮಾಡಬಾರದು ಎಂದು ನಾನು ಹೇಳುತ್ತೇನೆ. ಅದು ಯಾರೇ ಆಗಿರಲಿ. ನಾನು ಇದನ್ನು ಹೇಳಿರತಕ್ಕಂಥದ್ದು. ಆದುದರಿಂದ, ಯಾರನ್ನೂ ಸಹ ಕೇವಲ ಮಾಡುವಂಥದ್ದನ್ನು ಮಾಡಬಾರದು. ನಾವು ಎಷ್ಟು ಸೌಮ್ಯದಿಂದ ಹಲವರ ಜೊತೆಯಲ್ಲಿ ಹೋಗುತ್ತೇವೆಯೋ ಅಷ್ಟೆ

ಅವರು ಕೂಡ ನಮ್ಮನ್ನು ಗೌರವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ. ಆದುದರಿಂದ ನಾವು ಗೌರವದಿಂದ ನಡೆದುಕೊಳ್ಳುವುದನ್ನು ಕಲಿತುಕೊಳ್ಳಬೇಕು. ಇವತ್ತು ನೀರಾವರಿಗೆ ಆದ್ಯತೆ ಕೊಡಬೇಕು. ರೈತರು ಏನು ಶ್ರಮಪಟ್ಟು ನಮಗೆ ಏನು ಆಹಾರವನ್ನು ಒದಗಿಸಿಕೊಡುತ್ತಾರೆ ಅವರ ಬೆಳೆಗೆ ಸರಿಯಾದ ಬೆಲೆ ಕೊಡಬೇಕು. ಇದೆಲ್ಲಾ ಆಡಳಿತ ನಡೆಸುವವರ ಕರ್ತವ್ಯವಾಗಬೇಕು. ನಾವು ಅವರ ಶ್ರಮಕ್ಕೆ ಬೆಲೆ ಕೊಡಲಿಲ್ಲವೆಂದರೆ, ಯಾರೂ ಸಹ ನಮ್ಮನ್ನು ಗೌರವಿಸುವುದಿಲ್ಲ. ಈ ರೀತಿಯಲ್ಲಿ ನಾವು ನಮ್ಮ ನಡೆಯನ್ನು ಬಹಳ ಯೋಚನೆ ಮಾಡಿ ಮಾಡಬೇಕು. ನಾವು ಕೇವಲ ನಿಂತು ಭಾಷಣ ಮಾಡಿದರೆ ಯಾವ ಸಮಸ್ಯೆಗಳು ಬಗೆಹರಿಯುವುದಿಲ್ಲ. ಆ ಕಾರಣದಿಂದ ಇನ್ನು ಅನೇಕ ವಿಚಾರಗಳಿವೆ. ಅದಕ್ಕೆ ನಾನು ಒಂದೇ ಮಾತಿನಲ್ಲಿ ಹೇಳಿದ್ದೇನೆ. ಇವತ್ತು ರಾಜ್ಯದಲ್ಲಿ ಎಲ್ಲರಿಗೂ ಅನಿಸಿರುವುದು ಏನೆಂದರೆ, ಭ್ರಷ್ಟಾಚಾರ ತುಂಬಿದೆ ಎಂದು. ಅಭಿವೃದ್ಧಿ ಆಗುತ್ತಿಲ್ಲ. ಎಲ್ಲರೂ ಕೂಡ ಸಂಕಷ್ಟದಲ್ಲಿದ್ದಾರೆ. ಕೆಲವು ಗ್ಯಾರಂಟಿಗಳನ್ನು ನೀಡಿದಾಗ, ಎಷ್ಟೋ ಜನರಿಗೆ ಗ್ಯಾರಂಟಿಗಳೇ ಬೇಕಾಗಿಲ್ಲ. ಆದರೆ, ಕೊಡುವಾಗ ಕೊಟ್ಟಿದ್ದಾರೆ. ಆದರೆ, ಕೆಲವರಿಗೆ ಅವುಗಳ ಅವಶ್ಯಕತೆ ಇದೆ. ಅದನ್ನು ನಾವು ವಿರೋಧ ಮಾಡಬಾರದು. ಆದರೆ, ಅದು ಅವರಿಗೆ ಸರಿಯಾಗಿ ತಲುಪುವ ರೀತಿಯಲ್ಲಿ ಮಾಡಿದರೆ, ಅವಶ್ಯಕತೆ ಇರುವಂತಹವರಿಗೆ ಅದು ಉಪಯುಕ್ತ. ಅವಶ್ಯಕತೆ ಇಲ್ಲದೇ ಇರುವಂತಹವರಿಗೆ ಏನೂ ಪ್ರಯೋಜನವಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಗ್ಯಾಸ್ ಅನ್ನು voluntary ಯಾಗಿ ಕೊಟ್ಟಂತೆ, ಅವರು voluntary ಯಾಗಿ ಕೊಡಬೇಕು.

**ಶ್ರೀ ಛಲವಾದಿ ಟಿ ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಬಹಳ ನೋಡಿದ್ದೇನೆ. ಯಾರೂ ಸಹ voluntary ಯಾಗಿ ಬಿಡುವುದಿಲ್ಲ. ಕೆಲವು ಬಾರಿ ಏನಪ್ಪ ನಮ್ಮ ಮನೆ ಕಡೆಗೆ ಇನ್ನೂ ಬಂದು ನೋಡಿಲ್ಲ ಎಂದು ಹೇಳುವಂತಹ ದೊಡ್ಡವರನ್ನು ಸಹ ನೋಡಿದ್ದೇನೆ. ಈಗ ಪುಕ್ಕಟೆ ಬರುವುದು ನನಗೂ ಇರಲಿ ಮತ್ತು ಇವರಿಗೂ ಇರಲಿ ಎಂದು ಕೇಳುವುದು ತಪ್ಪು. ಆದರೆ, ಸಮಾಜದಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ.

(ಮುಂದು)

(053) 04.03.2025 06.40 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ಮುಂದು):-**

ಆದರೆ, ಸರ್ಕಾರದಿಂದ ನೀಡುವಂತಹ ಯಾವುದೇ ಕೊಡುಗೆಗಳನ್ನು ಯಾರು ಕೂಡ ತಮ್ಮ ಕೈಯಿಂದ ಕೊಡುವುದಿಲ್ಲ. ಸರ್ಕಾರ ಕೊಡತಕ್ಕಂತಹ ಪ್ರತಿಯೊಂದು ಪೈಸೆಯು ಕೂಡ ಜನರಿಂದ ಕ್ರೋಡೀಕರಿಸಿದ ಸಂಪತ್ತಾಗಿದೆ. ಆ ಸಂಪತನ್ನು ನಾವು ವಿನಿಯೋಗ ಮಾಡುವಾಗ ಯಾರಿಗೆ ಕೊಟ್ಟರೆ, ಆ ಸಂಪತ್ತಿಗೆ ಬೆಲೆ ಬರುತ್ತದೆ ಎಂಬುದನ್ನು ಚಿಂತನೆ ಮಾಡಬೇಕು. ಏಕೆಂದರೆ, ಆ ಸಂಪತ್ತಿಗೆ ಬೆಲೆ ಬರಬೇಕಲ್ಲವೇ? ಆ ಜನರಿಗೂ ಕೂಡ ಆ ಸಂಪತ್ತು ತಲುಪಿದಾಗ ಅವರು ಖುಷಿಪಡಬೇಕಲ್ಲವೇ? ಅಜೀರ್ಣವಾಗುವವರೆಗೆ ನಾವು ಊಟ ಕೊಟ್ಟರೆ ಪರಿಸ್ಥಿತಿ ಏನಾಗುತ್ತದೆ. ಅದರ ಬದಲಾಗಿ, ಹಸಿವು ಇದ್ದವನಿಗೆ ಊಟ ಕೊಟ್ಟರೆ, ಆತ ತನ್ನ ಊಟ ಮುಗಿಸಿದ ನಂತರ, "ದೇವರು ನಿನಗೆ

ಒಳ್ಳೆಯದನ್ನು ಮಾಡಲಿ. ನೀನು ಇನ್ನಷ್ಟು ಚೆನ್ನಾಗಿರು. ಇನ್ನು ಸಾವಿರ ಜನಕ್ಕೆ ಊಟ ಹಾಕುವಂತಹ ಶಕ್ತಿಯನ್ನು ಆ ಭಗವಂತನು ಕೊಡಲಿ" ಎಂದು ಹೇಳುತ್ತಾನೆ. ಆದರೆ, ಅಜೀರ್ಣವಾಗುವವರೆಗೆ ತಾವು ಏನಾದರೂ ಊಟ ಕೊಟ್ಟರೆ ಆತ, "ನಾನು ಯಾರೋ ಹಾಳಾದವನ ಮನೆಗೆ ಊಟಕ್ಕೆ ಹೋಗಿದ್ದೆನು. ಅದು ಏನು ಹಾಕಿದನೋ, ನನಗೆ ಅದನ್ನು ತಿಂದ ನಂತರ, ನನಗೆ ವಾಂತಿಯಾಯಿತು" ಎಂದು ಶಾಪ ಹಾಕಿಕೊಂಡು ಹೋಗುತ್ತಾನೆ. ಆ ಕಾರಣದಿಂದ ನಮ್ಮ ನಡವಳಿಕೆಗಳು ಕೂಡ ಆ ಜನ ಮೆಚ್ಚುವಂತಹ ರೀತಿಯಲ್ಲಿರಬೇಕು. ಅದರಿಂದಾಗಿ, ಜನ ಕಲ್ಯಾಣಕ್ಕಾಗಿ ನಾವೆಲ್ಲರೂ ಸೇರಿ ಕೆಲಸ ಮಾಡೋಣ. ಇವೊತ್ತಿನ ದಿವಸ ಗೌರವಾನ್ವಿತ ರಾಜ್ಯಪಾಲರಿಂದ ಏನು ಭಾಷಣ ಮಾಡಿಸಿದ್ದಾರೆ, ಅದರಲ್ಲಿ ಕೆಲವು ಅಂಕಿ-ಅಂಶಗಳು ಕೂಡ ತಪ್ಪಾಗಿವೆ. ಕೆಲವು ಅಸತ್ಯವಾದ ವಿಚಾರಗಳು ಇವೆ. ಕೆಲವು ಸಾರಿ ಆಡಳಿತ ಮಾಡುವವರು ಏನೆಂದು ಭಾವಿಸುತ್ತಾರೆಂದರೆ, ಇವೆಲ್ಲವನ್ನೂ ಯಾರು ನೋಡುವುದಕ್ಕೆ ಹೋಗುತ್ತಾರೆಂದು ಹೇಳುತ್ತಾರೆ. ಇತ್ತೀಚೆಗೆ ನಾನು ಒಂದು ವಿಡಿಯೋ ನೋಡಿರುತ್ತೇನೆ. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಬಗ್ಗೆ ಮಾನ್ಯ ಸಚಿವರೊಬ್ಬರು ಮಾತನಾಡುತ್ತಿರುವಾಗ, ಪ್ರಶ್ನೆ ಕೇಳಿದ ತಕ್ಷಣ, "ಏನ್ರೀ, ಬಡವರಿಗೆ ನಾವು ದುಡ್ಡು ಕೊಡುವುದು. ಏತಕ್ಕೆ, ನಿಮಗೆ ಅದು ಇಷ್ಟವಿಲ್ಲವೇ? ಆ ಬಡವರು ಉದ್ಧಾರವಾಗಬಾರದೇ?" ಎಂದು ಹೇಳುತ್ತಾರೆ. ಅದನ್ನು ಯಾರು ಬೇಡ ಎಂದಿದ್ದಾರೆ ಸ್ವಾಮಿ. ಮುಂದುವರೆದು, "ಕೇಂದ್ರ ಸರ್ಕಾರ ಐವತ್ತು ಲಕ್ಷ ಕೋಟಿ ಬಜೆಟ್ ಅನ್ನು ಮಂಡಿಸಿದ್ದು, ನಮ್ಮ ರಾಜ್ಯಕ್ಕೆ ಕೇವಲ ಅರವತ್ತು ಸಾವಿರ ಕೋಟಿ ಕೊಟ್ಟಿದ್ದಾರೆ" ಎಂದು ಹೇಳುತ್ತಾರೆ. ಇದು ಸುಳ್ಳು ಅಲ್ಲವೇ? ಸಚಿವರಾಗಿ ಅವರು ಇಂತಹ ಸುಳ್ಳು ಮಾತುಗಳನ್ನು ಹೇಳಬಹುದೇ? ಕೇಂದ್ರ ಸರ್ಕಾರ ಮೂರು ಲಕ್ಷ ಕೋಟಿಗೂ ಹೆಚ್ಚು ಹಣವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರೊಬ್ಬರು, "ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಕೇವಲ ಅರವತ್ತು ಸಾವಿರ ಕೋಟಿ ಕೊಟ್ಟಿದ್ದಾರೆ" ಎಂದು ಹೇಳಿರುತ್ತಾರೆ. ಅದನ್ನು ಜನರು ನೋಡಿದರು. ಆಗ, ಕೇಂದ್ರ ಸರ್ಕಾರ ನಮಗೆ ಈ ರೀತಿಯ ಮೋಸ ಮಾಡಿದೆ ಎಂದು ಮಾತನಾಡಿಕೊಂಡರು. ಇನ್ನು ಒಂದು ವಿಚಾರ ಏನೆಂದರೆ, ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ, "ಕೇಂದ್ರ ಸರ್ಕಾರ ಪದೇ ಪದೇ ನಮಗೆ ಮಲತಾಯಿ ಧೋರಣೆ ತೋರುತ್ತಿದೆ. ನಮಗೆ ಅನ್ಯಾಯ ಮಾಡುತ್ತಿದೆ, ಮೋಸ ಮಾಡುತ್ತಿದೆ" ಎಂದು ಹೇಳಿದರು. ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಎಷ್ಟು ಹಣ ಕೊಡಬೇಕೆಂದು ಒಂದು ಸಾರಿ ನಿಖರವಾದಂತಹ ಅಂಕಿ-ಅಂಶಗಳನ್ನು ಕೊಡಿ. ಅಂದರೆ, ಈ ವರ್ಷ ಇಷ್ಟು ಹಣ ನಮಗೆ ಬರಬೇಕಾಗಿತ್ತು ಅದು ಬಂದಿರುವುದಿಲ್ಲ ಎಂದು ಮಾಹಿತಿ ಕೊಡಿ. ನಾವು ಕೂಡ ಅಲ್ಲಿಗೆ ಹೋಗಿ ಬಟ್ಟೆ ಹಿಡಿದುಕೊಳ್ಳುತ್ತೇವೆ. ಜೊತೆಗೆ, ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರದ ಬಳಿ ಬರುತ್ತೇವೆ. ಮಾನ್ಯ ಸಚಿವರು ನಮ್ಮ ರಾಜ್ಯಕ್ಕೆ ಬಂದಾಗಲೆಲ್ಲಾ ಏನು ಹೇಳುತ್ತಾರೆಂದರೆ, "ನಾವು ತಿಂಗಳು ತಿಂಗಳು ಬರತಕ್ಕಂತಹದ್ದನ್ನು ಕಳುಹಿಸುತ್ತಿದ್ದೇವೆ. ಆದರೆ, ಅವರು ಸತ್ಯಕ್ಕೆ ದೂರವಾದಂತಹ ಮಾತುಗಳನ್ನು ಏತಕ್ಕೆ ಹೇಳುತ್ತಾರೋ ನಮಗೆ ಗೊತ್ತಿಲ್ಲ. ಇದು ರಾಜಕೀಯ" ಎಂದು ಅವರು ಹೇಳುತ್ತಾರೆ. ಕೇಂದ್ರದಲ್ಲಿ ಸಭೆಗಳು ಆದಾಗ ಸಂಬಂಧಪಟ್ಟ ಸಚಿವರು ಅಲ್ಲಿಗೆ ಹೋಗಬೇಕು. ಆ ಸಭೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಬೇಕು, ನಮ್ಮ ರಾಜ್ಯಕ್ಕೆ ಬರಬೇಕಾಗಿದ್ದನ್ನು ಕೇಳಬೇಕು ಮತ್ತು ತರಬೇಕು. ಅದನ್ನು ಬಿಟ್ಟು, "ಕೇಂದ್ರದಲ್ಲಿ ನಮ್ಮ ರಾಜ್ಯದ ಎಷ್ಟು ಜನ ಎಂ.ಪಿ.ಗಳು ಇದ್ದಾರೆ,

ಅವರು ಏನು ಮಾಡುತ್ತಿದ್ದಾರೆ" ಎಂದು ಕೇಳಿದರೆ ಅವರು ಏನು ಮಾಡುತ್ತಾರೆ? ಅವರವರ ಕೆಲಸ ಅವರು ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಅವರೇ ಹಣಕಾಸು ಮಂತ್ರಿಗಳಾಗಿದ್ದು, ಯಾವ ಯಾವ ದಿವಸ ಸಭೆಗಳಿಗೆ ಹೋಗಿದ್ದಾರೆ? ಈ ಮೊದಲು ಇದ್ದಂತಹ ಸರ್ಕಾರಗಳು ಶೇಕಡ 32 ರಷ್ಟು ಅನುದಾನ ಹಂಚಿಕೆ ಮಾಡುತ್ತಿದ್ದರು. ಈಗಿನ ಸರ್ಕಾರ ನಮ್ಮ ರಾಜ್ಯಕ್ಕೆ ಶೇಕಡ 42 ರಷ್ಟು ಕೊಡುತ್ತಿದೆ. ಜಿಎಸ್‌ಟಿಯಲ್ಲಿ ಬಹಳ ಗೊಂದಲ ಇದೆ. ಇಡೀ ದೇಶದಲ್ಲಿ ನಮ್ಮ ರಾಜ್ಯ ಅತೀ ಹೆಚ್ಚು ಜಿಎಸ್‌ಟಿ ಸಂಗ್ರಹ ಮಾಡುತ್ತಿದ್ದು, ಆ ಹಣ ಕೇಂದ್ರಕ್ಕೆ ಹೋಗಿ, ನಮ್ಮ ರಾಜ್ಯಕ್ಕೆ ಶೇಕಡ 13 ರಷ್ಟು ಮಾತ್ರ ಬರುತ್ತದೆ ಎಂದು ಹೇಳುತ್ತಾರೆ. ಆದರೆ ವಿಷಯ ಏನೆಂದರೆ, ಜಿಎಸ್‌ಟಿಯಲ್ಲಿ ಶೇಕಡ 50 ರಷ್ಟು ಹಣ ನಮ್ಮ ರಾಜ್ಯದಲ್ಲಿಯೇ ಉಳಿಯುತ್ತದೆ. ಇನ್ನುಳಿದ ಶೇಕಡ 50 ರಷ್ಟು ಕೇಂದ್ರಕ್ಕೆ ಹೋಗುತ್ತದೆ. ನಂತರ, ಅದರಲ್ಲಿ ಶೇಕಡ 21 ರಷ್ಟು ಪುನಃ ರಾಜ್ಯಕ್ಕೆ ಬರುತ್ತದೆ. ಇದನ್ನು ಯಾರು ಕೂಡ ಹೇಳುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಉಳಿದಿದ್ದರಲ್ಲಿ ಡಿಫೆನ್ಸ್‌ಗೆ ರಾಜ್ಯದ ಪಾಲು ಏನೂ ಇರುವುದಿಲ್ಲ. ಅದೇ ರೀತಿ, ರೈಲ್ವೆಗಳು ಮತ್ತು ಮೆಟ್ರೋ ಯೋಜನೆಗಳಿಗೆ ಕೇಂದ್ರ ಸರ್ಕಾರ ಹಣ ಕೊಡುತ್ತದೆ. ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಪಾಲು ಕೊಡುತ್ತದೆ. ಇದನ್ನು ಯಾರು ಕೂಡ ಹೇಳುವುದಿಲ್ಲ. ಅಲ್ಲೊಂದು ಪಕ್ಷದ ಸರ್ಕಾರ ಇದೆ. ಇಲ್ಲೊಂದು ಪಕ್ಷದ ಸರ್ಕಾರ ಇದೆ. ಸಾಂದರ್ಭಿಕವಾಗಿ ರಾಜಕೀಯ ಮಾಡತಕ್ಕಂತಹದ್ದು ಸಹಜವಾಗಿ ಇರುತ್ತದೆ. ಅದು ಸಹಜವಾಗಿ ಇರುವಾಗ, ಆ ಸರ್ಕಾರ ಈ ರೀತಿ ನಮಗೆ ಮಾಡಿತು ಎಂದು ಹೇಳುತ್ತೇವೆ. ಏಕೆಂದರೆ, ನಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ನಾವು ಅವರ ಮೇಲೆ ಹೇಳಬೇಕಾಗುತ್ತದೆ. ಇದರಿಂದಾಗಿ, ಅವರಿಗೆ ಏನೂ ಆಗಬೇಕಾಗಿಲ್ಲ. ಎಲ್ಲಾ ರಾಜ್ಯಗಳನ್ನು ಒಂದೇ ರೀತಿಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಆರ್ಥಿಕ ಸಚಿವರು ನೋಡಬೇಕಾಗುತ್ತದೆ. ಅವರು ಕೂಡ ಲೆಕ್ಕ ಕೊಡಬೇಕಲ್ಲವೇ? ಇಲ್ಲಿ ನಾವು ಹೇಗೆ ಸರ್ಕಾರವನ್ನು ಲೆಕ್ಕ ಕೇಳುತ್ತೇವೆಯೋ ಅದೇ ರೀತಿ, ಅವರನ್ನು ಸಹ ಅಲ್ಲಿ ಲೆಕ್ಕ ಕೇಳುವವರು ಇದ್ದಾರಲ್ಲವೇ? ಆದರೆ, ಜಿಎಸ್‌ಟಿ ವಿಚಾರದಲ್ಲಿ ಬಂದಾಗ, ಯಾವ ರೀತಿ proportionate ಆಗಿ ರಾಜ್ಯಗಳಿಗೆ ಹಂಚಿಕೆ ಮಾಡಬೇಕೆನ್ನುವುದನ್ನು ಆಯಾ ರಾಜ್ಯಗಳವರೇ ಒಪ್ಪಿಕೊಂಡಿರುವಂಥಾದ್ದಾಗಿದೆ. ಏಕೆಂದರೆ, ಜಿಎಸ್‌ಟಿ ಕೌನ್ಸಿಲ್ ಸಭೆಗಳು ನಡೆದಾಗ ಅಲ್ಲಿ ತಮ್ಮ ಆಕ್ಷೇಪಣೆ/ಅಭಿಪ್ರಾಯಗಳನ್ನು ಮಂಡಿಸಬೇಕಾಗಿರುತ್ತದೆ. ಆ ಕೌನ್ಸಿಲ್ ಸಭೆಗಳನ್ನು ಕೇಂದ್ರ ಸರ್ಕಾರ ನಡೆಸುವುದಿಲ್ಲ. It is an independent Body. ಅದನ್ನು ತೆಗೆದುಕೊಂಡು ನಾವು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಎಂದು ಜಗಳ ಆಡುವುದರಲ್ಲಿ ಅರ್ಥವಿಲ್ಲ. ಇಲ್ಲವಾದರೆ, ಒಂದು ಬಾರಿ ನಮಗೆ ಹೇಳಬೇಕು. ಅದೇನೆಂದರೆ, ನಮಗೆ ಈ ರೀತಿಯಾಗಿ ಅನ್ಯಾಯವಾಗಿದೆ. ನಮ್ಮ ರಾಜ್ಯಕ್ಕೆ ಇಷ್ಟೇ ಹಣ ಬರಬೇಕು ಎಂದು ನಿಖರವಾಗಿ ಹೇಳಬೇಕು. ಆ ಯೋಜನೆಯಲ್ಲಿ ಹಣ ಕಡಿಮೆ ಮಾಡಿಬಿಟ್ಟರು. ಅದೆಲ್ಲವೂ ಕೂಡ ಕಾನೂನಿನ ಪ್ರಕಾರ ಆಗಿರುತ್ತದೆ. ಕೆಲವು ಆಯೋಗಗಳನ್ನು ಮಾಡಿದಾಗ, ಅದಕ್ಕೆ ಯಾವುದೇ ಸರ್ಕಾರ ಹೊಣೆಯಾಗುವುದಕ್ಕೆ ಆಗುವುದಿಲ್ಲ. ಇಂತಹವುಗಳನ್ನು ನಾವು ಬದಿಗಿಟ್ಟು, smooth ಆಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒಳ್ಳೆಯ ಒಡಂಬಡಿಕೆ ಇಟ್ಟುಕೊಂಡು ಜನರ ಸಮಸ್ಯೆಗಳಿಗೆ ಪರಿಹಾರ ಕೊಡತಕ್ಕಂಥಹ ಕೆಲಸವನ್ನು ಮಾಡಬೇಕು. ಆದುದರಿಂದ, ಇಲ್ಲಿಯವರೆಗೆ ಇದರಲ್ಲಿ ಆಗಿರುವಂಥದ್ದು, ಮೆಚ್ಚುಗೆ ಬರತಕ್ಕಂತಹ ರೀತಿಯಲ್ಲಿ

ಗೌರವಾನ್ವಿತ ರಾಜ್ಯಪಾಲರು ಹೇಳಿರಬಹುದು. ಆದರೂ ಕೂಡ, ಇದರಲ್ಲಿ ಇರುವಂತಹ ನ್ಯೂನತೆಗಳನ್ನು ತಿದ್ದುಕೊಂಡು ಮುಂದೆ ಈ ರೀತಿ ಆಗದೇ ಇರುವ ರೀತಿ, ತಳ ಸಮುದಾಯಗಳಿಗೆ ಉತ್ತೇಜನ ಕೊಡುವ ರೀತಿ, ಅವರಿಗೆ ಮೀಸಲಿಟ್ಟಂತಹ ಹಣವನ್ನು ಬೇರೆ ಯೋಜನೆಗಳಿಗೆ ದುರುಪಯೋಗ ಮಾಡದಂತೆ ಸರ್ಕಾರ ನಡೆಸಬೇಕು. ಈ ರೀತಿ ಆಡಳಿತ ಮಾಡಿದರೆ, ನಾವು ಕೂಡ ಸರ್ಕಾರದ ಜೊತೆಯಲ್ಲಿ ಕೈಜೋಡಿಸುತ್ತೇವೆ. ಬದಲಾಗಿ, ಪರಿಸ್ಥಿತಿ ಇದೇ ರೀತಿ ಇದ್ದಾಗ ನಮ್ಮ ವಿಚಾರವನ್ನು ನಾವು ಇಡಲೇಬೇಕಾಗುತ್ತದೆ. ಅದರ ಬದಲಾಗಿ, ಸರ್ಕಾರದ ಮೇಲೆ ನಾವು ಯುದ್ಧ ಮಾಡುವಂಥದ್ದಲ್ಲ. ನಾವು ಅಲ್ಲಿದ್ದಾಗ ತಾವು ಕೂಡ ಅದನ್ನೇ ಮಾಡುವುದು. ಆ ಕಾರಣದಿಂದ, ಇದಕ್ಕೆ ಹೆಚ್ಚು ಒತ್ತು ಕೊಡುವುದನ್ನು ಬಿಟ್ಟು ಇವೊತ್ತಿನ ದಿವಸ ಸರ್ಕಾರ ಯಾವ ಯೋಜನೆಗಳನ್ನು ಕೊಟ್ಟಿದೆ, ಅದರಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಆಡಳಿತ ಪಕ್ಷದಲ್ಲಿಯೇ ಅನೇಕ ಶಾಸಕರು ಗ್ಯಾರಂಟಿ ಯೋಜನೆಗಳ ಪರವಾಗಿ ಇಲ್ಲ. ಆ ಬಗ್ಗೆ ಎಷ್ಟು ಹೇಳಿಕೆಗಳು ಬಂದಿವೆ? ಈ ಸದನದ ಮಾನ್ಯ ಸದಸ್ಯರೊಬ್ಬರು ಕಳೆದ ಚುನಾವಣೆಯಲ್ಲಿ ಸೋತಾಗ ಗ್ಯಾರಂಟಿ ಯೋಜನೆಗಳನ್ನು ಬಿಡಿ, ಅಭಿವೃದ್ಧಿ ಕಡೆಗೆ ಗಮನ ಕೊಡಬೇಕೆಂದು ಸ್ಲೋಗನ್ ಮಾಡಿದರು. ಅಂದರೆ, ನಾವು ಸರ್ಕಾರದ ಗ್ಯಾರಂಟಿಗಳನ್ನು ನಾವು ಯಾವತ್ತೂ ವಿರೋಧ ಮಾಡಿರುವುದಿಲ್ಲ. ಆದರೆ, ವಿರೋಧ ಆಡಳಿತ ಪಕ್ಷದವರಲ್ಲಿಯೇ ಇದೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಗೌರವಾನ್ವಿತ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ, ಇದನ್ನು ಸರ್ಕಾರದ ಒತ್ತಾಯಕ್ಕೆ ಮಣಿದು ಅವರು ಮಾಡಿದ್ದಾರೆ. ಏಕೆಂದರೆ, ಮನಸ್ಸಿಲ್ಲದೇ ಬಂದು, ಮಾಡಲೇಬೇಕು ಅನಿವಾರ್ಯ, ಓದಿಬಿಟ್ಟು ಹೋಗಿದ್ದಾರೆ. ಏಕೆಂದರೆ, ಅವರಿಗೂ ಮನಸ್ಸಿನಲ್ಲಿ ನೋವಿದೆ. ಕೆಲವು ಸಾರಿ ಅವರನ್ನು ವಿರೋಧಿಸುವಂತಹ ಕೆಲಸ ಆಗಿದೆ. ಏಕೆಂದರೆ, ರಾಜಭವನದ ಮೇಲೆ ಕದನ ನಡೆಯುತ್ತಿದೆ ಎಂದು ಕೆಲವು ವರದಿಗಳು ಆಗಿರುತ್ತವೆ. ಕೆಲವು ವಿಧೇಯಕಗಳನ್ನು ವಾಪಸ್ಸು ಕಳುಹಿಸಿದ್ದಾರೆಂದು ವರದಿಯಾಗಿರುತ್ತವೆ. ಇದು ಅವರ ಕರ್ತವ್ಯವಾಗಿರುತ್ತದೆ. ಆ ಜಾಗದಲ್ಲಿ ಇವರು ಇದ್ದರೂ ಕೂಡ, ಇದೇ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ, ನಾವು ಇಲ್ಲಿ ಯಾವ ವಿಧೇಯಕಗಳನ್ನು ಪಾಸ್ ಮಾಡಿ, ರಾಜಭವನಕ್ಕೆ ಕಳುಹಿಸುತ್ತೇವೆ, ಅದಕ್ಕೆ ಸಮಜಾಯಿಷಿಯನ್ನು ಅವರಿಗೆ ಕೊಡಬೇಕಾಗುತ್ತದೆ. ಅದರಂತೆ, ನಾಲ್ಕು ವಿಧೇಯಕಗಳು ವಾಪಸ್ಸು ಬಂದಿರುತ್ತವೆ. ಅದರಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ತಿದ್ದುಪಡಿ ವಿಧೇಯಕಕ್ಕೆ ಸರ್ಕಾರ ನೀಡಿದ ಸಮರ್ಥನೆ ತೃಪ್ತಿಕರವಾಗಿಲ್ಲ. ಉದ್ದೇಶ ಸಮಂಜಸವಾಗಿರಲಿಲ್ಲ ಎಂದು ವಿಧೇಯಕವನ್ನು ವಾಪಸ್ಸು ಕಳುಹಿಸಿದ್ದಾರೆ. ಅದಕ್ಕೆ ರಾಜ್ಯ ಸರ್ಕಾರ ತೃಪ್ತಿಕರವಾದಂತಹ ಸಮಜಾಯಿಷಿಯನ್ನು ಬರೆದು ಕಳುಹಿಸಿದರೆ, ಅದು ಮುಗಿದು ಹೋಗುತ್ತದೆ. ಆದರೆ, ಸರ್ಕಾರದವರು ಗೌರವಾನ್ವಿತ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸುತ್ತೇವೆಂದು ಇಲ್ಲಿ ತೀರ್ಮಾನ ತೆಗೆದುಕೊಂಡರೆ, ಅದು ಸಂವಿಧಾನಕ್ಕೆ ಕೊಡುವಂತಹ ಗೌರವ ಅಲ್ಲ. ಗೌರವಾನ್ವಿತ ರಾಜ್ಯಪಾಲರಿಗೆ ಗೌರವ ಕೊಟ್ಟರೆ ಅದು ಸಂವಿಧಾನಕ್ಕೆ ಕೊಡುವಂತಹ ಗೌರವವಾಗಿರುತ್ತದೆ. ಅದು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ ತಲುಪುವಂತಹ ಗೌರವವಾಗಿರುತ್ತದೆ. ಆದರೆ, ಸರ್ಕಾರ ಅವರನ್ನು ವಿರೋಧಿಸಿದರೆ, ಅದು

ಸಂವಿಧಾನಕ್ಕೆ ಮತ್ತು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ ವಿರೋಧ ಮಾಡಿದಂತಾಗುತ್ತದೆ. ಆ ಕಾರಣದಿಂದ ಇಲ್ಲಿ ನಡೆಯುವಂತಹ ಕದನಕ್ಕೆ ತೆರೆ ಎಳೆಯಬೇಕು. (ಮುಂದು)

(054) 04.03.2025 6.50 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**Sri CHALAVADI T. NARAYANASWAMY (Contd.):–**

The Governor is the constitutional head of a State. ಆ ಕಾರಣಕ್ಕಾಗಿ constitutional head ಬಗ್ಗೆ ನಾವು ಅಗೌರವ ತೋರಬಾರದು. ಆದ್ದರಿಂದ ನಾವು ಎಲ್ಲರಿಗೂ ಗೌರವ ಕೊಟ್ಟರೆ, ಸಂವಿಧಾನಕ್ಕೂ ಗೌರವ ಇರುತ್ತದೆ. ಸಂವಿಧಾನದ ಶಿಲ್ಪಿಯಾದ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೂ ಗೌರವ ಇರುತ್ತದೆ. ಆ ಕಾರಣದಿಂದಾಗಿ ಈ ವಿಚಾರವನ್ನು ಸದನದಲ್ಲಿ ಮಂಡಿಸುತ್ತಾ, ಈ ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ಅನೇಕ ತಪ್ಪುಗಳಿವೆ. ನಾನು ಹೇಳಿರುವಂಥ ವಿಚಾರವೇನಿದೆ, ಅದ್ಯಾವುದರ ದಾಖಲೆ ಇಲ್ಲದೇ ಹೇಳಿಲ್ಲ. ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಿದಾಗ ಮಾನ್ಯ ಸಚಿವರು ಆಕ್ಷೇಪಣೆ ಮಾಡಿದರು. ಏಕೆಂದರೆ, ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದ ಸಚಿವರು ಸಹ ತಾವೇ ಆಗಿದ್ದೀರಿ. ನಿನ್ನೆ ದಿವಸ ಒಂದು ವಿಚಾರ ಉದ್ಭವಿಸಿದ್ದು, ಮಾನ್ಯ ಸತೀಶ್ ಜಾರಕಿಹೊಳಿಯವರು ಸಹ ಅಲ್ಲಿಯೇ ಇದ್ದರು. ಈ ಸಂಬಂಧ ಒಬ್ಬ ಅಧಿಕಾರಿಯನ್ನು ಏತಕ್ಕೆ ಅವರಿಗೆ ಕೊಟ್ಟಿಲ್ಲ ಎಂದು ಕೇಳಿದ್ದೆನು. ಅಲ್ಲಿ ರೂ.189 ಕೋಟಿ ಇವೆ, ಆದರೆ ಏನು ಮಾಡುವುದು ಎಂದು ಹೇಳುತ್ತಾರೆ. ನಾನು ಎಲ್ಲದರ ಬಗ್ಗೆ ಹೇಳುತ್ತಿಲ್ಲ. ನಮ್ಮ ನಿಗಮದ ಕುರಿತು ಹೇಳಿದ್ದೇನೆ. ಅದರಿಂದಾಗಿ ಅಷ್ಟು ಇರಬಹುದು. ಹಾಗಾಗಿ, ಅದರಲ್ಲಿ ಏನಾದರೂ ತಪ್ಪು ಇದ್ದರೆ ತಿದ್ದಿಕೊಳ್ಳೋಣ. ನೀವೂ ಇನ್ನೂ ಜಾಸ್ತಿ ಹಣ ನೀಡಿದರೆ ಮಾನ್ಯ ಸಚಿವರಿಗೆ ಸನ್ಮಾನ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಯಾವ ನಿಗಮದಲ್ಲಿಯಾದರೂ ಹಣ ಬಿಡುಗಡೆ ಮಾಡಲಿ, ನೇರವಾಗಿಯಾದರೂ ಕೊಡಲಿ. ಆದರೆ, ಹಣ ಕೊಟ್ಟಿರುವುದನ್ನು ತಿಳಿದುಕೊಳ್ಳಬೇಕು ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ವಿಚಾರವು ನಮ್ಮ ನಿಗಮಕ್ಕೆ ಮಾತ್ರ ಸೀಮಿತವಾಗಿದ್ದು, ನಮ್ಮಲ್ಲಿ ಒಟ್ಟು 7 ನಿಗಮಗಳಿವೆ. ಅದ್ಯಾವುದೆಂದರೆ, ಡಾ॥ ಬಿ.ಆರ್.ಅಂಬೇಡ್ಕರ್

ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಇದೆಲ್ಲವೂ ಇದೆ. ಸರ್ಕಾರದವರು ಇಂತಹ ನಿಗಮಗಳಿಗೆ ರೂ.189 ಕೋಟಿ ಹಣ ನೀಡಿದ್ದು, ಅಲ್ಲಿಂದ ಬೇರೆ ಖಾತೆಗಳಿಗೆ ಹಣವನ್ನು ಕಳುಹಿಸಿಕೊಂಡು ನುಂಗಿಬಿಟ್ಟರೆ ನಮ್ಮವರಿಗೆ ಗಂಗಾ ಕಲ್ಯಾಣ ಯೋಜನೆ ಅಡಿ ಹಣ ಬರುತ್ತದೆಯೇ? ಈ ರೀತಿ ನುಂಗಣ್ಣನವರನ್ನಿಟ್ಟುಕೊಂಡು ಮಾಡುವಂಥ ಕೆಲಸವನ್ನು ಮಾಡುವುದೇ; ಇಲ್ಲಿ ಎಲ್ಲಾ ಆಗಿದೆ ಎಂದು ಹೇಳುವುದೇ; ಅದೆಲ್ಲಾ ಆಗುವುದಿಲ್ಲ. ಅದಕ್ಕಾಗಿ ಇಂತಹ ಪರಿಸ್ಥಿತಿಗೆ ಸರ್ಕಾರವನ್ನು ಯಾರು ದೂರುವುದು ಬೇಡ. ಆದ್ದರಿಂದ ಇನ್ನು ಮುಂದೆಯಾದರೂ ಇದನ್ನು ಸರಿಮಾಡಿಕೊಳ್ಳೋಣ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ವಂದಿಸುತ್ತಾ, ನನ್ನ ಮಾತನ್ನು ಮುಕ್ತಾಯಗೊಳ್ಳಿಸುತ್ತೇನೆ.

**ಸಭಾಪತಿಯವರು:-** ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲು ಬಿ.ಜೆ.ಪಿ.ಯಿಂದ 14 ಮಂದಿ, ಜೆ.ಡಿ.ಎಸ್.ನಿಂದ 4 ಮಂದಿ ಹೆಸರನ್ನು ನೀಡಿದ್ದು, ಕಾಂಗ್ರೆಸ್‌ನವರು ಎಷ್ಟು ಮಂದಿ ಇದ್ದಾರೆ ಎಂಬುದನ್ನು ಕೊಟ್ಟಿಲ್ಲ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲು ದಿನಾಂಕ 05.03.2025, 06.03.2025, 10.03.2025 ಹಾಗೂ 11.03.2025 ರಂದು ಅರ್ಧ ದಿವಸ ಒಳಗೊಂಡಂತೆ ಒಟ್ಟು ಮೂರುವರೆ ದಿವಸಗಳು ಸಮಯ ಸಿಗುತ್ತದೆ. ಅದಕ್ಕಾಗಿ ಮಾತನಾಡುವಂಥ ಸದಸ್ಯರು ಸ್ವಲ್ಪ ಸಮಯ ಪ್ರಜ್ಞೆಯನ್ನಿಟ್ಟುಕೊಂಡು ಮಾತನಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಸರ್ಕಾರದ ಮುಖ್ಯ ಸಚೇತಕರೇ, ಆಡಳಿತ ಪಕ್ಷದಲ್ಲಿ ಕೇವಲ 5 ಮಂದಿ ಮಾತ್ರ ಸದನದಲ್ಲಿದ್ದೀರಿ. ಈ ರೀತಿ ಮಾಡಿದರೆ ಸದನ ಹೇಗೆ ನಡೆಸುವುದು. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಎಲ್ಲರೂ ಇರಬೇಕು. ಇದು ಸರಿದೂಗುವುದಿಲ್ಲ. ನಾನು ಗಂಭೀರವಾಗಿ ಹೇಳುತ್ತಿದ್ದೇನೆ ನಾಳೆಯಿಂದ ಸದನದಲ್ಲಿ ಯಾವುದೇ ಸದಸ್ಯರ ಹೆಸರನ್ನು ಉಲ್ಲೇಖ ಮಾಡುವ ಸಂದರ್ಭದಲ್ಲಿ ಅವರು ಸದನಕ್ಕೆ ಗೈರು ಹಾಜರಾಗಿದ್ದರೆ ಮತ್ತೆ ನಾನು ಅವರ ಹೆಸರನ್ನು ಕರೆಯದೇ ಗೈರು ಹಾಜರಿ ಎಂದು ಪರಿಗಣಿಸಬೇಕಾಗುತ್ತದೆ, ಈಗಲೇ ಹೇಳಿದ್ದೇನೆ. ಈಗ ನಿಯಮ 330ರ ಮೇಲಿನ ಚರ್ಚೆ.

**14. ನಿಯಮ 330ರ ಮೇರೆಗೆ**

**ವಿಷಯ:- ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಸೊಪ್ಪಿನ ಬೆಟ್ಟ, ಕುಮಕಿ, ಸ್ಟ್ರೀಪ್‌ಗಳ ಬಳಕೆ, ಪಾರಂಪರಿಕ ಅತಿಕ್ರಮಣ ಮತ್ತು ಕಾಡು ಪ್ರಾಣಿಗಳಂದ ಆಗುತ್ತಿರುವ ಜೀವ ಹಾಗೂ ಬೆಳೆಹಾನಿಗಳಗೆ ಪರಿಹಾರ ನೀಡುವಲ್ಲಿ ಆಗುತ್ತಿರುವ ವಿಳಂಬದ ಕುರಿತು.**

\- - -

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಸೊಪ್ಪಿನ ಬೆಟ್ಟ, ಕುಮಕಿ, ಸ್ಟ್ರೀಪ್‌ಗಳ ಬಳಕೆ, ಪಾರಂಪರಿಕ ಅತಿಕ್ರಮಣ ಮತ್ತು ಕಾಡು ಪ್ರಾಣಿಗಳಂದ ಆಗುತ್ತಿರುವ ಜೀವ ಹಾಗೂ ಬೆಳೆಹಾನಿಗಳಗೆ ಪರಿಹಾರ ನೀಡುವ ಕುರಿತು ಒಂದಿಷ್ಟು ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತೇನೆ. ನಾನು ಕಂದಾಯ ಸಚಿವರಿಗೆ ಈ ಪ್ರಶ್ನೆಯನ್ನು ಕೇಳದ್ದೆನು. ಉತ್ತರ ಈಗ ಬಂದಿರುವುದರಿಂದ ನಾನು ಹೇಳಬೇಕಾಗಿರುವ ವಿಷಯದ ಕುರಿತು ಮೊದಲು ಹೇಳಬಿಡುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲ ಎಲ್ಲರಿಗೂ ಗೊತ್ತಿರುವ ಹಾಗೆ ಅಲ್ಲ ಗುಡ್ಡಗಾಡು ಹಾಗೂ ತಗ್ಗು ಪ್ರದೇಶ ಇರುವುದರಿಂದ ಅಲ್ಲ ವಿಶೇಷವಾದ ಬೆಳೆ ಅಡಿಕೆ, ಬಾಳೆ, ಏಲಕ್ಕಿ, ಕಾಳು ಮೆಣಸುನಂತಹ ಬೆಳೆ ಬೆಳೆಯುತ್ತಾರೆ. ಒಟ್ಟಾರೆ ಸೇರಿ ಮಿಶ್ರ ಬೆಳೆಯ ಭಾಗಕ್ಕೆ ತೋಟ ಅಥವಾ ಬಾಗಾಯ್ತು ಎಂದು ಕರೆಯುತ್ತಾರೆ. ಸೊಪ್ಪಿನ ಬೆಟ್ಟ ಎಂದು ಅರಣ್ಯದ ಒಂದು ಭಾಗ ಇದೆ. ಈ ಅರಣ್ಯದಲ್ಲ ಬೆಲೆಬಾಳುವಂಥ ಮರಗಳು ಅಥವಾ ಬೆಲೆಬಾಳುವ ವಸ್ತುಗಳನ್ನು ಬೆಳೆದಿರುವಂಥ ಪ್ರದೇಶವಾಗಿರುವುದರಿಂದ 'ಸೊಪ್ಪಿನ ಬೆಟ್ಟ' ಎಂದು ಕರೆಯುತ್ತಾರೆ. ಅಂದರೆ ಬಹಳ ಹಿಂದೆ 1869 ರಲ್ಲ ಬಾಂಬೆ ಸರ್ಕಾರ ಉತ್ತರ ಕನ್ನಡ ಜಿಲ್ಲೆಯನ್ನು ಆಡಳತ ಮಾಡುವಾಗ ಅಂದರೆ, ಉತ್ತರ ಕನ್ನಡ ಜಿಲ್ಲೆಯ ಬಹಳಷ್ಟು ತಾಲ್ಲೂಕುಗಳು ಆಗಿನ ಕಾಲದಲ್ಲ ಬಾಂಬೆ ಸರ್ಕಾರದ ಅಧೀನದಲ್ಲತ್ತು. ಆಗಲೇ ಸೊಪ್ಪಿನ ಬೆಟ್ಟದ ವ್ಯವಸ್ಥೆಯನ್ನು ರೈತರಿಗೆ ಮಾಡಿಕೊಡಲಾಗಿತ್ತು. ಎರಡು ಪ್ರಕಾರದ ಸೊಪ್ಪಿನ ಬೆಟ್ಟ ಇವೆ. ಮೊದಲನೆಯದಾಗಿ, ದನ-ಕರುಗಳಗೆ ಮೇವು ಇತ್ಯಾದಿಗಳಗೆ ಒಂದು ಭಾಗವಾದರೆ, ಇನ್ನೊಂದು ತೋಟಗಳಗೆ ಬೇಕಾದಂಥ ಸಾವಯವ ಗೊಬ್ಬರವನ್ನು ತಯಾರು ಮಾಡಲಕ್ಕೆ ಅಲ್ಲಯ ಒಣಗಿದ ಎಲೆ ಅದನ್ನು ತರಗು ಎಂದು ಕರೆಯುತ್ತಾರೆ. ಹಾಗೆಯೇ ಸೊಪ್ಪು, ಹುಲ್ಲು ಇತ್ಯಾದಿ ಕಾಡಿನ ವಸ್ತುಗಳನ್ನು ತಂದು ಗೊಬ್ಬರ ಮಾಡಲಕ್ಕೆ ಎರಡನೆಯ ಸೊಪ್ಪಿನ ಬೆಟ್ಟವನ್ನು ಬಳಸುತ್ತಿದ್ದರು. ಜೊತೆಗೆ 50 ಅಡಿ ಉದ್ದವಾದ ಹಾಗೂ ಅಗಲವಾದ ದೊಡ್ಡ ಪಟ್ಟಿಯನ್ನು ಕಾಡುಪ್ರಾಣಿಗಳು ಭತ್ತದ ಗದ್ದೆಗೆ ಬರಬಾರದೆಂದು ಸ್ಟ್ರಿಪ್ ಜಾಗ ಎಂದು ಬಿಡುತ್ತಿದ್ದರು. ಈ ಸ್ಟ್ರಿಪ್ ಜಾಗದಲ್ಲ ಬೇರೆ ರೀತಿಯ ಬೆಳೆ ಬೆಳೆಯಲು ರೈತರಿಗೆ ಅಧಿಕಾರ ಇರುವುದಿಲ್ಲ. ಆದರೆ, ಅಲ್ಲರುವ ಸಣ್ಣಪುಟ್ಟ ಕಳೆಯನ್ನು ತೆಗೆದು ಸ್ವಚ್ಛಗೊಳಸುವ ಅಧಿಕಾರ ಇತ್ತು. ಸೊಪ್ಪಿನ ಬೆಟ್ಟದಲ್ಲ ಮನೆ ಕಟ್ಟಲು ಒಂದು ಅವಕಾಶ ಇತ್ತು. ಆಗಿನ ಸೊಪ್ಪಿನ ಬೆಟ್ಟದ ಜಾಗವನ್ನು 'ಬ' ಖರಾಬು ಎಂದು ಪರಿಗಣಿಸಿ, ಅಡಿಕೆ ತೋಟದ ಜಾಗವನ್ನು ಬಾಗಾಯ್ತು

ಎಂದು ಕಂದಾಯ ಇಲಾಖೆಯಿಂದ ಕರ ಆಕರಣೆ ಮಾಡಲಾಗುತ್ತಿತ್ತು, ಅದರೊಳಗೆ ಬೆಟ್ಟವನ್ನು ಸೇರಿಸಿ ಕರವನ್ನು ಆಕರಣೆ ಮಾಡುತ್ತಿದ್ದರು. ಬೆಟ್ಟದಲ್ಲಿ ಒಂದು ಎಕರೆಗೆ ಇಂತಿಷ್ಟು limit ಜಾಗವು ಮನೆ ನಿರ್ಮಿಸಿಕೊಳ್ಳಲು ಅಲ್ಲಿ ಅವಕಾಶ ಇತ್ತು. ಆದರೆ, ಕಳೆದ ನಾಲ್ಕು ತಿಂಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಯ ಗಮನಕ್ಕೆ ತರುವ ಹಂತದಲ್ಲಿ ರೈತ ಸಂಘಟಣೆಯು ಒಂದು ಹೋರಾಟ ಮಾಡುತ್ತದೆ. ಯಲ್ಲಾಪುರ ತಾಲ್ಲೂಕಿನ 'ರೈತ ಹಕ್ಕು ಸಮಿತಿ' ಯವರು ಶಿರಸಿ, ಸಿದ್ದಾಪುರ ಮತ್ತು ಅಂಕೋಲಾ ತಾಲ್ಲೂಕುಗಳಲ್ಲಿನ ಕೆಲವು ಭಾಗದಲ್ಲಿನ ರೈತರ ಪ್ರತಿನಿಧಿಗಳ ಮೂಲಕ ಹೋರಾಟ ಮಾಡಿ, ಜಿಲ್ಲಾಧಿಕಾರಿಯವರಿಗೆ, ಅರಣ್ಯ ಇಲಾಖಾ ಸಂರಕ್ಷಣಾಧಿಕಾರಿಯರಿಗೆ ಮತ್ತು ಡಿ.ಸಿ.ಎಫ್. (Deputy Conservator of Forests) ನವರಿಗೆ ಮನವಿ ಸಲ್ಲಿಸುತ್ತಾರೆ. ಈ ವಿಷಯದ ಕುರಿತು ಬೆಳಗಾವಿ ಅಧಿವೇಶನ ಒಳಗೊಂಡಂತೆ ಎರಡು ಸಲ ಸರ್ಕಾರಕ್ಕೆ ಮನವಿ ಮಾಡಿದ್ದೆನು. ಈ ಸಂಬಂಧ ಕಂದಾಯ ಇಲಾಖಾ ಸಚಿವರು ಉತ್ತರ ನೀಡಿದ್ದು, ಜಿಲ್ಲಾಧಿಕಾರಿಯವರಿಗೆ ತಿಳಿಸಿ ಸದ್ಯದಲ್ಲಿಯೇ ಪರಿಹಾರ ಮಾಡುತ್ತೇನೆ ಎಂದು ಹೇಳಿದರು. ಈಗಾಗಲೇ ಮೂರು ತಿಂಗಳು ಕಳೆದಿದ್ದು ಯಾವುದೇ ಪರಿಹಾರ ಮಾಡಿಲ್ಲ ಎನ್ನುವಂಥ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಮೊದಲನೆಯದಾಗಿ, ಆ ಜನರು ಹೇಳಿದಂಥ 'ಬೆಟ್ಟ ಪ್ರದೇಶದಲ್ಲಿ ಕರ ಆಕರಣೆ ಮಾಡಿದಂಥ ಜಾಗವನ್ನು 'ಬ' ಖರಾಬು ಎಂದು ಗುರುತಿಸಿ ಕೊಡಬೇಕು' ಎಂಬುದು ಅವರ ಬೇಡಿಕೆಯಾಗಿದೆ. ಎರಡನೆಯದಾಗಿ, ಕಾಡು ಪ್ರಾಣಿಗಳಿಂದ ತೋಟದ ಬೆಳೆಗಳಿಗೆ ಏನಾದರೂ ಹಾನಿಯಾದ ಪಕ್ಷದಲ್ಲಿ ಸರ್ಕಾರದಿಂದ ಅದಕ್ಕೆ ಪರಿಹಾರ ನೀಡಲಾಗುತ್ತದೆ. ಹಾಗೆಯೇ ಆನೆ, ಕಾಡುಕೋಣ ಪ್ರಾಣಿಯಿಂದ ಹಾನಿಯಾದರೆ ಸರ್ಕಾರ ಅದಕ್ಕೆ ಪರಿಹಾರ ಕೊಡುತ್ತದೆ. ಆದರೆ, ಸಣ್ಣ ಸಣ್ಣ ಪ್ರಾಣಿಗಳು ಅನೇಕ ಇವೆ. ಉದಾಹರಣೆಗೆ ಹೇಳುವುದಾದರೆ, ಕೋತಿಯನ್ನು ನಮ್ಮ ಕಡೆ 'ಕೆಂಪು ಮೂತಿಯ ಮಂಗ' ಎಂದು ಕರೆಯುತ್ತೇವೆ. ಅದರ ಜೊತೆಗೆ ಇನ್ನೂ ಮೂರ್ನಾಲ್ಕು ಚಿಕ್ಕ ಚಿಕ್ಕ ಪ್ರಾಣಿಗಳಿವೆ. ಅವುಗಳು ವಿಶೇಷವಾಗಿ ಏಲಕ್ಕಿಯ ಮರಿಗಳು ಆ ಗಿಡ-ಸಸಿಯ ಫಲ ತಿನ್ನುತ್ತದೆ ಮತ್ತು ಕಾಳು ಮೆಣಸು ತಿನ್ನುತ್ತದೆ. ಈ ರೀತಿಯ ಸಣ್ಣ ಸಣ್ಣ ವಾಣಿಜ್ಯ ಬೆಳೆಗಳಿಗೆ ಪರಿಹಾರ ಕೊಡುವುದಿಲ್ಲ ಎನ್ನುವ ಕಾರಣಕ್ಕಾಗಿ ಬೆಟ್ಟದ ಜಾಗವನ್ನು ಅರಣ್ಯ ಇಲಾಖೆಯವರು ವಾಪಸ್ಸು ತೆಗೆದುಕೊಂಡರೆ ನಮಗೆ ತೊಂದರೆಯಾಗುತ್ತದೆ ಎನ್ನುವಂಥ ಬೇಡಿಕೆಯನ್ನಿಟ್ಟಿದ್ದಾರೆ. ಈ ರೀತಿ ಅನೇಕ ಬೇಡಿಕೆಗಳೊಂದಿಗೆ ರೈತರ ಹೋರಾಟಕ್ಕೆ ಅಲ್ಲಿಯ ಕಂದಾಯ ಅಧಿಕಾರಿಗಳು ಯಾವುದೇ ಗೌರವ ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿಯವರಿಗೆ ಹಾಗೂ ಅಲ್ಲಿರುವಂಥ ಸಹಾಯಕ ಆಯುಕ್ತರು, ತಹಸೀಲ್ದಾರ್‌ರವರು ಮತ್ತು ಜನ ಪ್ರತಿನಿಧಿಗಳು ಒಳಗೊಂಡಂತೆ ಮನವಿಯನ್ನು ಸಲ್ಲಿಸಿದ್ದಾರೆ. ಆದರೆ, ಇದುವರೆವಿಗೂ ಯಾವುದೇ ಬದಲಾವಣೆಯಾಗಿಲ್ಲ ಎಂದು ಹೇಳುತ್ತಾರೆ. ನಮ್ಮ 'ಬ' ಖರಾಬು ಜಾಗವನ್ನು ನಮಗೆ ಗೊತ್ತಿಲ್ಲದ ಹಾಗೆ ಅ-ಕರಾಬು

ಎಂದು ಗುರುತಿಸಿದ್ದು, ಪುನಃ 'ಬ' ಖರಾಬು ಎಂದು ಮಾಡಬೇಕೆಂಬ ಬೇಡಿಕೆ ಇದೆ. ಈ ಸಂಬಂಧ ಎರಡು-ಮೂರು ಆಧಾರ ಸಹ ಕೊಟ್ಟಿದ್ದಾರೆ. ಉತ್ತರ ಕನ್ನಡ ತಾಲ್ಲೂಕಿನ ಕಡೆ 1865ನೇ ಇಸವಿಯಲ್ಲಿ ಬ್ರಿಟಿಷ್ ಸರ್ಕಾರ ಆಡಳಿತ ನಡೆಸುವಾಗ ವಿಲೇಜ್ ಫಾರೆಸ್ಟ್ ಮತ್ತು minor forest ಎಂಬುದು ಏನಿದೆ, ಅದರಲ್ಲಿಯ ಜಾಗವನ್ನು ಕಾನೂನುಬದ್ಧವಾಗಿ 'ರೈತರ ಬೆಟ್ಟ' ಎಂದು ಕೊಟ್ಟಿದ್ದರು. 1922ನೇ ಇಸವಿಯಲ್ಲಿ ಈ ಭೂಮಿಯನ್ನು ಕಂದಾಯ ಇಲಾಖೆ ಕಬ್ಜ ಮಾಡಿಕೊಟ್ಟಿದ್ದು, Village Forest Register 1ಅ ಎನ್ನುವಂಥ ದಾಖಲೆ ನೋಡಿದಾಗ ತಿಳಿಯುತ್ತದೆ ಎಂಬುದರ ದಾಖಲೆ ಸಹ ಕೊಟ್ಟಿದ್ದಾರೆ.

ಹಾಗೆಯೇ ಬಹಳ ಪ್ರಮುಖವಾದ ಮತ್ತೊಂದು ಬೇಡಿಕೆಯನ್ನು ಕೊನೆಗೆ ಹೇಳುತ್ತಾರೆ. ಅದೇನೆಂದರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 79(2) ರಲ್ಲಿ ಬೆಟ್ಟ ಭೂಮಿಯನ್ನು ಸೇರಿಸದೇ ಕಲಂ 79(2) ಅನ್ನು ಬೆಟ್ಟದ ಸಲುವಾಗಿ ರಕ್ಷಿಸಿ ಇಡಬೇಕೆಂಬ ಬೇಡಿಕೆಯನ್ನಿಟ್ಟಿದ್ದಾರೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಗಮನಕ್ಕೆ ತರುವುದರ ಜೊತೆಗೆ ನಮ್ಮದು ಬಹಳ ಪ್ರಮುಖವಾದ ಬೇಡಿಕೆಯಾಗಿದ್ದು, ಅಲ್ಲಿಯ ಕಂದಾಯ ಇಲಾಖೆಯವರು ನಮ್ಮ ಬೇಡಿಕೆಗೆ ಗಮನ ಕೊಡುತ್ತಿಲ್ಲ ಎನ್ನುವಂಥ ಮಾತನ್ನು ಹೇಳುತ್ತಾರೆ. ಅದರ ಸಲುವಾಗಿ ಮಾನ್ಯ ಸಚಿವರು ಜಿಲ್ಲಾಧಿಕಾರಿಯವರಿಗೆ ಹಾಗೂ ಅಧಿಕಾರಿಯವರಿಗೆ ಸೂಚಿಸಬೇಕೆಂದು ಈ ಸಂದರ್ಭದಲ್ಲಿ ಮನವರಿಗೆ ಮಾಡಬಯಸುತ್ತೇನೆ.

**ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ,...

ಕರ್ನಾಟಕ ಅರಣ್ಯ ಕೈಪಿಡಿ, 1976ರಂತೆ ಅರಣ್ಯ ಭೂಮಿಗಳಲ್ಲಿ ರೈತರಿಗೆ ಸೊಪ್ಪಿನ ಬೆಟ್ಟ, ಕುಮ್ಕಿ, ಸ್ಟ್ರಿಪ್ ಮುಂತಾದ ವಿಶೇಷ ಸವಲತ್ತುಗಳಿಗೆ ಮಾನ್ಯತೆ ನೀಡಲಾಯಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸೊಪ್ಪಿನ ಬೆಟ್ಟಗಳೆಂದರೆ ಅಡಿಕೆ ತೋಟಗಳಿಗೆ ತಮ್ಮ ತೋಟದ ನಿರ್ವಹಣೆಗಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಉದ್ದೇಶದಿಂದ ನೀಡಲಾದ ಸಂರಕ್ಷಿತ ಅರಣ್ಯ ಪ್ರದೇಶ, ತೋಟಗಾರರಿಗೆ ಬೆಟ್ಟ ಪ್ರದೇಶಗಳಲ್ಲಿ ತಮ್ಮ ಸ್ವಂತ ದನಕರುಗಳನ್ನು ಮೇಯಿಸುವ, ಸ್ವಂತ ಉಪಯೋಗಕ್ಕಾಗಿ ಹುಲ್ಲು ಮತ್ತು ದರಕು ಸೊಪ್ಪು ಬಳಸಿಕೊಳ್ಳಲು ಸೌಲಭ್ಯಗಳನ್ನು ನೀಡಲಾಗಿದೆ. ವಿಭಾಗೀಯ ಅರಣ್ಯ ಅಧಿಕಾರಿಯ ಪೂರ್ವಾನುಮತಿಯಿಲ್ಲದೇ ಕೆಲವು ಜಾತಿಯ ಜೀವಂತ ಮರಗಳನ್ನು ಸಹ ಕಡಿಯಬಾರದೆಂದು ಸೂಚಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಟ್ರಿಪ್ ಬಳಕೆಯಲ್ಲಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಕಾಡುಪ್ರಾಣಿಗಳಿಂದ ಬೆಳೆಗಳನ್ನು ಸಂರಕ್ಷಿಸುವ ಸಲುವಾಗಿ ಜನವಸತಿ ಪ್ರದೇಶ ಹಾಗೂ ಕೃಷಿ ಪ್ರದೇಶಗಳ ಸುತ್ತ ಸ್ಟ್ರಿಪ್ಸ್ ಬಳಕೆದಾರರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಸದರಿ ವಿಶೇಷ ಸೌಲಭ್ಯಗಳನ್ನು ಅರಣ್ಯ ಪ್ರದೇಶಗಳಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ನಿಯಮಗಳು ಉಲ್ಲಂಘನೆಯಾಗದಂತೆ ಬಳಕೆದಾರರು ಬಳಕೆ ಮಾಡಬಹುದಾಗಿರುತ್ತದೆ.

ಪಾರಂಪರಿಕ ಅತಿಕ್ರಮಣದಾರರ ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿದ ಅರ್ಜಿಗಳನ್ನು ವಿವಿಧ ಮಟ್ಟದ ಅರಣ್ಯ ಹಕ್ಕು ಸಮಿತಿಗಳಲ್ಲಿ ಪರಿಶೀಲಿಸಿ, ಹಕ್ಕು ಪತ್ರ ನೀಡಲು ಸರ್ಕಾರವು ಕ್ರಮ ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, ಕಾಡು ಪ್ರಾಣಿಗಳಿಂದ ಆಗುತ್ತಿರುವ ಜೀವ ಹಾನಿ ಮತ್ತು ಬೆಳೆ ಹಾನಿಗೆ ಸಂಬಂಧಿಸಿದಂತೆ i) ಸರ್ಕಾರಿ ಆದೇಶ ಸಂಖ್ಯೆ: ಅಪಜೀ.156.ಎಫ್.ಡಬ್ಲ್ಯೂ.ಎಲ್.2022, ದಿನಾಂಕ: 18-01-2023 & ii) ಸರ್ಕಾರಿ ಆದೇಶ ಸಂಖ್ಯೆ: ಅಪಜೀ.156.ಎಫ್.ಡಬ್ಲ್ಯೂ.ಎಲ್.2022, ದಿನಾಂಕ:24-05-2023ರಲ್ಲಿ ನಿಗದಿಪಡಿಸಿದಂತೆ ಪರಿಹಾರ ಧನವನ್ನು ನಿಯಮಾನುಸಾರ ನೀಡಲಾಗುತ್ತಿದೆ. e-parihara mobile application ಬಳಕೆ ಮಾಡಿ ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀಸಲು ಅರಣ್ಯ ಪ್ರದೇಶ ಇದೆ. ಕರ್ನಾಟಕ ಅರಣ್ಯ ಕೈಪಿಡಿ, 1976 ರಂತೆ ಅರಣ್ಯ ಭೂಮಿಗಳಲ್ಲಿ ರೈತರಿಗೆ ಸೊಪ್ಪಿನ ಬೆಟ್ಟ, ಕುಮ್ಕಿ, ಸ್ಟ್ರಿಪ್ ಮುಂತಾದ ವಿಶೇಷ ಸವಲತ್ತುಗಳಿಗೆ ಮಾನ್ಯತೆ ನೀಡಲಾಯಿತು.

(ಮುಂದು)

(55) 04.03.2025/7.00/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ ಬಿ. ಖಂಡ್ರೆ (ಮುಂದು):-**

ಈ ಒಂದು ಅರಣ್ಯ ಪ್ರದೇಶದಲ್ಲಿ ಅವರು ಅದನ್ನು ಉಪಯೋಗ ಮಾಡಬಹುದಷ್ಟೆ. ಆದರೆ ಅವರು ಅಲ್ಲಿ ಯಾವುದೇ ಬೆಳೆಗಳನ್ನು ಬೆಳೆಯುವುದಕ್ಕೆ ಅಥವಾ ಕೃಷಿ ಉತ್ಪಾದನೆ ಮಾಡುವುದಕ್ಕೆ ಅವರಿಗೆ ಅವಕಾಶವಿಲ್ಲ. ಅವರು ದನ-ಕರುಗಳ ಮೇವುಗಳಿಗೆ ಅದನ್ನು ಉಪಯೋಗ ಮಾಡಬಹುದು. ಈ ಸ್ಟ್ರಿಪ್‌ಗಳು ಏನಿದೆ ಯಾವುದೇ ಪ್ರಾಣಿಗಳು ಆ

ಕಡೆ ಬರದ ರೀತಿಯಲ್ಲಿ ನೋಡಿಕೊಂಡು ನಿರ್ವಹಣೆ ಮಾಡುವುದಕ್ಕೆ ಅವಕಾಶವಿದೆ. ಮೀಸಲು ಅರಣ್ಯ ಮತ್ತು ಸಂರಕ್ಷಿತ ಅರಣ್ಯ ಪ್ರದೇಶ ಏನಿದೆ, ಈ ಪ್ರದೇಶದೊಳಗಡೆ ಅತಿಕ್ರಮಣಕಾರರು ಇದ್ದು, ಅವರು ಏನಾದರೂ ಕೃಷಿ ಉತ್ಪಾದನೆ ಮಾಡಿ ಅಲ್ಲಿ ಬೆಳೆ ಹಾನಿಯಾದರೆ, ಅದಕ್ಕೆ ಪರಿಹಾರ ಕೊಡುವುದಕ್ಕೆ ಕಾಯಿದೆಯಲ್ಲಿ ಅವಕಾಶವಿಲ್ಲ. ಈ ಪ್ರದೇಶದಿಂದ ಹೊರಗಡೆ ಬೆಳೆ ಹಾನಿಯಾದರೆ, ಅದಕ್ಕೆ ಪರಿಹಾರ ಕೊಡುವಂತಹ ವ್ಯವಸ್ಥೆ ಇದೆ. ಅದರ ಬಗ್ಗೆ ಮಾನ್ಯ ಸದಸ್ಯರು ಗಮನವನ್ನು ಸೆಳೆದಿದ್ದೀರಿ. ಕೆಲವೊಂದು ಪ್ರಾಣಿಗಳಿಂದ ಆಗುತ್ತಿರುವ ಜೀವ ಹಾನಿ ಮತ್ತು ಬೆಳೆ ಹಾನಿಗೆ ಮಾತ್ರ ಪರಿಹಾರ ಧನವನ್ನು ಕೊಡುತ್ತಿದ್ದಾರೆ. ಕೆಲವೊಂದು ಪ್ರಾಣಿಗಳಿಂದ ಆಗುತ್ತಿರುವ ಜೀವ ಹಾನಿ ಮತ್ತು ಬೆಳೆ ಹಾನಿಗೆ ಪರಿಹಾರ ಧನವನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಪರಿಶೀಲನೆ ಮಾಡಿದ ನಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಪ್ರಾಣಿಗಳಿಂದ ಜೀವ ಹಾನಿ ಮತ್ತು ಬೆಳೆ ಹಾನಿಯಾಗುವಂತಹದ್ದಕ್ಕೆ ಎಲ್ಲಾ ರೀತಿಯ ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇನೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಹಿಂದೊಮ್ಮೆ ಈ ವಿಷಯದ ಹೇಳಿದ್ದೇನೆ. ಈ ಭಾಗಾಯಾತ್ ಎಂದು ಕರೆಯುವಂತಹ ಎನ್ನುವುದು ಒಂದು ತೋಟವಿದೆ. ಅದಕ್ಕೆ ಕಂದಾಯ ಇಲಾಖೆಯವರು ಕರ ಆಕರಣೆ ಮಾಡುತ್ತಾರೆ. ಅದರ ಜೊತೆಗೆ ಬೆಟ್ಟದ ಭೂಮಿ ಕೂಡ ಸೇರಿರುತ್ತದೆ. ಬೆಟ್ಟದಲ್ಲಿ ಬೆಳೆ ಬೆಳೆಸುವುದಕ್ಕೆ ರೈತರು ಕೇಳುತ್ತಿಲ್ಲ. ಸೊಪ್ಪಿನ ಬೆಟ್ಟದಲ್ಲಿ ಹಸಿ ಸೊಪ್ಪನ್ನು ತರುತ್ತಾರೆ. ಆನಂತರ ಒಣಗಿದ ಎಲೆಗಳನ್ನು ತರುತ್ತಾರೆ. ಆಮೇಲೆ ದನಗಳನ್ನು ಮೇಯಿಸುವುದಕ್ಕೆ ಒಂದಿಷ್ಟು ಬೆಟ್ಟ ಬಿಡಬೇಕು. ಅದನ್ನು ಬ್ಯಾಣ ಎನ್ನುವ ಶಬ್ಧದಲ್ಲಿ ಕರೆಯುತ್ತಾರೆ. ಎಲ್ಲದಕ್ಕೂ ಅರಣ್ಯ ಇಲಾಖೆಯವರು ಒಂದು ಟ್ರೆಂಚ್‌ನ್ನು ಹೊಡೆಯುತ್ತಾರೆ. ಅದಕ್ಕೆ ಅಲ್ಲಿಯ ಭಾಷೆಯಲ್ಲಿ ಅಗಳ ಎನ್ನುತ್ತಾರೆ. ಅದು ಹೊಡೆದ ಮೇಲೆ ಅರಣ್ಯದೊಳಗಡೆ ಪ್ರವೇಶ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಚಿವರಿಗೂ ಇದು ಗೊತ್ತಿರಬಹುದು. ಒಂದು ಎಕರೆ ತೋಟಕ್ಕೆ ಇರುವಂತಹ ಬೆಟ್ಟದಲ್ಲಿ ಎರಡು ಗುಂಟೆ ಜಾಗದಲ್ಲಿ ಮನೆ, ಕೊಟ್ಟಿಗೆ ಅಥವಾ shed ಕಟ್ಟುವಂತಹದ್ದು ಇದೆ. ಅದನ್ನು ಕಟ್ಟುವುದಕ್ಕೆ ಜಿಲ್ಲಾಧಿಕಾರಿಗಳು ಅನುಮತಿ ಕೊಡುತ್ತಿಲ್ಲ ಎನ್ನುವ ಬೇಡಿಕೆಯನ್ನು ಇಡುತ್ತಿದ್ದಾರೆ. ಮುಖ್ಯವಾಗಿ ಕಂದಾಯ ಇಲಾಖೆಯ ಜಿಲ್ಲಾಧಿಕಾರಿ ಅಥವಾ ಎ.ಸಿ., ಇರಬಹುದು. ಆಯಾಯ ತಾಲ್ಲೂಕುಗಳಾದ ಯಲ್ಲಾಪುರ, ಶಿರಸಿ, ಸಿದ್ದಾಪುರ ಮತ್ತು ಅಂಕೋಲಾ ತಾಲ್ಲೂಕಿನ ಕೆಲವು ಭಾಗದ ತಹಶೀಲ್ದಾರ್‌ರವರುಗಳು ಏನಿದ್ದಾರೆ, ಅಲ್ಲಿನ ರೈತರನ್ನು ಕಡೆ ಪಕ್ಷ ಕರೆದು ಚರ್ಚೆಯಾದರೂ ಮಾಡಬೇಕು. ಇಲ್ಲವೆಂದರೆ, ಅವರು ತುಂಬಾ ಆಕ್ರೋಶಕ್ಕೆ ಒಳಗಾಗುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿಯ ಎದುರುಗಡೆ ಅವರು ಎರಡು ದಿನ ಹೋರಾಟ ಮಾಡಿದ್ದರೂ ಕೂಡ ಜಿಲ್ಲಾಧಿಕಾರಿಗಳು ಅಲ್ಲಿಗೆ ಹೋಗಲಿಲ್ಲ. ಆನಂತರ ಎ.ಸಿ.ಯವರು ಬಂದರು. ಈಗ ಅವರನ್ನು ಗಮನದಲ್ಲಿಟ್ಟುಕೊಂಡು, ಅವರ ಜೊತೆಗೆ ಜನ ಪ್ರತಿನಿಧಿಗಳನ್ನು ಸೇರಿಸಿ ಒಂದು ಸಭೆಯನ್ನು ಮಾಡಿದರೆ, ಈ ವಿಷಯಗಳು ಅರಣ್ಯ ಇಲಾಖೆಯಲ್ಲಿ ಬದಲಾವಣೆಯಾಗಿದ್ದನ್ನು ಅವರ ಗಮನಕ್ಕೆ ತರುವುದಕ್ಕಾಗುತ್ತದೆ ಎಂಬುದೊಂದು. ಎರಡನೆಯದಾಗಿ, ನಾನು ಉಲ್ಲೇಖ ಮಾಡಿರುವಂತೆ, ಅಲ್ಲಿ ಎಲ್ಲಿಯೂ ಸಂರಕ್ಷಿತ ಪ್ರದೇಶವಿಲ್ಲ. ಶಿರಸಿ ತಾಲ್ಲೂಕಿನ ಶಾಲ್ಮಲಾ ನದಿ ಹತ್ತಿರ ಸಂರಕ್ಷಿತ

ಪ್ರದೇಶವಿದೆ. ದಾಂಡೇಲಿ ಮತ್ತು ಹಳಿಯಾಳದಲ್ಲಿ ಇದೆ. ಅದನ್ನು ಬಿಟ್ಟರೆ, ಯಲ್ಲಾಪುರ, ಶಿರಸಿ, ಸಿದ್ದಾಪುರ, ಅಂಕೋಲಾ ಭಾಗಗಳಲ್ಲಿ ಸಂರಕ್ಷಿತ ಪ್ರದೇಶವಿಲ್ಲ. ಕೇವಲ ಜೇನು ಸಂರಕ್ಷಿತ ಪ್ರದೇಶ ಸ್ವಲ್ಪ ಭಾಗ ಯಲ್ಲಾಪುರದಿಂದ ಹುಬ್ಬಳ್ಳಿಗೆ ಹೋಗುವ ರಸ್ತೆಯ ಪಕ್ಕದಲ್ಲಿದೆ. ಈ ಸೊಪ್ಪಿನ ಬೆಟ್ಟ ಎಲ್ಲೆಲ್ಲಿ ಇದೆಯೋ, ಅಲ್ಲಿ ಅನೇಕ ಭಾಗ ಸೊಪ್ಪಿನ ಬೆಟ್ಟ ಸಂರಕ್ಷಿತ ಪ್ರದೇಶದೊಳಗಡೆ ಇಲ್ಲ. ಅದಕ್ಕೋಸ್ಕರ ರೈತರು ಬೇಡಿಕೆಯನ್ನು ಇಡುತ್ತಿದ್ದಾರೆ. ಅವರ ಬೇಡಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ಮೀಸಲು ಅರಣ್ಯ ಇದೆ ಎಂದು ಹೇಳಿದರು. ಪಶ್ಚಿಮ ಘಟ್ಟಗಳ ಎಲ್ಲಾ ಜಿಲ್ಲೆಗಳಲ್ಲಿ ಈ ಮೀಸಲು ಅರಣ್ಯವಿದೆ. ಸೊಪ್ಪಿನ ಬೆಟ್ಟ ನಿನ್ನೆ ಮೊನ್ನೆ ಬಂದಿರುವಂತಹದ್ದಲ್ಲ. ಸೊಪ್ಪಿನ ಬೆಟ್ಟ ರೈತರಿಗೋಸ್ಕರ ಮಾತ್ರ ಇರುವಂತಹದ್ದು. ಸೊಪ್ಪಿನ ಬೆಟ್ಟ ಎಂದು ಉತ್ತರ ಕನ್ನಡ ಜಿಲ್ಲೆಯವರು ಕರೆಯುತ್ತಾರೆ. ನಮ್ಮಲ್ಲಿ ಕುಮಕಿ, ಗೋಮಾಳ ಎಂದು ಕರೆಯುತ್ತೇವೆ ಮತ್ತು ಕೊಪ್ಪ, ಎನ್.ಆರ್. ಪುರ, ಶೃಂಗೇರಿ ಭಾಗಗಳಲ್ಲಿ ಇನ್ನೊಂದು ತರ ಕರೆಯುತ್ತಾರೆ. 'ಸೊಪ್ಪಿನ ಬೆಟ್ಟ' ಎಂಬುದು, it is purely meant for farmers. ನಾವು ವರ್ಷಕ್ಕೊಮ್ಮೆ ಗೊಬ್ಬರ ಮಾಡುವುದು. ಉದುರಿದ ಎಲೆಗಳನ್ನು ಆರಿಸಿಕೊಂಡು ತೆಗೆದುಕೊಂಡು ಹೋಗುತ್ತೇವೆ. ಕುರುಚಲು ಗಿಡವನ್ನು ಕಡಿದು, ಆ ಸೊಪ್ಪನ್ನು ತೆಗೆದುಕೊಂಡು ಹೋಗಿ ಆ ಗೊಬ್ಬರಕ್ಕೆ ಮಿಕ್ಸ್ ಮಾಡಿ, ಧನದ ಕೊಟ್ಟಿಗೆಯಲ್ಲಿ ಅದನ್ನು ಮಾಡಿ, ಮುಂದಿನ ವರ್ಷಕ್ಕೆ ಕೊಳೆಸಿ ಹಾಕುವಂತಹದ್ದು ಮೊದಲನೇ ವಿಚಾರ. ಎರಡನೇಯ ವಿಚಾರವೇನೆಂದರೆ, ಮಾನವ ಮತ್ತು ಪ್ರಾಣಿ ಸಂಘರ್ಷ ಬಹಳ ತೀವ್ರವಾಗಿದೆ. Hon'ble Minister, I cannot explain it in words. ಅಷ್ಟೊಂದು ಸಂಕಷ್ಟದಲ್ಲಿ ಕಾಡಿನಲ್ಲಿ ವಾಸ ಮಾಡತಕ್ಕಂಥವರು. ಮಾನ್ಯ ಸದಸ್ಯರು ಹೇಳಿದಾಗೇ, ವಾಸಕ್ಕೆ ಮನೆ ಕಟ್ಟಿಕೊಂಡು, ಅಲ್ಲಿ ಬೇರೆ ಬೇರೆ ರೀತಿ ಚಟುವಟಿಕೆಗಳನ್ನು ಮಾಡಿಕೊಂಡು ಒಂದ ಎಕರೆಯಲ್ಲಿ ಇರುವಂತಹವರು. FSO (Forest Settlement Officer) appoint ಮಾಡಿದಿರಿ. ಮಾನ್ಯ ಸಚಿವರೇ, ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಚೆಕ್ ಮಾಡಿ. ಮಲೆನಾಡು ಪ್ರದೇಶವಾದ ಚಿಕ್ಕಮಗಳೂರು ಜಿಲ್ಲೆಯ ಮೂರು-ನಾಲ್ಕು ತಾಲ್ಲೂಕುಗಳಲ್ಲಿ ಇಬ್ಬರು FSO ಇದ್ದಾರೆ. ಅವರಿಬ್ಬರೂ ನಿವೃತ್ತ FSO ಗಳು ಹಾಗೂ ಅವರು ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ. They are not natives of the same taluk. ಆ ತಾಲ್ಲೂಕಿಗೆ ಸಂಬಂಧಪಟ್ಟವರಲ್ಲ. ಅವರು ವಾರದಲ್ಲಿ ಯಾವತ್ತೋ ಒಂದು ದಿನ ಬಂದು sitting ಮಾಡುತ್ತಾರೆ. ಅಲ್ಲಿ ಹೋಗಿ ಇವರು report ಮಾಡಬೇಕು. ಈ ಕೆಲಸವಾದರೆ, FSO ನಿಂದ forest bifurcationದು ಈ ಜನ್ಮದಲ್ಲಿ ಸಮಸ್ಯೆ ಬಗೆಹರಿಯುವುದಿಲ್ಲ. ಮೊನ್ನೆ ಕಳಸದಲ್ಲಿ ಒಂದು ಘಟನೆಯಾಗಿ ಒಂದು ಆನೆ ಸತ್ತು ಹೋಯಿತು. ಸಕಲೇಶಪುರದಲ್ಲಿ ನಿರಂತರವಾಗಿ ನಡೆಯುತ್ತಿದೆ. ಆನಂತರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹದಿನೈದು ದಿವಸ ಆನೆಗಳು ಬೀಡು ಬಿಟ್ಟಿತ್ತು. ಅವು ಬೀಡು ಬಿಟ್ಟಿದ್ದು ಹೇಗೆ ಎಂದರೆ, ಆ ಮರಿಯ ಜೊತೆಯಲ್ಲಿ ಏನಾದರೂ ಆನೆ ಇದ್ದರೆ, ಯಾವ ಕಾರಣಕ್ಕೂ, ನೀವಲ್ಲ, ಯಾರು ಬಂದರೂ ಹದಿನೈದು ದಿವಸ ಆ ಜಾಗವನ್ನು ಅಲ್ಲಾಡಿಸುವುದಕ್ಕಾಗುವುದಿಲ್ಲ. ಕಬ್ಬಿನ ಗದ್ದೆಗೆ

ನುಗ್ಗಿದರೆ, ಒಂದು ಸಾರಿ ಕಬ್ಬಿನ ಗದ್ದೆ ಸರ್ವ ನಾಶ. ಅಲ್ಲಿ ಏನೂ ಕೂಡ ಉಳಿಯುವುದಿಲ್ಲ. ಅವು ಕೆರೆಗೆ ಬರುತ್ತವೆ. ಪಾಪ, ಅದರ ತಪ್ಪು ಎನ್ನುವುದಕ್ಕಾಗುವುದಿಲ್ಲ. ಆನೆಗಳಿಗೆ ಏನಾಗಿದೆ ಎಂದರೆ, ಅದಕ್ಕೆ ಬೇಕಾಗಿರುವಂತಹ ಬಿದಿರು ಸರ್ವ ನಾಶವಾಗಿದೆ. ಬಿದಿರು ಎಲ್ಲಿಯೂ ಉಳಿದಿಲ್ಲ. ಹಾಗಾಗಿ, ಅವು ಮೇವು ಮತ್ತು ನೀರನ್ನು ಹುಡುಕಿಕೊಂಡು ಹೋಗಬೇಕಲ್ಲ. ಇದರ ಜೊತೆಗೆ ನೀರಿನ ಬಗ್ಗೆ ಹೇಳಬೇಕೆಂದರೆ, ನೀವು ಟರ್ಪಾಲ್ ಕಟ್ಟಿಕೊಂಡು ಬಾವಿ ಮಾಡಿದರೆ, ಅವುಗಳಿಗೆ ನೀರು ಹೇಗೆ ಆಗುತ್ತದೆ. ಮಂಗ, ಹಕ್ಕಿ, ಪಕ್ಷಿಗಳು ಕುಡಿಯುವುದಕ್ಕೆ ಆ ನೀರು ಬಳಕೆ ಆಗುತ್ತದೆ. ಆನೆಗಳಿಗೆ ಕೊಡತಕ್ಕಂಥ ನೀರನ್ನು ನೀವು ಕೊಡುವುದಕ್ಕಾಗುವುದಿಲ್ಲ. ಹುಲಿ, ಚಿರತೆ, ಸಿಂಹ ಪ್ರಾಣಿಗಳು ಆ ನೀರನ್ನು ಕುಡಿದುಕೊಂಡು ಇರುತ್ತವೆ.  ಆನೆಗಳು ಕೆರೆ ನೀರಿನಲ್ಲಿ ಈಜಾಡಬೇಕು. ಅಂತಹ ಕೆರೆಗಳನ್ನು ನಿರ್ಮಾಣವನ್ನು ನೀವು ಎಲ್ಲಿ ಮಾಡಿದ್ದಿರಿ? ನೀರು ಬರುವಂತಹ ಜಾಗ ಬೇಕಾದಷ್ಟು ಇದೆ. ಅಂತಹ ಕೆರೆಗಳನ್ನು ನಿರ್ಮಾಣ ಮಾಡುವಂತಹ ಕೆಲಸ ಆಗಬೇಕು. Natural source ಇದೆ. ಆ natural source ಅನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಲ್ಲ. ನಾವು ಏನಾದರೊಂದು ಪ್ರಶ್ನೆ ಕೇಳಿದರೆ, ರೈಲ್ವೆ ಕಂಬಿಗಳನ್ನು ಹಾಕಿ ಮುಂದಿನ ದಿನಗಳಲ್ಲಿ ಸರಿ ಮಾಡಿಕೊಡುತ್ತೇವೆ ಎಂದು ತಾವು ಹೇಳುತ್ತಲೇ ಇದ್ದೀರಿ.  ಆರು ವರ್ಷಗಳಿಂದ ನಾನು ನಿರಂತರವಾಗಿ ಪ್ರಶ್ನೆಯನ್ನು ಕೇಳುತ್ತಲೇ ಇದ್ದೇನೆ. ನಾನು ಮತ್ತೆ ಪ್ರಶ್ನೆ ಕೇಳಬೇಕಾಗಿದೆ. ಆ ತರಹ ಪರಿಸ್ಥಿತಿ ಇದೆ. ಇದು permanent source ಅಲ್ಲ. ವೈಜ್ಞಾನಿಕವಾಗಿ ಇದನ್ನು ಶಾಶ್ವತವಾಗಿ ಮಾಡುವಂತಹದ್ದು ಇದೆ.  ತಾವು ಆರು ಜಿಲ್ಲೆಗಳಲ್ಲಿ ಮಾಡುವಂತಹದ್ದು ಕಷ್ಟವಿದೆ. ಒಂದೊಂದು ಜಿಲ್ಲೆಯಲ್ಲಿ ಒಂದು ವರ್ಷ ಮಾಡಿಕೊಂಡು ಬನ್ನಿ effective ಆಗಿ ಯಾವ ಕಾರಣಕ್ಕೂ ಸಂಘರ್ಷ ಆಗದ ರೀತಿಯಲ್ಲಿ ಆನೆಗಳು ಅಲ್ಲಿಂದ ಆಚೆ ಬರದ ರೀತಿಯಲ್ಲಿ ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಮಾಡಿ. ಈ ಕೆಲಸ ಏತಕ್ಕಾಗುವುದಿಲ್ಲ? ಈಗಾಗಲೇ ಸರ್ಕಾರದಲ್ಲಿ ಅಂದರೆ  ಈ ನಾಡಿನಲ್ಲಿ ಸಂಪೂರ್ಣವಾಗಿ ಅಕೇಶಿಯಾ, ನೀಲಗಿರಿ ಮರಗಳನ್ನು ತೆಗೆಯಬೇಕೆಂದು ತೀರ್ಮಾನ ತೆಗೆದುಕೊಂಡಾಗಿದೆ. ಅದಕ್ಕೆ ಶ್ಲಾಘನೆ ಕೂಡ ಮಾಡಿದ್ದಾರೆ. ಆದೆ   ಅದನ್ನು ಎಲ್ಲಿ ತೆಗೆದಿದ್ದೀರಿ? Dense forest ಆದ ಆಗುಂಬೆ, ಚಾರ್ಮಾಡಿ ಘಾಟ್‌ಗಳಲ್ಲಿ ಒಳ್ಳೆಯ ಫಲವತ್ತಾದ ಜಾಗದಲ್ಲಿ ಅಕೇಶಿಯಾ, ನೀಲಗಿರಿ ಮರಗಳನ್ನು ಬೆಳಿದಿದ್ದೀರಿ ಮತ್ತು ಬೆಳೆಯುತ್ತಲೂ ಇದ್ದೀರಿ. ಆ ನರ್ಸರಿಯನ್ನು  ಒಂದು ಬಾರಿ ಕ್ಲೋಸ್ ಮಾಡಿ. ಅಕೇಶಿಯಾ, ನೀಲಗಿರಿ ಮರಗಳು ಬೇಕಾಗಿಲ್ಲ ಮತ್ತು ಅದರಿಂದ ಯಾವುದೂ ಪ್ರಯೋಜನವಿಲ್ಲ.     ಆ ಗಿಡಗಳನ್ನು ಬೆಳೆಯುವ ನರ್ಸರಿಯನ್ನು ಪೂರ್ತಿಯಾಗಿ ಮುಚ್ಚಿ. ನರ್ಸರಿಗೋಸ್ಕರ ವರ್ಷಕ್ಕೆ ಕೋಟ್ಯಂತರ ರೂಪಾಯಿಗಳಷ್ಟು ಖರ್ಚಾಗುತ್ತದೆ. ಯಾವ ಹಣ್ಣಿನ ಗಿಡಗಳನ್ನು ಬೆಳೆಸಿದಿರಿ? ಆಗುಂಬೆ, ಚಾರ್ಮಾಡಿ, ಶಿರಾಡಿ ಘಾಟ್‌ಗಳಲ್ಲಿ ನೋಡಿದಾಗ, ಆ ಮಂಗಗಳು ಕಟ್ಟೆಯ ಮುಂದೆ ನಿಂತಿರುತ್ತವೆ. ಆ ಮುಸಿಯನಂತ ಸಂತತಿ ಹೋದರೆ, ಆ ಸಂತತಿಯನ್ನು ಮತ್ತೆ ವಾಪಸ್ಸು ತರುವುದಕ್ಕೆ ಸಾಧ್ಯವಿಲ್ಲ. ಅಂತಾ ಒಳ್ಳೆಯ ಮುಸಿಯಾಗಳ ಬಾಲ ಎರಡ್ಮೂರು ಮಾರು ಇರುತ್ತದೆ. ಆದರೂ ಕೂಡ ಆ ಮುಸಿಯಾ ಮಾನವನನ್ನು ನೋಡುವುದಿಲ್ಲ. ಇವತ್ತು ನಾನು ಬಾಳೆಹಣ್ಣನ್ನು ಹಿಡಿದುಕೊಂಡು ನನ್ನ ಕಾರಿನ ಹತ್ತಿರ ನಿಂತಿದ್ದಾಗ,  ಅದು ಬಂದು ಬಾಳೆಹಣ್ಣು ತೆಗೆದುಕೊಂಡು ಹೋಗುತ್ತದೆ. ಈ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದಂತಹವರು ನಾವುಗಳು. ಇದನ್ನು

ನೋಡಿದರೆ ಬಹಳ ದುಃಖ ಬರುತ್ತದೆ. ಅಂತಹ ಪ್ರಾಣಿಗಳ ಸಂತತಿಯನ್ನು ಉಳಿಸಬೇಕಾಗಿದೆ. ಯಾರಾದರೂ ದೇವಸ್ಥಾನ, ಧರ್ಮಸ್ಥಳ ದೇವಸ್ಥಾನಗಳಿಗೆ ಹೋಗಿ ಹಣ್ಣು ಕಾಯಿ ಮಾಡಿಸಿರುವುದನ್ನು ತೆಗೆದುಕೊಂಡು ಬಂದು ಮಂಗಗಳಿಗೆ ತಿನ್ನುವುದಕ್ಕೆ ಕೊಟ್ಟು ಹೋಗುತ್ತಾರೆ. ಕರೋನಾ ಸಂದರ್ಭದಲ್ಲಿ ಬಹಳಷ್ಟು ಮಂಗಗಳು ಹಣ್ಣು-ಹಂಪಲು ಇಲ್ಲದೇ ಒದ್ದಾಡಿ ಸತ್ತು ಹೋಗಿದ್ದಾವೆ. ಆ ಜಾಗದಲ್ಲಿ ಯಾರೂ ಹೋಗಿಲ್ಲವಲ್ಲ. ಹಾಗಾಗಿ ಹಣ್ಣಿನ ಗಿಡಗಳನ್ನು ಬೆಳೆಸುವ ತಾಣವಿರುವಂತಹ ಜಾಗ ಅಂದರೆ ಚಾರ್ಮಾಡಿ, ಆಗೊಂಬೆ, ಶಿರಾಡಿ ಘಾಟ್‌ಗಳು. ಇವತ್ತು ಅಲ್ಲಿ ಒಂದು ಹಣ್ಣಿನ ಗಿಡವಿಲ್ಲ. ಆನೆಗಳು ಬೇಕಾದಷ್ಟು ಹಲಸಿನ ಮರಗಳನ್ನು ಅಲ್ಲಾಡಿಸಿ, ಹಲಸಿನ ಹಣ್ಣುಗಳನ್ನು ತಿನ್ನುತ್ತಿದ್ದವು. ಇವತ್ತು ಒಂದು ಹಲಸಿನ ಮರಗಳಿಲ್ಲ. ನೇರಳೆ ಮರಗಳಿಲ್ಲ. ಅತ್ತಿ ಮರಗಳಿಲ್ಲ.ಈ ಪರಿಸ್ಥಿತಿ ನಿರ್ಮಾಣವಾಗಿರುವುದು ನಿಜ. ಆ ಸಂಘರ್ಷವನ್ನು ಯಾವ ರೀತಿ ಹೋಗಲಾಡಿಸಬೇಕು ಎನ್ನುವ ವಿಚಾರದಲ್ಲಿ ಮಾನ್ಯ ಸಚಿವರು ಮನಸ್ಸು ಮಾಡಬೇಕಾಗಿದೆ. ನಾವೇನಾದರೂ ಕೋವಿ ಹಿಡಿದು ಮುಳ್ಳು ಹಂದಿಗೆ ಹೊಡೆದರೆ, the Wildlife (Protection) Act ಅಡಿಯಲ್ಲಿ ನಮ್ಮನ್ನು ಒಳಗೆ ಹಾಕಿದರೆ ಮುಗಿದೇ ಹೋಯಿತು. ಎಲ್ಲರೂ ಮನೆಗಳಲ್ಲಿ ಕೋವಿ ಇದೆ. ನನ್ನ ಬೆಳೆಯನ್ನು ಸಂರಕ್ಷಣೆ ಮಾಡಬೇಕಲ್ಲ. ನನ್ನ ಬೆಳೆಯನ್ನು ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಡಿಕೆ ಗಿಡವನ್ನು ಒಂದು ಚೂರು ಕೋರಿದರೆ, ಅದು ಮುಗಿದೇ ಹೋಯಿತು. ಆನೆ ಬಂದು ಗಿಡಕ್ಕೆ ಒಂದು ಸಾರಿ ಹೊಡೆದರೆ, ಗಿಡ ಮುರಿದು ಹೋಗುತ್ತದೆ. ಅದರೊಳಗಿನ ತಿರುಳು ತಿನ್ನುವುದಕ್ಕೋಸ್ಕರ ಗಿಡವನ್ನು ತೆಗೆದು ಬಿಡುತ್ತದೆ. ಮುಳ್ಳುಹಂದಿ ಬಂದು ಮೆಣಸಿನ ಬಳ್ಳಿಯನ್ನು ಕಡಿದರೆ, ಬಹಳ ಖಾರವಾಗಿ ರುಚಿ ಇರುತ್ತದೆ. ನಾನು ಐದು-ಹತ್ತು ವರ್ಷಗಳಿಂದ ಮೆಣಸಿನ ಬಳ್ಳಿ ಬೆಳೆದಿದ್ದು ಹೋಯಿತು. ನಾನು ಸರ್ವ ನಾಶ ತೆಂಗಿನಗಿಡವನ್ನು ತಿನ್ನುತ್ತದೆ. (ಮುಂದು)

(56) 04.03.2025/7.10/ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು)**

ಅದು ತೆಂಗಿನ ಗಿಡವನ್ನು ಏಕೆ ತಿನ್ನುತ್ತದೆ ಎಂದರೆ, ಈಚಲು ಗಿಡದೊಳಗೆ ಗಿಣ್ಣು ಬರುತ್ತದೆ. ಆ ಗಿಣ್ಣು ತಿನ್ನುವುದಕ್ಕೆ ಬರುತ್ತದೆ. ಅದು ಬಹಳ sweet ಇರುತ್ತದೆ. ಅದನ್ನು ನಾವು ಕೂಡ ತಿನ್ನುತ್ತೇವೆ. ಆ ಗಿಡದ ರಟ್ಟೆಯನ್ನು ಎಳೆದರೆ ಆ ಗಿಣ್ಣು ಬರುತ್ತದೆ. ಆ ತುದಿಯನ್ನು ತಿನ್ನುತ್ತದೆ. ತೆಂಗಿನ ಕಾಯಿ ಮೇಲೆ ಚಿಪ್ಪು ಬರುತ್ತದಲ್ಲಾ ಆ ರೀತಿ ಇರುತ್ತದೆ. ಎಳೆಯದು ಬೊಮ್ಮಲು ಬರುವುದಕ್ಕೆ ಮುಂಚೆ ತೆಂಗಿನ ಕಾಯಿ ತಿಂದು ನೋಡಿ. ಅದು ತಿನ್ನಲು ಬಹಳ ರುಚಿ ಇರುತ್ತದೆ. ಅದನ್ನು ತಿನ್ನುವುದಕ್ಕೋಸ್ಕರ ಇಡೀ ಗಿಡವನ್ನೇ ತೆಗೆದುಬಿಡುತ್ತದೆ.

**ಸಭಾಪತಿಯವರು:-** ಶ್ರೀ ಭೋಜೇಗೌಡ ರವರೇ, ತಾವು ಮಾತನಾಡಿದ್ದು ಸಾಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಇಂತದ್ದೆಲ್ಲಾ ಇದೆ. ಇದನ್ನೆಲ್ಲಾ ರೈತರು face ಮಾಡುತ್ತಾರೆ. ಇದೇನು ತೊಂದರೆ ಆಗುವುದಿಲ್ಲ.

**ಸಭಾಪತಿಯವರು:-** ಶ್ರೀ ಭೋಜೇಗೌಡ ರವರೇ, ಸಾಕು ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಈ ರೀತಿ ಇದೆ. ಅರಣ್ಯ ಇಲಾಖೆ ಸಚಿವರು ಕೂಡ ಸದನಲ್ಲಿ ಇದ್ದಾರೆ. ಆದರೆ ಮಾನವ ಸಂಘರ್ಷ ಮತ್ತು ಪ್ರಾಣಿಗಳ ಸಂಘರ್ಷವನ್ನು ನೀವು ಬಹಳ ದಿಟ್ಟತನದ ನಿಲುವನ್ನು ತೆಗೆದುಕೊಂಡು ಹಂತ-ಹಂತವಾಗಿ ಕೆಲಸ ಮಾಡಿ. ಅದಕ್ಕೆ ಸ್ವಲ್ಪ ಹಣ ಕೂಡ ಖರ್ಚಾಗುತ್ತದೆ. ನೀವು ಒಂದು war footing ನಲ್ಲಿ ಒಂದೊಂದು ವರ್ಷಕ್ಕೆ ಒಂದೊಂದು ಜಿಲ್ಲೆಯಲ್ಲಿ ಕೆಲಸ ಮಾಡಿದರೆ 6 ವರ್ಷದಲ್ಲಿ ಮುಗಿಯುತ್ತದೆ. ಒಂದು period ನಲ್ಲಿ ನೀವು ಇಡೀ 6 ಜಿಲ್ಲೆಯಲ್ಲೂ ಮುಗಿಸಬಹುದು. ದಯಮಾಡಿ ತಾವು ಆ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ಶ್ರೀ ಎಸ್.ಎಲ್.ಭೋಜೇಗೌಡ ಹಾಗೂ ಶ್ರೀ ಶಾಂತರಾಮ್ ಬುಡ್ನಸಿದ್ದಿ ಯವರು ಹೇಳಿದ್ದಾರೆ. ಕೊಡಗು ಜಿಲ್ಲೆಯಲ್ಲಷ್ಟೇ ಆನೆಗಳ ಕಾಟ ಬಹಳ ಆಗಿದೆ. ಇತ್ತೀಚೆಗೆ ಅಲ್ಲಿ ನಾಲ್ಕೈದು ಸಾವಾಗಿದೆ. ಮಾನ್ಯ ಅರಣ್ಯ ಸಚಿವರಿಗೆ ಇದು ಗೊತ್ತಿರಬಹುದು. ಆಮೇಲೆ ಹುಲಿ ಕಾಟ ತುಂಬಾ ಇದೆ. ಮಂಗಗಳ ಕಾಟದಿಂದ ಬೆಳೆ ನಾಶ ಆಗುವುದು ವಿಪರೀತ ಆಗಿದೆ. ಪ್ರಾಣಿಗಳ ಹಾವಳಿಯಿಂದ ಮನುಷ್ಯ ಸತ್ತರೆ ಸರ್ಕಾರ ಪರಿಹಾರ ಕೊಡುತ್ತದೆ. ಆದರೆ ಜೇನುನೊಣ ಕಚ್ಚಿದ್ದರಿಂದ ಇಬ್ಬರು ಸತ್ತಿದ್ದಾರೆ. ಅದಕ್ಕೆ ಯಾವುದೇ ಪರಿಹಾರ ಸಿಕ್ಕಿಲ್ಲ. ಜೇನುನೊಣ ಕಚ್ಚಿ ಸತ್ತವರಿಗೂ ಕೂಡ ಸರ್ಕಾರ ಪರಿಹಾರ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಆನೆಗಳು ಬರದಂತೆ barricade ನಿರ್ಮಿಸಲು ಈ ಬಜೆಟ್‌ನಲ್ಲಿ ಹೆಚ್ಚಿನ ಅನುದಾನವನ್ನು ಕೊಟ್ಟು ಆ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಅರಣ್ಯ ಸಚಿವರಿಗೆ ಮನವಿ ಮಾಡುತ್ತೇನೆ.

**ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯಲ್ಲಷ್ಟೇ ಅಲ್ಲದೇ ಪಶ್ಚಿಮಘಟ್ಟದ ಎಲ್ಲಾ 10 ಜಿಲ್ಲೆಗಳಲ್ಲೂ ಮೀಸಲು ಅರಣ್ಯ ಪ್ರದೇಶ ಇದೆ. ಇವತ್ತಿನ ದಿವಸ ಎಲ್ಲಾ ಕಡೆ ಸೊಪ್ಪು ಇರಬಹುದು ಅಥವಾ ಕುರುಚಲು ಗಿಡ ಇದನ್ನೆಲ್ಲಾ ರೈತರು ತೆಗೆದುಕೊಂಡು ಹೋಗುವುದಕ್ಕೆ ಮತ್ತು ಗೊಬ್ಬರ ಎಂದು ಉಪಯೋಗ ಮಾಡಿಕೊಳ್ಳುವುದಕ್ಕೆ ಮೊದಲಿನಿಂದಲೂ ಅಧಿಕಾರವನ್ನು ಕೊಡಲಾಗಿದೆ. ಈಗಲೂ ಕೂಡ ಆ ಅಧಿಕಾರ ಇದೆ. ಆದರೆ ಅಲ್ಲಿ ಕೆಲವೊಂದು ಜನರು ಅರಣ್ಯ ಒತ್ತುವರಿ ಮಾಡಿದ್ದಾರೆ. ಅವರೆಲ್ಲಾ ಅರಣ್ಯ ಹಕ್ಕು ಕಾಯ್ದೆಯಲ್ಲಿ ಅರ್ಜಿ ಹಾಕಿದ್ದಾರೆ. ಆ ಅರ್ಜಿಗಳು ತಿರಸ್ಕಾರ ಆಗಿವೆ. ಅದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇವೆ. ಅಂತಹ ರೈತರು ಯಾರು ಇದ್ದಾರೆ, ಅತಿಕ್ರಮಣ ಮಾಡಿರುವಂತಹ ರೈತರ ಬೆಳೆ ಹಾನಿಯಾಗಿದ್ದರೆ ಅಂತಹವರಿಗೆ ಪರಿಹಾರ ಕೊಡುವುದಕ್ಕೆ ಕಾಯ್ದೆಯಲ್ಲಿ ಅವಕಾಶವಿಲ್ಲ. ಕಂದಾಯ ಇಲಾಖೆಯವರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ನಾನು ಚರ್ಚೆ ಮಾಡುತ್ತೇನೆ. ಮತ್ತೆ ನಮ್ಮ ಇಲಾಖೆಯ ಅಧಿಕಾರಿಗಳು ಅವರು ಸೊಪ್ಪು ತೆಗೆದುಕೊಂಡು ಹೋಗುವುದಕ್ಕೆ ಅಥವಾ ಕುರುಚಲು ಗಿಡ ತೆಗೆದುಕೊಂಡು ಹೋಗುವುದಕ್ಕೆ ಏನಾದರು ತೊಂದರೆ ಕೊಡುತ್ತಿದ್ದರೆ ಅದನ್ನು ತಪ್ಪಿಸಿ ಅವುಗಳನ್ನು ತೆಗೆದುಕೊಂಡು

ಹೋಗುವುದಕ್ಕೆ ನಾವು ಈಗಾಗಲೇ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದ್ದೇವೆ. ಅವಕಾಶ ಮಾಡಿಕೊಡುವಂತೆ ಕಟ್ಟುನಿಟ್ಟಿನ ಆದೇಶ ಕೊಟ್ಟು ಕಾಯ್ದೆ ಪ್ರಕಾರ ನಾನು ಸೂಚನೆಯನ್ನು ಕೊಡುತ್ತೇನೆ. ಇಂತಹ ಮೀಸಲು ಅರಣ್ಯ ಪ್ರದೇಶದಲ್ಲಿ ಅಲ್ಲಿ ಅವರು ವಾಸ್ತವ್ಯ ಹೂಡುವುದಕ್ಕೆ ಮತ್ತು ಮನೆ ಕಟ್ಟಿಕೊಳ್ಳುವುದಕ್ಕೆ ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನಮ್ಮ ಕಾಯ್ದೆ ಪ್ರಕಾರ ಅವಕಾಶ ಇಲ್ಲ. ಅವರು ಬಂದು ಸೊಪ್ಪು ತೆಗೆದುಕೊಂಡು ಹೋಗಬಹುದು. ಇವತ್ತಿನ ದಿವಸ ದನಕರುಗಳಿಗೆ ಮೇವನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆ. ಮಾನವ ಹಾನಿ ಮತ್ತು ಪ್ರಾಣಿ ಸಂಘರ್ಷದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರವರು ಬಹಳ ಸವಿಸ್ತಾರವಾಗಿ ಮಾತನಾಡಿದ್ದಾರೆ, ಅದು ಸತ್ಯ. ಹಲವಾರು ವರ್ಷಗಳಿಂದ ಮಾನವ ಹಾನಿ ಮತ್ತು ಪ್ರಾಣಿ ಸಂಘರ್ಷ ದಿನೇದಿನೇ ಜಾಸ್ತಿ ಆಗುತ್ತಿದೆ. ಇದಕ್ಕೆ ಬಹಳಷ್ಟು ಕಾರಣಗಳಿವೆ. ಇದು ಎಲ್ಲರ ಗಮನದಲ್ಲಿದೆ. ಇವತ್ತಿನ ದಿವಸ ನಾವು ಹೊಸದಾಗಿ ವನ್ಯ ಜೀವಿಗಳ ಸಂರಕ್ಷಣೆ ಮಾಡುತ್ತಿದ್ದೇವೆ. ಹಾಗಾಗಿ, ಆನೆಗಳ ಸಂಖ್ಯೆ ಜಾಸ್ತಿ ಆಗಿದೆ, ಹುಲಿಗಳ ಸಂಖ್ಯೆ ಜಾಸ್ತಿ ಆಗಿದೆ, ಚಿರತೆಗಳ ಸಂಖ್ಯೆ ಜಾಸ್ತಿ ಆಗಿದೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಸುಮಾರು 6,395 ಆನೆಗಳಿವೆ. ಇಡೀ ದೇಶದಲ್ಲಿಯೇ ಜಾಸ್ತಿ ಆನೆಗಳು ಕರ್ನಾಟಕ ರಾಜ್ಯದಲ್ಲಿವೆ. 563 ಹುಲಿಗಳಿವೆ. ನಮ್ಮ ರಾಜ್ಯ ಹುಲಿಗಳ ಸಂಖ್ಯೆಯಲ್ಲಿ ಎರಡನೆಯ ಸ್ಥಾನದಲ್ಲಿದ್ದೇವೆ. ಹಾಗಾಗಿ, ಅರಣ್ಯ ಕ್ಷೀಣಿಸುತ್ತಿದೆ. ಮತ್ತೆ ಅರಣ್ಯದ ಪಕ್ಕದಲ್ಲಿ ಜನವಸತಿ ಪ್ರದೇಶಗಳು ದಿನೇ ದಿನೇ ಜಾಸ್ತಿ ಆಗುತ್ತಿವೆ. ಇವೆಲ್ಲಾ ಅನೇಕ ಕಾರಣಗಳ ಜೊತೆಗೆ ಮಾನ್ಯ ಸದಸ್ಯರು ಹೇಳಿದಂತೆ, ಅರಣ್ಯ ಪ್ರದೇಶದಲ್ಲಿ ಆನೆಗಳಿಗೆ ನೀರು ಬೇಕಾಗಿದೆ ಅಥವಾ ಅವುಗಳಿಗೆ ಆಹಾರ ಬೇಕಾಗಿದೆ. ಅದಕ್ಕಾಗಿ ಯಾವ ರೀತಿಯಲ್ಲಿ ಬಿದಿರು ಮರ ಇರಬಹುದು, ಅಲಸೆ ಮರ ಇರಬಹುದು ಮತ್ತು ಇತರೆ ಏನು ಗಿಡ-ಮರಗಳನ್ನು ಬೆಳೆಸಬೇಕಾಗಿದೆ. ಅದನ್ನು ಬೆಳೆಸಲು ಈಗಾಗಲೇ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಇವತ್ತಿನ ದಿವಸ ಎಲ್ಲೂ Eucalyptus or Acacia ಮರಗಳನ್ನಾಗಲಿ ಬೆಳೆಸಬಾರದು. ಅವುಗಳನ್ನೆಲ್ಲಾ ತೆಗೆದುಹಾಕಬೇಕು ಎಂದು ಹೇಳಿದ್ದೇವೆ. ಈ ಹಿಂದೆ ಎಲ್ಲಾ ಆನೆ ಕಂದಕಗಳನ್ನು ನಿರ್ಮಾಣ ಮಾಡಿದ್ದಾರೆ. ಈ ಹಿಂದೆ tentacle fencing ಎಲ್ಲವೂ ಆಗಿದೆ. ಆನೆ ಕಂದಕಗಳನ್ನು ನಿರ್ಮಾಣ ಮಾಡಿದ್ದರು. ಅದನ್ನು ನಿರ್ವಹಣೆ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಆನೆಗಳು ಹೊರಗಡೆಗೆ ಬಂತು ಎಂದರೆ ಅದು ಮುಚ್ಚಿಹೋಗಿಬಿಡುತ್ತದೆ. ಮಳೆ ಬಂದರೆ ಆ ಕಂದಕ ಮುಚ್ಚಿಹೋಗಿಬಿಡುತ್ತದೆ. ಇದರ ಜೊತೆಗೆ ನಾವೇನಾದರೂ tentacle fencing ಮಾಡಿದ್ದೇವೆ ಎಂದು ಹೇಳಿದ್ದರೂ ಕೂಡ ಅದಕ್ಕೆ ಬ್ಯಾಟರಿ ಇಲ್ಲ, ಮತ್ತೆ ಆ fencing ಕೂಡ work ಆಗುತ್ತಿಲ್ಲ. ಆನೆಗಳು ಅರಣ್ಯದ ಹೊರಗಡೆಗೆ ಬರುತ್ತಿವೆ ಎಂದು railway barricade ಳನ್ನು ಮಾಡಬೇಕೆಂದು ಮಾಡಿದ್ದೇವೆ. ಸುಮಾರು 20 ದಿನಗಳ ಹಿಂದೆ ಸುಮಾರು 330 ಕಿಲೋಮೀಟರ್ railway barricade ಮಾತ್ರ ಇತ್ತು. ಆದರೆ ಈಗ ಆ railway barricade ಗೆ ಸುಮಾರು ರೂ.200 ರಿಂದ 300 ಕೋಟಿಗಳ ಅನುದಾನವನ್ನು ಮೀಸಲಿಟ್ಟು, ಆ railway barricade ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಮಾಡುವಂತಹ ಒಂದು ಪ್ರಕ್ರಿಯೆ ಪ್ರಾರಂಭವಾಗಿದೆ. ನಿನ್ನೆ ದಿವಸ ಕೊಡಗಿನಲ್ಲಿ ಇರಬಹುದು, ಚಿಕ್ಕಮಗಳೂರು

ಇರಬಹುದು, ಹಾಸನಕ್ಕೆ ಅದಕ್ಕಾಗಿ ಹೋಗಿದ್ದೆನು. ಮಾನ್ಯ ಸಭಾಪತಿಯವರೇ, ಬಹಳ ದುರ್ದೈವ ಸಂಗತಿ ಎಂದರೆ, ಹೋದ ವರ್ಷ ಸುಮಾರು 65 ಜನ ಮಾನವ ಪ್ರಾಣಿ ಸಂಘರ್ಷದಲ್ಲಿ ಮೃತಪಟ್ಟಿದ್ದಾರೆ. ಆನೆಯಿಂದ ಸುಮಾರು 32 ಜನ ಸತ್ತಿದ್ದಾರೆ. ಈ ವರ್ಷ ಇಲ್ಲಿಯವರೆಗೆ ಸುಮಾರು 42 ಜನ ಮೃತಪಟ್ಟಿದ್ದಾರೆ. ಮಾರ್ಚ್, ಫೆಬ್ರವರಿ ಮತ್ತು ಏಪ್ರಿಲ್‌ನವರೆಗೆ ಸಾವುಗಳು ಜಾಸ್ತಿಯಾಗುತ್ತದೆ. ಏಕೆಂದರೆ, ಆನೆಗಳು ಬೇಸಿಗೆಯಲ್ಲಿ... ಕಳೆದ ಬಾರಿ ರಾಜ್ಯದಲ್ಲಿ ಬರ ಇತ್ತು. ಈ ಬಾರಿ ಸಾವಿನ ಸಂಖ್ಯೆ ಕಡಿಮೆಯಾಗಿದೆ. ಇದಕ್ಕೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು, ವಿಶೇಷವಾಗಿ ಕೊಡಗು, ಹಾಸನ ಮತ್ತು ಚಿಕ್ಕಮಗಳೂರಿನ ಭಾಗದಲ್ಲಿ ನೂರು ಆನೆಗಳು, ಈ ಭಾಗದಲ್ಲಿ ನೂರು ಆನೆಗಳು ಅರಣ್ಯ ಪ್ರದೇಶದಿಂದ ಸುಮಾರು 20 ವರ್ಷಗಳಿಂದ ಹೊರಗಡೆ ಇವೆ. ಮತ್ತೆ ಆನೆಗಳನ್ನು ನಾವು ಸೆರೆ ಹಿಡಿಯಬೇಕು. ಕಾರ್ಯಾಚರಣೆ ಮಾಡಿ ಅವುಗಳನ್ನು ತೆಗೆದುಕೊಂಡು ಹೋಗಿ ಅರಣ್ಯದಲ್ಲಿ ಬಿಡಬೇಕು. ನಾವು ಅವುಗಳನ್ನು ಕೇರಳದಲ್ಲಿ ತೆಗೆದುಕೊಂಡು ಹೋಗಿ ಬಿಟ್ಟರೂ ಕೂಡ .... ಆನೆಗಳಿಗೆ ಎಷ್ಟು memory power ಇದೆಯೆಂದರೆ, ಸುಮಾರು 6 ತಿಂಗಳು ಅಥವಾ 1 ವರ್ಷ ಬಿಟ್ಟು ಮತ್ತೆ ಅದೇ ಸ್ಥಾನದಲ್ಲಿ ಬರುತ್ತವೆ. 80 ರ ದಶಕದಲ್ಲೇ ಸುಮಾರು 20 ರಿಂದ 25 ಆನೆಗಳನ್ನು ಸೆರೆಹಿಡಿದು ಬೇರೆ ಕಡೆಗೆ ಬಿಟ್ಟಿದ್ದರು. ಆದರೆ ಅವು ಮತ್ತೆ ಅಲ್ಲಿಗೆ ಬಂದಿವೆ. 90 ರ ದಶಕದಲ್ಲೂ ಕೂಡ ಆನೆಗಳನ್ನು ಸೆರೆಹಿಡಿದು ಬೇರೆ ಕಡೆಗೆ ಬಿಟ್ಟಿದ್ದರು. ಹಿಂದಿನ ಸರ್ಕಾರದಲ್ಲೂ ಕೂಡ ಆನೆಗಳನ್ನು ಸೆರೆಹಿಡಿದು ಬೇರೆ ಕಡೆಗೆ ಬಿಟ್ಟಿದ್ದರು. ಆದರೆ ಮತ್ತೆ ಅದೇ ಪ್ರದೇಶಕ್ಕೆ ವಾಪಸ್ಸು ಬಂದಿವೆ. ನಾನು ಅರಣ್ಯ ಸಚಿವರಾದ ನಂತರ ರಾಜ್ಯದಲ್ಲಿ ಇದರ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ 4 ರಾಜ್ಯಗಳು ಸೇರಿ ಒಂದು ಸಮ್ಮೇಳನವನ್ನು ಮಾಡಿದ್ದೇವೆ. ಇದಾದನಂತರ ಅಂತರರಾಷ್ಟ್ರೀಯ ಮಟ್ಟದಲ್ಲಿ ತಜ್ಞರನ್ನು ಕರೆಸಿ, ಅವರ ಸಲಹೆಗಳನ್ನು ತೆಗೆದುಕೊಳ್ಳಬೇಕೆಂದು, ಅಂತರರಾಷ್ಟ್ರೀಯ ಮಾನವ ಆನೆ ಸಂಘರ್ಷದ ಬಗ್ಗೆ ಕೂಡ ಒಂದು ಸಮ್ಮೇಳನವನ್ನು ಮಾಡಿದ್ದೇವೆ. ಆ ಸಮ್ಮೇಳನದಲ್ಲಿ ಅನೇಕ ಜನ ತಜ್ಞರು ಭಾಗವಹಿಸಿದ್ದರು. ಆನೆಗಳ behavior ನಲ್ಲಿ ಏನಾದರೂ ಬದಲಾವಣೆ ಆಗಿದೆಯೇ? ಏಕೆ ರೀತಿ ದಿನೇ ದಿನೇ ಜಾಸ್ತಿ ಆಗುತ್ತಿದೆ ಎಂದು Indian Institute of Science and WWF (World Wildlife Fund) ಹೀಗೆ 4 ಸಂಸ್ಥೆಗಳಿಗೆ ಜವಾಬ್ದಾರಿಯನ್ನು ಒಪ್ಪಿಸಿ, ಅವರ ಕಡೆಯಿಂದ ಒಂದು ವರದಿಯನ್ನು ಪಡೆಯಬೇಕೆಂಬ ತೀರ್ಮಾನವನ್ನು ಕೂಡ ಮಾಡಿದ್ದೇವೆ. ಇತ್ತೀಚೆಗೆ ಇದಕ್ಕೆ ಜಾಸ್ತಿ ಅನುದಾನ ಬೇಕಾಗುತ್ತದೆ ಎಂದು ಹೊಸದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೇನೆ. ಇವತ್ತಿನ ದಿವಸ ಭದ್ರಾ ಅಭಯಾರಣ್ಯದಲ್ಲಿ ಒಂದು 'Soft Release Centre' ಮಾಡಬೇಕೆಂದು ಆಯವ್ಯಯದಲ್ಲಿ ಘೋಷಣೆ ಮಾಡುವುದಕ್ಕೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅರಣ್ಯದೊಳಗಡೆ ಇರುವ ಆನೆಗಳಿಗೆ ನಾವು barricade ಅಥವಾ ಮತ್ತೊಂದು ಹಾಕಬಹುದು. ಆದರೆ ಆನೆಗಳು ಅರಣ್ಯದ ಹೊರಗಡೆಗೂ ಹೋಗಿವೆ. ಕೆಲವು ಮಾನ್ಯ ಸದಸ್ಯರುಗಳು ಕಾಫಿ ಎಸ್ಟೇಟ್ ಬೆಳೆಸಿದ್ದಾರೆ. ಇವತ್ತಿನ ದಿವಸ ಆ ಕಾಫಿ ಎಸ್ಟೇಟ್‌ಗಳಲ್ಲಿ ಏನಾಗುತ್ತಿದೆಯೆಂದರೆ, ಆನೆಗಳು ಅರಣ್ಯ ಮತ್ತು ಕಾಫಿ ಎಸ್ಟೇಟ್‌ನಲ್ಲಿ ಅದಕ್ಕೆ ವಿಭಿನ್ನವಾಗಿ ಕಾಣುವುದಿಲ್ಲ. ಇವತ್ತಿನ ದಿವಸ ಅರಣ್ಯಕಿಂತಲೂ ಕಾಫಿ ಎಸ್ಟೇಟ್‌ನಲ್ಲಿ ಆನೆಗಳಿಗೆ ರುಚಿಕರವಾದಂತಹ ಆಹಾರಗಳು ಸಿಗುತ್ತದೆ. ಏಕೆಂದರೆ ಅದು ಬಹಳ ದಟ್ಟವಾದ ಅರಣ್ಯದ ರೀತಿ ಇದೆ.

ಹಾಗಾಗಿ, ಅವು ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆಯುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ನಾವು ಒಂದು ತೀರ್ಮಾನವನ್ನು ಮಾಡಿ ಒಂದು 'Soft Release Centre' ಮಾಡಬೇಕೆಂದು ನಿನ್ನೆ ದಿವಸ ಹಾಸನಕ್ಕೆ ಹೋಗಿ ಘೋಷಣೆಯನ್ನು ಮಾಡಿದ್ದೇನೆ. ಅದಕ್ಕೆ ಸುಮಾರು ರೂ.100 ರಿಂದ 200 ಕೋಟಿ ಅನುದಾನ ಬೇಕಾಗುತ್ತದೆ. 2 ವರ್ಷದೊಳಗಾಗಿ ಅಲ್ಲಿ 'Soft Release Centre' ನ್ನು ಮಾಡಿ, ಅರಣ್ಯದ ಹೊರಗಡೆ ಏನು ಸುಮಾರು 200 ಆನೆಗಳವೆ. ಅವುಗಳನ್ನು ಕಾರ್ಯಾಚರಣೆ ಮಾಡಬೇಕೆಂದರೆ ಬಹಳ ಕಷ್ಟದ ಪರಿಸ್ಥಿತಿ. ಅದನ್ನು ಮಾಡುವಂತಹ ಸಂದರ್ಭದಲ್ಲಿ ಬಹಳ ಅಪಾಯಕಾರಿ ಕಾರ್ಯಾಚರಣೆ ಎಂದು ಹೇಳಬಹುದು. ನಾಲ್ಕಾರು ಕುಮ್ಕಿ ಆನೆಗಳನ್ನು ತೆಗೆದುಕೊಂಡು ಹೋಗಬೇಕು. ಒಬ್ಬರು Veterinarian ಬೇಕು. ಒಬ್ಬರು darting ಮಾಡುವವರು ಬೇಕು. ಅದೆಲ್ಲಾ ಮಾಡುವಂತಹ ಸಂದರ್ಭದಲ್ಲಿ ಪುಂಡಾನೆ ಏನಾದರು ಮತ್ತೆ wild ಆಯಿತೆಂದರೆ ಕಷ್ಟ. ಶ್ರೀ ವೆಂಕಟೇಶ್ ಎಂಬುವರು ಕೂಡ ಅದೇ ರೀತಿಯಲ್ಲಿ ಸಾವನ್ನಪ್ಪಿದ್ದಾರೆ. ಅವರು ಒಬ್ಬ sharpshooter ಆಗಿದ್ದರು. ಅವೊತ್ತು ಒಂದು ಪುಂಡಾನೆ ಬಂದುಬಿಟ್ಟು ಅವರ ಮೇಲೆ ದಾಳಿ ಮಾಡಿದ್ದರಿಂದ, ಆ spot ನಲ್ಲೇ ಅವರ ಸಾವಾಯಿತು. ಅದೇ ರೀತಿ ಅರ್ಜುನ ಎಂಬ ಆನೆ ಕೂಡ ಸಾವಾಯಿತು. ಅರ್ಜುನ ಆನೆ ಕುಮ್ಕಿ ಆನೆ. ಕುಮ್ಕಿ ಆನೆಗಳು ಪುಂಡಾನೆಗಳನ್ನು ಹಿಡಿಯುವುದಕ್ಕೆ ಸೈಡ್‌ನಲ್ಲಿ ಉಪಯೋಗ ಮಾಡುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ನಮ್ಮ ಕುಮ್ಕಿ ಆನೆ ಕೂಡ ಸಾವಾಯಿತು. ಅದನ್ನು ಮೈಸೂರು ದಸರಾಗೆ ಉಪಯೋಗ ಮಾಡುತ್ತಿದ್ದೆವು. ಆಗ ಅದರಿಂದ ಸಾಕಷ್ಟು ಟೀಕೆ-ಟಿಪ್ಪಣಿಗಳು ಬಂದವು. ನಾವು ಇವೆಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಒಂದು ಕಡೆ 'Soft Release Centre' ಮಾಡಲಾಗುವುದು. ಮತ್ತೆ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಇನ್ನೂ ಸುಮಾರು 300 ಕಿಲೋಮೀಟರ್ railway barricade ಮಾಡಬೇಕೆಂದು ಪ್ರಸ್ತಾವನೆಗಳವೆ. ಸುಮಾರು 300 ಕಿಲೋಮೀಟರ್ railway barricade ಮಾಡಬೇಕಿದೆ. ಏಕೆಂದರೆ ಜೀವ ಅತ್ಯಮೂಲ್ಯವಾದುದು. ಹಾಗ್ಾಗಿ ನಾವು ಜೀವಕ್ಕೆ ಏನು ಪರಿಹಾರ ಕೊಟ್ಟರೂ ಕೂಡ ಜೀವ ಮರಳ ಬರುವುದಿಲ್ಲ. (ಮುಂದು)

(57)4.3.2025/7.20/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ್ ಖಂಡ್ರೆ (ಮುಂದು):-**

ನಿನ್ನೆ ದಿವಸ ನಾವು ವಿಶ್ವ ವನ್ಯಜೀವಿ ದಿನವನ್ನು ಆಚರಣೆ ಮಾಡಿದೆವು. ವನ್ಯಜೀವಿಗಳ ಸಂರಕ್ಷಣೆ ಆಗಬೇಕು. ಅದಕ್ಕಿಂತ ಜಾಸ್ತಿ ಎಂದರೆ ಮಾನವ ಜೀವವನ್ನು ಸಂರಕ್ಷಣೆ ಮಾಡುವ ಅವಶ್ಯಕತೆ ಜಾಸ್ತಿ ಇದೆ. ಆ ದೃಷ್ಟಿಯಿಂದ ಅರಣ್ಯ ಇಲಾಖೆಯು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ತಾವು ಆರು ವರ್ಷ ಹೇಳಿದ್ದಿರಿ, ಆರು ವರ್ಷವಲ್ಲ ನನ್ನ ಸಂಕಲ್ಪ, ಗುರಿ ಏನಿದೆಯೆಂದರೆ, ಮುಂಬರುವ 2-3 ವರ್ಷಗಳೊಳಗೆ ಒಂದೇ ಒಂದು ಜೀವಹಾನಿಯಾಗಬಾರದು ಎನ್ನುವ ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ನಾವು ಎಲ್ಲಾ ರೀತಿಯ

ತಯಾರಿ ಮಾಡಿದ್ದೇವೆ ಅದಕ್ಕೆ ತಮ್ಮ ಸಲಹೆ-ಸೂಚನೆಗಳೇನೇ ಇದ್ದರೂ ಕಾಲ ಕಾಲಕ್ಕೆ ಕೊಡಿ ಅದನ್ನು ಜಾರಿ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ ಎಂಬ ಭರವಸೆಯನ್ನು ನಾನು ಈ ಸದನದಲ್ಲಿ ಕೊಡುತ್ತಿದ್ದೇನೆ.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜೇನು ನೊಣ ಕಡಿತದಿಂದ ಎರಡು ಕೂಲಿ ಕಾರ್ಮಿಕರ ಸಾವಾಗಿದೆ. ಅದಕ್ಕೆ ಅರಣ್ಯ ಇಲಾಖೆಯವರು ಜೇನು ನೊಣ ಕಡಿತಕ್ಕೆ ಯಾವುದೇ ಪರಿಹಾರವಿಲ್ಲ ಹೇಳುತ್ತಿದ್ದಾರೆ. ದಯವಿಟ್ಟು ಆ ಕೂಲಿ ಕಾರ್ಮಿಕರಿಗೆ ಪರಿಹಾರ ಕೊಡುವ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಜೇನು ನೊಣದಿಂದ ಸಾವಾಗಿದೆ ಎಂದು ಹೇಳಿದ್ದಾರೆ. ಜೇನು ನೊಣದಿಂದ ಸಾವಾಗಿದ್ದಕ್ಕೆ ಪರಿಹಾರವಿಲ್ಲ. ನಮ್ಮಲ್ಲಿ ಆನೆ, ಹುಲಿ, ಚಿರತೆಗಳಿಂದ ಸಾವಾದರೆ ರೂ. 15,00,000/- ಪರಿಹಾರ ಕೊಡುತ್ತಿದ್ದೇವೆ. ನಮ್ಮ ಭಾಗದಲ್ಲಿ ಸಹ ಬಹಳಷ್ಟು ಜನರು ಕೇಳುತ್ತಾರೆ. ಹಾವು ಕಡಿತದಿಂದ ಸುಮಾರು ಜನರು ಸಾಯುತ್ತಿದ್ದಾರೆ ಅವರಿಗೆ ಕೃಷಿ ಇಲಾಖೆ ವತಿಯಿಂದ ರೂ. 2 ಲಕ್ಷ ಕೊಡುತ್ತೇವೆ. ಇಲ್ಲಿ ರೂ. 15 ಲಕ್ಷ ಕೊಡುತ್ತೇವೆ. ಇನ್ನು ಬಹಳ ಕಡೆ ಜಾಸ್ತಿ ಮಾಡಬೇಕೆಂದಿದೆ, ಆದರೂ ಈ ಪ್ರಾಣಿಗಳಿಂದ ಏನೇನು ಜೀವಹಾನಿಯಾಗಿದೆ ಅಂತಹ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತೇನೆ. ಅದಕ್ಕೂ ಪರಿಹಾರ ಕೊಡುವುದಕ್ಕೆ ಏನು ಸಾಧ್ಯತೆ ಇದೆ ಅದನ್ನು ಪರಿಶೀಲನೆ ಮಾಡುತ್ತೇವೆ. ಇಂತಹ ಅನೇಕ ಪ್ರಸ್ತಾವನೆಗಳಿವೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಭೋಜೇಗೌಡ ಎಂಬ ನನ್ನ ಹೆಸರಿನ ಕಾಫಿ ಬೋರ್ಡ್ ಅಧ್ಯಕ್ಷರೊಬ್ಬರು ಇದ್ದರು. He is a veteran leader of the congress party. He is a very big planter and had more than 600 acres of plantation. ಅವರ ಮನೆಯ ಹತ್ತಿರ ಕಾಡಿನಲ್ಲಿದ್ದ ಜೇನು ನೊಣ ಬಂದು ಕಡಿದು ಅವರು ತೀರಿ ಹೋದರು. ಜೇನು ನೊಣವನ್ನು ಪೋಷಣೆ ಮಾಡಬೇಕು. ನಮ್ಮಲ್ಲಿ ಬೆಂಕಿ ಹಾಕುವುದಕ್ಕೆ ಬಿಡುವುದಿಲ್ಲ. ಜೇನನ್ನು ಬೆಂಕಿ ಹಾಕಿ ಇಳಿಸುವಾಗ ಇಡೀ ಜೇನು ನೊಣಗಳೆಲ್ಲಾ ಸತ್ತು ಹೋಗುತ್ತವೆ. ಅಂತಹ ಕಾಡು ಜೇನಿನ ಸಂತತಿ ಉಳಿಯಬೇಕಲ್ಲವೇ? ಹಾಗಾಗಿ ಜೇನು ನೊಣವು ಸಹ wildlife ನಲ್ಲಿ ಬರುತ್ತದೆ. ಇದಕ್ಕೆ ಪರಿಹಾರವಿಲ್ಲದಿದ್ದರೂ ಕೂಡ ನೀವು ಇದು rare and rarest case ಎಂದು ಈ ಕೆಲಸ ಮಾಡಬೇಕು. ಮುಂದಿನ ದಿನಗಳಲ್ಲಾದರೂ ದಯವಿಟ್ಟು ಅದನ್ನು exception ಮಾಡಿದರೆ ಒಳ್ಳೆಯದಾಗುತ್ತದೆ.

**ಶ್ರೀ ಎನ್. ರವಿಕುಮಾರ್ (ವಿರೋಧಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟ ರೀತಿಗೆ ನಾನು ಅಭಿನಂದಿಸುತ್ತೇನೆ, ಅವರು ಈ ವಿಷಯಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದವರಾಗಿಯೂ ಕೂಡ ಈ ವಿಷಯಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಪರಿಹಾರ ಕಂಡು ಹಿಡಿದಿರುವುದಕ್ಕೆ ನಾನವರನ್ನು ಅಭಿನಂದಿಸುತ್ತೇನೆ. ನನ್ನ ಪ್ರಶ್ನೆಯೇನೆಂದರೆ, ಉದಾಹರಣೆಗೆ

ಆನೆಗಳನ್ನು ಪಳಗಿಸುವುದಕ್ಕೆ, ಆನೆಗಳನ್ನು ನೋಡಿಕೊಳ್ಳುವುದಕ್ಕೆ ಯಾರು ನಮ್ಮ ನೌಕರರಿದ್ದಾರೆ ಅವರ ಪರಿಸ್ಥಿತಿ ಏನು, ಅವರಿಗೆ ಕೊಡುತ್ತಿರುವಂತಹ ವೇತನವೇನು? ಅದೇನಾದರೂ ಸುಧಾರಣೆಯಾಗಿದೆಯೇ? ಅವರ ಜೀವನದ ಬಗ್ಗೆಯೂ ಸ್ವಲ್ಪ ಗಮನಿಸಬೇಕು, ಇದರ ಬಗ್ಗೆ ಮಾನ್ಯ ಸಚಿವರು ಏನು ಉತ್ತರ ಕೊಡುತ್ತಾರೆಂದು ಅವರ ಗಮನ ಸೆಳೆಯಬಯಸುತ್ತೇನೆ.

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, Human-animal conflict ನಲ್ಲಿ ಆನೆ ದಾಳಿ ತುಂಬಾ ಆಗುತ್ತಿದೆ. ಆದರೆ ಅದನ್ನು handle ಮಾಡುವಂತಹ ವೈದ್ಯರು ಎಷ್ಟು ಜನರಿದ್ದಾರೆ? ನನಗೆ ತಿಳಿದ ಮಟ್ಟಿಗೆ wildlife animals handle ಮಾಡುವಂತಹ ನಾಲ್ಕು ಜನ ಡಾಕ್ಟರ್ಸ್ ಇದ್ದಾರೆ. ನಿಯಮದ ಪ್ರಕಾರ ಎಷ್ಟು ಜನರು ಇರಬೇಕು ಹಾಗೂ ಯಾವಾಗ ಅವರ ನೇಮಕಾತಿಯಾಗುತ್ತದೆ? ಈಗ ಬಂದಿರುವವರು ನಿಯೋಜನೆ ಮೇಲೆ ಬಂದಿದ್ದಾರೆ, ವನ್ಯಜೀವಿ ಇಲಾಖೆಯಲ್ಲಿ ಖಾಯಂ ವೈದ್ಯರುಗಳನ್ನು ತೆಗೆದುಕೊಂಡಿಲ್ಲ ಇದು ಮೊದಲನೆಯದು. ಎರಡನೆಯದಾಗಿ, ಎರಡು ವರ್ಷಗಳ ಹಿಂದೆ ಡಾ॥ ವಿನಯ್ ಎಂಬ ವೈದ್ಯರು ಶಿವಮೊಗ್ಗಕ್ಕೆ ಬಂದ ಆನೆಯನ್ನು ಹಿಡಿಯುವುದಕ್ಕೆ ಹೋದಾಗ, ಆನೆಯಿಂದ ಹೊಡೆತ ಬಿದ್ದು ಅವರ ಸ್ಥಿತಿ ಗಂಭೀರವಾಗಿ ಕೊನೆಗೆ ಅವರನ್ನು ಶಿವಮೊಗ್ಗದಿಂದ airlift ಮಾಡಿ ಮಣಿಪಾಲ್ ಆಸ್ಪತ್ರೆಗೆ ಬಂದು ಸುಮಾರು 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. ಮೊದಲ 2-3 ದಿನದ ಆಸ್ಪತ್ರೆ ಖರ್ಚನ್ನು ಸರ್ಕಾರ ಗಮನಿಸಿತು. ನಂತರದ ದಿನಗಳಲ್ಲಿ 75 ಲಕ್ಷ ರೂಪಾಯಿಗಳನ್ನು ಅವರೇ ಖರ್ಚು ಮಾಡುವಂತಹ ಪರಿಸ್ಥಿತಿ ಬಂತು. ಆಮೇಲೆ ಅದು reimbursement ಆಗಿರಬಹುದು. ಅವರ ಮನೆಯ ಕಡೆ ಸದೃಢವಾಗಿದ್ದರು ಹಾಗಾಗಿ ಅವರು ಟ್ರೀಟ್‌ಮೆಂಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಅಕಸ್ಮಾತ್ ಅದಿರದಿದ್ದರೆ ಖಂಡಿತವಾಗಿಯೂ ಆ ಮನುಷ್ಯ ಜೀವವನ್ನು ಕಳೆದುಕೊಳ್ಳಬೇಕಾಗಿತ್ತು, ಅವರಿಗೆ ಪೇಮೆಂಟ್ ಮಾಡುವ ಸಾಮರ್ಥ್ಯವಿತ್ತು ಹಾಗಾಗಿ ಮಣಿಪಾಲ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡರು. ಆದ್ದರಿಂದ ಅದಕ್ಕೆ ರಕ್ಷಣೆಯನ್ನು ಕೊಡಬೇಕು. ಅವರಿಗೆ ರಕ್ಷಣೆ ಇಲ್ಲದಿದ್ದರೆ ಯಾವ ಖಾತರಿ ಮೇಲೆ ಅವರು ಅಲ್ಲಿಗೆ ಹೋಗಿ ಕೆಲಸ ಮಾಡುವುದಕ್ಕಾಗುತ್ತದೆ? ಮೂರನೆಯದಾಗಿ, ಈಗ ಬೇಸಿಗೆ ಕಾಲ ಪ್ರಾರಂಭವಾಗಿದೆ. ಕಾಡಿನಲ್ಲಿ ಒಣಎಲೆಗಳು ಬಿದ್ದಿವೆ. ಕಾಡಿಗೆ ಬೆಂಕಿ ಬೀಳುವ ಸಾಧ್ಯತೆಗಳು ತುಂಬಾ ಇದೆ. ಹಾಗಾಗಿ Fire Catchers ಅನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಬೇಕೆಂದು ಇದೆ. ಅರಣ್ಯ ರಕ್ಷಕರ ಜೊತೆ ಮಾತನಾಡಿದಾಗ ನನಗೆ ಬಂದ ಮಾಹಿತಿ ಏನೆಂದರೆ, ಇಷ್ಟು ಜನರಿದ್ದಾರೆ ಎಂದು ತೋರಿಸುತ್ತಾರೆ ವಾಸ್ತವವಾಗಿ ಅಷ್ಟು ಸಂಖ್ಯೆಯ ನೌಕರರಿರುವುದಿಲ್ಲ. ಶೇ.30-40ರಷ್ಟು ನೌಕರರಷ್ಟೇ ಇರುತ್ತಾರೆ, ಆದರೆ ಸರ್ಕಾರಕ್ಕೆ ತೋರಿಸಬೇಕಾದರೆ ಅಷ್ಟು ಜನರನ್ನು ತೆಗೆದುಕೊಂಡಿದ್ದೇವೆಂದು ತೋರಿಸುತ್ತಾರೆ. ದಯವಿಟ್ಟು, ತಾವು ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ:-** ಮಾನ್ಯ ಸಭಾಪತಿಯವರೇ, ಬಹಳಷ್ಟು ಹುದ್ದೆಗಳು ಖಾಲಿ ಇದೆ. ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿದ್ದೇವೆ. 540 ಕಾವಲುಗಾರ ಹುದ್ದೆಯನ್ನು

ಭರ್ತಿಮಾಡುವುದಕ್ಕೆ ಆರ್ಥಿಕ ಇಲಾಖೆಯಿಂದ ಪರವಾನಗಿ ತೆಗೆದುಕೊಂಡು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ತಾವು ಹೇಳಿದ ಹಾಗೆ ಆನೆಗಳನ್ನು ನಿರ್ವಹಣೆ ಮಾಡುವಂತಹ ಮಾವುತರು, ಕಾವಾಡಿಗರು ಮತ್ತು ಆನೆ ಕಾರ್ಯಾಚರಣೆ ಮಾಡುವ ಸಂದರ್ಭಗಳಲ್ಲಿ Veterinarian ಬೇಕಾಗುತ್ತಾರೆ. ಆನೆಗಳು ಜನವಸತಿ ಪ್ರದೇಶಗಳಿಗೆ ಬಂದರೆ Elephant Task Force ರಚನೆ ಮಾಡಿದ್ದೇವೆ. ನಮ್ಮಲ್ಲಿ ಸುಮಾರು ಏಳು Elephant Task Force ಗಳು ಕಾರ್ಯನಿರ್ವಹಿಸುತ್ತಿವೆ. ಒಂದೊಂದು Elephant Task Force ನಲ್ಲಿ ಸುಮಾರು 40 ಜನ ಸ್ಥಳೀಯರು ಇರುತ್ತಾರೆ. ಯಾರಿಗೆ ಆನೆಗಳ ಬಗ್ಗೆ ಮಾಹಿತಿ ಇದೆ, ಯಾರು ಬುಡಕಟ್ಟು ಸಮುದಾಯದವರಿದ್ದಾರೆ ಅಂಥವರಿಗೆ ಆ ಟಾಸ್ಕ್ ಫೋರ್ಸ್‌ನಲ್ಲಿ ಸೇರಿಸಿಕೊಂಡು ಅದಕ್ಕೆ ನಮ್ಮ ಇಲಾಖೆಯ ವತಿಯಿಂದ ಒಬ್ಬ DFO (Divisional Forest Officer), ಒಬ್ಬ RFO (Range Forest Officer) ಮತ್ತು ಒಬ್ಬ "Assistant Conservator of Forest" ರನ್ನು ಕೊಟ್ಟು ಅವರಿಗೆ ವಾಹನಗಳು, ಸಲಕರಣೆಗಳು ಮತ್ತು safety gears, dress ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮುಂಚೂಣಿಯಲ್ಲಿದ್ದುಕೊಂಡು ಯಾರು ಕೆಲಸ ಮಾಡುತ್ತಾರೆ ಅವರಿಗೆ ನಾನು ಸಚಿವನಾಗಿ ಬಂದ ಮೇಲೆ ಬಹಳಷ್ಟು ಸುಧಾರಣೆಗಳನ್ನು ಮಾಡಿ ಹಣವನ್ನು ಬಿಡುಗಡೆ ಮಾಡಿಸಿದ್ದೇನೆ. ಅವರಿಗೆ ಪ್ರತಿ ತಿಂಗಳು ರೂ. 2,000/- hardship ಭತ್ಯೆ ಕೊಡಬೇಕೆಂದು ತೀರ್ಮಾನ ಮಾಡಿ ಬರೀ Elephant Task Force ಅಷ್ಟೇ ಅಲ್ಲ Anti-depredation Camp, Rapid Response Team, Anti-poaching Camp ಇದೆ, ಯಾರು ರಿಸ್ಕ್‌ನಲ್ಲಿ ಕೆಲಸ ಮಾಡುತ್ತಾರೆ, ಅರಣ್ಯ ಪ್ರದೇಶಗಳಲ್ಲಿರುತ್ತಾರೆ ಅಂಥವರಿಗೆ ತಿಂಗಳಿಗೆ ರೂ. 2000/- ಕೊಡಬೇಕೆಂದು ಒಂಭತ್ತು ತಿಂಗಳ ಕೆಳಗಡೆ ಘೋಷಣೆ ಮಾಡಿದ್ದೆವು. ಈಗ ಮೊನ್ನೆ ಅನುದಾನ ಬಿಡುಗಡೆಯಾಗಿದೆ. ಅವತ್ತಿನಿಂದ ಇವತ್ತಿನವರೆಗೆ ಅವರಿಗೆ ವಿಶೇಷ ಭತ್ಯೆ ಕೊಟ್ಟಿದ್ದೇವೆ. ಹಂತ ಹಂತವಾಗಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಮನವಿ ಮಾಡಿದ್ದೇನೆ. ಈ ಸಲ ಹೆಚ್ಚಿನ ರೀತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸ ಮಾಡುತ್ತೇವೆ.

**ಡಾ: ಧನಂಜಯ ಸರ್ಜಿ:-** ಮಾನ್ಯ ಸಚಿವರೇ, ಅಪಘಾತವಾಗಿ ಡ್ಯಾಮೇಜ್ ಆದರೆ ಯಾವರೀತಿ ಪರಿಹಾರ ಕೊಡುತ್ತೀರಿ ಎಂದು ಆರೋಗ್ಯದ ಬಗ್ಗೆ ಕೇಳುತ್ತಿದ್ದೇನೆ.

**ಶ್ರೀ ಈಶ್ವರ್ ಖಂಡ್ರೆ:-** ಮಾನ್ಯ ಸಭಾಪತಿಯವರೇ, ಅವರು ಆರೋಗ್ಯದ ಬಗ್ಗೆ ಹೇಳಿದ್ದಾರೆ. ಯಾರ್ಯಾರು ಗಾಯಾಳುಗಳಿದ್ದಾರೆ ಅವರಿಗೂ ಸಹ ನಾನು ಮೊನ್ನೆ ದಿವಸ ಹೋಗಿದ್ದಾಗ ಹೇಳಿದ್ದೇನೆ. ಮಾನದಂಡವಿದೆ, ಸರ್ಕಾರದ ಸುತ್ತೋಲೆ ಇದೆ ಅದರ ಪ್ರಕಾರ permanent disability ಆದರೆ ಸುಮಾರು ರೂ. 10 ಲಕ್ಷ ಇರಬಹುದು, partial disability ಆದರೆ ರೂ. 5 ಲಕ್ಷ ಪರಿಹಾರವಿದೆ, ಅವರ ಆಸ್ಪತ್ರೆ ವೆಚ್ಚಗಳನ್ನು ಸಹ ಭರ್ತಿ ಮಾಡುವ ಅವಕಾಶವಿದೆ. ಅಧಿಕಾರಿಗಳಿಗೆ, ಗಾಯಾಳುಗಳು ಯಾರಿದ್ದಾರೆ ಆಸ್ಪತ್ರೆ ವೆಚ್ಚ ಇರಬಹುದು, ಅವರಿಗೆ partial disability ಆದರೆ, ಸಾವಾದರೆ ತಕ್ಷಣವೇ ರೂ. 15 ಲಕ್ಷ ಪರಿಹಾರ ಕೊಡುತ್ತಿದ್ದೇವೆ. ಅದೇ ರೀತಿ ಅವರಿಗೆ ಗಾಯವಾದರೂ ಸುತ್ತೋಲೆ ಪ್ರಕಾರ ತಕ್ಷಣವೇ ಅವರಿಗೆ ಪರಿಹಾರ ಕೊಡುವುದಕ್ಕೆ ಸೂಚನೆ ಕೊಡುತ್ತೇವೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಶಾಂತಾರಾಂ ಸಿದ್ದಿಯವರೇ, ಸಾಕು, ನಾನು ನಿಮಗೆ ಎಷ್ಟು ಸಮಯ ಕೊಟ್ಟಿದ್ದೇನೆ ಎಂಬುದನ್ನು ಅರ್ಥಮಾಡಿಕೊಳ್ಳಿ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ಹೇಳಿ ಮುಗಿಸುತ್ತೇನೆ. ತಾವು, ನಾನು ಹಾಗೂ ಮಾನ್ಯ ಸಂಕನೂರರವರು ಆ ಭಾಗದವರೇ ಆಗಿದ್ದೇವೆ. ನನ್ನ ಪ್ರಮುಖ ಬೇಡಿಕೆಯೇನೆಂದರೆ, ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಅರಣ್ಯ ಇಲಾಖೆಯವರು ಜಂಟಿಯಾಗಿ ರೈತರ ಒಂದು ಸಣ್ಣ ಸಭೆಯನ್ನಾದರೂ ಕರೆಯಲಿ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ರೈತರ ಸಂರಕ್ಷಣಾ ಸಮಿತಿ ಎಂಬುದು ಹೋರಾಟ ಮಾಡುತ್ತದೆ. ಯಲ್ಲಾಪುರ, ಅಂಕೋಲಾ, ಶಿರಸಿ ಮತ್ತು ಸಿದ್ದಾಪುರ ಸೊಪ್ಪಿನ ಬೆಟ್ಟ ಬರುವ ಭಾಗಗಳಲ್ಲಿನ ಜನರು ಪಕ್ಷೇತರರಾಗಿ ಹೋರಾಟ ಮಾಡುತ್ತಿದ್ದಾರೆ. ಅಲ್ಲಿ 2-3 ವಕೀಲರು ಸಹ ಇದ್ದಾರೆ. ಹಾಗಾಗಿ ಅವರ ಜೊತೆ ಒಂದು ಸಭೆ ಕರೆಯಬೇಕೆಂದು ಕೋರುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ DFO ಗೆ ಹೇಳಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ನಿಮ್ಮೆಲ್ಲರ ಜೊತೆ ಒಂದು ಸಭೆ ಮಾಡಬೇಕೆಂದು ಅವರಿಗೆ ಸೂಚನೆ ಕೊಡುತ್ತೇನೆ. ಈಗಾಗಲೇ ಸರ್ಕಾರದ, ಅರಣ್ಯ ಇಲಾಖೆ ವತಿಯಿಂದ ಎಲ್ಲಾ ಜಿಲ್ಲಾಡಳಿತಕ್ಕೆ ಸೂಚನೆ ಕೊಟ್ಟಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ಇಂತಹ ಘಟನೆಗಳಾದಂತಹ ಸಂದರ್ಭದಲ್ಲಿ ಜನರಿಗೆ ಅರಿವು, ಜಾಗೃತಿ ಮೂಡಿಸುವ ಮೂಲಕ ಈ ಸಮಸ್ಯೆ ಬಗೆಹರಿಸುವುದಕ್ಕೆ ಆದ್ಯತೆ ಮೇರೆಗೆ ಸಭೆಗಳನ್ನು ಮಾಡಬೇಕು ಮತ್ತು ಎಲ್ಲರೂ ಇದಕ್ಕೆ ಸಹಕಾರ ಮಾಡಬೇಕೆಂದು ಹೇಳಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ತಕ್ಷಣವೇ ಒಂದು ಸಭೆ ಕರೆದು ಹೋರಾಟಗಾರ ಜೊತೆ ಮಾತನಾಡಿ ಅವರ ಸಮಸ್ಯೆಯನ್ನು ಸ್ಥಳೀಯ ಮಟ್ಟದಲ್ಲಿ ಬಗೆಹರಿಸುವುದಕ್ಕೆ ಹೇಳುತ್ತೇನೆ.

(ಮುಂದು)

(58) 04.03.2025 (7.30) ಹೆಚ್‌ವಿ.ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ್ ಖಂಡ್ರೆ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಅವರೊಂದಿಗೆ ಮಾತನಾಡಿ, ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈಗ ಟೈಂ ಆಗಿದೆ. ನಾಳೆ ಬೆಳಗ್ಗೆ ಸದನವನ್ನು ಬೇಗ ಪ್ರಾರಂಭ ಮಾಡೋಣ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಎಲ್ಲರೂ ಬೇಗ ಬರುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್‌ರವರೇ, ಬೇಗ ಬರುವುದಕ್ಕೆ ಆಗುವುದಿಲ್ಲವೆಂದರೇ, ಅಜೆಂಡಾ ಮುಗಿಯುವುದು ಹೇಗೆ? ಸರ್ಕಾರದ ಮುಖ್ಯ ಸಚೇತಕರಾಗಿ ತಾವು ಈ ರೀತಿ ಹೇಳಿದರೆ ಹೇಗೆ? ಎಲ್ಲ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಸಿಗಬೇಕೆನ್ನುವುದು ನನ್ನ ಉದ್ದೇಶವಾಗಿದೆ. ಆದ್ದರಿಂದ ಬೆಳಗ್ಗೆ 10 ಗಂಟೆಗೆ ಸದನವನ್ನು ಪ್ರಾರಂಭ ಮಾಡೋಣವೇ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ 10 ಗಂಟೆ 30 ನಿಮಿಷಗಳಿಗೆ ಪ್ರಾರಂಭ ಮಾಡಿ.

**ಸಭಾಪತಿಯವರು:-** ಆಯಿತು, ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷಗಳಿಗೆ ಸೇರುವುದು.

**(ಸದನವು ರಾತ್ರಿ 7 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 05ನೇ ಡಿಸೆಂಬರ್ ಮಾಹೆ 2025ರ ಬುಧವಾರದಂದು ಬೆಳಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು)**